ಪ್ರಾಚೀನ ಗದ್ಯಸಾಹಿತ್ಯಮಾಲೆ : ೧

ಕರ್ನಾಟಕ ಸರ್ಕಾರ

ಭ್ರಾಜಿಷ್ಣು ವಿರಚಿತ

ಆರಾಧನಾ ಕರ್ಣಾಟಟೀಕಾ

(ವಡ್ಡಾರಾಧನೆ)

ಪ್ರಧಾನ ಸಂಪಾದಕರು : ಡಾ. ಸಿದ್ಧಲಿಂಗಯ್ಯ
ಗೌರವ ಸಂಪಾದಕರು : ಡಾ. ಎಂ.ಎಂ. ಕಲಬುರ್ಗಿ
ಸಂಪಾದಕರು : ಡಾ. ಶಾಂತಿನಾಥ ದಿಬ್ಬದ

ಕನ್ನಡ ಪುಸ್ತಕ ಪ್ರಾಧಿಕಾರ

ಭ್ರಾಜಿಷ್ಣು ವಿರಚಿತ

ಆರಾಧನಾ ಕರ್ಣಾಟಟೀಕಾ

(ವಡ್ಡಾರಾಧನೆ)

ಪ್ರಾಚೀನ ಗದ್ಯಸಾಹಿತ್ಯಮಾಲೆ : ೧

ಭ್ರಾಜಿಷ್ಣು ವಿರಚಿತ

ಆರಾಧನಾ ಕರ್ಣಾಟಟೀಕಾ

(ವಡ್ಡಾರಾಧನೆ)

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಗೌರವ ಸಂಪಾದಕರು

ಡಾ. ಎಂ.ಎಂ. ಕಲಬುರ್ಗಿ

ಸಂಪಾದಕರು

ಡಾ. ಶಾಂತಿನಾಥ ದಿಬ್ಬದ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಬೆಂಗಳೂರು–೫೬೦ ೦೦೨.

Aradhana Karanata Teeka – An Ancient Kannada Prose - classic
by Bhrajishnu
Edited by Dr. Shantinath Dibbad
Published by B.H. Mallikarjuna
Administrative Officer, Kannada Pustaka Pradhikara,
Kannada Bhavana. J.C. Road, Bangalore-560 002.

First Impression	:	2012
Pages	:	xlvi+ 292 = 338
Copies	:	1000
Price	:	₹ 220/-

■

ಮೊದಲ ಮುದ್ರಣ	:	೨೦೧೨
ಪುಟಗಳು	:	xlvi + ೨೯೨ = ೩೩೮
ಪ್ರತಿಗಳು	:	೧೦೦೦
ಬೆಲೆ	:	₹ ೨೨೦/-

ಸಂಪಾದಕರು :
ಡಾ. ಶಾಂತಿನಾಥ ದಿಬ್ಬದ

ಪ್ರಕಾಶಕರು
ಬಿ.ಹೆಚ್. ಮಲ್ಲಿಕಾರ್ಜುನ
ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨.

ಮುದ್ರಕರು :
ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.,
ನಂ. ೧೬/೧, ೨ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ
ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು-೫೬೦ ೦೨೬
ದೂರವಾಣಿ : ೦೮೦-೨೬೭೪ ೮೮೧೧; ಮೊ : ೯೩೪೨೮ ೬೪೭೬೧

*

ಸಲಹಾಮಂಡಳಿ

■

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಗೌರವ ಸಂಪಾದಕರು

ಡಾ. ಎಂ.ಎಂ. ಕಲಬುರ್ಗಿ

ಸಂಪಾದಕರು

ಡಾ. ಸಿ.ಪಿ. ಕೃಷ್ಣಕುಮಾರ್

ಡಾ. ಕೆ. ಮರಳಸಿದ್ದಪ್ಪ

ಪ್ರೊ. ಸುಧಾಕರ

ಡಾ. ಕೆ.ಆರ್. ಗಣೇಶ್

ಪ್ರೊ. ಸಿ.ವಿ. ಕೆರಿಮನಿ

ಎ.ಕೆ. ರಾಮೇಶ್ವರ

ಆಡಳಿತಾಧಿಕಾರಿಗಳು

ಬಿ.ಹೆಚ್. ಮಲ್ಲಿಕಾರ್ಜುನ

*

ಪ್ರಾಚೀನ ಗದ್ಯಸಾಹಿತ್ಯಮಾಲೆಯ ಕೃತಿಗಳು

■

	ಕೃತಿ ಶೀರ್ಷಿಕೆ	ಸಂಪಾದಕರು
೧.	ಆರಾಧನಾ ಕರ್ಣಾಟಟೀಕಾ (ವಡ್ಡಾರಾಧನೆ)	: ಡಾ. ಶಾಂತಿನಾಥ ದಿಬ್ಬದ
೨.	ಚಾವುಂಡರಾಯ ಪುರಾಣಂ	: ಡಾ. ಎಂ.ಎ. ಜಯಚಂದ್ರ
೩.	ಕರ್ಣಾಟಕ ಪಂಚತಂತ್ರಂ	: ಡಾ. ಪಿ.ವಿ. ನಾರಾಯಣ
೪.	ಧರ್ಮಾಮೃತಂ	: ಶ್ರೀ ಶುಭಚಂದ್ರ
೫.	ಕನ್ನಡ ಶರಣರ ಕಥೆಗಳು	: ಡಾ. ಎಂ.ಎಂ. ಕಲಬುರ್ಗಿ
೬.	ವಿವೇಕ ಚಿಂತಾಮಣಿ	: ಶ್ರೀ ಜಿ.ಎ. ಶಿವಲಿಂಗಯ್ಯ
೭	ಚಿಕ್ಕದೇವರಾಯ ವಂಶಾವಳಿ	: ಶ್ರೀ ಹೆಚ್.ಎಂ. ನಾಗರಾಜರಾವ್
೮.	ಮುದ್ರಾಮಂಜೂಷವು	: ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ
೯.	ರಾಜಾವಳಿ ಕಥೆ	: ಡಾ. ರಾಮೇಗೌಡ
೧೦.	ರಾಮಾಶ್ವಮೇಧಂ	: ಡಾ. ಗಾಯತ್ರಿ ನಾವಡ

■

*

ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಪುಸ್ತಕೋದ್ಯಮದ ಅಭಿವೃದ್ಧಿಗಾಗಿ ಸ್ಥಾಪಿಸಿರುವ ಸಂಸ್ಥೆಯಾಗಿದೆ. ವಿಶೇಷವಾಗಿ ಜನಪ್ರಿಯ ಪ್ರಕಾರಕ್ಕೆ ಸೇರಿದ ಪುಸ್ತಕಗಳನ್ನು ಪ್ರಕಟಿಸಿ, ಜನಸಾಮಾನ್ಯರಿಗೆ ಸುಲಭ ದರದಲ್ಲಿ ತಲುಪಿಸಬೇಕೆನ್ನುವುದು ಪ್ರಾಧಿಕಾರದ ಆಶಯವಾಗಿದೆ. ಸೃಜನಶೀಲ ಸಾಹಿತ್ಯಪ್ರಕಾರಕ್ಕೆ ಸೇರಿದ ಕೃತಿಗಳನ್ನು ಪ್ರಕಟಿಸಿರುವುದು ಹೆಚ್ಚಿಲ್ಲವಾದರೂ, ಪ್ರಕಟಿಸಿರುವಷ್ಟು ಮೌಲಿಕವಾದದ್ದಾಗಿದೆ. ಉಳಿದಂತೆ ವಿಮರ್ಶೆ, ಜೀವನಚರಿತ್ರೆ, ಶಾಸ್ತ್ರವಿಷಯ ಕುರಿತಾದ ಗ್ರಂಥಗಳು, ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳನ್ನು ಹೊರತರಲಾಗಿದೆ. ಹಳಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಕುಮಾರವ್ಯಾಸ ಭಾರತವನ್ನು ಹೊರತುಪಡಿಸಿದರೆ ಇತರೆ ಯಾವುದೇ ಪ್ರಾಚೀನ ಸಾಹಿತ್ಯಕೃತಿಗಳನ್ನು ಹೊರತರುವಲ್ಲಿ ಪ್ರಾಧಿಕಾರವಾಗಲೀ, ಅಕಾಡೆಮಿಗಳಾಗಲೀ ಈವರೆಗೆ ಪ್ರಯತ್ನ ಮಾಡಿದಂತಿಲ್ಲ. ಕನ್ನಡ ಸಾಹಿತ್ಯದ ಪ್ರಾಚೀನಗ್ರಂಥಗಳನ್ನು ಈವರೆಗೂ ಹೆಚ್ಚು ಪ್ರಕಟಿಸಿರುವುದು ರಾಜ್ಯದ ವಿಶ್ವವಿದ್ಯಾಲಯಗಳೇ ಎನ್ನಬಹುದು.

ಕನ್ನಡಿಗರಿಗೆ ಪ್ರಾಚೀನ ಕನ್ನಡ ಗದ್ಯಕೃತಿಗಳು ಸುಲಭ ದರದಲ್ಲಿ, ಪರಿಶುದ್ಧ ರೂಪದಲ್ಲಿ ದೊರೆಯಬೇಕೆಂಬ ಆಶಯದಿಂದ ಹಳಗನ್ನಡ, ನಡುಗನ್ನಡದ ಹತ್ತು ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಲಾಯಿತು. ನಾಡಿನ ಹಿರಿಯ ವಿದ್ವಾಂಸರಾದ ಡಾ. ಎಂ.ಎಂ. ಕಲಬುರ್ಗಿ ಅವರು ಈ ಮಾಲೆಯ ಸಂಪಾದನಕಾರ್ಯದ ನೇತೃತ್ವ ವಹಿಸಲು ಒಪ್ಪಿಕೊಂಡು, ಸಕಾಲದಲ್ಲಿ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಈ ಮಾಲಿಕೆಯ ಸಂಪಾದನ ಸಮಿತಿಯ ಸದಸ್ಯರಾದ ಡಾ. ಸಿ.ಪಿ. ಕೃಷ್ಣಕುಮಾರ್ ಡಾ. ಕೆ. ಮರುಳಸಿದ್ಧಪ್ಪ, ಡಾ. ಕೆ.ಆರ್. ಗಣೇಶ್, ಶ್ರೀ ಸುಧಾಕರ, ಪ್ರೊ. ಸಿ.ವಿ. ಕೆರಿಮನಿ, ಶ್ರೀ ಎ.ಕೆ. ರಾಮೇಶ್ವರ, ಇವರಿಗೆ ಕೃತಜ್ಞತೆಗಳು. ಈ ಮಾಲೆಯಲ್ಲಿ ಹತ್ತು ಕೃತಿಗಳನ್ನು ಸಂಪಾದಿಸಿಕೊಟ್ಟ ಎಲ್ಲ ವಿದ್ವಾಂಸರುಗಳಿಗೆ ಆಭಾರಿಯಾಗಿದ್ದೇನೆ.

ಈ ಮಾಲೆಯನ್ನು ಹೊರತರುವಲ್ಲಿ ಆಸಕ್ತಿ ವಹಿಸಿದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ, ನನ್ನ ಆಪ್ತ ಕಾರ್ಯದರ್ಶಿಯಾದ ಶ್ರೀ ಕೆ. ಮುಕುಂದನ್ ಹಾಗೂ ಪ್ರಾಧಿಕಾರದ ಎಲ್ಲ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆಗಳು. ಕನ್ನಡ ವಾಚಕವೃಂದ ನಮ್ಮ ಈ ಪ್ರಯತ್ನವನ್ನು ತುಂಬುಹೃದಯದಿಂದ ಸ್ವಾಗತಿಸುತ್ತದೆಂದು ಆಶಿಸುತ್ತೇನೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

*

ಗೌರವ ಸಂಪಾದಕರ ಮಾತು

ಡಾ. ಎಂ.ಎಂ. ಕಲಬುರ್ಗಿ

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪದ್ಯಕ್ಕೆ ಪ್ರಧಾನ ಪಟ್ಟ; ಗದ್ಯಕ್ಕೆ ಗೌಣಸ್ಥಾನ. ವಸ್ತು ಸ್ಥಿತಿ ಹೀಗಿರುವಾಗ, ಹೆಚ್ಚಿನದಾಗಿ ಆಧುನಿಕ ವಿದ್ವಾಂಸರು ಪ್ರಾಚೀನ ಪದ್ಯಸಾಹಿತ್ಯಕ್ಕೆ ಆಕರ್ಷಿತರಾಗಿ, ಅಂದಿನ ಗದ್ಯ ಸಾಹಿತ್ಯದ ಪ್ರಕಟನೆ– ಅಧ್ಯಯನಗಳನ್ನು ಅವಗಣಿಸುತ್ತ ಬಂದರು. ಇದರಿಂದಾಗಿ ಮೂಲೆಗೆ ಸರಿದಿರುವ ಈ ಸಾಹಿತ್ಯಪ್ರಕಾರವನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಕನ್ನಡ ಪುಸ್ತಕ ಪ್ರಾಧಿಕಾರ 'ಪಾಚೀನ ಗದ್ಯ ಸಾಹಿತ್ಯ ಮಾಲೆ' ಹೆಸರಿನ ಯೋಜನೆಯನ್ನು ಕೈಗೆತ್ತಿಕೊಂಡು, ಹತ್ತು ಮುಖ್ಯಕೃತಿಗಳನ್ನು ಪ್ರಕಟಿಸುತ್ತಿದೆ.

ಭಾವನೆ, ಚಿಂತನೆಗಳು ಭಾಷೆಯ ಮೂಲಕ ತಮ್ಮ ಸೆರೆ ಬಿಡಿಸಿಕೊಳ್ಳುವ ಸಂದರ್ಭದಲ್ಲಿ ಅವಲಂಬಿಸುವ ಮುಖ್ಯ ಮಾರ್ಗಗಳು ಎರಡು: ಗದ್ಯ ಮತ್ತು ಪದ್ಯ. ಗದ್ಯಕ್ಕೆ ಲಯ ಕೂಡಿದರೆ ಪದ್ಯವಾಗುತ್ತದೆ. ಆಗ ಅದಕ್ಕೆ ಒಂದು ಬಗೆಯ ಹೆಚ್ಚಿನ ಸೌಂದರ್ಯ ಪ್ರಾಪ್ತವಾಗುತ್ತದೆ. ಹೀಗೆ ಒದಗಿ ಬರುವ ಲಯಸೌಂದರ್ಯದ ಸವಲತ್ತು ಬಳಸಿಕೊಂಡು ಪದ್ಯವು ಕವಿತ್ವದ ಕೊರತೆಯನ್ನು ತುಂಬಿಕೊಳ್ಳುತ್ತದೆ ಎಂಬ ವಾದವನ್ನು ಮಂಡಿಸಿ, 'ಗದ್ಯಂ ಕವೀನಾಂ ನಿಕಷಂ ವದಂತಿ' ಅಂದರೆ ಗದ್ಯವೇ ಕವಿಯ ಸಾಹಿತ್ಯದ ನಿಜವಾದ ಒರೆಗಲ್ಲು ಎಂದು ಗದ್ಯಕವಿಗಳು ಸಾರುತ್ತ ಬಂದಿದ್ದಾರೆ. ಇದು, ಈ ಸಾಹಿತ್ಯ ಪ್ರಕಾರದ ಸೃಜನಕ್ರಿಯೆಯು ಒಂದು ಆಹ್ವಾನವೆಂಬುದನ್ನು ಸೂಚಿಸಿದರೆ, ಕನ್ನಡದ ಮುದ್ದಣನ 'ಗದ್ಯಂ ಹೃದ್ಯಂ ಪದ್ಯಂ ವಧ್ಯಂ' ಎಂಬ ಮಾತು ಅದರ ಶ್ರೇಷ್ಠತೆಯನ್ನು ಸಾರುತ್ತದೆ.

ಗದ್ಯವೇ ಇರಲಿ, ಪದ್ಯವೇ ಇರಲಿ, ಕವಿಯ ಕೈಯಲ್ಲಿ ಸಾಹಿತ್ಯವಾಗುವುದರಲ್ಲಿ ಅದರ ಸಾರ್ಥಕತೆ ಇರುತ್ತದೆ. ಇಂಥ ಸಾರ್ಥಕತೆಯನ್ನು ಭಾಷೆಯ ಸಂಕ್ಷೇಪೀಕರಣ ಕಲೆಯಾದ ಪದ್ಯದಲ್ಲಿ ಸಾಧಿಸುವುದು ಸುಲಭ, ವಿಶದೀಕರಣ ಕಲೆಯಾದ ಗದ್ಯದಲ್ಲಿ ಸಾಧಿಸುವುದು ಕಷ್ಟ. ಹೀಗಿದ್ದೂ ಪ್ರಾಚೀನ ಕನ್ನಡದ ಕೆಲವು ಕವಿಗಳು ಇವನ್ನು ಆಹ್ವಾನವಾಗಿ ಸ್ವೀಕರಿಸಿ ಜಯಶಾಲಿಯಾಗಿದ್ದಾರೆ.

ಒಂದು ರಚನೆ ಅಭಿವ್ಯಕ್ತಿ (Expression) ಯೆಂದೂ, ನಿರೂಪಣೆ (Narration)ಯೆಂದೂ ಎರಡು ರೀತಿಯಲ್ಲಿ ಪ್ರಕಟವಾಗುತ್ತದೆ. ನಮ್ಮ ನೆನಪಿನಲ್ಲುಳಿಯುವ ಕವಿಯೊಬ್ಬನ ಗದ್ಯದ ಸಾಲು ಇಲ್ಲವೆ ಪದ್ಯದ ಸಾಲುಗಳೇ ಅಭಿವ್ಯಕ್ತಿ. ಅದು ತನ್ನ ಸೃಜನಶೀಲ ಗುಣದಿಂದಾಗಿ ನಮ್ಮ ಮನಸ್ಸಿನಲ್ಲಿ ಆಳವಾಗಿ ಬೇರೂರುತ್ತದೆ. ಇಂಥ ಸುಂದರ ಅಭಿವ್ಯಕ್ತಿತ್ವವನ್ನೊಳಗೊಂಡ ಮತ್ತು ಐತಿಹಾಸಿಕ ಕಾರಣದಿಂದಾಗಿ ಮಹತ್ವವೆನಿಸುವ ಪ್ರಾಚೀನ ಕನ್ನಡ ಕೃತಿಗಳ ಪ್ರಕಟನ ಯೋಜನೆಯಿದು.

ದಂಡಿಯ ಸಂಸ್ಕೃತ ಕಾವ್ಯಾದರ್ಶವು ಸಾಹಿತ್ಯವನ್ನು ಗದ್ಯ, ಪದ್ಯ, ಮಿಶ್ರ (ನಾಟಕ)ವೆಂದು ಮೂರು ಬಗೆಯಾಗಿ ವರ್ಗೀಕರಿಸಿದೆ. ಇದರ ಆದರ್ಶದಲ್ಲಿ ಆಕಾರ ಪಡೆದ ಕನ್ನಡ ಕವಿರಾಜಮಾರ್ಗವು ಪದ್ಯ, ಗದ್ಯಕಥಾ ಎಂದು ಎರಡು ಬಗೆಯಾಗಿ ವರ್ಗೀಕರಿಸುತ್ತದೆ. ಬಹುಶಃ ಅಂದು ಮಿಶ್ರ(ನಾಟಕ)ವು ಸಂಸ್ಕೃತದಲ್ಲಿ ದೃಶ್ಯ ಪಾತಳಿಯಿಂದ ವಾಚನಪಾತಳಿಗೆ ಇಳಿದಿದ್ದರೆ, ಕನ್ನಡದಲ್ಲಿ ಅದು ಇನ್ನೂ ದೃಶ್ಯಪಾತಳಿಯಲ್ಲಿ ವ್ಯವಹರಿಸುತ್ತಲಿದ್ದುದೇ ಹೀಗೆ ಹೇಳಲು ಕಾರಣವಾಗಿರಬೇಕು. ಅದೇನೇ ಇರಲಿ, "ಅಗಣಿತ ಗುಣ ಗದ್ಯಪದ್ಯಗಳ ಮಿಶ್ರಣರೂಪದ 'ಗದ್ಯಕಥಾ' ಹೆಸರಿನ ಗದ್ಯಪ್ರಕಾರವನ್ನು ಕನ್ನಡದಲ್ಲಿ ಚಿರಂತನಾಚಾರ್ಯರು ರಚಿಸಿರುವರು" ಎಂದು ಕವಿರಾಜಮಾರ್ಗದಲ್ಲಿ ಹೇಳಲಾಗಿದೆ. ಇದು ಚಂಪೂವನ್ನು ಸೂಚಿಸುವುದೆಂದು ಕೆಲವರು ಹೇಳುವವರಾದರೂ ಗದ್ಯಪ್ರಧಾನ ಪದ್ಯಗೌಣವಾಗಿರುವ ಆರಾಧನಾ ಕರ್ಣಾಟ ಟೀಕಾ(ವಡ್ಡಾರಾಧನೆ)ದಂಥ ಕೃತಿಗಳನ್ನು ಸೂಚಿಸುವುದೆಂದು ಬಹುಜನ ವಿದ್ವಾಂಸರು ಒಪ್ಪಿದ್ದಾರೆ.

ಸಂಸ್ಕೃತ ಆಲಂಕಾರಿಕ ಭಾಮಹನು ಗದ್ಯವನ್ನು ಆಖ್ಯಾಯಿಕಾ, ಕಥಾ ಎಂದು ವರ್ಗೀಕರಿಸುತ್ತ, ಆಖ್ಯಾಯಿಕಾ ಸಂಸ್ಕೃತದಲ್ಲಿ, ಕಥಾ ಎಲ್ಲ ಭಾಷೆಗಳಲ್ಲಿರಬಹುದೆಂದು ಹೇಳುತ್ತಾನೆ. ಮುಂದುವರಿದು ದಂಡಿಯು ಈ ಕಥೆಯಲ್ಲಿ ಆರ್ಯಾ ಮುಂತಾದ ವೃತ್ತಗಳು ಪ್ರವೇಶ ಪಡೆಯುವವೆಂದು ತಿಳಿಸುತ್ತಾನೆ. ಕವಿರಾಜಮಾರ್ಗಕಾರ ತಿಳಿಸುವ 'ಗದ್ಯಕಥಾ' ಇಲ್ಲಿಯ 'ಕಥಾ' ಪ್ರಕಾರವೇ ಆಗಿದೆ. ಈ 'ಗದ್ಯಕಥೆ'ಯು ಬಾಣ ಕಾದಂಬರಿಯಂತೆ ಅಖಂಡವೂ ಬೃಹತ್ಕಥೆಯಂತೆ ಬಿಡಿ ಕಥಾಕೋಶವೂ ಆಗಿರಬಹುದಾಗಿದೆ. ಮುಂದುವರಿದು ಕವಿರಾಜಮಾರ್ಗಕಾರನು ಗದ್ಯಕಥೆಯು ಸಕಲಕಲಾಭೂಯಿಷ್ಠವಾಗಿರಬೇಕು, ಉತ್ಕೃಷ್ಟ ಭಾಷಾಶೈಲಿಯಲ್ಲಿ ಎರಕಗೊಂಡಿರಬೇಕು, ಲೌಕಿಕ ಮತ್ತು ಪಾರಮಾರ್ಥಿಕ ವರ್ಣನಾನಿರ್ಣಿಕ್ತವಾಗಿರಬೇಕು, 'ಪ್ರಕಟತರ ವಸ್ತು'ವನ್ನೊಳಗೊಂಡಿರಬೇಕೆಂದು ಹೇಳುತ್ತಾನೆ.

ಒಟ್ಟಿನಲ್ಲಿ, ಪ್ರಾಚೀನ ಕರ್ನಾಟಕದ 'ಗದ್ಯಕಥಾ'ಪ್ರಕಾರದ ಲಕ್ಷಣವನ್ನು ಹೀಗೆ ಹೇಳಬಹುದು. ೧. ಗದ್ಯ ಪ್ರಧಾನ, ಪದ್ಯ ಗೌಣಪ್ರಮಾಣದಲ್ಲಿರುತ್ತದೆ. ೨. ಅಖಂಡ ಕಥೆ, ಇಲ್ಲವೆ ಬಿಡಿ ಕಥಾಗುಚ್ಛ ರೂಪದಲ್ಲಿರುತ್ತದೆ. ೩. ಸಕಲಕಲಾಭೂಯಿಷ್ಠವೂ ಉತ್ಕೃಷ್ಟ ಭಾಷಾಶೈಲಿಯದೂ, ಲೌಕಿಕ ಪಾರಮಾರ್ಥಿಕ ವರ್ಣನಾ ನಿರ್ಣಿಕ್ತವೂ

ಪ್ರಕಟತರ ವಸ್ತುವನ್ನೊಳಗೊಂಡುದೂ ಆಗಿರುತ್ತದೆ. ೪. ಇನ್ನೂ ಒಂದು ಲಕ್ಷಣವೆಂದರೆ ಈ ಗದ್ಯವನ್ನು 'ಕಥಾ' ಎಂದು ಕರೆದಿರುವುದರಿಂದ 'ಕಥಾ ಪುರಾಣಸಂಬದ್ಧಾ' ಎಂಬ ವ್ಯಾಖ್ಯೆಯ ಪ್ರಕಾರ ಇದು, ಲೌಕಿಕ(ಚರಿತ್ರೆ) ವಸ್ತುವನ್ನಲ್ಲ, ಪೌರಾಣಿಕ ವಸ್ತುವನ್ನೊಳಗೊಂಡಿರುತ್ತದೆ.

ಇಂಥ ಲಕ್ಷಣದ ಕೃತಿಗಳನ್ನು ಕನ್ನಡದಲ್ಲಿ ಬರೆದವರು ವಿಮಲೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಮೊದಲಾದವರೆಂದು ಕವಿರಾಜಮಾರ್ಗ ಹೇಳುವುದಾದರೂ ಇವರ ಒಂದೂ 'ಗದ್ಯಕಥಾ' ಲಭ್ಯವಿಲ್ಲ. ಇವರಲ್ಲಿ ದುರ್ವಿನೀತನು ಬಹುಶಃ ಗಂಗ ಅರಸನಾಗಿದ್ದು, ಶಾಸನಗಳಲ್ಲಿ ಇವನು ರಚಿಸಿರುವನೆಂದು ಹೇಳಲಾಗಿರುವ ಕಿರಾತಾರ್ಜುನೀಯದ ೧೫ನೆಯ ಸರ್ಗಕ್ಕೆ ಟೀಕೆ, ಶಬ್ದಾವತಾರಗಳನ್ನು ಹೊರತುಪಡಿಸಿ, ಬೃಹತ್ಕಥೆ(ವಡ್ಡಕಥೆ)ಯೇ ಗದ್ಯಕಥೆಗೆ ಉದಾಹರಣೆಯಾಗಿರಬೇಕೆನಿಸುತ್ತದೆ. ಇದು ಗುಣಾಢ್ಯನ ಪೈಶಾಚಿಭಾಷಾಕೃತಿಯ ದಾಕ್ಷಿಣಾತ್ಯಪಾಠವೆಂದೂ, ಇದನ್ನು ಆಧರಿಸಿ ತಮಿಳಿನ ಪೆರುಂಗದ್ಯೆ ಹುಟ್ಟಿದೆಯೆಂದೂ, ಇದು ಒಂದಿಷ್ಟು ಜೈನೀಯವಾಗಿದೆಯೆಂದೂ ವಿದ್ವಾಂಸರು ಭಾವಿಸಿದ್ದಾರೆ. ಈವರೆಗಿವ ವಿವರಣೆ ಕಳೆದುಹೋದ ಕನ್ನಡ ಗದ್ಯಸಾಹಿತ್ಯವನ್ನು ಕುರಿತುದಾಗಿದೆ.

***

ಕವಿರಾಜಮಾರ್ಗೋತ್ತರ ಕಾಲೀನ ಗದ್ಯಸಾಹಿತ್ಯದಲ್ಲಿ ಎದ್ದು ಕಾಣುವ ಕೆಳಗಿನ ಕೃತಿಗಳನ್ನು ಪ್ರಸ್ತುತ ಯೋಜನೆಯ ಅಡಿಯಲ್ಲಿ ಪ್ರಕಟಣೆಗೆ ಆಯ್ದುಕೊಳ್ಳಲಾಗಿದೆ.

೧. ಆರಾಧನಾ ಕರ್ಣಾಟಟೀಕಾ (ವಡ್ಡಾರಾಧನೆ): ಡಾ. ಶಾಂತಿನಾಥ ದಿಬ್ಬದ
೨. ಚಾವುಂಡರಾಯ ಪುರಾಣಂ : ಡಾ. ಎಂ.ಎ. ಜಯಚಂದ್ರ
೩. ಕರ್ಣಾಟಕ ಪಂಚತಂತ್ರಂ : ಡಾ. ಪಿ.ವಿ. ನಾರಾಯಣ
೪. ಧರ್ಮಾಮೃತಂ : ಶ್ರೀ ಶುಭಚಂದ್ರ
೫. ಕನ್ನಡ ಶರಣರ ಕಥೆಗಳು : ಡಾ. ಎಂ.ಎಂ. ಕಲಬುರ್ಗಿ
೬ ವಿವೇಕ ಚಿಂತಾಮಣಿ : ಶ್ರೀ ಜಿ.ಎ. ಶಿವಲಿಂಗಯ್ಯ
೭ ಚಿಕ್ಕದೇವರಾಯ ವಂಶಾವಳಿ : ಶ್ರೀ ಹೆಚ್.ಎಂ. ನಾಗರಾಜರಾವ್
೮. ಮುದ್ರಾಮಂಜೂಷವು : ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ
೯. ರಾಜಾವಳಿ ಕಥೆ : ಡಾ. ರಾಮೇಗೌಡ
೧೦. ರಾಮಾಶ್ವಮೇಧಂ : ಡಾ. ಗಾಯತ್ರಿ ನಾವಡ

ಇವುಗಳಲ್ಲಿ ಮೊದಲಿನ ನಾಲ್ಕು ಹಳಗನ್ನಡಕ್ಕೆ, ಆಮೇಲಿನವು ನಡುಗನ್ನಡ–ನಡುಗನ್ನಡೋತ್ತರಕ್ಕೆ ಸಂಬಂಧಿಸಿವೆ. ಪ್ರಾಚೀನ ಪದ್ಯಸಾಹಿತ್ಯದಲ್ಲಿ ಕಾಣಸಿಗದ ಹಳಗನ್ನಡ – ನಡುಗನ್ನಡ– ನಡುಗನ್ನಡೋತ್ತರ ಪ್ರಾಚೀನ ಭಾಷಾವಿಕಾಸದ ಸ್ಪಷ್ಟ

ಹೆಜ್ಜೆ ಗುರುತುಗಳು ಈ ಗದ್ಯಸಾಹಿತ್ಯದಲ್ಲಿ ಕಾಣುತ್ತಲಿರುವುದು ವಿಶೇಷ. ಹೀಗಾಗಿ ಪ್ರಾಚೀನ ಕನ್ನಡ ಭಾಷಾ ಚರಿತ್ರೆಯನ್ನು ಬರೆಯುವಲ್ಲಿ ಪದ್ಯಕೃತಿಗಳಿಗಿಂತ ಗದ್ಯಕೃತಿಗಳೇ ಹೆಚ್ಚು ನೆರವಾಗುತ್ತವೆ. ಇಲ್ಲಿಯ ಆರಾಧನಾ ಕರ್ಣಾಟಟೀಕಾ, ಕರ್ಣಾಟ ಪಂಚತಂತ್ರ, ಧರ್ಮಾಮೃತಗಳನ್ನು ಕಥಾಕೋಶಗಳೆಂದು; ಕನ್ನಡ ಶರಣರ ಕಥೆಗಳು, ಚಿಕ್ಕದೇವರಾಯವಂಶಾವಳಿ, ರಾಜಾವಳಿ ಕಥೆ, ಮುದ್ರಾಮಂಜೂಷಗಳನ್ನು ಚರಿತ್ರೆಗಳೆಂದು; ತ್ರಿಷಷ್ಟಿ ಲಕ್ಷಣ ಶಲಾಕಾ ಪುರಾಣ, ರಾಮಾಶ್ವಮೇಧಗಳನ್ನು ಪುರಾಣಗಳೆಂದು; ವಿವೇಕ ಚಿಂತಾಮಣಿಯನ್ನು ಜ್ಞಾನಕೋಶವೆಂದು ಕರೆಯಬಹುದಾಗಿದೆ. ಹೀಗೆ ಈ ಮಾಲೆಯ ಕೃತಿಗಳು ವೈವಿಧ್ಯಪೂರ್ಣ ವಿಷಯಗಳನ್ನೊಳಗೊಂಡಿವೆ. ಗದ್ಯಶೈಲಿಯ ದೃಷ್ಟಿಯಿಂದ ಹೇಳುವುದಾದರೆ ಆರಾಧನಾ ಕರ್ಣಾಟಟೀಕಾ, ಕನ್ನಡ ಶರಣರ ಕಥೆಗಳು, ರಾಮಾಶ್ವಮೇಧ ವಿಶಿಷ್ಟ ಗದ್ಯ ಚಹರೆಯನ್ನು ಹೊಂದಿವೆ.

***

"ವಡ್ಡಾರಾಧನೆಯೆಂಬುದು ಕೃತಿಯ ಹೆಸರಲ್ಲ, ಶಿವಕೋಟ್ಯಾಚಾರ್ಯನೆಂಬುದು ಕವಿಯ ಹೆಸರಲ್ಲ" ಎಂದು ಹೇಳುತ್ತ, ಈ ಕೃತಿನಾಮ ಆರಾಧನಾ ಕರ್ಣಾಟಟೀಕಾ, ಕವಿನಾಮ ಭ್ರಾಜಿಷ್ಣು ಎಂದು ೧೯೭೦ರಲ್ಲಿಯೇ ನಾನು ಹೇಳಿದ್ದ ಮಾತು, ಇಂದು ಹೊಸ ಆಧಾರ ಲಭಿಸಿ ನಿಜವಾಗುತ್ತಲಿರುವುದರಿಂದ 'ಆರಾಧನಾ ಕರ್ಣಾಟಟೀಕಾ' ಎಂಬ ಹೊಸ ಶೀರ್ಷಿಕೆಯನ್ನು – ಭ್ರಾಜಿಷ್ಣುವೆಂಬ ಹೊಸ ಕವಿನಾಮವನ್ನು ಇಲ್ಲಿ ಇಟ್ಟುಕೊಳ್ಳಲಾಗಿದೆ. ಈ ಬಗೆಯ ಟೀಕಾರಚನೆ ಕವಿರಾಜಮಾರ್ಗಪೂರ್ವಸಾಹಿತ್ಯದ ಲಕ್ಷಣವಾಗಿರುವುದರಿಂದ, ಇದರ ಕಾಲ ಅಷ್ಟು ಹಿಂದೆ ಇರಬಹುದಾದರೂ, ಕ್ರಿ.ಶ. ೯೪೦ ಎಂದು ವಿದ್ವಾಂಸರು ಭಾವಿಸಿದ್ದಾರೆ. ದೇಶೀಯ ಗದ್ಯಶೈಲಿ, ಮನೋಜ್ಞ ಕಥನಕಲೆ, ವಿಶಿಷ್ಟ ಕಥಾತಂತ್ರ, ಸಾಂಸ್ಕೃತಿಕ ಜೀವನಪ್ರಜ್ಞೆ ಇತ್ಯಾದಿಗಳಿಂದಾಗಿ ಇದು ಕನ್ನಡದ ಸರ್ವಶ್ರೇಷ್ಠ ಕಥಾಕೋಶವೆನಿಸಿದೆ. ಈ ಗದ್ಯದ ಒಡಲಲ್ಲಿ ಆಗಾಗ ಉದ್ಧೃತ ಪ್ರಾಕೃತ, ಸಂಸ್ಕೃತ ಪದ್ಯಗಳು ಕಂಡುಬರುತ್ತವೆ. ಅಲ್ಲಲ್ಲಿ ತೋರುವ ವೈದಿಕ – ಜೈನ ಘರ್ಷಣೆಗಳು ಆ ಕಾಲದ ಧಾರ್ಮಿಕ ಸಂಘರ್ಷವನ್ನು ಸೂಚಿಸುತ್ತವೆ. ಜೈನ ಶ್ರಾವಕವರ್ಗ ಮತ್ತು ಮುನಿವರ್ಗ, ರಾಜವರ್ಗ, ಜೈನೇತರ ಸಾಮಾಜಿಕ ವರ್ಗಗಳಿಂದಾಗಿ ಇಲ್ಲಿ ಸಾಮುದಾಯಿಕ ಬದುಕು ದಟ್ಟವಾಗಿ ಮೂಡಿ, ಇದು ಒಂದು ಮಹತ್ವದ ಸಾಂಸ್ಕೃತಿಕ ಕೃತಿಯ ಆಕಾರ ಪಡೆದಿದೆ.

ತ್ರಿಷಷ್ಟಿ ಲಕ್ಷಣ ಶಲಾಕಾ ಪುರಾಣ (೯೭೮) ಜೈನ ೬೩ ಶಲಾಕಾಪುರುಷರನ್ನು ಕುರಿತ ಕೃತಿ. ಜಿನಸೇನ ಗುಣಭದ್ರದ ಸಂಸ್ಕೃತ ಮಹಾಪುರಾಣವನ್ನಾಧರಿಸಿ ಹುಟ್ಟಿದ ಇದರ ಕರ್ತೃ ಗಂಗಮಂತ್ರಿ ಚಾವುಂಡರಾಯ. ಈ ಕೃತಿಯ ಗದ್ಯ ಮಾರ್ಗೀಯ ಶೈಲಿಯದು. ಮಧ್ಯ ಮಧ್ಯ ಪ್ರಾಕೃತ, ಸಂಸ್ಕೃತ ಉದ್ಧೃತಿಗಳಿವೆ. ವಡ್ಡಾರಾಧನೆ ಬಿಡಿ ಕಥಾಕಕೋಶವಾಗಿದ್ದರೆ ಇದು ಬಿಡಿಯಲ್ಲಿಯೂ ಅಖಂಡತೆಯನ್ನೊಳಗೊಂಡ

ಕೃತಿಯಾಗಿದೆ. ಹೀಗಿದ್ದೂ ಇದರ ಅಖಂಡ ಶಿಲ್ಪಕ್ಕೆ ಅಲ್ಲಲ್ಲಿ ಸಮನ್ವಯದ ಚ್ಯುತಿ ಬಂದಿವೆ.

ದುರ್ಗಸಿಂಹನ ಕರ್ಣಾಟ ಪಂಚತಂತ್ರ ಅನುಪಲಬ್ಧ ವಸುಭಾಗಭಟ್ಟನ ಸಂಸ್ಕೃತ ಕಥಾಪರಂಪರೆಗೆ ಸಂಬಂಧಿಸಿದೆ. ಮೂಲತಃ ಪಂಚತಂತ್ರ ವೈದಿಕ ಕಥಾಕೋಶವಾಗಿದ್ದರೂ, ಇದರಲ್ಲಿ ಜೈನೀಯ ಅಂಶಗಳಿರುವುದು ವಿಶೇಷ. ಮಾರ್ಗೀಯು ಕೃತಿಯಾಗಿದ್ದರೂ ಸೊಗಸಾದ ಕಥಾಶೈಲಿ, ದೇಶೀ ಒಲವುಗಳನ್ನೊಳಗೊಂಡಿದೆ. ೪೫೮ ಕನ್ನಡ ಪದ್ಯಗಳಲ್ಲಿ ೨೦೪ರಷ್ಟು ಕಂದಗಳಿವೆ. ಮಿಕ್ಕವುಗಳಲ್ಲಿ ಅಕ್ಷರವೃತ್ತದ ಜೊತೆ ಪಡ್ಡಳಿ, ಅಕ್ಕರ, ಪಿರಿಯಕ್ಕರ, ತ್ರಿಪದಿಗಳೆಂಬ ದೇಶೀ ಬಂಧಗಳಿರುವುದೂ ಒಂದು ವಿಶೇಷ. ಮುಖ್ಯವಾಗಿ ರಾಜನೀತಿ ಗ್ರಂಥವಾಗಿರುವುದರಿಂದ ರಾಜ್ಯಾಡಳಿತಕ್ಕೆ ಹೆಚ್ಚು ಅವಕಾಶ ನೀಡಿದ್ದರೂ, ಸಂಸಾರ –ಸಮಾಜ ಸಂಬಂಧಿ ವೈವಿಧ್ಯಮಯ ಜೀವನ ಚಿತ್ರಗಳೂ ಇಲ್ಲಿ ಎಡೆಪಡೆದಿವೆ.

ಕನ್ನಡ ಗದ್ಯಪರಂಪರೆಯಲ್ಲಿ ವಡ್ಡಾರಾಧನೆಯನ್ನು ಬಿಟ್ಟರೆ ಒಂದಿಷ್ಟು ಭಿನ್ನ ರೀತಿಯ ಜೈನಕಥಾಕೋಶವೆನಿಸಿದೆ, ನಯಸೇನನ (೧೧೧೨) ಧರ್ಮಾಮೃತ. ೧೪ ಆಶ್ವಾಸಗಳಲ್ಲಿ ೧೪ ಕಥೆಗಳನ್ನೊಳಗೊಂಡ ಈ ಕೃತಿ ಮಾರ್ಗೀಯವಾಗಿದ್ದರೂ ದೇಶೀಯ ಒಲವು ಅಧಿಕವಾಗಿದೆ. ಹೀಗಾಗಿ ನಾಣ್ಣುಡಿಯ ಬಳಕೆಯಲ್ಲಿ, ಇದಕ್ಕಿಂತ ವೆಗ್ಗಳವಾಗಿ ಬಳಸಿರುವ ಉಪಮೆಗಳಲ್ಲಿ ಇವನ ವಿಶೇಷತೆ ಅಡಗಿದೆ. ಮಾಲೋಪಮೆಯೆಂದು ಹೇಳುವಷ್ಟರ ಮಟ್ಟಿಗೆ ಅವು ಮಾಲೆಮಾಲೆಯಾಗಿ ಬರುವುದರಿಂದ ವಿದ್ವಾಂಸರು ಇವನನ್ನು ಉಪಮಾಲಂಪಟನೆಂದು ಕರೆದುದು ಸೂಕ್ತವಾಗಿದೆ. ಇದಕ್ಕೆ ಕಳಸವಿಟ್ಟಂತೆ ವಿಡಂಬನೆ ಈ ಕೃತಿಯ ವೈಶಿಷ್ಟ್ಯವಾಗಿದ್ದು, ವೈದಿಕ ಬೌದ್ಧಗಳ ದೋಷವನ್ನು ಎತ್ತಿ ಹೇಳುವಲ್ಲಿ ಇದು ಸಾರ್ಥಕತೆ ಪಡೆದಿದೆ. ಇವೆಲ್ಲ ಮೇಳವಿಸುವಲ್ಲಿ ಅವನ ವೈವಿಧ್ಯಪೂರ್ಣ ಜೀವನಾನುಭವ ಅಚ್ಚರಿ ಹುಟ್ಟಿಸುತ್ತದೆ. ದುರ್ಗಸಿಂಹನಂತೆ ಮಾರ್ಗೀಯ ಕವಿಯಾಗಿದ್ದರೂ ಅವನಿಗಿಂತ ಹೆಚ್ಚು ಜಾನಪದೀಯವಾಗಿ ಕಾಣುತ್ತಾನೆ.

'ಕನ್ನಡ ಶರಣರ ಕಥೆಗಳು' ಹೆಸರೇ ಸೂಚಿಸುವಂತೆ ಕರ್ಣಾಟಕಕ್ಕೆ ಸಂಬಂಧಿಸಿದ, ಗದ್ಯ – ಪದ್ಯ ಮಿಶ್ರಿತ ರೂಪದ ರಗಳೆಗೆ ವಸ್ತುವಾಗಿರುವ, ಶರಣರ ಕೃತಿಗಳನ್ನೊಳಗೊಂಡಿದೆ. ಶರಣರ ವಚನಗಳ ಗದ್ಯವನ್ನು ಶುದ್ಧಸಾಹಿತ್ಯಕ್ಕೆ ಅಳವಡಿಸಿದ ನಡುಗನ್ನಡ ಸಾಹಿತ್ಯದ ಆದಿಕವಿಯಾಗಿದ್ದಾನೆ. ಹರಿಹರ (೧೩ನೆಯ ಶತಮಾನ). ಭಕ್ತಿಕೇಂದ್ರಿತ ಆಶಯ, ಸ್ಥಳೀಯ ಶರಣಚರಿತ್ರೆನಿಷ್ಠ ವಸ್ತು, ರಗಳೆ ಸಾಹಿತ್ಯಪ್ರಕಾರ, ನಡುಗನ್ನಡ ಭಾಷೆ ಇತ್ಯಾದಿ ಹೊಸ ಉಪಕರಣಗಳನ್ನು ಶೋಧಿಸಿ, ಸೃಜನಶೀಲತೆಯಲ್ಲಿ ಎರಕಹೊಯ್ದವನೀತ. ಭಾಷೆಯ ಲಾಲಿತ್ಯ, ಶೈಲಿಯ ಉತ್ಸಾಹ, ಲಯಬದ್ಧವಾಕ್ಯ, ವೈವಿಧ್ಯಪೂರ್ಣ ಕಲ್ಪನೆ ಮೊದಲಾದವುಗಳಿಂದಾಗಿ ಇವನ ಗದ್ಯಕ್ಕೆ ಈ ಮೊದಲು ಕನ್ನಡದಲ್ಲಿಲ್ಲದ ಹೊಸ ಸೊಬಗು ಪ್ರಾಪ್ತವಾಗಿದೆ. ವಡ್ಡಾರಾಧನೆಯನ್ನು ಬಿಟ್ಟರೆ

ಕನ್ನಡ ಗದ್ಯವನ್ನು ಹೊಸ ಬಗೆಯಲ್ಲಿ ಹದಗೊಳಿಸಿದ ಕೀರ್ತಿ ಹರಿಹರನಿಗೆ ಸಲ್ಲುತ್ತದೆ. ಒಂದು ಸ್ಥಲ ಗದ್ಯ, ಒಂದು ಸ್ಥಲ ರಗಳೆಯೆಂಬ ಯೋಜನೆಯಲ್ಲಿ ರಗಳೆಯೇ ಗದ್ಯವಾದ, ಗದ್ಯವೇ ರಗಳೆಯಾದ ಅನುಭವ ಓದುಗನಿಗೆ ಉಂಟಾಗುತ್ತದೆ. ಹೇಳಲೇಬೇಕಾದ ಇನ್ನೊಂದು ಅಂಶವೆಂದರೆ, ಕನ್ನಡ ಸಾಹಿತ್ಯದ ಪ್ರಥಮ ಭಾವಗೀತ ಕವಿಯಾಗಿರುವ ಈತ, ಕನ್ನಡ ಸಾಹಿತ್ಯದ ಪ್ರಥಮ ಸಂತಕವಿ. ಹೀಗಾಗಿ ಇವನ ಬರೆಹ ಮನೋಪಾತಳಿಗೆ ನಿಲ್ಲದೆ, ಆತ್ಮಪಾತಳಿಯಲ್ಲಿ ವಿಹರಿಸುತ್ತದೆ, ವಿರಮಿಸುತ್ತದೆ.

ನಿಜಗುಣಶಿವಯೋಗಿ ಶೈವದಲ್ಲಿಯೇ ಶಾಂತಪರಂಪರೆಗೆ ಸಂಬಂಧಿಸಿರಬಹುದಾಗಿದ್ದು (೧೫ ಶತಮಾನ), ಕವಿತ್ವ – ಅನುಭಾವಗಳ ಸಂಗಮವಾಗಿರುವ ಇವನ 'ವಿವೇಕ ಚಿಂತಾಮಣಿ' ವಿಶ್ವಕೋಶ ಪ್ರಕಾರದ ಗದ್ಯಕೃತಿ. ಈ ಹಿಂದಿನ ಗದ್ಯಕೃತಿಗಳು ಕವಿತ್ವವನ್ನೊಳಗೊಂಡಿದ್ದರೆ, ಇದರಲ್ಲಿ ಶಾಸ್ತ್ರಯೋಗ್ಯ ನಿರೂಪಣಾಗದ್ಯ ನೆಲೆ ಪಡೆದಿದೆ. ಈ ಗುಣದಿಂದಾಗಿ ಈ ಗದ್ಯಕ್ಕೆ ಪ್ರಾಚೀನ ಸಾಹಿತ್ಯದಲ್ಲಿ ಪ್ರತ್ಯೇಕ ಸ್ಥಾನ ಸಲ್ಲುತ್ತದೆ. ವಿಶ್ವಕೋಶವರ್ಗದ ಇದು ಸಹಜವಾಗಿಯೇ ಬದುಕಿನ ವಿವಿಧ ಆಯಾಮಗಳ ಜ್ಞಾನಸಂಪತ್ತನ್ನೊಳಗೊಂಡಿದೆ.

ಮೈಸೂರು ಒಡೆಯರ ಕಾಲದಲ್ಲಿ ಪದ್ಯ ಹಿಂದು ಬಿದ್ದು, ಗದ್ಯ ವಿಪುಲ ಪ್ರಮಾಣದಲ್ಲಿ ಬೆಳೆಯಿತು. ಪಾಂಡಿತ್ಯ ಪ್ರದರ್ಶನದ ಹಂಬಲ, ನಡುಗನ್ನಡ – ಹೊಸಗನ್ನಡ ಮಿಶ್ರಶೈಲಿಗಳಿಂದಾಗಿ ಒಂದು ಬಗೆಯ ಮಧ್ಯಮ ಗುಣಮಟ್ಟದ ಸಾಹಿತ್ಯ ಈ ಕಾಲದಲ್ಲಿ ಹುಟ್ಟಿತು. ಇದಕ್ಕೆ ನಿದರ್ಶನವೆನಿಸುವ ಚಿಕದೇವರಾಯ ವಂಶಾವಳಿ, ರಾಜಾವಳಿ ಕಥೆ, ಮುದ್ರಾಮಂಜೂಷಗಳನ್ನು ಇಲ್ಲಿ ಒಟ್ಟಿಗೆ ಪರಿಶೀಲಿಸಬಹುದು. ಚಿಕದೇವರಾಯ ವಂಶಾವಳಿಯ ಕರ್ತೃ ತಿರುಮಲಾರ್ಯ (೧೬೪೫–೧೭೦೬) ಮೈಸೂರು ಚಿಕದೇವರಾಯನ ಸಚಿವ. ಧಾರ್ಮಿಕ ಮುಖವಾಡದಲ್ಲಿ ತಮಿಳುನಾಡಿನಿಂದ ಕರ್ನಾಟಕವನ್ನು ಪ್ರವೇಶಿಸಿದ ಶ್ರೀವೈಷ್ಣವರು, ಈ ಹೊತ್ತಿಗೆ ರಾಜಕೀಯವಾಗಿಯೂ ಪ್ರಬಲರಾಗಿ, ತಮ್ಮ ಶ್ರೀವೈಷ್ಣವ ಸಾಹಿತ್ಯವನ್ನು ಕನ್ನಡದಲ್ಲಿ ಸೃಷ್ಟಿಸಲು ಆರಂಭಮಾಡಿದ ಕಾಲಘಟ್ಟದ ಕೃತಿಯಿದು. ಅನ್ಯರಾಜ್ಯದಿಂದ ಬಂದ ಇವರಿಗೆ ಒಂದು ಕಡೆ ತಮ್ಮ ಧರ್ಮಪ್ರಚಾರವೂ, ಇನ್ನೊಂದು ಕಡೆ ರಾಜನ ಪ್ರೀತಿಸಂಪಾದನೆಯೂ ಅಗತ್ಯವಾಗಿದ್ದ ಕಾರಣ, ತಮ್ಮ ಧಾರ್ಮಿಕ ಕೃತಿಗಳೊಂದಿಗೆ ರಾಜಸ್ತುತಿ ಕಾವ್ಯಗಳನ್ನೂ ಬರೆದರು. ಈ ಮನೋಧರ್ಮ ಕಾರಣವಾಗಿ ಈ ಗದ್ಯಕೃತಿಯಲ್ಲಿ ರಾಜವಂಶಾವಳಿ, ಶ್ರೀವೈಷ್ಣವಧರ್ಮ ಪ್ರಶಂಸೆಯೊಂದಿಗೆ ಇವನ ವಂಶಾವಳಿಯೂ ಸೇರಿಕೊಂಡಿದೆ. ಸಮಕಾಲೀನತೆಗಿಂತ ಪ್ರಾಚೀನತೆಯ ಒಲವು ಈ ಗದ್ಯದ ಲಕ್ಷಣವಾಗಿದೆ.

ದೇವಚಂದ್ರನ (೧೭೭೦–೧೮೪೧) ರಾಜಾವಳಿ ಕಥೆ ಮೆಕೆಂಝಿಯ ಸೂಚನೆಯಂತೆ ರಚಿಸಿದ ಕೃತಿಯಾಗಿದೆ. ಸಮಕಾಲೀನ ಮುಖ್ಯ ಘಟನೆಗಳನ್ನು, ಅವುಗಳ ಇತಿಹಾಸವನ್ನು ತುಂಬ ವಿವರವಾಗಿ ಬಿಂಬಿಸುವ ಇದು ಚರಿತ್ರೆ, ಪುರಾಣ,

ದಂತಕಥೆಗಳ ಮಿಶ್ರಣವಾಗಿದ್ದು, ಮೌಖಿಕ ಇತಿಹಾಸದ ಸ್ವರೂಪ ಪಡೆದಿದೆ. ಜೈನಪರ ಧೋರಣೆಯ ರಾಜಕೀಯ, ಧಾರ್ಮಿಕ, ಸಾಮಾಜಿಕ ಸಂಗತಿಗಳನ್ನು ಒಳಗೊಂಡ ಇದರ ಗದ್ಯಶೈಲಿ ಆಧುನಿಕತೆಯತ್ತ ಮುಖಮಾಡಿದೆ.

ನಂದವಂಶೀಯರ ಮಂತ್ರಿಯಾದ ರಾಕ್ಷಸನನ್ನು ಮೌರ್ಯವಂಶೀಯರ ಮಂತ್ರಿ ಚಾಣಕ್ಯನು ಒಲಿಸಿಕೊಂಡ ಕಥೆಯನ್ನು 'ಮುದ್ರಾಮಂಜೂಷ' ಹೆಸರಿನಿಂದ ರಚಿಸಿದವ, ಕೆಂಪುನಾರಾಯಣ (೧೮ನೆಯ ಶತಮಾನ). ಉತ್ತರ ಭಾರತದ ಐತಿಹಾಸಿಕ ವಸ್ತುವನ್ನು ಸಮಕಾಲೀನ ಗ್ರಂಥಸ್ಥ ಗದ್ಯದಲ್ಲಿ ಎರಕಹೊಯ್ದಿದ್ದು, ಶೈಲಿಯಲ್ಲಿ ಹಳಗನ್ನಡ–ಹೊಸಗನ್ನಡಗಳ ಮಿಶ್ರಣ ಎದ್ದುಕಾಣುತ್ತದೆ.

ಮೈಸೂರು ಅರಸರ ಕಾಲದ ಗ್ರಂಥಸ್ಥ ಅರೆಬೆಂದ ಗದ್ಯಕ್ಕೆ ಭಿನ್ನವಾಗಿ ನಿಲ್ಲುತ್ತದೆ, ಮುದ್ದಣನ ರಾಮಾಶ್ವಮೇಧ ಗದ್ಯ. "ಗದ್ಯಂ ಹೃದ್ಯಂ" ಎನ್ನುತ್ತ ಅವನು ಆಧುನಿಕ ಸಾಹಿತ್ಯದ, ಅದರಲ್ಲಿಯೂ ಗದ್ಯಸಾಹಿತ್ಯದ ಬಾಗಿಲನ್ನೇ ತೆರೆದನು. ಮೋಡ ಮುಸುಕಿದ ವಾತಾವರಣದಿಂದ ಆರಂಭವಾಗಿರುವ ಈ ಕೃತಿ, ಆ ಕಾಲದ ಕನ್ನಡದ ಮೇಲೆ ಮುಸುಕಿದ್ದ ಕತ್ತಲೆಯನ್ನು ಸಂಕೇತಿಸುತ್ತದೆ. ಇಂಥ ಸಂದರ್ಭದಲ್ಲಿ ಕಲ್ಪಿತ ಪಾತ್ರವಾಗಿ ಬರುವ ಹೆಂಡತಿ ಹೊಸ ಭಾಷೆ, ಹೊಸ ವಸ್ತು, ಹೊಸ ಬಗೆಯ ನಿರೂಪಣೆ ಇತ್ಯಾದಿಗಳ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ನೀಡಿದ ಉತ್ತರಗಳಿಂದ ಮುಂದುವರಿಯುವ ಇದು, ಆಧುನಿಕ ಗದ್ಯಯುಗಕ್ಕೆ ನಾಂದಿ ಹಾಡಿದೆ. ಆದುದರಿಂದ ಮುದ್ದಣನನ್ನು ನವೋದಯದ ಮುಂಗೋಳಿಯೆಂದು ಕರೆದುದು ನ್ಯಾಯವಾಗಿದೆ.

ಹೀಗೆ ಒಂದು ಸಾವಿರ ವರ್ಷದ ಗದ್ಯ ಸಾಹಿತ್ಯೇತಿಹಾಸದಲ್ಲಿ ಮೈಲಿಗಲ್ಲು ಎನಿಸಿದ ೧೦ ಕೃತಿಗಳು ಒಂದು ಮಾಲೆಯಡಿಯಲ್ಲಿ ಈಗ ಪ್ರಕಟವಾಗುತ್ತಲಿವೆ. ಇವು ಒಂದರ್ಥದಲ್ಲಿ ನಮ್ಮ ಗದ್ಯ ಸಾಗಿಬಂದ ಹಾದಿಯನ್ನು ತಿಳಿಸುವ ಕೈಮರಗಳಾಗಿವೆ.

ಕೃತಜ್ಞತೆಗಳು :

ಸಂಪಾದಕನಾಗಿ ಈ ಯೋಜನೆಯನ್ನು ಪೂರೈಸುವ ಹೊಣೆಯನ್ನು ನನಗೆ ವಹಿಸಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರಿಗೂ, ಕನ್ನಡದ ಮೇಲಿನ ಪ್ರೀತಿಯಿಂದ ಈ ಗದ್ಯಕೃತಿಗಳನ್ನು ಸಂಪಾದಿಸಿಕೊಟ್ಟ ಎಲ್ಲ ವಿದ್ವಾಂಸ ಮಿತ್ರರಿಗೂ, ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಎಚ್. ಮಲ್ಲಿಕಾರ್ಜುನ ಅವರಿಗೂ, ಸಲಹಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳು.

ಸಂಪಾದಕರ ಮಾತು

ವಡ್ಡಾರಾಧನೆ ಎಂಬುದು ಕೃತಿ, ಶಿವಕೋಟ್ಯಾಚಾರ್ಯನೆಂಬಾತ ಅದರ ಕರ್ತೃ ಎಂಬುದು ಇದುವರೆಗಿನ ನಮ್ಮ ತಿಳುವಳಿಕೆಯಾಗಿದ್ದಿತು. ಆದರೆ ವಡ್ಡಾರಾಧನೆಯ ನಿಜವಾದ ಹೆಸರು 'ಆರಾಧನಾ ಕರ್ಣಾಟಟೀಕಾ' ಎಂಬುದೂ ಭ್ರಾಜಿಷ್ಣು ಎಂಬಾತ ಅದರ ಕರ್ತೃ ಎಂಬುದೂ ಈಗ ಸ್ಥಾಪಿತವಾಗಿದೆ. ಇದು ವಿದ್ವಜ್ಜನರ ಸಂಶೋಧನೆಯ ಫಲ. ಬದಲಾದ ಈ ತಿಳುವಳಿಕೆ ಚರಿತ್ರೆಯಲ್ಲಿ ದಾಖಲಾಗಬೇಕು ಎಂಬ ಸದುದ್ದೇಶದಿಂದ ಈಗ ಈ ಕೃತಿಯನ್ನು ಭ್ರಾಜಿಷ್ಣುವಿರಚಿತ "ಆರಾಧನಾ ಕರ್ಣಾಟಟೀಕಾ" ಎಂಬ ಹೊಸ ಹೆಸರಿನೊಂದಿಗೆ ಪ್ರಕಟಿಸಲಾಗುತ್ತಿದೆ. ಇದು ಹಳೆಯ ಕವಿ ಮತ್ತು ಕೃತಿಯ ಮರುಹುಟ್ಟಿನ ಅಪೂರ್ವ ಪ್ರಸಂಗವೆಂದು ನಾನು ಭಾವಿಸಿದ್ದೇನೆ. ಈ ಘಟನೆಗೆ ನಾನು ನಿಮಿತ್ತನಾಗುತ್ತಿರುವುದರಿಂದ ಸ್ವಾಭಾವಿಕವಾಗಿ ನನ್ನಲ್ಲಿ ಅಳುಕು ಮತ್ತು ಆನಂದದ ಮಿಶ್ರಭಾವವುಂಟಾಗುತ್ತಿದೆ.

ವಡ್ಡಾರಾಧನೆ ಕೃತಿ ಮತ್ತು ಕವಿಯ ಕುರಿತಾದ ಹಿಂದಿನ ಜಿಜ್ಞಾಸೆಗಳನ್ನು ಜಾಲಾಡಿ ವಡ್ಡಾರಾಧನೆಯನ್ನು ಇನ್ನು ಮುಂದೆ 'ಆರಾಧನಾ ಕರ್ಣಾಟ ಟೀಕಾ' ಎಂದೇ ಕರೆಯಬೇಕೆಂದು ದೃಢವಾದ ನಿಲುವು ತಳೆದರೂ ಹಂಪ ನಾಗರಾಜಯ್ಯ ಅವರು ಮತ್ತೆ ತಮ್ಮ ಕೃತಿಯನ್ನು 'ವಡ್ಡಾರಾಧನೆ' ಎಂಬ ಹೆಸರಿನೊಂದಿಗೇ ಪ್ರಕಟಿಸಿದರು (೧೯೯೩). ಭ್ರಾಜಿಷ್ಣು ಮತ್ತು ಆರಾಧನಾ ಕರ್ಣಾಟ ಟೀಕಾದ ಬಗ್ಗೆ ಹಂಪನಾ ಅವರು ಡಿ. ಎಲ್. ನರಸಿಂಹಾಚಾರ್ ಮತ್ತು ಎ.ಎನ್. ಉಪಾಧ್ಯೆ ಅವರಿಗಿಂತ ಹೊಸದಾದ ಎಷ್ಟೋ ಸಂಗತಿಗಳನ್ನು ತಮ್ಮ ಕೃತಿಯ ಪ್ರಸ್ತಾವನೆಯಲ್ಲಿ ಸೇರಿಸಿದ್ದಾರೆ. ಆದರೆ ಹೊಸ ಸಂಗತಿಗಳೊಡನೆ ಹೊರಬಂದ ಈ ಕೃತಿಯು ವಿದ್ವತ್ ವಲಯದಲ್ಲಿ ಅದೇಕೋ ನಿರೀಕ್ಷಿತ ಸಂಚಲನವನ್ನುಂಟು ಮಾಡಲಿಲ್ಲ.[೧]

ಈ ಕುರಿತು ನಾನು ನನ್ನ ನೋವನ್ನು ಒಂದೆಡೆ ವ್ಯಕ್ತಪಡಿಸಿದ್ದೆ.[೧] ಹೀಗಿದ್ದಾಗ ಈ ನಡುವೆ ಈ ಕೃತಿಯನ್ನು ಹೊಸ ಹೆಸರಿನೊಂದಿಗೆ ಹೊರಹಾಕುವ ಸದವಕಾಶ ನನಗೆ ದೊರೆತಿದೆ. ಇದು ಹಂಪನಾ ಅವರ ವಿಚಾರಗಳನ್ನು ವಿದ್ವಾಂಸರ ಎದುರಿಗೆ ತೆರೆದಿಡಲು ದೊರೆತಿರುವ ಉತ್ತಮ ಅವಕಾಶವೆಂದು ನಾನು ಭಾವಿಸಿದ್ದೇನೆ.

---

೧. ತಮ್ಮ ಕೃತಿಯ ಬಗ್ಗೆ ಪರವಾಗಲಿ, ವಿರೋಧವಾಗಲಿ ಹೆಚ್ಚಿನ ಚರ್ಚೆ ನಡೆಯದಿರುವುದು ಹಂಪನಾ ಅವರಿಗೆ ಖಂಡಿತವಾಗಿ ಬೇಸರ ತರಿಸಿರಬೇಕು.

ಕನ್ನಡ ಪುಸ್ತಕ ಪ್ರಾಧಿಕಾರವು ತಾನು ಪ್ರಕಟಿಸಲು ಮುಂದಾಗಿರುವ ಪ್ರಾಚೀನ ಗದ್ಯ ಸಾಹಿತ್ಯಮಾಲೆಯಲ್ಲಿ "ಆರಾಧನಾ ಕರ್ಣಾಟಟೀಕಾ" ಕೃತಿಯನ್ನು ಸಿದ್ಧಪಡಿಸಿಕೊಡುವಂತೆ ನನ್ನನ್ನು ಕೇಳಿದಾಗ ಈ ಮೊದಲು ತಿಳಿಸಿದ ಒತ್ತಾಸೆಯಿಂದ ಅದನ್ನು ಸಂತೋಷದಿಂದ ಒಪ್ಪಿಕೊಂಡೆ. ಇದರಲ್ಲಿ ನನ್ನದೇನೂ ಶ್ರಮವಿಲ್ಲ. ನಾನು ಆಕಾರ ಕೊಟ್ಟದ್ದು ಕೇವಲ ಇಲ್ಲಿಯ 'ಪ್ರಸ್ತಾವನೆ'ಗೆ ಮಾತ್ರ. ಅಲ್ಲಿಯೂ ಬಳಕೆಯಾದ ಸಾಮಗ್ರಿ ಹಳೆಯದೇ. ಓದುಗರ ಅನುಕೂಲಕ್ಕಾಗಿ ಅದನ್ನೊಂದು ಕ್ರಮದಲ್ಲಿ ಹೊಂದಿಸಿಕೊಡುವ ಕೆಲಸವನ್ನು ಮಾತ್ರ ನಾನು ಮಾಡಿದ್ದೇನೆ. ಉಳಿದಂತೆ ಕೃತಿಯ ಮೂಲಪಠ್ಯ ಹಂಪನಾ ಅವರದೇ. ಬಹುಶಃ ಹಂಪನಾ ಅವರ ಕಣ್ತಪ್ಪಿನಿಂದಾಗಿ ಉಳಿದಿದ್ದ ಕೆಲವು ಅಕ್ಷರ ದೋಷ, ಪದದೋಷಗಳನ್ನು ಮಾತ್ರ ನಾನು ತಿದ್ದಿದ್ದೇನೆ. ಮತ್ತೆ ಕೆಲವೆಡೆ ಹಂಪನಾ ಅವರ ಪಾಠಕ್ಕಿಂತ ಡಿ.ಎಲ್.ಎನ್. ಪಾಠವೇ ಯೋಗ್ಯವೆಂದು ನನಗನ್ನಿಸಿದಲ್ಲಿ ಡಿ.ಎಲ್.ಎನ್. ಪಾಠಗಳನ್ನು ಸೇರಿಸಿದ್ದೇನೆ. ಒಟ್ಟಾರೆ 'ಕೆರೆಯ ನೀರನು ಕೆರೆಗೆ ಚೆಲ್ಲಿ ವರ ಪಡೆವ' ಕೆಲಸವನ್ನು ಮಾತ್ರ ನಾನು ಮಾಡಿದ್ದೇನೆ.

ಪ್ರಸ್ತುತ ಕವಿ-ಕೃತಿಯ ಬಗ್ಗೆ ಚರ್ಚೆ ಮಾಡುತ್ತ ಬಂದಿರುವ ಎಲ್ಲ ಪೂರ್ವಸೂರಿಗಳನ್ನು ಈ ಸಂದರ್ಭದಲ್ಲಿ ಗೌರವದಿಂದ ಸ್ಮರಿಸುತ್ತೇನೆ. ನನ್ನ ಸಾಹಿತ್ಯ ಬದುಕಿನ ಶಿಕ್ಷಾಗುರುಗಳಾದ ಪ್ರೊ. ಕಲಬುರ್ಗಿ ಅವರನ್ನೂ ದೀಕ್ಷಾಗುರುಗಳಾದ ಪ್ರೊ. ಹಂಪ ನಾಗರಾಜಯ್ಯ ಅವರನ್ನು ನೆನೆಯುವುದು ನನ್ನ ಆದ್ಯ ಕರ್ತವ್ಯವಾಗಿದೆ. ಈ ಕೃತಿಯ ವಿಷಯದಲ್ಲಂತೂ ಪ್ರೊ. ಕಲಬುರ್ಗಿ ಅವರು ನನ್ನನ್ನು "ಬೆಂಬಿಡದ ಮಾಯೆ"ಯಾಗಿ ಕಾಡಿದ್ದಾರೆ. ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಯ ಕುರಿತಾದ ಕಾಳಜಿ ಮತ್ತು ಶಿಷ್ಯವಾತ್ಸಲ್ಯ ಗುಣಗಳು ಕಲಬುರ್ಗಿಯವರ ವ್ಯಕ್ತಿತ್ವದ ವೈಶಿಷ್ಟ್ಯಗಳಾಗಿವೆ. ಈ ಕೆಲಸಕ್ಕಾಗಿ ಅವರು ಮತ್ತೆ ಮತ್ತೆ ನನ್ನನ್ನು ಹುರಿದುಂಬಿಸಿ, ಬೇಸರ ವ್ಯಕ್ತಪಡಿಸಿ, ಬಯ್ದು ಅಂತೂ ಇಂತೂ ಇದನ್ನು ಸಾಧ್ಯವಾಗಿಸಿದ್ದಾರೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಇದು ನಾನು ಮಾಡಿದ ಕೆಲಸವಲ್ಲ, ನನ್ನಿಂದ ಮಾಡಿಸಲ್ಪಟ್ಟ ಕೆಲಸ! ಈ ಕಾರಣಕ್ಕಾಗಿ ಪ್ರೊ. ಕಲಬುರ್ಗಿ ಅವರಿಗೆ ನನ್ನ ವಿಶೇಷ ನೆನಕೆಗಳು ಸಲ್ಲುತ್ತವೆ.

ಈ ಉಪಯುಕ್ತ ಯೋಜನೆಯನ್ನು ಕಾರ್ಯಗತಗೊಳಿಸುತ್ತಿರುವ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಿಗೆ, ಕುಲಸಚಿವರಿಗೆ, ಈ ಯೋಜನೆಯ ಸಲಹಾ ಮಂಡಳಿಯ ಸದಸ್ಯರಿಗೆ ನನ್ನ ಕೃತಜ್ಞತೆಗಳು. ಡಿ.ಟಿ.ಪಿ. ಕೆಲಸದಲ್ಲಿ ನೆರವಾದ ಧಾರವಾಡದ ವಚನ ಗ್ರಾಫಿಕ್ಸ್‌ನ ಶ್ರೀ

---

೧. "ವಡ್ಡಾರಾಧನೆಯ ಕರ್ತೃವಿನ ಬಗ್ಗೆ ಹಂಪನಾ ಹೊಸತನ್ನು ಪ್ರಮಾಣಭೂತವಾಗಿ ಹೇಳಿದರೇನೋ ನಿಜ. ಆದರೆ ಅವರು ನಿರೀಕ್ಷಿಸಿದಂತೆ ವಿದ್ವತ್ಪ್ರಪಂಚದ ಅಭಿಪ್ರಾಯಗಳು ಗಟ್ಟಿಯಾಗಿ ಹೊರಬಂದಂತೆ ಕಾಣುವುದಿಲ್ಲ. ಕರ್ತೃವಿನ ಕುರಿತಾಗಿ ಹಂಪನಾ ತಳೆದಿರುವ ನಿಲುವಿನ ಖಂಡನೆಯಾಗಲಿ ಮಂಡನೆಯಾಗಲಿ ಗಂಭೀರವಾಗಿ ನಡೆದಿಲ್ಲ. ಸಂಶೋಧನೆ ಮತ್ತು ವಿದ್ವತ್ತುಗಳ ಬೆಳಕಿನಲ್ಲಿ ನಡೆಯಬೇಕಾದ ಗ್ರಂಥಸಂಪಾದನಾ ಕ್ಷೇತ್ರದ ಕುರಿತಾದ ವಿದ್ವಾಂಸರ ತೀವ್ರ ಅನಾಸಕ್ತಿಯೂ ಇದಕ್ಕೆ ಕಾರಣವಾಗಿರಬಹುದು. ಏನಿದ್ದರೂ ಹಂಪನಾ ಸಂಪಾದನೆ ತನ್ನದೇ ಆದ ಮಹತ್ವ ಹೊಂದಿದೆಯೆಂಬುದನ್ನು ಅಲ್ಲಗಳೆಯಲಾಗದು - ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂಚಿಕೆ -೧, ೨೦೦೬

ದೇವರಾಜ ನಾಡಿಗ ಅವರಿಗೆ, ಪುಸ್ತಕವನ್ನು ಅಂದವಾಗಿ ಮುದ್ರಿಸಿದ ಮುದ್ರಕರಿಗೆ ನಾನು ಋಣಿಯಾಗಿದ್ದೇನೆ.

ಅಪರೂಪದ ಗದ್ಯ ಪ್ರಕಾರ, ಧಾರ್ಮಿಕ ಕ್ಷೇತ್ರದ ಸೂಕ್ಷ್ಮ ವಿವರಗಳು ಹಾಗೂ ತನ್ನಲ್ಲಿ ಹುದುಗಿಸಿಕೊಂಡಿರುವ ಅಪೂರ್ವ ಸಾಂಸ್ಕೃತಿಕ ಸತ್ವದಿಂದಾಗಿ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಈ ಕೃತಿಗೆ ವಿಶಿಷ್ಟ ಸ್ಥಾನವಿದೆ. ಕಾರಣ ಈ ಕೃತಿಯು ಮತ್ತೆ ಮತ್ತೆ ಚರ್ಚೆಗೆ ಗ್ರಾಸವಾಗಲಿ ಎಂಬುದು ನನ್ನ ಆಶಯವಾಗಿದೆ. ಇದನ್ನು ಸಾಧ್ಯವಾಗಿಸಬೇಕಾದವರು ಸಹೃದಯ ಓದುಗರು. ಕಾರಣ ತಮ್ಮ ಅಭಿಪ್ರಾಯ, ಸಲಹೆಗಳನ್ನು ಬಯಸುತ್ತ ಈ ಕೃತಿಯನ್ನು ತಮ್ಮ ಕೈಗಿಡುತ್ತಿದ್ದೇನೆ.

ಧಾರವಾಡ **ಶಾಂತಿನಾಥ ದಿಬ್ಬದ**

ಪರಿವಿಡಿ

ಪುಟ ಸಂಖ್ಯೆ

ಪ್ರಸ್ತಾವನೆ

೧

"ಭ್ರಾಜಿಷ್ಣ್ವಾರಾಧನಾ ಶಾಸ್ತ್ರೇ ಕರ್ಣಾಟ ಟೀಕಾ ಕಥಿತ
ಕ್ರಮೇಣೋಲ್ಲೇಖ ಮಾತ್ರಂ ಕಥಿತೇಯಂ ಕಥಾ"

-ಪುಣ್ಯಾಸ್ರವ ಕಥಾಕೋಶ -ರಾಮಚಂದ್ರ ಮುಮುಕ್ಷು

೨

"ಇನ್ನು ಮುಂದೆ ಕನ್ನಡ ಕೃತಿಯ ಹೆಸರು 'ವಡ್ಡಾರಾಧನೆ'ಯಲ್ಲ, 'ಆರಾಧನಾ ಕರ್ಣಾಟ ಟೀಕಾ' ಎಂದೂ, ಕರ್ತೃವಿನ ಹೆಸರು 'ಶಿವಕೋಟ್ಯಾಚಾರ್ಯ'ನಲ್ಲ 'ಭ್ರಾಜಿಷ್ಣು' ಎಂದೂ ಕರೆಯಬೇಕೆನಿಸುತ್ತದೆ.

-ಎಂ.ಎಂ. ಕಲಬುರ್ಗಿ, ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ ೨೩೪, ೧೯೭೩[೧]

೩

"ಪುಣ್ಯಾಸ್ರವ ಕಥಾಕೋಶವೆಂಬ ಗ್ರಂಥವನ್ನು ಸಂಸ್ಕೃತದಲ್ಲಿ ಬರೆದಿರುವ ರಾಮಚಂದ್ರ ಮುಮುಕ್ಷು ಆ ಗ್ರಂಥದ ಶ್ರೇಣಿಕನ ಕಥೆಯ ಅಂತ್ಯದಲ್ಲಿ 'ಭ್ರಾಜಿಷ್ಣ್ವಾರಾಧನಾ ಕರ್ಣಾಟ ಟೀಕಾ ಕಥಿತ ಕ್ರಮೇಣೋಲ್ಲೇಖ ಮಾತ್ರಂ ಕಥಿತೇಯಂ ಕಥಾ" ಎಂದು ಹೇಳಿದ್ದಾನೆ. ಈ ಕರ್ಣಾಟ ಟೀಕಾ ಪ್ರಕೃತ ಕನ್ನಡ ಗ್ರಂಥವೇ. ಏಕೆಂದರೆ ಇಂಥ ಗ್ರಂಥ ಕನ್ನಡದಲ್ಲಿ ಬೇರೊಂದಿಲ್ಲ. ಆದ್ದರಿಂದ ಈ ಗ್ರಂಥವನ್ನು "ಆರಾಧನಾ ಕರ್ಣಾಟ ಟೀಕಾ" ಎಂದು ಬೇಕಾದರೂ ಕರೆಯಬಹುದು.

-ಡಿ.ಎಲ್. ನರಸಿಂಹಚಾರ್, ವಡ್ಡಾರಾಧನೆ ಪೀಠಿಕೆ XIX-1970

---

೧. ಈ ಪ್ರಬಂಧಕ್ಕೆ ಎಂ.ಎಂ. ಕಲಬುರ್ಗಿ ಅವರಿಗೆ ಪಿಎಚ್.ಡಿ ಪದವಿ ದೊರೆತದ್ದು ೧೯೭೦ರಲ್ಲಿ ಪದವಿಗಾಗಿ ಅವರು ಪ್ರಬಂಧವನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅವಧಿಯ ಲೆಕ್ಕದಲ್ಲಿ ನೋಡಿದರೆ ಭ್ರಾಜಿಷ್ಣು ಮತ್ತು ಆರಾಧನಾ ಕರ್ಣಾಟಟೀಕಾದ ಬಗ್ಗೆ ಎಲ್. ಎನ್. ರಿಗಿಂತ ಮೊದಲು (೧೯೭೦) ಈ ಚರ್ಚೆಯನ್ನು ಆರಂಭಿಸಿದವರು ಕಲಬುರ್ಗಿ ಅವರೆಂಬುದು ತಿಳಿಯುತ್ತದೆ. ಡಿ.ಎಲ್.ಎನ್. ಅವರು ಆರಾಧನಾ ಕರ್ಣಾಟಟೀಕಾ ಕನ್ನಡ ಗ್ರಂಥವೇ ಎಂದು ಹೇಳಿದರಾದರೂ ಅದು ಭ್ರಾಜಿಷ್ಣುವಿನದು ಎಂದು ಹೇಳಿಲ್ಲ.

"ಕರೆಯಬೇಕೆನಿಸುತ್ತದೆ" ಎಂಬಲ್ಲಿ ಅನುಮಾನ ಬೆಳೆಯುವುದರಿಂದ ಅದನ್ನು 'ಕರೆಯಬೇಕು' ಎಂದು ದೃಢಸೂಚಕ ಧ್ವನಿಯಿಂದ ಸ್ವೀಕರಿಸಬೇಕು. (ಕಲಬುರ್ಗಿಯವರ ಅಭಿಪ್ರಾಯವನ್ನು ಪುಷ್ಟೀಕರಿಸುತ್ತೆ)

-ಹಂಪ ನಾಗರಾಜಯ್ಯ, ವಡ್ಡಾರಾಧನೆ, ಸಮಗ್ರ ಅಧ್ಯಯನ ೪೨೮, ೧೯೯೯

ಇಲ್ಲಿ ಉಲ್ಲೇಖಿಸಲಾಗಿರುವ ನಾಲ್ಕು ಅಭಿಪ್ರಾಯಗಳು ಕೇವಲ ಅಭಿಪ್ರಾಯಗಳಲ್ಲ. ಬೀಜ ಮೊಳೆತು ಹಣ್ಣಾದ ಪ್ರಕ್ರಿಯೆಯ ಕಾಲಬದ್ಧ ಸೂಚನೆಗಳು. ಇವು 'ವಡ್ಡಾರಾಧನೆ'ಯನ್ನು 'ಆರಾಧನಾ ಕರ್ಣಾಟ ಟೀಕಾ' ವನ್ನಾಗಿಸಿದ ಪ್ರಮುಖ ಪ್ರೇರಣೆಗಳು. ಈ ಒಟ್ಟು ಪ್ರಕ್ರಿಯೆಯನ್ನು ನಾನು ಹೀಗೆ ಗುರುತಿಸಬಯಸುತ್ತೇನೆ. ರಾಮಚಂದ್ರ ಮುಮುಕ್ಷು ಭೂಮಿಶೋಧ ಮಾಡಿದ. ಡಿ.ಎಲ್. ನರಸಿಂಹಾಚಾರ್ಯರು, ಎಂ.ಎಂ.ಕಲಬುರ್ಗಿ ಅವರು ಬೀಜ ಬಿತ್ತಿದರು. ನೀರುಣ್ಣಿಸಿದರು. ಹಂಪ ನಾಗರಾಜಯ್ಯನವರು ಹಣ್ಣು ಬೆಳೆದರು! ಇವರೆಲ್ಲರ ಅಭಿಲಾಷೆಯಂತೆ ಈಗ ಆರಾಧನಾ ಕರ್ಣಾಟಟೀಕಾ ಎಂಬ ಹಣ್ಣು ಮಾರುಕಟ್ಟೆಗೆ ಬಂದಿದೆ. ಹಣ್ಣಿನ ರುಚಿ ಹಳೆಯದೇ. ಇದರ ಹಿಂದೆ ಈ ಸಾಹಿತ್ಯ ಕೃಷಿಕರ ಅಪಾರ ಶ್ರಮವಿದೆ. ಕಾರಣ ಇದರ ಶ್ರೇಯವೂ ಅವರಿಗೇ ಸಲ್ಲತಕ್ಕದ್ದು. ನಾನು ಈ ಹಣ್ಣನ್ನು ಹೊತ್ತು ಮಾರುಕಟ್ಟೆಗೆ ಸಾಗಿಸುತ್ತಿರುವ ಸಾಹಿತ್ಯ ಪರಿಚಾರಕ ಮಾತ್ರ. ಈ ಅವಕಾಶ ನನ್ನಲ್ಲಿ ಸ್ವಾಭಾವಿಕವಾಗಿ ಸಂತೋಷ ಮತ್ತು ಸಾರ್ಥಕ್ಯಭಾವವನ್ನುಂಟು ಮಾಡಿದೆ.

ಒಂದು ಸಾಹಿತ್ಯಕೃತಿಯನ್ನು ಒಬ್ಬ ಕವಿ ರಚಿಸುತ್ತಾನೆ. ಹತ್ತು ಜನ ವಿದ್ವಾಂಸರು ಉಳಿಸುತ್ತಾರೆ. ನೂರು ಜನ ಓದುಗರು ಬೆಳೆಸುತ್ತಾರೆ. ಈ ಮೂರೂ ಗುಂಪಿನವರ ಕ್ರಮಾಗತ ಪರಿಶ್ರಮ ಒಂದು ನಾಡಿನ ಸಾಹಿತ್ಯ ಪರಂಪರೆಯ ಉಗಮ, ವಿಕಾಸ ಮತ್ತು ಪ್ರಚಾರಕ್ಕೆ ಕಾರಣವಾಗುತ್ತದೆ. ಇದು ಪರಸ್ಪರ ಪೂರಕ- ಪೋಷಕ ಸಂಬಂಧ. ಇದರಲ್ಲಿ ಒಬ್ಬರಿಗೊಬ್ಬರು ಋಣಿಯಾಗಿರುವ ಕ್ರಿಯೆ ನಡೆಯುತ್ತದೆ. ಹೀಗೆ ನೋಡಿದಾಗ ಒಂದು ಕಾವ್ಯದ ಅಧ್ಯಯನವೆಂದರೆ ಕೇವಲ ಒಬ್ಬ ಕವಿಯ ಒಂದು ಶಾಬ್ದಿಕ ರಚನೆಯ ಅಧ್ಯಯನ ಮಾತ್ರವಾಗಿರದೆ ಕವಿ-ವಿದ್ವಾಂಸ-ಓದುಗ ಈ ಮೂರೂ ಜನರ ಮನಸ್ಥಿತಿ ಮತ್ತು ಕಾಲದೇಶ ಸ್ಥಿತಿಯ ಅಧ್ಯಯನವೂ ಆಗಿರುತ್ತದೆ. ಈ ಬಗೆಯ ಓದನ್ನೇ ನಾವು ಸಾಂಸ್ಕೃತಿಕ ಓದು ಎಂದು ಕರೆಯುವುದು.

ಈ ವಿವರಣೆ ಹಳಗನ್ನಡ ಕಾವ್ಯಕ್ಷೇತ್ರಕ್ಕೆ ನೂರಕ್ಕೆ ನೂರರಷ್ಟು ಅನ್ವಯವಾಗುತ್ತದೆ. ಇದುವರೆಗಿನ ನಮ್ಮ ಓದುಗಳು ಹೆಚ್ಚಾಗಿ ಕವಿಕೇಂದ್ರಿತವಾಗಿವೆ. ಇನ್ನು ಮುಂದೆ ಇದು ಸಂಪಾದಕ (ವಿದ್ವಾಂಸ) ಕೇಂದ್ರಿತ ಮತ್ತು ಓದುಗ (ವಿಮರ್ಶಕ) ಕೇಂದ್ರಿತ ನೆಲೆಗಳಿಗೂ ವಿಸ್ತರಿಸಿಕೊಳ್ಳಬೇಕಾಗಿದೆ. ಹೀಗೆ ನೋಡಿದಾಗ ಕವಿಚರಿತೆಗೆ ದೊರೆಯುವಷ್ಟೇ ಪ್ರಾಶಸ್ತ್ಯ ಮತ್ತು ಪ್ರಾಧಾನ್ಯ ಸಂಪಾದಕರ ಶ್ರಮಚರಿತೆಗೂ ದೊರೆಯುತ್ತದೆ. ಓದುಗರು ಪ್ರತಿಕ್ರಿಯಿಸಿದ ಪ್ರಾಮಾಣ್ಯಗಳಿಗೂ ಬೆಲೆ ಬರುತ್ತದೆ. ಒಟ್ಟಾರೆ ಕವಿಯ ಸೃಜನಪ್ರಜ್ಞೆ, ಗ್ರಂಥ ಸಂಪಾದಕರ ಸಂಶೋಧನಾ ಪ್ರಜ್ಞೆ ಮತ್ತು ಸಂರಕ್ಷಣ ಪ್ರಜ್ಞೆ ಹಾಗೂ ಓದುಗರ ವಿಮರ್ಶನ ಪ್ರಜ್ಞೆ ಈ ಮೂರನ್ನೂ ಸಮಾನ ದೃಷ್ಟಿಯಿಂದ ಕಾಣುವ ಅಧ್ಯಯನ ಹೆಚ್ಚು ಸಮರ್ಪಕವೆನಿಸುತ್ತದೆ.

ಈ ದೃಷ್ಟಿಯಿಂದ ಹಳಗನ್ನಡ ಭಾಷೆ ಮತ್ತು ಸಾಹಿತ್ಯದ ಅಡಿಪಾಯದಂತಿರುವ ವಡ್ಡಾರಾಧನೆಯ ರಚನೆ, ಪರಿಷ್ಕರಣೆ ಮತ್ತು ಅಧ್ಯಯನದ ವಿವರಗಳೊಂದಿಗೆ ಮೂಲಪಠ್ಯವನ್ನು ಇನ್ನೊಮ್ಮೆ ಪೂರೈಸುವ ಹಂಬಲದೊಂದಿಗೆ ಈ ಕೃತಿಯನ್ನು ವಿನ್ಯಾಸಗೊಳಿಸಲಾಗಿದೆ. ಇದು ಪೂರ್ವಸೂರಿಗಳ ವಿದ್ವತ್ತು ಮತ್ತು ಶ್ರಮಕ್ಕೆ ನಾನು ಸಲ್ಲಿಸುತ್ತಿರುವ ಗೌರವವೆಂದು ಭಾವಿಸಿದ್ದೇನೆ.

ನನ್ನ ಮತ್ತು ಓದುಗರ ಅನುಕೂಲಕ್ಕಾಗಿ ಪಠ್ಯಕ್ಕೆ ನಾನು ಬರೆದಿರುವ ಪ್ರಸ್ತಾವನೆಯನ್ನು ಕವಿಕೇಂದ್ರಿತ, ಕೃತಿಕೇಂದ್ರಿತ, ಸಂಪಾದಕ ಕೇಂದ್ರಿತ ಮತ್ತು ಓದುಗ ಕೇಂದ್ರಿತ ಎಂಬ ನಾಲ್ಕು ನೆಲೆಗಳಲ್ಲಿ ಹೊಂದಿಸಿಕೊಂಡಿದ್ದೇನೆ.

ಅ. ಕವಿ ಕೇಂದ್ರಿತ ವಿಚಾರಗಳು :

ವಡ್ಡಾರಾಧನೆಯ ಕರ್ತೃ ಶಿವಕೋಟ್ಯಾಚಾರ್ಯ ಎಂಬುದರ ಸುತ್ತ ಇದುವರೆಗೆ ನಡೆದ ಚರ್ಚೆಯನ್ನೆಲ್ಲ ಅದಕ್ಕೆ ಸಲ್ಲಬೇಕಾದ ಸಕಲ ಮರ್ಯಾದೆಯೊಂದಿಗೆ ಬದಿಗೆ ಸರಿಸಬೇಕಾಗಿದೆ. ಈಗ ಭ್ರಾಜಿಷ್ಣುವಿನ ಮೇಲೆ ವಿದ್ವಾಂಸರ ಗಮನ.

'ಆರಾಧನಾ ಕರ್ಣಾಟ ಟೀಕಾ' ಕೃತಿಯ ಕರ್ತೃ ಭ್ರಾಜಿಷ್ಣು ಎಂಬುದು ಈಗ ನಿರ್ವಿವಾದ. ಭ್ರಾಜಿಷ್ಣುವಿನ ಬಗ್ಗೆ ಮೊದಲ ಸಲ ಮಾತನಾಡಿದವ ಸಂಸ್ಕೃತ ಕವಿ ರಾಮಚಂದ್ರ ಮುಮುಕ್ಷು. ನಂತರ ಭ್ರಾಜಿಷ್ಣುವಿನ ಬಗ್ಗೆ ಹೆಚ್ಚಿನ ವಿವರ ನೀಡಿದವರು ಎ.ಎನ್. ಉಪಾಧ್ಯೆ ಅವರು. ಇಷ್ಟಾಗಿಯೂ ಭ್ರಾಜಿಷ್ಣುವಿನ ಅಸ್ತಿತ್ವವನ್ನು ಒಪ್ಪಿಕೊಳ್ಳುವಲ್ಲಿ ಉಪಾಧ್ಯೆಯವರು ಹಿಂಜರಿದರು. ನಂತರ ಆ ಬಗ್ಗೆ ಚರ್ಚಿಸಿದವರು ವಡ್ಡಾರಾಧನೆಯ ಸಂಪದಾಕರಾದ ಡಿ.ಎಲ್. ನರಸಿಂಹಾಚಾರ್ಯ ಅವರು. ಅವರೂ ಭ್ರಾಜಿಷ್ಣುವನ್ನು ಅಪ್ಪಿಕೊಳ್ಳದಿರುವುದನ್ನು ಗುರುತಿಸಿದ ಹಂಪನಾ ಅವರು "ವಡ್ಡಾರಾಧನೆಯ ಸಂಪಾದಕರು ಅರಸುವ ಬಳ್ಳಿ ಕಾಲಿಗೆ ತೊಡಗಿ ಭುಜವಲ್ಲರಿಯಾಗಿ ಅಡಗಿ ಕುಳಿತಿದ್ದರೂ ಬಿಡಿಸಿ ಕೊಡವಿದ್ದು ವಿದ್ವತ್ ಪ್ರಪಂಚದ ಅಚ್ಚರಿಗಳ ಸಾಲಿಗೆ ಸೇರಿದೆ" ಎಂಬ ಅಭಿಪ್ರಾಯದೊಂದಿಗೆ ಭ್ರಾಜಿಷ್ಣುವಿನ ಕುರಿತಾದ ಹೆಚ್ಚಿನ ಸಂಗತಿಗಳನ್ನು ಕನ್ನಡಿಗರ ಮುಂದೆ ತೆರೆದಿಟ್ಟಿದ್ದಾರೆ.

ಭ್ರಾಜಿಷ್ಣು ಎಂಬ ಒಬ್ಬ ಕವಿ ಇದ್ದ. ಆತ ಆರಾಧನಾ ಕರ್ಣಾಟ ಟೀಕಾ ಕೃತಿಯನ್ನು ರಚಿಸಿದ್ದ ಎಂಬುದಕ್ಕೆ ಆಧಾರಗಳಿರುವುದನ್ನು ಗುರುತಿಸಿದ ಹಂಪನಾ ಅವರು "ಇನ್ನು ಮುಂದೆ ನಾವು ಭ್ರಾಜಿಷ್ಣುವಿನ ಅಸ್ತಿತ್ವವನ್ನು ಪ್ರಶ್ನಿಸುವ ಸಂಶಯಕ್ಕೆ ಪೂರ್ಣವಿರಾಮವಿಡಬೇಕು" ಎಂದಿರುವುದು ಗಮನಾರ್ಹವಾಗಿದೆ. ಇಷ್ಟಾದರೂ ಕವಿಯ ಕಾಲ-ದೇಶಕ್ಕೆ ಸಂಬಂಧಿಸಿದ ಇನ್ನಷ್ಟು ವಿಚಾರಗಳು ಬೇಕೆಂದು ಯಾರಿಗಾದರೂ ಅನ್ನಿಸುತ್ತದೆ. ಸಧ್ಯಕ್ಕೆ ಲಭ್ಯ ಮಾಹಿತಿಗಳಿಂದ ನಾವು ತೃಪ್ತರಾಗಬೇಕಾಗಿದೆ.

ಕವಿಯ ಕಾಲ :

ಎ.ಎನ್. ಉಪಾಧ್ಯೆ ಅವರು ವಡ್ಡಾರಾಧನೆಯಲ್ಲಿನ ಉದ್ಧೃತ ಪದ್ಯಗಳನ್ನು ಆಧಾರವಾಗಿಟ್ಟುಕೊಂಡು ಕವಿಯ ಕಾಲನಿರ್ಣಯ ಮಾಡಲು ಪ್ರಯತ್ನಿಸಿದ್ದಾರೆ. ಅದರಂತೆ "ಅದೌ ಜನ್ಮಜರಾರೋಗ......." ಎಂಬ ಶ್ಲೋಕವು ಕ್ರಿ. ಶ. ೮೯೮ ರ ಗುಣಭದ್ರಾಚಾರ್ಯರ

ಉತ್ತರ ಪುರಾಣದಲ್ಲಿರುವದನ್ನಾಧರಿಸಿ 'ಆರಾಧನಾ ಕರ್ಣಾಟ ಟೀಕಾ'ದ ಕಾಲ ೧೧ನೆಯ ಶತಮಾನ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆಂತರಿಕ ಆಧಾರಗಳನ್ನು ಗಮನದಲ್ಲಿಟ್ಟುಕೊಂಡು ಡಿ.ಎಲ್. ನರಸಿಂಹಾಚಾರ್ ಅವರು ಈ ಕೃತಿಯು ಪಂಪಭಾರತಕ್ಕಿಂತ ಹಿಂದಿನ ರಚನೆಯೆಂದೂ ಕ್ರಿ. ಶ. ೯೨೦ರಲ್ಲಿ ರಚಿತವಾಗಿರಬಹುದೆಂದೂ ಅಭಿಪ್ರಾಯಪಟ್ಟಿದ್ದಾರೆ. ಈ ಇಬ್ಬರೂ ಮಹನೀಯರ ಅಭಿಪ್ರಾಯಗಳನ್ನು ವಿಶ್ಲೇಷಿಸುವ ಮೂಲಕ ಕೃತಿಯ ಭಾಷೆಯನ್ನಾಧರಿಸಿ ಅದರ ಕಾಲವನ್ನು ನಿರ್ಧರಿಸಬೇಕಾಗುತ್ತದೆಯೆಂದಿರುವ ಹಂಪನಾ ಆ ಸಂಬಂಧವಾಗಿ ಆಧಾರಗಳನ್ನು ಒದಗಿಸಿದ್ದಾರೆ. ಆ ಸಂಬಂಧವಾಗಿ ಡಾ. ಎಂ.ಬಿ. ಭೋಯಿ ಅವರು ಕೃತಿಯ ಭಾಷೆಯನ್ನಾಧರಿಸಿ ಅದರ ಕಾಲ ಕ್ರಿ.ಶ. ೮೦೦ ಎಂದಿರುವುದನ್ನು ಒಂದು ದಡವೆಂದು ಸ್ವೀಕರಿಸಿದ ಹಂಪನಾ ಅವರು ೧೦ನೆಯ ಶತಮಾನದ ರಾಮಚಂದ್ರ ಮುಮುಕ್ಷುವು ಭ್ರಾಜಿಷ್ಣುವನ್ನು ಉಲ್ಲೇಖಿಸಿರುವ ಕಾರಣ ೧೦ನೆಯ ಶತಮಾನವನ್ನು ಇನ್ನೊಂದು ದಡವೆಂದೂ ಸ್ವೀಕರಿಸಿದ್ದಾರೆ. ಕವಿಯ ಕಾಲ ಎಂಟರಿಂದ ಹತ್ತನೆಯ ಶತಮಾನದ ನಡುವಿನದು ಎಂಬ ಅಭಿಪ್ರಾಯ ಅವರದು.

ಕವಿಯ ದೇಶ : ಭ್ರಾಜಿಷ್ಣುವಿನ ದೇಶದ ಕುರಿತಾಗಿಯೂ ಚರ್ಚೆಗಳು ನಡೆದಿವೆ. ಆತ ದಕ್ಷಿಣ ಕನ್ನಡ ಜಿಲ್ಲೆಯವನಿರಬೇಕೆಂದು ಕೆ.ಜಿ. ಕುಂದಣಗಾರರು ತಿಳಿಸಿದ್ದಾರೆ. ಕೋಗಳಿ ಅವನ ಪ್ರದೇಶವಾಗಿದ್ದಿತೆಂಬುದು ಡಿ.ಎಲ್. ನರಸಿಂಹಾಚಾರ್ಯರ ವಾದ. ಆದರೆ ಹಂಪನಾ ಮಾತ್ರ ಬೇರೆ ಆಧಾರಗಳ ಬೆಳಕಿನಲ್ಲಿ ಭ್ರಾಜಿಷ್ಣುವು ಗುಲಬರ್ಗಾ ಅಥವಾ ಬೀದರ ಪರಿಸರದವನಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

ಗುರುದತ್ತ ಭಟಾರರ ಕಥೆಯಲ್ಲಿ 'ಪಳ್ಳಿಖೇಡ' ಎಂಬ ಗ್ರಾಮದ ಹೆಸರಿರುವುದು ಹಾಗೂ ದಂಡಕರಿಸಿಯ ಕಥೆಯಲ್ಲಿ 'ಮಳಯಖೇಡ'ದ ಪ್ರಸ್ತಾವಿರುವುದು ವಿದ್ಯುಚ್ಚೋರ ರಿಸಿಯ ಕಥೆಯಲ್ಲಿ 'ವೇಣ್ಣಾನದಿ' ಮತ್ತು 'ವೇಣಾತಟಾಕ'ದ ಪ್ರಸ್ತಾಪವಿರುವುದು ಹಂಪನಾ ಅವರ ವಾದಕ್ಕೆ ಮುಖ್ಯ ಆಧಾರಗಳಾಗಿವೆ. ಈ ಗ್ರಾಮ, ನದಿಯ ಹೆಸರು ಮೂಲಕಥೆಗಳಲ್ಲಿ ಬಂದಿರದೆ ಕೇವಲ ಆರಾಧನಾ ಕರ್ಣಾಟ ಟೀಕಾದಲ್ಲಿ ಮಾತ್ರ ಬಂದಿರುವುದು ಅವರಿಗೆ ವಿಶೇಷವೆನ್ನಿಸಿದೆ. ಕಾರಣ ಕವಿಯು ಗುಲಬರ್ಗಾ ಪ್ರದೇಶದವನಿರಬೇಕೆಂದೂ ಮಳಖೇಡದ ರಾಷ್ಟ್ರಕೂಟರ ಆಡಳಿತದ ಅವಧಿಗೆ ಸೇರಿದವನಿರಬೇಕೆಂದೂ ಕ್ರಿ.ಶ. ೮೦೦-೮೭೦ರ ಅವಧಿಯಲ್ಲಿ ಈ ಕೃತಿಯನ್ನು ರಚಿಸಿರಬಹುದೆಂದು ಅವರು ತಿಳಿಸಿದ್ದಾರೆ. ಇದಲ್ಲದೆ ಆರಾಧನಾ ಗ್ರಂಥಕ್ಕೆ ರಚಿತವಾದ ಟೀಕಾಗ್ರಂಥಗಳಲ್ಲಿ ಇದುವರೆಗೆ ಪ್ರಾಚೀನವೆಂದು ತಿಳಿಯಲಾಗಿದ್ದ ಕ್ರಿ.ಶ. ೯-೧೦ನೆಯ ಶತಮಾನದ 'ವಿಜಯೋದಯಾ' ಕೃತಿಗಿಂತ ೯ನೆಯ ಶತಮಾನದಲ್ಲಿ ರಚಿತವಾದ ಆರಾಧನಾ ಕರ್ಣಾಟ ಟೀಕಾ' ಕೃತಿಯೇ ಹೆಚ್ಚು ಪ್ರಾಚೀನವೆಂಬುದು ಸಿದ್ಧವಾಗುತ್ತದೆಯೆಂಬ ಅವರ ಅಭಿಪ್ರಾಯವು ಸಕಾರಣವಾಗಿದೆ.

ಬ. ಕೃತಿಕೇಂದ್ರಿತ ವಿಚಾರಗಳು :

ಆರಾಧನಾ ಕರ್ಣಾಟ ಟೀಕಾ ಕೃತಿಯ ಮೂಲ ಆಕರ ಪ್ರಾಕೃತದ ಶಿವಕೋಟ್ಯಾಚಾರ್ಯ (ಶಿವಾರ್ಯ)ನ 'ಭಗವತೀ ಆರಾಧನಾ' ಎಂಬ ಕೃತಿಯಾಗಿದೆ. ಜೈನರಲ್ಲಿ ಆರಾಧನಾ ಗ್ರಂಥ ಪರಂಪರೆಗೆ ತುಂಬ ದೊಡ್ಡ ಸ್ಥಾನವಿದೆ. ಈ ಮಾಲಿಕೆಯಲ್ಲಿನ ಎರಡು ಶ್ರೇಷ್ಠ ಕೃತಿಗಳೆಂದರೆ

ಹರಿಷೇಣನ ಸಂಸ್ಕೃತ ಬೃಹತ್ಕಥಾ ಮತ್ತು ಶಿವಕೋಟ್ಯಾಚಾರ್ಯನ ಪ್ರಾಕೃತ 'ಭಗವತೀ ಆರಾಧನಾ'. ಭಗವತೀ ಆರಾಧನಾ ಕೃತಿಯು ಜೈನ ಸಾಹಿತ್ಯದ ಮೂಲ ಎಂಬ ಹೆಗ್ಗಳಿಕೆಗೆ ಪಾತ್ರವಾದ ಕಾರಣ ಆರಾಧನಾ ಇದ್ದುದು 'ಮೂಲಾರಾಧನಾ' ಆಗಿ, ತರುವಾಯ 'ಭಗವಾನ್' ಎಂಬ ಉಪಾಧಿ ಸೇರಿಕೊಂಡ ಕಾರಣ ಭಗವತೀ 'ಆರಾಧನಾ' ಆಗಿ ಪ್ರಸಿದ್ಧಿ ಪಡೆದಿದೆ.

ಜೈನರ ದಿನನಿತ್ಯದ ಜೀವನವಿಧಾನದಲ್ಲಿ ಆರಾಧನೆಗೆ ತುಂಬ ಮಹತ್ವದ ಸ್ಥಾನವಿದೆ. ಆರಾಧನೆಯು ಮನೋನಿಗ್ರಹ ಮತ್ತು ಮೋಕ್ಷ ಚಿಂತನೆಯ ಶಾಸ್ತ್ರೋಕ್ತ ಪ್ರಯತ್ನ. ಜೈನ ಗೃಹಸ್ಥರಿಗೆ ಹಾಗೂ ಮುನಿಗಳಿಗೆ ಇದು ಕಡ್ಡಾಯ. ಧ್ಯಾನಕ್ಕೆ ಅಲ್ಲಿ ಅಗ್ರಸ್ಥಾನ. ಕಾರಣ ಆರಾಧನಾ ಕೃತಿಗಳು ಧ್ಯಾನದ ಎಲ್ಲ ಸೂಕ್ಷ್ಮಗಳನ್ನು ಪ್ರತಿಪಾದಿಸಿವೆ. ಕನ್ನಡ ದ್ವಿಪದಿ ಮಾದರಿಯ ಪ್ರಾಕೃತ ಗಾಥಾ ಮತ್ತು ಸಂಸ್ಕೃತದ ಶ್ಲೋಕಗಳನ್ನು ಬಳಸಿಕೊಂಡು ವಿಷಯ ಪ್ರತಿಪಾದನೆ ಮಾಡಲಾಗಿದೆ. ಸಲ್ಲೇಖನಾ ವ್ರತ ಮತ್ತು ಸಮಾಧಿಮರಣಗಳನ್ನು ಆರಾಧನಾವಿಧಿಯ ಪರಮೋಚ್ಚ ಸಾಧನೆಗಳೆಂದು ಪರಿಗಣಿಸಲಾಗಿದೆ. ಅಂತೆಯೇ ಆರಾಧನಾಗ್ರಂಥಗಳನ್ನು 'ಮರಣ ಮೀಮಾಂಸೆ'ಗಳೆಂದು ಕರೆಯಲಾಗಿದೆ.

ಶಿವಾರ್ಯನ ಭಗವತೀ ಆರಾಧನಾ ಕೃತಿಯಲ್ಲಿ ೪೦ ಅಧಿಕಾರಗಳು ಹಾಗೂ ೪೦ ಶೀರ್ಷಿಕೆಗಳಿವೆ. ಇದರಲ್ಲಿನ ೩೫ನೆಯ ಅಧಿಕಾರವೇ ಕವಚಾಧಿಕಾರ. 'ಕವಚ' ಎಂಬುದಕ್ಕೆ ಪ್ರಾಚೀನ ಜೈನ ಧಾರ್ಮಿಕ ವಲಯದಲ್ಲಿ ವಿಶಿಷ್ಟ ಅರ್ಥವಿದೆ. ಹುಟ್ಟಿ ಬಂದ ಮನುಷ್ಯ ಚತುರ್ಗತಿಗಳಲ್ಲಿ ಸಿಲುಕಿ ದುಃಖಿತನಾದಾಗ ಆ ದುಃಖವನ್ನು ದೂರ ಮಾಡಲು ಪ್ರಯತ್ನಿಸಬೇಕಾಗುತ್ತದೆ. ಆ ದುಃಖ ತನಗೆ ಅಂಟದಂತೆ ಮನೋಬಲದ ಹೊರ ಆವರಣವನ್ನು ನಿರ್ಮಿಸಿಕೊಳ್ಳಬೇಕಾಗುತ್ತದೆ. ಇದೊಂದು ಬಗೆಯಲ್ಲಿ ಆತ್ಮನನ್ನು ಸುಭದ್ರ ಮತ್ತು ನಿರ್ಮಲ ಸ್ಥಿತಿಯಲ್ಲಿ ಕಾಪಾಡಿಕೊಳ್ಳುವ ವಿಧಿಕ್ರಿಯಾಪೂರ್ವಕವಾದ ರಕ್ಷಣಾತಂತ್ರ. ಕವಚವು ಒಂದು ಬಗೆಯ ಮಾನಸಿಕ ಅಸ್ತ್ರ. ಆಚಾರ್ಯರಾದವರು ಸಲ್ಲೇಖನಾ ವ್ರತಧಾರಿಗೆ ಈ ನಿಯಮವೆಂಬ ಕವಚವನ್ನು ತೊಡಿಸುವುದು ವಾಡಿಕೆ. ಈ ಕಾರಣದಿಂದ ಆರಾಧನಾ ಗ್ರಂಥದ ಒಂದು ಅಧಿಕಾರವನ್ನು ಕವಚಾಧಿಕಾರ ಎಂದು ಕರೆಯಲಾಗಿದೆ. ಪ್ರಸ್ತುತ ಭ್ರಾಜಿಷ್ಣುವಿನ ಆರಾಧನಾ ಕರ್ಣಾಟ ಟೀಕಾದಲ್ಲಿ ಬಂದಿರುವ ಕಥೆಗಳು ಈ ಕವಚಾಧಿಕಾರದಿಂದ ಆಯ್ದುಕೊಂಡವುಗಳಾಗಿವೆ.

ಆರಾಧನಾ ಕರ್ಣಾಟ ಟೀಕಾ :

ಆರಾಧನಾ ಕರ್ಣಾಟ ಟೀಕಾ ಕೃತಿಯನ್ನು ಆರಾಧನಾ ಕಥಾ ಪರಂಪರೆಯ ಪ್ರಾದೇಶಿಕ (ಕನ್ನಡ) ಮುಂದುವರಿಕೆಯೆನ್ನಬಹುದು. ಅದು ಶಿವಕೋಟಾಚಾರ್ಯನ ಮೂಲಾರಾಧನಾ ಕೃತಿಯು ಕನ್ನಡ ವ್ಯಾಖ್ಯಾನವೆಂಬುದು ನಿಜವಾದರೂ ಅದು ಆರಾಧನಾದ ಕನ್ನಡ ಅವತರಣಿಕೆಯಲ್ಲ. ಅದರಲ್ಲಿ ಈಗ ನಮಗೆ ದೊರೆತಿರುವ ಹತ್ತೊಂಬತ್ತು ಕಥೆಗಳು ಮಾತ್ರ ಇದ್ದವೆಂದು ಭಾವಿಸಬಾರದು. ಈ ಹತ್ತೊಂಬತ್ತು ಕಥೆಗಳ ಹಿಂದೆ ಮತ್ತು ಮುಂದೆ ಇದ್ದಿರಬಹುದಾದ ಕಥೆಗಳ ಭಾಗವು ಲುಪ್ತವಾಗಿದೆ. ಮೂಲದ ಆರಾಧನೆಯ ಅಥವಾ ವಡ್ಡಾರಾಧನೆಯ ಒಟ್ಟು

ಶರೀರದಿಂದ ಈ 'ಕವಚ'ವೆಂಬ ಘಟಕ ಮಾತ್ರ ಏಕೆ ಮತ್ತು ಯಾವಾಗ ಹೊರಬಂದಿರಬಹುದು? ಹಾಗೂ ಕನ್ನಡದಲ್ಲಿ ಆರಾಧನಾ ಕರ್ಣಾಟ ಟೀಕಾ ಹೇಗೆ ಮೈದಾಳಿರಬಹುದು ಎಂಬುದನ್ನು ಹಂಪನಾ ಅವರು ಆಧಾರಸಹಿತವಾಗಿ ಚರ್ಚೆ ಮಾಡಿದ್ದಾರೆ. ಅದರ ಮುಖ್ಯಾಂಶಗಳು ಹೀಗಿವೆ.

೧೭೦ ಕಥೆಗಳಿರುವ ಶ್ರೀ ಚಂದ್ರನ ಅಪಭ್ರಂಶ ಪ್ರಾಕೃತದ 'ಕಹಕೋಸು' (ಕಥಾಕೋಶ)ವು ವಿಸ್ತಾರವಾಗಿದ್ದು ಆರಾಧನಾ ಕರ್ಣಾಟ ಟೀಕಾದ ನಷ್ಟಭಾಗದ ನೆರವಿನಿಂದ ರಚನೆಯಾದದ್ದಿರಬಹುದೆಂಬುದು ವಿದ್ವಾಂಸರ ಅಭಿಪ್ರಾಯ. ಆರಾಧನಾ ಕರ್ಣಾಟ ಟೀಕಾ ಮತ್ತು ಕಹಕೋಸುವಿನ ನಡುವಿನ ಐದು ಸಮಾನಾಂಶಗಳನ್ನು ಎಂ.ಎಂ. ಕಲಬುರ್ಗಿಯವರು ಹೀಗೆ ಗುರುತಿಸಿದ್ದಾರೆ.

೧. ಎರಡೂ ಕೃತಿಗಳ ಕಥೆಗಳ ಆರಂಭದಲ್ಲಿ ಗಾಹೆ ಬಂದಿರುವುದು.

೨. ಆರಾಧನಾ ಕರ್ಣಾಟ ಟೀಕಾದಲ್ಲಿರುವುದು ಕನ್ನಡ ಟೀಕೆ, ವಿವರಣೆ. ಶ್ರೀ ಚಂದ್ರನಲ್ಲಿರುವುದು ಸಂಸ್ಕೃತ ಟೀಕೆ.

೩. ಕನ್ನಡ ಕಥೆಗಳಲ್ಲಿ ಸಂಸ್ಕೃತ, ಪ್ರಾಕೃತ, ಕನ್ನಡ ಪದ್ಯಗಳಿವೆ. ಶ್ರೀ ಚಂದ್ರನಲ್ಲಿ ಸಂಸ್ಕೃತ, ಪ್ರಾಕೃತ ಉದ್ಧರಣೆಗಳಿವೆ.

೪. ಕನ್ನಡ ಕೃತಿಯ ಕೊನೆಗೆ 'ಕಚವಮೆಂಬಧಿಕಾರ' ಎಂದಿದ್ದರೆ ಶ್ರೀಚಂದ್ರನಲ್ಲಿ 'ಕವಚಾಹಿಯಾರೋಯಂ' ಎಂದಿದೆ.

೫. ಮೂಲಾರಾಧನಾದಲ್ಲಿ ಕವಚಾಧಿಕಾರದ ೧೬೩೩, ೧೬೪೩, ೧೬೪೯, ೧೬೫೦ ಈ ಸಂಖ್ಯೆಯ ಗಾಹೆಗಳಿಗೆ ಹರಿಷೇಣನು ಸಂಸ್ಕೃತ ಬೃಹತ್ಕಥಾ ಕೋಶದಲ್ಲಿ ಶ್ರೀಪಾಲ, ನಾಮವಾದಿ, ಶಾಲಿಸಿಕ್ಥ, ಸುಭೌಮ ಚಕ್ರವರ್ತಿಗಳ ಕಥೆಗಳನ್ನು ಹೇಳಿದ್ದಾನೆ. ಭ್ರಾಜಿಷ್ಣು ಮತ್ತು ಶ್ರೀ ಚಂದ್ರರು ೧೫೫೭ನೆಯ ಗಾಹೆಯಲ್ಲಿ ವೃಷಭಸೇನ ಮುನಿಯ ಕಥೆಯನ್ನು ಜೋಡಿಸಿದ್ದಾರೆ.

ಉಪಾಧ್ಯೆಯವರ ಜಾಡನ್ನು ಹಿಡಿದು ಕಲಬುರ್ಗಿ ಅವರು ಗುರುತಿಸಿರುವ ಈ ಸಂಗತಿಗಳು ಆರಾಧನಾ ಕರ್ಣಾಟ ಟೀಕಾದ ಮೇಲೆ ಹೆಚ್ಚಿನ ಬೆಳಕು ಬೀರುವ ಸಾಮಗ್ರಿಗಳಾಗಿವೆ.

ಇದರಂತೆಯೇ ೧೫೭ ಕಥೆಗಳನ್ನುಳ್ಳ ನೇಮಿದತ್ತನ ಕಥಾಕೋಶದೊಂದಿಗೆ ಆರಾಧನಾ ಕರ್ಣಾಟ ಟೀಕಾವನ್ನು ತೌಲನಿಕವಾಗಿಟ್ಟು ನೋಡುವುದೂ ಆರಾಧನಾ ಕರ್ಣಾಟ ಟೀಕಾದ ಲುಪ್ತಭಾಗವನ್ನು ಗುರುತಿಸುವ ದೃಷ್ಟಿಯಿಂದ ಅಗತ್ಯವಾಗಿದೆಯೆಂದು ಹಂಪನಾ ಅವರು ಅಭಿಪ್ರಾಯ ಪಟ್ಟಿದ್ದಾರೆ. ಅಲ್ಲದೆ ಹರಿಷೇಣ, ಶ್ರೀಚಂದ್ರ, ಪ್ರಭಾಚಂದ್ರ, ನೇಮಿದತ್ತ, ನಯನಂದಿ, ಸಿಂಹಣಂದಿ, ಛತ್ರಸೇನ, ಬ್ರಹ್ಮದೇವ, ರತ್ನಕೀರ್ತಿ, ರಾಮಚಂದ್ರಮುನಿ, ನಾಗರಾಜ ಮುಂತಾದವರ ಅಧ್ಯಯನದಿಂದಲೂ ಸಾಕಷ್ಟು ಸಂಗತಿಗಳು ಸಿಗುವ ಸಾಧ್ಯತೆಯತ್ತ ಹಂಪನಾ ಗಮನ ಸೆಳೆದಿದ್ದಾರೆ.

ಆರಾಧನಾ ಕರ್ಣಾಟ ಟೀಕಾದ ಮೂಲಕ ದೊರೆತಿರುವ ಕತೆಗಳು ಕೇವಲ ೧೯ ಮಾತ್ರ. ಉಳಿದ ೧೫೦ ಕಥೆಗಳು ಕಳೆದು ಹೋಗಿವೆ. ಈ ೧೯ ಕಥೆಗಳು ನಮಗೆ ದಕ್ಕಿದ್ದು ಸುಮಾರು

೧೧ನೆಯ ಶತಮಾನದ ಉತ್ತರಾರ್ಧದ ಕಡೆಕಡೆಗೆ ಮತ್ತು ೧೨ನೆಯ ಶತಮಾನದ ಅವಧಿಯಲ್ಲಿರಬಹುದೆಂಬುದು ಹಂಪನಾ ಅವರ ತರ್ಕ. ರಾಜಕೀಯ ಸ್ಥಿತ್ಯಂತರಗಳು, ಧಾರ್ಮಿಕ ಮೇಲಾಟಗಳು ಅಂದಿನ ಜೈನ ಸಮಾಜದ ಮೇಲೆ ತುಂಬ ಕಠೋರ ಪ್ರಭಾವ ಬೀರಿದವು. ಕಾರಣ ಅವನತಿಯ ಅಂಚಿಗೆ ಸರಿಯುವ ಅಪಾಯದಲ್ಲಿದ್ದ ಜೈನ ಧರ್ಮಕ್ಕೆ ಪುನಃಶ್ಚೇತನ ನೀಡುವ ಉದ್ದೇಶದಿಂದ ನಯಸೇನ, ಬ್ರಹ್ಮಶಿವ, ವೃತ್ತವಿಲಾಸನಂಥವರು ಜನಸಾಮಾನ್ಯರಲ್ಲಿ ಜೈನನಿಷ್ಠೆ ಮೂಡಿಸಬಲ್ಲ ಸಾಹಿತ್ಯ ಸೃಷ್ಟಿ ಮಾಡಿದರು. ಭ್ರಾಜಿಷ್ಣುವಿನ ಆರಾಧನಾ ಕರ್ಣಾಟ ಟೀಕಾದಿಂದ ಈ ಕವಚಾಧಿಕಾರದ ೧೯ ಕಥೆಗಳ ಗುಚ್ಛವು ಬೇರ್ಪಟ್ಟದ್ದು ಬಹುಶಃ ಇದೇ ಅವಧಿಯಲ್ಲಿ. ಅಲ್ಲದೆ ಆರಾಧನಾ ಕರ್ಣಾಟ ಟೀಕಾದ ಹಸ್ತಪ್ರತಿಗಳಲ್ಲಿ ಮೊಟ್ಟಮೊದಲನೆಯದೆನ್ನಿಸಿದ ಹಸ್ತಪ್ರತಿ ಸಿದ್ಧವಾದದ್ದು ೧೪೦೩ರಲ್ಲಿ ಎಂಬ ಆಧಾರದ ಮೇಲೆ ೧೯ ಕಥೆಗಳ ಗುಚ್ಛ ಹೊರಬಂದದ್ದು ಸುಮಾರು ೧೨ನೆಯ ಶತಮಾನದ ಆರಂಭದಲ್ಲಿ ಎಂದು ಹಂಪನಾ ಅವರು ತಿಳಿಸಿದ್ದಾರೆ.

ಕೃತಿಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಮಹತ್ವ :

ಕಥೆಯಲ್ಲಿ ಕಥೆ, ಅದರಲ್ಲಿ ಉಪಕಥೆ ಹೆಣೆಯುವ ವಿಶಿಷ್ಟ ಕಥನಕೌಶಲ ಭ್ರಾಜಿಷ್ಣುವಿಗೆ ಚೆನ್ನಾಗಿ ಕರಗತವಾಗಿದೆ. ಉದಾ : ಸುಕುಮಾರ ಸ್ವಾಮಿಯದು ಮುಖ್ಯ ಕಥೆ, ನಾಗಶ್ರೀಯದು ಅದರೊಳಗಿನ ಕಥೆ, ಮತ್ತೆ ಎಂಟು ಜನ ಕಳ್ಳರದು ನಾಗಶ್ರೀ ಕಥೆಯೊಳಗಿನ ಉಪಕಥೆ, ಬಿಡಿಕಥೆಯನ್ನು ಓದುತ್ತ ಹೋದಾಗ ನಿಜಕ್ಕೂ ಆನಂದವಾಗುತ್ತದೆ. ಆದರೆ ಕೆಲವೊಮ್ಮೆ ಈ ಇತರ ಕಥೆಗಳನ್ನು ತಿಳಿದುಕೊಂಡು ಹೊಂದಿಕೊಳ್ಳುವಷ್ಟರಲ್ಲಿ ಮುಖ್ಯ ಕತೆ ಕೈಜಾರಿದಂತೆ ಭಾಸವಾಗುತ್ತದೆ. ಸುಕುಮಾರಸ್ವಾಮಿಯ ಕಥೆಯ ಒಳಗೆ ಮತ್ತೆ ಅಗ್ನಿಭೂತಿ -ವಾಯುಭೂತಿಯ ಕಥೆ, ಸೂರ್ಯಮಿತ್ರನ ಉಂಗುರದ ಕಥೆ, ಪೊಲೆಯರ ಕೂಸಿನ ಕಥೆ, ನಾಗಶ್ರೀಯ ಕಥೆ, ವರಸೇನನೆಂಬ ಜೂಜುಕೋರನ ಕಥೆ, ವೈನಯಿಕನೆಂಬ ಭತ್ತದ ವ್ಯಾಪಾರಿಯ ಕಥೆ, ಭತ್ತವನ್ನು ಅಳತೆ ಮಾಡುವಾಗ ಜನರನ್ನು ಮೋಸ ಮಾಡಲು ಆತ ಹೇಳುತ್ತಿದ್ದ ಕನ್ನೆಯ ಕಥೆ, ಬಂಟನ ಕಥೆ, ವೃದ್ಧ ಸ್ತ್ರೀಯ ಕಥೆ, ನಂದ-ಬೋದರ ಕಥೆ, ಹೀಗೆ ಹಲವು ಕಥೆಗಳು ಹೆಣೆಯಲ್ಪಟ್ಟಿವೆ. ಇವುಗಳ ಅಬ್ಬರದಲ್ಲಿ ಮುಖ್ಯಕತೆ ಎಲ್ಲೋ ಕಳೆದುಹೋದಂತೆ ಭಾಸವಾಗುತ್ತದೆ. ಇದೇ ಮಾತು ಇತರ ಕಥೆಗಳಿಗೂ ಅನ್ವಯಿಸುತ್ತದೆ. ಹಾಗಿದ್ದರೂ ಕವಿಯ ಅಪೂರ್ವ ಕಥನಕೌಶಲವನ್ನು ನಾವು ಮೆಚ್ಚಲೇಬೇಕು. ವಿಶೇಷವೆಂದರೆ ಇವೆಲ್ಲ ಕಥೆಗಳು ಜಾನಪದರ ನಾಲಗೆಯಿಂದ ಆಗತಾನೆ ಬಿಡಿಸಿಕೊಂಡು ಬಂದಿರುವ ಹಾಗೆ ತಾಜಾತನ ಮತ್ತು ದೇಸೀಯತೆಯಿಂದ ಕೂಡಿರುವುದು.

ಕಥೆಗಳಲ್ಲಿ ಸಂವಾದಗುಣ ಮತ್ತು ನಾಟಕೀಯತೆಯನ್ನು ಬೆರೆಸಿರುವುದರಿಂದ ಸ್ವಾಭಾವಿಕವಾಗಿ ಕಥೆಗಳ ಆಕರ್ಷಣೆ ಹೆಚ್ಚಿದೆ. ಉದಾ : ಸುಕುಮಾರ ಸ್ವಾಮಿಯ ಕಥೆಯ ಸೂರ್ಯಮಿತ್ರ - ಸೋಮಶರ್ಮರ ನಡುವೆ ನಡೆದ ಸಂವಾದ.

ಸೂರ್ಯಮಿತ್ರ : 'ಈ ಕೂಸೆಂಬುದು ನಮ್ಮ ಮಗಳ್'

ಸೋಮಶರ್ಮ : 'ನಾಗಶ್ರೀ ಎನ್ನ ಮಗಳ್, ನಾಗರಿತ್ತರ್'

ಶರೀರದಿಂದ ಈ 'ಕವಚ'ವೆಂಬ ಘಟಕ ಮಾತ್ರ ಏಕೆ ಮತ್ತು ಯಾವಾಗ ಹೊರಬಂದಿರಬಹುದು? ಹಾಗೂ ಕನ್ನಡದಲ್ಲಿ ಆರಾಧನಾ ಕರ್ಣಾಟ ಟೀಕಾ ಹೇಗೆ ಮೈದಾಳಿರಬಹುದು ಎಂಬುದನ್ನು ಹಂಪನಾ ಅವರು ಆಧಾರಸಹಿತವಾಗಿ ಚರ್ಚೆ ಮಾಡಿದ್ದಾರೆ. ಅದರ ಮುಖ್ಯಾಂಶಗಳು ಹೀಗಿವೆ.

೧೭೦ ಕಥೆಗಳಿರುವ ಶ್ರೀ ಚಂದ್ರನ ಅಪಭ್ರಂಶ ಪ್ರಾಕೃತದ 'ಕಹಕೋಸು' (ಕಥಾಕೋಶ)ವು ವಿಸ್ತಾರವಾಗಿದ್ದು ಆರಾಧನಾ ಕರ್ಣಾಟ ಟೀಕಾದ ನಷ್ಟಭಾಗದ ನೆರವಿನಿಂದ ರಚನೆಯಾದದ್ದಿರಬಹುದೆಂಬುದು ವಿದ್ವಾಂಸರ ಅಭಿಪ್ರಾಯ. ಆರಾಧನಾ ಕರ್ಣಾಟ ಟೀಕಾ ಮತ್ತು ಕಹಕೋಸುವಿನ ನಡುವಿನ ಐದು ಸಮಾನಾಂಶಗಳನ್ನು ಎಂ.ಎಂ. ಕಲಬುರ್ಗಿಯವರು ಹೀಗೆ ಗುರುತಿಸಿದ್ದಾರೆ.

೧. ಎರಡೂ ಕೃತಿಗಳ ಕಥೆಗಳ ಆರಂಭದಲ್ಲಿ ಗಾಹೆ ಬಂದಿರುವುದು.

೨. ಆರಾಧನಾ ಕರ್ಣಾಟ ಟೀಕಾದಲ್ಲಿರುವುದು ಕನ್ನಡ ಟೀಕೆ, ವಿವರಣೆ. ಶ್ರೀ ಚಂದ್ರನಲ್ಲಿರುವುದು ಸಂಸ್ಕೃತ ಟೀಕೆ.

೩. ಕನ್ನಡ ಕಥೆಗಳಲ್ಲಿ ಸಂಸ್ಕೃತ, ಪ್ರಾಕೃತ, ಕನ್ನಡ ಪದ್ಯಗಳಿವೆ. ಶ್ರೀ ಚಂದ್ರನಲ್ಲಿ ಸಂಸ್ಕೃತ, ಪ್ರಾಕೃತ ಉದ್ಧರಣೆಗಳಿವೆ.

೪. ಕನ್ನಡ ಕೃತಿಯ ಕೊನೆಗೆ 'ಕಚವಮೆಂಬಧಿಕಾರ' ಎಂದಿದ್ದರೆ ಶ್ರೀಚಂದ್ರನಲ್ಲಿ 'ಕವಚಾಹಿಯಾರೋಯಂ' ಎಂದಿದೆ.

೫. ಮೂಲಾರಾಧನಾದಲ್ಲಿ ಕವಚಾಧಿಕಾರದ ೧೬೩೩, ೧೬೪೩, ೧೬೪೯, ೧೬೫೦ ಈ ಸಂಖ್ಯೆಯ ಗಾಹೆಗಳಿಗೆ ಹರಿಷೇಣನು ಸಂಸ್ಕೃತ ಬೃಹತ್ಕಥಾ ಕೋಶದಲ್ಲಿ ಶ್ರೀಪಾಲ, ನಾಮವಾದಿ, ಶಾಲಿಸಿಕ್ಥ, ಸುಭೌಮ ಚಕ್ರವರ್ತಿಗಳ ಕಥೆಗಳನ್ನು ಹೇಳಿದ್ದಾನೆ. ಭ್ರಾಜಿಷ್ಣು ಮತ್ತು ಶ್ರೀ ಚಂದ್ರರು ೧೫೫೭ನೆಯ ಗಾಹೆಯಲ್ಲಿ ವೃಷಭಸೇನ ಮುನಿಯ ಕಥೆಯನ್ನು ಜೋಡಿಸಿದ್ದಾರೆ.

ಉಪಾಧ್ಯೆಯವರ ಜಾಡನ್ನು ಹಿಡಿದು ಕಲಬುರ್ಗಿ ಅವರು ಗುರುತಿಸಿರುವ ಈ ಸಂಗತಿಗಳು ಆರಾಧನಾ ಕರ್ಣಾಟ ಟೀಕಾದ ಮೇಲೆ ಹೆಚ್ಚಿನ ಬೆಳಕು ಬೀರುವ ಸಾಮಗ್ರಿಗಳಾಗಿವೆ.

ಇದರಂತೆಯೇ ೧೫೭ ಕಥೆಗಳನ್ನುಳ್ಳ ನೇಮಿದತ್ತನ ಕಥಾಕೋಶದೊಂದಿಗೆ ಆರಾಧನಾ ಕರ್ಣಾಟ ಟೀಕಾವನ್ನು ತೌಲನಿಕವಾಗಿಟ್ಟು ನೋಡುವುದೂ ಆರಾಧನಾ ಕರ್ಣಾಟ ಟೀಕಾದ ಲುಪ್ತಭಾಗವನ್ನು ಗುರುತಿಸುವ ದೃಷ್ಟಿಯಿಂದ ಅಗತ್ಯವಾಗಿದೆಯೆಂದು ಹಂಪನಾ ಅವರು ಅಭಿಪ್ರಾಯ ಪಟ್ಟಿದ್ದಾರೆ. ಅಲ್ಲದೆ ಹರಿಷೇಣ, ಶ್ರೀಚಂದ್ರ, ಪ್ರಭಾಚಂದ್ರ, ನೇಮಿದತ್ತ, ನಯನಂದಿ, ಸಿಂಹಣಂದಿ, ಛತ್ರಸೇನ, ಬ್ರಹ್ಮದೇವ, ರತ್ನಕೀರ್ತಿ, ರಾಮಚಂದ್ರಮುನಿ, ನಾಗರಾಜ ಮುಂತಾದವರ ಅಧ್ಯಯನದಿಂದಲೂ ಸಾಕಷ್ಟು ಸಂಗತಿಗಳು ಸಿಗುವ ಸಾಧ್ಯತೆಯತ್ತ ಹಂಪನಾ ಗಮನ ಸೆಳೆದಿದ್ದಾರೆ.

ಆರಾಧನಾ ಕರ್ಣಾಟ ಟೀಕಾದ ಮೂಲಕ ದೊರೆತಿರುವ ಕತೆಗಳು ಕೇವಲ ೧೯ ಮಾತ್ರ. ಉಳಿದ ೧೫೦ ಕಥೆಗಳು ಕಳೆದು ಹೋಗಿವೆ. ಈ ೧೯ ಕಥೆಗಳು ನಮಗೆ ದಕ್ಕಿದ್ದು ಸುಮಾರು

೧೧ನೆಯ ಶತಮಾನದ ಉತ್ತರಾರ್ಧದ ಕಡೆಕಡೆಗೆ ಮತ್ತು ೧೨ನೆಯ ಶತಮಾನದ ಅವಧಿಯಲ್ಲಿರಬಹುದೆಂಬುದು ಹಂಪನಾ ಅವರ ತರ್ಕ. ರಾಜಕೀಯ ಸ್ಥಿತ್ಯಂತರಗಳು, ಧಾರ್ಮಿಕ ಮೇಲಾಟಗಳು ಅಂದಿನ ಜೈನ ಸಮಾಜದ ಮೇಲೆ ತುಂಬ ಕಠೋರ ಪ್ರಭಾವ ಬೀರಿದವು. ಕಾರಣ ಅವನತಿಯ ಅಂಚಿಗೆ ಸರಿಯುವ ಅಪಾಯದಲ್ಲಿದ್ದ ಜೈನ ಧರ್ಮಕ್ಕೆ ಪುನಃಶ್ಚೇತನ ನೀಡುವ ಉದ್ದೇಶದಿಂದ ನಯಸೇನ, ಬ್ರಹ್ಮಶಿವ, ವೃತ್ತವಿಲಾಸನಂಥವರು ಜನಸಾಮಾನ್ಯರಲ್ಲಿ ಜೈನನಿಷ್ಠೆ ಮೂಡಿಸಬಲ್ಲ ಸಾಹಿತ್ಯ ಸೃಷ್ಟಿ ಮಾಡಿದರು. ಭ್ರಾಜಿಷ್ಣುವಿನ ಆರಾಧನಾ ಕರ್ಣಾಟ ಟೀಕಾದಿಂದ ಈ ಕವಚಾಧಿಕಾರದ ೧೯ ಕಥೆಗಳ ಗುಚ್ಛವು ಬೇರ್ಪಟ್ಟದ್ದು ಬಹುಶಃ ಇದೇ ಅವಧಿಯಲ್ಲಿ. ಅಲ್ಲದೆ ಆರಾಧನಾ ಕರ್ಣಾಟ ಟೀಕಾದ ಹಸ್ತಪ್ರತಿಗಳಲ್ಲಿ ಮೊಟ್ಟಮೊದಲನೆಯದೆನ್ನಿಸಿದ ಹಸ್ತಪ್ರತಿ ಸಿದ್ಧವಾದದ್ದು ೧೪೦೩ರಲ್ಲಿ ಎಂಬ ಆಧಾರದ ಮೇಲೆ ೧೯ ಕಥೆಗಳ ಗುಚ್ಛ ಹೊರಬಂದದ್ದು ಸುಮಾರು ೧೨ನೆಯ ಶತಮಾನದ ಆರಂಭದಲ್ಲಿ ಎಂದು ಹಂಪನಾ ಅವರು ತಿಳಿಸಿದ್ದಾರೆ.

ಕೃತಿಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಮಹತ್ವ :

ಕಥೆಯಲ್ಲಿ ಕಥೆ, ಅದರಲ್ಲಿ ಉಪಕಥೆ ಹೆಣೆಯುವ ವಿಶಿಷ್ಟ ಕಥನಕೌಶಲ ಭ್ರಾಜಿಷ್ಣುವಿಗೆ ಚೆನ್ನಾಗಿ ಕರಗತವಾಗಿದೆ. ಉದಾ : ಸುಕುಮಾರ ಸ್ವಾಮಿಯದು ಮುಖ್ಯ ಕಥೆ, ನಾಗಶ್ರೀಯದು ಅದರೊಳಗಿನ ಕಥೆ, ಮತ್ತೆ ಎಂಟು ಜನ ಕಳ್ಳರದು ನಾಗಶ್ರೀ ಕಥೆಯೊಳಗಿನ ಉಪಕಥೆ, ಬಿಡಿಕಥೆಯನ್ನು ಓದುತ್ತ ಹೋದಾಗ ನಿಜಕ್ಕೂ ಆನಂದವಾಗುತ್ತದೆ. ಆದರೆ ಕೆಲವೊಮ್ಮೆ ಈ ಇತರ ಕಥೆಗಳನ್ನು ತಿಳಿದುಕೊಂಡು ಹೊಂದಿಕೊಳ್ಳುವಷ್ಟರಲ್ಲಿ ಮುಖ್ಯ ಕತೆ ಕೈಜಾರಿದಂತೆ ಭಾಸವಾಗುತ್ತದೆ. ಸುಕುಮಾರಸ್ವಾಮಿಯ ಕಥೆಯ ಒಳಗೆ ಮತ್ತೆ ಅಗ್ನಿಭೂತಿ -ವಾಯುಭೂತಿಯ ಕಥೆ, ಸೂರ್ಯಮಿತ್ರನ ಉಂಗುರದ ಕಥೆ, ಪೊಲೆಯರ ಕೂಸಿನ ಕಥೆ, ನಾಗಶ್ರೀಯ ಕಥೆ, ವರಸೇನನೆಂಬ ಜೂಜುಕೋರನ ಕಥೆ, ವೈನಯಿಕನೆಂಬ ಭತ್ತದ ವ್ಯಾಪಾರಿಯ ಕಥೆ, ಭತ್ತವನ್ನು ಅಳತೆ ಮಾಡುವಾಗ ಜನರನ್ನು ಮೋಸ ಮಾಡಲು ಆತ ಹೇಳುತ್ತಿದ್ದ ಕನ್ನೆಯ ಕಥೆ, ಬಂಟನ ಕಥೆ, ವೃದ್ಧ ಸ್ತ್ರೀಯ ಕಥೆ, ನಂದ-ಬೋದರ ಕಥೆ, ಹೀಗೆ ಹಲವು ಕಥೆಗಳು ಹೆಣೆಯಲ್ಪಟ್ಟಿವೆ. ಇವುಗಳ ಅಬ್ಬರದಲ್ಲಿ ಮುಖ್ಯಕತೆ ಎಲ್ಲೋ ಕಳೆದುಹೋದಂತೆ ಭಾಸವಾಗುತ್ತದೆ. ಇದೇ ಮಾತು ಇತರ ಕಥೆಗಳಿಗೂ ಅನ್ವಯಿಸುತ್ತದೆ. ಹಾಗಿದ್ದರೂ ಕವಿಯ ಅಪೂರ್ವ ಕಥನಕೌಶಲವನ್ನು ನಾವು ಮೆಚ್ಚಲೇಬೇಕು. ವಿಶೇಷವೆಂದರೆ ಇವೆಲ್ಲ ಕಥೆಗಳು ಜಾನಪದರ ನಾಲಗೆಯಿಂದ ಆಗತಾನೆ ಬಿಡಿಸಿಕೊಂಡು ಬಂದಿರುವ ಹಾಗೆ ತಾಜಾತನ ಮತ್ತು ದೇಸೀಯತೆಯಿಂದ ಕೂಡಿರುವುದು.

ಕಥೆಗಳಲ್ಲಿ ಸಂವಾದಗುಣ ಮತ್ತು ನಾಟಕೀಯತೆಯನ್ನು ಬೆರೆಸಿರುವುದರಿಂದ ಸ್ವಾಭಾವಿಕವಾಗಿ ಕಥೆಗಳ ಆಕರ್ಷಣೆ ಹೆಚ್ಚಿದೆ. ಉದಾ : ಸುಕುಮಾರ ಸ್ವಾಮಿಯ ಕಥೆಯ ಸೂರ್ಯಮಿತ್ರ - ಸೋಮಶರ್ಮರ ನಡುವೆ ನಡೆದ ಸಂವಾದ.

ಸೂರ್ಯಮಿತ್ರ : 'ಈ ಕೂಸೆಂಬುದು ನಮ್ಮ ಮಗಳ್'

ಸೋಮಶರ್ಮ : 'ನಾಗಶ್ರೀ ಎನ್ನ ಮಗಳ್, ನಾಗರಿತ್ತರ್'

ಸೂರ್ಯಮಿತ್ರ : 'ನಿನ್ನ ಮಗಳಪ್ಪೊಡೆ ನಾಲ್ಕು ವೇದಮುಮಾಱಂಗಮಂ ......
...... ಮೊದಲಾದ ಶಾಸ್ತ್ರಂಗಳೆಲ್ಲಮನೇನ್ ಈ ಕೂಸನೋದಿಸಿದಾ ?

ಸೋಮಶರ್ಮ : 'ಇಲ್ಲೋದಿಸಿದೆನ್'.

ಸೂರ್ಯಮಿತ್ರ : 'ಮತ್ತಂ ಅನಿತುಮಾ ಕೂಸನ್ ಆವು ಓದಿಸಿದೆಮದಱಿಂದೆಮ್ಮ ಕೂಸು'

ಇಂಥ ಇನ್ನೂ ಕೆಲವು ಪ್ರಸಂಗಗಳನ್ನು ಉದಾಹರಿಸಬಹುದು.

ಚಿಕ್ಕ ಚಿಕ್ಕ ವಾಕ್ಯಗಳು, ಸೊಗಸಾದ ಕನ್ನಡ ಶಬ್ದ ಜೋಡಣೆ, ಕಥೆಯನ್ನು ತ್ವರಿತವಾಗಿ ಮುಂದೆ ಓಡಿಸುವ ಕುಶಲತೆಗಳೂ ಭ್ರಾಜಿಷ್ಣುವಿನ ಕಥನ ಶೈಲಿಯ ವೈಶಿಷ್ಟ್ಯಗಳಾಗಿವೆ. "ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡು. ಅಲ್ಲಿ ಪಾಟಳೀಪುತ್ರಮೆಂಬುದು ಪೊಳಲ್. ಅದನಾಳ್ವೊಂ ನಂದವಂಶದೊಂ ಪದ್ಮನೆಂಬೊನ್ ಅರಸನ್. ಆತನ ಮಹಾದೇವಿ ಸುಂದರಿಯೆಂಬೊಳ್. ಆ ಇರ್ವರ್ಗಂ ಮಗಂ ಮಹಾಪದ್ಮಂನೆಬೊಂ. ಮಂತ್ರಿ ಕಾಪಿಯೆಂಬೊನ್. ಆತಂಗೆರಡನೆಯ ಪೆಸರ್ ವಿಶ್ವಸೇನನೆಂಬುದು "(ಚಾಣಕ್ಯ ರಿಸಿಯ ಕಥೆ) ಇಲ್ಲಿಯ ಚಿಕ್ಕ ಚಿಕ್ಕ ವಾಕ್ಯಗಳು ಕಥೆಯ ಗತಿಗೆ ತೀವ್ರತೆಯನ್ನು ತಂದುಕೊಟ್ಟಿರುವುದನ್ನು ಗುರುತಿಸಬಹುದು. ಈ ಗುಣವು ಕೃತಿಯುದ್ದಕ್ಕೂ ಪ್ರವಹಿಸಿರುವುದನ್ನು ನೋಡಬಹುದು.

ಕನ್ನಡ ಶಬ್ದ ಜೋಡಣೆಯ ಸೊಗಸಿಗೆ ಈ ಉದಾಹರಣೆಯನ್ನು ನೋಡಬಹುದು. .... ತಳಾಱನಂ ಕಂಡಿನ್ನೆನ್ನಂ ನೀಂ ಮೆಚ್ಚುಗೆಯ್ಯೆಂದು ನುಡಿದೊಡಾತನಿಂತೆಂದಂ ನೀಂ ಪೊಲ್ಲಮಾನಸಿಯೆ ಎಂದು ಮನದೊಳೆ ಬಗೆದೆಂ ನಿನ್ನಂತೊಳ್ಳಿದರಾರುಮಿಲ್ಲ ನುಡಿದ ನನ್ನಿಯಂ ತಪ್ಪದೆ ಬಂದೆ ಸತ್ಯವಾದಿಯಯ್ ಪೋಗಬ್ಬಾ ಎಂದು ಪೋಗಲ್ವೇಟ್ಟೊಡೆ ಬರ್ಪ್ಪಳನ್ನೆಗಂ ಕಳ್ಳನಂ ಕಂಡು ತನ್ನ ತೊಟ್ಟಾಭರಣಮನೆಲ್ಲಮಂ ಕಳೆದೊಪ್ಪಿಸೆಯಾತನಿಂತೆಂದಂ ...." ಕ್ಲಿಷ್ಟತೆಯಿಲ್ಲದ ಸರಳ ಸುಂದರ ಶಬ್ದಜೋಡಣೆ ಇಲ್ಲಿದೆ. ಜಡವಾಗಬಹುದಾಗಿದ್ದ ಕ್ಲಿಷ್ಟ ಧಾರ್ಮಿಕ ಸಂಗತಿಗಳನ್ನು ಸಾಮಾನ್ಯರಿಗೆ ತಿಳಿಯುವಂತೆ ಕಥಾರೂಪದಲ್ಲಿ ತಿಳಿಸಿರುವುದು ಈ ಕೃತಿಯ ಹೆಚ್ಚುಗಾರಿಕೆಯಾಗಿದೆ. ಉದಾ :'ಧರ್ಮಮಂ ಪೇಳಿಂ ಭಟ್ಟಾರಾ ಎಂದು ಬೆಸಗೊಂಡೊಡೆ ಭಟ್ಟಾರರಿಂತೆಂದು ಪೇಟಲ್ ತೊಡಗಿದರ್ : 'ಸೋ ಧಮ್ಮೋಜತ್ಥದಯಾ ಸೋ ವಿ ......" ಎಂದಿಂತು ಜೀವಂಗಳಂ ಕೊಲ್ಲದುದೆ ಧರ್ಮಂ ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದಯ್ದುಮಿಂದ್ರಿಯಂಗಳಂ ಗೆಲ್ದು ಇಪ್ಪತ್ತೆರಡು ಪರೀಷಹಂಗಳಂ ಸೈರಿಸಿ ಯಮನಿಯಮ ಸ್ವಾಧ್ಯಾಯ ಧ್ಯಾನಾನುಷ್ಠಾನ ಪರಾಯಣರಾಗಿ ತಪಂಗೈವ ರಿಸಿಯರ್ಕಳೆ ತಪಸ್ವಿಯರ್, ಪಸಿವು ನೀರಟ್ಕೆ ಮೊದಲಾಗೊಡೆಯ ಪದಿನೆಂಟು ದೋಷಂಗಳನಿಲ್ಲದೊಂ ಪರಮಾತ್ಮನೆಂದಿಂತು ಪೇಟ್ದು ಮತ್ತಮಿಂತೆಂದರ್ ...." (ಲಲಿತ ಘಟೆಯ ಕಥೆ)

ಆರಾಧನಾ ಕರ್ಣಾಟ ಟೀಕಾ ಕೃತಿಯಲ್ಲಿ ಹುದುಗಿರುವ ಸಾಂಸ್ಕೃತಿಕ ಸಂಪತ್ತು ಬಹುಶಃ ಕನ್ನಡದ ಬೇರಾವ ಕೃತಿಯಲ್ಲಿಯೂ ಕಂಡುಬರುವುದಿಲ್ಲ. ಈ ಕಾರಣದಿಂದ ಈ ಕೃತಿಯನ್ನು ನಾವು ಜೈನ ಧಾರ್ಮಿಕಪಠ್ಯವೆಂದು ಪರಿಗಣಿಸುವ ಬದಲು ಕರ್ಣಾಟಕದ ಸಾಂಸ್ಕೃತಿಕ ಪಠ್ಯವೆಂದು

ಗೌರವಿಸಬೇಕಾಗುತ್ತದೆ. ಬದುಕಿನಲ್ಲಿ ಎದುರಾಗುವ ಯಾವುದೇ ವಸ್ತುವಾಗಲಿ, ವಿಚಾರವಾಗಲಿ ಈ ಕಥೆಗಾರನ ಕಣ್ಣಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಪ್ರತಿಯೊಂದು ಕಥೆಯೂ ಅಂದಂದಿನ ಧಾರ್ಮಿಕ, ರಾಜಕೀಯ, ಸಾಮಾಜಿಕ ಕ್ಷೇತ್ರಗಳ ಅನೇಕಾನೇಕ ಸೂಕ್ಷ್ಮಗಳನ್ನು ತಿಳಿಸುತ್ತ ಹೋಗಿವೆ. ಜೈನ ಧರ್ಮದ ವಿಘಟನೆಯ ಸೂಚನೆ, ಜೈನ ಪರಿಸರ, ಜೈನ ಮುನಿಜೀವನ, ಜಾತಿವಿರಸ, ವಿವಿಧ ವೃತ್ತಿಗಳು, ಕಲೆಗಳು, ವಿದ್ಯೆಗಳು, ವಿವಿದ ಸ್ವಭಾವದ ವಿವಿಧ ವರ್ಗದ ಜನರು, ಅರಸೊತ್ತಿಗೆಯ ಪರಿಸರ, ವೇಶ್ಯಾಬದುಕು, ಸಾಮಾಜಿಕ ಸ್ಥಿತಿಗತಿ, ನಂಬಿಕೆ ಆಚರಣೆ ವಿಧಿಕ್ರಿಯೆ ಮುಂತಾದ ಹತ್ತು ಹಲವು ವಿಚಾರಗಳು ಇಲ್ಲಿಯ ಕಥೆಗಳಲ್ಲಿ ಸಹಜವಾಗಿ ಬೆರೆತುಕೊಂಡಿವೆ. ಇವು ಕವಿಯ ಅದ್ಭುತ ಸಾಮಾಜಿಕ ಪ್ರಜ್ಞೆಗೆ ಸಾಕ್ಷಿಯಾಗಿವೆ. ಧಾರ್ಮಿಕ ಕೃತಿಯೊಂದು ಇಷ್ಟು ಪ್ರಮಾಣದಲ್ಲಿ ಇಷ್ಟು ಸೊಗಸಾಗಿ ಇತರ ಸಾಮಾಜಿಕ ವಿವರಗಳನ್ನು ಗರ್ಭೀಕರಿಸಿಕೊಂಡಿರುವ ರೀತಿ ನಿಜಕ್ಕೂ ಅಪರೂಪದ್ದಾಗಿದೆ. ಆಶ್ಚರ್ಯಕಾರವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಸಂಸ್ಕೃತ ಮತ್ತು ಪ್ರಾಕೃತದ ದಟ್ಟ ಪ್ರಭಾವವಿರುವ ಆ ದಿನಗಳಲ್ಲಿ ಕನ್ನಡಕ್ಕೆ ಸ್ವಂತದ ನಡೆಯನ್ನು ಕಲಿಸಿಕೊಟ್ಟ ಕೀರ್ತಿ ಭ್ರಾಜಿಷ್ಣು ಕವಿಯದಾಗಿದೆ. ಒಟ್ಟಾರೆ ಜೈನ ಧರ್ಮದ ಚರಿತ್ರೆಯ ದೃಷ್ಟಿಯಿಂದ ಹಾಗೂ ಕನ್ನಡ ಭಾಷೆ ಮತ್ತು ಸಾಹಿತ್ಯದ ಚರಿತ್ರೆಯ ದೃಷ್ಟಿಯಿಂದ ಆರಾಧನಾ ಕರ್ಣಾಟ ಟೀಕಾ ಕೃತಿಯು ತನ್ನದೇ ಆದ ಹಿರಿಮೆ ಗರಿಮೆಯನ್ನು ಹೊಂದಿದೆ.

ಕ) ಸಂಪಾದಕ ಕೇಂದ್ರಿತ ವಿಚಾರಗಳು :

ಯಾವುದೇ ಪ್ರಾಚೀನ ಗ್ರಂಥವು ಮುಂದಿನ ತಲೆಮಾರಿಗೆ ಉಳಿದು ಬರುವಲ್ಲಿ ಗ್ರಂಥ ಸಂಪಾದಕನ ಪಾತ್ರ ತುಂಬ ಮುಖ್ಯವಾಗಿರುತ್ತದೆ. ಜೊತೆಗೆ ಈ ಹಿಂದೆ ನಾನು ತಿಳಿಸಿದಂತೆ ಕವಿಕೃತಿಯೊಂದರ ಅಧ್ಯಯನದ ಸಂದರ್ಭದಲ್ಲಿ ಆ ಕೃತಿಯ ಸಂಪಾದನೆಯ ಚರಿತ್ರೆಯೂ ಅಷ್ಟೇ ಮುಖ್ಯವಾಗಿರುತ್ತದೆ. ಕಾರಣ ಆ ಕುರಿತ ಸಂಕ್ಷಿಪ್ತ ವಿವರಗಳನ್ನಿಲ್ಲಿ ನೀಡಲಾಗಿದೆ.

ಡಿ.ಎಲ್. ನರಸಿಂಹಾಚಾರ್ ಅವರು ಗ್ರಂಥ ಸಂಪಾದನೆಗೆ ವೈಜ್ಞಾನಿಕ ತಳಹದಿಯನ್ನು ಕೊಟ್ಟ ಆದ್ಯರು. ಅವರು ಸಂಪಾದಿಸಿಕೊಟ್ಟ ಏಳು ಗ್ರಂಥಗಳಲ್ಲಿ ವಡ್ಡಾರಾಧನೆ ಮತ್ತು ಶಬ್ದಮಣಿದರ್ಪಣ ಕೃತಿಗಳು ಮುಖ್ಯವಾದವು. ಡಿ.ಎಲ್.ಎನ್. ಸಂಪಾದಿತ ವಡ್ಡಾರಾಧನೆಯಯಲ್ಲಿ ಕಂಡುಬರುವ ಸಂಪಾದನಾ ಕಾರ್ಯದ ವೈಶಿಷ್ಟ್ಯಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಗುರುತಿಸಲಾಗಿದೆ.

i) ಡಿ.ಎಲ್.ಎನ್. ಆವೃತ್ತಿ :

೧೯೩೧, ವಾಸ್ತವವಾಗಿ ಡಿ.ಎಲ್.ಎನ್. ವಡ್ಡಾರಾಧನೆಯ ಗ್ರಂಥಸಂಪಾದನಾ ರಂಗವನ್ನು ಪ್ರವೇಶಿಸಿದ ವರ್ಷ. ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ವಡ್ಡಾರಾಧನೆಯ ಮೂರು ಕಥೆಗಳನ್ನು ಪ್ರಕಟಿಸುವ ಮೂಲಕ ಡಿ.ಎಲ್.ಎನ್. ವಡ್ಡಾರಾಧನೆಯ ಗ್ರಂಥಸಂಪಾದನಾ ಪ್ರಕ್ರಿಯೆಯನ್ನು ಭಾಗಶಃ ಉದ್ಘಾಟಿಸಿದ್ದರು. ಡಿ.ಎಲ್.ಎನ್. ಆ ಸಂದರ್ಭದಲ್ಲಿ ಬಳಸಿದ್ದು ಒಂದೇ ಒಂದು ಪ್ರತಿ. ಕೇವಲ ಒಂದು ಪ್ರತಿಯ ಆಧಾರದಿಂದ ಗ್ರಂಥ ಸಂಪಾದನಾ ಕಾರ್ಯ ಪರಿಪೂರ್ಣವಾಗುವುದಿಲ್ಲವೆಂಬ ಪ್ರಜ್ಞೆಯೊಂದಿಗೇ ಅವರು

ಮಾದರಿಗಾಗಿ ಮೂರು ಕಥೆಗಳನ್ನು ಮಾತ್ರ ಪರಿಷ್ಕರಿಸಿ ಪ್ರಕಟಿಸಿದ್ದರು. ಕಾಲಾನುಕ್ರಮದಲ್ಲಿ ವಡ್ಡಾರಾಧನೆಯ ಐದಾರು ಪ್ರತಿಗಳು ಲಭಿಸಿದ್ದು ಅವುಗಳ ನೆರವಿನಿಂದ ಡಿ.ಎಲ್.ಎನ್. ಈ ಗ್ರಂಥವನ್ನು ೧೯೪೯ರಲ್ಲಿ ಇಡಿಯಾಗಿ ಪ್ರಕಟಿಸಿದ್ದಾರೆ.

ವಡ್ಡಾರಾಧನೆಯ ಮೂಲಪ್ರತಿಗಳು, ಕರ್ತೃ, ಕಾಲ, ಕಥೆಗಳ ಮೂಲ ಮತ್ತು ಬೆಳವಣಿಗೆ, ಶೈಲಿ, ಭಾಷೆ, ಕಾವ್ಯವಿಮರ್ಶೆ, ಶಬ್ದಕೋಶ, ಟಿಪ್ಪಣಿ ಮೊದಲಾದ ವಿಷಯಗಳನ್ನೊಳಗೊಂಡ ವಿವರವಾದ ಪೀಠಿಕೆಯನ್ನು ಮೊದಲ ಮುದ್ರಣದಲ್ಲೇ ಕೊಡುವ ಸಂಕಲ್ಪ ತಮ್ಮದಾಗಿದ್ದರೂ ಅದು ಸಾಧ್ಯವಾಗಲಿಲ್ಲವೆಂಬುದನ್ನು ಡಿ.ಎಲ್.ಎನ್. ಪ್ರಾಮಾಣಿಕವಾಗಿ ಹೇಳಿಕೊಂಡಿದ್ದಾರೆ. ".............ಆದರೂ ಪೀಠಿಕೆಯನ್ನು ಬರೆಯುವುದು ಇದುವರೆಗೆ ಸಾಧ್ಯವಾಗಿಲ್ಲ ಮುಂದಿನ ಮುದ್ರಣದ ಹೊತ್ತಿಗೆ ಅದು ಸಿದ್ಧವಾಗುವುದೆಂಬ ಭರವಸೆ ಇದೆ. ಡಾ. ಎ.ಎನ್. ಉಪಾಧ್ಯೆ ಇವರು ತಮ್ಮಿಂದ ಸಂಪಾದಿತವಾದ ಹರಿಷೇಣನ ಬೃಹತ್ಕಥಾಕೋಶಕ್ಕೆ ಬರೆದಿರುವ ಪ್ರೌಢವೂ, ಪರಿಪೂರ್ಣವೂ ಆದ ಪ್ರಸ್ತಾವನೆಯನ್ನು ಎಲ್ಲರೂ ಅವಲೋಕಿಸಬಹುದು" ಎಂಬ ಸೂಚನೆಯನ್ನು ಕೊಟ್ಟಿದ್ದಾರೆ. ಮುಂದೆ ಪೂರ್ಣ ಪ್ರಮಾಣದ ಗ್ರಂಥ ೧೯೭೦ರಲ್ಲಿ ಪ್ರಕಟವಾಯಿತು.

ಡಿ.ಎಲ್.ಎನ್. ತಮ್ಮ ಗ್ರಂಥವನ್ನು ಎರಡು ಪದ್ಯಗಳ ಮೂಲಕ ಬಿ.ಎಂ.ಶ್ರೀ ಅವರಿಗೆ ಅರ್ಪಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಅದನ್ನು ಪ್ರಕಟಿಸಿದೆ. ಡಿ.ಎಲ್.ಎನ್. ತಮ್ಮ ಕೃತಿಗೆ ಕೊಟ್ಟಿರುವ ಹೆಸರು "ಶಿವಕೋಟ್ಯಾಚಾರ್ಯ ವಿರಚಿತ ವಡ್ಡಾರಾಧನೆ" ಎಂಬುದು.

೧೯೭೦ರಲ್ಲಿ ಹೊರಬಂದ ಮುದ್ರಣದಲ್ಲಿ ೩೫ ಪುಟಗಳಷ್ಟು ಸುದೀರ್ಘವಾದ ಪೀಠಿಕಾ ಭಾಗವು ಸೇರಿಕೊಂಡಿದೆ. ಹಸ್ತಪ್ರತಿಗಳು, ಹಸ್ತಪ್ರತಿಗಳ ಪರಸ್ಪರ ಸಂಬಂಧ, ಗ್ರಂಥದ ಹೆಸರು, ಕರ್ತೃತ್ವ, ವಿಚಾರ, ಕಾಲ, ದೇಶ, ಹಿನ್ನೆಲೆ ಮೊದಲಾದ ವಿಷಯಗಳನ್ನು ಅದರಲ್ಲಿ ಅಳವಡಿಸಿಕೊಳ್ಳಲಾಗಿದೆ.

ಅಲ್ಲಿಯ ಪೀಠಿಕಾ ಭಾಗವು ಸಂಪಾದಿತ ಕೃತಿಯ ಯಶಸ್ಸನ್ನು ನಿರ್ಧರಿಸುವಲ್ಲಿ ತುಂಬ ಮಹತ್ವದ ಪಾತ್ರ ವಹಿಸುತ್ತದೆ. ತರುವಾಯದ ಗ್ರಂಥ ಸಂಪಾದನಕಾರರಿಗೆ ಒಂದು ಮಾದರಿಯಾಗಿದೆ. ಆ ಪೀಠಿಕೆಯ ಮೂಲಕ ಗ್ರಂಥ ಸಂಪಾದನಾ ಕಾರ್ಯದ ವಿಧಿ-ವಿಧಾನಗಳೆಲ್ಲವೂ ಪ್ರಕಟವಾಗಿವೆ.

೧೯೩೦, ಡಿ.ಎಲ್.ಎನ್. ಮೈಸೂರಿನ ಓರಿಯಂಟಲ್ ಲೈಬ್ರರಿಯಲ್ಲಿ ಸೇವೆಗೆ ಸೇರಿದ ಕಾಲ. ಒಂದು ವೈದ್ಯಗ್ರಂಥವನ್ನು ಸಂಪಾದಿಸುವ ಕೆಲಸ ಡಿ.ಎಲ್.ಎನ್. ಅವರದಾಗಿದ್ದಿತು. ವಿರಾಮಕಾಲದಲ್ಲಿ ಕರ್ನಾಟಕ ಕವಿಚರಿತೆಯಲ್ಲಿ ಉಕ್ತವಾಗದಿರುವ ಗ್ರಂಥಗಳು ಯಾವುದಾದರೂ ಇವೆಯೇ ? ಎಂಬ ಕುತೂಹಲದೊಂದಿಗೆ ಆ ಲೈಬ್ರರಿಯ ಕನ್ನಡ ಹಸ್ತಪ್ರತಿಗಳ ಪಟ್ಟಿಯನ್ನು ನೋಡುತ್ತಿರುವಾಗ ೧೯೨೨ರಿಂದ ೧೯೨೯ರ ವರೆಗೆ ಸಂಗ್ರಹಿಸಲಾದ ಕೈಬರೆಹದ ಕನ್ನಡ ಪುಸ್ತಕಗಳ ಪಟ್ಟಿಯೊಂದು (೧೯೩೦ರಲ್ಲಿ ಅಚ್ಚಾದುದು) ಡಿ.ಎಲ್.ಎನ್. ಅವರ ಕಣ್ಣಿಗೆ ಬಿದ್ದಿತಂತೆ. ತೆರೆದು ನೋಡಿದಾಗ ಅದರ ೩ನೆಯ ಪುಟದಲ್ಲಿ "ವೊಡ್ಡಾರಾಧಣಂ" ಎಂಬ

ಗ್ರಂಥದ ವಿವರಗಳಿದ್ದವು. ಅದನ್ನು ಡಿ.ಎಲ್.ಎನ್. ಹೀಗೆ ತಿಳಿಸಿದ್ದಾರೆ. "ಇದರ ನಂಬರು ಕೆ-೪೧೫. ಇದರ ಕವಿಯ ಹೆಸರು ಉಕ್ತವಾಗಿಲ್ಲ. ಇದು ವಾ. ಷ. ಎಂದರೆ ವಾರ್ಧಕ ಷಟ್ಪದಿಯಲ್ಲಿ ರಚಿತವಾದುದೆಂದು ಅಲ್ಲಿ ಹೇಳಿದೆ. ಗ್ರಂಥದ ಹೆಸರು ಒಂದು ತೆರನಾದ ಔದಾಸೀನ್ಯ ತಲೆದೋರಿದರೂ ನೋಡಿಯೇ ಬಿಡೋಣವೆಂದು ಆ ಗ್ರಂಥವನ್ನು ತರಿಸಿ ಅದರ ಓಲೆಗಳನ್ನು ತಿರುವಿ ಹಾಕಿದಾಗ ಅದು ವಾರ್ಧಕ ಷಟ್ಪದಿಯಲ್ಲಿಲ್ಲದಿರುವುದೂ, ಗದ್ಯದಲ್ಲಿ ರಚಿತವಾಗಿರುವುದೂ ಗೊತ್ತಾಯಿತು. ಆರಂಭದ ಕೆಲವು ಓಲೆಗಳನ್ನು ಓದುತ್ತ ಹೋದಾಗ ಅಲ್ಲಿನ ಗದ್ಯಶೈಲಿ ನನ್ನನ್ನು ಆಕರ್ಷಿಸಿತ್ತು. ಇಷ್ಟು ಒಳ್ಳೆಯ ಗದ್ಯ ಹಳೆಗನ್ನಡದಲ್ಲಿ ರಚಿತವಾಗಿರುವುದನ್ನು ಕಂಡು ನನಗೆ ಮಿಗಿಲಾದ ಸಂತೋಷವೂ ಆಶ್ಚರ್ಯವೂ ಉಂಟಾದವು. ಕೂಡಲೇ ಅದರಲ್ಲಿರುವ ೧೯ ಕಥೆಗಳಲ್ಲಿ ಮೂರನ್ನು ಮಾತ್ರ ಆರಿಸಿಕೊಂಡು, ಅಚ್ಚಿಗಾಗಿ ಅವುಗಳ ಒಂದು ಪ್ರತಿಯನ್ನು ಸಿದ್ಧಪಡಿಸಿ ಅದನ್ನು ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆಯ ಸಂಪಾದಕರಿಗೆ ಈಗ ದಿವಂಗತರಾಗಿರುವ ಬೆಳ್ಳಾವೆ ವೆಂಕಟನಾರಾಯಣಪ್ಪನವರಿಗೆ ಕಳಿಸಿಕೊಡಲಾಯಿತು. ಅದು ಆ ಪತ್ರಿಕೆಯ ೧೯೩೧ನೆಯ ಅಕ್ಟೋಬರ್ ಸಂಚಿಕೆಯಲ್ಲಿ ಅಚ್ಚಾಗಿ ಪ್ರಕಟವಾಯಿತು. (ಪುಟ ೧೭೩-೨೩೧). ಗ್ರಂಥದ ಮತ್ತು ಅದರ ಕರ್ತೃವಿನ ವಿಷಯವಾಗಿ ನನಗೆ ಆಗ ತಿಳಿದು ಬಂದಷ್ಟು ವಿಷಯಗಳನ್ನು ಒಳಗೊಂಡ ಒಂದು ಸಣ್ಣ ಮುನ್ನುಡಿಯೂ ಇದರಲ್ಲಿದೆ. (ಪುಟ ೧೭೩-೧೭೮). ಲಭ್ಯವಾಗಿದ್ದ ಒಂದೇ ಹಸ್ತಪ್ರತಿಯ ಸಹಾಯದಿಂದ ಗ್ರಂಥ ಪರಿಷ್ಕರಣ ಕಾರ್ಯ ಸಮರ್ಪಕವಾಗಿ ನಡೆಯಲು ಸಾಧ್ಯವಿಲ್ಲವೆಂದು ಇಡೀ ಗ್ರಂಥವನ್ನು ಮುದ್ರಿಸದೆ ಇಷ್ಟರಿಂದಲೇ ತೃಪ್ತಿ ಪಡಬೇಕಾಯಿತು. ಇನ್ನೂ ಒಂದೆರಡಾದರೂ ಹಸ್ತಪ್ರತಿಗಳು ದೊರೆತರೆ ಒಳ್ಳೆಯದೆಂಬ ನಿರೀಕ್ಷೆ ಇತ್ತು.

ಹೀಗೆ ನಿರೀಕ್ಷೆಯಲ್ಲಿದ್ದಾಗ ಸುಮಾರು ಎಂಟು ವರ್ಷಗಳ ತರುವಾಯ ೧೯೩೯ರಲ್ಲಿ ಎನ್. ಅನಂತರಂಗಾಚಾರ್ ಅವರ ನೆರವಿನಿಂದ ಮೂಡುಬಿದಿರೆಯ ಲೋಕನಾಥ ಶಾಸ್ತ್ರಿಗಳಿಂದ ವಡ್ಡಾರಾಧನೆಯ ಒಂದು ಓಲೆಯ ಪ್ರತಿ ದೊರೆಯಿತಂತೆ. ಜೊತೆಗೆ ಸಾಲಿಗ್ರಾಮದ ಸರಾಫ್ ಪದ್ಮರಾಜಯ್ಯನವರಲ್ಲಿದ್ದ ಮತ್ತೊಂದು ಪ್ರತಿಯೂ ದೊರಕಿತಂತೆ. ಈ ಎರಡು ಪ್ರತಿಗಳ ನೆರವಿನಿಂದ ವಡ್ಡಾರಾಧನೆಯ ಮೊದಲನೆಯ ಕಥೆ 'ಸುಕುಮಾರ ಕಥೆ'ಯನ್ನು ಸಂಪಾದಿಸಿ ಪರಿಷತ್ಪತ್ರಿಕೆಯಲ್ಲಿ ಪ್ರಕಟಿಸಲಾಯಿತು. (೧೯೩೯, ಸಂಪುಟ ೨೪, ಸಂಚಿಕೆ-೪)

ಮುಂದೆ ಕೆಲವೇ ದಿನಗಳಲ್ಲಿ ವಡ್ಡಾರಾಧನೆಯ ಮೂರು ಬೇರೆ ಹಸ್ತಪ್ರತಿಗಳು ಡಿ.ಎಲ್.ಎನ್. ಅವರಿಗೆ ದೊರೆತವು. ನಂತರ ಆರಾದ ಸೆಂಟ್ರಲ್ ಜೈನ್ ಲೈಬ್ರರಿಯಲ್ಲಿ ಇನ್ನೊಂದು ಪ್ರತಿಯೂ ದೊರಕಿತು. ಆಗ ಡಿ.ಎಲ್.ಎಸ್. ಅವರಿಗೆ ಆನೆಯ ಬಲ ಬಂದಂತಾಯಿತು. ಈ ಆರು ಪ್ರತಿಗಳ ಸಹಾಯದಿಂದ ಗ್ರಂಥವನ್ನು ಸಂಸ್ಕರಣ ಮಾಡಿ ಪರಿಷತ್ಪತ್ರಿಕೆಯ ವಿವಿಧ ಸಂಚಿಕೆಗಳಲ್ಲಿ ಭಾಗಶಃ ಮುದ್ರಿಸುವ ಮೂಲಕ ೧೯೩೯ರಲ್ಲಿ ಇಡೀ ಗ್ರಂಥವನ್ನು ಪ್ರಕಟಿಸಲಾಯಿತು.

ಡಿ.ಎಲ್. ಎಸ್. ತಾವು ಬಳಸಿದ ಹಸ್ತಪ್ರತಿಗಳ ವಿವರಗಳನ್ನು ಒದಗಿಸಿದ್ದು ಅದರ ಸಾರ ಹೀಗಿದೆ :

೧. 'ಕ' ಪ್ರತಿ - ಮೈಸೂರಿನ ಓರಿಯಂಟಲ್ ಲೈಬ್ರರಿಯಲ್ಲಿರುವ ಕೆ-೪೧೫ ನಂಬರಿನ ಓಲೆಯ ಪ್ರತಿ (ಕಾಲ ಬಹುಶಃ : ೧೪೩೪) (ಇದು ಮೊದಲು ಸರಾಫ್ ಪದ್ಮರಾಜಯ್ಯನವರಲ್ಲಿದ್ದಿತು. ಮುಂದೆ ೧೯೨೦ರಲ್ಲಿ ಅವರು ಅದನ್ನು ಓರಿಯಂಟಲ್ ಲೈಬ್ರರಿಗೆ ಕೊಟ್ಟರೆಂದು ತಿಳಿದುಬರುತ್ತದೆ).

೨. 'ಖ' ಪ್ರತಿ - ಇದು ಓಲೆಯ ಪ್ರತಿ. ಈ ಪ್ರತಿ ಮೂಡಬಿದಿರೆಯ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯರ ಮಠಕ್ಕೆ ಸೇರಿದ್ದು. ಅದೇ ಊರಿನ ಲೋಕನಾಥ ಶಾಸ್ತ್ರಿಗಳಿಂದ ಎನ್. ಅನಂತರಂಗಾಚಾರ್ ಅವರ ಮೂಲಕ ಡಿ.ಎಲ್.ಎನ್. ರಿಗೆ ದೊರೆಯಿತು. (ಇದರ ಕಾಲ ೧೪೦೩)

೩. 'ಗ' ಪ್ರತಿ - ಇದು ಸಾಲಿಗ್ರಾಮದ ಸರಾಫ್ ಪದ್ಮರಾಜಯ್ಯನವರ ಭಂಡಾರದ್ದು (ಇದರ ಕಾಲ ೧೮೬೮).

೪. 'ಘ' ಪ್ರತಿ - ಇದೂ ಸರಾಫ್ ಅವರ ಭಂಡಾರಕ್ಕೇ ಸೇರಿದ್ದು. (ಇದರ ಕಾಲ ಸುಮಾರು ೧೭ನೆಯ ಶತಮಾನದ ಕೊನೆಯ ಘಟ್ಟ)

೫. 'ಚ' ಪ್ರತಿ - ಇದು ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲೂಕಿನ ಸರಗೂರಿಗೆ ಸೇರಿದ ಪ್ರತಿ. ಇದೂ ಸರಾಫ್ ಪದ್ಮರಾಜಯ್ಯನವರಿಂದಲೇ ದೊರೆತದ್ದು. (ಇದು ಸುಮಾರು ೧೭ನೆಯ ಶತಮಾನದ ಆರಂಭದ ಕಾಲದ್ದು).

೬. 'ಛ' ಪ್ರತಿ - ಇದು ಆರಾದ ಸೆಂಟ್ರಲ್ ಜೈನ್ ಓರಿಯಂಟಲ್ ಲೈಬ್ರರಿಗೆ ಸೇರಿದ್ದು. (ಇದರ ಕಾಲ ಸು. ೧೭ನೆಯ ಶತಮಾನ).

ಡಿ.ಎಲ್.ಎನ್. ಅವರು ಮೇಲೆ ತಿಳಿಸಿದ ಈ ಆರು ಪ್ರತಿಗಳ ನೆರವಿನಿಂದ ಪಾಠ ಸಂಕಲನ ಮಾಡಿದ ನಂತರ ಡಾ. ಎ.ಎನ್. ಉಪಾಧ್ಯೆ ಅವರಿಂದ ಮತ್ತೊಂದು ಓಲೆಯ ಪ್ರತಿ ದೊರಕಿತು. ಇದು ಕೊಲ್ಲಾಪುರದ ಲಕ್ಷ್ಮೀಸೇನ ಭಟ್ಟಾರಕರ ಜೈನ ಮಠಕ್ಕೆ ಸೇರಿದ್ದು. (ಕಾಲ ೧೭ನೇ ಶತಮಾನ) ಆದರೆ ಅದು ಘ, ಚ, ಛ ಪ್ರತಿಗಳ ಸಂಪ್ರದಾಯಕ್ಕೆ ಸೇರಿದ್ದಾದ ಕಾರಣ ಡಿಎಲ್ಎನ್ ಇದನ್ನು ಕೆಲವು ಕತೆಗಳ ಪರಿಷ್ಕರಣಕ್ಕೆ ಮಾತ್ರ ಬಳಸಿದ್ದಾರೆ.

ಹೀಗೆ ವಡ್ಡಾರಾಧನೆಯ ಸಂಪಾದನೆಗೆ ಡಿ.ಎಲ್.ಎನ್. ಬಳಸಿರುವುದು ಒಟ್ಟು ಏಳು ಪ್ರತಿಗಳನ್ನು. ಈ ಏಳು ಪ್ರತಿಗಳಲ್ಲಿನ ಸಾಮ್ಯ ವೈಷಮ್ಯಗಳ ಆಧಾರದಿಂದ ಡಿ.ಎಲ್.ಎನ್. ಅವುಗಳ ಪರಸ್ಪರ ಸಂಬಂಧವನ್ನು ಗುರುತಿಸಿದ್ದಾರೆ. ಅವರ ಪ್ರಕಾರ ಕಖಗ ಪ್ರತಿಗಳದು ಒಂದು ಗುಂಪು, ಉಳಿದ ನಾಲ್ಕು ಪ್ರತಿಗಳದು ಇನ್ನೊಂದು ಗುಂಪು (ಘಚಛ) ಮತ್ತು ಕೊಲ್ಲಾಪುರದ ಪ್ರತಿ 'ಗ' ಪ್ರತಿಯು 'ಕ' ಪ್ರತಿಯ ನಕಲು, ಎರಡನೆಯ ಗುಂಪಿನ ನಾಲ್ಕು ಪ್ರತಿಗಳಲ್ಲೂ ಸಮಾನ ಸ್ಖಾಲಿತ್ಯಗಳಿರುವುದನ್ನು ಸಂಪಾದಕರು ಗುರುತಿಸಿದ್ದಾರೆ.

ಗ್ರಂಥದ ಹೆಸರಿನ ಬಗ್ಗೆ ಅವರು ನಡೆಸಿರುವ ಚರ್ಚೆ ಸಾಕಷ್ಟು ವಿವರವಾಗಿದೆ. ಐದು ಪ್ರತಿಗಳಲ್ಲೂ ಗ್ರಂಥದ ಹೆಸರು 'ವಡ್ಡಾರಾಧನೆ' ಅಥವಾ ಅದರ ಇತರ ರೂಪಗಳಲ್ಲಿ ಲಿಖಿತವಾಗಿರುವುದನ್ನು ಡಿ.ಎಲ್.ಎನ್. ಗುರುತಿಸಿದ್ದಾರೆ. ಅದರ ಕಾರಣಗಳನ್ನು ಶೋಧಿಸಲು ಪ್ರಯತ್ನಿಸಿದ್ದಾರೆ. ಬೇರೆ ಬೇರೆ ಹಸ್ತಪ್ರತಿಗಳಲ್ಲಿ ಬಂದಕೃತಿಯ ಹೆಸರನ್ನು ಈ ಕೆಳಗಿನಂತೆ ನಾಲ್ಕು ಗುಂಪುಗಳಲ್ಲಿ ವಿಂಗಡಿಸಿದ್ದಾರೆ.

೧	೨	೩	೪
ವೃದ್ಧಾರಾಧನಂ	ವ(ವು)ಡ್ಡಾರಾಧಣಂ	ವೊಡ್ಡಾರಾಧಣಂ	ಒಡ್ಡಾರಾಧಣಂ
ವೃದ್ಧಾರಾಧನಾ	ವ(ವು)ಡ್ಡಾರಾಧನೆ	ವೊಡ್ಡಾರಾಧನೆ	ಒಡ್ಡಾರಾಧನೆ

ಈ ಹೆಸರುಗಳ ಮೂಲದ ಬಗ್ಗೆ ಚರ್ಚಿಸಿ 'ವಡ್ಡಾರಾಧನೆ' ಎಂಬುದೇ ಅಂಗೀಕಾರಾರ್ಹವಾದ ರೂಪ ಎಂದು ನಿರ್ಣಯಿಸಿದ್ದಾರೆ. ಕೃತಿಯ ಹೆಸರಿನ ಬಗ್ಗೆ ಡಾ. ಉಪಾಧ್ಯೆ ಅವರು ಮಂಡಿಸಿದ ವಿಚಾರಗಳ ಬಗ್ಗೆ ಎರಡು ಶಂಕೆಗಳನ್ನು ಎತ್ತಿದ ಡಿ.ಎಲ್.ಎನ್. ಅವರು ಆ ಶಂಕೆಗಳು ಪರಿಹಾರವಾಗುವ ವರೆಗೆ ಕೃತಿಯನ್ನು 'ವಡ್ಡಾರಾಧನೆ' ಎಂದು ಕರೆಯುವುದೇ ಸೂಕ್ತ ಎಂಬ ನಿಲುವನ್ನು ತಳೆದಿದ್ದಾರೆ.

ವಡ್ಡಾರಾಧನೆಯ ಕರ್ತೃವಿನ ಬಗೆಗೂ ಡಿ.ಎಲ್.ಎನ್. ಸಾಕಷ್ಟು ಮೌಲಿಕ ಚರ್ಚೆ ನಡೆಸಿದ್ದಾರೆ. ವಡ್ಡಾರಾಧನೆ ಗ್ರಂಥ ಪರಿಸಮಾಪ್ತಿ ವಾಕ್ಯದಲ್ಲಿ "ಈ ಪೇೞ್ದ ಪತ್ತೊಂಬತ್ತು ಕಥೆಗಳಂ ಶಿವಕೋಟ್ಯಾಚಾರ್ಯರ್ ಪೇೞ್ದಾರ್" ಎಂಬ ವಾಕ್ಯವಿರುವುದನ್ನಾಧರಿಸಿ, ಶಿವಕೋಟ್ಯಾಚಾರ್ಯ ಎಂಬ ಹೆಸರು ಕನ್ನಡ ಗ್ರಂಥಕರ್ತನ ಹೆಸರಲ್ಲವೆಂದೂ ಪ್ರಾಕೃತ ಗ್ರಂಥವಾದ 'ಭಗವತೀ ಆರಾಧನಾ'ದ ಕರ್ತೃ ಶಿವಾರ್ಯ ಅಥವಾ ಶಿವಕೋಟಿಯನ್ನು ನಿರ್ದೇಶಿಸುತ್ತದೆಯೆಂದೂ ಡಾ. ಉಪಾಧ್ಯೆ ಅವರು ನೀಡಿದ್ದ ವಾದವನ್ನು ಡಿ.ಎಲ್.ಎನ್. ಒಪ್ಪಿಲ್ಲ. ಕನ್ನಡ ಕಥೆಗಾರನೊಬ್ಬ ತಾನು ಬರೆದ ಕೃತಿಗೆ ಬೇರೊಬ್ಬ ಪ್ರಾಕೃತ ಕಥೆಗಾರನ ಹೆಸರನ್ನು ಆರೋಪಿಸಿದ್ದಾನೆಂದು ಭಾವಿಸುವುದು ಸರಿಯೆ? ಕೃತಿಯ ಕರ್ತೃ ಹಾಗೆ ಮಾಡಿರುವುದು ಸಾಧ್ಯವೆ? ಅಲ್ಲದೆ ಶಿವಕೋಟ್ಯಾಚಾರ್ಯನೆಂಬ ಒಂದೇ ಹೆಸರಿನ ಬೇರೆ ಕವಿಗಳು ಕನ್ನಡದಲ್ಲಿ ಏಕೆ ಇದ್ದಿರಬಾರದು? ಎಂಬೆಲ್ಲ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಡಿ.ಎಲ್.ಎನ್. ಆ ಕುರಿತು ಚರ್ಚೆ ಮಾಡಿದ್ದಾರೆ. ಏಳು ಪ್ರತ್ಯೇಕ ಉಲ್ಲೇಖಗಳನ್ನು ಸಂಗ್ರಹಿಸಿ ಅವುಗಳಲ್ಲಿ ಪ್ರಸ್ತಾಪಿತವಾದ ಶಿವಕೋಟಿ ಎಂಬವನ ವಿವರಗಳನ್ನು ಕ್ರೋಢೀಕರಿಸಿದ್ದಾರೆ. ಇಲ್ಲಿ ಸಂಗ್ರಹಿತವಾದ ವಿಷಯಗಳು ಸಾಮಾನ್ಯ ಓದುಗರ ಗ್ರಹಿಕೆಗೆ ನಿಲುಕುವುದು ಕೊಂಚ ಕಷ್ಟವೆನ್ನಿಸುತ್ತದೆ. ಆದರೆ ಗ್ರಂಥ ಸಂಪಾದಕರಿಗೆ ಮತ್ತು ಸಂಶೋಧಕರಿಗೆ ಇದು ತುಂಬ ಉಪಯುಕ್ತ ಮಾಹಿತಿಯೆನ್ನಿಸುತ್ತದೆ. ಉಪಾಧ್ಯೆ, ಪಾಠಕ್, ಡಿ.ಎಲ್.ಎನ್. ಮುಂತಾದವರಿಂದ ಆರಂಭವಾದ ವಡ್ಡಾರಾಧನೆಯ ಕರ್ತೃವಿನ ಕುರಿತಾದ ಚರ್ಚೆ ಕಲಬುರ್ಗಿ, ಜಾಗೀರದಾರ, ಬೋವಿ, ಹಂಪನಾ ಅವರ ವರೆಗೆ ಜೀವಂತವಾಗಿ ಸಾಗಿ ಬಂದುದು ಕುತೂಹಲದ ಸಂಗತಿಯೇ ಸರಿ.

ಈ ಚರ್ಚೆಯ ಕೊನೆಗೆ ಡಿ.ಎಲ್.ಎನ್. ಹೇಳಿರುವುದಿಷ್ಟು: "ಒಟ್ಟಿನಲ್ಲಿ ಕನ್ನಡ ಗ್ರಂಥದ ಹೆಸರು ವಡ್ಡಾರಾಧನೆಯೆಂದೂ, ಅದನ್ನು ಹೇಳಿದವನು ಒಬ್ಬ ಶಿವಕೋಟಿಯೆಂದೂ ಸದ್ಯಕ್ಕೆ ನಿರ್ಣಯಿಸಬಹುದು. ಖಚಿತವಾದ ನೂತನಾಧಾರಗಳು ದೊರೆಯುವವರೆಗೆ ಬೇರೆ ಯಾವ ನಿರ್ಣಯಕ್ಕೂ ಅವಕಾಶವಿದೆಯೆಂದು ತೋರುವುದಿಲ್ಲ. ಗ್ರಂಥಸಮಾಪ್ತಿಯಲ್ಲಿರುವ ಗದ್ಯವನ್ನು ಎರಡು ವಾಕ್ಯಗಳಾಗಿ ಭಾವಿಸಿ ಮೊದಲನೆಯದು ಕವಿಯ ಹೆಸರನ್ನು ಹೇಳುವುದೆಂದೂ, ಎರಡನೆಯದು ಗ್ರಂಥದ ಹೆಸರನ್ನು ಸೂಚಿಸುವುದೆಂದೂ ಸ್ವಾಭಾವಿಕವಾದ ಅರ್ಥವನ್ನು ಗ್ರಹಿಸಬೇಕಾಗಿದೆ. ಇಲ್ಲಿಯ ತಮ್ಮ ನಿರ್ಣಯಗಳು 'ಸದ್ಯದ ನಿರ್ಣಯಗಳು' ಎಂಬ ಮಾತನ್ನು ಡಿ.ಎಲ್.ಎನ್. ತಿಳಿಸಿರುವುದು ಗಮನಾರ್ಹವಾಗಿದೆ.

ಕವಿಯ ಕಾಲದ ಕುರಿತಾದ ಕೆ.ಬಿ. ಪಾಠಕ, ಆರ್. ನರಸಿಂಹಾಚಾರ್, ಗೋವಿಂದ ಪೈ, ಡಾ. ಎಸ್. ಶ್ರೀಕಂಠಶಾಸ್ತ್ರಿ, ಡಾ. ಉಪಾಧ್ಯೆ ಮೊದಲಾದವರ ಅಭಿಪ್ರಾಯಗಳನ್ನು ವಿಮರ್ಶಿಸಿ ಕವಿಯ ಕಾಲವು ಸುಮಾರು ಕ್ರಿ.ಶ. ೯೨೦ ಆಗಿರಬೇಕೆಂಬ ಅಭಿಪ್ರಾಯಕ್ಕೆ ಡಿ.ಎಲ್.ಎನ್. ಬಂದಿದ್ದಾರೆ.

ಕವಿಯ ದೇಶದ ಕುರಿತಾಗಿಯೂ ಸವಿಸ್ತಾರವಾಗಿ ಚರ್ಚಿಸಿದ್ದಾರಲ್ಲದೆ ಮೂಲಾರಾಧನಾ ಕೃತಿಯ ಕರ್ತೃ ಒಬ್ಬ ಶಿವಕೋಟಿ; ಕನ್ನಡದ ವಡ್ಡಾರಾಧನೆಯ ಕರ್ತೃ ಇನ್ನೊಬ್ಬ ಶಿವಕೋಟಿ, ಕನ್ನಡದ ಶಿವಕೋಟಿಯನ್ನು ಕೋಗಳಿಯ ಶಿವಕೋಟಿ ಎಂದು ಕರೆಯಬಹುದು ಎಂದಿದ್ದಾರೆ.

ಡಿ.ಎಲ್.ಎನ್. ತಮಗೆ ಸರಿಯೆನ್ನಿಸುವ ಪಾಠವನ್ನು ಬಳಸಿಕೊಂಡು ಇತರ ಪ್ರತಿಗಳಲ್ಲಿ ಅದಕ್ಕಿರುವ ಪಾಠಾಂತರಗಳನ್ನು ತುಂಬ ಎಚ್ಚರಿಕೆಯಿಂದ ಸಂಗ್ರಹಿಸಿಕೊಟ್ಟಿದ್ದಾರೆ. ಇದಕ್ಕಾಗಿ ಬಳಸಿಕೊಂಡ ಪಾಠದ ಎಡಬಲದಲ್ಲಿ ಒಂದೊಂದು ಕ್ರಮಸಂಖ್ಯೆಯನ್ನು ಕೊಟ್ಟು ಮತ್ತೆ ಅದೇ ಅಂಕಿಯ ಮೂಲಕ ಅಡಿಟಿಪ್ಪಣಿಯಲ್ಲಿ ಪಾಠಾಂತರಗಳ ವಿವರಣೆ ಕೊಟ್ಟಿದ್ದಾರೆ.

ಉದಾ. ೧'ಶ್ರೀ ವೀರ ವರ್ಧಮಾನ ಭಟ್ಟಾರಕರ್ಗ್ಗೆ'೧ ಎಂಬ ಮೂಲಪಾಠಕ್ಕಿರುವ ಪಾಠಾಂತರಗಳನ್ನು ಆಯಾ ಪುಟದ ಕೊನೆಗೆ ಅಡಿಟಿಪ್ಪಣಿಯಲ್ಲಿ1 ಎಂದಿಂತು ಶ್ರೀ ವೀರವರ್ಧಮಾನ ಭಟ್ಟಾರಕರ್ಗೆ (ಸ್ವಾಮಿಗಳ್ಗೆ-ಛ) ತ್ರಿಕರಣ ಶುದ್ಧಿಯಿಂದಂ' (ಘಚಛಜ) ಎಂದು ಸಂಗ್ರಹಿಸಿ ಕೊಟ್ಟಿದ್ದಾರೆ. ಇದರಿಂದ ಓದುಗರು ನೋಡಿರಲಾರದ ಹಸ್ತಪ್ರತಿಗಳೆಲ್ಲವನ್ನೂ ಅವನ ಮುಂದೆ ತೆರೆದಿಡುವುದು ಸಾಧ್ಯವಾಗುತ್ತದೆ. ಕೆಲವೊಮ್ಮೆ ತರುವಾಯದ ಸಂಪಾದಕರು ಈಗಿನ ಸಂಪಾದಕರಿಗಿಂತ ಭಿನ್ನ ಪಾಠವನ್ನು ಸ್ವೀಕರಿಸಲೂ ಇದು ಸಹಕಾರಿಯಾಗುತ್ತದೆ.

ಅಲ್ಲಲ್ಲಿ *, [ ], +, ಮೊದಲಾದ ಚಿಹ್ನೆಗಳನ್ನು ಬಳಸಲಾಗಿದೆ. ೧೦ ಸಾಲುಗಳಿಗೊಮ್ಮೆ ೧೦,೨೦,೩೦ ಎಂಬ ಪಂಕ್ತಿ ಸಂಖ್ಯೆಗಳನ್ನು ಕೊಡಲಾಗಿದೆ. ಱ, ಕುಳ, ಶಕಟರೇಫಗಳ ಬಳಕೆಯ ವಿಷಯದಲ್ಲಿ ಮೂಲಕ್ಕೆ ಸಂಪೂರ್ಣ ಬದ್ಧತೆಯನ್ನು ಉಳಿಸಿಕೊಳ್ಳಲಾಗಿದೆ. ಒಟ್ಟಾರೆ ಡಿ.ಎಲ್.ಎನ್. ಅವರ ನಿಜವಾದ ವಿದ್ವತ್ತು, ತಾಳ್ಮೆ, ಪರಿಶ್ರಮಗಳನ್ನು ಪ್ರಸ್ತುತ ಕೃತಿಯಲ್ಲಿ ಧಾರಾಳವಾಗಿ ಗುರುತಿಸಬಹುದು. ಸಾಂಸ್ಕೃತಿಕ ಮಹತ್ವದ ಒಂದು ಪ್ರಾಚೀನ ಕನ್ನಡ ಕೃತಿಯನ್ನು ಉಳಿಸಿಕೊಟ್ಟ ಮಹತ್ಸಾಧನೆಗಾಗಿ ಕನ್ನಡಿಗರು ಡಿ.ಎಲ್.ಎನ್. ಅವರಿಗೆ ಋಣಿಗಳಾಗಿದ್ದಾರೆ.

ii) ಹಂಪನಾ ಆವೃತ್ತಿ :

೧೯೭೬ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ಮೂಲಕ ತಮ್ಮ ಕೃತಿ "ಭ್ರಾಜಿಷ್ಣು ವಿರಚಿತ ವಡ್ಡಾರಾಧನೆ"ಯನ್ನು ಪ್ರಕಟಿಸುವುದರೊಂದಿಗೆ ವಡ್ಡಾರಾಧನೆಯ ಗ್ರಂಥ ಸಂಪಾದನೆಯ ದ್ವಿತೀಯ ಘಟ್ಟವನ್ನು ಹಂಪನಾ ಅವರು ಆರಂಭಿಸಿದ್ದಾರೆ. ಕೃತಿಯ ಕರ್ತೃವಿನ ಹೆಸರು, ಪ್ರದೇಶ, ಕಾಲವನ್ನೊಳಗೊಂಡಂತೆ ಕೆಲವು ಪ್ರಾಕೃತ ಗಾಹೆಗಳ ಸ್ಥಾನ ನಿರ್ದೇಶನ ಹಾಗೂ ಮತ್ತೆ ಕೆಲವು ಪಾಠಾಂತರಗಳ ಅಳವಡಿಕೆಯ ಕಾರಣವಾಗಿ ಹಂಪನಾ ಸಂಪಾದನೆಗೂ ಅದರದೇ ಆದ ಮಹತ್ವವಿದೆ.

ತಾವು ವಡ್ಡಾರಾಧನೆಯ ಮರುಪರಿಷ್ಕರಣೆಗೆ ಕೈ ಹಾಕಲು ಒದಗಿ ಬಂದ ಸನ್ನಿವೇಶವನ್ನು ಕೃತಿಯ 'ಉಪಕಾರ ಸ್ಮರಣೆ' ಎಂಬ ಭಾಗದಲ್ಲಿ ಹಂಪನಾ ಅವರು ಹೀಗೆ ತಿಳಿಸಿದ್ದಾರೆ: "ಸಂಪಾದಕರು ಬಳಸದೆ ಇರಬಹುದಾದ ಹೊಸ ಹಸ್ತಪ್ರತಿಗಳಿಗಾಗಿ ಹುಡುಕುತ್ತಿರುವಾಗ ಮೂಡಬಿದ್ರೆಯ ಜೈನ ಮಠದಲ್ಲಿರುವ ಎರಡು ತಾಡಪತ್ರಿ ಹಸ್ತಪ್ರತಿಗಳನ್ನು ಗುರುತಿಸಿದೆ. ಅವುಗಳನ್ನು ಬಹಳ ಹಿಂದೆಯೇ ಗಮನಿಸಿದ್ದರೂ ಪೂರ್ತಿ ಓದಿರಲಿಲ್ಲ. ಈಗ ತಿಳಿದಿರುವುದಕ್ಕಿಂತ ಹೆಚ್ಚಿನ ಮಾಹಿತಿಗಳು ಅವುಗಳಲ್ಲಿ ಇರಲಾರದೆಂದೆಣಿಸಿ ಮತ್ತೆ ಅವುಗಳ ಕಟ್ಟುಗಳನ್ನು ಬಿಚ್ಚುವ ಗೊಡವೆ ಬೇಡವೆಂದು ಸುಮ್ಮನಿದ್ದೆ. ಮೂರು ವರ್ಷಗಳ ಹಿಂದೆ ಬೇಸಗೆ ರಜದಲ್ಲಿ ಈ ತಾಳೆಯೋಲೆಗಳನ್ನು ತಿರುವಿ ಹಾಕುವಾಗ ಭಿನ್ನಪಾಠಗಳ ಹೊರತು ಹೊಸ ಸಾಮಗ್ರಿ ಆದಿಯಲ್ಲಾಗಲಿ ಅಂತ್ಯದಲ್ಲಾಗಲಿ ದೊರೆಯಲಿಲ್ಲ. ಒಂದೊಂದೇ ಹಾಳೆಯನ್ನು ತಿರುವಿ ಹಾಕುತ್ತಾ ಪ್ರತಿಯೊಂದು ಕಥೆಯನ್ನು ಓದುತ್ತಾ ಹೊರಟೆ. ಇಡೀ ಒಂದು ಹಸ್ತಪ್ರತಿಯಲ್ಲಿ ಏನೇನೂ ಹೊಸ ಅಂಶ ಸಿಗಲಿಲ್ಲ. ನಿರಾಶೆಯಾಯಿತು..... ಆದರೆ ೧೯ನೆಯ ಕಥೆಗೆ ಕಟ್ಟಕಡೆಯ ಕಥೆಗೆ ಬಂದಾಗ, ಒಮ್ಮೆಲೆ ಅರಸುವ ತವನಿಧಿಯ ಮೇಲೆ ಎಡವಿ ಬಿದ್ದಂತಾಯಿತು. "ಮತ್ತೀ ಕಥೆಯಂ ಭ್ರಾಜಿಷ್ಣ್ವಾರಾಧನೆಯಭಿಪ್ರಾಯದೊಳ್ ಪೇೞ್ದುದು" ಎಂಬ ಪುಟ್ಟ ವಾಕ್ಯ ಫಳಾರೆಂದು ಮಿಂಚಿ ಇದುವರೆಗೆ ತಪ್ಪಿ; ಹೋಗಿದ್ದ ಸುವರ್ಣಕೊಂಡಿಯಾಗಿ ಪರಿಣಮಿಸಿತು. ಈ ಸಣ್ಣ ಸಾಲಿನಿಂದ ದೊಡ್ಡ ಸಹಾಯವಾಯಿತು. ಇಡೀ ಕೃತಿಯ ಮೇಲೆ ಹೊನಲು ಬೆಳಕು ಹಾಯಿಸುವ ಮಹತ್ವದ ಹೇಳಿಕೆಯಾಯಿತು. ಈ ಕೃತಿಯ ಹೆಸರು 'ಆರಾಧನಾ ಕರ್ಣಾಟ ಟೀಕಾ ಎಂಬುದೂ. ಈ ಕೃತಿಯ ಕರ್ತೃವಿನ ಹೆಸರು ಭ್ರಾಜಿಷ್ಣು ಎಂಬುದೂ ಸ್ಪಷ್ಟವಾಯಿತು. ಇಲ್ಲಿಯ ಕತೆಗಳು ಆರಾಧನೆಯ ಅಭಿಪ್ರಾಯದಂತೆ ಭ್ರಾಜಿಷ್ಣು ಹೇಳಿದವುಗಳು ಎಂಬುದು ಸ್ಫುಟವಾಯಿತು. ಮಹತ್ವದ ಕೃತಿಯೊಂದರ ಕರ್ತೃವಿನ ವಿಚಾರ ಸುಮಾರು ಆರು ದಶಕಗಳಿಂದಲೂ ಊಹಾಪೋಹಗಳ ನೆಲೆಯಲ್ಲಿ ಹೊಯ್ದಾಡುತ್ತಿರುವಾಗ ಅದರ ಗುಂಗಿನಲ್ಲಿದ್ದ ಹಂಪನಾ ಅವರಿಗೆ ಹೊಸ ಅಂಶವೊಂದು ದೊರೆತದ್ದು ಸ್ವಾಭಾವಿಕವಾಗಿ ಸಂತೋಷ ನೀಡಿದೆ. ಬಹುದಿನಗಳಿಂದ ಹುಡುಕುತ್ತಿದ್ದ ತವನಿಧಿಯು ದೊರೆತಿರುವ ಆನಂದ ಅವರ ಈ ಮಾತುಗಳಲ್ಲಿ ಹೊರಹೊಮ್ಮಿದೆ.

ತಮ್ಮ ಕಾರ್ಯವಿಧಾನದ ಬಗ್ಗೆ ಹಂಪನಾ ಹೀಗೆ ಹೇಳಿಕೊಂಡಿದ್ದಾರೆ. "ಈಗ ಚಾಲ್ತಿಯಲ್ಲಿರುವ ಮುದ್ರಿತ ಪುಸ್ತಕದ ಪ್ರತಿಯನ್ನು ಮೂಲ ಪಠ್ಯವಾಗಿಟ್ಟುಕೊಂಡು ಅದಕ್ಕೆ ಹೊಸ ಪ್ರತಿಯಿಂದ ಪಾಠಾಂತರ ಹಾಕತೊಡಗಿದೆ. ಸುಮಾರು ಒಂದು ನೂರು ಪುಟಗಳವರೆಗೂ ಹಾಗೆ ಗುರುತಿಸಿದಾಗ ನೂರಾರು ಪಾಠಾಂತರಗಳು ಎದ್ದು ಕಾಣಿಸಿದವು. ಆಗ ಅದುವರೆಗೆ ಅನುಸರಿಸಿದ ಕ್ರಮಬಿಟ್ಟು ಹೊಸ ಏರ್ಪಾಟಿಗೆ ಹೊರಳಿದೆ. ನನಗೆ ದೊರೆತ ಹೊಸ ಪ್ರತಿಯ ಪಾಠವನ್ನೇ ಪ್ರತ್ಯೇಕವಾಗಿ ತನಿಯಾಗಿ ಇರಿಸಿಕೊಂಡು ಹಸ್ತಪ್ರತಿಯನ್ನು ತಯಾರಿಸಿದೆ. ಪ್ರಾರಂಭದ ನೂರು ಪುಟಗಳವರೆಗಿನ ಪಾಠಾಂತರದ ದಾಖಲಿಸಿದ ತಿಂಗಳುಗಟ್ಟಲೆ ಪಟ್ಟಿದ್ದ ಶ್ರಮ ವ್ಯರ್ಥವಾಯಿತು. ಆದರೆ ಈ ಬದಲಿ ವ್ಯವಸ್ಥೆಯಿಂದ ತುಂಬ ಪ್ರಯೋಜನವಾಯಿತು. ಒಂದು ಪ್ರಾಚೀನ ಹಸ್ತಪ್ರತಿಯ ಪಾಠವನ್ನು ಯಥಾವತ್ತಾಗಿ ಓದುಗರ ಮುಂದಿಡುವುದು ಸಾಧ್ಯವಾಯಿತು. ಈ ಹೊಸ ಆವೃತ್ತಿಯ ವ್ಯಾಪ್ತಿ ಮತ್ತು ಸ್ವಾರಸ್ಯಗಳನ್ನು ವಿದ್ವತ್ ಪ್ರಪಂಚ ಗುರುತಿಸಿ ಅದರಲ್ಲಿ ಮತ್ತೇನಾದರೂ ತಿದ್ದುಪಡಿಗಳ ಅಗತ್ಯವಿದ್ದರೆ ಸೂರಿಗಳು ನನ್ನ ಗಮನಕ್ಕೆ ತರಬೇಕೆಂದು ಪ್ರಾರ್ಥಿಸುತ್ತೇನೆ."

ಕೃತಿಯಲ್ಲಿ ಬರುವ 'ಪ್ರವೇಶದಾಯಿನಿ' ಎಂಬ ಭಾಗವು ಹಂಪನಾ ಸಂಪಾದನೆಯ ತಾಂತ್ರಿಕ ವಿವರಗಳನ್ನೊದಗಿಸುತ್ತದೆ. ಡಿ.ಎಲ್.ಎನ್. ಬಳಸಿದ ಏಳು ಹಸ್ತಪ್ರತಿಗಳ (ಕಖಗಘಚಛಜ) ವಿವರಗಳನ್ನಲ್ಲದೆ, ಡಿ.ಎಲ್.ಎನ್. ಬಳಸದೆ ಬಿಟ್ಟಿರುವ ಇತರ ಐದು ಹಸ್ತಪ್ರತಿಗಳ ವಿವರಗಳನ್ನು ಹಂಪನಾ ನೀಡಿರುವುದು ವಿಶೇಷವಾಗಿದೆ.

೧. ಮೈಸೂರು ಪ್ರಾಚ್ಯ ಕೋಶಾಗಾರಕ್ಕೆ ಸೇರಿದ ಕೆ.ಎ.೨೯೭ ಪ್ರತಿ. ಇದು ಮೇಲೆ ಹೇಳಿರುವ 'ಖ' ಪ್ರತಿಯ ನಕಲು ಪ್ರತಿ. ಮೂಲ ಮಾತೃಕೆಯೇ ದೊರೆತಿರುವುದರಿಂದ ಅದರ ಈ ನಕಲನ್ನು ಸಂಪಾದನಾಕಾರ್ಯಕ್ಕೆ ಉಪಯೋಗಿಸಿಲ್ಲ.

೨. ಪಂಡಿತ ಕೆ. ಭುಜಬಲಿ ಶಾಸ್ತ್ರಿಯವರು ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥಸೂಚೀ (ಭಾರತೀಯ ಜ್ಞಾನಪೀಠ -೧೯೪೭) ಸಿದ್ಧಪಡಿಸಿದ್ದಾರೆ. ಇದು ದೇವನಾಗರಿ ಲಿಪಿಯಲ್ಲಿದೆ. ಇದರಲ್ಲಿ ವಡ್ಡಾರಾಧನೆಯ ಮೂರು ಹಸ್ತಪ್ರತಿಗಳ ವಿವರಣೆಗಳಿವೆ. ಈ ಮೂವರಲ್ಲಿ ಎರಡು ತಾಳೆ ಗರಿಯವು ಮತ್ತು ಒಂದು ಕಾಗದದ ಪ್ರತಿ. ಇವುಗಳಲ್ಲಿ ಗ್ರಂಥ ನಂ. (೩೭) ೩೦೯-ಪುಟ-೧೬೨ ಎಂಬುದೇ ವಡ್ಡಾರಾಧನೆಯ ಸಂಪಾದನೆಗೆ ಬಳಸಿಕೊಂಡಿರುವ 'ಖ' ಪ್ರತಿ. 'ಖ' ಪ್ರತಿಯ ಪತ್ರಸಂಖ್ಯೆ, ಪಂಕ್ತಿ ಸಂಖ್ಯೆ, ಅಕ್ಷರಸಂಖ್ಯೆ ಇವನ್ನು ಆ ಪ್ರತಿ ಸಿಕ್ಕಾಗ ಗುರುತು ಹಾಕಿಕೊಳ್ಳಲಿಲ್ಲವಾಗಿ ಆ ವಿವರಗಳನ್ನು ಹೇಳಲಾಗುತ್ತಿಲ್ಲವೆಂದಿದ್ದಾರೆ. ಆದರೆ ಪಂಡಿತ ಕೆ. ಭುಜಬಲಿ ಶಾಸ್ತ್ರಿಯವರು ಆ ವಿವರಗಳನ್ನು ಕೊಟ್ಟಿದ್ದಾರೆ. ಮುಂದಿನ ಸಂಶೋಧಕರಿಗೆ ನೆರವಾಗಲೆಂದು ನಾನಿಲ್ಲಿ ಆ ವಿವರಗಳನ್ನು ಒದಗಿಸುತ್ತಿದ್ದೇನೆ. ಕೆ. ಭುಜಬಲಿ ಶಾಸ್ತ್ರಿ; ಕನ್ನಡ ಪ್ರಾಂತೀಯ ತಾಡಪತ್ರಿಯ ಗ್ರಂಥಸೂಚಿ (೧೯೪೭) ಪುಟ -೧೬೨; ಗ್ರಂಥ ನಂ, (೩೭) ೩೦೯; ವಡ್ಡಾರಾಧನಾ : ಆಚಾರ್ಯ ಶಿವಕೋಟಿ; ಪತ್ರಸಂಖ್ಯೆ ೬೬, ಪಂಕ್ತಿ ಪ್ರತಿ ಪತ್ರ ೧೦; ಅಕ್ಷರ ಪ್ರತಿ ಪಂಕ್ತಿ ೮೪; ಲಿಪಿ ಕನ್ನಡ; ವಿಷಯ ಕಥಾ; ಲೇಖನ ಕಾಲ್ಮ ೧೩೨೫; ಪೂರ್ಣ

ಮತ್ತು ಸಾಮಾನ್ಯ ಶುದ್ಧ; ದಶಾ ಜೀರ್ಣ ; ವಿಶೇಷ ಶಾ. ಶಕ ೧೩೨೫ ಸುಭಾನು ಸಂವತ್ಸರ ಕಾರ್ತೀಕ ಕೃಷ್ಣ ಅಮಾವಾಸ್ಯಾ ಬುಧವಾರ ದಿನ ಕಲ್ಲಪ್ಪಶೆಟ್ಟಿ ಇದನ್ನು ಬರೆದವನು.

೩. ಅದೇ ಪುಟ ೨೩೬; ಗ್ರಂಥ ನಂ. (೧೫) ೬೫: ವಡ್ಡಾರಾಧನಾ ಕಥಾ: ಆಚಾರ್ಯ ಶಿವಕೋಟಿ: ಪತ್ರ ಸಂಖ್ಯೆ ೨೭; ಪಂಕ್ತಿ -ಪ್ರತಿ ಪತ್ರ ೧೮; ಅಕ್ಷರ-ಪ್ರತಿಪಂಕ್ತಿ-೧೬;ಲಿಪಿ-ಕನ್ನಡ; ಭಾಷೆ -ಕನ್ನಡ; ವಿಷಯ ಕಥಾ ; ವಸ್ತು-ಕಾಗದ; ಲೇಖನ ಕಾಲ XXX; ಅಪೂರ್ಣ ಮತ್ತು ಶುದ್ಧ; ದಶಾ -ಉತ್ತಮ (ಇದನ್ನು 'ಭ' ಪ್ರತಿಯೆಂದು ಕರೆಯಬಹುದು).

೪. ಧಾರವಾಡದ ಕರ್ನಾಟಕ ಸಂಶೋಧನ (KRI) ಒಂದು ಕಾಗದದ ಹಸ್ತಪ್ರತಿ ಇದೆ. ಇದರಲ್ಲಿಯೂ ಪ್ರಾರಂಭದಲ್ಲಿ ಸಂಸ್ಕೃತ ಶ್ಲೋಕವಿಲ್ಲ. ಪ್ರಾಕೃತ ಗಾಹೆಯಿದೆ. ನಾನು ಇದನ್ನು ನೋಡಿರುವುದರಿಂದ ಇದು ಕೊಲ್ಲಾಪುರ ಓಲೆಗರಿ ಹಸ್ತಪ್ರತಿಯಾದ ಜ ಪ್ರತಿಯ ಗುಂಪಿಗೆ ಸೇರುತ್ತದೆಂದು ಭಾವಿಸಿದ್ದೇನೆ. ಪ್ರಾಯಃ ಇದು ಜ ಪ್ರತಿಯದೇ ಒಂದು ಕಾಗದದ ಪ್ರತಿಯೆಂದು ಹೇಳಬಹುದು. (ಇದನ್ನು 'ಧ' ಪ್ರತಿಯೆಂದು ಕರೆಯಬಹುದು).

ಈ ನಾಲ್ಕು ಪ್ರತಿಗಳಲ್ಲದೆ ಇನ್ನೂ ಒಂದು ಓಲೆಗರಿ ಪ್ರತಿಯಿದೆ. ಅದೇ ಈಗ ನಾನು ಪ್ರಕೃತ ಗ್ರಂಥಸಂಪಾದನೆಗೆ ಉಪಯೋಗಿಸಿರುವ ಅಪೂರ್ವ ಹಸ್ತಪ್ರತಿ. ಅದರ ಆರಂಭ-ಅಂತ್ಯದ ಭಾಗಗಳು, ಅದರಲ್ಲಿಯೂ ಗ್ರಂಥಾಂತ್ಯದ ಭಾಗ ನಷ್ಟವಾಗಿರುವುದರಿಂದ ಕೆ. ಭುಜಬಲಿಶಾಸ್ತ್ರಿಗಳು ಕೊಟ್ಟಿರುವ ತಾಂತ್ರಿಕ ವಿವರಗಳನ್ನೇ ನಾನೂ ಪುನರುಚ್ಚರಿಸಬೇಕಾಗಿದೆ ಎಂದಿದ್ದಾರೆ ಹಂಪನಾ.

೫. ಅದೇ ಪುಟ ೧೬೧;ಗ್ರಂಥ ನಂ. (೩೬)೩೦೯; ವಡ್ಡಾರಾಧನಾ: ಆಚಾರ್ಯ ಶಿವಕೋಟಿ; ಪತ್ರಸಂಖ್ಯೆ -೪೬; ಪಂಕ್ತಿ- ಪ್ರತಿಪತ್ರ ೧೦; ಅಕ್ಷರ ಪ್ರತಿ ಪಂಕ್ತಿ ೨೪೫; ಲಿಪಿ ಕನ್ನಡ ; ವಿಷಯ-ಕಥಾ; ಲೇಖನಕಾಲ X X X ; ಅಪೂರ್ಣ ಮತ್ತು ಸಾಮಾನ್ಯ ಶುದ್ಧ; ದಶಾ - ಉತ್ತಮ."

ಈ ಹೊಸ ಪ್ರತಿಯು 'ಮ'. ಹಂಪನಾ ಅವರು ಇದನ್ನೇ ಬಳಸಿದ್ದಾರೆ. 'ಮ' ಪ್ರತಿಯ ಸ್ವಭಾವದ ಬಗ್ಗೆ ಅವರು ಕೆಲವು ಮಾತುಗಳನ್ನು ಹೇಳಿದ್ದಾರೆ.

ಆಗಲೇ ಮುದ್ರಿತವಾಗಿರುವ ಡಿ.ಎಲ್.ಎನ್. ಕೃತಿಗೂ ತಮ್ಮ ಕೃತಿಗೂ ಇರುವ ವ್ಯತ್ಯಾಸಗಳನ್ನು ಸ್ಪಷ್ಟಪಡಿಸುವ ದೃಷ್ಟಿಯಿಂದ ಹಂಪನಾ ಎರಡೂ ಕೃತಿಗಳ ಕೆಲವು ಪಾಠಗಳನ್ನು ಪಟ್ಟಿಮಾಡಿಕೊಟ್ಟಿದ್ದಾರೆ. ಉದಾ :

ಮುದ್ರಿತ ಪ್ರತಿಯ ಸರ್ವಪ್ರತಿ ಪಾಠ	**ಹೊಸ ಪ್ರತಿಯ ಪಾಠ**
೧. ಕಣ್ಣೀರ್ಗ್ಗಳಂ ಸೂಸಿ	೧. ಕಣ್ಣ ನೀರ್ಗಳಂ ಸೂಸಿ
೨. ಕುಷ್ಠಮಾಗಿ	೨. ಕೋಷ್ಠಮಾಗಿ
೩.ಬಂದಿರ್ದರಂದಿನ ದಿವಸಂ	೩. ಬಂದಿರ್ದರನ್ನೆಗಂ ಅಂದಿನ ದಿವಸಂ
೪. ಮಾನಗರ್ವದಿಂದ	೪. ಮಾನದಿಂದ
೫. ಯಾವಜ್ಜೀವಂ	೫. ಜಾವಜ್ಜೀವಂ
೬. ಬೆರಲಿಂದ ಮುರ್ಚಿ	೬. ಬೆರಲಿಂ ಜಗುಲ್ಚು..... ಇತ್ಯಾದಿ

'ಮ' ಪ್ರತಿಯು ಪ್ರಾಕೃತ ಗಾಹೆ ಮತ್ತು ಸಂಸ್ಕೃತ ಶ್ಲೋಕಗಳಲ್ಲಿ ಪಾಠಾಂತರ ಪಾಠಭೇದ ಹಾಗೂ ಪೂರ್ವದ ಹಳಗನ್ನಡದ ಭಾಷಿಕ ಲಕ್ಷಣ ಹೊಂದಿರುವುದನ್ನು ಹಂಪನಾ ಗುರುತಿಸಿದ್ದಾರೆ. ತಾವು ಬಳಸಿದ ಪ್ರತಿಯು ತುಂಬ ಪ್ರಾಚೀನವಾದುದೆಂದೂ, ಮೂಲಕ್ಕೆ ಸಮೀಪದ್ದೆಂದೂ ಹೇಳಿದ್ದಾರೆ. ಅದರ ಕಾಲ ಕ್ರಿ.ಶ. ೧೫೦೦ ಎಂದು ಊಹಿಸಿದ್ದಾರೆ. ಆ ಪ್ರತಿಯ ಮಿತಿಗಳನ್ನೂ ತಿಳಿಸಿದ್ದಾರೆ.

ಕೃತಿಯ ಗ್ರಂಥಾಂತ್ಯದಲ್ಲಿ ಬಂದಿರುವ ಪ್ರಾಕೃತ ಗಾಹೆಗಳ ವಿಷಯದಲ್ಲಿ ಹೊಸ ವಿಚಾರಗಳನ್ನು ತಿಳಿಸಿದ್ದಾರೆ. ಡಿ.ಎಲ್.ಎನ್. ತಾವು ಬಳಸಿರುವ 'ಘ' ಪ್ರತಿಯಲ್ಲಿ ಮೂರು ಪ್ರಾಕೃತ ಗಾಹೆಗಳು ಬಂದಿರುವುದಾಗಿ ತಿಳಿಸಿ ಅವನ್ನು ಮೂಲಪಾಠದೊಂದಿಗೆ ಸೇರಿಸದೆ ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ. (ನೋಡಿ-ಡಿಎಲ್‌ಎನ್ ವಡ್ಡಾರಾಧನೆ- ಪು. ೧೯೪). ಆದರೆ ಈ ಗಾಹೆಗಳೂ ಕೃತಿಯ ಪಾಠದಲ್ಲಿಯೇ ಸೇರಬೇಕೆಂಬುದು ಹಂಪನಾ ಅವರ ವಾದ. "ಕನ್ನಡ ಕಥಾಕೋಶಕಾರನಾದ ಭ್ರಾಜಿಷ್ಣುವು ಅವಲಂಬಿಸಿರುವ ಮೂಲ ಆಕರವಾದ ಆರಾಧನಾ (ಮೂಲಾರಾಧನೆ/ಭಗವತೀ ಆರಾಧನೆ) ಗ್ರಂಥದಲ್ಲಿ, ಇಲ್ಲಿನ ಹತ್ತೊಂಬತ್ತು ಕಥೆಗಳ ಗಾಹೆಗಳು ಮುಗಿದೊಡನೆಯೇ (೧೯ನೆಯ ಕಥೆಯಾದ ವೃಷಭಸೇನ ಮುನಿಯ ಕಥೆಯಾದ ಕೂಡಲೇ) ಈ ಮೂರು ಗಾಹೆಗಳು ಬರುತ್ತವೆ. ಇವು ಶಿವಕೋಟ್ಯಾಚಾರ್ಯರ್ ಈ ಪೇಟ್ಲಿ ಪತ್ತೊಂಬತ್ತು ಕಥೆಗಳ ಅವಿಭಾಜ್ಯ ಅಂಗವಾಗಿ, ಒಂದು ಚಿಂತನೆಯ ಮುಂದುವರಿಕೆಯಾಗಿ ಬಂದಿರುವ ಗಾಹೆಗಳು. ಇವು ನಿರ್ಯಾಪಕಾಚಾರ್ಯರ ಉಪದೇಶದ ಭಾಗವಾಗಿಯೇ ಬಂದಿರುವ ಗಾಹೆಗಳು. ಈ ಸಂಖ್ಯೆ ಮೂಲಾರಾಧನೆಯಲ್ಲಿ ೧೫೫೩, ೧೫೫೪, ೧೫೫೫ ಪುಟ ೭೭೫, ೧೯೯೦. ಇವುಗಳ ಹಿಂದಿನ ಗಾಹೆಗಳ ಸಂಖ್ಯೆ ೧೫೩೪ ರಿಂದ ೧೫೫೨ ರ ವರೆಗೆ ಎಂದು ಹೇಳಿ ಸರಿಯಾದ ಸ್ಥಾನಗಳಲ್ಲಿ ಗಾಹೆಗಳನ್ನು ಹಂಪನಾ ಜೋಡಿಸಿಟ್ಟಿದ್ದಾರೆ. ಭ್ರಾಜಿಷ್ಣು ಆಧರಿಸಿದ ಮೂಲ ಆಕರವಾದ ಆರಾಧನಾ ಗ್ರಂಥದಲ್ಲಿ ಬಂದಿರುವ ಗಾಹೆಗಳ ಕ್ರಮಸಂಖ್ಯೆಯ ದೃಷ್ಟಿಯಿಂದ ಮತ್ತು ಕವಿಯು ಅವುಗಳನ್ನು ಅಲ್ಲಿ ಬೆಸೆದಿರುವ ಉದ್ದೇಶದ ದೃಷ್ಟಿಯಿಂದ ನೋಡಿದಾಗ ಹಂಪನಾ ನಿಲುವು ಸಮರ್ಥನೀಯವೆನ್ನಿಸುತ್ತದೆ. ಹಾಗೆಯೇ ಡಿ.ಎಲ್.ಎನ್. ಅವರಲ್ಲಿ ಅಶುದ್ಧವಾಗಿ ಬಂದಿದ್ದ ಗಾಹೆಗಳ ಶುದ್ಧ ಪಾಠಗಳು ಹಂಪನಾ ಸಂಪಾದನೆಯಲ್ಲಿ ಬಂದಿರುವುದು ವಿಶೇಷವಾಗಿದೆ.

ಹೋಲಿಕೆಯ ದೃಷ್ಟಿಯಿಂದ ಮತ್ತು ಓದುಗರ ಕುತೂಹಲದ ದೃಷ್ಟಿಯಿಂದ ಆ ಮೂರೂ ಪ್ರಾಕೃತ ಗಾಹೆಗಳನ್ನು ಇಲ್ಲಿ ಕೊಡಲಾಗಿದೆ.

ಡಿ.ಎಲ್.ಎನ್. ಪಾಠಗಳು

ಗಾಹೆ ॥ ಜದಿತಾ ಏವಂ ಏದೇ ಅವಗಾರಾ ತಿಬ್ಬ ವೇದಣ ವೋ ಪಿ ।
ಏಕಾಏಯ ಪಡಿಕಮ್ಮಾ ಪಡಿವಣ್ಣೋ ಉತ್ತಮ ಅಟ್ಠಂ ॥

ಕಿಂಪುಣ ಅಣಗಾರ ಸಹಾಯ ಗೇಣ ಕಿರದರ ಗಹಿ ಪಡಿಕಮ್ಮೇ ।
ಸಂಘೇ ಓ ಆಂಗತು ಆರಾದವೇ ದುಣ್ಣ ಸಕ್ಕಂಟಿ ॥

ಜಿಣವಯಣ ಮರುದ ಭೂದಂದು ತಚ್ಛಣ್ಣಾಹುದಿಂ ಸುಣು।
ತೇಣ ಸಕ್ಕುಸಪ ..... ಮಝ್ಝ್ಳೀ ಸೋದೇದುಂ ಉತ್ತಮ ಆಟ್ಠಂ ॥

ಹಂಪನಾ ಪಾಠಗಳು'

ಜದಿದಾಂ ಏವಂ ಏದೇ ಅಣಗಾರಾ ತಿವ್ವ ವೇದಣಟ್ಟಾವಿ
ಏಕಾರಿಯ ಪಡಿಕಮ್ಮಾ ಪಡಿವಣ್ಣೋ ಉತ್ತಮಂ ಅಟ್ಠಂ ॥
ಕಿಂಪುಣ ಅಣಯಾರ ಸಹಾಯ ಗೇಣ ಕೀರಂತಂಕಹೇ ಪಡಿಕಮ್ಮೇ।
ಸಂಘೇ ಓಲಗ್ಗಂತಂ ಆರಾಧೇದುಂಣ ಸಕ್ಕೇಜ್ಜ॥

ಜಿಣವಯಣಮಮಿದ ಭೂದಂ ಮಹುರಂ ಕಣಾಹುದಿಂಸುಣಂತೇಣ
ಸಕ್ಕಾಹು ಸಂಘ ಮಝ್ಝ್ಳೀ ಸಾಹೇದುಂ ಉತ್ತಮಂ ಅಟ್ಠಂ ॥

ಡಿ.ಎಲ್.ಎನ್. ತಾವು ಬಳಸಿದ ಏಳು ಓಲೆ ಪ್ರತಿಗಳ ಪರಸ್ಪರ ಸಂಬಂಧವನ್ನು ಸೂಚಿಸಿರುವುದರ ಬಗ್ಗೆ ಚರ್ಚಿಸುತ್ತ ಹಂಪನಾ ಅವರು ತಮಗೆ ದೊರೆತ ಹೊಸ ಪ್ರತಿ 'ಮ'ದ ಪರಿಶೀಲನೆಯ ಆಧಾರದ ಮೇಲೆ ಬೇರೊಂದು ರೀತಿಯಲ್ಲಿ ಹಸ್ತಪ್ರತಿ ಸಂಬಂಧವನ್ನು ಗುರುತಿಸಿದ್ದಾರೆ.

ಡಿ.ಎಲ್.ಎನ್. ಹರಿಷೇಣನ ಬೃಹತ್ಕಥಾಕೋಶದ ಕಥೆಗಳ ಸಾರಾಂಶವನ್ನು ಕೊಟ್ಟಿದ್ದಾರೆ. (ಪು-೨೬೦-೨೮೩). ಹಂಪನಾ ಅವರು ಆರಾಧನಾ ಗ್ರಂಥದ ಕುರಿತಾದ ಉಪಯುಕ್ತ ವಿವರಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ.ಅನೇಕ ಜೈನ ತಾತ್ವಿಕ ಮತ್ತು ಪಾರಿಭಾಷಿಕ ವಿಚಾರಗಳು ಇಲ್ಲಿ ಬಂದಿವೆ (ಪುಟ ೨೩-೩೩). ಅವರು ಕೊಟ್ಟಿರುವ ವಿವರಗಳನ್ನು ಇಲ್ಲಿ ಒದಗಿಸುವುದು ಅಗತ್ಯವಾಗಿದೆ. ಆರಾಧನಾ ಗ್ರಂಥದ ಬಗ್ಗೆ ಹಾಗೂ ಗಾಹೆಗಳ ಬಗ್ಗೆ ತಿಳಿಸುತ್ತ "ಆರಾಧನಾ ಗ್ರಂಥವು ಜೈನಾಗಮ ಕೃತಿಶ್ರೇಣಿಗೆ ಕಥೆಗಳ ಕವಚವನ್ನು ತೊಡಿಸಿರುವ ಮಾಣಿಕ್ಯಕೋಶ. ಇದು ಜೈನ ಧರ್ಮದ ಉತ್ಕೃಷ್ಟ ಕೈಪಿಡಿ, ವಸ್ತುಕೋಶ, ಇದು ಸಾವಿರಾರು ವರ್ಷಗಳ ಪರಂಪರೆಯಿಂದ ಮೌಖಿಕವಾಗಿ ಗುರುವಿನಿಂದ ಶಿಷ್ಯಪರಂಪರೆಗೆ ತಲೆಮಾರಿನಿಂದ ತಲೆಮಾರಿಗೆ ಉಳಿದು ಬಂದ ಜಿನವಾಣಿ. ಸೈದ್ಧಾಂತಿಕ ಸಂಗತಿಯೊಂದಿಗೆ ಆಯಾ ತತ್ತ್ವಗಳನ್ನು ತಿಳಿಯಾಗಿ ಸುಬೋಧವಾಗುವಂತೆ ದೃಷ್ಟಾಂತ ಕಥೆಗಳನ್ನು ನಿರೂಪಿಸಲಾಗಿದೆಯೆಂಬುದು ಈ ಆರಾಧನಾ ಗ್ರಂಥ ಹಿರಿಮೆ, ... ಆರಾಧನಾದಲ್ಲಿರುವ ಗಾಹೆಗಳಲ್ಲಿ ಒಂದು ಸಂಯೋಜನೆಯಿದೆ. ಜೈನ ಪರಂಪರೆಯಲ್ಲಿ ಪ್ರಚಲಿತವಿದ್ದ ಐತಿಹ್ಯಗಳನ್ನು ಕಥೆ, ಆಖ್ಯಾನ, ಉಪಾಖ್ಯಾನಗಳನ್ನು, ಅದರ ಹೊರಮೈ ವಿವರಗಳನ್ನು, ವರ್ಣನೆ-ವಿಸ್ತಾರಗಳನ್ನು ಎರಡು ಸಾಲಿಗಿಳಿಸಿ ಸಂಕೇತೀಕರಣಗೊಳಿಸಲಾಗಿದೆ" ಎಂಬ ಉಪಯುಕ್ತವಾದ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ.

ನಾವು ಹಂಪನಾ ಸಂಪಾದನೆಯಲ್ಲಿ ತಪ್ಪದೆ ಗುರುತಿಸಬೇಕಾದ ಇನ್ನೊಂದು ಸಂಗತಿಯಿದೆ. ಆರಾಧನಾದ ಬಗ್ಗೆ ಸಂಸ್ಕೃತದಲ್ಲಿ ಬಂದಿರುವ ವ್ಯಾಖ್ಯಾನ ಗ್ರಂಥಗಳನ್ನೂ ಅವರು ಗುರುತಿಸಿದ್ದಾರೆ. ಅಲ್ಲದೆ ಆರಾಧನಾದ ಆವೃತ್ತಿಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿಕೊಟ್ಟಿದ್ದಾರೆ. ಇವೆಲ್ಲ ಆರಾಧನಾ ಕರ್ಣಾಟ ಟೀಕಾದ ಓದಿಗೆ ಹಿನ್ನೆಲೆಯಾಗಿ

ನಿಲ್ಲಬಲ್ಲ ಉಪಯುಕ್ತ ವಿಚಾರಗಳಾಗಿದ್ದು ಇಲ್ಲೆಲ್ಲ ಹಂಪನಾ ಅವರ ವ್ಯಾಪಕ ಅಧ್ಯಯನದ ಛಾಪು ಒಡೆದು ಕಾಣುತ್ತದೆ. ಕವಿ ಭ್ರಾಜಿಷ್ಣುವಿನ ಚರಿತ್ರೆಯನ್ನು ಕಟ್ಟಿಕೊಡಲು ಹಂಪನಾ ಅವರು ಮಾಡಿದ ಪ್ರಯತ್ನ ಶ್ಲಾಘನೀಯವಾಗಿದೆ. (ಪುಟ ೩೪-೪೬) ಚರ್ಚೆಯ ಆರಂಭದಲ್ಲಿ 'ಆರಾಧನಾ ಕರ್ನಾಟಕ ಟೀಕಾ'ದ ಕರ್ತೃ ಭ್ರಾಜಿಷ್ಣು ಎಂಬುದನ್ನು ಹಂಪನಾ ಮತ್ತೊಮ್ಮೆ ಪ್ರಮಾಣೀಕರಿಸಿದ್ದಾರೆ.

ಭ್ರಾಜಿಷ್ಣು ಎಂಬುದು ಜೈನರ ಆದಿತೀರ್ಥಂಕರನಾದ ವೃಷಭನಾಥನ ಹೆಸರುಗಳಲ್ಲಿ ಒಂದು ಎಂಬುದನ್ನು ಹಂಪನಾ ಗುರುತಿಸಿದ್ದಾರೆ. ಪುಣ್ಯಾಸ್ರವ ಕಥಾಕೋಶ' (ಸಂಸ್ಕೃತ) ಕೃತಿಯ ಕರ್ತೃ ರಾಮಚಂದ್ರಮುನಿಯು ಭ್ರಾಜಿಷ್ಣುವನ್ನು ನಮ್ಮ ಕಣ್ಣ ಮುಂದೆ ತಂದು ನಿಲ್ಲಿಸಿದವನೆಂಬುದನ್ನು ಅವರು ಆಧಾರಸಮೇತವಾಗಿ ಸಾಧಿಸಿದ್ದಾರೆ. ವಡ್ಡಾರಾಧನೆಯ ಮೂಲ ಮತ್ತು ಕರ್ತೃವಿನ ಕುರಿತಾಗಿ ಚರ್ಚಿಸಿದ ಡಾ. ಕಲಬುರ್ಗಿ ಅವರು ಡಿ.ಎಲ್.ಎನ್. ಮತ್ತು ಡಾ ಉಪಾಧ್ಯೆ ಅವರ ಅಭಿಪ್ರಾಯಗಳನ್ನು ವಿಮರ್ಶಿಸಿ ಸರಿಯಾದ ನಿರ್ಧಾರಕ್ಕೆ ಬಂದಿರುವುದನ್ನು ಹಂಪನಾ ಅವರು ತಪ್ಪದೆ ಗುರುತಿಸಿರುವುದು ವಿಶೇಷವಾಗಿದೆ. ಇದು ಪ್ರಾಮಾಣಿಕ ಸಂಶೋಧಕನ ಗುಣಲಕ್ಷಣ. "ಇನ್ನು ಮುಂದೆ ಕನ್ನಡ ಕೃತಿಯ ಹೆಸರು ವಡ್ಡಾರಾಧನೆಯಲ್ಲ. 'ಆರಾಧನಾ ಕರ್ಣಾಟ ಟೀಕೆ' ಎಂದೂ ಕರ್ತೃವಿನ ಹೆಸರು ಶಿವಕೋಟ್ಯಾಚಾರ್ಯನಲ್ಲ ಭ್ರಾಜಿಷ್ಣು ಎಂದೂ ಕರೆಯಬೇಕೆನಿಸುತ್ತದೆ" ಎಂಬ ಕಲಬುರ್ಗಿಯವರ ಅಭಿಪ್ರಾಯವು ಹಂಪನಾ ಅವರನ್ನು ನಿಜದ ನೆಲೆಗೆ ಕರೆದೊಯ್ದಿದೆ ಎನ್ನಬಹುದು. ಕಲಬುರ್ಗಿ ಅವರ ಅಭಿಪ್ರಾಯದಲ್ಲಿದ್ದ ಅನುಮಾನವನ್ನು ಪರಿಹರಿಸಿ ಕೃತಿಯ ಹೆಸರು 'ಆರಾಧನಾ ಕರ್ಣಾಟ ಟೀಕಾ' ಎಂದೂ, ಅದರ ಕರ್ತೃ ಭ್ರಾಜಿಷ್ಣು ಎಂದೂ ಅವರು ಆಧಾರಸಹಿತವಾಗಿ ಸ್ಥಿರೀಕರಿಸಿದ್ದಾರೆ. ವಾಸ್ತವವಾಗಿ ಇದು ಡಿ.ಎಲ್.ಎನ್., ಉಪಾಧ್ಯೆ, ಹಂಪನಾ ಅವರ ನಿರಂತರ ಪ್ರಯತ್ನದ ಫಲವೆನ್ನಬಹುದು. ಜೊತೆಗೆ ಡಾ. ಕಲಬುರ್ಗಿ, ಡಾ. ಸೀತಾರಾಮ ಜಾಗೀರದಾರ್, ಡಾ. ಎಂ.ಬಿ. ನೇಗಿನಹಾಳ ಮೊದಲಾದ ವಿದ್ವಾಂಸರ ಮಹತ್ವದ ಅಧ್ಯಯನಗಳೂ ಈ ಕೊಡುಗೆಗೆ ಸಾಧಕಗಳಾಗಿವೆ.

ಭ್ರಾಜಿಷ್ಣುವಿನ ಕಾಲ ನಿರ್ಣಯದ ಬಗ್ಗೆ ಹಂಪನಾ ಅವರು ಮಾಡಿದ ಚರ್ಚೆ ಮಹತ್ವದ್ದಾಗಿದೆ. ವಡ್ಡಾರಾಧನೆಯಲ್ಲಿರುವ ಉದ್ಧೃತ ಪದ್ಯಗಳ ಮೂಲ ಆಕರಗಳನ್ನು ಶೋಧಿಸಿ, 'ಅದೌ ಜನ್ಮಜರಾರೋಗ' ಎಂಬ ಶ್ಲೋಕವು ೮೯೮ರ ಗುಣಭದ್ರಾಚಾರ್ಯರ ಉತ್ತರಪುರಾಣದಲ್ಲಿರುವುದನ್ನಾಧರಿಸಿ ಈ ಕೃತಿಯ ಕಾಲ ೧೧ನೆಯ ಶತಮಾನ ಎಂದು ಉಪಾಧ್ಯೆಯವರು ತಿಳಿಸಿದ್ದರು. ಕೃತಿಯ ಕಾಲ ಪಂಪಭಾರತಕ್ಕಿಂತ ಹಿಂದಿನದೆಂದೂ, ಕ್ರಿ.ಶ. ೯೨೦ ಇರಬಹುದು ಎಂದು ಡಿ.ಎಲ್.ಎನ್. ಭಾವಿಸಿದ್ದರು. ಡಾ. ಎಂ.ಬಿ. ನೇಗಿನಹಾಳ ಅವರು ಕ್ರಿ.ಶ. ೮೦೦ ಎಂದು ವಾದಿಸಿದ್ದರು. ಅವರ ಅಭಿಪ್ರಾಯಗಳನ್ನು ವಿಮರ್ಶಿಸಿ, ಕೃತಿಯ ಭಾಷೆಯ ಆಧಾರದಿಂದ ಸುಮಾರು ಕ್ರಿ.ಶ. ೮೦೦-೮೭೦ಇದರ ಕಾಲವಾಗಿರಬಹುದೆಂದು ಹಂಪನಾ ತಿಳಿಸಿದ್ದಾರೆ.

ಭ್ರಾಜಿಷ್ಣುವು ದಕ್ಷಿಣ ಕನ್ನಡ ಜಿಲ್ಲೆಯವನಾಗಿರಬೇಕೆಂಬ ಕುಂದಣಗಾರರ ವಾದವನ್ನು, ಕೋಗಳಿ(ಜಿ-ಬಳ್ಳಾರಿ)ಯವನಾಗಿರಬೇಕೆಂಬ ಡಿ.ಎಲ್.ಎನ್. ವಾದವನ್ನೂ ತಳ್ಳಿ ಹಾಕಿದ ಹಂಪನಾ ಅವರು ಕವಿಯು ಗುಲಬರ್ಗಾ ಬೀದರ್ ಪ್ರದೇಶದವನೆಂದು ಸಾಧಿಸಲು ಪ್ರಯತ್ನಿಸಿದ್ದಾರೆ. ಬೇರೆ ಬೇರೆ ಕಥೆಗಳಲ್ಲಿ ಪಳ್ಳಿಖೇಡ, ಮಳಯಖೇಡ, ವೆಂಣಾನದಿ, ವೇಣಾತಟಾಕ ಮೊದಲಾದ ರಾಷ್ಟ್ರಕೂಟ ಪರಿಸರದ ಗ್ರಾಮ ನದಿಗಳನ್ನು ಭ್ರಾಜಿಷ್ಣು ಹೆಸರಿಸಿರುವುದನ್ನಾಧರಿಸಿ (ಈ ಹೆಸರುಗಳು ಮೂಲದಲ್ಲಿರದೆ ಭ್ರಾಜಿಷ್ಣುವಿನಲ್ಲಿ ಮಾತ್ರ ಬಂದಿವೆ) ಅವನು ಗುಲಬರ್ಗಾ-ಬೀದರ್ ಪ್ರದೇಶದವನಾಗಿರಬೇಕೆಂದು ಹಂಪನಾ ಸರಿಯಾಗಿಯೇ ಊಹಿಸಿದ್ದಾರೆ. ಕವಿಯು ರಾಷ್ಟ್ರಕೂಟರ ಆಳ್ವಿಕೆಯಲ್ಲಿದ್ದವನೆಂದೂ ಕ್ರಿ.ಶ. ೮೦೦-೮೭೦ರ ಅವಧಿಯಲ್ಲಿ ಈ ಕೃತಿಯನ್ನು ರಚಿಸಿರಬಹುದೆಂದೂ ಹಂಪನಾ ಅವರು ತಿಳಿಸಿರುವುದು ಸತರ್ಕವಾಗಿದೆ. ದೊರೆತಿರುವ ಆರಾಧನಾ ಗ್ರಂಥದ ಟೀಕೆಗಳಲ್ಲಿ ಪ್ರಾಚೀನವೆಂದು ಭಾವಿಸಲಾಗಿದ್ದ ಅಪರಾಜಿತ ಸೂರಿಯ 'ವಿಜಯೋದಯ' (ಕಾಲ ಸುಮಾರು ೯-೧೦ನೆಯ ಶತಮಾನದ ಪೂರ್ವಾರ್ಧ)ಕ್ಕಿಂತ ೯ನೆಯ ಶತಮಾನದ ಭ್ರಾಜಿಷ್ಣುವಿನ ಕನ್ನಡ ಟೀಕೆಯೇ ಪ್ರಾಚೀನವಾದುದು ಎಂಬ ವಿಶೇಷಾಂಶವನ್ನೂ ಹಂಪನಾ ಅವರು ಗುರುತಿಸಿದ್ದಾರೆ.

ಬೃಹತ್ ಪ್ರಮಾಣದಲ್ಲಿದ್ದ ಆರಾಧನಾ ಕರ್ನಾಟಕ ಟೀಕಾ ಗ್ರಂಥದಿಂದ ಈಗಿರುವ ೧೯ ಕತೆಗಳನ್ನಷ್ಟೇ ಏಕೆ ಆಯ್ದುಕೊಂಡರು ? ಯಾರು? ಯಾವಾಗ ? ಎಂಬ ಪ್ರಶ್ನೆಗಳಿಗೂ ಹಂಪನಾ ಅವರು ಕೊಟ್ಟಿರುವ ಉತ್ತರ ಸಮಾಧಾನಕಾರಿಯಾಗಿದೆ.

೧೧-೧೨ನೆಯ ಶತಮಾನದ ಸುಮಾರಿಗೆ ರಾಷ್ಟ್ರಕೂಟರ ಕುಸಿತ, ಉತ್ತರ ಶೈವ ಮತ್ತು ಇತರ ಸಮಯಗಳ ಪ್ರಾಬಲ್ಯದ ಪರಿಣಾಮವಾಗಿ ಜೈನ ಧರ್ಮ ವಿಘಟನೆಯಾಗತೊಡಗಿತು. ಆ ಸಂದರ್ಭದಲ್ಲಿ ಜೈನ ಗೃಹಸ್ಥರಿಗೂ, ಗುರುಗಳಿಗೂ ಆತ್ಮಸ್ಥೈರ್ಯ ತುಂಬುವುದು ಅನಿವಾರ್ಯವಾಗಿತ್ತು. ಘೋರ ವಿಪತ್ತು ಒದಗಿದಾಗಲೂ ಧರ್ಮವನ್ನು ಬಿಡಲಾರದೆ ಬದುಕಿದ ಗಟ್ಟಿಗರ ದೃಷ್ಟಾಂತಗಳನ್ನು ಮುಂದಿಟ್ಟು ಜನತೆಯನ್ನು ಹುರಿದುಂಬಿಸಬೇಕಾಗಿತ್ತು. ಇದನ್ನು ಮನಗಂಡ ಜೈನ ಮುನಿಯೊಬ್ಬರು ೧೯ ಕಥೆಗಳನ್ನು ಮಾತ್ರ ಹೊರತೆಗೆದು ಹುರಿಗೊಳಿಸಿರಬೇಕು. ಅದು ಮುಂದೆ ನಾಡಿನಾದ್ಯಂತ ಪ್ರಸಾರ ಹೊಂದಿರಬೇಕು. ಈ ಕೆಲಸ ಮಾಡಿರುವ ಮುನಿಯೇ 'ಭ್ರಾಜಿಷ್ಣುವಿನ ಅಭಿಪ್ರಾಯದಲ್ಲಿ ಈ ಕಥೆಯನ್ನು ಹೇಳುತ್ತೇನೆ'* ಎಂದು ಹೇಳಿರಬೇಕು. ಈ ಕೆಲಸ ಸುಮಾರು ೧೨ನೆಯ ಶತಮಾನದಲ್ಲಿ ನಡೆದಿರಬೇಕು ಎಂಬ ಹಂಪನಾ ಅವರ ವಿಚಾರಗಳು ಕೃತಿರಚನೆಯ ಉದ್ದೇಶ, ಕಾಲ, ಮೊದಲಾದವುಗಳನ್ನು ಸಂಶಯಕ್ಕೆಡೆಯಿಲ್ಲದಂತೆ ಸ್ಪಷ್ಟಪಡಿಸುತ್ತವೆ. ಈ ವಿಚಾರಗಳ ಬಗ್ಗೆ ಇನ್ನಷ್ಟು ಸಂವಾದ ನಡೆಯಬೇಕು ಎಂದು ಹಂಪನಾ ಹೇಳಿರುವುದು ಉತ್ತಮ ಸಂಶೋಧಕನ ತೆರೆದ ಮನಸ್ಸಿನ ಪ್ರತೀಕವಾಗಿದೆ.

---

* ಪೂರ್ವೋಕ್ತವಾಗಿರುವ "ಮತ್ತೀ ಕಥೆಯಂ ಭ್ರಾಜಿಷ್ಣ್ವಾರಾಧನೆಯಭಿಪ್ರಾಯದೊಳ್ ಪೇೞ್ದುದು" ಎಂಬ ಹೇಳಿಕೆಯನ್ನು ಇಲ್ಲಿ ಹಂಪನಾ ಬೇರೆ ರೀತಿಯಲ್ಲಿ ಅರ್ಥೈಸಿದಂತೆ ತೋರುತ್ತದೆ.

ಆರಾಧನಾ ಕರ್ಣಾಟ ಟೀಕಾ ಸಾಹಿತ್ಯ ಸಂಪತ್ತು ಎಂಬ ಭಾಗದಲ್ಲಿ ಕವಿಯ ಭಾಷೆ, ಕಥನಕಲೆ, ಸಾಮಾಜಿಕ ಪ್ರಜ್ಞೆ, ಚಾರಿತ್ರಿಕ ಪ್ರಜ್ಞೆ ಮೊದಲಾದ ವಿಷಯಗಳನ್ನು ಉದಾಹರಣೆಗಳೊಂದಿಗೆ ವಿಶ್ಲೇಷಿಸಿದ್ದಾರೆ.

ಸಾಮಾನ್ಯ ನೋಟಕ್ಕೆ ಹಂಪನಾ ಆವೃತ್ತಿಯ ವಿಶೇಷವೇನೆಂಬುದು ಹೊಳೆಯಲಿಕ್ಕಿಲ್ಲ. ಸೂಕ್ಷ್ಮ ಓದಿಗೆ (Micro Level Reading) ಮಾತ್ರ ನಿಲುಕಬಹುದಾದ ಅನೇಕ ಹೊಸ ಅಂಶಗಳು ಅದರಲ್ಲಿವೆ. "ವಡ್ಡಾರಾಧನೆಯನ್ನು ಕುರಿತು ಇದುವರೆಗೆ ಸುಮಾರು ೫೨ ಲೇಖನಗಳು ಪ್ರಕಟವಾಗಿವೆ. ಅವುಗಳಲ್ಲಿ ಇಪ್ಪತ್ತು ಲೇಖನಗಳೂ ಮತ್ತು ಒಂದು ಮಹಾಪ್ರಬಂಧ ನನ್ನವು" ಎಂಬ ಹಂಪನಾ ಅವರ ಮಾತು ಗರ್ವದಿಂದ ಹೇಳಿರುವುದಲ್ಲ. ವಡ್ಡಾರಾಧನೆಯೊಂದಿಗಿನ ತಮ್ಮ ಆತ್ಮೀಯತೆ ಮತ್ತು ಅಧಿಕಾರದ ಬಗ್ಗೆ ಅರಿಕೆ ಮಾಡಿಕೊಳ್ಳಲು ಆ ಮಾತನ್ನು ಹೇಳಿದ್ದಾರೆ.

ಡ) ಓದುಗ ಕೇಂದ್ರಿತ ವಿಚಾರಗಳು :

ಒಂದು ಕೃತಿಯ ನಿಜವಾದ ಸಾರ್ಥಕತೆ ಅದು ಓದುಗರನ್ನು ತಲುಪುವದರಲ್ಲಿರುತ್ತದೆ. ಹಾಗೂ ಓದುಗರು ಆ ಕೃತಿಯ ಕುರಿತಾಗಿ ವ್ಯಕ್ತಪಡಿಸುವ ಅಭಿಪ್ರಾಯಗಳ ಆಳದಲ್ಲಿರುತ್ತದೆ. ಈ ದೃಷ್ಟಿಯಿಂದ ನೋಡಿದಾಗ ವಡ್ಡಾರಾಧನೆ ಎಂಬ ಹೆಸರಿನೊಂದಿಗೆ ತಾನು ವಿದ್ವಾಂಸರ ಕಣ್ಣಿಗೆ ಬಿದ್ದಾಗಿನಿಂದ ಹಿಡಿದು ಇಂದಿನ ಆರಾಧನಾ ಕರ್ಣಾಟ ಟೀಕಾ ಆಗುವವರೆಗೂ ಈ ಕೃತಿ ವಿದ್ವಾಂಸರನ್ನು ಮತ್ತು ಓದುಗರನ್ನು ಕೆಣಕುತ್ತ ಬಂದಿದೆ. ಇದು ಈ ಕೃತಿಯ ಮಹತ್ವಕ್ಕೆ ಸಾಕ್ಷಿ.

ಈ ಕೃತಿಯ ಕುರಿತಾಗಿ ಕೆ.ಬಿ. ಪಾಠಕ, ಆ.ನೇ. ಉಪಾಧ್ಯೆ, ಕೆ.ಜಿ. ಕುಂದಣಗಾರ, ಎಂ. ಗೋವಿಂದ ಪೈ ಮುಂತಾದವರು ಬೇರೆ ಬೇರೆ ದೃಷ್ಟಿಕೋನಗಳಿಂದ ಮಾಡಿದ ಬಿಡಿ ಬಿಡಿ ಚರ್ಚೆಗಳು ಸಾಕಷ್ಟಿವೆ. ಒಂದು ಅಂದಾಜಿನ ಪ್ರಕಾರ ಇದುವರೆಗೆ ಹಳೆಯ ವಡ್ಡಾರಾಧನೆಗೆ ಸಂಬಂಧಿಸಿ ಸುಮಾರು ೬೦ ರಷ್ಟು ಲೇಖನಗಳು ಪ್ರಕಟವಾಗಿವೆ. ೩ ಪಿಎಚ್.ಡಿ ಮಹಾಪ್ರಬಂಧಗಳು ಪ್ರಕಟವಾಗಿವೆ. ವಡ್ಡಾರಾಧನೆ ಸಂಬಂಧವಾದ ಕೃತಿಯ ವಿವರಗಳು ಇಲ್ಲಿವೆ." *

೧. ವಡ್ಡಾರಾಧನಾ ಕಥಾಲೋಕ :ಆರ್.ಎಲ್.. ಅನಂತರಾಮಯ್ಯ, ೧೯೭೦

೨. ವಡ್ಡಾರಾಧನೆ (ಪ್ರಚಾರೋಪನ್ಯಾಸ ಮಾಲೆ): ಹಂಪ ನಾಗರಾಜಯ್ಯ-೧೯೬೮

೩. ವಡ್ಡಾರಾಧನೆ (ಕವಿಕಾವ್ಯ ಪರಂಪರೆ) ವೀ. ಸೀತಾರಾಮಯ್ಯ -೧೯೭೭

೪. ವಡ್ಡಾರಾಧನೆಯ ಕಥಾಗುಚ್ಛ; ಎಸ್.ಬಿ. ತೋಟದ -೧೯೭೯

೫. ವಡ್ಡಾರಾಧನೆಯ ಕತೆಗಳು : ಕೆ. ನಾಗೇಂದ್ರಪ್ಪ -೧೯೬೩

೬. ವಡ್ಡಾರಾಧನೆಯ ಕಥೆಗಳು : ಬಿ. ಶಂಕರಭಟ್ಟ - ೧೯೫೮

೭. ವಡ್ಡಾರಾಧನೆಯಲ್ಲಿ ಸ್ತ್ರೀ : ಧವಳ ಶ್ರೀ -೧೯೬೯

---

* ಕೃಪೆ : ವಡ್ಡಾರಾಧನೆ : ಸಮಗ್ರ ಅಧ್ಯಯನ, ಹಂಪನಾ, ಪುಟ -೪೦೩

೮. ಶಿವಕೋಟ್ಯಾಚಾರ್ಯರ ವಡ್ಡಾರಾಧನೆ :ಟಿ. ಕೇಶವ ಭಟ್ಟ (ಗದ್ಯಾನುವಾದ ಸಹಿತ - ೧೯೭೬)

೯. ಶಿವಕೋಟ್ಯಾಚಾರ್ಯ ವಿರಚಿತ ವಡ್ಡಾರಾಢನೆ: ಡಿ.ಎಲ್. ನರಸಿಂಹಾಚಾರ್ (೬ನೆಯ ಮುದ್ರಣ) ೧೯೭೯

೧೦. ವಡ್ಡಾರಾಧನೆಯ ಕಥೆಗಳು : ಬಿ. ಶಂಕರಭಟ್ಟ ಮತ್ತು ಬಿ. ಮಹಾಬಲೇಶ್ವರ ಶರ್ಮ (೧೪ ಕಥೆಗಳು ಮಾತ್ರ) -೧೯೪೩

೧೧. ಸುಕುಮಾರಸ್ವಾಮಿ : ಬಿ.ಎಸ್. ಸ್ವಾಮಿ -೧೯೭೬

೧೨. A Descriptive Grammar of Vaddaradhane M. Litt Dissertation unpublished : Dr. K. Kushalappa Gowda

೧೩. Vaddaradhane - A study : Dr. B.K. Khadabadi- 1979

೧೪. ವಡ್ಡಾರಾಧನೆ : ಸಮಗ್ರ ಅಧ್ಯಯನ : ಹಂಪ ನಾಗರಾಜಯ್ಯ -೧೯೯೯

೧೫. ವಡ್ಡಾರಾಧನೆ :ಹಂ.ಪ. ನಾಗರಾಜಯ್ಯ, ೧೯೯೩

೧೬. ವಡ್ಡಾರಾಧನೆ : ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೧೭. ಇವೆಲ್ಲ ಅಂದು ವಡ್ಡಾರಾಧನೆಯಾಗಿದ್ದ, ಇಂದಿನ ಆರಾಧನಾ ಕರ್ಣಾಟ ಟೀಕಾ ಕೃತಿಗೆ (ಪರ್ಯಕ್ಕೆ) ಸಂಬಂಧಿಸಿದ ಕೃತಿಗಳೇ ಆಗಿವೆಯೆಂದು ಭಾವಿಸುವುದರಲ್ಲಿ ತಪ್ಪೇನಿಲ್ಲ. ಒಟ್ಟಾರೆ ಬಹುಚರ್ಚಿತ ಕನ್ನಡ ಕೃತಿಗಳಲ್ಲಿ 'ಆರಾಧನಾ ಕರ್ಣಾಟ ಟೀಕಾ' ಕೂಡ ಒಂದಾಗಿದೆಯೆಂಬುದರಲ್ಲಿ ಯಾವುದೇ ಅನುಮಾನವಿಲ್ಲ.

■

ಭ್ರಾಜಿಷ್ಣು ವಿರಚಿತ

ಆರಾಧನಾ ಕರ್ಣಾಟಟೀಕಾ

ಪೀಠಿಕೆ

ನಮಃ ಶ್ರೀ ವರ್ಧಮಾನಾಯ ನಿರ್ಧೂತ ಕಲಿಲಾತ್ಮನೇ

ಸಾಲೋಕಾನಾಂ ತ್ರಿಲೋಕಾನಾಂ ಯದ್ವಿದ್ಯಾ ದರ್ಪಣಾಯತೇ ॥

ಶ್ರೀ ವೀರ ವರ್ಧಮಾನ ಭಟ್ಟಾರಕರ್ಗೆ ನಮಸ್ಕಾರಂಗೆಯ್ದು ದೇವೋಪಸರ್ಗ ಮನುಷ್ಯೋಪಸರ್ಗ ತಿರಿಕೋಪಸರ್ಗಮಚೇತನೋಪಸರ್ಗಮೆಂದಿಂತು ಚತುರ್ವಿಧಮಪ್ಪುಪಸರ್ಗಮುಮಂ ಪಸಿವು ನೀರಟ್ಕೆ ಮೊದಲಾಗೊಡೆಯ ಇಪ್ಪತ್ತೆರಡು ಪರೀಷಹಂಗಳುಮಂ ಸೈರಿಸಿ ಅಯ್ದುಮಿಂದ್ರಿಯಂಗಳಂ ಗೆಲ್ದು ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ದ್ವಾದಶವಿಧಮಪ್ಪ ತಪದೊಳ್ ನೆಗಟ್ದು ಪ್ರಾಯೋಪಗಮನದಿಂ ಸನ್ಯಸನಂಗೆಯ್ದು ಕರ್ಮಕ್ಷಯಂಗೆಯ್ದು ಮೋಕ್ಷಕ್ಕೆವೋದ ಮತ್ತಂ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದ ಮಹಾಪುರುಷರ್ಕಳ ಕಥೆಗಳಂ ಪೇೞ್ವಲ್ಲಿ ಮುನ್ನಂ ಸುಕುಮಾರಸ್ವಾಮಿಯ ಕಥೆಯಂ ಪೇೞ್ವೆಂ.

೧. ಸುಕುಮಾರಸ್ವಾಮಿಯ ಕಥೆ

ಗಾಹೆ ॥ ಭಲ್ಲುಕ್ಕಿಏ [ತಿರತ್ತಂ] ಖಜ್ಜಂತೋ ಘೋರವೇದಣಟ್ಟೋಪಿ
ಆರಾಧಣಂ ಪವಣ್ಣೋ ಜ್ಝಾಣೇಣ ಅವಂತಿ ಸುಕುಮಾರೋ ॥

[ಭಲ್ಲುಕ್ಕೀ ಏ - ಮುನ್ನಿನ ಜನ್ಮಾಂತರದತ್ತಿಗೆಯಪ್ಪ ಪೆಣ್ಣುನರಿಯಿಂದಂ । ತಿರತ್ತಂ ಖಜ್ಜಂತೋ - ಮೂಱುದಿವಸಂ ನಿರಂತರಮಿರುಳು ಪಗಲುಂ ತಿನೆಪಡುತ್ತಿರ್ದೋನಾಗಿಯುಂ। ಘೋರ ವೇದಣಟ್ಟೋಪಿ -ಕಡಿದಪ್ಪ ವೇದನೆಯಿಂದಂ ಬೞಲ್ದೋನಾಗಿಯುಂ । ಆರಾಧಣಂ- ಸಮ್ಯಗ್ದರ್ಶನ ಜ್ಞಾನ ಚಾರಿತ್ರಾತ್ಮಕಮಪ್ಪಾರಾಧನೆಯಂ । ಜ್ಝಾಣೇಣ - ಉತ್ತಮ ಧ್ಯಾನದಿಂದಂ । ಅವಂತಿ ಸುಕುಮಾರೋ - ಅವಂತಿ ಸುಕುಮಾರಸ್ವಾಮಿ । ಪವಣ್ಣೋ ಪೊರ್ದಿದೊಂ।]

ಅದೆಂತೆಂದೊಡೆ -

ಈ ಜಂಬೂದ್ವೀಪದ ದಕ್ಷಿಣ ಭರತಕ್ಷೇತ್ರದೊಳ್ ವತ್ಸೆಯೆಂಬುದು ನಾಡಲ್ಲಿ ಕೌಶಂಬಿಯೆಂಬುದು ಪೊಲಲದನಾಳ್ವೊನತಿಬಳನೆಂಬೊನರಸನಾತನ ಮಹಾದೇವಿ ಮನೋಹರಿಯೆಂಬೊಳ್ ಪೆಸರ್ಗ್ಗೆ ತಕ್ಕಂತೆ ನೋಡಿದವರ್ಗ್ಗೆಲ್ಲಂ ಸೊಗಯಿಸುವಳ್ ಸತ್ಯ ಶೌಚಾಚಾರ ಶೀಲಂಗಳಿಂ ಕೂಡಿದೊಳತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿ ಹಾವಭಾವ ವಿಳಾಸ ವಿಭ್ರಮಂಗಳನೊಡೆಯಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಿರೆ, ಮತ್ತಾಯರಸನ ಮಂತ್ರಿ ಸೋಮಶರ್ಮನೆಂಬೊನಾತನ ಭಾರ್ಯೆ ಕಾಶ್ಯಪಿಯೆಂಬೊಳಾ ಇರ್ವ್ವರ್ಗ್ಗಂ ಮಕ್ಕಳಗ್ನಿಭೂತಿಯುಂ ವಾಯುಭೂತಿಯುಮೆಂಬೊರವರ್ಗ್ಗಳ್ ತಾಯ್ ತಂದೆಯ ಕಲ್ಪಿಯಂ ಗೆಯ್ಯದೆ ವೇದಂ ಮೊದಲಾಗೊಡೆಯ ಶಾಸ್ತ್ರಂಗಳನೋದದೆ ತಂದೆಯ ಪಡೆದ ಕಸವರಮಂ ಬಿಯಂಗೆಯ್ಯುತ್ತುಂ ಸಪ್ತಬ್ಯಸನಾಭಿಭೂತರಾಗಿ ನೆಗೞುತ್ತಿರೆ ಪಲಕಾಲದಿಂ ತಂದೆ ಕೞಿದಡೆ ಸೋಮಶರ್ಮ್ಮಂಗೆ ಮಕ್ಕಳೊಳರಿಲ್ಲೆಂದರಸಂ ಬೆಸಗೊಂಡೊಡೊಳರೆಂದು ಪೇೞ್ವೊಡವರ್ಗ್ಗೆ ಬೞಿಯನಟ್ಟಿ ಬರಿಸಿ ಮಜ್ಜನದೊಳ್ ಮಿಸಿಸಿಯುಡಿಸಿ ತುಡಿಸಿಯೂಡಿ ತಂಬುಲಂಗೊಟ್ಟುಬ್ಬೆಗಂಬಡದಿರಿಮೆಂದು ನುಡಿದವರ್ಗ್ಗಳ ದುಃಖಮನಾಱಿಸಿ ಬೀಡಿಂಗೆ ಪೋಗವೇೞ್ದು ಕೆಲವು ದಿವಸದಿಂ ಬೞಿಯಟ್ಟಿ ಬರಿಸಿ ಯಾವ ವೋದುಗಳಂ ಬಲ್ಲಿರೆಂದಿರ್ವ್ವರುಮಂ ಬೆಸಗೊಂಡೊಡವರ್ಗ್ಗಳ್ ತಲೆಯಂ ಬಾಗಿ ಮಱುಮಾತುಗುಡದೆ ಕಣ್ಣನೀರಂ ತೀವಿ ನೆಲನಂ ಬರೆಯುತ್ತಮಿರೆ ಸಭೆಯೊಳಿರ್ದ್ದವರ್ಗ್ಗಳೆಲ್ಲಮಿವರ್ ಮೂರ್ಖರೇನುವೋದುಗಳನಱಿಯರ್ ಸಪ್ತಬ್ಯಸನಾಭಿಭೂತರೆಂದರಸಂಗೆ ಪೇೞ್ವೊಡರಸನುಮವರ್ಗ್ಗಳನಟ್ಟಿ ಕಳೆದೊಡವರ ದಾಯಿಗಂ ಶಾಸ್ತ್ರಂಗಳಂ ಬಲ್ಲೊಂಗಂ ಮಂತ್ರಿಪದವಿಯಂ ಬಾೞುಂ ಪ್ರತಿಪತ್ತಿಯುಮಂ ಕೊಟ್ಟುದಂ ಕೇಳ್ದಿರ್ವ್ವರುಮುಬ್ಬೆಗಂಬಟ್ಟು ವೈರಾಗ್ಯಪರಾಯಣರಾಗಿ ಕಪ್ಪಡಮುಟ್ಟು ಬಯ್ಕಂದಿರಿದಿನ್ನಪ್ಪೊಡಮೋದುವೆಮೆಂದು ತಾಯ್ಗೆ ನುಡಿದೊಡಂತಪ್ಪೊಡೆ ಮಕ್ಕಳಿರಾ ಮಗಧೆಯೆಂಬುದು ನಾಡಲ್ಲಿ ರಾಜಗೃಹಮೆಂಬುದು ಪೊೞಲ್ ಅದನಾಳ್ವೊಂ ಸುಬಲನೆಂಬರಸನಾತನ ಮಹಾದೇವಿ ಸುಪ್ರಭೆಯೆಂಬೊಳವರ್ಗ್ಗಂ ಮಂತ್ರಿಯೆಮ್ಮಣ್ಣಂ ಸೂರ್ಯಮಿತ್ರನೆಂಬೊನೆಲ್ಲೋದುಗಳಂ ಬಲ್ಲೊನಾತಂ ನಿಮ್ಮನೋದಿಸಿ ಯೋಗ್ಯರಂ ಮಾಡುಮಂತಿರೆ ನಿರೂಪಿಸಿ ಕಲ್ಪಿಸಿಯೋಲೆಯಂ ಬರೆಯಿಸಿ ನಿಮ್ಮ ಕೆಯ್ಯೊಳಟ್ಟಿದಪೆಂ ನೀಮುಂ ಪೋಗಿ ನಿಮ್ಮ ಮಾವನ ಪಕ್ಕದೊಳೋದಿಮೆಂದೋಲೆಯಂ ಬರೆಯಿಸಿ ಕೊಟ್ಟೊಡವರ್ಗ್ಗಳುಂ ತಾಯಂ ಬೀೞ್ಕೊಂಡು ಕತಿಪಯ ದಿವಸಂಗಳಿಂ ರಾಜಗೃಹಮನೆಯ್ದಿ ಸೂರ್ಯಮಿತ್ರನ ಮನೆಯಂ ಬೆಸಗೊಂಡು ಪೋಗಿ ಕಂಡೋಲೆಯನಿಕ್ಕಿದೊಡೆ ಸೂರ್ಯಮಿತ್ರನೆಲ್ಲಿಂ ಬಂದಿರಾರೋಲೆಯೆಂದು ಬೆಸಗೊಂಡೊಡೆ ಕೌಶಂಬಿಯಿಂ ಬಂದೆವು ನಿಮ್ಮ ತಂಗೆಯಪ್ಪ ಕಾಶ್ಯಪಿಯಟ್ಟಿದೋಲೆಯೆಂದೊಡೋಲೆಯಂ ಬಾಜಿಸಿ ನೋಡಿ ಸೋಮಶರ್ಮ್ಮಂ ಕೞಿದ್ದುದುಮಂ ಮಂತ್ರಿಪದವಿ ಪೆಱರ್ಗ್ಗಾದುದುಮಂ ಮಕ್ಕಳ್ ಸಪ್ತಬ್ಯಸನಾಭಿಭೂತರಾಗಿ ಬಾೞಿಂ ಕೆಟ್ಟುದುಮಂ ಶಾಸ್ತ್ರಜ್ಞರುಂ ಬುದ್ಧಿಯೊಡೆಯರುಂ

ಯೋಗ್ಯರುಮಪ್ಪಂತು ಮಾಡಿಮೆಂದು ಮಕ್ಕಳಂ ತನಗೆ ನಿರೂಪಿಸಿಯಟ್ಟಿದುದುಮಂ ಇಂತಿವೆಲ್ಲಮುಮಂ ಬಾಜಿಸಿ ನೋಡಿಯಱಿದವರ್ಗ್ಗೆ ಪಸರಂಗೊಟ್ಟೆನಪ್ಪೊಡೆ ಮುನ್ನಿನಂತುಕ್ಕಿ ಕಿಡುವರೆಂದು ಮನದೆ ಬಗೆದಗ್ನಿಭೂತಿ ವಾಯುಭೂತಿಗಳ್ಗಿಂತೆಂದಂ

ಕಾಶ್ಯಪಿಯೆಂಬೊಳೆನಗೆ ತಂಗೆಯಿಲ್ಲ ಸೋಮಶರ್ಮನೆಂಬೊಂ ಮೆಯಿದುನನುಮಿಲ್ಲ ಸೂರ್ಯಮಿತ್ರನೆಂಬ ಪೆಸರೆನಗುಂಟು ನಿಮ್ಮ ಮಾವನಪ್ಪ ಸೂರ್ಯಮಿತ್ರನಲ್ಲೆನೆಂದವರ್ಗ್ಗೆ ನುಡಿದು ಮತ್ತಮಿಂತೆಂದಂ ನೀಮಾರ್ಗಾರಾದೊಡಮೇಂ ವಿದ್ಯಾರ್ಥಿಗಳಾಗಿಯೋದಂ ಕಲ್ವೆಮೆಂಬಱ್ತಿಯೊಳ್ ಬಂದಿರಪ್ಪೊಡೆ ಬಯ್ಕಂದಿರಿದು ಕಪ್ಪಡಮುಟ್ಟಿರುಳುಂ ಪಗಲುಮಲಸದೆ ನಿರ್ಬಂಧದಿಂದೋದಲಾರ್ಪೊಡೆ ನಿಮ್ಮನೋದಿಸಲಕ್ಕುಮೆಂದೊಡವರ್ಗಳುಮಿಂ ದಯೆಗೆಯ್ಯಿಂ ಮಹಾಪ್ರಸಾದಮೆಂದು ಪೊಡೆವಟ್ಟು ಹರ್ಷಚಿತ್ತರಾಗಿಯೊಳ್ಳಿತಪ್ಪ ದೆವಸ ವಾರ ವಿದ್ಯಾನಕ್ಷತ್ರದಂದು ತಮ್ಮಾನುಕೂಲದೊಳೋಜರ್ಗ್ಗೆಱಗಿ ಪೊಡೆವಟ್ಟು ವಿದ್ಯಾಪ್ರಾರಂಭಂಗೆಯ್ದರ್ ಸೂರ್ಯಮಿತ್ರನುಮವರನಿರುಳುಂ ಪಗಲುಂ ನಿರಂತರಂ ನಿರ್ವ್ವಂದದಿಂದೋದಿಸಿಯೇೞೆಂಟು ಬರಿಸದಿಂದೊಳಗ್ಗೆನಾಲ್ಕು ವೇದಮುಮಾಱಂಗಮುಂ ಪದಿನೆಂಟು ಧರ್ಮಶಾಸ್ತ್ರಂಗಳುಂ ಮೀಮಾಂಸಾ ನ್ಯಾಯವಿಸ್ತರಂ ವ್ಯಾಕರಣಂ ಪ್ರಮಾಣಂ ಛಂದಮಳಂಕಾರಂ ನಿಘಂಟು ಕಾವ್ಯ ನಾಟಕಂಗಳುಂ ಚಾಣಾಕ್ಯಂ ಸಾಮುದ್ರಿಕಂ ಶಾಳಿಹೋತ್ರಂ ಪಾಳಕಾಪ್ಯಂ ಹಾನಿತಂ ಚರಕಾಶ್ವಿನೀಮತಂ ಬಾಹಟಂ ಸುಶ್ರುತಂ ಕ್ಷಾರಪಾನೀಯಂ ಮೊದಲಾಗೊಡೆಯ ನವ ವೈದ್ಯಂಗಳಂ ಜ್ಯೋತಿಷಂ ಮಂತ್ರವಾದಂ ಮೊದಲಾಗೊಡೆಯ ಶಾಸ್ತ್ರಂಗಳೆಲ್ಲಮಂ ನೆಱೆಯೆ ಕಲ್ಪಿಸಿ ಯೋಗ್ಯರ್ ಮಾಡಿದೊಡವರ್ ನಿಮ್ಮ ಪ್ರಸಾದದಿಂದಮೆಲ್ಲಾ ಶಾಸ್ತ್ರಂಗಳಂ ಕಲ್ತು ಪಂಡಿತರೆಮಾದೆಮೆಂದಾದಮಾನುಮೊಸೆದುಮಿನ್ನೆಮ್ಮ ನಾಡಿಗೆ ಪೋಪೆಮೆಂದೋಜರ್ಗ್ಗೆಱಗಿ ಪೊಡೆವಟ್ಟು ಬೀೞ್ಕೊಂಡಾಗಳೋಜರೆಂದರ್ ನೀಮೆಮ್ಮ ತಂಗೆಯ ಮಕ್ಕಳಿರ್ ಸೋದರಳಿಯಂದಿರಪ್ಪಿರ್ ನಿಮಗಾಂ ಪಸರಂಗೊಟ್ಟೆನಿಲ್ಲೇಕೆಂದೊಡೆ ಮುನ್ನಿನಂತೆ ತಂದೆಯಲ್ಲಿಯುಕ್ಕಿ ಕೆಟ್ಟಂತಿಲ್ಲಿಯುಮೆತ್ತಾನುಮುಕ್ಕಿ ಕಿಡುವರೆಂದು ನಿಮ್ಮಂ ಯೋಗ್ಯರಂ ಮಾಡುವುದು ಕಾರಣಮಾಗಿ ನಿಮಗೆ ಪರಸಂಗೊಟ್ಟೆನಿಲ್ಲನದರ್ಕ್ಕೆ ಮುಳಿಯದಿರಿಂ ಕ್ಷಮಿಯಿಸಿಮೆಂದು ನುಡಿದುಡಲುಂ ತೊಡಲುಂ ಸಂಬಳಮುಮಂ ಕೊಟ್ಟು ಕಱಿಪಿದಾಗಳ್ ಪಿರಿಯಾತನಗ್ನಿಭೂತಿಯೆಂಬೊಂ ಮಾವನೆಮಗೆ ಪಸರಂಗುಡದಿರ್ವ್ವರುಮಂ ಯೋಗ್ಯರಂ ಮಾಡಿದರೆಂದುಪಕಾರಮಂ ಮನದೆ ಬಗೆದಾದಮಾನುಂ ಸಂತೋಷಂಬಟ್ಟಂ ಕಿಱಿಯಾತಂ ವಾಯುಭೂತಿ ಸೂರ್ಯಮಿತ್ರನ ಗೆಯ್ದುದೆಲ್ಲಮನಪಕಾರಮೆಂದು ಬಗೆದೆಂದಪ್ಪೊಡಮೆಮ್ಮ ಮಾವಂ ಬಯ್ಕಂದಿರಿದು ತಂದ ಕೂೞ್ಗೆ ನೆರಮೆಣ್ಣೆಯನಕ್ಕುಪ್ಪನಕ್ಕೆ ಕಱಿಯನಕ್ಕೆಂದಪ್ಪಡ ಮಿಕ್ಕಿಯುಮೆಱಿಯಿಸಿಯುಮಱಿಯಂ ಕೆಱಿಗೆ ಪೋಗಿಮೀವಾಗಳ್ ತಲೆಗೆ ಪೂಸಲೆಣ್ಣೆಯನಪ್ಪಮೆಱಿಯಿಸಿಯಱಿಯಂ ತಾಂ ದಿವ್ಯಮಪ್ಪಾಹಾರಂಗಳಂ ದೆವಸದೆವಸಕ್ಕಂ ಪಲರುಂ ನಂಟರ್ಕಳುಂ ಆಳ್ಗಳುಂ ಬೆರಸುಣ್ಗುಂ ಪರ್ವ ದಿವಸದೊಳಪ್ಪಡ ಮೆಂದಾನುಮಿವರ್ಗ್ಗುಣಲಿಕ್ಕಿಮೆಂದಱಿಯಂ ಪಂಚಮಹಾಪಾತಕನೆಮ್ಮನೇೞೆಂಟು ಬರಿಸಂ

ಪಗೆವರಂ ಬಗೆವಂತೆ ದಂಡಿಸಿದನೆಂದು ಮನದೊಳ್ ಮುನಿಸಂ ಭಾವಿಸಿ ಪೊಱಮಟ್ಟು ಪೋದನ್ ಅಂತಿರ್ವ್ವರುಂ ಪೋಗಿ ಕತಿಪಯ ದಿವಸಂಗಳಿಂ ಕೌಶಂಬಿಯನೆಯ್ದಿ ತಮ್ಮ ಮನೆಯಂ ಪೊಕ್ಕು ತಾಯಂ ಕಂಡು ತುಱಿಲ್ಗೆಯ್ದು ತಮ್ಮ ಪಂಡಿತರಾಗಿ ಬಂದುದಂ ಪೇೞ್ದು ಮಿಂದುಂಡು ವಿಶ್ರಮಿಸಿಯೊಳ್ಳಿತಪ್ಪ ದಿವಸವಾರ ನಕ್ಷತ್ರ ಮುೂಹೂರ್ತದೊಳತಿಬಳ ಮಹಾರಾಜನಂ ಕಂಡಿರ್ವ್ವರುಂ ಬೇಱೆವೇಱುಪಶ್ಲೋಕಿಸಿ ಕ್ರಿಯಾಕಾರಕ ಸಂಬಂಧದಿಂದಂ ವಕ್ಖಾಣಿಸಿ ತಮ್ಮ ಪಂಡಿತಿಕೆಯನಱಿಪಿದೊಡೆ ಸಭೆಯೊಳಿರ್ದ್ದ ಪಂಡಿತ ಜನಂಗಳೆಲ್ಲಂ ಮೆಚ್ಚಿ ಪೊಗೞ್ದೊಡರಸಂ ಸಂತುಷ್ಟ ಚಿತ್ತನಾಗಿಯೊಸೆದು ನಿಮ್ಮ ತಂದೆಯ ಮಂತ್ರಿ ಪದಮುಮಂ ಬಾೞುಮಂ ಕೈಕೊಳ್ಳಿಮೆಂದು ಕೊಟ್ಟಡೆ ಪ್ರಸಾದಮೆಂದೆಱಗಿ ಪೊಡೆವಟ್ಟು ಕೈಕೊಂಡು ಸುಖದೊಳ್ ಬಾೞುತ್ತುಂ ಪಲಂಬುರುಂ ಪಂಡಿತರ್ಕ್ಕಳ್ಗೋದುಗಳಂ ವಕ್ಖಾಣಿಸುತ್ತುಂ ಲೋಕದೊಳಂ ಅರಮನೆಯೊಳಂ ಪೂಜ್ಯರಾಗಿ ಸುಖಸಂಕಥಾ ವಿನೋದದೊಳ್ ಕಾಲಂ ಸಲೆ

ಮತ್ತಿತ್ತ ರಾಜಗೃಹದೊಳ್ ಸೂರ್ಯಮಿತ್ರಂ ಸುಬಲಮಹಾರಾಜನ ತೊಟ್ಟನರ್ಘ್ಯ ಮಾಣಿಕ್ಯದುಂಗುರಮಂ ಕಳೆದು ತನಗೆ ತುಡಲ್ಕೆಂದು ಕೊಟ್ಟೊಡೊಂದು ದಿವಸಂ ಸಂಜೆವಾರಿಸಲೆಂದು ಪೋದಲ್ಲಿಯಾದಿತ್ಯಂಗಿದಿರಂ ನೀರಂ ಸೂಸುವಾಗಳ್ ಬೆರಲಿಂ ಜಗುೞ್ದು ನೀರ್ವರಸು ಸೂಸಿ ತಾಮರೆಯೊಳುಂಗುರಂ ಬಿೞ್ದತ್ತು ತಾನುಂ ನೋಡದೆ ಬಗೆಯದೆ ಕೆಮ್ಮನೆ ಕಿಱಿದಂತರಮಂ ಪೋಗಿ ಕೆಯ್ಯಂ ನೋಡಿ ಬೆರಲುಂಗುರಮಂ ಕಾಣದೆಲ್ಲಿ ಕೆಟ್ಟತ್ತೆಂದು ಪ್ರಮಾಣಮನಱಿಯದೆ ಮಲ್ಮಲಂ ಮಱುಗುತ್ತಂಜಿ ದೆಸೆಗಳಂ ನೋಟ್ಟಿನನ್ನೆಗಂ ದೂರಾಂತರದೊಳಿರ್ದ್ದ ಸುಧರ್ಮ್ಮರೆಂಬಾಚಾರ್ಯ್ಯರಂ ದಿಬ್ಯಜ್ಞಾನಿಗಳಂ ಕಂಡಿವರೇನಾನುಂ ಬಲ್ಲರಪ್ಪೊಡೆ ಬೆಸಗೊಂಡು ನೋೞ್ಪೆನೆಂದು ಪೋಗಿ ಭಟಾರರಂ ಕಂಡು ಪಕ್ಕದಿರ್ದ್ದಾಗಳೀತಂ ಭಬ್ಯನೆಂಬುದನಱಿದು ಏನಯ್ಯಾ ಅರಸರ ವಾರಕದ ಮಾಣಿಕದುಂಗುರಮಂ ಕಿಡಿಸಿ ಬಂದಿರೆ ಎಂದಾಗಳೆಱಗಿ ಪೊಡೆವಟ್ಟಿಂತಱಿದರೊಳರೆಯೆಂದು ಪೊಗೞ್ದಿರ್ದ್ದಿಂತು ಬೆಸಗೊಂಡಂ ಭಟ್ಟಾರಾ ಬೆಸಸಿಮಾಯುಂಗುರಮಂ ಕಾಣಲಕ್ಕುಮೆ ಎಂದಂಗೆ ಭಟಾರರ್ಕ್ಕಾಣಲಕ್ಕುಮೆಂದರ್ ನಿನ್ನೆ ನೀನಾದಿತ್ಯಂಗೆ ನೀರ ಸೂಸಿ ಪೊಡೆವಡುವಾಗಳಾ ನೀರ್ವರಸು ಸೂಸಿ ತಾಮರೆಗೆಱೆಯೊಳಗೆ ಮುೞುಗಿರ್ದ್ದ ಮುಗುಳ ಮೇಗೆ ತಗುಳ್ದಿರ್ದ್ದುದು ನಾಳೆ ನೇಸಱ್ ಮೂಡುವಾಗಳ್ ನೀರಿಂದ ಮೇಗೆ ನೆಗೆದಿರ್ದ್ದುಂಗುರಮಂ ಕಾಣಲಕ್ಕುಮೆಂದೊಡೆ ಸಂತೋಷಂಬಟ್ಟು ಪೊಡೆವಟ್ಟು ಪೋಗಿ ಕೊಳಕ್ಕೆ ಮಾನಿಸರಂ ಕಾಪಿಟ್ಟು ಮಱುದಿವಸಂ ಸಂಜೆಯೊಳ್ ಬಂದು ನೋೞ್ಪಿನನ್ನೆಗಂ ತಾಮರೆಯ ಮುಗುಳ ಮೇಗೆ ತೊಳಗುತ್ತಿರ್ದ್ದುಂಗುರಮಂ ಕಂಡು ಕೊಂಡರಸಂಗೊಪ್ಪಿಸಿ ತುರಿಪದಿಂದರಮನೆಯಂ ಪೊಱಮಟ್ಟು ಮನದೊಳಿಂತೆಂದು ಬಗೆದನ್ ಈ ಲೋಕದೊಳಿರ್ದ್ದ ಸೂಕ್ಷ್ಮಾಂತರಿತ ದೂರ ಪದಾರ್ಥವಸ್ತುಗಳೆಲ್ಲಮನಱಿವಂತಪ್ಪ ಸವಣರ ಜೋಯಿಸಮನೆಂತಪ್ಪಡಂ ಕ್ಷಪಣಕನಂ ಮಿಥ್ಯಾವಿನಯದಿಂದಿಳಿಸಿ ಕಲ್ವೆನೆಂಬುದೊಂದು ಬುದ್ಧಿಯಿಂದಂ ಮನೆಗೆ ವಂದು ಸುದೇವಿಯೆಂಬ ತನ್ನ ಪಾರ್ವ್ವಂತಿಗೆ ಸ್ವಾಭಿಪ್ರಾಯಮೆಲ್ಲಮಂ ಪೇೞ್ದು ಜ್ಯೋತಿಷ ನಿಮಿತ್ತಂ ಮನೆಯಿಂದಂ ಪೊಱಮಟ್ಟು ಸುಧರ್ಮ್ಮಾಚಾರ್ಯ್ಯರಲ್ಲಿಗೆ ಪೋಗಿ ಪೊಡೆವಟ್ಟು ಭಟಾರಾ ನಿಮ್ಮ

ಪಕ್ಕದೆ ಜ್ಯೋತಿಷಮಂ ಕಲ್ವೆನೆಂಬುದೊಂದಟ್ಟಿಯಿಂದಂ ಬಂದೆನೆನ್ನಂ ಜ್ಯೋತಿಷಮಂ ಕಲ್ಪಿಪ್ಪುದೆಂದೊಡೆ ಭಟಾರರೆಂದರ್ ತಮ್ಮಾ ಎಮ್ಮ ಜೋಯಿಸಮೆಮ್ಮಂತಪ್ಪ ರೂಪಿನ ರಿಸಿಯರ್ಗ್ಗಲ್ಲದೆ ಪೇೞಲುಂ ಕಲಲುಮಾಗದೆಂದೊಡಂತಪ್ಪ ದೀಕ್ಷೆಯಂ ದಯೆಗೆಯ್ಯಿಮೆಂದು ಬೇಡಿದೊಡೊಳ್ಳಿತಪ್ಪ ಮುಹೂರ್ತದೊಳ್ ದೀಕ್ಷೆಯಂ ಕೊಟ್ಟು ಪಂಚಮಹಾವ್ರತಂಗಳನೇರಿಸಿ ಪಡಿಕಮಣಂ ಪೇೞ್ದು ತದನಂತರಮಿನ್ ಕಲ್ಪಿಸಿಮೆಂದೊಡೆ ನಮಸ್ಕಾರಂಗಳುಂ ಆಲೋಚನೆಗಳುಮಂ ನಿಯಮಮುಮುನೋದಿದೊಡಲ್ಲದೆ ಪೇೞಲಾಗದೆಂದೊಡೆಲ್ಲಮಂ ಬೇಗಂ ಬೇಗಂ ಪಾಠಂಗೊಂಡು ಭಟಾರಾ ಇಂ ಪೇೞಿಮೆನೆ ಭಟಾರರೆಂದರ್ ತ್ರಿಷಷ್ಠಿ ಶಲಾಕಾಪುರುಷರ್ಕ್ಕಳ ಚರಿತಂಗಳನಾಚಾರಮಾರಾಧನೆ ಮೊದಲಾಗೊಡೆಯ ಚರಣಗ್ರನ್ಥಂಗಳಂ ಲೋಕಾಣಿ ಸಂಗಾಣಿ ಮೊದಲಾಗೊಡೆಯ ಕರಣ ಗ್ರನ್ಥಂಗಳಂ ನೀವೆಲ್ಲಮಂ ಕಲ್ತೊಡಲ್ಲದೆ ಪೇೞಲಾಗದೆಂದೊಡೆ ಸೂರ್ಯಮಿತ್ರಂ ಪಂಡಿತನಪ್ಪುದಱಿಂದವೆಲ್ಲಮಂ ಕಿಱಿದೆ ಕಾಲದಿಂದೋದಿ ಕಲ್ತು ಭಟಾರಾ ನಿಮ್ಮ ಪೇೞ್ದೋದುಗಳೆಲ್ಲಮಂ ಗ್ರಂಥಾರ್ಥಸ್ವರೂಪದಿಂದೋದಿ ಕಲ್ತೆಮಿಂ ಜ್ಯೋತಿಷಮಂ ವಕ್ಕಾಣಿಸಿಮೆಂದೊಂಗೆ ಭಟಾರರೆಂದರಿನ್ನೊಂದಧಿಕಾರಮುಂಟು ದ್ರವ್ಯಾನುಯೋಗಮೆಂಬುದದಂ ಕೇಳ್ದ ಬಳಿಕ್ಕೆ ಜ್ಯೋತಿಷ ಶಾಸ್ತ್ರಮಂ ವಕ್ಕಾಣಿಸುವೆಮೆಂದೊಡೆ ಮನದೊಳಾದಮಾನುಮೊಸೆದೊಂದಧಿಕಾರಮೆಂಬುದೆನಗೇಮುಟ್ಟೇಗಳೆ ಕಲ್ವೆನೆಂದು ಬಗೆದೊಳ್ಳಿತಪ್ಪ ದಿವಸ ವಾರ ನಕ್ಷತ್ರ ಮಹೂರ್ತದೊಳ್ ಸಿದ್ಧಾಂತಮಂ ತೊಡಗಿಸಿ ಎಂತೆಂತು ಕೇಳ್ಗುಮಂತಂತೆ ಮಿಥ್ಯಾತ್ವಮಿನಿಸಿನಿಸು ಪಿಂಗಿ ಬಂಧಂ ಬಂಧಕಾರಣಂ ಮೋಕ್ಷಂ ಮೋಕ್ಷ ಕಾರಣಮಾ ಎರಡೞ ಫಲವುಮೆಂದಿಂತು ಸಿದ್ಧಾಂತದೊಳ್ ಪೇೞ್ದ ವಸ್ತುಗಳೆಲ್ಲಮಂ ಕೇಳ್ದು ಜೀವಾಜೀವ ಪುಣ್ಯಪಾಪಾಸ್ರವ ಸಂವರ ನಿರ್ಜರ ಬಂಧ ಮೋಕ್ಷಮೆಂದಿಂತು ನವ ಪದಾರ್ಥಂಗಳಂ ಪಂಚಾಸ್ತಿಕಾಯ ಷಡ್‌ದ್ರವ್ಯಂಗಳುಮೆಂದಿವಱೊಳಾದಮಾನುಮಱಿತಮುಂ ಕುಶಳಿಕೆಯುಂ ನಂಬುಗೆಯುಮಾಗಿಯರ್ಹದ್ಭಟ್ಟಾರಕರ ಸಿದ್ಧಸ್ವರೂಪಮಂ ಗುಣಂಗಳನಱಿದು ಶಂಕಾದ್ಯಷ್ಟಮಲಂಗಳುಮೆಂಟು ಮದಂಗಳುಂ ಮೂಱು ಮೂಢಮುಮಾಱುಮನಾಯತನ ಸೇವೆಗಳುಮೆಂದಿಂತಿಪ್ಪತ್ತೈದು ದೋಷಂಗಳಿಂದಗಲ್ದ ಸಮ್ಯಕ್ತ್ವಮನೊಡೆಯನಾಗಿ ಸಂಸಾರ ಶರೀರ ಭೋಗ ವೈರಾಗ್ಯಪರಾಯಣನುಮಾಗಿ ಎಮ್ಮುಕ್ಕೆವ ತಪದಿಂದಮನಂತಸುಖಕ್ಕೆ ಕಾರಣಮಪ್ಪ ಸನ್ಮಾರ್ಗ್ಗಮಂ ಪೆತ್ತೆವೆಂದತ್ಯಂತ ಹರ್ಷಚಿತ್ತನಾಗಿ ಗುರುಗಳ್ಗೆ ತಮ್ಮುಕ್ಕೆವದಿಂ ತಪಂಬಟ್ಟುದನಾಳೋಚಿಸಿ ಪ್ರಾಯಶ್ಚಿತ್ತಂಗೊಂಡು ಪಡಿಕಮಣಂಗೆಯ್ದು ಪರಮಾರ್ಥ ಯತಿವರನಾಗಿ ಪನ್ನೆರಡು ವರ್ಷಂಬರೆಗಂ ಗುರುಗಳನಗಲದೆ ತಂಪಗೆಯ್ದಾಚಾರ್ಯರಾಗಿ ಗುರುಗಳನುಮತದಿಂದೇಕ ವಿಹಾರಿಯಾಗಿ ಗ್ರಾಮೇಕರಾತ್ರಿಂ ನಗರೇ ಪಂಚರಾತ್ರಮಟವ್ಯಾಂ ದಶರಾತ್ರಮೆಂದೀ ತೆಱದಿಂದಂ ಗ್ರಾಮಗನರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತುಂ

ಕೌಶಂಬಿಗೆ ವಂದುದಯಾವತ ಪರ್ವತದೊಳ್ ಸಿದ್ಧಕ್ಷೇತ್ರಂಗಳೆಲ್ಲಮಂ ಬಂದಿಸಿ ತೀರ್ಥೋಪವಾಸಂ ಗೆಯ್ದು ಭೈಕ್ಷಕ್ಕೆಂದು ಕೌಶಂಬಿಯ ನಗರಮಂ ಪೊಕ್ಕು ಕಿಱುಮನೆ

ಪೆರ್ಮನೆಯೆನ್ನದುಣಲ್ ತಕ್ಕ ಮನೆಗಳಂ ಚರಿಗೆದೊಳಲುತ್ತಂ ಬರ್ಪೊರ್ ಅಗ್ನಿಭೂತಿ ಬ್ರಾಹ್ಮಣನ ಮನೆಯಂ ಪೊಕ್ಕೊಡಾತನುಂ ಕಂಡಿದಿರಂ ಪರಿತಂದಾದಮಾನುಂ ಭಕ್ತಿಯಿಂದಂ ನಿಱಿಸಿ ಕಾಲಂ ಕರ್ಚ್ಚಿ ಪಡಿಗಹಮುಚ್ಚಟ್ಠಾಣಮೆಂದೀಯೊಂಬತ್ತುಂ ತೆಱದಿಂದಂ ಪುಣ್ಯಮಂ ಕೈಕೊಂಡು ಶ್ರದ್ಧೆ ಮೊದಲಾಗೊಡೆಯ ಏೞುಂ ಗುಣಂಗಳಿಂ ಕೂಡಿ ಪ್ರಾಸುಕಮಪ್ಪಾಹಾರಮನಾದಮಾನುಂ ಭಕ್ತಿಯಿಂದಂ ಬಡ್ಡಿಸೆಯುಂಡಿಂ ಬಳಿಕ್ಕೆ ಪರಸಿ ಪೋಪಾಗಳ್ ಭಟ್ಟಾರಾ ನಿಮ್ಮ ಕಿಱಿಯ ಗುಡ್ಡನಂ ಪರಸಿ ಪೋಗಲ್ವೇೞ್ಕುಮೆಂದು ವಾಯುಭೂತಿಯ ಮನೆಗೊಡಗೊಂಡು ಪೋದೊಡಾತನುಂ ಪಿರಿಯ ಲೋಹಾಸನಮನೇಱಿ ಪಲಂಬರುಂ ಪಾರ್ವರ್ಗ್ಗೆ ವಕ್ಖಾಣಿಸುತ್ತಿರ್ದ್ದಮಾನಗರ್ವದಿಂದಿರಂ ಬಂದು ಬಂದಿಸದಿರ್ದ್ದೊನನಗ್ನಿ ಭೂತಿ ಪೋಗಿ ವಾಯುಭೂತಿಯ ಕೆಯ್ಯಂ ಪಿಡಿದೆಂಗುಂ ಭಟ್ಟಾರರ್ ನಮಗೆ ಸ್ವಾಮಿಗಳ್ ಭಟ್ಟಾರರ ಪ್ರಸಾದದಿಂದಂ ನಮಗಿನಿವಿರಿದು ಶ್ರೀಯುಂ ಸಂಪತ್ತುಂ ವಿಭವಮುಮಾದುದಱಿಂದಮೆೞ್ದು ಭಟ್ಟಾರರಂ ಪೋಗಿ ಬಂದಿಸೆಂದೊಡೆ ಅವನಿಂತೆಂದಂ ಒಳ್ಳಿದರ್ಗ್ಗೆನ್ನಂ ಪೊಡೆವಡಿಸಿದಪ್ಪೈ ಪೇೞೆಂದುಮಶುಚಿಗಳ್ ಮಲಗ್ರಸ್ತರೆಂದಪ್ಪೊಡಂ ಮಿಂದಱಿಯದವರಿವರ ಕಾಲ್ಗೆಱಗುವೆಂ ಗಡಮೆಂದು ಪಾರ್ವರ ಸಭೆಯ ನಡುವಿರ್ದ್ದು ಕಷ್ಟನಿಷ್ಠುರ ವಚನಂಗಳಿಂ ನಾನಾ ಪ್ರಕಾರದಿಂದಂ ನಿರಾಕರಿಸಿ ನುಡಿದು ಪೊಲ್ಲದು ಪೇೞ್ದಟ್ಟಿ ಕಳೆಯೆ ಅಗ್ನಿಭೂತಿಯೆಂದಂ ಕೊಯ್ತಲೆ ಅಧಮಾ ನೀಚಾ ಸ್ವಾಮಿಯನಿಂತೆಂಬಾ ಎಂದವನಂ ಬಯ್ದೊಡೆ ಭಟ್ಟಾರರೆನ್ಗುಂ

ಗಾಹೆ ॥ ಣಂದಂತಂ ಸಿಳಹಂತಂ ಸತ್ತುಂ ಮಿತ್ತುಂ ತಹೇವ ಸುಹದುಕ್ಖಂ
ಜೋ ಸಮಭಾವ ಇ ಪೆಚ್ಛ ಇ ಸೋ ಸಮಣೋ ಸೋಯ ಪವ್ವ ಇಓ ॥

ವೃತ್ತ ॥ ಆಕೃಷ್ಟ ಏವ ವಚಸಾ ನ ತು ತಾಡಿತೋಽಸ್ಮಿ
ಸಂತಾಪಿತೋಽಸ್ಮಿ ನತು ಮೇ ಹೃತಮುತ್ತಮಾಂಗಂ
ಪ್ರಾಣಾ ಹೃತಾಂ ಮಮ ಪರೈರ್ನತು ಮೇ ಸಮಾಧಿಃ
ಇತ್ಯಾತ್ಮ ಚಿಂತನ ಪರಂಪರಯಾ ಕ್ಷಮೇತಂ ॥

ಎಂದಿಂತು ಕ್ಷಮೆಯಂ ಭಾವಿಸಿದರಗ್ನಿಭೂತಿಯುಂ ಭಟ್ಟಾರರೊಡನುದಯಾವತ ಪರ್ವತಕ್ಕೆ ಪೋಗಿ ಇಂತೆಂದಂ ಭಟಾರಾ ನಿಮ್ಮಂ ಪಂಚಮಹಾಪಾತಕನ ಮನೆಗೊಡಗೊಂಡು ಪೋಗಿ ಬಯಿಸಿದೆನದನಾತಂ ಬಯ್ದನಿಲ್ಲನಾಂ ಬಯ್ದೆನೀಯಪರಾಧಕ್ಕೆನಗೆ ಕ್ಷಮಿಯಿಸುವುದೀ ಬಯಿಸಿದ ಪಾಪಮಿಂತಲ್ಲದೆ ಪಿಂಗದೆನಗೆ ದೀಕ್ಷೆಯಂ ದಯೆಗೆಯ್ಯಿಮೆಂದು ಕೀಱಿ ಬೇಡಿದೊಡೆ ಭಟ್ಟಾರರುಮೊಳ್ಳಿತಪ್ಪ ಮಹೂರ್ತದೊಳ್ ದೀಕ್ಷೆಯಂ ಕೊಟ್ಟೊಡಾತನುಂ ತಪಂಬಟ್ಟು ಕ್ರಿಯೆಗಳೆಲ್ಲಮನೋದಿಯಾಗಮಂಗಳನೋದುತ್ತಂ ತಮ್ಮ ಗುರುಗಳೊಡನೆ ವಿಹಾರಿಸುತ್ತಿರ್ದ್ದರ್

ಇತ್ತ ಅಗ್ನಿಭೂತಿಯು ಪಾರ್ವಂತಿ ಸೋಮದತ್ತೆಯೆಂಬೊಳ್ ತನ್ನೊಂದು ಸ[illegible]ಂದಮಟಲಿಂದಂ ವಾಯುಭೂತಿಯನಿಂತೆಂದಳ್ ಸೂರ್ಯಮಿತ್ರ ಭಟ್ಟಾರರ್

ಮುನ್‌ಬ್ರಾಹ್ಮಣರ್ ನಿಮ್ಮ ಸೋದರಮಾವಂಗಳೀಗಳ್ ಮಹಾತಪೋಧನರ್ ಗುಣವಂತರಪ್ಪರ್ ನಿಮ್ಮ ಮನೆಗೆವಂದೊಡೆ ಮಣೆಯಿಂದೆರ್ದ್ದಿದಿರಂ ಪೋಗಿ ಪೊಡೆವಟ್ಟಿರಿಲ್ಲೀ ಬಾೞುಂ ಸಂಪತ್ತುಂ ಶ್ರೀಯುಮೆಂಬುದು ನಿಮಗವರ ಪ್ರಸಾದದಿಂದಮಾದುದಂತಪ್ಪ ಮಹಾರಿಷಿಯರಂ ನಿಮಗೆ ಪೞಿಯಲುಂ ಬಯ್ಯಲುಂ ತಿರಸ್ಕರಿಸಿ ನುಡಿಯಲುಮಕ್ಕುಮೆ ಅಧಮರ ಪೊಲ್ಲಮಾನಸರ ದುರ್ಜನಂಗಳ ಜಾರಜಾತರ ವಿಜಾತ್ರಿಗಳ್ಗೆ ಯೋಗ್ಯಮಪ್ಪಯೋಗ್ಯಮಂ ಗೆಯ್ದಿರೆಂದು ಪಾರ್ವರ ಸಭೆಯ ನಡುವೆ ನುಡಿದಡೆ ವಾಯುಭೂತಿಯುಂ ಮುಳಿದು ಬಯ್ದು ಬಡಿದು ಕಾಲಿಂದಂ ತಲೆಯನೊದೆದು ಮನೆಯೊಳುಳ್ಳುದೆಲ್ಲಮಂ ಕವರ್ದುಕೊಂಡು ನಿಮ್ಮ ಸವಣನಾಗಿರ್ದ್ದಣ್ಣನ ಪೋದಲ್ಲಿಗೆ ಪೋಗೆಂದೆಟ್ಟಿಟ್ಟಿ ಕಳೆದೊಡಾಕೆಯುಂ ಮುಳಿದು ಕ್ರೋಧಾಗ್ನಿ ಪೆರ್ಚ್ಚಿ ದುರಾತ್ಮಾ ಎನ್ನನೊದೆದ ನಿನ್ನ ಕಾಲ್ಗಳಂ ಜನ್ಮಾಂತರದೊಳ್ ನಾಯಿನರಿಯುಮಾಗಿಯಪ್ಪೊಡಂ ಕೊಂದು ಮಕ್ಕಳ್‌ವೆರಸು ತಿಂಬೆನಕ್ಕೆಂದು ನಿದಾನಂಗೆಯ್ದು ಮನೆಯಿಂದಂ ಮಕ್ಕಳ್ವೆರಸು ಪೊಱಮಟ್ಟು ಪೋಗಿ ಕೆಲವು ಕಾಲದಿಂ ಸತ್ತು ತಾನುಂ ಮಕ್ಕಳುಂ ಸಂಸಾರದೊಳ್ತಿರಿಯುತ್ತಮಿರ್ದ್ದರ್

ಇತ್ತ ವಾಯುಭೂತಿಯುಮತಿಮಾನದಿಂದಂ ರಿಷಿಯರಂ ಪರಿಭವಿಸಿ ಬಯ್ದು ನುಡಿದು ಜಿನಧರ್ಮಮಂ ಪೞಿದ ಪಾಪದ ಫಲದಿಂದಮೇೞು ದಿವಸದಿಂದೊಳಗೌದುಂಬರಕುಷ್ಠಮಾಗಿ ಪುೞಿತು ನವೆದು ಸತ್ತು ಕೌಶಂಬಿಯೆಂಬ ಪೊೞಲೊಳ್ ಮಿಳಿಯ ಬಿದಿರಮೇಗೇಱಿಯಾಕಾಶದೊಳಾಡುವ ವಿದ್ಯಾಧರ ಲಂಗಿಗರ ಮನೆಯೊಳ್ ಪೆಣ್ಗತ್ತೆಯಾಗಿ ಪುಟ್ಟಿ ಪಿರಿದಪ್ಪ ಪೊಱೆಗಳಂ ಪೊತ್ತುಪೋಗಿ ಬೆನ್ನೊಳ್ ಕೞಿಮೆಯಾಗಿ ಪುೞಿತು ನವೆದು ಸತ್ತು ಮತ್ತಮಾ ಪೊೞಲೊಳ್ ಪೇಪಂದಿಯಾಗಿ ಸತ್ತು ಮತ್ತಂ ಮಗಧೆಯೆಂಬುದು ನಾಡಲ್ಲಿ ಚಂಪಾನಗರಮೆಂಬುದು ಪೊೞಲೊಳ್ ಪೆಣ್ನಾಯಾಗಿ ಮಾದೆಗರ ಮನೆಯೊಳ್ಪುಟ್ಟಿ ಸತ್ತು ಮತ್ತಮಾ ಪೊೞಲೊಳ್ ಮಾದೆಗರ್ಗ್ಗೆ ಪ್ರಧಾನನಪ್ಪ ನೀಳನೆಂಬ ಮಾದೆಗಂಗಂ ಕೇಶಿಯೆಂಬ ಮಾದೆಗಿಂಗಂ ಮಗಳು ದುರೂಪೆ ದುರ್ವರ್ಣೆ ದುರ್ಗಂಧೆ ದುಸ್ವರೆ ಪುಟ್ಟುಂಗುರುಡಿ ಪೊಲತಿಯಾಗಿ ಪುಟ್ಟಿ ವ್ಯಾಧಿಪೀಡಿತೆ ಕ್ಷುಧಾಗ್ನಿಯಿಂ ಬರ್ದ್ದಿರ್ದ್ದೊಳೊಂದು ದಿವಸಮುದ್ಯಾನವನಕ್ಕೆ ಪೋಗಿ ನೇಱಿಲ ಪಣ್ಗಳಂ ತಡವರಿಸಿಯಾಯ್ದು ತಿನುತಿರ್ಪನ್ನೆಗಂ

ಇತ್ತ ಸೂರ್ಯಮಿತ್ರಾಚಾರ್ಯರುಮಗ್ನಿಭೂತಿ ಮುನಿಯುಂ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟನ ದ್ರೋಣಾಮುಖಂಗಳಂ ವಿಹಾರಿಸುತ್ತುಂ ಚಂಪಾನಗರಮನೆಯ್ದಿ ವಾಸುಪೂಜ್ಯ ಭಟ್ಟಾರರ ನಿಸಿದ್ಧಿಗೆ ಸಂದ ತೀರ್ಥಸ್ಥಾನಮನಾದಮಾನುಂ ಶುದ್ಧ ಪರಿಣಾಮದಿಂದಂ ಬಂದಿಸುತ್ತಿರ್ದ್ದ ಸೂಯಮಿತ್ರಾಚಾರ್ಯರ್ಗ್ಗವಧಿಜ್ಞಾನಂ ಪುಟ್ಟಿತ್ತು ಮತ್ತೆ ಬಹಿರುದ್ಯಾನದೊಳ್ ಶಂಬರ ನಾಗಶಾಣದೊಳ್ ಬಂದಿರ್ದ್ದರನ್ನೆಗಂ ಅಂದಿನ ದಿವಸಂ ಸೂರ್ಯಮಿತ್ರಾಚಾರ್ಯರುಪವಾಸಂ ಗೆಯ್ದಿರ್ದ್ದರಗ್ನಿಭೂತಿಮುನಿಯುಂ ಭೈಕ್ಷನಿಮಿತ್ತಂ ಚರಿಗೆವುಗುತ್ತಲೆಡೆಯೊಳುದ್ಯಾನವನದೊಳ್ ನೇಱಿಲ ಮರದ ಕೆಳಗೆ ನೇಱಿಲ ಪಣ್ಗಳಂ ತಡವರಿಸಿಯಾಯ್ದು ತಿಂಬ ಜಾತ್ಯಂಧೆಯಪ್ಪ ಪೊಲತಿಯಂ ಕೂಸಂ ಕಂಡತ್ಯಂತ ಸ್ನೇಹಮಾಗಿ

ಪರವಸದಿಂ ಕಣ್ಣನೀರ್ಗ್ಗಳಂ ಸೂಸಿ ಎಯ್ತಂದು ಮನ್ಯುಮಿಕ್ಕು ಕರುಣದಿಂದಂ ಕುಂಚದ ಕೋಲೊಳ್ ಪರೆದಿರ್ದ ಪಣ್ಗಳಂ ಕೂಸಿನ ಮುನ್ತೆ ಸಾಚ್ಚುರ್ತ್ತುಂ ನೀಡುಂ ಬೇಗಮಿರ್ದ್ದಿದೇಂ ಪಾಪದ ಫಲಮೋ ಎಂದು ಸಂಸಾರನಿರ್ವೇಗಂ ಮಾಡಿಯಂದಿನ ದಿವಸಮಲಾಭಂ ಮಾಡಿ ತಮ್ಮಾವಾಸಕ್ಕೆ ಪೋದೊಡೆ ಭಟಾರರೆಂದರೇನಲಾಭಮಾದುದೇ ಎಂದು ಬೆಸಗೊಂಡಡೆ ಭಟ್ಟಾರಗ್ಗಿಂತೆಂದು ಪೇಳ್ದರ್ ಚರಿಗೆವೋಗುತ್ತಲೊಂದೆಡೆಯೊಳುದ್ಯಾನವನದೊಳ್ ನೇಱಿಲ ಮರದ ಕೆಳಗೆ ತಡವರಿಸಿ ನೇಱಿಲ ಪಣ್ಗಳಂ ತಿಂಬ ಜಾತ್ಯಂಧೆಯಪ್ಪ ಪೊಲೆಯರ ಕೂಸಂ ಕಂಡಾದಮಾನುಂ ಸ್ನೇಹಮಾಗಿ ಕರುಣದಿಂದಂ ಪರವಸದಿಂದಂ ಕಣ್ಣೀರ್ಗ್ಗಳ್ ಪಂದು ನೀಡುಂ ಬೇಗಮಿರ್ದ್ದು ನೋಡಿ ಅಹೋ ವಿಧಾತ್ರಾ ಸಂಸಾರಮೆಂದು ಅಲಾಭಂ ಮಾಡಿ ಬಂದೆಮೆನೆ ಭಟಾರರೆಂದರ್ ಆ ಕೂಸೆಂಬುದು ನಿಮ್ಮ ತಮ್ಮನಪ್ಪ ವಾಯುಭೂತಿಯೆಂಬ ಜೀವಮೆನೆಯದೆಂತು ಭಟಾರಾ ಎಂದು ಬೆಸಗೊಂಡಡೆ ಭಟಾರರಿಂತೆಂದು ಪೇಳ್ದರ್ ವಾಯುಭೂತಿ ತನ್ನೊಂದು ಮಾನಗರ್ವದಿಂದೆಮ್ಮಂ ಪೞಿದು ಬಯ್ದು ನುಡಿದ ಪಾಪದ ಫಲದಿಂದೇೞು ದಿವಸದಿಂದೊಳಗೌದುಂಬರ ಕುಷ್ಠಮಾಗಿ ಪುೞಿತು ನಮೆದು ಸತ್ತಾ ಪೊೞಲೊಳೆ ಲಂಕಿಗರ ಮನೆಯೊಳ್ ಪೆಣ್ಗತ್ತೆಯಾಗಿ ಪುಟ್ಟಿ ನಮೆದು ಸತ್ತು ಪೇಪಂದಿಯಾಗಿ ಪುಟ್ಟಿ ಪೆಣ್ನಾಯಾಗಿ ಪುಟ್ಟಿ ಸತ್ತೀಗಳ್ ಜಾತ್ಯಂಧೆ ಪೊಲೆಯರ ಮಗಳಾಗಿ ಪುಟ್ಟಿದಳದಱಿಂ ಮುನ್ನಿನ ಸ್ನೇಹಂ ಕಾರಣಮಾಗಿಯಾ ಕೂಸಿನ ಮೇಗೆ ನಿಮಗೆ ಕೂರ್ಮೆಯಾದುದೆನೆ ಭಟ್ಟಾರಾ ಅದೇಂ ಭವ್ಯ ಜೀವನೋ ಅಭವ್ಯಜೀವನೋ ಎಂದು ಬೆಸಗೊಂಡಡೆ ಭವ್ಯ ಜೀವಮೆಂದರ್ ನಿಮ್ಮ ಪೇೞೆ ಬ್ರತಂಗಳಂ ಕೈಕೊಳ್ಗುಮೆಂದೊಡೆ ಭಟಾರರನುಮತದಿಂದಗ್ನಿಭೂತಿ ರಿಷಿಯರ್ ಪೋಗಿ ಅದ್ದು ಮುನ್ನಿನ ಜನ್ಮಾಂತರದ ಸಂಬಂಧಮುಮಂ ಋಷಿಯರಂ ಏಳಿದು ನುಡಿದ ಪಾಪದ ಫಲದಿಂದೆಯ್ದಿದ ಭವಂಗಳುಂ ದುಃಖಂಗಳುಮನಾ ಕೂಸಿಂಗಱಿವಂತು ತಿಳಿಯೆ ಪೇೞ್ದು ಮತ್ತಮಿಂತೆಂದರ್ ಮುನ್ನೆ ನೀನೀ ಭವದಿಂ ತೊಟ್ಟಯ್ದನೆಯ ಭವದೊಳ್ ವಾಯುಭೂತಿಯಪ್ಪಂದು ಮಾನಗರ್ವದಿಂ ರಿಷಿಯರಂ ಬಯ್ದು ಪಾಪದ ಫಲದಿಂದಿಂತಪ್ಪ ದುಃಖಗಳನೆಯ್ದಿದೆ ಇನ್ನು ಮತ್ತಂ ಮಧು ಮದ್ಯಮಾಂಸಗಳಂ ಭಕ್ಷಿಸಿ ನರಕ ತಿರಿಕ ಮನುಷ್ಯ ಭವಂಗಳೊಳಪ್ಪ ದುಃಖಂಗಳನನಂತಾನಂತಕಾಲಮನುಭವಿಸಿ ನೀಡಱೆಂದೆತ್ತಾನುಮಲ್ಲದೆ ಮನುಷ್ಯ ಭವಮಂ ಪೆಱದು ಪೆತ್ತೊಡಮಿಂತಾಗಿ ಪುಟ್ಟುಗುಂ

ವೃತ್ತ ॥ ವೈರೂಪ್ಯ ದುರ್ಭಗತ್ವಂ ಕುಮತಿ ಕುಜನತಾಂ ಕುತ್ಸಿತತ್ವಂ ಕುಜಾತಿಂ
ಕ್ಷುತ್ತೃಷ್ಣಾ ಪೀಡಿತತ್ವಂ ವಿರಸ ವಿಕಳತಾಂ ಬ್ಯಾಧಿತಾಂ ಚಾಪಳತ್ವಂ
ಹೀನತ್ವಂ ಪ್ರೇಷಣತ್ವಂ ಲಘುತರಮರಣಂ ಶೋಕಕಾಂಕ್ಷಾಳಯತ್ವಂ
ಮಾಂಸಾಶೀ ಪ್ರಾಣಘಾತೀಹ್ಯನುಭವತಿ ಚಿತಂಪ್ರಾಪ್ಯ ಮಾನುಷ್ಯಜನ್ಮಂ ॥

ಮತ್ತಂ -

ಆರ್ಯೆ ॥ ಪಾಪಾತ್ಕಿಲಜಾಯಂತೇ ವಾಮನ ಪಂಗ್ವಂಧ ಖಂಜ ಕರಾಲಾಃ
ಜಡ ಬಧಿರ ಮೂಕ ಕೃಶರೋಮಶವಕ್ರೈನಿಬಿಡಾಳಿಸ್ತೇ ॥

ಮತ್ತಂ -

ವಸಂತ ತಿಳಕಂ ॥ ಉದ್ದಂತ ಕುಬ್ಜ ಕುಣಿಕುಂಡ ಕರಾಳಕಾಣಾಃ
ಸಂಸ್ಫೂಳ ದೀರ್ಘ ಕೃಶಲೋಮ ಸುರೂಕ್ಷರೂಪಾಃ
ಕುಷ್ಠಾರ್ದಿತಾಂ ಕೃಪಣ ಪಾಮನ ವಾಮನಾಶ್ಚ
ಪಾಪೇನ ಪೂರ್ವಚರಿತೇನ ನರಾ ಭವಂತಿ ॥

ವೃತ್ತ ॥ ಕುಲಹೀನಂ ದೀನಮಾನಂ ಪರಿಭವ ವಿಭವಂ ದುಷ್ಕೃತಂ ಪಾಪಕರ್ಮಂ
ಮಳಿನಂ ದುರ್ಗಂಧಗಂಧಂ ಜಡಮತಿ ಕಿವುಡಂ ಪಂಗು ಮೂಕಂ ಕರಂ ನಾ
ಣಿಲಿಪಾಂಬಂ ಪಂದೆ ಲೋಭಂ ಖಳನಳಿಕಮನಂ ವಂಚಕಂ ನಿತ್ಯರೋಗಾ
ಕುಳನೆಂಬೀನಾಮ ನಾಮಾವಳಿಗೆ ನಿಳಯನಕ್ಕುಂ ಬ್ರಿತ್ರಬ್ರಾತಹೀನಂ ॥

ವ ॥ ಇಂತು ಪೂರ್ವಕೃತ ಪಾಪದ ಫಲದಿಂದಂ ಬ್ರಿತ್ತಂಗಳಂ ಕೈಕೊಂಡಱಿದುದಱಿಂದಂ ಮನುಷ್ಯಜನ್ಮದೊಳ್ ಪುಟ್ಟಿಯುಂ ದುಃಖಂಗಳನೆಯ್ದುಗುಂ ಜೀವಂ ಮತ್ತೆ ಧರ್ಮದ ಫಲದಿಂದಂ

ವೃತ್ತ ॥ ಶ್ರೀ ವಕ್ಷಶ್ಚಾರುರೂಪಂ ಕುಲ ಬಲ ವಿನಯಂ ಖ್ಯಾತಿ ದೀರ್ಘಾಯುಷತ್ವಂ
ಪೂಜ್ಯಂ ದೇವಾಸುರೇಂದ್ರಸ್ಸುರವರವನಿತಾ ಪ್ರೀತಿಮಷ್ಟಾಂಗಭೋಗಂ
ಸ್ವರ್ಗ್ಗೇಮರ್ತ್ಯಾಲಭಂತೇ ದ್ಯುತಿಮತಿ ಪಟುತಾಂ ರಾಜರಾಜಶ್ರಿಯಂ ಚ
ಸೌಭಾಗ್ಯಂ ಪೂಜ್ಯವಾಕ್ಯಂ ಜಗತಿ ಮಧುಸುರಾಮಾಂಸಸೇವಾನಿವೃತ್ತಾಃ ।

ಮತ್ತಂ -

ಆರ್ಯೆ ॥ ಪುಣ್ಯಾದುತ್ಪಾದ್ಯಂತೇ ಜೀವಾ ವಿಖ್ಯಾತ ವಿಪುಳವಂಶೇಷ್ವೇಕೇ
ದ್ಯುತಿಮತಿಧೃತಿಕಾಂತಿ ಶ್ರೀಹ್ರೀ ರೂಪಾರೋಗ್ಯ ಸತ್ವಬಳಸಂಪನ್ನಾಃ ॥

ಮತ್ತಂ -

ಆಜ್ಞಾಯಶೋ ಧೃತಿಮತಿ ದ್ಯುತಿಕಾಂತಿ ಲಕ್ಷ್ಮೀ
ಶೌರ್ಯಪ್ರತಾಪ ಪರಿವಾರಧನೋಪಭೋಗಾಃ ॥
ತೇ ಲೋಕವೇದಸಮಯೇಷು ಸುನಿಶ್ಚಯೇನ
ಪುಣ್ಯೋದಯೇನ ಸುಲಭಾ ಇತಿ ವರ್ಣಯಂತಿ ॥

ವರಯುವತಿಭವನವಾಹನ ನಾಟಕ ಧನಕನಕರಜತ ಮಣಿಸುರಥಾಃ
ಅತಿಲಲಿತ ತುರಗ ಮದಗಳಿತನಾಗಭೃತ್ಯಾಶ್ಚ ಭವತಿ ಧರ್ಮೇಣ ॥

ಇಂತು ಧರ್ಮದ ಫಲದಿಂದಂ ದೇವಲೋಕದ ಮನುಷ್ಯಲೋಕದ ಸುಖಂಗಳನನುಭವಿಸಿ ಬಱಿಕ್ಕೆ ನಿರ್ವಾಣಸುಖಮನೆಯ್ದುಗುಂ ಜೀವಮಿನ್ನಾಧರ್ಮಮೆಂಬುದೆಂತೆಂದೊಡೆ

ಗಾಹೆ ॥ ಸೋ ಧಮ್ಮೋ ಜತ್ಥ ದಯಾ ಸೋವಿತವೋ ವಿಸಯ ಣಿಗ್ಗಹೋ ಜತ್ಥ
ದಸಅಟ್ಠದೋಸರಹಿಓ ಸೋ ದೇವೋ ಣತ್ಥಿ ಸಂದೇಹೋ ॥

ಎಂದಿಂತು ಪದಿನೆಂಟು ದೋಷಂ ಮೊದಲಾಗೊಡೆಯನಿಲ್ಲದೊಂ ದೇವನಂತಪ್ಪದೇವನ ಪೇೞ್ದುದಾಗಮಮೆಂಬುದಕ್ಕುಂ ಆಗಮದ ಪೇೞ್ದಿಂತು ಬಾಹ್ಯಾಭ್ಯಂತರ ಪರಿಗ್ರಹಂಗಳೆಲ್ಲಮಂ ತೊಱೆದು ದ್ವಾದಶ ವಿಧಮಪ್ಪ ತಪದೊಳ್ ನೆಗೞ್ದಿಯ್ದುಮಿಂದ್ರಿಯಂಗಳಂ ಗೆಲ್ದು ಪಸಿವುಂ ನೀರೞ್ಕೆ ಮೊದಲಾಗೊಡೆಯ ಇಪ್ಪತ್ತೆರಡು ಪರೀಷಹಂಗಳಂ ಸೈರಿಸಿ ಯಮನಿಯಮ ಸ್ವಾಧ್ಯಾಯ ಧ್ಯಾನಾನುಷ್ಠಾನ ನಿರತನಾಗಿ ತಪಂಗೆಯ್ವ ರಿಷಿಯರ್ಕಳ್ ತಪೋಧನರ್ ಕೊಲ್ಲದುದೆ ಧರ್ಮಮೆಂದಿಂತು ನಂಬಿ ವ್ರತಂಗಳಂ ಕೈಕೊಂಡು ನೆಗೞ್ವುದು ಧರ್ಮಮೆಂಬುದಕ್ಕುಮೆಂದಿಂತಗ್ನಿಭೂತಿ ರಿಷಿಯರ್ ತಿಳಿಯೆ ಧರ್ಮಮಂ ಪೇೞ್ದಿಡೆರ್ದೆಯೊಳ್ ಮೆಲ್ಲಿದಳಾಗಿ ತನ್ನ ಭವಾಂತರಂಗಳಂ ಧರ್ಮಮುಮಂ ಕೇೞ್ದಱಿದು ಸಂಸಾರ ಶರೀರ ವೈರಾಗ್ಯಮಾದಮಾನುಂ ತನ್ನಂ ತಾಂ ಪೞಿದು ನಿಂದಿಸಿ ಪಾಪಕ್ಕಂಜಿಯಣುಬ್ರತಂ ಮೊದಲಾಗೊಡೆಯ ಶ್ರಾವಕ ಬ್ರತಂಗಳಂ ಕೈಕೊಂಡಾಗಳ್ ಭಟಾರರುಂ ದೃಢವ್ರತೆಯಾಗು ಕರ್ಮಕ್ಷಯಮಕ್ಕೆಂದು ಪರಸಿ ತಮ್ಮಾವಾಸಕ್ಕೆ ಪೋದರ್

ಇತ್ತ ಜಾತ್ಯಂಧೆಯಪ್ಪ ಕೂಸುಮಹಿಂಸಾದಿ ಬ್ರತಂಗಳಂ ಮೇಲ್ಕೊಂಡು ತನ್ನ ಮನೆಗೆ ಪೋದಳನ್ನೆಗಂ ಎಡೆಯೊಳರಸನ ಪುರೋಹಿತಂ ಸೋಮಶರ್ಮನೆಂಬೊಂ ತನ್ನ ಪರಿವಾರಂ ಬೆರಸು ಮಹಾವಿಭೂತಿ ವಿಸ್ತಾರದಿಂದಂ ಪಿರಿದು ಪೂಜೆಯಂ ಕೊಂಡು ಮಕ್ಕಳಂ ಬೇಡಿ ಶಂಬರ ನಾಗಾತಾಣಕ್ಕೆ ಪರಕೆಗುಡಲ್ ಪೋಪುದುಂ ತನ್ನೊಡಪೋಪ ಪೊಲೆಯರ ಕೂಸುಗಳಂ ಕಂಡು ತನಗೆ ವ್ಯಾವರ್ಣಿಸಿ ಪೇೞೆ ಕೇಳ್ದದೞೊಳ್ ಮನಮಿಟ್ಟವರ್ಗ್ಗೆ ಸತ್ತು ಪುಟ್ಟುವೆನಕ್ಕೆಂದು ಭೋಗಾಸಕ್ತೆಯಾಗಿ ನಿದಾನಂಗೆಯ್ದು ಮನೆಗೆ ಪೋಗಿರ್ಪ್ಪನ್ನೆಗಮಾ ಇರುಳೊಳೆ ಪಾವು ಕೊಳೆ ಸತ್ತು ಚಂಪಾನಗರಮನಾಳ್ವೊಂ ಭದ್ರವಾಹನನೆಂಬೊನರಸನಾತನ ಮಹಾದೇವಿ ಚಂದ್ರಮತಿಯೆಂಬೊಳವರ ಪುರೋಹಿತಂ ಸೋಮಶರ್ಮನೆಂಬೊಂ ಭಟ್ಟನಾತನ ಪಾರ್ವಂತಿ ತ್ರಿವೇದಿಯೆಂಬೊಳಾ ಇರ್ವ್ವರ್ಗ್ಗಂ ನಾಗಶ್ರೀಯೆಂಬೊಳ್ ಮಗಳಾಗಿ ಪುಟ್ಟಿದೊಳತ್ಯಂತ ರೂಪು ಲಾವಣ್ಯ ಸೌಭಾಗ್ಯ ಕಾಂತಿಯನೊಡೆಯಳ್ ನೋಡಿದ ಜನಂಗಳ್ಗೆಲ್ಲಮಾದಮಾನುಂ ಸೊಗಯಿಸುವಳ್ ನಾಗರ್ಗ್ಗೆ ಪರಸಿ ಪೆತ್ತಳಪ್ಪುದೞೆಂ ನಾಗಶ್ರೀಯೆಂಬ ಪೆಸರನಿಟ್ಟರ್ ಮತ್ತೆ ಸೂರ್ಯಮಿತ್ರಾಚಾರ್ಯರುಮಗ್ನಿಭೂತಿ ರಿಷಿಯರುಮಂತಿರ್ವರುಂ ಚಂಪಾನಗರದಿಂ ಪೊಱಮಟ್ಟು ಪೋಗಿ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತುಂ ಪನ್ನೆಂಟು ಬರಿಸದಿಂ ಮಗುೞ್ದು ಚಂಪಾನಗರಕ್ಕೆ ಬಂದು ಪೊಱವೊೞಲೊಳುದ್ಯಾನವನದೊಳ್ ಕಂಬಳನಾಗಂ ಶಂಬರನಾಗಂ ಪಂಗುನಾಗಮೆಂದೀ ಪೆಸರನೊಡೆಯ ಮುನ್ನಿರ್ದ್ದ ನಾಗತಾಣದೊಳ್ ಬಂದಿರ್ದ್ದರ್

ಅನ್ನೆಗಂ ನಾಗಶ್ರೀಯುಂ ಪಂಚಮಿಯಂದು ಮಂತ್ರಿಯರ್ಕಳ ಪೆರ್ಗ್ಗಡೆಗಳ ರಾಜಶ್ರೇಷ್ಠಿಯರ ಪ್ರಧಾನರಪ್ಪ ನಿಯೋಗಿಗಳ ಪಲರುಂ ಪೆಣ್ಗೂಸುಗಳ್ವೆರಸು

ಪಿರಿದುಮರ್ಚನೆಯಂ ಕೊಂಡು ನಾಗಠಾಣಕ್ಕೆ ಪೋಗಿ ನಾಗರನರ್ಚಿಸಿ ಪೊಡೆವಟ್ಟು ಸೂರ್ಯಮಿತ್ರಾಚಾರ್ಯರುಮಗ್ನಿಭೂತಿರಿಷಿಯರುಮಂ ಕಂಡು ಜಾತಿಸ್ಮರೆಯಾಗಿ ತನ್ನ ಮುನ್ನಿನ ಪೊಲತಿಯಾಗಿ ಪುಟ್ಟಿದ ಭವಮನಱಿದು ಭಟ್ಟಾರರ ಕಾಲ್ಗೆರಗಿ ಪೊಡೆವಟ್ಟು ಕುಳ್ಳಿರ್ದಾಗಳಾ ಕೂಸಂ ಕಂಡ ಅಗ್ನಿಭೂತಿ ರಿಷಿಯರ್ಗತಿ ಸ್ನೇಹವಾಗಿ ತಮ್ಮ ಗುರುಗಳಂ ಸೂರ್ಯಮಿತ್ರಾಚಾರ್ಯರನಿಂತೆಂದು ಬೆಸಗೊಂಡರ್ ಭಟಾರಾ ಈ ಕೂಸಿನ ಮೇಗೆಮಗಾದಮಾನುಂ ಮೋಹಮಾದುದರ್ಕೆ ಕಾರಣಮೇನೆಂದು ಬೆಸಗೊಂಡೊಡೆ ಭಟಾರರವಧಿಜ್ಞಾನಮಂ ಪ್ರಯೋಗಿಸಿ ಇಂತೆಂದು ಪೇೞ್ದರ್ ಈ ಕೂಸೆಂಬುದು ನಿಮ್ಮ ತಮ್ಮನಪ್ಪ ವಾಯುಭೂತಿಯ ಜೀವನಭಿಮಾನಂ ಕಾರಣಮಾಗಿ ಎಮ್ಮನುಱದೆ ಪರಿಭವಿಸಿ ಬಾಯ್ಗೆವಂದುದನೆ ಪೊಲ್ಲ ಬಯ್ದುಗಳಂ ಬಯ್ದುವಮಾ ಪಾಪದ ಫಲದಿಂದಮೇೞು ದಿವಸದಿಂದೊಳಗೌದುಂಬರಕುಷ್ಠಮಾಗಿ ಪುೞಿತು ನಮೆದು ಸತ್ತು ಕೌಶಂಬಿಯೊಳ್ ಲಂಕಿಗರ ಮನೆಯೊಳ್ ಪೆಣ್ಗತ್ತೆಯಾಗಿ ಪಿರಿಯ ಪೊಱೆಗಳಂ ಪೊತ್ತು ಬೆನ್ನೊಳ್ ಕಱಮೆಯಾಗಿ ನಾಳಿವಿರ್ದು ಪುೞಿತು ನವೆದು ಸತ್ತು ಪೇಪಂದಿಯಾಗಿ ಪುಟ್ಟಿ ಸತ್ತು ಪೆಣ್ನಾಯಾಗಿ ಪುಟ್ಟಿ ಸತ್ತು ಮತ್ತೀ ಚಂಪಾನಗರದೊಳ್ ಮಾದೆಂಗರ್ಗೆ ಪ್ರಧಾನನಪ್ಪ ನೀಳನೆಂಬ ಮಾದೆಗಂಗಂ ಕೇಶಿಯೆಂಬ ಮಾದೆಂಗಿಗಂ ದುರೂಪೆ ದುರ್ಗಂಧೆ ದುಸ್ವರೆ ಧ್ವುರ್ವರ್ಣೆ ಜಾತ್ಯಂಧೆ ಪೊಲೆಯರ್ಗೆ ಮಗಳಾಗಿ ಪುಟ್ಟಿ ನೀವು ಪ್ರತಿಬೋಧಿಸೆ ಬ್ರತಂಗಳಂ ಕೈಕೊಂಡು ನಿದಾನಂ ಗೆಯ್ದು ಪಾವು ಕೊಳೆ ಸತ್ತು ಪುರೋಹಿತಂ ಸೋಮಶರ್ಮಂಗಂ ತ್ರಿವೇದಿಗಂ ಪುಟ್ಟಿದ ನಾಗಶ್ರೀಯೆಂಬೊಳ್ ಮಗಳಾದಳದಱಿಂ ನಿಮಗೀ ಕೂಸಿನ ಮೇಗತಿ ಸ್ನೇಹಮಾದುದೆಂದು ಪೇೞ್ದುದೆಲ್ಲಮಂ ನಾಗಶ್ರೀ ಕೇಳ್ದು ಕಱಿದಯ್ದು ಭವಂಗಳುಂ ತನಗೆ ಪ್ರತ್ಯಕ್ಷಮಾದಂತಱಿದು ಭಟಾರರ ಕಾಲ್ಗೆಱಗಿ ಪೊಡೆವಟ್ಟು ಧರ್ಮಮಂ ಬೆಸಗೊಂಡು ಕೇಳ್ದಣುವ್ರತಂ ಮೊದಲಾಗೊಡೆಯ ಶ್ರಾವಕಬ್ರತಂಗಳಂ ಸಮ್ಯಕ್ತಪೂರ್ವಕಂ ಕೈಕೊಂಡು ಬಂದಿಸಿ ಮನೆಗೆ ಪೋಪಾಗಳ್ ಭಟ್ಟಾರರೆಂದರ್

ಮಗಳೆ ಎಮ್ಮ ಕೊಟ್ಟ ಬ್ರತಂಗಳಂ ನಿಮ್ಮಮ್ಮಂ ಬಿಸುಡಲ್ವೇೞ್ದನಪ್ಪೊಡೆ ಪೆಱುಳಿ ಬಿಸುಡದಿರೆಮ್ಮಲ್ಲಿಗೆ ವಂದೆಮ್ಮ ಕೊಟ್ಟ ಬ್ರತಂಗಳನೆಮಗೊಪ್ಪಿಸುವುದೆನೆ ಕೇಳ್ದಂತೆ ಗೆಯ್ವೆನೆಂದು ಮನೆಗೆ ವೋಗಲೊಡನೆಯ ಕೂಸುಗಳ್ ಸೋಮಶರ್ಮ ಭಟ್ಟಂಗೆ ನಿಮ್ಮ ಮಗಳ್ ರಿಷಿಯರ ಪಕ್ಕದೆ ಶ್ರಾವಕ ಬ್ರತಂಗಳಂ ಕೈಕೊಂಡು ವಂದಳೆಂದಡೆ ಭಟ್ಟಂ ಕೇಳ್ದು

ಮಗಳೆ ನಾಗಶ್ರೀ ನಾಮುಂ ಪಾರ್ವರೆಮುಂ ಲೋಕಕ್ಕೆಲ್ಲಮಗ್ಗಳಂ ಲೋಕದಿಂ ಪೂಜಿತರೆಮುಮೆಮ್ಮಿಂದಗ್ಗಳಂ ಪೆಱರಿಲ್ಲದಱಿಂದಂ ಸವಣರ ಧರ್ಮಮಂ ನಮಗೆ ಕೊಳಲಾಗ [ದು] ಬಿಸುಡು ಮಗಳೇ ಎನೆ ನಾಗಶ್ರೀ ಎಂದಳೆಮ್ಮ ವ್ರತಂಗಳಂ ಕೊಟ್ಟ ರಿಷಿಯರ್ಗೆ ಪೋಗಿಯೊಪ್ಪಿಸಿ ಬಿಸುಟ್ಟಪೆನೆನೆಯಂತೆಗೆಯ್ಯೆಂದು ಮಗಳ ಕೈಯಂ ಪಿಡಿದಿರ್ವ್ವರುಂ ರಿಷಿಯರಲ್ಲಿಗೆ ಬ್ರತಂಗಳನೊಪ್ಪಿಸಲೆಂದು ಪೋಪನ್ನೆಗಾವಡೆಯೊಳ್ ಬಟ್ಟೆಯೊಳೊರ್ವನಂ ಪೆಡಂಗಯ್ಯುಡಿಯೆ ಕಟ್ಟಿಯೊಂದೆವಱಿಗುಟ್ಟಿ ಪೊೞಲ ಜನಂಗಳು ಮುಸುಱಿಕೊಂಡು ನೋಡುತ್ತಮೊಡನೆ ಬರೆ ನೂಂಕುತ್ತುಂ ಕೊಲಲುಯ್ವ ಪುರುಷನಂ ಯೌವನನಂ ತೇಜಸ್ವಿಯಂ ಕಂಡು ನಾಗಶ್ರೀ

ತಮ್ಮಮ್ಮನಂ ಬೆಸಗೊಳ್ದುಂ ಈತನನೇಕೆ ಕೊಲಲುಯ್ದಪರಮ್ಮಾ ಬೆಸಗೊಳ್ವೆಮೆನೆ ಸೋಮಶರ್ಮನುಂ ಕೊಲಲುಯ್ವ ಪ್ರಧಾನನಪ್ಪ ತಳಾಱನಂ ಬೆಸಗೊಂಡು ತದ್ವೃತ್ತಾಂತಮೆಲ್ಲಮನಱಿದು ನಾಗಶ್ರೀಗಿಂತೆಂದು ಪೇೞ್ದಂ

ಈ ಪೊಳಲ ಪ್ರಧಾನನಪ್ಪ ಶ್ರೇಷ್ಠಿ ಇಂದ್ರದತ್ತನೆಂಬೊಂ ಪದಿನಾಱು ಕೋಟಿ ಕಸವರಮನೊಡೆಯೊನಾತನ ಮಗನೀತಂ ವರಸೇನನೆಂಬೊಂ ಜೂದಾಡಿಯಕ್ಷಧೂರ್ತನೆಂಬೊಂಗೆ ಸಾಸಿರ ದೀನಾರಮಂ ಸೋಲ್ತು ಸೋಲಮಂ ಕುಡಲಾಱದೆಯರಸರಾಣೆಯಂ ಮಿಕ್ಕು ಪೋಪನ್ ಮುಂದಡ್ಡಮಾಗಿರ್ದೊನನನಪಱಾಧಿಯನಕ್ಷಧೂರ್ತನಂ ಕೊಂದನ್ ಅದಱಿಂದರಸನೀತನಂ ಕೊಲವೇೞ್ದುದಱಿಂ ಕೊಲಲುಯ್ದಪರ್ ಮಗಳೆ ಎಂದು ಪೇೞ್ದೊಡೆ ನಾಗಶ್ರೀಯುಮೆಂದಳಂತಪ್ಪೊಡಂ ಆನುಂ ರಿಷಿಯರ ಪಕ್ಕದೀ ಬ್ರತಮನೆ ಸಾವಿಂಗಂಜಿ ಜೀವಂಗಳಂ ಕೊಲ್ಲೆನೆಂಬ ಬ್ರತಮಂ ಕೊಂಡೆನಾ ಬ್ರತಮನವಗ್ಗೊಪ್ಪಿಸಿದೊಡಾನುಮಮೋಘಂ ಜೀವಂಗಳಂ ಕೊಲಲ್ವೇೞ್ಕುಮಾ ಜೀವಂಗಳಂ ಕೊಂದೊಡೆನ್ನುಮನೀತನಂತೆ ಪೆಡಂಗೆಯ್ಯುಡಿಯೆ ಕಟ್ಟಿಯೊಂದೆಪೞಿಗುಟ್ಟಿ ನೀಮೆಲ್ಲರುಂ ನಂಟರ್ ನೋಡೆ ಸ್ಮಶಾನಕ್ಕುಯ್ದು ಸೂಲದೊಳಿಕ್ಕಿ ಕೊಲ್ವರೆನೆಯಂತಪ್ಪೊಡೀಯೊಂದು ಕೊಲ್ಲದ ಬ್ರತಂ ನಿನಗಿರ್ಕೆ ಮಗಳೆ ಉೞಿದ ಬ್ರತಂಗಳೆಲ್ಲಮಂ ಪೋಗಿ ಕ್ಷಪಣಕಂಗೊಪ್ಪಿಸುವಮೆಂದು ಕಿಱಿದನ್ತರಮಂ ಪೋಪನ್ನೆಗಂ ಮತ್ತೊರ್ವನಂ ಮುನ್ನಿನಂತೆ ಕೊಲಲ್ಕೆ ಕೊಂಡು ಪೋಪ ಪುರುಷನಂ ಕಂಡು ನಾಗಶ್ರೀ ತಮ್ಮಮ್ಮನಂ ಬೆಸಗೊಳವೇೞ್ದೊಡಾತನುಂ ಬೆಸಗೊಂಡೆಲ್ಲಮನಱಿದು ಮಗಳ್ಗಿಂತೆಂದು ಪೇೞ್ದಂ ಕೇಳ್ ಮಗಳೆ ವೈನೈಕನೆಂಬನೊರ್ವ್ವಂ ಪುರುಷಂ ಕನ್ನೆಯ ಬಂಟನ ವೃದ್ಧ ಸ್ತ್ರೀಯ ಮೂವರ ಚಿತ್ರಕಥೆಗಳಂ ಪಟದೊಳ್ ಬರೆದು ತೋಱಿ ಪೇೞ್ದು ಲೋಗರುಂ ಡಂಬಿಸಿ ಮಾಱುವ ಭತ್ತಮಂ ಕಳ್ಬೊನಾ ಮೂಱು ಕಥೆಗಳೊಳಗೆ ಕನ್ನೆಯ ಕಥೆಯಂ ಪೇೞ್ದೊನದೆಂತೆಂದೊಡೆ

ಕೌಶಂಬಿಯೆಂಬ ಪೊಟಲೊಳ್ ಸುಮಿತ್ರನೆಂಬೊಂ ಶ್ರೇಷ್ಠಿ ಕೋಟಿ ಕಸವರಮನೊಡೆಯನಾತನ ಮಗಂ ವಸುಮಿತ್ರನೆಂಬೊಂಗೆ ಸರ್ಪದಷ್ಟಮಾದಡೆ ಸತ್ತನೆಂದು ಸ್ಮಶಾನಕ್ಕೆ ಸಂಸ್ಕರಿಸಲ್ಕೆ ಕೊಂಡು ಪೋಗಿಯಿೞಿಪಿದೊಡಲ್ಲಿಗರುಡನಾಭಿಯೆಂಬ ಮಂತ್ರವಾದಿ ಪೋಗಿ ನೋಡಿ ಈತನನಾಂ ನಾಳೆಯಭಿಮಂತ್ರಿಸಿ ಬಾೞಿಸುವೆನಂಜದಿರಿಮಿಲ್ಲಿಯೆ ಇರುಳಿರ್ಕನ್ನೆಗಂ ಜಾವಮಿರಿಮೆಂದು ಪೇೞ್ದು ಪೋದಂ ಸುಮಿತ್ರಸೆಟ್ಟಿಯುಂ ನಾಲ್ವರೊಳ್ಳಿದರಪ್ಪ ಸುಭಟರಂ ಜಾವಮಿಱಿಸಿ ಪೋದಂ ನಾಲ್ವರುಂ ಜಾವಮಿರ್ದ ಭಟರೊಟಗೊರ್ವನಿರುಳ್ ಕುಱಿಯಂ ಕಳ್ದು ತರಲ್ ಪೋದಂ ಮತ್ತೋರ್ವ್ವಂ ಪುಳ್ಳಿಯಂ ತರಲ್ಪೋದಂ ಮತ್ತೋರ್ವಂ ಕಿಚ್ಚಂ ತರಲ್ಪೋದಂ ಮತ್ತೋರ್ವಂ ದಾಷ್ಟಿಕನ ಪಕ್ಕದೆ ಕಾಪಿರ್ದನಂತಾ ನಾಲ್ವರುಂ ಕುಱಿಯಂ ಕೊಂದು ಸುಟ್ಟು ತಿಂದರೆಂಬ ಕಥೆಯುಮಂ ಪೊತ್ತಱಿನೇಸಱ್ ಮೂಡೆ ಗರುಡನಾಭಿಯೆಂಬ ಮಂತ್ರವಾದಿ ಬಂದು ಪಱಿಕುಟ್ಟಿ ಮಂತ್ರಿಸಿ ದಾಷ್ಟಿಕನನೆತ್ತಿದಂ ಸುಮಿತ್ರಶ್ರೇಷ್ಠಿಯುಮಿರುಳು ಜಾವಮಿಳ್ದ ನಾಲ್ವರ್ [illegible] ರೋರ್ವರ್ಗ್ಗೆ ಬೇಱಿವೇಱಿ ಸಾಸಿರ ದೀನಾರದ ಪೊಟ್ಟಳಿಗೆಗಳಂ ಪ್ರಾಸಾದದ ಪೋಗಿಳ್ದು ಜನ ಸಂಕೀರ್ಣದ ನಡುವೆ ನಾಲ್ಕು ಪೊಟ್ಟಳಿಗಯನೀಡಾಡಿದೊಡಾ ನಾಲ್ವರೊಳಗೋರ್ವಂ ಪೊಟ್ಟಳಿಗೆಯಂ ಕೊಂಡುಂ ಕೊಳ್ಳೆನೆಂದು

ಪುಸಿದೊಡಾ ಸೆಟ್ಟಿಯುಮರಸರ್ಗ್ಗೆ ಪೋಗಿ ಬಿನ್ನಪಂಗೆಯ್ವನೆನ್ನ ಸಾಸಿರ ದೀನಾರದ ಪೊಟ್ಟಳಿಗೆ ಕೆಟ್ಟುದದಂ ದೇವರಾರಯ್ವುದೆಂದು ಪೇೞ್ದೊಡೆ ತಳಾಱನಂ ಕರೆದು ಬೇಗಂ ಕಳ್ಳನನಾರಯ್ಯಲ್ಲದಾಗಳಮೋಘಂ ಕಳ್ಳಂಗೆ ತಕ್ಕ ನಿಗ್ರಹಮಂ ನಿನಗೆ ಮಾಡುವೆನೆಂದರಸನಾತನಂ ಬಗ್ಗಿಸಿ ನುಡಿದೊಡಾತನುಮಱಸಿ ಕಳ್ಳನನಾರಯ್ಯಲಾಱದೆ ನಾಲ್ವರುಂ ಸುಭಟರುಮಂ ಮನೆಗೊಡಗೊಂಡು ಬಂದು ಭೀತನಾಗಿ ಬಿನ್ನನೆ ಮೊಗಂ ಬಾಡಿ ಚಿಂತಿಸುತ್ತಿರ್ದ್ದೊಡಾತನ ಮಗಳು ಸುಮತಿಯೆಂಬೊಳಿಂತೇಕೆ ಖಿನ್ನನಾಗಿ ಚಿಂತಿಸುತ್ತಿರ್ದ್ದಪ್ಪೆಯಮ್ಮಾ ಎಂದು ತಂದೆಯಂ ಬೆಸಗೊಂಡೊಡಾತನುಂ ತದ್‌ವೃತ್ತಾಂತಮೆಲ್ಲಮಂ ಮಗಳ್ಗಱಿಯೆ ಪೇೞ್ದೊಡಂಜಲ್ವೇಡಿದನೆಲ್ಲಮನಾನಾರಯ್ದು ಕಳ್ಳನುಮಂ ಕಸವರಮುಮಂ ನಾಳೆ ನಿಮಗೊಪ್ಪಿಸುವೆನಿಂ ನೀಮುಂ ನಿಶ್ಚಿಂತಮಿರಿಂ ಎಂದು ತಂದೆಯನೇಕಾಂತದೊಳ್ ನುಡಿದು ಸಂತವಿಸಿದಾಗಳ್ ಸುಮತಿಯುಮಿರುಳೆ ಕಳ್ಳರಂ ಪರೀಕ್ಷಿಸಲ್ವೇಡಿಯಾ ನಾಲ್ವರುಂ ಸುಭಟರ ಪಕ್ಕದಿಟ್ಟವರ್ಗ್ಗೆ ಕಥೆಯ ಪೇೞ್ಗುಂ.

ಪಾಟಲೀಪುತ್ರಮೆಂಬುದು ಪೊೞಲಲ್ಲಿ ಶ್ರೇಷ್ಠಿ ಸುದತ್ತನೆಂಬೊನಾತನ ಮಗಳ್ ಸುದಾಮೆಯೆಂಬ ಕನ್ನೆಯೊಂದು ದಿವಸಂ ಗಂಗೆಯಂ ಮಿಯಾಲ್ವೋಗಿ ಮಿೞವಲ್ಲಿ ನೆಗೞ್ಪಿಡಿದೊಡಾದಮಾನುಮಂಜಿ ತಡಿಯೊಳಿರ್ದ್ದ ಧನದತ್ತನೆಂಬೊಂ ಸೋದರ ಮಯ್ದುನನಂ ಕಂಡೆನ್ನಂ ಬೇಗಂ ಬಿಡಿಸೆಂದೊಡಾತನಿಂತೆಂದನೆನ್ನಂ ಬೇಡಿದುದನೀವೊಡೆ ನಿನ್ನಂ ಕಾವೆನೆಂದೊಡಾಕೆಯುಮೀವೆನೆಂದು ಪೂಣ್ದೊಡೆ ಬೇಗಂ ನೀರಂ ಪೊಕ್ಕು ನೆಗೞಿಂ ತಾಟಿಸಿ ಬಿಡಿಸಿದ ಬೞಿಕ್ಕೆ ಪೇೞೀನಂ ಬೇಡುವ್ಯೆ ನಿನ್ನ ಬೇಡಿದುದೆಲ್ಲಮನೀವೆನೆಂದು ಕನ್ನೆ ನುಡಿದೊಡಾತನಿಂತೆಂದಂ

ನಿನ್ನ ಮದುವೆಯಂದು ಪ್ರಥಮ ದಿವಸದ ಪಸದನಮನೆನಗೆ ಬಂದು ತೋಱಲ್ವೇೞ್ಕುಮೆಂದು ಬೇಡಿದೊಡಾಕೆಯುಮಂತೆ ಗೆಯ್ವೆನೆಂದು ಪೂಣ್ದಳಿಂತು ಕಾಲಂ ಸಲೆ ಮತ್ತಾ ಕನ್ನೆಗೆ ಯೌವನಂ ನೆಱೆದಂದು ಮದುವೆಯಾದೊಡೆ ತನ್ನ ಪೂಣ್ದ ಪ್ರತಿಜ್ಞೆಯಂ ನೆನೆದು ಸರ್ವಾಭರಣ ವಿಭೂಷಿತೆಯಾಗಿಯಾದವಳಾನುಂ ಕೈಗೆಯ್ದು ಚೆಲ್ವೆಯಾಗಿ ನಟ್ಟನಡುವಿರುಳ್ ಮನೆಯಿಂದಂ ಪೊಱಮಟ್ಟು ಮಯ್ದುನನಿರ್ದಾಪಣಕ್ಕೆ ಪೋಪನ್ನೆಗಾವೆಡೆಯೊಳ್ ಕಳ್ಳನೊರ್ವಂ ಕಂಡು ನಿನ್ನ ತೊಟ್ಟಾಭರಣಮೆಲ್ಲಮಂ ಕೊಟ್ಟು ಪೋಗಲ್ಲದಾಗಳ್ ಪೋಗಲೀಯೆನೆಂದೊಡೀಗಳೆ ಪೋಗಿ ಬಂದು ನಿನಗೆನ್ನ ತುಡಿಗೆಯೆಲ್ಲಮಂ ಕುಡುವೆನನ್ನೆಗಮಿಲ್ಲಿ ಎನ್ನ ಬರ್ಪನ್ನೆಗಮೆತ್ತಂ ಪೋಗದಿರೆಂದು ನಂಬೆ ನುಡಿದು ಸಂತಯಿಸಿ ಕಿಱಿದಂತರಮಂ ಪೋಪನ್ನೆಗಂ ತಳಾಱಂ ಕಂಡೀ ಪೊೞ್ತೆತ್ತ ಪೋದಪ್ಪೆ ಪೊಲ್ಲಮಾನಸಿಯೆ ಎಂದು ಪಿಡಿದು ಕಾಡೆ ಪಿರಿದೊಂದು ಮನೆವಾರ್ತೆಯುಂಟೆನ್ನಂ ಕಾಡಲೀಯದೆ ಪೋಗಲೀಯಾನೀಗಳೆ ಪೋಗಿ ನಿನ್ನಲ್ಲಿಗೆ ಬರ್ಪ್ಪೆಂ ಬಂದೊಡೆ ನಿನ್ನ ಮೆಚ್ಚುಗೆಯ್ವೆನೆಂದು ನಂಬೆ ನುಡಿದು ನನ್ನಿಗೊಟ್ಟು ಕಿಱಿದಂತರಮಂ ಪೋಪನ್ನೆಗಮೆಡೆಯೊಳು ಬ್ರಹ್ಮರಾಕ್ಷಸಂ ಕಂಡು ತಿನಲ್ ಬಗೆದೊಡೆ ಬ್ರಹ್ಮರಾಕ್ಷಸಂಗೆಂದಳ್ ಪಿರಿ ದೊಂದು ಮನೆವಾೞ್ತೆಯುಂಟೀಗಳೆ

ಪೋಗಿ ಬಂದಪ್ಪೆಂ ಬಂದ ಬೞಿಕ್ಕೆನ್ನಂ ನೀ ಮೆಚ್ಚಿದುದಂ ಮಾಡೆಂದು ನನ್ನಿಗೊಟ್ಟು ನಂಬಿಸಿ ಪೋದೊಡಾ ಕಳ್ಳನುಂ ತಳಾಱನುಂ ಬ್ರಹ್ಮರಾಕ್ಷಸನುಮಂತು ಮೂವರುಮೀಕೆಯಂ ಪೋಪ ತುಱಿಪದಿಂದಟ್ಟಿಱಿಂದೆತ್ತ ಪೋದಪ್ಪಳೆಂದು ಬೞಿವೞಿಯನೆ ನೋಡುತ್ತಂ ಪೋಪನ್ನೆಗಂ ಮಯ್ಯುನನುಂ ಪಟ್ಟಿರ್ದಾಪಣಕ್ಕೆ ಪೋಗಿ ಬಾಗಿಲಂ ತೆಱೆಯಿಮೆಂದಾಗಳಿವರಾರೆಂದು ಬೆಸಗೊಂಡಾಗಳಾನಲ್ತೆ ಸುದಾಮೆಯೆನೆಂದೊಡೆ ಬಾಗಿಲಂ ತೆಱೆದಾಪಣದೊಳಗಂ ಪೊಕ್ಕಳನೀಪೊೞ್ತೀಕೆ ವಂದೆಯೆಂದು ಬೆಸಗೊಂಡೊಡೆ ನೀನಲ್ತೆ ಎನ್ನಂ ನನ್ನಿಗೊಂಡಯ್ ಎನ್ನ ಮದುವೆಯಂದು ಪ್ರಥಮ ದಿವಸದ ಪಸದನಮನೆನಗೆ ತೋಱಲ್ವೇೞ್ಕುಮೆಂದು ಬೇಡಿದೊಡಾ ಪ್ರತಿಜ್ಞೆಯಂ ನೆಱಪಲ್ ಬಂದೆನೆಂದು ತನ್ನಂ ತೋಱಿದೊಡಾತನುಂ ಆಕೆಯ ರೂಪಂ ನೋಡಿ ಮೆಚ್ಚಿ ವಿದ್ಯಾಧರಿಯ ದೇವಗಣಿಕೆಯ ರೂಪನೆ ಪೋಲ್ವೆಯೆಂದು ಪೊಗೞ್ದು ಮತ್ತಮಿಂತೆಂದಂ

ಪ್ರತಿಜ್ಞೆಯಂ ನೆಱಪಿದೆಯೊಳ್ಳಿತ್ತಾಯ್ತೀ ಪೊೞ್ತು ಪೊಲ್ಲದುವಂದ್ಯೆ ನಟ್ಟನಡುವಿರುಳ್ ಕಳ್ಳರುಂ ತಳಾಱರುಂ ನಿನ್ನಂ ಕಾಡುವರ್ ಬೇಗಂ ಪೋಗೆಂದು ನುಡಿದು ಪೋಗ ವೇೞ್ದೊಡದೆಲ್ಲಮನಾ ಮೂವರುಂ ಪೊಱಗೆ ಕೇಳ್ದು ಮತ್ತಂ ಬೇಗ ಬೇಗಂ ಪೋಗಿ ತಮ್ಮಿರ್ದ್ದೆಡೆಗಳೊಳ್ ಇರ್ದ್ದರನ್ನೆಗಮಾ ಮದೆವಳ್ ರಕ್ಕಸನಲ್ಲಿಗೆ ಬಂದಿನ್ನೆನ್ನಂ ನೀಂ ಮೆಚ್ಚಿತಂ ಮಾಡೆಂದು ತನ್ನನೊಪ್ಪಿಸಿದೊಡಾ ಬ್ರಹ್ಮರಾಕ್ಷಸನಿಂತೆಂದಂ

ನೀನುಂ ಸತ್ಯವಾದಿಯಯ್ ಆದವಾನುಂ ರೂಪು ಲಾವಣ್ಯ ಸೌಭಾಗ್ಯ ಕಾಂತಿಯನೊಡೆಯಳಯ್ ನಿನ್ನಂ ತಿಂದಾನಾವ ಗತಿಗೆ ಪೋಪೆಂ ನಿನ್ನ ರೂಪನೞಿಯ ಲಾಱೆನದಱಿಂ ನೀನಂಜದೆ ಪೋಗೆಂದು ಪೋಗವೇೞ್ದೊಡೆ ಬರ್ಪಳನ್ನೆಗಂ ತಳಾಱನಂ ಕಂಡಿನ್ನೆನ್ನಂ ನೀಂ ಮೆಚ್ಚುಗೆಯ್ಯೆಂದು ನುಡಿದೊಡಾತನಿಂತೆಂದಂ ನೀಂ ಪೊಲ್ಲ ಮಾನಸಿಯೆಂದು ಮನದೊಳ್ ಬಗೆದೆಂ ನಿನ್ನಂತೊಳ್ಳಿದರಾರುಮಿಲ್ಲೆಂದು ನುಡಿದು ನನ್ನಿಯಂ ತಪ್ಪದೆ ಬಂದೌ ಸತ್ಯವಾದಿಯ್ಯೆ ಪೋಗಬ್ಬಾ ಎಂದು ಪೋಗಲ್ವೇೞ್ದೊಡೆ ಬರ್ಪ್ಪಳನ್ನೆಗಂ ಕಳ್ಳನಂ ಕಂಡು ತನ್ನ ತೊಟ್ಟಾಭರಣಂಗಳೆಲ್ಲಮಂ ಕಳೆದೊಪ್ಪಿಸೆಯಾತನಿಂತೆಂದನ್ ಎನಗೇನೊಂದೆ ಭವಮೆ ನಿನ್ನ ಕೈಯಿಂದಂ ಕೊಂಡಾನೇನಾಚಂದ್ರಾರ್ಕ್ಕತಾರಂಬರವರೆಗಂ ಬರ್ದ್ದಪ್ಪೆನೇ ಎಣಿಕೊಂಡ ಕಸವರಂ ತಪನಿಧಿಯಂತೆ ತವದಿರ್ದ್ದಪುದೆ ನಿನ್ನ ಕಯ್ಯಿಂದಂ ಕೊಳ್ಳೆ ಪೊಗಬ್ಬಾ ಎಂದು ಪೋಗವೇೞ್ದನಂತಾ ಮೂವರುಂ ಮದೆವಳಂ ಪೋಗಲ್ವೇೞ್ದು ಪೂಜಿಸಿ ಕಳಿಪಿದೊಡಾಕೆಯುಂ ತನ್ನ ಮನೆಗೆ ಪೋದಳಿಂತು ಅವರೊಳಗೊಳ್ಳಿದರಾರಣ್ಣಂಗಳಿರಾ ಎಂದು ಸುಮತಿಯೆಂಬ ಕನ್ನೆ ಬೆಸಗೊಂಡೊಡಾ ನಾಲ್ವರುಂ ಸುಭಟರೊಳಗೋರ್ವನಿರುಳ್ ಕುಱಿಯ ಕೊಂದವಂ ಬೊಮ್ಮರಾಕ್ಷಸನಾಕೆಯಂ ತಿನ್ನದೆ ಕೞಿಪಿದೊಡಾತನೊಳ್ಳಿದನೆಂದಂ ಸರ್ಪದಷ್ಟನ ಕಾದಿರ್ದ್ದಾತಂ ತಳಾಱಂ ಕಾಡದೆ ಕಳಿಪಿದೊಡಾತನೊಳ್ಳಿದನೆಂದಂ ಕಿಚ್ಚಂ ತರಲು ಪೋದಾತನಿಂತೆಂದಂ ಮದೆವಳ ಸೋದರಮಯ್ಯುನನತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿ ಹಾವ ಭಾವ ವಿಳಾಸ ವಿಭ್ರಮಂಗಳನೊಡೆಯಳಂ ಸೋದರ ಮಾವನ ಮಗಳಂ ತನ್ನಲ್ಲಿಗೆ ಬಂದೊಳನೇಕಾಂತಂ

ಸಮನಿಸಿದೊಡಾಕೆಗಳಿಪದೆ ಪೋಗವೇಟ್ಟಿಂ ಧನದತ್ತನೊಳ್ಳಿದನೆಂದಂ ಪುಳ್ಳಿಯಂ ತರಲ್ವೋದಾತಂ ಸಾಸಿರ ದೀನಾರದ ಪೊಟ್ಟಳಿಗೆಯಂ ಕಳ್ದಾತನಿಂತೆಂದಂ ಮದವಳಿಗೆ ತೊಟ್ಟಾಭರಣನೆಲ್ಲಮಂ ಕೊಳ್ಳದೆ ಕಟಿಪಿದ ಕಳ್ಳನೊಳ್ಳಿದನೆಂದೊಡಾತನುಂ ಕಳ್ಳನಪ್ಪುದನಱಿದು ಕಿಱಿದು ಬೇಗಮಿರ್ದ್ದಾ ನುಡಿಗಳೆಲ್ಲಮಂ ಮಱೆಯಿಸಿ ಎಲ್ಲರುಂ ಮಱಲುಂದಿಸಿದ ಬೞಿಕ್ಕಮಾ ಕಳ್ಳನನೆಟ್ಟಿ ಏಕಾಂತದೊಳಿಂತೆಂದು ನುಡಿಗುಂ ನಿನಗಾನಾಟಿಸಿದೆನೆನಗೆ ನೆಱೆಯೆ ತುಡುಗೆಯಂ ಮಾಡಿಸಲ್ ಕಸವರಮುಳ್ಳೊಡೆ ನಿನಗಾಂ ಪೆಂಡತಿಯೆನಾಗಿ ನಿನ್ನೊಡವಪ್ಪೆನೆಂದವನನುಕ್ಕೆವದಿಂದಂ ಮನಂಗೊಳೆ ನಂಬೆ ನುಡಿದೊಡಾತನುಂ ಮೆಯ್ಯಱಿಯದೆ ದೀನಾರ ಸಹಸ್ರದ ಪೊಟ್ಟಳಿಗೆಯಂ ತೆಗೆದು ಕೊಟ್ಟನಿದಱೊಳಗೆ ನಿನಗೆ ತುಡುಗೆಯಂ ಮಾಡಿಸುವೆಂ ಬಾ ಪೋಪಮಿರ್ವ್ವರುಮೆಂದೊಡಂತೆ ಗೆಯ್ವೆನೆಂದು ಪೊನ್ನ ಪೊಟ್ಟಳಿಗೆಯಂ ತಂದೆಯ ಮಱಲುಂದಿದಲ್ಲಿಗೆ ಪೋಗಿ ಬರುಂಟಿ ಎಟ್ಟಿಸಿ ಪೊಟ್ಟಳಿಗೆಯಂ ತಂದೆಗೆ ಕೊಟ್ಟಳ್ ಕೊಟ್ಟೊಡಾತಂ ಕಳ್ಳನುಮಂ ದೀನಾರ ಸಹಸ್ರದ ಪೊಟ್ಟಳಿಗೆಯುಮಂ ಕೊಂಡು ಪೋಗಿಯರಸಂಗೊಪ್ಪಿಸಿದನೆಂಬೀ ಚಿತ್ರಕಥೆಗಳಂ ಜನಂಗಳ್ಗೆ ಪೇೞ್ದು ಭತ್ತಮಂ ಕಳ್ವೊಂ ವೈನ್ಯಕನೆಂಬೊಂ ಕಳ್ಳನಿನ್ನುಮಾತನ ಪೇೞ್ದ ಕಥೆಗಳಂ ಪೇೞ್ವೆಂ ಕೇಳ್ ಮಗಳೆ ಎಂದು ಸೋಮಶರ್ಮ ಭಟ್ಟಂ ನಾಗಶ್ರೀಗಿಂತೆಂದು ಪೇೞ್ಗುಂ

ಧರ್ಮಪುರಮೆಂಬುದು ಪೊೞಲಲ್ಲಿ ನಾಗದತ್ತನೆಂಬೊಂ ಶ್ರೇಷ್ಠಿಯಾತನ ಬಂಟಂ ವೈಶಾಖನೆಂಬೊನಾತನೊಂದು ದಿವಸಂ ಕರ್ಬ್ಬಿನ ಕೆಯ್ಯನುೞ್ವಲ್ಲಿ ನಿದಾನಮಂ ಕಂಡದಂ ಮಱಸಲ್ವೇಡಿ ತನ್ನ ಪೆಂಡತಿಯ ಮನವಂ ಪರೀಕ್ಷಿಸಲ್ವೇಡಿ ಕೃತಕ ಗರ್ಭಮಂ ತಾಳ್ದಿರೆ ಪೆಂಡತಿ ಕಂಡಿದೇನು ಬಸಿರ್ಬಾತಿರ್ದ್ದುದೆಂದೊಡಾತನಾ ಮಾತಿನೊಳೇನೋ ಕೆಮ್ಮಗಿರೆಂದೊಡಾಕೆ ನಿರ್ಬಂದದಿಂ ಕೀೞಿ ಬೆಸಗೊಳೆಯಾಗ್ಗಳ್ಂ ಪೇೞೆಯಪ್ಪೊಡೆ ನಿನಗೆ ಪೇೞ್ವೆನೆಂದಿಂತೆಂದಂ ಪುರುಷರ್ಕಳ್ಗಾಗದ ಗರ್ಭಮೆನಗಾದುದೆಂದು ಪೇೞ್ದೊಡದಂ ಕೇಳ್ದು ಸೈರಿಸಲಾಱದೆ ಪೊೞಲ ಜನಂಗಳೆಲ್ಲಮದನಱಿವಂತು ಪೇೞ್ದಳೆಂಬೆರಡನೆಯ ಬಂಟನ ಕಥೆಯಂ ಪೇೞ್ದು ಮೂಱನೆಯ ವೃದ್ಧಸ್ತ್ರೀಯ ಕಥೆಯನಿಂತೆಂದು ಪೇೞಲ್ ತೊಡಗಿದೊಂ

ಹರಿಪುರಯೆಂಬ ಪೊೞಲೊಳ್ ಗಂಭೀರೆಯೆಂಬೊರ್ವ್ವಳ್ ಬಿರ್ದ್ದಿಯಾಕೆಯ ಮಗಳ್ ಹರಿಣಿಯೆಂಬೊಳಾಕೆಯಂ ಜಯಂತಮೆಂಬ ಪೊೞಲೊಳ್ ವಸುದತ್ತನೆಂಬ ಪರದಂಗೆ ಕೊಟ್ಟೊಡಾಕೆಗೆ ಗರ್ಭಮಾಗಿ ಮೋದಗೆಯ ಮೇಗೆ ಬಯಕೆಯಾದೊಡೆ ತಾಯ್ ಪಲವುಂ ತೆಱದ ಲಡ್ಡುಗೆಗಳುಂ ಮಂಡಗೆಗಳುಂ ಮೊದಲಾಗೊಡೆಯ್ದ ಪಲವು ಭಕ್ಷ್ಯ ರೂಪಂಗಳುಮಂ ಕೊಂಡು ಗಂಭೀರೆಯೆಂಬ ಬಿರ್ದ್ದಿ ಹರಿಪುರದಿಂ ಪೊಱಮಟ್ಟು ಮಗಳಿರ್ದ್ದೂರ್ಗ್ಗೆ ಪೋಪನ್ನೆಗಾವೆಡೆಯೊಳೆಣ್ಬರ್ ಕಳ್ಳರಂ ಕಂಡು ಅವರೊಳಗೊರ್ವ್ವನಂ ಪಿಡಿದೞ್ತೆನ್ನ ಮಗಂ ನಿನ್ನನ್ನನೆ ಪೋಲ್ಕುಂ ಪನ್ನೆರಟ್ಬರಿಸಂ ಪೋದನೆತ್ತ ಪೋದನೆಂದಱಿಯೆನಾತನಂ ಕಾಣದಿರುಳುಂ ಪಗಲುಂ ನೆನೆದೞ್ತು ಕಣ್ಗಳುಂ ಬಾತಿಪ್ಪುದಿಂದೆನಗಾತಂ ಬಂದಂತಿರೆ ನಿನ್ನಂ ಕಂಡು ಸಂತೋಷಮಾಯ್ತು ಮಗನೆ ನೀಮೆಲ್ಲಂ ಬನ್ನಿಂ ಪೋಪಂ ಸಾರೆಯೂರು ಮಿಂದುಂಡುಟ್ಟು

ವಿಶ್ರಮಿಸಿ ನಾಳೆ ಪೋಪಿರೆಂದೊಡಗೊಂಡು ಪೋಗಿ ಮಗಳ ಮನೆಯನೆಯ್ದಿ ಅವರ್ಗೆಲ್ಲಂ ನೀರನಿಡಿಸಿ ತಲೆಯಂ ಪೂಸಿಸಿಯೊಲ್ಲಣಿಗೆಯನುಡಿಸಿ ತಲೆಯೊಳ್ ಕೞಿಯಂ ಪೊಯ್ದಾಗಳ್ ಬಿರ್ದಿ ಮನೆಯ ಮೇಗೇಱಿ ಕಳ್ಳರೆಂದು ಪುಯ್ಯಲಿಟ್ಟಾಗಳನಿಬರುಂ ತ್ರಸ್ತಾಭಿಭೂತರಾಗಿ ಪಟ್ಟನೆ ಪೞಿಯೆಯೋಡಿ ಕೆಟ್ಟೊಳ್ಳಿತ್ತೆಮ್ಮಂ ಛಿದ್ರಿಸಿದಳೆಂದು ಪಗೆ ಸಾರಿರ್ದರಿತ್ತ ಬಿರ್ದಿಯುಂ ನೆಟ್ಟನೊಂದಿರುಳುಂ ಕಳ್ಳರ್ ಬರ್ಪರೆಂದಱಿದು ಕೂರಿತಪ್ಪ ಬಾಳಂ ಪಿಡಿದಿರ್ದಳನ್ನೆಗಮಿರುಳ್ ಕಳ್ಳರ್ ಬಂದಾಕೆಯ ಉಂದಿದ ಮನೆಯೊಳ್ ಕನ್ನಮಿಕ್ಕಿದೊಡೆ ಕನ್ನದ ಬಾಗಿಲೊಳ್ ಬಾಳನಡ್ಡಮಿಟ್ಟು ಪಿಡಿದಿರ್ದು ಪುಗುವ ಕಳ್ಳನ ಮೂಗನರಿದೊಡವಂ ಪೊಱಮಟ್ಟೆನಗೆ ಪುಗಲು ಪಾಂಗಿಲ್ಲ ನೀಂ ಪುಗೆಂದು ಪೆಱನೊರ್ವನಂ ಪುಗಿಸಿದೊಡಾತನ ಮೂಗುಮಂ ಕೊಱೆದೊಡಾತನುಂ ಪೆಱನೊರ್ವನಂ ಪುಗಿಸಿಯಂತನಿಬರುಂ ಸೂೞು ಸೂೞೊಳೆ ಪೊಕ್ಕನಿಬರ ಮೂಗುಮಂ ಕೊಱೆದಿಕ್ಕಿದೊಡನಿಬರುಂ ಮೂಗರಿಯೆಪಟ್ಟು ಪೊಱಮಟ್ಟು ಪೋಗಿಯೊರ್ವನಿಂದ್ರಜಾಲಿಗನ ಮನೆಯೊಳ್ ಕನ್ನಮಿಕ್ಕಿ ಪುಡುಕೆಯಂ ತೆಗೆದು ಪೊತ್ತು ಪೋಗಿ ಪೊಱವೊೞಲೊಳ್ ಸ್ಮಶಾನದೊಳಿೞಿಪಿ ಕುೞಿಯಂ ಕಳ್ದು ತಂದಱುವರ್ ಕಳ್ಳರುಂ ಮಱಲೊಂದಿದರೊರ್ವನಾ ಕುೞಿಯಂ ಕೊಂದು ಜಾವಮಿಟ್ಟು ಮಸಣದ ಕಿಚ್ಚಿನೊಳ್ ಪಿಸಿತಮಂ ಮಾಡುತ್ತಿರ್ದು ಪುಡುಕೆಯಂ ತೆಱೆದು ನೋೞ್ಪನ್ನೆಗಮದರೊಳಗಿರ್ದಿಂದ್ರಜಾಲಿಗರ ಪಾಪೆಗಳುಂ ಸೀರೆಗಳುಂ ಝುಣಂಬಮುಮಂ ಕೊಂಡೊಂದು ಪ್ರತಿಮುಖಮಂ ಕೊಂಡು ತನ್ನ ಮುಖದೊಳಿಟ್ಟು ಪುಲಿಯ ಝುಣಂಬಮುಮಂ ತೊಟ್ಟು ಸ್ಮಶಾನಗೊಳುರಿವ ಕಿಚ್ಚಿನ ಪಕ್ಕದೆ ನಿಂದಿರ್ದನನ್ನೆಗಮೆಟ್ಟಿರ್ತ್ತು ಕಂಡಱುವರುಂ ಕಳ್ಳರುಂ ಬೇತಾಳನೆಂದಂಜಿ ಪ್ರಾಣಭಯದಿಂದೋಡಿ ಕೆಟ್ಟರಾತನುಮವರೋಡುವುದಂ ಕಂಡು ಪಿಶಿತಮಂ ಕೊಂಡು ಬೞಿಯಂ ತಗುಳೆ ಎನಿತೆನಿತನಾತನ ಕಾಣ್ಬರನಿತನಿತನೆ ಬೇತಾಳಂ ಬೞಿಯಂ ತಗುಳ್ದನೆಂದೋಡೆ ಪ್ರತಿ ಮುಖಮಂ ಝಳಂಬಮುಮಂ ಕಳೆದೀಡಾಡಿ ತನ್ನ ಪೆಸರಂ ಪೇೞ್ದವರಂ ಮಾಣಿಸಿಯೊಡಗೂಡಿ ತನ್ನ ಮಾಡಿದ ಪಿಶಿತಮನವರ್ಗೆಲ್ಲಂ ಪಚ್ಚುಕೊಟ್ಟು ಅನಿಬರುಮೊಂದಾಗಿ ಪೋಪನ್ನೆಗಮ್

ಇತ್ತ ಗಂಭೀರೆಯೆಂಬ ವಿಳ್ದಿ ಬಯ್ಗಿರುಳಿನೊಂದು ಜಾವಮುಂಟೆನೆ ಎೞ್ದು ಪೊೞಲಿಂ ಪೊಱಮಟ್ಟು ತನ್ನೂರ್ಗೆ ಪೋಪ ನೆರವಿಲ್ಲದಂಜಿಯೊಂದಾಲದ ಮರನನೇಱಿರ್ದಳನ್ನೆಗಮಾ ಕಳ್ಳರಾಕೆಯೇಱಿರ್ದ ಮರಕ್ಕೆ ವಂದವರೊಳಗೊರ್ವಂ ಬಟ್ಟೆಯೊಳ್ ಬರ್ಪ ಜನಮಂ ನೋಡಲ್ವೇಡಿ ಮರದ ತುತ್ತತುದಿಯನೇಱಿ ನೋೞ್ಪನ್ನೆಗಂ ಮರದ ಮೇಗಿರ್ದ ವೃದ್ಧ ಸ್ತ್ರೀಯಂ ಕಂಡು ನೀನಾರ್ಗೆಂದು ಬೆಸಗೊಂಡೊಡಾಕೆಯಾನೀ ಮರದೊಳಿರ್ಪ ಯಕ್ಷದೇವತೆಯೆನೆಂದೊಡಾತನೆನಗೆ ಪೆಂಡತಿಯಪ್ಪಾ ಎಂದು ಬೆಸಗೊಂಡೊಡೊಂದು ಪಾಂಗಿನೊಳಪ್ಪೆನೀ ಪಿಶಿತದ ಖಂಡಮಂ ನಾಲಗೆಯಿಂ ಪಿಡಿದೆನ್ನ ಬಾಯೊಳಿಡುವೊಡೆ ನಿನಗಾಂ ಪೆಂಡತಿಯಪ್ಪೆನೆಂದು ನುಡಿದೊಡಾತನುಂ ನಾಲಗೆಯಿಂದಂ ಪಿಶಿತದ ಖಂಡಮಂ ಬಾಯೊಳಿಡೆ ನಾಲಗೆಯಂ ಪಱೆಯೆ ಕಚ್ಚಿದೊಡವಂ ಪುಯ್ಯಲಿಟ್ಟಂಜಿ ಇೞಿದನಿಬರುಂ ಭಯದಿಂದೋಡೆ

ವೃದ್ಧಸ್ತ್ರೀಯೆಂದಳೆನಗೆ ನಿಮ್ಮ ಕಳ್ವಲ್ಲಿ ಎಂಟನೆಯ ಭಾಗಮಂ ತಂದೀ ಮರದ ಪೊೞಲೊಳಗಿಟ್ಟು ಪೋಪೊಡೆ ಬಾೞ್ವಿರಲ್ಲದಾಗಳ್ ಸತ್ತಿರ್ ನಿಮ್ಮೆಲ್ಲರುಮಂ ತಿಂದಪ್ಪೆನೆಂದೊಡಂಜಿ ಕಳ್ಳರಂತೆಗೆಯ್ವೆಮೆಂದೊಡಂಬಟ್ಟು ಕಳ್ವಲ್ಲಿಯೆಲ್ಲಮೆಂಟನೆಯ ಭಾಗಮಂ ಮರದ ಪೊೞಲೊಳಿಟ್ಟು ದಿವಸಕ್ಕಂ ಪೋಪರಾ ವೃದ್ಧ ಸ್ತ್ರೀಯುಂ ತನ್ನೂರಿಂ ಬಂದು ಕಸವರಮಂ ಕೊಂಡು ಪೋಕುಮಿಂತಾ ಎಣ್ಬರುಂ ಕಳ್ಳರನಾ ವೃದ್ಧಸ್ತ್ರೀ ಪಿಡಿದಾಳ್ದಳೆಂಬ ಕಥೆಯುಮಿಂತಿವು ಮೊದಲಾಗೊಡೆಯ ಚಿತ್ರಕಥೆಗಳಂ ಪಟದೊಳ್ ಬರೆದು ಜನಂಗಳ್ಗೆ ತೋಱಿ ಪೇೞ್ದು ಭತ್ತಮಂ ಕಳಿಪೊನೀತನೊರ್ವ್ವಂ ವೈನೈಕನೆಂಬ ಕಳ್ಳಂ ಮತ್ತೋರ್ವ್ವಂ ಪೇತನೆಂಬೊನಾ ವೈನಕನ ಕಥೆಗಾಸಕ್ತರಾಗಿ ಕೇಳ್ವ ಜನಂಗಳ ಧಾನ್ಯಮನಱುವತ್ತು ಬಳ್ಳಮನಿಪ್ಪತ್ತು ಬಳ್ಳನೆಂದಳೆಗುಮೀತನೊರ್ವ ವೈನಕನೆಂಬೊಂ ಕಳ್ಳಂ ಮತ್ತೊರ್ವಂ ವಾಮಕನೆಂಬೊಂ ವೈನೈಕನ ಕಳ್ದ ಧಾನ್ಯಮನಲ್ಲಿಯೆ ನೆಲಮನೆಯೊಳಗಿರ್ದ್ದು ಕಿಱಿದಾನುಮೊಂದು ಛಿದ್ರದ್ವಾರದಿಂದೊಳಗಣ್ಗೆ ಭತ್ತಮಂ ಬರೆಕೊಳ್ವೊಂ ಪೊಱಗಣಳೆದ ಭತ್ತಮಂ ನೋಟಕ್ಕೆ ಕಿಱಿದಪ್ಪಂತಿರೆಯಿಂತು ಮೂವರುಂ ಒಂದಾಗಿ ಭತ್ತಮಂ ಮಾಱುವರ್ ಆ ಭತ್ತಂಗಳುಂ ಕಳ್ದುಕೊಳ್ವರೀ ಸ್ವರೂಪದಿಂದಂ ಮೂವರ್ಗ್ಗಂ ಕಾಲಂ ಸಲೆ ಮತ್ತೊಂದು ದಿವಸಂ ಕೌಶಳಮೆಂಬೂರ ಗಾವುಂಡಂ ಜಗದ್ಗೃಹನೆಂಬೊಂ ತನ್ನ ಭತ್ತಮನಾ ಚಂಪಾನಗರಕ್ಕೆ ಮಾಱಲೆಂದು ಕೊಂಡು ಪೋಗಿ ಭತ್ತಮನಳೆವಲ್ಲಿಯಾ ಮೂವರ ದೋಷಂಗಳಂ ಪ್ರಕಟಮಾಗರಸುವರೆಗಮಾದೊಡೆ ಅರಸನಿವರ ಕಳವಿನ ಪುಸಿಯ ದೋಷಂ ಕಾರಣಮಾಗಿ ಮೂವರುಮಂ ಕೊಲಲುಯ್ದಪರ್ ಮಗಳೆ ಎಂದು ಪೇೞ್ದೊಡೆ ನಾಗಶ್ರೀಯುಮೀ ತೆಱನಪ್ಪ ದುಃಖಕ್ಕಂಜಿ ಪುಸಿಯುಂ ಕಳುವುಮಂ ನಿವೃತ್ತಿಗೆಯ್ದೆನಮ್ಮಾ ಎಂದೊಡಂತಪ್ಪಡಾಯೆರಡುಂ ಬ್ರತಂಗಳುಂ ನಿನಗಿರ್ಕ್ಕೆ ಮಗಳೆ ಎಂದೊಡಂತೆ ಗೆಯ್ವನೆನೆ ಮತ್ತಂ ಕಿಱಿದಂತರಮಂ ಪೋಪನ್ನೆಗಂ ಗಂಡನುಂ ಪೆಂಡತಿಯುಮನೊಡಗೂಡಿ ಇರ್ವ್ವರುಮಂ ಪೆಡಂಗಯ್ಯುಡಿಯೆ ಕಟ್ಟಿಕೊಂಡು ಪೋಪರಂ ಕಂಡು ಇವರಾವ ದೋಷಂ ಗೈಯ್ದರವರಂ ಬೆಸಗೊಳ್ಳಿವೆಂದು ತಂದೆಗೆ ಪೇೞ್ದೊಡಾತನುಮದೆಲ್ಲಮಂ ಬೆಸಗೊಂಡು ಮಗಳ್ಗಿಂತೆಂದು ಪೇೞ್ಗುಂ

ಚಂಪಾನಗರದ ಸಾರೆ ಶ್ವೇತಪುರಮೆಂಬುದು ಪೊೞಲಲ್ಲಿ ಮತ್ಸ್ಯನೆಂಬ ಪರದನಾತನ ಪೆಂಡತಿ ಜೈನೆಯೆಂಬೊಳಾ ಇರ್ವ್ವರ್ಗ್ಗಂ ಮಕ್ಕಳ್ ನಂದನುಂ ಬೋದನುಮೆಂಬರ್ ಮತ್ತಮಾ ಪೊೞಲೊಳ್ ಸೂರದತ್ತನೆಂಬ ಪರದಂಗಂ ವಸುದತ್ತೆ ಎಂಬ ಪರದಿಗಂ ಮಗಳ್ ಮೋದಾಳಿಯೆಂಬೊಳಾಕೆಯುಂ ಬಸಿಱೊಳಿರ್ದ್ದಂದೆ ಸೋದರ ಮಾವನ ಮಗಂ ನಂದನೆಂಬಂಗೆ ಕುಡುವಮೆಂದು ನುಡಿದರಿಂತು ಕಾಲಂ ಸಲೆ ನಂದನೊಂದು ದಿವಸಂ ದ್ರವ್ಯಂಬಡೆವುದು ಕಾರಣಮಾಗಿ ಸುವರ್ಣದ್ವೀಪಕ್ಕೆ ಪೋಗುತ್ತಂ ಮಾವಂಗೆಂದಂ

ಪನ್ನೆರಡು ವರುಷಕ್ಕಾಂ ಬಾರದಾಗಳೆಮ್ಮ ಕಿಱಿಯ ತಮ್ಮಂ ಬೋದಂಗೆ ಕೂಸಂ ಕೊಡಿಮೆಂದು ಪೇೞ್ದುಪೋದನ್ ಇಂತು ಕಾಲಂ ಸಲೆ ಪನ್ನೆರಡು ಬರಿಸಂ ನೆಱೆದಂದು ನಂದಂ ಬಂದನಿಲ್ಲೆಂದು ಕೂಸಂ ಬೋದಂಗೆ ಕೈನೀರೆಱೆದು ಕುಡುವ ಪ್ರಸ್ತಾವದಾಗಳ್

ನಂದಂ ಬಂದೊಡಾತಂಗೆ ಕೂಸಂ ಕೊಡಲ್ತಗುಳ್ದೊಡೆ ತಮ್ಮನ ಪೆಂಡತಿಯನೆನಗೆ ಕೊಳಲಕ್ಕುಮೆ ಎಂದು ಕೊಂಡನಿಲ್ಲ ಬೋದನುಂ ಅಣ್ಣನ ಪೆಂಡತಿಯನೆಂತು ಕೊಳ್ವೆ ನೆಂದಾತನುಂ ಕೊಂಡನಿಲ್ಲಂ ಅಂತಿರ್ವ್ವರುಂ ಬಿಸುಟ್ಟೊಡೆ ಮೋದಾಳಿ ತನ್ನ ತವರ್ಮನೆಯೊಳಿರ್ದ್ದುದಂ ಮತ್ತಮಾ ಪೊೞಲೊಳ್ ನಾಗದತ್ತನೆಂಬೊಂ ಪರದನಾತನ ಭಾರ್ಯೆ ಗಂಗೆಯೆಂಬೊಳಾ ಇರ್ವ್ವರ್ಗ್ಗಂ ಮಗಂ ನಾಗಸೂರನೆಂಬೊಂ ಆತಂಗೆಣ್ಬರ್ ಪೆಂಡಿರ್ ತನ್ನ ಪೆಂಡಿರೊಳ್ ಸಂತೋಸಂಬಡದೆ ಮೋದಾಳಿಯೊಳ್ ಮಱೆವಾೞುತ್ತಿರ್ಕ್ಕುಂ ಇಂತು ಕಾಲಂ ಸಲೆ ಮತ್ತೊಂದು ದಿವಸಂ ನಾಗದತ್ತಂ ಮೋದಾಳಿಯನೊಡಗೊಂಡು ಚಂಪಾಪುರಕ್ಕೆ ವಂದೊಡೆ ತಳಾಱಂ ಆ ಇರ್ವ್ವರುಮಂ ಪಿಡಿದುಕೊಂಡು ಪೋಗಿ ಅರಸಂಗೆ ತೋಱಿದೊಡರಸನುಮಿರ್ವ್ವರುಮನೆರಡು ಕಾಯ್ದ ಕಬ್ಬೊರ್ನ್ನ ಪ್ರತಿಮೆಗಳನಪ್ಪವೇೞಿಮೆಂದು ತಳಾಱಂಗೆ ಬೆಸವೇೞ್ದೊಡಿರ್ವರುಮಂ ಕೊಲಲ್ಕೊಂಡು ಪೋದಪರ್ ಮಗಳೆ ಎಂದು ಪೇೞ್ದೊಡಾನುಮಿಂತಪ್ಪ ಭಯಕ್ಕಂಜಿ ಪರಪುರುಷ ಪ್ರಸಂಗಮಂ ತೊಱಿದೆನೆಂದೊಡಂತಪ್ಪೊಡಾ ಬ್ರತಮುಂ ನಿನಗಿರ್ಕ್ಕೆ ಮಗಳೆ ಎಂದುೞಿದ ಬ್ರಂತಗಳಂ ಬಿಸುಡೆಂದು ಪೇೞ್ದು ಕಿಱಿದಂತರಮಂ ಇರ್ವ್ವರುಂ ಪೋಪರನ್ನೆಗಂ ಮತ್ತೊರ್ವನಂ ಕೊಲಲ್ಕೊಂಡು ಪೋಪಪುರುಷನಂ ಕಂಡೀತನೇದೋಸಂಗೆಯ್ದನಾಗಿ ಕೊಲಲ್ಕೊಂಡು ಪೋದಪ್ಪರೆಂದು ಬೆಸಗೊಳ್ಳಿಮೆಂದು ತಂದೆಗೆ ಪೇೞ್ದೊಡೆ ಆತನುಮದೆಲ್ಲಮಂ ಬೆಸಗೊಂಡು ಮಗಳ್ಗಿಂತೆಂದು ಪೇೞ್ಗುಂ

ಈ ಕೊಲೆ ಪಡುವಾತನರಸರ ಗೋಮಂಡಳಮಂ ಕಾವೊಂ ವೀರಪೂರ್ಣನೆಂಬೊಂ ಅರಸನೊಂದು ದಿವಸಮೀತಂಗೊಸೆದು ತನ್ನ ಗೋಮಂಡಳದೊಳಗೊಳ್ಳಿದವಪ್ಪ ಪತ್ತು ಪಯನಂ ಮೂಸಾಸಿರ ಗಂಡುಗ ಭತ್ತಮುಮಂ ಪ್ರಮಾಣಂ ಮಾಡಿ ಕೊಟ್ಟೊಡಾ ಪಸರದೊಳರಸಂ ದಾಯಂಗೊಟ್ಟನೆಂದು ಸಾಮಂತರ ನಿಯೋಗಿಗಳರಸಿಯರ ಗೋಮಂಡಳದೊಳಗೊಳ್ಳಿದಪ್ಪೆಮ್ಮೆಯುಂ ಪಸುಗಳನಾಯ್ದುಕೊಂಡರಸರ ಗೋಮಂಡಳದೊಳಗೆ ಪುಗಿಸಿಯುಣುತ್ತಮಿರ್ಕ್ಕುಂ ಮತ್ತಂ ಲೋಭಾಭಿಭೂತಂ ಪೊೞಲ ಪಸುಗಳರಸರ ಗೋಮಂಡಳಮುಂ ಪೊಕ್ಕವೆಲ್ಲಮಂ ಭಂಡಾರಂ ಪೊಕ್ಕವೆಂದುಂ ಪೊಱಮಡವೆಂದು ಜಡಿದು ಬಗ್ಗಿಸಿಕೊಂಡುಣೆ ಮತ್ತೊಂದು ದಿವಸಂ ಮಹಾದೇವಿಯ ಗೋಮಂಡಳದೊಳಗಗ್ಗಳಮಪ್ಪ ಕಾಮಧೇನುವನಾಯ್ದುಕೊಂಡೊಯ್ದಡೆ ವೀರಪೂರ್ಣನಂ ಮೂದಲಿಸಿ ಮಹಾದೇವಿಯರಸಂಗೆನ್ನ ಕಾಮಧೇನುವಂ ವೀರಪೂರ್ಣಂ ಕೊಂಡನೆಂದಾಗ ಸಾಮಂತರುಮರಸಿಯರುಂ ನಿಯೋಗಿಗಳುಂ ಪೊೞಲ ಜನಂಗಳೆಲ್ಲಮೆಮ್ಮೆಮ್ಮ ಪಸುಗಳಂ ಕೊಂಡನೆಂದನಿಬರುಂ ಪೇೞೆಯರಸಂ ಮುಳಿದೀತನೆನ್ನ ಕೊಟ್ಟುದಱೊಳ್ ಸಂತೋಷಂಬಟ್ಟನಿಲ್ಲ ಲೋಗರ ಪಸುಗಳಂ ಕೊಳಲ್ ತಗುಳ್ದೊಂ ಮಹಾ ಲೋಭಾಭಿಭೂತನಸಂತುಷ್ಟ ಚಿತ್ತನಿವನಂ ಕೊಲ್ಲಿಮೆಂದು ತಳಾಱಂಗೆ ಬೆಸವೇೞ್ದೊಡೆ ಸೂಲದೊಳಿಕ್ಕಲೊಯ್ದಪರ್ ಮಗಳೆ ಎಂದು ಪೇೞ್ದೊಡೆ ನಾಗಶ್ರೀಯೆಂದಳ್ ಕೊಲ್ಲದ ಪುಸಿಯದ ಕಳದ ಸ್ವದಾರಸಂತೋಷಂ ಪರಿಮಿತ ಪರಿಗ್ರಹಮಿಂತಯ್ದುಮಣು ಬ್ರತಂಗಳಂ ಕೊಂಡೆಸೀ ಬ್ರಂತಗಳಂ ರಿಷಿಯರ್ಗ್ಗೊಪ್ಪಿಸಿದೊಡಾನುಮೀಯಯ್ದು

ಪಾಪಂಗಳೊಳಪ್ಪ ಸೇದೆಯುಂ ಕಟ್ಟುಪಡುವುದುಂ ಕೊಲೆಯುಮನಿವರಂತೆಯ್ದಲ್ ವೇಟ್ಕುಮೆಂದೊಡೆ ಸೋಮಶರ್ಮನೆಂದನೀಯಯ್ದುಮಣುಬ್ರತಂಗಳಂ ಕೆಯ್ಕೊಂಡು ದೃಢಬ್ರತೆಯಾಗು ಸುವ್ರತೆಯಾಗು ಮಗಳೆ ಅವರ್ಗ್ಗೊಪ್ಪಿಸಲ್ವೇಡೆಂತುಮಾ ನಿರ್ಲಜ್ಜಂ ಬತ್ತಲಿಗನಪ್ಪ ಸವಣನಲ್ಲಿಗೆ ಪೋಗಿ ಕಂಡು ಜಡಿದು ನುಡಿದು ಕಾಡಿ ಬರ್ಪ್ಪಂ ಬಾ ಮಗಳೆ ಎಂದು ಮಗಳನೊಡಗೊಂಡು ರಿಷಿಯರಲ್ಲಿಗೆ ಪೋಗಿ ಕಂಡು ಗೆಂಟರೊಳಿರ್ದ್ದಿಂತೆಂಗುಂ

ಎಲೆ ತಪಸ್ವಿ ಎನ್ನ ಮಗಳ್ಗೆ ನಿಮ್ಮ ಬ್ರತಂಗಳನೇಕೆ ಕೊಟ್ಟಿರೆನೆ ಸೂರ್ಯಮಿತ್ರ ಭಟಾರರೆಂದರ್ ನಿಮ್ಮ ಮಗಳೇಕಕ್ಕುಮೆಮ್ಮ ಮಗಳಿಂಗೆಮ್ಮ ಬ್ರತಂಗಳ್ಗಂ ನಾವು ಕೊಟ್ಟೊಡೆ ನಿಮಗೇಂ ಬೇನೆ ಮೂಡಿತೇ ಎಂದು ನುಡಿದು ಇತ್ತ ಬಾ ನಾಗಶ್ರೀ ಎಂದು ಕರೆದೊಡಾಕೆಯುಂ ಪೋಗಿ ಇರ್ವ್ವರುಂ ಭಟ್ಟಾರರ ಕಾಲ್ಗಳಂ ಪಿಡಿದೆಱಗಿ ಪೊಡವಟ್ಟವರ ಕೆಲದೊಳಿರ್ದ್ದಡೆ ಸೋಮಶರ್ಮಭಟ್ಟಂ ಬೆಱಗಾಗಿ ಕೀಲಿಸಿದಂತಿರ್ದ್ದೊನಂ ಭಟಾರರೆಂದರ್ ಈ ಎಡೆಯಿಂದಂ ಬೇಗಂ ಪೋಗಿ ಕಿಡು ದುಃಷ್ಟ ಬ್ರಾಹ್ಮಣಾ ಅರಸರ್ಗೆ ಪೇಟ್ದು ನೀನಟ್ಟೊಡದನ್ನೆಗಮೆಂದೊಡಲ್ಲಿಂದಮೆಟ್ದು ಪೋಗಿ ಸೋಮಶರ್ಮಭಟ್ಟಂ ಪಿರಿದೊಂದು ತೊವಲಂ ಪಿಡಿದುಬ್ರಹ್ಮಣ್ಯಂ ಭೋ ಎಂದಱುತ್ತುಮಂಗಡಿಯ ಜನಂಗಳ್ಗೆ ಪುಯ್ಯಲಿಡುತರಮನೆಗೆ ಪೋಗಿ ಚಂದ್ರವಾಹನನೆಂಬರಸನಂ ಕಂಡಿಂತೆದು ಬಿನ್ನಪಂಗೆಯ್ದುಂ ಮಹಾರಾಜಾ ಆಂ ಬತ್ತಲೆ ಸವಣರಿಂದಂ ಕೋಳ್ಪಟ್ಟೆನೆನ್ನ ಮಗಳ್ ನಾಗಶ್ರೀಯಂ ತಮ್ಮ ಮಗಳೆಂದು ಕೈಕೊಂಡಿಟ್ಟರ್ ಮತ್ತವರ್ ಕೂಸಂ ಕೊಂಡೋಡದನ್ನೆಗಂ ಪೋಪಂ ಬನ್ನಿಮೆಂದರಸನನೊಡಗೊಂಡು ಪೋಗೆ ಸಾಮಂತ ಮಹಾಸಾಮಂತ ಶ್ರೇಷ್ಠಿ ಸೇನಾಪತಿ ತಳವಱ ದಂಡನಾಯಕ ಪ್ರಭೃತಿ ಚಂಪಾನಗರದ ಸಬಾಳ ವೃದ್ಧ ಜನಮೆಲ್ಲಮರಸರೊಡನೆ ನಾಗಠಾಣಕ್ಕೆ ಪೋಗಿ ಸೂರ್ಯಮಿತ್ರ ಭಟಾರರಗ್ನಿಭೂತಿ ರಿಷಿಯರನರಸಂ ಕಂಡವರ ಪಕ್ಕದೆ ಕುಳ್ಳಿರ್ದ್ದಿದೇನ್ ಸಂಬಂಧಂ ಪೇೞಿಮೆಂದು ಮುನಿಪತಿಯಂ ಬೆಸಗೊಂಡಡೆ ಸೂರ್ಯಮಿತ್ರ ಭಟ್ಟಾರಕರೀ ಕೂಸೆಂಬುದು ನಮ್ಮ ಮಗಳೆಂದೊಡೆ ಸೋಮಶರ್ಮಭಟ್ಟಂ ನಾಗಶ್ರೀ ಎನ್ನ ಮಗಳ್ ನಾಗರಿತ್ತರೆಂದೊಡೆ ಭಟಾರೆಂದರ್ ನಿಮ್ಮ ಮಗಳಪ್ಪೊಡೆ ನಾಲ್ಕು ವೇದಮುಮಾಱಂಗಮುಂ ಪದಿನೆಂಟು ಧರ್ಮಶಾಸ್ತ್ರಗಳುಮಂ ಮೀಮಾಂಸಾ ನ್ಯಾಯಶಾಸ್ತ್ರಂ ವ್ಯಾಕರಣಂ ಪ್ರಮಾಣ ಕಾಬ್ಯನಾಟಕಂ ಛಂದಮಳಂಕಾರಂ ನಿಘಂಟು ಸಾಮುದ್ರಿಕಂ ಶಾಳಿಹೋತ್ರಂ ಪಾಳಕಾಪ್ಯಂ ಹಾನಿತಂ ಚರಕಮಶ್ವಿನೀಮತಂ ಬಾಹಟಂ ಸುಶ್ರುತಮೆಂದಿವು ಮೊದಲಾಗೊಡೆಯ ನರವೈದ್ಯಮುಮಂ ಚಾಣಕ್ಯಂ ಜ್ಯೋತಿಷಂ ಮಂತ್ರವಾದಂ ಮೊದಲಾಗೊಡೆಯು ಶಾಸ್ತ್ರಂಗಳೆಲ್ಲಮಂ ನೀನೇವೀ ಕೂಸನೋದಿಸಿದಾ ಎಂದೊಡಾತನಿಲ್ಲೋದಿಸಿದೆನೆಂದಂ ಮತ್ತಿನಿತುಮನಾ ಕೂಸನಾಮೋದಿಸಿದೆಮದಱಿಂದೆಮ್ಮ ಕೂಸೆಂದೊಡರಸನೋದಿಸಿ ತೋಱಿಮೆಂದೊಡೆ ವಾಯುಭೂತಿ ಎಮ್ಮೋದಿಸಿದ ವೇದಮನೀ ಪೊಱಲ ನೆರೆದ ನೆರವಿಯು ನಡುವೆಯೋದಿ ತೋಱು ಮಗಳೆ ಎಂದೊಡಾ ನಾಗಶ್ರೀಯುಮಂತೆಗೆಯ್ವೆನೆಂದು ಪ್ರಣವಮನುಚ್ಚರಿಸಿ ಸ್ವರ ವರ್ಣಭೇದದಿಂದಂ ಪ್ರಥಮಂ ಚತುಃಷಷ್ಟಿ ಸಂಹತಿಗಳಂ ಪದಕ್ರಮಭೇದದಿಂ ಬ್ರಾಹ್ಮಣ ಆರಣ ಸೂತ್ರಂ

ಮೊದಲಾಗೊಡೆಯವನೋದಿ ಋಗ್ಯಜುಸ್ಸಾಮಾಥರ್ವಣ ವೇದಂಗಳಂ ಸ್ವರವರ್ಣಭೇದದಿಂದಂ ಮಂತ್ರ ಸಹಿತ ಪಾಳಿ ಪದಕ್ರಮ ಜಟೆಭೇದದಿಂದಂ ಶತಸೂತ್ರಂ ಮೊದಲಾಗೆಲ್ಲಮಂ ಯಥಾಕ್ರಮದಿಂದುಚ್ಚರಿಸಿ ಪದಿನೆಂಟು ಪುರಾಣಂಗಳುಂ ಪದಿನೆಂಟು ಧರ್ಮಸಂಹತಿಗಳುಂ ಮೀಮಾಂಸಾ ನ್ಯಾಯಸೂತ್ರಮಿವೆಲ್ಲಮನೋದಿ ಕ್ರಿಯಾಕಾರಕ ಸಂಬಂಧದಿಂದೆಲ್ಲಮಂ ವಕ್ಖಾಣಿಸಿ ತೋರಿದೊಡರಸಂ ಮೊದಲಾಗಿ ನೆರೆದ ನೆರವಿಯುಂ ಪಂಡಿತರ್ಕಳುಮೆಲ್ಲಂ ವಿಸ್ಮಯಂಬಟ್ಟು ಪೊಗಟ್ಟು ಮತ್ತಂ ಅರಸನಿಂತೆಂದಂ ಈ ಕೂಸಿನಿತುಂ ಶಾಸ್ತ್ರಂಗಳನೆಂತು ಕಲ್ತಳೆಂದು ಭಟಾರಾ ಇದನಱಿಯೆ ಬೆಸಸಿಮೆನೆ ಸೂರ್ಯಮಿತ್ರಭಟಾರರಿಂತೆಂದರ್ ಈ ಇರ್ದ್ದ ರಿಷಿಯರ ಸಹೋದರಂ ವಾಯುಭೂತಿಯೆಂಬೊನಾಮೆಯೋದಿಸಿದೆಮೆಮ್ಮೊಳಪ್ಪ ಮಾನಕಷಾಯ ಕಾರಣಮಾಗಿ ಸತ್ತು ಬೆಳುಗತ್ತೆಯುಂ ಪೇಪಂದಿಯುಂ ನಾಯುಂ ಪೂಲೆಯರ ಕೂಸುಮಾಗಿ ರಿಷಿಯರ ಪ್ರಬೋಧನೆಯಿಂದಂ ಬ್ರತಂಗಳಂ ಕಯ್ಕೊಂಡೀಗಳ್ ನಾಗಶ್ರೀಯಾದಳೆಂದು ಮುನ್ನಿನ ಭವದ ಸಂಬಂಧಮೆಲ್ಲಮಂ ವಿಸ್ತರಂ ಪೇೞ್ದು ಮತ್ತಮಿಂತೆಂದರ್

ಮಿಥ್ಯಾತ್ವ ಸಂಯಮ ಕಷಾಯಯೋಗಂ ಕಾರಣಮಾಗಿ ಜೀವಂಗಳ್ ಸಂಸಾರ ಸಮುದ್ರದೊಳ್ ತೊಟಲ್ಗುಮೆಂದು ಸವಿಸ್ತರಂ ಧರ್ಮಮಂ ಪೇೞೆ ಕೇಳ್ದು ಚಂದ್ರವಾಹನನೆಂಬರಸಂಗೆ ವೈರಾಗ್ಯಂ ಪುಟ್ಟಿ ಮಗಂಗರಸುಗೊಟ್ಟು ಪಲಂಬರುಮರಸು ಮಕ್ಕಳ್ ವೆರಸು ಭಟ್ಟಾರಕರ ಪಕ್ಕದೆ ತಪ್ಪಂಬಟ್ಟು ಕೆಲಂ ಶ್ರಾವಕರ್ ಬ್ರತಂಗಳಂ ಕೈಗೊಂಡರ್ ಕೆಲರ್ ಸಮ್ಯಕ್ತ್ವಮಂ ಕೈಗೊಂಡರಾಗಳ್ ಸೋಮಶರ್ಮಭಟ್ಟನುಂ ರಿಷಿಯರೊಳಾದ ಮಾನಗರ್ವದ ದೋಷದಿಂದೆಯ್ದಿದ ದುಃಖಂಗಳಂ ಕೇಳ್ದಱಿದು ಆ ಭಟ್ಟಾರರ ಪಕ್ಕದೆ ತಪಂಬಟ್ಟಂ ನಾಗಶ್ರೀಯುಂ ನಾಗಶ್ರೀಯ ತಾಯ್ ತ್ರಿವೇದಿಯುಂ ಬ್ರಾಹ್ಮಿಲೆಯರೆಂಬ ಕಂತಿಯರ ಪಕ್ಕದೆ ತಪಂಬಟ್ಟರ್ ಮತ್ತೆ ಸೂರ್ಯಮಿತ್ರ ಭಟಾರರುಮಗ್ನಿಭೂತಿ ಭಟಾರರುಮಿರ್ವ್ವರುಂ ಪಲಕಾಲಂ ತಪಂಗೆಯ್ದು ಅಗ್ರಮಂದಿರಮೆಂಬ ಪರ್ವತದೊಳ್ ಮೋಕ್ಷಕ್ಕೆ ವೋದರ್

ಮತ್ತಂ ಸೋಮಶರ್ಮ ರಿಷಿಯರುಮುಗ್ರೋಗ್ರ ತಪಶ್ಚರಣಂಗೆಯ್ದು ಸಂನ್ಯಸನ ವಿಧಿಯಿಂದಂ ಮುಡಿಪಿಯಚ್ಯುತ ಕಲ್ಪದೊಳಿಪ್ಪತ್ತೆರಡು ಸಾಗರೋಪಮಾಯುಷ್ಯಮನೊಡೆಯಂ ಸಾಮಾನಿಕ ದೇವನಾಗಿ ಪುಟ್ಟಿದೊಂ ಮತ್ತೆ ನಾಗಶ್ರೀಯುಂ ಭುಕ್ತ ಪತ್ಯಾಖ್ಯಾನ ವಿಧಿಯಂ ರತ್ನತ್ರಯಮಂ ಸಾಧಿಸಿ ಆರಣ ಕಲ್ಪದೊಳ್ ದೇವನಾಗಿ ಪುಟ್ಟಿದಳ್ ಮತ್ತಾ ಸ್ವರ್ಗದೊಳ್ ತ್ರಿವೇದಿಯುಂ ನಾಗಶ್ರೀ ಎನಗೆ ಜನ್ಮಾಂತರದೊಳಪ್ಪೊಡಂ ಮಗನಕ್ಕೆಂದು ನಿದಾನಂಗೆಯ್ದು ಮುಡಿಪಿ ದೇವನಾದಳ್ ಇಂತಾ ಇರ್ವ್ವರುಮಿಪ್ಪತ್ತೆರಡು ಸಾಗರೋಪಮಮಾಯುಷ್ಯಮನೊಡೆಯರ್ ದೇವರಾಗಿ ಪುಟ್ಟಿದರ್ ಮತ್ತಂ ಸೋಮಶರ್ಮನಪ್ಪ ದೇವಂ ಪಲಕಾಲಂ ದೇವಲೋಕದ ಭೋಗಮನನುಭವಿಸಿ ಬಂದಿಲ್ಲಿ ಜಂಬೂದ್ವೀಪದ ದಕ್ಷಿಣ ಭರತದೊಳ್ ಆವಂತಿಯೆಂಬುದು ನಾಡು ಉಜ್ಜೇನಿಯೆಂಬುದು ಪೊಟಲಲ್ಲಿ ಇಂದ್ರದತ್ತನೆಂಬೊಂ ಪರದನಾತನ ಭಾರ್ಯೆ ಗುಣಮತಿಯೆಂಬೊಳಾಯಿರ್ವ್ವರ್ಗ್ಗಂ ಸೂರದತ್ತನೆಂಬೊಂ ಮಗನಾಗಿ ಪುಟ್ಟಿದೊಂ ಮತ್ತಮಾ ಪೊಟಲೊಳ್ ಮೂವತ್ತೆರಡು ಕೋಟಿ

ಕಸವರಮನೊಡೆಯೊಂ ಸುಭದ್ರನೆಂಬೊಂ ಸೆಟ್ಟಿಯಾತನ ಭಾರ್ಯೆ ಸರ್ವಯಶೆಯೆಂಬೊಳಾಯಿರ್ವರ್ಗ್ಗಂ ತ್ರಿವೇದಿಯಪ್ಪ ದೇವಂ ಬಂದು ಯಶೋಭದ್ರೆಯೆಂಬಳ್ ಮಗಳಾಗಿ ಪುಟ್ಟಿದಳ್ ಆ ತ್ರಿವೇದಿ ತಪಶ್ಚರಣದ ಫಲದಿಂದಂ ದೇವತ್ವಮನೆಯ್ದಿ ನಿದಾನಂ ಕಾರಣಮಾಗಿ ಮಿಥ್ಯಾತ್ವಕ್ಕೆ ಸಂದು ಸ್ತ್ರೀತ್ವಮನೆಯ್ದಿದೊಳಾ ಯಶೋಭದ್ರೆಯಂ ಸೂರದತ್ತಂಗೆ ಕೊಟ್ಟರಾ ಇರ್ವರ್ಗ್ಗಂ ನಾಗಶ್ರೀಯಪ್ಪ ದೇವಂ ಬಂದು ಸುಕುಮಾರ ಸ್ವಾಮಿಯೆಂಬೊಂ ಮಗನಾಗಿ ಪುಟ್ಟಿದೊಂ ಆತನ ಪುಟ್ಟಿದಂದೆ ವೈರಾಗ್ಯಂ ಕಾರಣಮಾಗಿ ಸೂರದತ್ತ ಸೆಟ್ಟಿ ಸುಕುಮಾರ ಸ್ವಾಮಿಗೆ ಸೆಟ್ಟಿವಟ್ಟಂಗಟ್ಟಿ ತಪಂಬಟ್ಟಂ ಸುಕುಮಾರ ಸ್ವಾಮಿಯುಂ ಯೌವನನಾಗಿಯುಮತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿಯಿಂದಂ ಕೂಡಿದೊನಾತಂಗೆ ಮೂವತ್ತೆರಡು ಬಳ್ಳಿಮಾಡಂಗಳಲ್ಲಿ ಅತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿ ಹಾವಭಾವ ವಿಳಾಸ ವಿಭ್ರಮಂಗಳನೊಡೆಯರ್ ದೇವಗಣಿಕೆಯರನೆ ಪೋಲ್ವರ್ ಮೂವತ್ತಿರ್ವರ್ ದಿವ್ಯ ಸ್ತ್ರೀಯಕ್ಕಳ್ ಮೂವತ್ತೆರಡು ನಾಟಕಂಗಳ್ ಮೂವತ್ತೆರಡು ಕೋಟಿ ಕಸವರಮುಂ ಪಂಚರತ್ನಂಗಳೆಂದಿನಿತಱೊಳಂ ಕೂಡಿ ಭೋಗೋಪಭೋಗ ಸುಖಂಗಳನನುಭವಿಸುತ್ತುಮಿರೆ ಮತ್ತೊಂದು ದಿವಸಮೊರ್ವ ನೈಮಿತ್ತಿಕನಿಂತೆಂದಾದೇಶಂಗೆಯ್ದನೀ ಸುಕುಮಾರಸ್ವಾಮಿ ಯಾವಂದು ರಿಷಿಯರ ರೂಪಂ ಕಾಣ್ಗುಮಂದೀತನುಂ ತಪಂಬಡುಗುಮೆಂದೊಡಾ ಮಾತಂ ತಾಯ್ ಕೇಳ್ದು ತನ್ನ ಮನೆಯಂ ರಿಷಿಯರಂ ಪುಗಲೀಯದಂತು ಬಾಗಿಲ ಕಾಪಿನವರಂ ಕಲ್ಪಿಸಿದೊಡಂತು ಕಾಲಂ ಸಲೆ

ಮತ್ತೊಂದು ದಿವಸಂ ರತ್ನದ್ವೀಪದಿಂದೊರ್ವ ಪರದಂ ಸರ್ವ ರತ್ನ ಕಂಬಳಂಗಳಂ ಲಕ್ಷ ದೀನಾರಂಗಳ್ ಬೆಲೆಯಪ್ಪುವನುಜ್ಜೇನಿಗೆ ಮಾಱಲ್ಕೆಂದು ಬಂದಾ ಪೊಟಿಲನಾಳ್ವೊಂ ವೃಷಭಾಂಕನೆಂಬರಸಂಗಂ ಜ್ಯೋತಿರ್ಮಾಲೆಯೆಂಬ ಮಹಾದೇವಿಗಮಂತಿರ್ವ್ವರ್ಗ್ಗಂ ತೋಱಿದೊದೊಡವಱು ಬೆಲೆಯಂ ಬೆಸಗೊಂಡೊಡೆ ಲಕ್ಷ ದೀನಾರಂಗಳ್ ಬೆಲೆಯೆಂದು ಪೇೞ್ದೊಡೆ ಕೊಳಲಾಱದರಸು ಪೋಗಲ್ವೇೞ್ದೊನಂತು ಪೊಳಲೊಳಗೆಲ್ಲಂ ತೋಱಿ ಯಾರುಂ ಕೊಳಲಾಱದಿರ್ದ್ದಡೆ ರತ್ನಕಂಬಳಗಳಂ ಕೊಂಡು ಪೋಗಿ ಯಶೋಭದ್ರೆಗೆ ತೋಱಿದೊಡೆ ಲಕ್ಷ ದೀನಾರಂಗಳಂ ಕೊಟ್ಟು ರತ್ನಕಂಬಳಂಗಳಂ ಕೊಂಡೋರೊಂದಱೊಳಂ ನಾಲ್ಕು ಖಂಡಮಾಗೆ ಮೂವತ್ತೆರಡು ಖಂಡಗಳಂ ಮಾಡಿ ಮೂವತ್ತಿರ್ವರ್ ಸೊಸೆವಿರ್ಕಳ್ಗೆ ಪಚ್ಚುಗೊಟ್ಟೊಡವರುಂ ತಂತಮ್ಮ ಕೆರ್ಪುಗಳೊಳ್ ತಗುೞ್ಚಿದರೆಂಬ ಮಾತನರಸಂ ಕೇಳ್ದು ಚೋದ್ಯಂಬಟ್ಟವರ ವಿಭೂತಿಯ ನೋೞ್ಪೆನೆಂದು ಮನೆಗೆ ಬರ್ಪುದುಂ ಯಶೋಭದ್ರೆ ಕೇಳ್ದರಸರ ಬರ್ಪ ಬಟ್ಟೆಯೊಳೆಲ್ಲಂ ಪಂಚರತ್ನಂಗಳಿಂ ರಂಗವಲ್ಲಿಯನಿಕ್ಕಿ ನೇತ್ರವಟ್ಟು ಚೀನ ದುಕೂಲಾದಿ ದಿವ್ಯ ವಸ್ತ್ರಂಗಳಂ ಪಾಸಿ ಮಣಿಗಣ ನಿಬದ್ಧಮಪ್ಪ ಹೇಮ ಮುಕ್ತಾಹಾರಂಗಳಿಂ ತೋರಣಂಗಟ್ಟಿಸಿಯರಸರ ಬರವಂ ಪಾರುತ್ತಿರೆ ನೃಪತಿಯುಂ ಬಂದು ಸುರೇಂದ್ರ ಭವನೋಪಮಮಪ್ಪ ಮಹಾಪ್ರಾಸಾದಮಂ ಪೊಕ್ಕು ವಿಸ್ಮಯಚಿತ್ತನಾಗಿ ಸುರಲೋಕಮಂ ಪೊಕ್ಕ ಪುಣ್ಯವಂತಂಬೊಲೆಯಾಗಳ್ ಮಹಾವಿಭೂತಿಯಿಂ ಶಯ್ಯಾತಳದೊಳಿರ್ದ್ದ

ಸುಕುಮಾರನೆಲ್ಲಿರ್ದ್ದನೆಂದು ಬೆಸಗೊಂಡೊಡೆ ಸ್ವಾಮಿ ಆತಂ ಕರಂ ಸಾದು ನಿಮ್ಮ ಬರವನಱಿಯಂ ಪ್ರಾಸಾದದ ಮೇಗಣ ನೆಲೆಯೊಳಿರ್ದ್ದನೆಂದೊಡರಸಂ ಬೞಿಯನಟ್ಟಿಮೆನೆ ತಾಯ್ಪೋಗಿ ಮಗನೆ ಅರಸರ್ ಬಂದರ್ ಬಾ ಪೋಪಮೆನೆ ಅರಸರೆಂಬೊರಾರೆನೆ ಎಂದಳ್ ನಮ್ಮನಾಳ್ವೊರೆಂದೊಡೆ ನಮ್ಮನಾಳ್ವರೊಳರೆಯೆಂದು ವಿಸ್ಮಯಂ ಬಟ್ಟು ತಾಯ ವಚನವಂ ಮಾರ್ಕ್ಕೊಳಲಾಱದೆ ಬಪ್ಪೊರ್ವನಂ ನರೇಶ್ವರಂ ಕಂಡು ಕಣ್ಬೆತ್ತ ಫಲಮನಿಂದು ಪೆತ್ತೆನೆಂದು ಪ್ರತ್ಯಕ್ಷ ಕಾಮದೇವನನಪ್ಪಿಕೊಳ್ವಂತಪ್ಪಿಕೊಂಡು ದಿವ್ಯಶಯ್ಯಾತಳದ ಮೇಗೊಡನಿರಿಸಿದಾಗಳ್ ಸ್ವಜನ ಪರಿಜನಂಗಳ್ ಸಿದ್ಧಾರ್ಥಂಗಳಂ ಮಾಂಗಲ್ಯಮೆಂದಿರ್ವ್ವರ್ಗ್ಗಂ ಸೇಸೆಯನಿಕ್ಕಿದಾಗಳಾ ಸಿದ್ಧಾರ್ಥಂಗಳ್ ಸುಕುಮಾರಸ್ವಾಮಿಯಾಸನಮನೊತ್ತೆ ಕಟಿವಮನಲುಗಿಸುವುದುಮಂ ಸೊಡರಂ ನೋಡಿದಾಗಳ್ ಕಣ್ಣೀರ್ಗಳ್ ಸುರಿವುದುಮಂ ಕಂಡೀಗಳೀತಂಗೆ ವ್ಯಾಧಿಗಳೆಂದು ಬಗೆದಿರ್ಪ್ಪಿನಂ ಮಜ್ಜನಕ್ಕೆಯ್ತನ್ನಿಮೆಂದೊಡಂತೆ ಗೆಯ್ವೆಮೆಂದು ಮಜ್ಜನಂಗೊಂಡಮರಸನ್ನಿಭ ಮಣಿಕುಟ್ಟಿಮಮಪ್ಪ ಬಾವಿಯಂ ಪೊಕ್ಕು ಮಿಂದಲ್ಲಿಯನರ್ಘ್ಯಮಪ್ಪ ತನ್ನ ಬೆರಲ ಮಾಣಿಕದುಂಗುರಂ ಬಿಟ್ಟುರ್ದನಱಿಸಲ್ವೇಡಿ ಛಿದ್ರಕದ್ವಾರದ ತೂಂತನುರ್ಚಿ ನೀರಂ ಕಳೆದಾಗಳಿಂದ್ರನ ಭಂಡಾರಂ ತೆರೆದಂತಪ್ಪ ಲೇಸಪ್ಪ ನಾನಾಮಣಿ ವಿಚಿತ್ರ ಭೂಷಣಂಗಳಂ ಪಲವುಮಂ ಬಾವಿಯೊಳಿರ್ದ್ದುದಂ ಕಂಡು ಮಹಾಶ್ಚರ್ಯಭೂತನಾಗಿ ನೋಡುತ್ತಿರ್ಪನ್ನೆಗಂ ಆರೋಗಿಸಲೆಳ್ತನ್ನಿಮೆಂದಾಗಳ್ ಪರಿಯಣದ ಮೊದಲೊಳ್ ಸುಕುಮಾರಂ ಬೆರಸು ನಾನಾ ಪ್ರಕಾರದಿಂದಿನಿಯವಪ್ಪುಣಿಸುಗಳನುಣುತ್ತಂ ಸುಕುಮಾರ ಸ್ವಾಮಿಯರ್ಧಮಾಹಾರಮಂ ನುಂಗುಗುಮರ್ಧಮನುಗುೞ್ಗುಮದಂ ನೋಡಿ ಇದುವುಮೊಂದು ಕುತ್ತಮಾಹಾರದ ಮೇಗರುಚಿಯೆಂದು ಬಗೆದುಣಿಸು ಸಮೆದ ಬೞಿಕ್ಕೆ ಗಂಧ ತಾಂಬೂಲಮಾಲ್ಯ ವಸ್ತ್ರಾಭರಣಂಗಳಂ ಕೊಟ್ಟಾಗಳವಂ ತೊಟ್ಟುಟ್ಟು ಪಸದನಂಗೊಂಡು ಸುಖಸಂಕಥಾವಿನೋದದಿನಿರ್ದ್ದೆಡೆ ಯಶೋಭದ್ರೆಯನರಸನಿಂತೆಂದು ಬೆಸಗೊಂಡಂ ಅಬ್ಬಾ ಎಮ್ಮ ತಮ್ಮನ ಕಟಿಪ್ರದೇಶ ರೋಗಕ್ಕಂ ಕಣ್ಣನೀರ್ಬರ್ಪ್ಪುದಕ್ಕಮರುಚಿಗಮೇಕೆ ಮರ್ದ್ದಂ ಮಾಡಿಸಿದಿರಿಲ್ಲೆನೆ ದೇವಾ ಈತಂಗಿವು ಕುತ್ತಮಲ್ಲವು ಸೇಸೆಯಿಕ್ಕಿದ ಸರ್ಷಪಂಗಳೊತ್ತೆ ಸಯಿರಿಸಲಾಱಂ ಮತ್ತೆಲ್ಲಾ ಕಾಲಮುಂ ಮಾಣಿಕದ ಬೆಳಗಿನೊಳಿಪ್ಪುದಱಿಂದಂ ಸೊಡರ ಬೆಳಗು ಸೈರಿಸದೆ ಕಣ್ಣನೀರ್ ಬರ್ಕ್ಕುಂ ಮತ್ತಂ ಕಮಳ ನೀಳೋತ್ಪಳದೊಳ್ ವಾಸಿಸಿದಕ್ಕಿಯೊಳ್ ಪೆಱವಕ್ಕಿಯಂ ನೀವು ಬಂದೊಡೆ ಬೆರಸಿಯಟ್ಟುದುದು ಕೂೞಪ್ಪುದಱಿಂದಂ ವಾಸಿಸಿದಕ್ಕಿಯ ಕೂೞಂ ನುಂಗುಗುಮುಗುೞ್ದ ಕೂೞನುಗುೞ್ಗುಮದಱಿಂದೀತಂಗೀಯವಸ್ಥೆಗಳಾದುವೆನೆ ಕೇಳ್ದು ವಿಸ್ಮಯಂಬಟ್ಟೀತನ ಕ್ಷಣಮಾತ್ರ ಭೋಗಕ್ಕಂ ಸುಖಕ್ಕಂ ಎಮ್ಮೆಲ್ಲಾ ಕಾಲಮುಮರಸುತನಂ ಗೆಯ್ವಲ್ಲಿಯೊಳಪ್ಪ ಭೋಗೋಪಭೋಗಂಗಳ್ ದೊರೆಯಲ್ಲವದಱಿಂದೀ ಲೋಕದೊಳೀತನೆ ಪರಮಾರ್ಥಂ ಸುಖಿಯೆಂದೊಸೆದರಸನವಂತಿ ಸುಕುಮಾರನೆಂದು ಪೆಸರನಿಟ್ಟಂ ಯಶೋಭದ್ರೆಯುಮರಸನನೇಕ ವಸ್ತು ವಾಹನಗಳಿಂದಂ ಪೂಜಿಸಿ ಕೞಿಪಿದೊಡಿಂತು ಸುಕುಮಾರಸ್ವಾಮಿ ಸುಖದಿಂದಂ ಕಾಲಂ ಸಲೆ

ಮತ್ತೊಂದು ದಿವಸಂ ಯಶೋಭದ್ರೆಯ ಭ್ರಾತರಪ್ಪ ದಯಾಭದ್ರರೆಂಬ ರಿಷಿಯರ್ ಮುನ್ನವರ ಪಕ್ಕದೆ ಸೂರದತ್ತಂ ಧರ್ಮಮಂ ಕೇಳ್ದು ವೈರಾಗ್ಯಮಾಗಿ ತಪಂಬಟ್ಟನಾತನ ಮಗನುಂ ರಿಷಿಯರಂ ಕಂಡಾಗಳೆ ತಪಂಬಡುಗುಮೆಂಬುದಂ ಮುನ್ನ ನೈಮಿತ್ತಿಕರಾದೇಶಂಗೆಯ್ದಿರ್ದರ್ ಮತ್ತಂ ದಯಾಭದ್ರರೆಂಬ ರಿಷಿಯರ್ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪ ದಿವ್ಯ ಜ್ಞಾನಿಗಳ್ ಸುಕುಮಾರಸ್ವಾಮಿಗೆ ನಾಲ್ಕು ತಿಂಗಳುಮೈಯ್ದು ದಿವಸಮಾಯುಷ್ಯ ಪ್ರಮಾಣಮೆಂದಱಿದುಪಕಾರಾರ್ಥಮುಜ್ಜೇನಿಗೆ ವಂದು ಸುಕುಮಾರಸ್ವಾಮಿಯ ಮಾಡದ ಪೆಱಗಣ ನಂದನವನದೊಳಗಣ ಜಿನಾಲಯದೊಳಾಷಾಢಮಾಸದ ಚತುರ್ದಶಿಯ ದಿವಸದಲು ಪಡೆವೊಟ್ಟು ಬಂದು ಜೋಗುಗೊಂಡಿರ್ಪ್ಪರಂನೆಗಂ ವನಪಾಲಕಂ ಪೋಗಿ ಯಶೋಭದ್ರೆಗೆ ರಿಷಿಯರ ಬರವಂ ಪೇೞ್ದೊಡಾಕೆಯುಂ ಬಂದು ದೇವರಂ ರಿಷಿಯರಂ ಬಂದಿಸಿ ಭಟಾರಾ ನೀಮಿಲ್ಲಿಗೇಕೆ ಬಂದಿರಿ ಇಲ್ಲಿಂದಂ ಪೊಱಗೆ ಪೊಟಲೊಳಗೆ ಪೆಱವು ಬಸದಿಯಿಲ್ಲಾ ಎಂದೊಡಾ ಭಟಾರರೆಂದರ್ ಅಬ್ಬಾ ನೀಡುಂ ಪಯಣಂ ಬಂದು ಸೇದೆಗೆಟ್ಟೆಂತಾನುಮಿಲ್ಲಿಗೆಯಾಸತ್ತುರ್ ಕೆಟ್ಟು ಜೋಗಿನ ಪೊಳ್ತೞೊಳೆಯ್ದೆ ಬಂದು ಜೋಗುಗೊಂಡಿರ್ದ್ದೆಮೆತ್ತಲುಂ ಪೋಗಲಾಗದೆನೆಯಂತಪ್ಪೊಡೆ ಭಟಾರಾ ನಿಮ್ಮನೊಂದಂ ಬೇಡಿದಪ್ಪೆಂ ನಾಲ್ಕು ತಿಂಗಳುಮೇನುಮನೋದದೆ ಮೋನಂಗೊಂಡು ಬಸದಿಯಂಗಣದೊಳ್ ನಡಪಾಡದೊಳಗಣಡಂಗಿರ್ದ್ದು ಜೋಗು ನೆಱೆದಂದು ಬಿಜಯಂಗೆಯ್ಯಿಮೆಂದೊಡಂತೆಗೆಯ್ವೆಮೆಂದು ಭಟಾರರಿರ್ದ್ದರ್

ಮತ್ತಿತ್ತ ಸುಕುಮಾರ ಸ್ವಾಮಿಯುಂ ಸರ್ವತೋಭದ್ರಮೆಂಬುದುತ್ತುಂಗ ವಿಚಿತ್ರಮಾಗಿರ್ದ್ದ ಪ್ರಾಸಾದದ ಮೇಗಣೇೞನೆಯ ನೆಲೆಯೊಳ್ ಕಾರ್ತಿಕ ಮಾಸದ ಪುಣ್ಣಮಿಯಂದು ಸುಖದಿಂದೆ ಉಂದಿರ್ದನನ್ನೆಗಮಿತ್ತ ದಯಾಭದ್ರ ಭಟಾರರ್ಗ್ಗೆ ಜೋಗು ನೆಱೆದು ಯಶೋಭದ್ರೆಯ ಬೇಡಿದ ಮೋನದ ದಿವಸಂ ಪ್ರಮಾಣಾವಸಾನದೊಳಿರೆ ಬಯ್ಗಿರುಳಿನ ಪಂಚ ಮಹಾಶಬ್ದದ ಪೊೞ್ತೞೊಳ್ ತ್ರಿಲೋಕ ಪ್ರಜ್ಞಪ್ತಿಯೆಂಬುದಂ ಮೃದು ಮಧುರ ಗಂಭೀರ ಸ್ವರದಿಂ ಭಟಾರರ್ ಪರಿವಿಡಿಗೆಯ್ದಾಗಳ್ ಅಧೋಲೆಓೀಕ ತಿರ್ಯಗ್‌ಲೋಕದೊಳಿರ್ದ್ದ ಸ್ವರೂಪಮಂ ಪ್ರಮಾಣಮುಮಂ ಓದಿಯೂರ್ಧ್ವಲೋಕದ ವ್ಯಾವರ್ಣನೆಯಂ ಪೇೞ್ದಾಗಳಾರಣ ಕಲ್ಪದ ಪದ್ಮಗುಲ್ಮ ವಿಮಾನಮಂ ವ್ಯಾವರ್ಣಿಸುವುದುಂ ಸುಕುಮಾರಸ್ವಾಮಿ ಕೇಳ್ದು ಜಾತಿಸ್ಮರ ನಾಗಿಯಾನಿಲ್ಲಿ ಪುಟ್ಟಿದೆನೆಂಬುದನಱಿದು ಅಹೋ ಸುರಲೋಕ ಸುಖವೆಂಬಮೃತ ಸಮುದ್ರದ ನೀರೆಲ್ಲಮಂ ಕುಡಿದು ತಣಿಯದೆ ಈ ಮನುಷ್ಯಭವದ ಸುಖಮೆಂಬ ಪುಲ್ಬನಿಯೊಳ್ ಸಿಲ್ಕಿ ಶಿವಸುಖಮನೆಯ್ದಿಸುವ ಸಚ್ಚಾರಿತ್ರದಿಂ ಬಟ್ಟಿದೆನೆಂದು ತನ್ನಂ ತಾಂ ನಿಂದಿಸುತ್ತಂ ಮಂಚದಿಂದಿೞಿದು ಮಾಡದೊಳಗಿರ್ದ್ದ ವಸ್ತ್ರಂಗಳಂ ತೆಗೆದುಕೊಂಡು ಪ್ರಾಸಾದದ ಪೆಱಗಣ ಗವಾಕ್ಷಜಾಳದೊಳ್ ಕಟ್ಟಿಕೊಂಡೊಂದೊಂದಱ ತುದಿಯೊಳೊಂದೊಂದು ವಸ್ತ್ರಮಂ ತಗುಳ್ಚಿ ಪಿಡಿದಿೞಿದು ಜಿನಾಲಯಮನೆಯ್ದಿ ದೇವರ್ಗ್ಗೆ ನಮಸ್ಕಾರಂಗೆಯ್ದು ದಯಾಭದ್ರ ಭಟಾರರ್ಗ್ಗೆಱಗಿ ಪೊಡೆವಟ್ಟು ದೀಕ್ಷೆಯಂ ಪ್ರಸಾದಂಗೆಯ್ವನ್ನಂ

ಸಂಸಾರಾರ್ಣವದತ್ತಣಿಂದೆತ್ತಿಮೆಂದೊಂಗೆ ಭಟಾರರ್ ಮೂಱೆ ದಿವಸಂ ನಿನಗಾಯುಷ್ಯಮೆಂದಾಗಳ್ ನಿಸ್ಸಾರಮಪ್ಪ ದೇಹದಿಂ ಸಾರಮಪ್ಪ ತಪಮಂ ಕೈಕೊಂಡು ಪಲಕಾಲಂ ನೆಗಟಿಲ್ ಪೆತ್ತನಿಲ್ಲ ನಿಸ್ಸಾರಮಪ್ಪ ಭೋಗದೊಳ್ ಸಿಲ್ಕಿಯಮೇಧ್ಯದೊಳಗೆ ಕ್ರೀಡಿಸುವ ಬಾಳಕಂಬೊಲೆ ಕಾಲಮಂ ಬಱಿದೆ ಕಳಿಪಿದೆನೆಂದು ತನ್ನನಾದಮಾನುಂ ನಿಂದಿಸಿ ತತ್ವಾದ ಮೂಲದೊಳ್ ತಪಂಬಟ್ಟು ಪಂಚಮಹಾವ್ರತಂಗಳನೇಱಿಸಿಕೊಂಡು ಪಡಿಕಮಣಂ ಕೇಳ್ದು ತದನಂತರಂ ನಿಶ್ಚಯ ಸಮ್ಯಕ್ತ್ವಮಂ ಕೈಕೊಂಡಿಂಬಱಿಕ್ಕೆ ಮಹಾಕಾಳಮೆಂಬ ಸ್ಮಶಾನಕ್ಕೆ ಪೋಗಿ ಯಾವಜ್ಜೀವಂ ಆಹಾರ ಶರೀರಕ್ಕೆ ನಿವೃತ್ತಿ ಗೆಯ್ದು ಪ್ರಾಯೋಪಗಮನ ವಿಧಾನದಿಂ ಪ್ರಚ್ಛನ್ನಮಪ್ಪೆಡೆಯೊಳ್ ಮೃತಕ ಸೆಜ್ಜೆಯೊಳಿರ್ದು ಸಂನ್ಯಸನಂಗೆಯ್ದು ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಧ್ಯಾನಿಸುತ್ತಿರ್ಪನ್ನೆಗಮ್

ಇತ್ತ ವಾಯುಭೂತಿಯಪ್ಪ ಭವದಂದಿನತ್ತಿಗೆಯಪ್ಪ ಸೋಮದತ್ತೆ ಎಂಬಳ್ ನಿದಾನಂಗೆಯ್ದು ತನ್ನ ನಾಲ್ವರ್ ಮಕ್ಕಳುಂ ತಾನುಂ ಸಂಸಾರ ಸಮುದ್ರದೊಳ್ ನೀಡುಂ ತಿಱ್ಱನೆ ತಿರಿದು ಬಂದು ಪೆಣ್ನರಿಯಾಗಿ ಪುಟ್ಟಿ ತನ್ನ ನಾಲ್ಕುಂ ಮಱಿಗಳ್ ವೆರಸಾಹಾರಮನರಸಿ ತೊಟಲುತ್ತಂ ಬರ್ಪುದನ್ನೆಗಂ ಸುಕುಮಾರಸ್ವಾಮಿಯುಂ ಮಹಾಕಾಳಕ್ಕೆ ಪೋಪನೆಲ್ಲಾ ಕಾಲಮುಂ ಮುನ್ನ ಮಣಿಕುಟ್ಟಿಮ ಭೂಮಿಯೊಳ್ ಪಾಸಿದ ನೇತ್ರಪಟಿಯ ಮೇಗೆ ನಡೆದ ಕೆಂದಾವರೆಯವೊಲು ಮೃದುಲಲಿತಮಪ್ಪ ಚರಣದ್ವಯಗಳ್ ಎಂದುಂ ನೆಲನಂ ಮೆಟ್ಟಿಯಱಿಯದಂ ಕಠಿಣಭೂಮಿಯೊಳಂ ನಡೆದು ಕಿಱುಗಲ್ಲುಗಳುಂ ಪೆಟ್ಟೆಗಳುಂ ನಟ್ಟು ಪುಗುಳೊಡೆದು ಪೊಱಮಟ್ಟ ಕರಗದ ಧಾರೆವೊಲೆಡೆವಱಿಯದೆ ಮಹಾಕಾಳ ಸ್ಮಶಾನಂ ಬರೆಗಂ ಪೊಕ್ಕ ನೆತ್ತರ ಧಾರೆಯ ಗಂಧದಿಂದಂ ನರಿ ಬಂದು ಕಂಡು ರಾಗಿಸಿ ಮಱಿಗಳ್ವೆರಸಡಿಯಿಂದಂ ತೊಟ್ಟೆರಡುಂ ಕಾಲ್ಗಳಂ ಮೊಟಕಾಲ್ವರೆಗಮೊಂದು ದಿವಸಂ ತಿಂದಂತೆರಡನೆಯ ದಿವಸಂ ಮೊಳಕಾಲಿಂ ತೊಟ್ಟು ಕಟಿವರಂಬರೆಗಂ ತಿಂದತ್ತು ಮೂಱನೆಯ ದಿವಸಂ ಬಸಿಱಿಂ ಪೋೞ್ದು ಕರುಳುಂ ತೋಡಿ ತಿನೆ ಪೃಥಕ್ತ್ವ ವಿತರ್ಕ ವೀಚಾರಮೆಂಬ ಪ್ರಥಮ ಶುಕ್ಲಧ್ಯಾನದೊಳು ಕೂಡಿಯುಪಶಾಂತ ಕಷಾಯ ಗುಣಸ್ಥಾನದೊಳಿರ್ದು ರತ್ನತ್ರಯಮಂ ಸಾಧಿಸಿ ಸರ್ವಾರ್ಥಸಿದ್ಧಿಯೊಳ್ ಸಯಸತ್ತಮ ದೇವನಾದೊಂ

ಮತ್ತಿತ್ತ ತಾಯುಂ ಪಿರಿದುಂ ಪರಿವಾರಮುಂ ಎಲ್ಲಾ ದೆಸೆಗಳೊಳಂ ಪರಿವರಿದು ಪೋಗಿ ಸುಕುಮಾರಸ್ವಾಮಿಯನೆರಟ್ಟಿವಸಮಿರುಳುಂ ಪಗಲುಮಱಸಿಯುಂ ಕಾಣದೆ ಮೂಱನೆಯ ದಿವಸದಂದು ಬಯ್ಗಿನ ಪೊೞ್ತಱೊಳ್ ದೇವರ್ಕ್ಕಳ್ ಬಂದು ಸುಕುಮಾರಸ್ವಾಮಿಯಂ ಅಹೋಸೂರಾ ಸಂಸಾರಭೀರು ನಿನ್ನಂತುಪಸರ್ಗಮನಾರಪ್ಪಡಂ ಸೈರಿಸಿ ರತ್ನತ್ರಯಮಂ ಸಾಧಿಸಿದೊರಿಲ್ಲೆಂದು ದೇವರ್ಕ್ಕಳ್ ಪೊಗೞ್ದು ಕಳಕಳ ಧ್ವನಿಯುಮಂ ದೇವದುಂದುಭಿಯ ರವಮುಮಂ ಯಶೋಭದ್ರೆ ನೋಡಿ ದೇವಸಂಘಾತಮಂ ಕಂಡು ಮಗನ ಸಾವನಱಿದು ಬಯಿಗಿರುಳಿನಾಗಳ್ ಮೂವತ್ತಿರ್ವ್ವರ್ ಸೊಸೆವಿರ್ಕ್ಕಳ್ಗೆ ಪೇೞ್ದಟ್ಟಿ ಸುಕುಮಾರಸ್ವಾಮಿ ನಿಮಗೆಲ್ಲರ್ಗೆ ಮುಳಿದು ಪೋಗಿಯಡಂಗಿರ್ದ್ದೊನ ನಾನಱಿವೆಂ ನೀಮೆಲ್ಲಂ ನೆಱೆಯೆ ತೊಟ್ಟುಟ್ಟು

ಪಸದನಂಗೊಂಡು ಚೆಲ್ವೆಯರಾಗಿ ಬನ್ನಿಂ ಬಾ ಪೋಪಂ ತಿಳಿವಿಕೊಂಡು ಬರ್ಪ್ಪಂ ನಿಮ್ಮ ಸ್ವಾಮಿಯನೆಂದೊಡವರ್ಗ್ಗಳನಿಬರುಂ ರಾಗಿಸಿ ಕೆಯ್ಗೆಯ್ದುತ್ತೆಯೊಡನೆ ಪರಿವಾರ ಸಹಿತಂ ಮಹಾಕಾಳಕ್ಕೆ ಪೋಗಿ ನೋಟ್ಪರನ್ನೆಗಂ ನಮೇರು ಮಂದಾರ ಸಂತಾನಂ ಪಾರಿಯಾತ್ರಮೆಂಬ ದೇವರ್ಕ್ಕಳ ಸುರಿದ ಪುಷ್ಪವೃಷ್ಟಿಯಿಂದಂ ಮುಚ್ಚೆಪಟ್ಟನಾಗಿ ಕಂಪಿಂಗೆಱಗಿದ ತುಂಬಿಯ ಸಮೂಹಮಂ ಮೇಗೆ ಸುೞಿವುದಂ ಕಂಡಲ್ಲಿರ್ದ್ದೋನೆಂದು ಯಶೋಭದ್ರೆ ತೋಱಿದೊಡೆ ಪೋಗಿ ತೆಱೆದು ನೋಟ್ಪನ್ನೆಗಂ ಮೃತಕಮಂ ಕಂಡನಿಬರುಂ ಮೂರ್ಚ್ಛೆವೋಗಿ ನೀಡಱಿಂದೆೞ್ಚತ್ತು ತಮ್ಮ ಬಸಿಱುಂ ತಲೆಯುಮಂ ಬಡಿದುಕೊಂಡು ಸುಕುಮಾರಸ್ವಾಮಿಯ ರೂಪಮುಂ ಯೌವ್ವನಮುಂ ಲಾವಣ್ಯಮುಂ ಸೌಭಾಗ್ಯಮುಂ ಯಶಮುಂ ಮೆಲ್ಪು ನುಡಿಯ ಒಲ್ಮೆಯುಂ ಶುಚಿತ್ವಮುಂ ಶೌಚಮುಂ ಶ್ರೀಯುಂ ಸಂಪತ್ತುಂ ಬಲ್ಮೆಯುಂ ಧೈರ್ಯಮುಂ ಎಂದಿವು ಮೊದಲಾಗೊಡೆಯವಾತನೊಳ್ ನೆಲಸಿರ್ದ್ದ ಗುಣಂಗಳಂ ನೆನೆದನಿಬರುಂ ಪ್ರಳಾಪಂಗೆಯ್ಯುತ್ತಂ ಸೈರಿಸಲಾಱದೆ ನಿರಂತರಂ ಮೂರ್ಚ್ಛೆವೋಗುತ್ತಂ ನೀಡುಂ ಬೇಗಂ ದುಃಖಂಗೆಯ್ದುಟ್ಟು ನೀರಿೞಿದೆಣ್ಬರ್ ಬಸಿರ್ವ್ವೆಂಡಿರುೞಿಯೆ ಇಪ್ಪತ್ತನಾಲ್ವರ್ ಪೆಂಡಿರುಂ ಮತ್ತಂ ಪೆಱರುಂ ನಂಟರ್ಕ್ಕಳುಂ ಪರಿವಾರಮುಂ ಯಶೋಭದ್ರೆಯೊಡನೆ ದಯಾಭದ್ರ ಗುರುಗಳೆ ಗುರುಗಳಾಗಿ ಕಮಳಶ್ರೀ ಕಂತಿಯರ್ ಕಂತಿಯರಾಗಿ ತಪಂಬಟ್ಟುಗ್ರೋಗ್ರ ತಪಂಗೆಯ್ದನಿಬರುಂ ಸೌಧರ್ಮಕಲ್ಪಂ ಮೊದಲಾಗೊಡೆಯ ಕಲ್ಪಂಗಳೊಳ್ ಪುಟ್ಟಿದರ್

ಮತ್ತಿಂತಪ್ಪುದಂ ಚಿಂತಿಸಲು ಸೈರಿಸಲುಮಾಗದ ತಿರಿಕೋಪಸರ್ಗಮನವಂತಿ ಸುಕುಮಾರಸ್ವಾಮಿ ಮೂಱು ದಿವಸಮಿರುಳುಂ ಪಗಲುಂ ಸೈರಿಸಿ ರತ್ನತ್ರಯಮನೆಂತು ಸಾಧಿಸಿದನಂತೆ ಸಂನ್ಯಸನಂಗೆಯ್ದಿಳ್ದಾರಾಧಕರಪ್ಪ ಮಹಾಪುರುಷರುಮವಂತಿ ಸುಕುಮಾರಸ್ವಾಮಿಯ ಪರಮ ಸುಖಿಯಪ್ಪುಪಸರ್ಗಮಂ ವಿಜಯ ವಿಧಾನಮಂ ಮನದೊಳನವರತಂ ಚಿಂತಿಸುತ್ತಂ ಅತ್ಯಾಸನ್ನ ಭವ್ಯಜನಂಗಳ್ ಆಪ್ತಾಗಮ ಪದಾರ್ಥಗಳೊಳತೀವ ಸ್ಥಿರರಾಗಿ ಪರಮ ಸಹಜ ನಿಜ ರತ್ನತ್ರಯದೊಳಭೇದವಾಗಿಯೆ ಕೂಡಿ ಶರೀರ ಮೊದಲಾಗೊಡೆಯ ಸಮಸ್ತ ಬಾಹ್ಯ ಅಭ್ಯಂತರ ಪರಿಗ್ರಹಂಗಳಂ ನೆಱೆ ತೊಱೆದು ಅಪೂರ್ವಾಪವರ್ಗ ಸ್ವರ್ಗ ಸುಖಂಗಳನೆಯ್ದುಗೆ

ಮತ್ತುಜ್ಜೇನಿಯ ತೆಂಕಣದೆಸೆಯೊಳವಂತಿ ಸುಕುಮಾರಸ್ವಾಮಿಯ ಕಾಲಂ ಗೆಯ್ದೆಡೆ ಈಗಳು ಪುಣ್ಯಮುಂ ಪವಿತ್ರಮುಮಾದುದು ಮತ್ತಮ್ಮಾ ಮಹಾಪುರುಷನ ಶರೀರಮಂ ಚತುರ್ನಿಕಾಯಾಮರತತಿ ಭಕ್ತಿಯಿಂದಗರು ಗೋಶೀರ್ಷ ಚಂದನ ಮೊದಲಾಗೊಡೆಯನೇಕ ಸುಗಂಧ ದ್ರವ್ಯಂಗಳಿಂ ಪೂಜಿಸಿದ ದಿವ್ಯ ವಸ್ತುಗಳ್ ಕಾಲಾಂತರದೊಳ್ ಕರಗಿ ಕಳಲ್ದು ಬಿರ್ದ್ದ ಸ್ಥಾನಕ್ಕಂ ಗಂಧವತಿ ಎಂಬ ತೊಱೆಯಾದುದು ದೇವರ್ಕ್ಕಳ್ ಪೊಗಟ್ಟಿ ಕಳಕಳ ಧ್ವನಿಯಿಂ ಪೆಂಡಿರ್ಕ್ಕಳ್ ಪ್ರಳಾಪಂ ಗೆಯ್ದಟ್ಟಿ ಕಳಕಳಧ್ವನಿಯಿಂದಂ ಕಳಕಳಾಯ್ತುವೆಂದು ಸಿದ್ಧಾಯತನಮಾದುದು.

■

೨. ಸುಕೌಶಳ ಸ್ವಾಮಿಯ ಕಥೆ

ಸುಕೌಶಳ ಸ್ವಾಮಿಯ ಕಥೆಯಂ ಪೇೞ್ವೆಂ

ಗಾಹೆ । ಮೊಗ್ಗಳ ಗಿರಿಮ್ಮಿಯ ಸುಕೌಸಳೋವಿ ಸಿದ್ಧತ್ಥ ದಯಿದಗೋ ಭಗವಂ
ವಗ್ಘೀಏ ಖ ಇದಂ ಪಡಿದೋ ಪಡಿವಣ್ಣೋ ಉತ್ತಮಂ ಅಟ್ಠಂ ॥

[ಮೊಗ್ಗಳ ಗಿರಿಮ್ಮಿಯ - ಮೊಗ್ಗಳಮೆಂಬ ಪರ್ವತದೊಳ್ । ಸುಕೌಸಳೋವಿ = ಸುಕೌಶಳಸ್ವಾಮಿಯುಂ । ಸಿದ್ಧತ್ಥದಯಿದಗೋ ಭಗವಂ = ಸಿದ್ಧಾರ್ಥನೆಂಬ ಪರದನು ಕಾದಲಿಸೆಪಡುವ ಮಗಂ ಪೆರ್ಮ್ಮೆಯನೊಡೆಯೊಂ । ವಗ್ಘೀಏ ಖ ಇದಂ ಪಡಿದೋ = ಮುನ್ನಿನ ಭವದ ತಾಯಪ್ಪ ಪೆಣ್ಬುಲಿಯಿಂದಂ ತಿನೆಬರ್ದಿದೊಳನಾಗಿಯುಂ । ಪಡಿವಣ್ಣೋ = ಪೊರ್ದ್ದಿದೊಂ । ಉತ್ತಮಂ ಅಟ್ಠಂ = ಮಿಕ್ಕದರ್ಶನಜ್ಞಾನಚಾರಿತ್ರಂಗಳರಾಧನೆಯಂ]

ಅದೆಂತೆಂದೊಡೆ -

ಈ ಜಂಬೂದ್ವೀಪದ ದಕ್ಷಿಣಭರತಕ್ಷೇತ್ರದೊಳಂಗಮೆಂಬುದು ನಾಡಲ್ಲಿ ಚಂಪಾ ನಗರಮೆಂಬ ಪೊೞಲದನಾಳ್ವೊಂ ಗಂಧಭಾಜನನೆಂಬರಸಂ ಇಂದ್ರನೊಳೋರಂತಪ್ಪ ಭೋಗೈಶ್ವರ್ಯಮುಂ ವಿಭವಮನೊಡೆಯೊಂ ನ್ಯಾಯದಿಂದಂ ಪ್ರಜೆಗಳಂ ಪ್ರತಿಪಾಳಿಸುವೊಮಧಿಗಮಸಮ್ಯಗ್‌ದೃಷ್ಟಿಯಪ್ಪನೇೞುಗುಣಗಂಳಿಂದಂ ಕೂಡಿದೊಂ ಆ ಏೞು ಗುಣಂಗಳೆಂಬುವಾವುವೆಂದೊಡೆ

ಗಾಹೆ ॥ ಸಮ್ಮದ್ದಂಸಣಸುದ್ಧೋ ಕದವದ ಕಮ್ಮೋ ಸುಸೀಲಗುಣನಿಳಯೋ
ಉಜುಗತ್ತೋ ಗುರುಭಕ್ತೋ ಪವಯಣ ಕುಸಳೋ ಮದಿಪ್ಪಗಬ್ಭೋಯ ॥

ಎಂದೀ ಏೞುಂ ಗುಣಂಗಳಿಂದಂ ಕೂಡಿದನಂತಪ್ಪರಸಂ ಶರತ್ಕಾಲದ ಮುಗಿಲೊಳೋರಂತಪ್ಪುದನಾದಮಾನುಂ ವಿಚಿತ್ರಮಪ್ಪುದಂ ಸಹಸ್ರಕೂಟಮೆಂಬ ಜಿನಾಲಯಮುಮಂ ಮಾಡಿಸಿಯದಕ್ಕನವರತಂ ಮಹಾಪೂಜೆಯಂ ಮಹಿಮೆಯುಮಭಿಷೇಕಂಗಳುಮಂ ಸ್ಪಲಿಸುತ್ತಿರ್ಪ್ಪೊಂ ಮತ್ತಾಪೊೞಲೊಳ್ ಸಾಗರದತ್ತನೆಂಬೊಂ ಸೆಟ್ಟಿಯಾತನ ಭಾರ್ಯೆ ಸುಭದ್ರೆಯೊಂಬೊಳಾಯಿರ್ವರ್ಗ್ಗಂ ಮಗಳ್ ಸುರೂಪೆಯೆಂಬೊಳ್

ಮತ್ತಾ ಪೊಱಲೊಳ್ ಮತ್ತೋರ್ವ್ವಂ ಸೆಟ್ಟಿ ನಾಗದತ್ತನೆಂಬಾತಂಗೆ ಸುರೂಪೆಯಂ ಕೊಟ್ಟೊಡಾ ಇವ್ವರ್ಗ್ಗಂ ಸುಕೇಶಿನಿಯೆಂಬೊಳ್ ಮಗಳಾದಳಾಕೆ ಬಳೆದತ್ಯಂತ ರೂಪಲಾವಣ್ಯ ಸೌಭಾಗ್ಯಕಾಂತಿಹಾವಭಾವವಿಳಾಸ ವಿಭ್ರಮಂಗಳನೊಡೆಯೊಳ್ ಪಲವು ತೆಱದ ಶುಭ ಲಕ್ಷಣಗಳಿಂದಂ ಕೂಡಿದಮೆಯ್ಯನೊಡೆಯೊಳಂ ನವಯೌವನೆ ದೇವಗಣಿಕೆಯನೆ ಪೋಲ್ವಳೊಂದು ದಿವಸಂ ಅಷ್ಟಮಿಯಂ ನೋಂತು ದೇವರನರ್ಚ್ಚಿಸಲ್ ಬಂದು ಸಹಸ್ರ ಕೂಟ ಚೈತ್ಯಾಲಯಕ್ಕರ್ಚ್ಚನೆಯಂ ಕೊಂಡುಪೋದಳನ್ನೆಗಮರಸನುಮಾಗಳೆ ದೇವರಂ ಬಂದಿಸಲ್ ಬಂದೊಡರಸಂಗೆ ನಾಣ್ಚೆ ಬಸದಿಯೊಳಗಣ ಕಂಬದ ಮಱೆಯೊಳ್ ಕೇರಂ ಸಾರ್ದು ಪೊನ್ನ ಬೆಳಗುವ ಗಳಂತಿಗೆಯನಾದಮಾನುಮೊಪ್ಪುತ್ತಿರ್ದ್ದುದಂ ಪಿಡಿದು ನಿಂದಿರ್ದ್ದೊಳನರಸನುಂ ಕಂಡಿಲ್ಲಿಯ ಚಿತ್ರದ ಲೆಪ್ಪಕಾಷ್ಠಕರ್ ಮಾಡಿದ ರೂಪುಗಳೊಳಗೆಲ್ಲಮಿೀ ಸ್ತ್ರೀಯ ಜೀವರೂಪಮಿದುಮಿಂತುಟತಿಶಯಮಪ್ಪ ರೂಪೆಲ್ಲಿಯುಮಿಲ್ಲೆಂದರಸಂ ಪೊಗೞೆ ಕೆಲದೊಳಿರ್ದ್ದ ಕಶ್ಚಿದ್ ದೇವದತ್ತನೀಕೆ ಕನ್ನೆಯಿರ್ದ್ದೊಳೆಂದು ಪೇೞ್ದೊಡಾರ ಮಗಳೆಂದು ಬೆಸಗೊಂಡೊಡೀ ಪೊಱಲ್ಗೆ ಪ್ರಧಾನಂ ನಾಗದತ್ತಸೆಟ್ಟಿಯ ಮಗಳೆಂದು ಪೇೞ್ದೊಡರಸಂ ಕೇಳ್ದು ಕೆಮ್ಮಗಿಳ್ದು ದೇವರ್ಗ್ಗೆ ನಮಸ್ಕಾರಂಗೆಯ್ದು ಪೊಡಮಟ್ಟು ರಿಷಿಯರಂ ಬಂದಿಸಿ ತನ್ನರಮನೆಗೆ ಪೋದನ್

ಇತ್ತ ಸುಕೇಶಿನಿಯುಂ ದೇವರನರ್ಚಿಸಿ ಬಂದಿಸಿ ಗುರು ಪರಿವಿಡಿಯಿಂದಂ ರಿಷಿಯರಂ ಬಂದಿಸಿ ಬ್ರತಂಗಳನೇಱಿಸಿಕೊಂಡು ಸಿದ್ಧಸೇಸೆಯಂ ತಾಯ್ಗಂ ತಂದೆಗಂ ಪೋಗಿ ಕೊಟ್ಟೊಡವರ್ಗ್ಗಳುಂ ತಲೆಯಲಿಟ್ಟುಕೊಂಡು ಯೌವನಂ ನೆಱೆದ ಕೂಸಿನ ರೂಪಂ ನೋಡುತ್ತಿರ್ದ್ದಾರ್ಗ್ಗೆ ಕುಡುವಮೆಂದು ತಮ್ಮೊಳ್ ನುಡಿಯುತ್ತಿರ್ಪ್ಪಿನಮರಸಂ ಕನ್ನೆಯ ರೂಪಂ ಕಂಡಾಟಿಸಿ ಕೂಸಿನ ತಾಯಪ್ಪ ಸುರೂಪಗೆ ಬೞಿಯಟ್ಟಿ ಬರಿಸಿ ಕೂಸನಾರ್ಗ್ಗೆ ಕೊಟ್ಟಪಿರೆಂದು ಬೆಸಗೊಂಡೊಡೆನ್ನ ತಮ್ಮಂ ವರಾಂಗನೆಂಬೊಂ ಆತನ ಮಗಂ ಜಿತರಂಗನೆಂಬೊನೆನ್ನ ಸೋದರಳಿಯನಾತಂಗೆ ಕೊಟ್ಟಪೆನೆಂದು ಪೇೞ್ದೊಡರಸಂ ಮಧುಸೇನಂ ಮಧುಸೂದನನೆಂಬಿರ್ವ್ವರುಂ ಪ್ರಧಾನ ಪೆರ್ಗ್ಗಡೆಗಳಂ ನಾಗದತ್ತ ಸೆಟ್ಟಿಯಲ್ಲಿಗೆ ಕೂಸಂ ಬೇಡಿಯಟ್ಟುಯುತ್ತವಳನಾಗಿಯವರ ಬೞಿಯನೆ ತಾನುಂ ನಾಗದತ್ತನ ಮನೆಗೆ ಪೋಗಿ ಕೂಸಂ ಬೇಡಿ ಪೆತ್ತಂ ನಾಗದತ್ತನುಮಷ್ಟಾಹ್ನಿಕ ಮಹಾಮಹಿಮೆಯನೆಂಟು ದಿವಸಂ ಮಾಡಿ ಪ್ರಶಸ್ತ ದಿವಸ ವಾರ ನಕ್ಷತ್ರ ಮುಹೂರ್ತ ಹೋರಾಲಗ್ನದೊಳ್ ಕೂಸಿನನುಕೂಲದೊಳ್ ಪಾಣಿಗ್ರಹಣಪುರಸ್ಸರಂ ಸುಕೇಶಿನಿಯಂ ಗಂದಭಾಜನನೆಂಬರಸಂಗೆ ಕೊಟ್ಟನಿಂತು ಮಹಾವಿಭೂತಿಯಿಂದಂ ಮದುವೆ ನಿಂದು ಗಂಧಭಾಜನನೃಪತಿಯುಂ ಸುಕೇಶಿನಿಯೊಳ್ ಇಷ್ಟವಿಷಯ ಕಾಮಭೋಗಂಗಳಂ ಪಲವು ಕಾಲಮನುಭವಿಸುತ್ತುಂ

ಮತ್ತೊಂದು ದಿವಸಂ ಕೌಶಳಾಧಿಪತಿಯಪ್ಪ ಅತಿಬಲನೆಂಬರಸಂಗಂ ಕಳಿಂಗಾಧಿಪತಿಯಪ್ಪ ಕಾಳಿಂಗನೆಂಬರಸಂಗಂ ತಮ್ಮೊಳ್ ವಿಗ್ರಹಮಾದೊಡೆ ಗಂಧಭಾಜನ ನೃಪತಿ ತನ್ನ ಮತಿಶ್ರುತನೆಂಬ ಮಂತ್ರಿಯನಟ್ಟಿ ಇರ್ವ್ವರ್ಗ್ಗಂ ಸಂಧಿ ಮಾಡಿದೊಡೆ

ಕಾಳಿಂಗನೆಂಬರಸಂ ಮಧುಸೂದನನೆಂಬ ತನ್ನ ಪೆರ್ಗ್ಗಡೆಯ ಕೈಯೊಳ್ ಮದಾಂಧಗಂಧಹಸ್ತಿಯಾ ಗಂಧಭಾಜನ ನೃಪತಿಗೆ ಪಾಗುಡವಟ್ಟಿದೊಡದಂ ಸೊರ್ಕ್ಕಿನಿಂದಂ ಮಸಗಿದುದಂ ಗಂಧಹಸ್ತಿಯಂ ಸುಕೇಶಿನಿ ಕಂಡು ಜಾತಿಸ್ಮರೆಯಾಗಿ ಮೂರ್ಛೆವೋಗಿರ್ದೊಡಂ ದಾದಿ ಮೊದಲಾಗಿ ಕೆಲದೊಳಿರ್ದ್ದೋರೆಲ್ಲಂ ಚಂದನದ ನೀರ್ಗಳಂ ತಳಿದು ಬೀಸಿ ನೀಡಱಿಂದೆಚ್ಚತ್ತಳನ್ನೆಗಮರಸಂ ಉತ್ತವಳನಾಗಿ ಪರಿತಂದಿದೇನೀಕೆಗಿಂತೇಕಾಯ್ತೆಂದು ಬೆಸಗೊಳೆ ದಾದಿಯೆಂದಳ್ ಸೊರ್ಕ್ಕಾನೆಯಂ ಕಂಡು ಮೂರ್ಛೆವೋದಳೆಂದು ಪೇೞ್ದೊಡಾಮಾತನರಸಂ ಕೇಳ್ದು ಮಱುಸೂೞಾನೆಯುಂ ಕಂಡಂಜದಂತಿರೆ ಸುಕೇಶಿನಿಯ ಮಾಡದ ಕೇರ್ಗ್ಗಳೆಲ್ಲಾ ಯೆಡೆಗಳೊಳು ವ್ಯಾಳಂಗಳಪ್ಪ ಆನೆಗಳಂ ತನ್ನ ಚಿತ್ತಾರಿಗರಿಂ ಬರೆಯಿಸಿದಂ ಮತ್ತೆ ಸುಕೇಶಿನಿಯುಂ ತನ್ನ ಮುನ್ನಿನ ಜನ್ಮದೊಳ್ ನೆಗೞ್ದುದೆಲ್ಲಮಂ ಪಟದೊಳ್ ತಾನೆ ಬರೆದಾರುಮಱಿ ಯಂದತಿರೇಕಾಂತದೊಳ್ ನೋಡುತ್ತಿರ್ಕ್ಕುಮಿಂತು ಕಾಲಂ ಸಲೆ

ಮತ್ತೊಂದು ದಿವಸಂ ಮುನ್ನಿನ ಗಂಧಹಸ್ತಿಯೊಡನೆ ಬಾರಿಯೊಳ್ ಮೂವತ್ತೆರಡು ಜಳಕ್ರೀಡೆಗಳಿಂದಂ ನೀಡುಂಬೇಗಂ ಕ್ರೀಡಿಸಿಯಾನೆಯಂ ಸೇದೆಗಿಡಿಸಿ ತನ್ನ ಬಸಕ್ಕೆ ಮಾಡಿ ಏಱಿಯಂಕುಸಮಂ ಪೊಳಯಿಸುತ್ತುಂ ಅರಸಿಯಲ್ಲಿಗೆ ವಂದು ನಿಂದಿಂತಕ್ಕುಮೆ ಮೆಚ್ಚಿದಾ ಎಂದು ತನ್ನ ಸಾಹಸಮಂ ಪೇೞ್ದು ಮೆಱೆಯೆ ಸುಕೇಶಿನಿಯೆಂದೊಳಿದೇನೆಂಬಾನೆ ತಗರೊಳೋರಂತಪ್ಪುದು ಚಂದನಮಲಯಮೆಂಬ ಪಿರಿಯ ಪರ್ವತದೊಳಿಂದ್ರನೀಲಮಾಣಿಕಡೊಳೋರಂತಪ್ಪ ಬಣ್ಣಮನೊಡೆಯದು ಮಲಯಸುಂದರ ನೆಂಬಾನೆಯುಂಟು ಹಸ್ತಿಯೂಥಕ್ಕೆಱೆಯನಪ್ಪುದುಂ ಎಲ್ಲಾ ಕಾಲಮುಂ ಮದದಿಂ ಪೆರ್ಚ್ಚುತ್ತಿರ್ದ್ದುದು ಕೆಂದಾವರೆಯ ಬಣ್ಣದೊಳೋರಂತಪ್ಪ ಬಣ್ಣಮನೊಡೆಯ ಪದ್ಮಾವತಿಯೆಂಬ ಪಿಡಿಯೊಡನೆ ಕ್ರೀಡಿಸುತ್ತಿರ್ಪ್ಪಾನೆಯಂ ನಿನ್ನ ಬಸಕ್ಕೆ ಮಾಡಿ ಪಿಡಿದೇಱಿಕೊಂಡು ಬಂದೊಡೆ ನಿನ್ನ ಗಜಪ್ರಿಯತೆಯುಮೇಱಿಯಾಡಲ್ ಬಲ್ಮೆಯುಂ ಕಲಿತನಮುಂ ಸಾಹಸಮುಮಂ ಗಂಡಗುಣಮನಱಿಯಲಕ್ಕುಮಾ ಆನೆಯಂ ತಂದಂದು ಗಂಡರ್ ನಿನ್ನನ್ನರೀ ಭುವನದೊಳಾರುಮಿಲ್ಲೆಂದೊಸೆದು ಮೆಚ್ಚಿ ಪೊಗೞ್ವೆನೆಂದೊಡರಸನಿಂತೆಂದಂ ನೀನಪ್ಪೊಡಿಲ್ಲಿ ಪುಟ್ಟಿದೆ ಆ ಯಾನೆಯನೆಲ್ಲಿ ಕಂಡೆಯೆಂತಱಿವೆ ಎಂದು ಬೆಸಗೊಳೆ ಸುಕೇಶಿನಿಯುಂ ಇಂತೆಂದಳ್ ಮುನ್ನಿನ ಭರ್ತಾರಂ ಮಣಿಚೂಳನೆಂಬೊಂ ವಿದ್ಯಾಧರನಾತನೊಡನೆ ಭೌಮವಿಹಾರಾರ್ಥಂ ತೊೞಲ್ವಲ್ಲಿ ಚಂದನಮಲಯಮೆಂಬ ಪರ್ವತದೊಳ್ ಕರಿಣೀವೃಂದಂ ಬೆರಸಿಯಾಡುವ ಕರಿಪತಿಯನೈರಾವಣಸನ್ನಿಭವಂ ಕಂಡೆನೆಂದುಕ್ಕೆವದಿಂದ ಪೇೞ್ದೊಡಾಮಾತನರಸಂ ಕೇಳ್ದು ಪೂರ್ವಜನ್ಮಾಂತರದೊಳ್ ಕಟ್ಟೆಪಟ್ಟ ಮುಳಿಸನೊಡೆಯಂ ತನ್ನುಳ್ಳ ಸಮಸ್ತಬಲಂ ಬೆರಸು ಪೋಗಿ ಮಲಯಪರ್ವತಮೆಲ್ಲಮಂ ಬಳಸಿ ಸುತ್ತಿ ಮುತ್ತಿದಾಗಳಿಂದ್ರ ನೀಲಮಾಣಿಕದ ತೇಜದೊಳೋರಂತಪ್ಪ ಮೈಯನೊಡೆಯ ಗಜಪತಿಯಂ ಮುಗಿಲ ಧ್ವನಿವೊಲ್ ಗಂಭೀರಮಪ್ಪ ಗರ್ಜನೆಯನೊಡೆಯದುಂ ಬಂದು ಪಡೆಯೆಲ್ಲಮಂ ಹತವಿತತ ಕೋಳಾಹಳಮೆೞೆದು ಕೊಲ್ವುದನಾದಮಾನುಂ ಕಲಿಯಪ್ಪುದರಸಂ ಕಂಡು ಪಿಡಿಯಲಾಱದಾ ಆನೆಯಂ ಕೊಂದೆರಡುಂ ನಿಡಿಯ ತೋರಮಪ್ಪ ಕೊಂಬುಗಳುಮಂ

ಕುಂಭಸ್ಥಳದ ಮುತ್ತುಗಳುಮಂ ಕೊಂಡೊಸಗೆಯಿಂದಂ ಬೇಗಂ ಚಂಪಾಪುರಕ್ಕೆ ವಂದರಮನೆಯಂ ಪೊಕ್ಕು ಅರಸಿಯಂ ಕಂಡಾ ನಿನ್ನ ನಚ್ಚುವ ಮಲಯಸುಂದರನ ಕೊಂಬುಗಳುಂ ಮುತ್ತುಗಳುಂ ಕೊಳ್ಳೆಂದವಂ ಸುಕೇಶಿನಿಯ ಮುಂದೆ ತಂದಿಟ್ಟೊಡೆ ಸುಕೇಶಿನಿಯುಂ

ಹಾ ಎನ್ನ ಮಲಯಸುಂದರಾ ಹಾ ಎನ್ನ ಮಲಯ ಸುಂದರನಪ್ಪ ಸ್ವಾಮಿ ಎಂದು ಪ್ರಳಾಪಂ ಗೆಯ್ದೆರಡುಂ ಕೊಂಬುಗಳಂ ತಟ್ಟೈಸಿಯಾದಮಾನುಂ ಬಿಗಿದಪ್ಪಿಕೊಂಡು ಸತ್ತಳ್ ಸುಕೇಶಿನಿಯ ಸತ್ತುದರ್ಕ್ಕರಸಂ ಮೊದಲಾಗಿ ಪರಿವಾರಮೆಲ್ಲಂ ಬೆಱಗಾಗಿ ವಿಸ್ಮಯಂಬಟ್ಟು ದುಃಖಂಗೆಯ್ದಿರ್ದ್ದರ್ ಕೆಲವು ದಿವಸದಿಂ ಯಶೋಧರರೆಂಬ ಕೇವಲಜ್ಞಾನಿಗಳ್ ವಿಹಾರಿಸುತ್ತುಮಾ ಚಂಪಾನಗರಕ್ಕೆ ವಂದು ಪ್ರಮೋದಕೋದ್ಯಾನವನದೊಳಗಿರ್ದ್ದರೆಂಬ ಮಾತು ರಿಷಿ ನಿವೇದಕನ್ ಪೇೞೆ ಕೇಳ್ದರಸಂ ಸಪರಿವಾರಂ ಬಂದರ್ಚಿಸಿ ಯಥೋಚಿತ ಸ್ಥಾನದೊಳಿರ್ದ್ದಂ ಮತ್ತಂ ನಾಗದತ್ತಸೆಟ್ಟಿಯುಂ ಸುರೂಪೆಯುಂ ವರಾಂಗನುಂ ಪ್ರಿಯಂಗುವುಂ ಮೊದಲಾಗೊಡೆಯ ಶ್ರಾವಕ ಜನಂಗಳುಂ ಬಂದರ್ಚಿಸಿ ನಮಸ್ಕಾರಂ ಗೆಯ್ದು ತಮ್ಮೆಡೆಗಳೊಳಿರ್ದ್ದು ಧರ್ಮಮಂ ಕೇಳ್ದು ತದನಂತರಮೆ ವೈರಾಗ್ಯಮಾಗಿ ಸುಕೇಶಿನಿಯ ದುಃಖಮಂ ಸೈರಿಸಲಾರದೆ ಸುಕೇಶಿನಿಯ ತಂದೆಯಪ್ಪ ನಾಗದತ್ತಸೆಟ್ಟಿಯುಂ ತಾಯ್ ಸುರೂಪೆಯುಂ ಮಾವನಪ್ಪ ವರಾಂಗನುಂ ವರಾಂಗನ ಭಾರ್ಯೆಯಪ್ಪ ಪ್ರಿಯಂಗುವುಮಂತು ನಾಲ್ವರುಮೆಟ್ಟಿ ಭಿಮುಖರಾಗಿ ದೀಕ್ಷಾಪ್ರಸಾದಂಗೆಯ್ಯಿಂ ಭಟಾರಾ ಎಂದು ಬೇಡಿ ತಪಂಬಟ್ಟರ್ ಮತ್ತಂ ಸುಕೇಶಿನಿಯಾ ಮಲಯ ಸುಂದರನೆಂಬಾನೆಯ ಕೊಂಬುಗಳನಪ್ಪಿ ಸತ್ತಳೆಂಬ ಮಾತಂ ವರಾಂಗಂ ಕೇಳ್ದು ಜನ್ಮಾನುಸಂಬಂಧಿಯಪ್ಪ ಸ್ನೇಹಂ ಕಾರಣಮಾಗಿ ದುಃಖಮಂ ಸೈರಿಸಲಾಱದೆ ತಪಂಬಟ್ಟು ನಿಧಾನಸಹಿತಂ ತಪಂಗೆಯ್ದುರಿತ್ತ ಗಂಧಭಾಜನನೃಪತಿ ಯಶೋಧರ ಕೇವಲಿಗಳನಿಂತೆಂದು ಬೆಸಗೊಂಡಂ ಭಟಾರಾ ಸುಕೇಶಿನಿ ಮಲಯಸುಂದರನೆಂಬಾನೆಯ ಕೊಂಬುಗಳನಪ್ಪಿಕೊಂಡು ಸತ್ತುದರ್ಕ್ಕೆ ಕಾರಣಮೇನೆಂದು ಬೆಸಗೊಂಡೊಡೆ ಕೇವಲ ಜ್ಞಾನಿಗಳಿಂತೆಂದು ಪೇೞ್ದರ್

ದಕ್ಷಿಣಾಪಥದೊಳ್ ದಕ್ಷಿಣಮಧುರೆಯೆಂಬುದು ಪೊೞಲದನಾಳ್ವೊಂ ಗಂಧಾರಪಾಂಡ್ಯನೆಂಬರಸನಾತನರಸಿಯಮೃತ ಮಹಾದೇವಿಯೆಂಬೊಳಂತ ವರ್ಗ್ಗಳಿಷ್ಟ ವಿಷಯ ಕಾಮಭೋಂಗಳನನುಭವಿಸುತ್ತಮಿರೆ ಮತ್ತಮಾ ಪೊೞಲೊಳಾರ್ಯನಂದಿಯೆಂಬೊಂ ಸೆಟ್ಟಿಯಾತನ ಪರದಿಯವಿಧಿಯೆಂಬೊಳಾ ಇರ್ವ್ವರ್ಗ್ಗಂ ಸುಕೀರ್ತಿಯೊಂಬೊಳ್ ಮಗಳಾದಳ್ ಮತ್ತೊರ್ವನಾ ಪೊೞಲೊಳ್ ಸುದರ್ಶನನೆಂಬೊಂ ಪರದನಾತನ ಪರದಿ ವೀರಶ್ರೀಯೆಂಬೊಳಾ ಇರ್ವ್ವರ್ಗ್ಗಂ ಮಗಂ ಪ್ರಿಯದರ್ಶನನೆಂಬೊಂ ಆತಂಗಾ ಸುಕೀರ್ತಿಯಂ ಕೊಟ್ಟರಾ ಸುಕೀರ್ತಿಯ ಕೆಳದಿ ಮಾಲೆಗಾರ್ತಿ ಪ್ರಿಯಸೇನೆಯೆಂಬೊಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನಮಭವಿಸುತ್ತಿರೆ ಮತ್ತೊಂದು ದಿವಸಂ ಸುಕೀರ್ತಿ ತನ್ನ ಭರ್ತಾರನನಿಂತೆಂದಳ್ ಅಡವಿಯೊಳಂ ಪರ್ವತಂಗಳೊಳಂ ಪುಳಿನ ಸ್ಥಳಂಗಳೊಳಮೆನಗೆ ಕ್ರೀಡಿಸಲ್ಕಟ್ಟಿಯಾದುದೆನೆ ನಿನ್ನಟ್ಟಿಯಂ ನೆಱಪಲಕ್ಕುಮೆಂದು ಸುದರ್ಶನನುಂ ಸುಕೀರ್ತಿಯುಂ ಪ್ರಿಯಸೇನೆಯುಮಿಂತು

ಮೂವರುಂ ಪರಿವಾರಸಹಿತಮಡವಿಗೆ ಪೋಗಿಯಲ್ಲಿಯ ಕಾನನ ವನ ಸರಿತ್ ಸರೋವರ ಪ್ರದೇಶಂಗಳೊಳಂ ಸಹಜನಂ ಬೆರಸು ತದೀಪ್ಸಿತ ಪ್ರದೇಶಂಗಳೊಳಂ ವಿಹಾರಿಸಿ ರಮ್ಯಮಪ್ಪ ಗಿರಿ ನದಿಯ ಪಲ್ಲವಲತಾಕೀರ್ಣಮಪ್ಪ ಪುಳಿನ ಸ್ಥಳಂಗಳೊಳ್ ಕ್ರೀಡಿಸುತ್ತಿರ್ಪನ್ನೆಗಂ ಹಸ್ತಿಯೂಥಮಂ ಬಪ್ಪುದಂ ಕಂಡಾಗಳೊಂದು ಮದಾಂಧಗಂಧ ಸಿಂಧುರಂ ಕರಿಣೀಬೃಂದಂಗಳಿಂ ಪರಿವೇಷ್ಟಿತನಾಗಿ ಕರಿಣೀಗಣಂಗಳಾಕಾಶಪುಷ್ಪಂಗಳಿಂ ಚಾಮರ ಮಿಕ್ಕಿ ಮೃದು ಪಲ್ಲವಂಗಳಂ ಕವಳಂಗೊಳ್ಳುತ್ತಂ ಲೀಲೆಯಿಂ ಬಂದು ಸ್ವಚ್ಛ ನಿಚ್ಚಳಾಕಾರಮಪ್ಪ ಮಡುವಂ ಪೊಕ್ಕು ಮನೋಹಾರಿಗಳಪ್ಪ ಕರಿಣಿಗಳೊಡನೆ ಕ್ರೀಡಿಸುವುದಂ ಮೂವರುಂ ಕಂಡು ಹಸ್ತಿ ಭೋಗಂಗಳೊಳಪ್ಪ ಕಾಂಕ್ಷೆಯಿಂದಂ ನಿದಾನಂಗೆಯ್ದು ತಿರಿಕಾಯುಷ್ಯಂ ಕಟ್ಟಿದರಿಂತು ಕಾಲಂ ಸಲೆ ಮತ್ತೊಂದು ದಿವಸಂ ಬಱಿಸಿಡಿಲ್ಪೊಡೆದು ಪ್ರಿಯಸೇನೆ ಸತ್ತು ಪ್ರಿಯ ದರ್ಶನನೊಂದು ದಿವಸಂ ತನ್ನ ಭಾರ್ಯೆ ಬೆರಸು ಕದಳೀ ವನದೊಳ್ ಮಱಲುಂದಿದಲ್ಲಿಗೆ ಕಾಳಿಂಗ ನಾಗನ ಮೇಲೆ ಕಾಲಂ ನೀಡಿದಡೆ ಕಚ್ಚೆತ್ತಾತನುಮಾಗಳೆ ಪರವಶನಾಗಿ ಪ್ರಾಣಪರಿತ್ಯಾಗಂ ಗೆಯ್ದೊನಂ ಕಡುಂ ಸುಕೀರ್ತಿಯುಂ ಕಾದಲನ ವಿಯೋಗ ಕಾರಣಮಾಗಿ ಪ್ರಾಣವಲ್ಲಭನ ಸುರಿಗೆಯಂ ಕೊಂಡು ತನ್ನಂ ತಾನಿಱಿದು ಸತ್ತಳಂತು ಮೂವರುಂ ಸತ್ತು ತೆಂಕಣ ಪಡುವಣ ಸಮುದ್ರದ ತಡಿಯೊಳ್ ಚಂದನ ಮಲಯನೆಂಬಾದಮಾನುಂ ರಮ್ಯಮಪ್ಪ ಪರ್ವತದೊಳ್ ಪ್ರಿಯದರ್ಶನನಿಂದ್ರನೀಲ ಮಾಣಿಕದೊಳೋರಂತಪ್ಪ ಮೆಯ್ಯನೊಡೆಯನಾಗಿ ಸುಭದ್ರಜಾತಿಯಪ್ಪಾನೆಗೆ ಮಲಯಸುಂದರನೆಂಬಾನೆಯಾಗಿ ಪುಟ್ಟಿದೊಂ ಸುಕೀರ್ತಿಯುಂ ಧವಳ ವರ್ಣಮಪ್ಪ ಮಲಯಾವತಿಯೆಂಬ ಪಿಡಿಯಾಗಿ ಪುಟ್ಟಿದುದು ಪ್ರಿಯಸೇನೆಯುಂ ಕೆಂದಾವರೆಯ ಬಣ್ಣದೊಳೋರಂತಪ್ಪ ಮೈಯನೊಡೆಯ ಪದ್ಮಾವತಿಯೆಂಬ ಪಿಡಿಯಾಗಿ ಪುಟ್ಟಿದಳಾ ಎರಡುಂ ಪಿಡಿಗಳುಂ ಸುಭದ್ರಜಾತಿಯಪ್ಪಾನೆಗೆ ಪುಟ್ಟಿದುವಂತಾ ಮೂಱುರ್ಕಮರಣ್ಯ ನಿವಾಸಿಗಳಪ್ಪ ಜನಂಗಳುಂ ತಾಪಸಾದಿಗಳುಮವಂ ಕಂಡವರ್ಗ್ಗಗಳೆಲ್ಲಮೊಸೆದು ಮೆಚ್ಚಿ ತದ್ದೇಹಾನುಸಾರಿಗಳಪ್ಪ ಪೆಸರ್ಗ್ಗಳನಿಟ್ಟುದರಿಂದಾ ನಾಡೊಳ್ ಪ್ರಸಿದ್ಧಿಗೆ ಸಂದುವು ಅಂತವರ್ಕ್ಕೆ ಕಾಲಂಸಲೆ ಮತ್ತಲ್ಲಿ ಯೂಥಾಧಿಪತಿ ಭದ್ರಜಾತಿಯಪ್ಪ ಸುಂದರನೆಂಬಾನೆ ಚಾರಣ ರಿಷಿಯರ್ಕಳ ಪಾದಯುಗಳಂಗಳಂ ವಿದ್ಯಾಧರನರ್ಚ್ಚಿಸಿ ಪೊಡಮಟ್ಟು ಪೋಪುದಂ ಕಂಡು ತಾನುಂ ನಿತ್ಯ ಸ್ಥಿತಿಯೊಳೆ ತಾಮರೆಯ ಪೂಗಳಂ ತಂದರ್ಚ್ಚಿಸಿ ಪೂಜಿಸಿ ಪೊಡವಟ್ಟು ಪೋಕುಂ ಇಂತು ಪುಣ್ಯಮಂ ನೆರಪುತ್ತಂ ಕಾಲಂ ಸಲೆ ಮತ್ತೊಂದು ದಿವಸಂ ಪ್ರಭಂಕರಿಯೆಂಬ ಸರೋವರದೊಳ್ ಮಲಯ ಸುಂದರನಪ್ಪಾನೆ ಪೂರ್ವಭವದ ಪ್ರಾಣವಲ್ಲಭೆಯರ್ಕಳಂ ಕಂಡು ಸ್ನೇಹದಿಂ ಪೊರ್ದಲಾಟಿಸುವುದಂ ಕಂಡು ಸುಂದರನೆಂಬಾನೆ ಸಾರಲೀಯದುದಱಿಂ ತದ್ವಿರಹ ಪರಿತಪ್ತ ಮನದಿಂದಂ ಸಲ್ಬುದಂ ನವಯೌವ್ವನಮನೆಯ್ದಿ ಆತ್ಮಬಲಮನದಱ ಬಲದೊಳ್ ವೃಕ್ಷಭಂಜನ ಸಾಮರ್ಥ್ಯದಿಂ ಪರೀಕ್ಷಿಸಿ ಮಱಿಯಾನೆಗಳಿಂ ಪರಿಭವಮುಮನದರ್ಕ್ಕೆ ಕಂಡು ವೃದ್ಧನಪ್ಪ ಸುಂದರನೊಳ್ ಯುದ್ಧಂಗೆಯ್ದು ಕೊಂದು ಆ ಯೂಥಕ್ಕೆಲ್ಲಮಧಿಪತಿಯಾಗಿ ಮಲಯಾವತಿಯುಂ ಪದ್ಮಾವತಿಯುಮನೊಡಗೊಂಡಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತುಂ ಆ ಎರಡುಂ

ಪಿಡಿಗಳ್ ತಮ್ಮೊಳನ್ಯೋನ್ಯ ಸ್ನೇಹದೊಳ್ ಕೂಡಿದವು ಮಲಯಸುಂದರನ ಬಲದ ದೆಸೆಯೊಳು ಮಲಯಾವತಿಗೆ ಪೋಪ ದಾಯವು ಎಡದ ದೆಸೆಯೊಳು ಪದ್ಮಾವತಿಗೆ ಪೋಪದಾಯಮನಿತ್ತಂತು ಪ್ರಭಂಕರಿಯೆಂಬ ಸರೋವರದೊಳ್ ಸ್ವೇಚ್ಛೆಯಿಂ ಕ್ರೀಡಿಸಿ ಪೊಱಮಡುವಾಗಳ್ ಮಲಯಾವತಿಯ ಮಸ್ತಕದೊಳ್ ವಿಕಸಿತ ಸಹಸ್ರಪತ್ರ ಕುಸುಮಮಂ ನೀಡುವ ದಾಯಮಂ ಕೊಟ್ಟು ಸಲಿಸುತ್ತಮುಱಿದ ಪಿಡಿಗಳೆಲ್ಲಮಂ ತೊಱೆದಾ ಎರಡಱೊಳಂ ಆಸಕ್ತನಾಗಿ ಕಾಮಭೋಗಂಗಳನನುಭವಿಸುತ್ತಮಿಂತು ಸುಖದೊಳಿರ್ಪ್ಪ ಕಾಲದೊಳ್

ಮತ್ತೊಂದು ದಿವಸಂ ಪ್ರಭಂಕರಿಯೆಂಬ ಕೊಳದೊಳ್ ಸ್ವೇಚ್ಛೆಯಿಂ ನೀಡುಂ ಕ್ರೀಡಿಸುತ್ತುಂ ಮುಳುಗುತ್ತುಂ ಮೂಡುತ್ತುಂ ತಡಂಬಂದು ಮನಃಪೂರ್ವಕಮಲ್ಲದೆ ಪೊಱಮಡುವಾಗಳ್ ಪದ್ಮಾವತಿ ಬಲದೆಸೆಯೊಳಾಗಿ ಮಲಯಾವತಿ ಎಡದೆಸೆಯೊಳಾಗಿ ಪೊಱಮಟ್ಟು ಬರೆ ಮದಾಂಧ ಗಂಧಸಿಂಧುರಂ ಮದದಿಂದಂ ಮೆಯ್ಯಱಿಯದೆ ಬಲದದೆಸೆಯೊಳಿರ್ದ್ದ ಪದ್ಮಾವತಿಯಂ ಮಲಯಾವತಿಗೆತ್ತು ಪದ್ಮಾವತಿ ಮಸ್ತಕದೊಳ್ ವಿಕಸಿತ ಸಹಸ್ರಪತ್ರ ಕುಸುಮಮನಿಟ್ಟೊಡೆ ಮಲಯಾವತಿ ನೋಡಿ ತನ್ನಂ ಪರಿಭವಿಸಿದನೆಂದು ಪದ್ಮಾವತಿಯೊಳಪ್ಪ ಪುರುಡುಂ ಕಾರಣಮಾಗಿ ಮುಳಿಸಿನಿಂದಂ ಚಂದನ ಮಲಯ ಪರ್ವತದ ತುತ್ತತುದಿಯಂ ಬೇಗಂ ಪರಿತಂದಲ್ಲಿಂದಂ ತನ್ನನಿಕ್ಕಿ ಮಲಯವತಿ ಶತಖಂಡಮಾಗಿ ಬಿದ್ದು ಸತ್ತತ್ತದಱ ಸತ್ತುದಂ ಮಲಯಸುಂದರಂ ಕಂಡು ಮಲಯಾವತಿಯ ವಿಯೋಗದೊಳಾದಮಾನುಂ ದುಖಂ ಗೆಯ್ದು ಪದ್ಮಾವತಿಯನೊಡಗೊಂಡು ಪೋಯ್ತು ಮತ್ತಾ ಮಲಯಾವತಿಯೆಂಬ ಪಿಡಿ ಸತ್ತು ಸುಕೇಶಿನಿಯೊಂಬೊಳಾದಳಾ ಪದ್ಮಾವತಿಯೆಂಬ ಪಿಡಿಯುಮಾಯುಷ್ಯಾಂತದೊಳ್ ಸತ್ತು ಸುಕೇಶಿನಿಯ ತಾಯ್ ಸುರೂಪೆಗೆ ಸೋದರ ತಮ್ಮಂ ವರಾಂಗನಾದೊಂ ಮತ್ತಾ ಮಲಯಸುಂದನಿಂ ಕೊಲ್ಲಲ್ಪಟ್ಟ ಸುಂದರಮೆಂಬಾನೆ ಸುವೇಗನೆಂಬ ವಿದ್ಯಾಧರನಿಂದಂ ಪೂಜಿಸೆಪಟ್ಟ ಚಾರಣ ರಿಷಿಯರ ಪಾದಯುಗಂಗಳಂ ನೋಡಿಯುಪಶಮಕ್ಕೆ ಸಂದು ತಾಂ ತಾಮರೆಯ ಪೂಗಳಂ ತಂದು ಪ್ರತಿದಿವಸಕ್ಕಮರ್ಚ್ಚಿಸಿ ಪೂಜಿಸಿ ಪೊಡಮಟ್ಟು ಪೋಕುಮಾ ಚಾರಣರಿಷಿಯರಡಿವೊಣರನರ್ಚ್ಚಿಸಿದ ಪುಣ್ಯದಿಂದಂ ಸತ್ತಿಲ್ಲಿ ಚಂಪಾನಗರಕ್ಕಧಿಪತಿಯೆ ಗಂಧಭಾಜನನೆಂಬರಸನಾದ್ಯೆ ಸುಕೇಶಿನಿಯುಂ ಜಾತಿಸ್ಮರೆಯಾಗಿ ತನ್ನ ಮುನ್ನಿನ ಭವದ ಭರ್ತಾರನಪ್ಪ ಮಲಯಸುಂದರನಂ ನೆನೆದು ನಿನ್ನಿಂದಂ ಕೊಲ್ಲಲ್ಪಟ್ಟುದಱ ಕೊಂಬುಗಳನಾದಮಾನುಂ ಬಿಗಿದಪ್ಪಿಕೊಂಡು ಸತ್ತುದಕ್ಕಿದು ಕಾರಣಂ ಮತ್ತೆ ನೀಂ ಮುನ್ನೆ ಸುಂದರನೆಂಬಾನೆಯಾಗಿ ಚಾರಣ ರಿಷಿಯರ ಪಾದಯ್ಯುಗಳಂಗಳನರ್ಚ್ಚಿಸುವಂದು ನಿನ್ನಂ ಕಂಡಾಯೆರಡುಂ ಪಿಡಿಗಳುಂ ನಿನ್ನೊಡವೋಗಿ ಅರ್ಚಿಸಿ ಪುಣ್ಯಮಂ ನೆರಪಿದ ಫಲದಿಂದಂ ಸುಕೇಶಿನಿಯುಂ ವರಾಂಗನುಮಾದರೆಂದು ಯಶೋಧರ ಕೇವಳಿಗಳ್ ಸವಿಸ್ತರಂ ಪೇೞ್ದೊಡೆ ಗಂಧಭಾಜನನೆಂಬರಸಂ ಕೇಳ್ದು ಮತ್ತಂ ಭಟಾರರನಿಂತೆಂದಂ ಭಟಾರಾ ಸುಕೇಶಿನಿ ಸತ್ತೀಗಳೆಲ್ಲಿ ಪುಟ್ಟಿದಳೆಂದು ಬೆಸಗೊಂಡೊಡೆ ಭಟಾರರಿಂತೆಂದು ಪೇೞ್ದರ್

ಸುರಟಮೆಂಬುದು ನಾಡಲ್ಲಿ ಗಿರಿನಗರಮೆಂಬುದು ಪೊೞಲದನಾಳ್ವೊಂ ನಿನ್ನಾಳ್ ಮಹಾಸಾಮಂತನತಿರಥನೆಂಬೊನಾತನರಸಿ ಗೌರಿಯೆಂಬೊಳಾ ಇರ್ವ್ವರ್ಗ್ಗಂ ಸುಕೇಶಿನಿ ಸತ್ತು ಮನೋಹರಿ ಎಂಬ ಮಗಳಾಗಿ ಪುಟ್ಟಿದಳ್ ಮತ್ತಾ ಅರಸನ ಮಂತ್ರಿ ವಿಜಯನೆಂಬೊನಾತನ ಭಾರ್ಯೆ ವೀರಶ್ರೀಯೆಂಬೊಳಾ ಇರ್ವ್ವರ್ಗ್ಗಂ ಮಲಯಸುಂದರಂ ಸತ್ತು ಕುಬೇರಕಾಂತನೆಂಬೊಂ ಮಗನಾಗಿ ಪುಟ್ಟಿದೊಂ ವಿಭವೈಶ್ವರ್ಯಂಗಳಿಂದಂ ಕುಬೇರನೊಳೋರನ್ನನಪ್ಪೊಂ ಮತ್ತಾ ಪೊೞಲೊಳ್ ರಾಜಶ್ರೇಷ್ಠಿ ಧನದತ್ತನೆಂಬೊನಾತನ ಪರದಿ ಧನಶ್ರೀಯೆಂಬೊಳಾ ಇರ್ವ್ವರ್ಗ್ಗಂ ದ್ರವ್ಯತಪದೊಳ್ ಕೂಡಿ ತಪಂಗೆಯ್ದು ವರಾಂಗಂ ಸತ್ತು ಶ್ರೀಧರನೆಂಬೊಂ ಮಗನಾಗಿ ಪುಟ್ಟಿದೊನಾತನ ಭಾರ್ಯೆ ಕುಬೇರಶ್ರೀಯೆಂಬೊಳ್ ಆ ಶ್ರೀಧರಂ ಕುಬೇರ ಕಾಂತಂಗಿಷ್ಟಮಿತ್ರನಾಗಿ ಕಾಲಂಸಲೆ ಮತ್ತೊಂದು ದಿವಸಂ ಶ್ರೀಧರಂ ಕುಬೇರಕಾಂತನೊಡನೆ ಮಱಲುಂದಿಯಾತನ ರನ್ನಕಂಬಳಮಂ ಪೊದೆದು ತನ್ನ ಮನೆಗೆ ಬರ್ಪೊ್ವನಂ ಕಂಡು ಸವತಿಯೊಳಪ್ಪ ಸಂಕೆಯಿಂದಂ ಪ್ರಾಸಾದದ ಮೇಗಣಿಂದಂ ನೆಲಕ್ಕಿಕ್ಕಿ ಬಿಟ್ಟು ಸತ್ತಳಂ ಶ್ರೀಧರಂ ಕಂಡಾದಮಾನುಂ ದುಃಖಂ ಗೆಯ್ದು ಶೋಕಾಭಿಭೂತನಾಗಿರ್ಪ್ಪೊನಂ ಕುಬೇರಕಾಂತಂ ಬಂದು ಕಂಡು ಶ್ರೀಧರಾ ಪರಮಮಿತ್ರಾ ಇಂತೇಕೆ ಬರ್ದಿ ಬಂಬಣಂ ಬಾಡಿ ಪಾಡೞಿದುಬ್ಬೆಗಂ ಬಟ್ಟಿರ್ದಾ ಎಂದು ಬೆಸಗೊಂಡೊಡೆ ತನ್ನ ಕೆಳೆಯಂಗಿಂತೆಂದು ಶ್ರೀಧರಂ ಪೇೞ್ಗುಂ ನಿನ್ನ ರತ್ನಕಂಬಳಮಂ ಪೊದೆದು ಮನೆಗೆವಂದೊಡೆ ಸವತಿಯೊಳಪ್ಪಾ ಶಂಕೆಯಿಂದಂ ಎನ್ನ ಭಾರ್ಯೆ ಕುಬೇರಶ್ರೀ ಮಾಡದ ಮೇಗಣಿಂದಂ ತನ್ನಂ ನೆಲಕ್ಕಿಕ್ಕಿಬಿಟ್ಟು ಸತ್ತಳಿನ್ನುಮಾಯಿರ್ದ್ದಳೆಂದು ತೋಱಿದೊಡೆ ಕುಬೇರಕಾಂತಂ ನೋಡಿ ಜಾತಿಸ್ಮರನಾಗಿ ಕೆಳೆಯಂಗಿಂತೆಂದು ಪೇೞ್ಗುಂ ಇಂತೆನ್ನ ಪೆಂಡತಿ ಮಲಯಾತಿಯಪ್ಪ ಪಿಡಿ ಪುರುಡಿನಿಂದಂ ಚಂದನಮಲಯಮೆಂಬ ಪರ್ವತದ ಶಿಖರದಿಂದಂ ತನ್ನನಿಕ್ಕಿ ಸತ್ತಂತೆ ನಿನ್ನ ಪೆಂಡತಿಯುಂ ಸತ್ತಳೆಂದು ಪೇಳ್ದುಬ್ಬೆಗಂ ಬಡಲ್ವೇಡೆಂದು ಸಂತಯಿಸಿ ತನ್ನ ಮನೆಗೆ ಪೋಗಿ ಜಾತಿಸ್ಮರನಪ್ಪುದಱಿಂ ಕುಬೇರಕಾಂತಂ ತನ್ನ ಮುನ್ನಿನ ಮಲಯಸುಂದರನಪ್ಪ ಭವದ ನೆಗೞ್ತೆಗಳೆಲ್ಲಮಂ ಮಲಯಾವತಿ ಪದ್ಮಾವತಿ ಮೊದಲಾಗಿ ಕರಿಣೀಬೃಂದಸಹಿತಂ ವನಹಸ್ತಿ ಕ್ರೀಡೆಗಳೆಲ್ಲಮನೊಂದು ಪಟದೊಳ್ ಬರೆದು ನೋಡುತ್ತುಂ ಪಾಡುತ್ತುಂ ಹಾ ಎನ್ನ ಮಲಯಾವತಿ ಹಾ ಎನ್ನ ನಲ್ಲಳೆ ನೀನೀಗಳೆಲ್ಲಿರ್ದ್ದೆ ಎಂದೞಲುತ್ತುಂ ಮರುಳುಗೊಂಡು ಪ್ರಳಾಪಂಗೆಯ್ಯುತ್ತುಂ ಉಜ್ಜಂತ ಪರ್ವತಮಂ ಬಲಗೊಂಡು ಬರ್ಪೊ್ವನಂ ಚಿತ್ರಾಂಗದನೆಂಬ ವಿದ್ಯಾಧರಂ ಕಂಡು ಕರುಣಿಸಿ ಧರ್ಮ ವಾತ್ಸಲ್ಯದಿಂದಂ ತನ್ನ ಕಾಮಮುದ್ರಿಕೆಯಂ ಈಪ್ಸಿತ ಕಾರ್ಯಸಿದ್ಧಿಯಂ ಮಾಡುವ ವಿದ್ಯೆಯಂ ಕುಬೇರಕಾಂತಂಗೆ ಕೊಟ್ಟೊಡೆ ಕುಬೇರಕಾಂತನುಂ ವಿದ್ಯಾದೇವತೆಯಂ ಬೆಸಗೊಂಡಂ ಎನ್ನ ಮುನ್ನಿನ ಭವದ ಪ್ರಾಣವಲ್ಲಭೆಯೆಲ್ಲಿರ್ದ್ದಳೆನೆ ವಿದ್ಯಾದೇವತೆಯೆಂದಳ್ ನಿನ್ನ ಪ್ರಾಣವಲ್ಲಭೆಯತಿರಥನೆಂಬರಸಂಗೆ ಮಗಳ್ ಮನೋಹರಿಯಾಗಿರ್ದ್ದಳೆಂದು ವಿದ್ಯಾದೇವತೆ ಪೇೞೆ ಕೇಳ್ದುಱಿದು ಪಿಶಾಚವೇಷಮಂ ಕೈಕೊಂಡವರ ಮನೆಯಂಗಣದೊಳಿರ್ದ್ದು ಪಟಮಂ ನಿಮಿರ್ಚಿಯೆತ್ತಿ ತೋಱಿ ಪಾಡುತ್ತುಮೆಲೆ ಮಲಯಾವತಿ ಹಾ ಎನ್ನ ಕಾದಲಳೆ

ನೀನೀಗಳೆಲ್ಲಿರ್ದ್ದೆಯೆಂದು ಪಾಡುವನಂ ಕೇಳ್ದು ಪಟಮಂ ನೋಡಿ ಮನೋಹರಿ ಜಾತಿಸ್ಮರೆಯಾಗಿ ತನ್ನ ಮುನ್ನಿನ ಭವಮನಱಿದು ಕಾಮರತಿಯೆಂಬ ತನ್ನ ದಾದಿಗೆಯೊಸಗೆಯಿಂದಮಿಂತೆಂದಳ್ ಈ ಅಂಗಣದೊಳ್ ಪಟಮಂ ತೋಱುವಾತನೆನ್ನ ಮುನ್ನಿನ ಭವದ ಭರ್ತಾರನೆಂದು ಪೇೞ್ದು ಮತ್ತಮಿಂತೆಂದಳ್ ಅಬ್ಬಾ ನೀನೆನ್ನ ಪ್ರಾಣಮಂ ಕಾವುದು ಕಾರಣಮಾಗಿ ಆತನಲ್ಲಿಗೆ ಪೋಗಿ ಏಕಾಂತದೊಳಿಂತೆಂದು ಪೇೞ್ ಪದ್ಮಾವತಿಯ ತಲೆಯೊಳಟ್ಟಿಯಿಂದಂ ನೀಂ ತಾಮರೆಯ ಪೂವಂ ಮುನ್ನವಿಟ್ಟು ಮಲಯಾವತೀ ಪ್ರಾಣವಲ್ಲಭೆ ಎಲ್ಲಿರ್ದ್ದೆಯೆಂದೀಗಳೇಕೆ ಮಲಯಸುಂದರಾ ನೀನಾರಯ್ದಪ್ಪೆಯೆಂದು ಪೇೞ್ಮತ್ತಮಿಂತೆಂದು ಪೇೞ್ ನಿನ್ನ ಪ್ರಾಣವಲ್ಲಭೆಯುಂ ನಿನ್ನನೆಯಱಸಿ ಬಯಸುತ್ತಿರ್ಪ್ಪಳಾಕೆ ನಿನ್ನೊಳ್ಕೂಡುವನ್ನೆಗಮೀ ಪಟಮಂ ತೋಱಿಯಾಕೆಯ ಪ್ರಾಣಮಂ ಕಾವೆನೆಂದು ಪಟಮಂ ಬೇಡಿಕೊಂಡು ಬಾ ಎಂದು ಕಲ್ಪಿಸಿಯಟ್ಟಿದೊಡಾಕೆಯುಂ ಕಲ್ಪಿಸಿದ ಪಾಂಗಿನೊಳಾತನಲ್ಲಿಗೆ ಪೋಗಿ ಏಕಾಂತದೊಳೆಲ್ಲಮಂ ನುಡಿದು ಕುಬೇರಕಾಂತನ ಕೈಯ ಪಟಮಂ ಬೇಡಿಕೊಂಡು ಪೋಗಿ ಮನೋಹರಿಗೆ ಕೊಟ್ಟಳ್ ಮನೋಹರಿಯುಮಾ ಪಟಮಂ ಕೊಂಡು ದೆವಸಕ್ಕಮಟ್ಕಱಿಂ ನೋಡುತ್ತಿರ್ಕ್ಕುಂ ಮತ್ತಿತ್ತ ಕುಬೇರಕಾಂತಂ ತನ್ನ ಮರುಳ್ವೇಷಮೆಲ್ಲಮಂ ತೊಱೆದು ಸ್ವಾಭಾವಿಕನಾಗಿ ತಮ್ಮ ಮನೆಗೆ ಬಂದೊಡೆ ಪ್ರಸನ್ನರೂಪನಾಗಿರ್ದ್ದೋನಂ ವಿಜಯನಿಂತೆಂದು ಬೆಸಗೊಂಡಂ ಮಗನೆ ನೀನಿನಿತು ದೆವಸಮುಮೇಕೆ ಮರುಳಾಗಿರ್ದ್ದೆ ಮತ್ತೀಗಳೆಂತು ನಿನಗೆ ಮರುಳ್ತನಂ ಪಿಂಗಿತ್ತೆಂದು ತಂದೆ ಬೆಸಗೊಂಡೊಡೆ ಕುಬೇರಕಾಂತನಿಂತೆಂದು ಪೇೞ್ದನ್ ಈ ಅರಸರ ಮಗಳಪ್ಪ ಮನೋಹರಿ ಎನ್ನ ಮುನ್ನಿನ ಭವದ ಪೆಂಡತಿಯಾಕೆಯನಱಸುವುದು ಕಾರಣಮಾಗಿನಿತು ದಿವಸಂ ಮರುಳಾಗಿರ್ದ್ದೆಂ ಮತ್ತೀಗಳಾರಯ್ದಱಸಿಯುಂ ಕಂಡೆನಪ್ಪುದಱಿಂದಂ ಮರುಳ್ತನಂ ಪಿಂಗಿತ್ತೆಂದು ಪೇೞ್ದೊಡೆ ತಂದೆಯೆಂದಂ ಮಗನೆ ನಿನ್ನ ಮುನ್ನಿನ ಭವದ ಪೆಂಡತಿಯೆಂದಱಿದೆಯಪ್ಪೊಡಮೀಗಳಾಕೆಯರಸರ ಮಗಳಾಗಿರ್ದ್ದಳಪ್ಪುದಱಿಂ ನಿನಗತಿ ದುರ್ಲಭೆ ಭಾಗ್ಯಮಿಲ್ಲದುದಂ ಪೇೞಲಾಗ ನೀನಾಕೆಯೊಳಪ್ಪ ಬೇಟಮನುೞಿವುದು ಮಗನೆ ಎಂದೊಡೆ ಕುಬೇರಕಾಂತಂ ಕಾಮವಿದ್ಯೆಯಿಂದಂ ಹಸ್ತ್ಯಶ್ವ ರಥ ಪದಾತಿ ಬಲ ಸಮೂಹಮನಿತಾನುಮಂ ವಿಭವೈಶ್ವರ್ಯ ಸಮನ್ವಿತಂ ತಂದೆಗೆ ತೋಱಿದೊಡೆ ತಂದೆಯುಂ ಮಗನ ಸಾಮರ್ಥ್ಯಮಂ ಕಂಡಾದಮಾನುಂ ಸಂತೋಸಂಬಟ್ಟಿರ್ದ್ದೋಂ

ಮತ್ತೊಂದು ದಿವಸಂ ಅತಿರಥ ಮಹಾರಾಜಂ ಮಂತ್ರಿಯರ್ಕ್ಕಳೊಡನೆ ಮಂತಣಮಿರ್ದ್ದಲ್ಲಿ ಮಂತ್ರಿಯರ್ಕ್ಕಳನಿಂತೆಂದು ಬೆಸಗೊಂಡಂ ಮನೋಹರಿಗೆ ಜವ್ವನಂ ನೆಱೆದುದು ಕೂಸು ಕುಡಲಾದುದಾರ್ಗ್ಗೆ ಕುಡುವಮೆಂದು ಮಂತ್ರಿಯರ್ಕ್ಕಳಂ ಬೆಸಗೊಂಡೊಡುೞಿದ ಮಂತ್ರಿಯರ್ಕ್ಕಳೆಲ್ಲಂ ತಂತಮ್ಮ ಬಗೆದರಸುಗಳ ಪೆಸರ್ಗ್ಗಳಂ ಪೇೞ್ದುವರ್ಗ್ಗೆ ಕುಡುವಮೆಂದೊಡೆ ಕುಬೇರಕಾಂತನ ತಂದೆಯಪ್ಪ ವಿಜಯನೆಂಬ ಮಂತ್ರಿಯುಕ್ಕೈವದಿಂದಮವರ ಪೇೞ್ದ ಮದವರ್ಕ್ಕಳಂ ನಿರಾಕರಿಸಿ ಮನೋಹರಿಯ ರೂಪಿಂಗಂ ಜವ್ವನಕ್ಕಂ ತೇಜಕ್ಕಂ ಕಳಾಗುಣಂಗಳನಱಿವುದರ್ಕ್ಕಮವರಯೋಗ್ಯರ್ ಮದುವಕ್ಕಳಲ್ಲರ್ ಕೂಸಿಂಗೆ ಸ್ವಯಂವರ

ಶಾಲೆಯಂ ಪಣ್ಣುವಂ ಸ್ವಯಂಬರದೊಳ್ ತನ್ನ ಭಾಗ್ಯದೊಳ್ ತನ್ನ ಮೆಚ್ಚಿದ ವರರಂ ಕೈಕೊಳ್ಗೆಂದು ನುಡಿದೊಡರಸನುಮಾತನ ಮಾತನೊಡಂಬಟ್ಟು ಸ್ವಯಂಬರ ಸಾಲೆಯಂ ಮಾಡಿಸಿ ಅರಸುಗಳ್ಗೆಲ್ಲಂ ಬಟ್ಟೆಯನಟ್ಟಿ ಬರಿಸೆ ಸ್ವಯಂಬರ ಸಾಲೆಯೊಳ್ ನೆರೆದಿರ್ದ್ದರಂಗವೆಂಗಿ ಕಳಿಂಗ ಕಾಂಭೋಜ ಕಾಶಿಕೌಶಲ ಪಲ್ಲವ ಪಾಂಚಾಳ ಮಾಳವ ಮಗಧ ವತ್ಸ ಮಹಾರಾಷ್ಟ್ರ ಕುರುಜಾಂಗಳ ದ್ರವಿಡ ಲಾಟ ಕರ್ನಾಟಕ ಗೌಳ ಸುಹುಮ ಸುರಕಾಂತ ಸುರಸವೀರ್ಯ ಪ್ರಭೃತಿ ನಾನಾ ವಿಷಯಾಧಿಪತಿಗಳಪ್ಪರಸುಗಳೆಲ್ಲಂ ಸ್ವಯಂಬರ ಸಾಲೆಯೊಳ್ ನೆರೆದಿರ್ದ್ದಲ್ಲಿ ಯಾರುಮಂ ಮೆಚ್ಚದೆ ದಾಂಟಿ ಪೋಗಿ ಕುಬೇರಕಾಂತಂಗೆ ಮಾಲೆ ಸೂಡಿದಾಗಳರಸುಗಳೆಲ್ಲಂ ನೆರೆದಾಮೇಕೈಕ ಪ್ರಧಾನರೆಮಿರ್ದ್ದಂತಿರೆ ಬಡವಂಗೇನುಮಲ್ಲದೊಂಗೆ ಮಾಲೆಯಂ ಸೂಡಿದಳೆಂದು ಸಭಾಕ್ಷೋಭವಾಗಿ ಕುಬೇರಕಾಂತನೊಳನಿಬರುಂ ನೆರೆದು ಯುದ್ಧಂಗೆಯ್ವೊಡೆ ಸಂಗ್ರಾಮರಂಗದೊಳ್ ಸುವರ್ಮ್ಮ ವರ್ಮ್ಮರ್ ಮೊದಲಾಗೊಡೆಯರಸರ್ಕ್ಕಳೆಲ್ಲರುಮಂ ಗೆಲ್ದು ಮನೋಹರಿಯಂ ಪಾಣಿಗ್ರಹಣ ಪುರಸ್ಸರ ಮದುವೆ ನಿಂದು ಗಿರಿನಗರಕ್ಕಧಿಪತಿಯಾದನಿಂತು ಕುಬೇರಕಾಂತಂ ಮನೋಹರಿಯೊಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಿರೆ

ಸುವರ್ಮ್ಮವರ್ಮ್ಮನೆಂಬರಸಂ ರಾಜ್ಯ ಪರಿಭ್ರಷ್ಟನಾಗಿ ತಾಪಸ ತಪಮಂ ಕೈಕೊಂಡು ನೆಗೞ್ದು ಸತ್ತು ಪ್ರತಿಸೂರ್ಯನೆಂಬ ವ್ಯಂತರದೇವನಾಗಿ ಪುಟ್ಟಿದೊಂ ಮತ್ತೆ ಶ್ರೀಧರನುಂ ಕುಬೇರಕಾಂತನುಂ ಮನೋಹರಿಯುಮನ್ಯೋನ್ಯಾತಿ ಸ್ನೇಹದೊಳ್ಕೂಡಿ ರಾಜ್ಯಂಗೆಯ್ದು ತಮ್ಮ ಗೆಯ್ದ ದಾನ ಧರ್ಮದ ಫಲದಿಂದಮನ್ಯ ಜನ್ಮಾಂತರದೊಳೆಮಗಿಂತಪ್ಪ ವಿದ್ಯೆಯಕ್ಕೆಂದು ಮೂವರುಂ ನಿದಾನಂಗೆಯ್ದ ಫಲದಿಂದ ಶ್ರೀಧರಂ ಸತ್ತು ವಿಜಯಾರ್ಧ ಪರ್ವತದುತ್ತರ ಶ್ರೇಡಿಯೊಳ್ ಅಲಕಾಪುರಿಯೆಂಬುದು ಪೊೞಲದನಾಳ್ವೊಂ ಗಗನವಲ್ಲಭನೆಂಬೊಂ ವಿದ್ಯಾಧರನಾತನ ಮಹಾದೇವಿಯನಂಗಮಾಲೆಯೆಂಬೊಳಾ ಇರ್ವ್ವರ್ಗ್ಗಂ ಶ್ರೀಧರಂ ಚಂಡವೇಗನೆಂಬೊಂ ಮಗನಾಗಿ ಪುಟ್ಟಿದೊಂ ಆ ಚಂಡವೇಗನ ಮಹಾದೇವಿ ವಿದ್ಯುಲ್ಲತೆ ಯೆಂಬೊಳಾ ಇರ್ವ್ವರ್ಗ್ಗಂ ಕುಬೇರಕಾಂತಂ ಸತ್ತು ವಿದ್ಯುನ್ಮಾಳಿ ಎಂಬ ಮಗನಾಗಿ ಪುಟ್ಟಿದೊಂ ಮತ್ತಂ ದಕ್ಷಿಣ ಶ್ರೇಢಿಯೊಳು ವಿದ್ಯುಲ್ಲತೆಯ ಸೋದರ ತಮ್ಮಂ ಮೇಘ ಕೂಟಾಧಿಪತಿ ಮೇಘಮಾಳಿಯೆಂಬೊಂ ವಿದ್ಯಾಧರನಾತನ ಮಹಾದೇವಿ ರತಿಬಿಂದುವೆಂಬೊಳಾ ಇರ್ವ್ವರ್ಗ್ಗಂ ಮನೋಹರಿ ಸತ್ತು ವಿರಳವೇಗೆಯೆಂಬ ಮಗಳಾಗಿ ಪುಟ್ಟಿದಳ್ ಮತ್ತೊಂದು ದಿವಸಂ ಚಂಡವೇಗನುಂ ವಿದ್ಯುನ್ಮಾಳಿಯುಮಂತು ತಮ್ಮಿರ್ವ್ವರುಂ ಉಜ್ಜಂತ ಪರ್ವತದ ಶಿಖರದೊಳರಿಷ್ಟ ನೇಮಿಭಟಾರರ ಪರಿನಿರ್ವ್ವಾಣ ಭೂಮಿಯಂ ಕಂಡು ಪೋದೊಡಾ ಪರ್ವತದ ಶಿಖರಮಂ ಕಂಡು ವಿದ್ಯುನ್ಮಾಳಿ ಮೂರ್ಚ್ಛೆ ಹೋಗಿ ಜಾತಿಸ್ಮರನಾಗಿ ಮನೋಹರಿಯಂ ನೆನೆದು ಮಾಸೋಪವಾಸಂಗೆಯ್ದು ಪ್ರಜ್ಞಪ್ತಿಯೆಂಬ ಮಹಾವಿದ್ಯೆಯಂ ಸಾಧಿಸಿದೊಡಾ ವಿದ್ಯೆ ಬೆಸನೇನೆಂದು ಮುಂದೆ ನಿಲ್ಪ ಎನ್ನ ಮುನ್ನಿನ ಭವದ ಪ್ರಾಣವಲ್ಲಭೆಯಪ್ಪ ಮನೋಹರಿ ಈಗಳೀ ಲೋಕದೊಳೆಲ್ಲಿರ್ದ್ದಳೆಂಬುದನಱಿಸಿ ಬೇಗಮೆನಗೆ ಪೇೞೆಂದೊಡಾ ವಿದ್ಯೆಯಿಂತೆಂದು ಪೇೞ್ದಿತ್ತು ವಿಜಯಾರ್ಧ ಪರ್ವತದ ದಕ್ಷಿಣ ಶ್ರೇಢಿಯೊಳು ಮೇಘಪುರಾಧಿಪತಿ

ಮೇಘಮಾಳಿಯೆಂಬೊಂ ವಿದ್ಯಾಧರಂ ನಿನ್ನ ಸೋದರ ಮಾವನಾತಂಗೆ ಮನೋಹರಿ ಸತ್ತು ವಿರಳವೇಗೆಯೆಂಬ್ಬೊಳಾಗಿದ್ದ್ರ್ಳೆಂದೊಡಂತಪ್ಪೊಡೆ ನೀಂ ಮಾವನ ಮನೆಗೆ ಪೋಗಿ ವಿರಳವೇಗೆಗಿಂತೆಂದು ಪೇಟ್ ಎಲೆ ಮನೋಹರಿ ನೀಂ ಮುನ್ನಿನ ಭವದೊಳ್ ಕುಬೇರಕಾಂತನೊಡನೆ ಕ್ರೀಡಿಸಿದ ಕ್ರೀಡೆಗಳಂ ನೆನೆವೋ ಎಂದು ಪೇಟೆಂದು ವಿದ್ಯೆಯಂ ಕಲ್ಪಿಸಿಯಟ್ಟಿದೊಡಾ ವಿದ್ಯೆ ಪೋಗಿ ಕಲ್ಪಿಸಿದ ಪಾಂಗಿನೊಳೆ ಪೋಗಿ ನುಡಿದೊಡೆ ವಿರಳವೇಗೆ ಮೂರ್ಛೆವೋಗಿರ್ದ್ದು ನೀಡಟೆಂದೆಟ್ಟುತ್ತು ಜಾತಿಸ್ಮರೆಯಾಗಿ ವಿರಹ ಸಂತಾಪದಿಂ ತನ್ನ ಮುನ್ನಿನ ಭರ್ತಾರನಂ ನೆನೆಯುತ್ತಿರೆ ವಿದ್ಯುನ್ಮಾಳಿಯುಂ ತನ್ನ ಮನೆಗೆ ಪೋಗಿ ತಂದೆಗೆ ಚಂಡವೇಗಂಗೆ ತನ್ನ ವೃತ್ತಾಂತಮೆಲ್ಲಮಂ ಪೇಟ್ಟೊಡಾತನುಮಾದಮಾನುಂ ಒಸೆದು ತನ್ನ ಮಯ್ದುನನಪ್ಪ ಮೆಘಮಾಳಿ ವಿದ್ಯಾಧರನಲ್ಲಿಗೆ ಪೆರ್ಗ್ಗಡೆಗಳಂ ಕೂಸಂ ಬೇಡಿಯಟ್ಟಿ ಪೆತ್ತು ವಿರಳವೇಗೆಯಂ ವಿದ್ಯುನ್ಮಾಳಿ ಮದುವೆ ನಿಂದಾಕೆಯೊಳಿಷ್ಟ ವಿಷಯ ಕಾಮ ಭೋಗಂಗಳನನುಭವಿಸುತ್ತುಂ ಕಾಲಂ ಸಲೆ

ಮತ್ತೊಂದು ದಿವಸಂ ವಿದ್ಯಾವಿನಿರ್ಮಿತಮಪ್ಪ ವಿಚಿತ್ರಮಾಗುತಿರ್ದ್ದ ವಿಮಾನಮನೇಟಿ ಕೊಂಡು ಪೋಪಲ್ಲಿ ಹಿಮವಂತ ಪರ್ವತದ ಮೇಗೆ ಪಾಱುವ ವಿಮಾನಮಂ ಮುಂ ಪೇಟ್ದ ಪ್ರತಿಸೂರ್ಯನೆಂಬ ವ್ಯಂತರದೇವಂ ಕಂಡು ತನ್ನ ಸುವಮ್ಮ್ರವಮ್ಮ್ರನಪ್ಪ ಭವದ ಪಗೆಯುಂ ನೆನೆದಿರ್ವ್ವರುಮಂ ಕಾದಿ ಕೊಂದನಂತಿರ್ವ್ವರುಂ ಸತ್ತು ಗಂಗೆಯೆಂಬ ಮಹಾ ನದಿಯ ತೆಂಕಣ ಪಡುವಣ ಕೋಣೋಳ್ ಸುಕೌಶಳಮೆಂಬ ವಿಷಯದೊಳಯೋಧ್ಯಾಪುರಮೆಂಬ ಪೊಟಲೊಟ್ ಸಾಗರಸೇನೆಯೆಂಬೊಂ ರಾಜ ಶ್ರೇಷ್ಠಿಯಾತನ ಭಾರ್ಯೆ ಧರಣೆಯೆಂಬೊಳಾ ಇರ್ವ್ವರ್ಗ್ಗಂ ವಿದ್ಯುನ್ಮಾಳಿಯೆಂಬ ವಿದ್ಯಾಧರಂ ಕಾಲಂಗೆಯ್ದು ಸಿದ್ಧಾರ್ಥನೆಂಬೊಂ ಮಗನಾಗಿ ಪುಟ್ಟಿದೊಂ ಪಿತೃಮಾತೃಗಳೊಸಗೆಯಂ ಮಾಡುತ್ತಂ ಶ್ರೀ ವಿಭವ ರೂಪಕಾಂತಿ ಸೌಭಾಗ್ಯಾದಿ ಗುಣಂಗಳಿಂ ನೆಱೆದೊಂ

ಮತ್ತಿತ್ತ ಮಗಧೆಯೆಂಬುದು ನಾಡೊಳ್ ರಾಜಗೃಹಮೆಂಬ ಪೊಟಲೊಳ್ ಸಮುದ್ರವಿಜಯನೆಂಬೊಂ ರಾಜಶ್ರೇಷ್ಠಿಯಾತಂಗೆ ಸಾಗರಸೆಟ್ಟಿಯ ಸೋದರ ತಂಗೆಯಾತನ ಸೆಟ್ಟಿತಿಯಾಯಿರ್ವ್ವರ್ಗ್ಗಂ ವಿರಳವೇಗೆಯೆಂಬ ವಿದ್ಯಾಧರಿ ಕಾಲಂ ಗೆಯ್ದು ಶ್ರೀಕಾಂತೆಯೆಂಬೊಳ್ ಮಗಳಾಗಿ ಪುಟ್ಟಿದಳತ್ಯಂತ ರೂಪು ಲಾವಣ್ಯ ಕಾಂತಿ ಹಾವಭಾವ ವಿಲಾಸವಿಭ್ರಮಂಗಳಿಂ ಕೂಡಿದೊಳ್ ದೇವಗಣಿಕೆಯನೆ ಪೋಲ್ಪೊಡಾಕೆಯಂ ಸೋದರ ಮಾವನ ಮಗಂಗೆ ರೂಪ ವಿಭವ ಸಂಪನ್ನಂಗೆ ಸಿದ್ಧಾರ್ಥಂಗೆ ಕೊಟ್ಟರಂತು ಸಿದ್ಧಾರ್ಥನುಂ ಶ್ರೀಕಾಂತೆಯುಂ ತಮ್ಮೊಳನ್ಯೋನ್ಯಾತಿ ಸ್ನೇಹದಿಂದಂ ಕೂಡಿ ಇಷ್ಟ ವಿಷಯ ಕಾಮ ಭೋಗಂಗಳಂ ಪಲವುಕಾಲಮನುಭವಿಸುತ್ತಿರೆ ಮತ್ತೊಂದು ದಿವಸಂ ಸಪ್ತತಳ ಪ್ರಾಸಾದದ ಮೇಲಿರ್ವ್ವರುಮಿಷ್ಟಪರಿವಾರಸಹಿತರ್ ಸುಖಸಂಕಥಾ ವಿನೋದದಿನಿರ್ಪ್ಪನ್ನೆಗಂ ವಿಚಿತ್ರ ಮಾಗುತ್ತಿರ್ದ್ದ ವಿಮಾನಮನೇಱಿಯಾಕಾಶಪಥಕ್ಕೊಗೆದು ಮೇಗೆ ಪೋಪ ವಿದ್ಯಾಧರ

ಯುಗಳಮಂ ಕಂಡಿರ್ವ್ವರುಂ ಮೂರ್ಛೆವೋಗಿ ನೀಡಱಿಂದೆಟ್ಟುತ್ತು ಜಾತಿ ಸ್ಮರರಾಗಿ ತಮ್ಮ ಮುನ್ನಿನ ಭವವಂ ನೆನೆದು ಮಾಡಿದ ಪೊಲ್ಲಮೆಯುಮನನಿತ್ಯತೆಯುಮಂ ಬಗೆದು ವೈರಾಗ್ಯ ಪರರಾಗಿ ಇರ್ವ್ವರುಂ ತಪಂ ಬಡುವ ಬುದ್ಧಿಯನೊಡೆಯರಾಗಿ ವಿಶ್ವಜನ ಪರಿಜನ ಮಂತ್ರಿ ಮಿತ್ರವರ್ಗ್ಗರೆಲ್ಲರಂ ಬಳಿಯನಟ್ಟಿ ಬರಿಸಿ ಸಂಸಾರದ ಪೊಲ್ಲಮೆಯುಮಂ ತಂತಮ್ಮ ಬಗೆದ ಕಾರ್ಯಮುಮನವರ ಮುಂದೆ ನುಡಿದಿರ್ವ್ವರ್ಗ್ಗಂ ಎಲ್ಲಂ ನೆರೆದರಿಂತೆಂದರ್ ನಿಮ್ಮ ಪೂರ್ವಭವದಿಂದ ಬಂದ ಕುಲಸಂತತಿಯುಂ ಕಾವೊಡೀಗಳಾರುಮಿಲ್ಲಿನಿತು ಭಾರಮನಾರ್ಗ್ಗೊಪ್ಪಿಸಿ ತಪಂ ಬಟ್ಟಪ್ಪಿರದಱಿಂ ಕೆಲವು ಕಾಲದಿಂ ಮಗನಾದೊಡೆ ಮಗಂಗೆ ಸಮಸ್ತಭಾರಮಂ ನಿರೂಪಿಸಿ ತಪಂಬಡುವುದೆಂದು ನುಡಿದೊಡೆ ಸಿದ್ಧಾರ್ಥನೆಂದನ್ ನೀಮೆಲ್ಲಂ ಪೇಟ್ದುದನಿಂಬುಕೆಯ್ದಪ್ಪೆನೆಂದು ಮಗನಾದಂದೆನ್ನ ತಪಂ ಬಡುವಂದಾರುಂ ವಕ್ರಂ ಬರಸಲ್ಲೆಂದು ನುಡಿದೊಡಂಬಡಿಸಿ ಕೆಲವು ಕಾಲಂ ಪರಿವಾರಂ ಬಾರಿಸೆ ಮಾಣ್ದಿರ್ದ್ದ ಇಷ್ಟ ವಿಷಯ ಕಾಮ ಭೋಗಂಗಳನನುಭವಿಸುತ್ತಿರೆ ಮತ್ತೆ ಸಿದ್ಧಾರ್ಥನ ಪಿರಿಯರಸಿ ಜಯಾವತಿಯೆಂಬೊಳ್ ಮಕ್ಕಳಂ ಬೇಡಿ ದೇವರ್ಗ್ಗಂ ದೇವತೆಗಳ್ಗಂ ಪರಸಿ ಪೂಜೆಯಂ ಮಾಡುತ್ತಿರ್ದ್ದೊಂದು ದಿವಸಂ ವಿಜಯಭದ್ರರೆಂಬ ಭಟಾರರವಧಿಜ್ಞಾನಿಗಳ್ ಚರಿಗೆ ವೊಕ್ಕೊಡೆ ಕಂಡವರಂ ಜಯಾವತಿ ನಿಱಿಸಿಯಾದಮಾನುಂ ಭಕ್ತಿಯಿಂದಂ ಕೈಯಲಿಕ್ಕಿ ನಿರನ್ತರಂ ಮಾಡಿ ಕುಳ್ಳಿರ್ದ್ದ ಬ್ಬಟಿಕ್ಕಿಂತೆಂದು ಬೆಸಗೊಂಡಳ್

ಭಟಾರಾ ಎನಗೆ ಮಕ್ಕಳಕ್ಕುವೊ ಆಗರೋ ಎಂದು ಬೆಸಗೊಂಡೊಡೆ ಭಟಾರರಿಂತೆಂದರ್ ವಿಭವೈಶ್ವರ್ಯರೂಪ ಕಾಂತಿ ಸೌಭಾಗ್ಯಾದಿ ಗುಣಂಗಳಿಂದಂ ಸಿದ್ಧಾರ್ಥನಿಂದಗ್ಗಳಂ ಕುಳತಿಳಕನಪ್ಪ ಮಗನಂ ಪೆಱುವೈ ಪೆತ್ತಾಗಳೆಂತು ಪುಣ್ಣಮೆಯಂದಿನ ಚಂದ್ರನಂ ಕಂಡಾಗಳಾದಿತ್ಯನೆಂತು ಅಸ್ತಮಾನಕ್ಕೆ ಸಲ್ಗುಮಂತೆ ಮಗನಂ ಕಂಡಾಗಳೆ ನಿನ್ನ ಭರ್ತಾರನುಂ ತಪಂಬಡುಗುಂ ಆ ರಿಷಿಯರಂ ಕಂಡಾಗಳೆ ಮಗನುಂ ತಪಂಬಡುಗುಮೆಂದು ಭಟಾರರ್ ಪೇಟ್ದು ಪೋದರಿತ್ತ ಜಯಾವತಿಗೆ ಹರ್ಷವಿಷಾದಂಗಳೆರಡುಂ ಒರ್ಮೊದಲಾಗೆ ಕಾಲಂ ಸಲೆ ಮತ್ತಿತ್ತ ಚಂಡವೇಗನೆಂಬೊಂ ಪಲಕಾಲಮರಸುಗೆಯ್ದು ಆಯುಷ್ಯಾಂತದೊಳ್ ಕಟಿದು ಜಯಾವತಿಯ ಗರ್ಭದೊಳ್ ನೆಲಸಿ ಗರ್ಭಮಾದೊಡೆ ಜಯಾವತಿಯುಂ ನೆಲಮನೆಯಂ ಮಾಡಿಸಿ ಎನಗೆ ಕುತ್ತಂ ಜಳೋದರಮಾದುದರ್ಕ್ಕೆ ಕ್ರಿಯೆಗೆಯಿಸಿದಪ್ಪೆನೆಂದು ಸಿದ್ಧಾರ್ಥಂಗೆ ಪೇಳ್ದು ಕುತ್ತಮಂ ಭಾವಿಸಿ ನೆಲಮನೆ ಯೊಳಗಿಟ್ದು ನವಮಾಸಂ ನೆಱೆದಂದು ಪ್ರಸೂತೆಯಾಗಿ ಮಗನಂ ಪೆತ್ತು ತಾನುಂ ದಾದಿಯುಂ ಮತ್ತಂ . ಬೆಸಕೆಯ್ವ ತೊತ್ತುಮಂತು ಮೂವರುಮಱಿವರುಳಿದರಾರುಮಱಿಯದಂತು ದಿವಸಂಗಳ್ ಸಲೆ ಮತ್ತೊಂದು ದಿವಸಂ ಬೆಸಕೆಯ್ವ ತೊಟ್ತು ನೀರಂ ತರಲ್ ವೋದಲ್ಲಿ ನೀರಪೊಟೆಯೊಳಾಕೆಯ ಕೆಳದಿ ನಾಗಬ್ಬೆಯೆಂಬೊಳ್ ಕಂಡಿಂತೆಂದು ಬೆಸಗೊಂಡೊಡೆ ಎಲಗೆ ಕುಂದಬ್ಬೆ ಪಲ ದಿವಸದಿಂದಂ ನಿನ್ನಂ ಕಂಡೆ ನೀನಿನಿತು ದಿವಸದಿಂ ಮುಂ ಕಾಣುದುದಕ್ಕೆ ಕಾರಣಮಂ ಪೇಟೆಂದು ಬೆಸಗೊಂಡಳ್ಗೆ

ಎಲಗೆ ಕಾರಣಮಂ ನಿನಗೆ ಪೇಲ್ದಪ್ಪೆಂ ನೀನಾರ್ಗ್ಗೆ ಪೇಟಿಯಪ್ಪೊಡೆಂದು ಸೂರುಳಿಸಿ ಇಂತೆಂದು ಪೇಲ್ದಳ್

ನೋಡಾ ಎಮ್ಮರಸಿ ಜಯಾವತಿ ಬೆಸಲೆಯಾದಳ್ ಕಿರುಂಡೆನಗಂ ಪೆತ್ತಳಾರುಮನಱಿಯಲೀಯದೀ ನೆಲಮನೆಯೊಳಡಂಗಿಪ್ಪೊಳೆಂದು ಮಾತನಲ್ಲಿಯೊರ್ವಂ ಸಂಚವಾರಿಸುತ್ತಿರ್ದ್ದ ಬ್ರಾಹ್ಮಣಂ ದಾರಿದ್ರ್ಯಾಭಿಭೂತಂ ಸೋಮಶರ್ಮ್ಮನೆಂಬಾತಂ ಕೇಳ್ದಾದಮಾನುಂ ಸಂತೋಷಂ ಬಟ್ಟು ಪಿರಿದೊಂದು ಮಾದುಫಲಮಂ ಕೊಂಡು ಪೋಗಿ ಸಿದ್ಧಾರ್ಥನಂ ಕಂಡಿಂತೆಂದು ಬಿನ್ನವಿಕ್ಕುಂ ಸಿದ್ಧಾರ್ಥಸೆಟ್ಟಿ ಮಹಾಪುರುಷಾ ನಿನಗೊಂದೊಸಗೆಯಂ ಪೇಟಲ್‌ಬಂದೆಂ ಜಯಾವತಿ ಬೆಸಲೆಯಾದಳ್ ಮಗನಂ ಪೆತ್ತಳೆಂದು ಪೇಲ್ದ ಭಟ್ಟಂಗೆ ಕಟಕ ಕಟಿಸೂತ್ರಂ ಮೊದಲಾಗೊಡೆಯ ಅಂಗಚಿತ್ತಮಂ ಕೊಟ್ಟು ಮತ್ತಂ ಪಿರಿದು ಕಸವರಮಂ ಕೊಟ್ಟು ಪಾರ್ವಂಗೆ ದಾರಿದ್ರ್ಯಮೋಕ್ಷಂ ಮಾಡಿ ಸಿದ್ಧಾರ್ಥನೀ ಪಾರ್ವನ ಮಾತಂ ಕೇಳ್ದಾಗಳೆ ಪುತ್ರಮುಖಮಂ ನೋೞ್ಪೆನೆಂದು ಭೋಂಕನೆ ನೆಲಮನೆಯೊಳಗಂ ಪೊಕ್ಕು ನೋಳ್ಪನ್ನೆಗಂ ಜಯಾವತಿ ತನ್ನ ಸೋಂಕಿಲ ಮೇಗಿರ್ದ್ದಾಡಿಸುತ್ತಿರ್ಪ್ಪ ಕೂಸನೆಳನೇಸಱ ತೇಜದೊಳೋರಂತಪ್ಪನಂ ಕಂಡು ಪಲಕಾಲಂ ಬಾೞ್ಕೆಯಾಗೆಂದು ಮಗನಂ ಪರಸಿ ಮತ್ತಮಿಂತೆಂದಂ ಎನ್ನ ಮೂವತ್ತೆರಡು ಕೋಟಿ ಕಸವರಕ್ಕಂ ರಾಜಶ್ರೇಷ್ಠಿ ಪದಕ್ಕಮೆನ್ನ ಸಂತತಿಗೆಲ್ಲಮಿನ್ನಿಲ್ಲಿಂದಿತ್ತ ನೀನೇ ಅರಸನೆಯೆಂದು ನುಡಿದು ಸಮಸ್ತ ಭಾರಮೆಲ್ಲಮಂ ಕೂಸಿಂಗೆ ಸಮರ್ಪಿಸಿ ಪೋಗಿ ತೊಟ್ಟಿಲೊಳಿರ್ದ್ದ ಕೂಸಿಂಗೆ ಸೆಟ್ಟಿವಟ್ಟಂಗಟ್ಟಿ ಪರಸಿ ಸೇಸೆಯನಿಕ್ಕಿ ಸೋಂಕಿಲೊಳಗಿರ್ದ್ದನಂ ಕಂಡನಪ್ಪುದಱಿಂ ಸುಕೌಶಳಸ್ವಾಮಿಯೆಂದು ಪೆಸರನಿಟ್ಟು ನೆಲಮನೆಯಂ ಪೊಱಮಟ್ಟು ಸ್ವಜನಪರಿಜನ ಬಂಧುವರ್ಗ್ಗಕೆಲ್ಲಂ ನಿಶ್ಶಲ್ಯಂಗೆಯ್ದು ನೀಮನಿಬರುಂ ಸುಕೌಶಳಸ್ವಾಮಿಯುಂ ಪಿಡಿದು ಬಾೞ್ವೆಂದು ನುಡಿದು ಕಲ್ಪಿಸಿ ಸಂತಯಿಸಿ ವಿನಯಂಧರರೆಂಬಾಚಾರ್ಯ್ಯರ ಪಕ್ಕದೆ ಪಲಂಬರುಂ ಬೆರಸು ತಪಂಬಟ್ಟಂ ಮತ್ತೆ ಶ್ರೀಕಾಂತೆ ಮೊದಲಾಗೊಡೆಯ ಪಲರುಪೊಳ್ಪೆಂಡಿರ್ಕ್ಕಳ್ ವಿನಯಂಧರಭಟ್ಟಾರಕರ್ಗುರುಗಳಾಗಿ ಗುಣಮತಿಕಂತಿಯರ್ ಕಂತಿಯರಾಗಿ ತಪಂಬಟ್ಟು ಪಲಕಾಲಮುಗ್ರೋಗ್ರತಪಶ್ಚರಣಂಗೆಯ್ದು ಸಮಾಧಿಮರಣದಿಂದಂ ಮುಡಿಪಿ ದೇವಲೋಕದೊಳನಿಬರುಂ ಪುಟ್ಟಿದರ್ ಮತ್ತಿತ್ತ ಸಿದ್ಧಾರ್ಥ ರಿಷಿಯುಂ ಪನ್ನೆರಡು ವರ್ಷಂಬರೆಗಂ ಗುರುಗಳನಗಲದೆ ದ್ವಾದಶಾಂಗ ಚತುರ್ದಶಪೂರ್ವಮಪ್ಪಾಗಮಮೆಲ್ಲಮಂ ಕಲ್ತು ಏಕವಿಹಾರಿಯಪ್ಪೆಂ ಭಟಾರಾ ಎಂದು ಗುರುಗಳಂ ಬೆಸಗೊಂಡವರನುಮತದಿಂದಮೇಕವಿಹಾರಿಯಗಿ ಗ್ರಾಮೇಕರಾತ್ರಂ ನಗರೇ ಪಂಚರಾತ್ರಮಟವ್ಯಾಂ ದಶರಾತ್ರಮೆಂದೀ ನ್ಯಾಯದಿಂದಂ ವಿಹಾರಿಸುತ್ತುಂ ಛಟ್ಟಟ್ಟಮ ದಸಮ ದುವಾಳಸಾಷ್ಟೋಪವಾಸ ಪಕ್ಷೋಪವಾಸ ಮಾಸೋಪವಾಸಂಗಳಂ ಗೆಯ್ಯುತ್ತಂ ಪಲಕಾಲಂ ತಪಂ ಗೆಯ್ಯುತ್ತಮಿರ್ದ್ದರ್

ಇತ್ತ ಜಯಾವತಿಯುಂ ಭಟಾರರ ಪೇಟ್ದಾದೇಶಮಂ ನೆನೆದು ತನ್ನ ಮನೆಯಂ ರಿಷಿಯರಂ ಪೋಗಲೀಯದೆ ಬಾಗಿಲ ಕಾಪಿನವರಂ ಕಲ್ಪಿಸಿದಳ್ ಮತ್ತೆ ಸಿದ್ಧಾರ್ಥರಿಷಿಯ

ಮೇಗೆ ಕ್ರೋಧಮಂ ಭಾವಿಸಿ ಬಾಳವದ್ದೆಯಂ ಕೂಸಂ ಸಿಸುವನವ್ಯಕ್ತನಂ ಬಿಸುಟ್ಟೆಂತು ತಪಂಬಟ್ಟಂ ಪಾಪಕರ್ಮನ್ ದಯೆಯಿಲ್ಲದೊಂ ನಿಷ್ಕರುಣೆ ಎಂದು ಬಯ್ದೊಳ್ ಮತ್ತೆ ಸುಕೌಶಳಸ್ವಾಮಿಯಂ ಮೊಲೆಯೂಡುವ ದಾದಿ ಸುಬ್ರತೆ ಎಂಬಳ್ ಸುಮತಿಯೆಂಬೊಳೂಡುವ ದಾದಿ ನಂದೆಯೆಂಬೊಳಾಡಿಸುವ ದಾದಿ ಸುಪ್ರಭೆಯೆಂಬೊಳ್ ಮಜ್ಜನಂಬುಗಿಸುವ ದಾದಿ ಮೇಘಮಾಲೆಯೆಂಬೊಳ್ ಪಸದನಂಗೊಳಿಸುವ ದಾದಿ ಇಂತೀಯಯ್ವರುಂ ದಾದಿಯರ್ಕಳುಂ ನಡಪೆ ಸುಖದಿಂದಂ ಬಳೆದು ಪದಿನಾಱುಂ ಬರಿಸಂ ಪೋಗಿ ಯೌವ್ವನವಾದೊಡೆ ಮೂವತ್ತಿರ್ವ್ವರರಸುಮಕ್ಕಳ ಕೂಸುಗಳನತ್ಯಂತ ರೂಪುಲಾವಣ್ಯ ಸೌಭಾಗ್ಯ ಕಾಂತಿಹಾವಭಾವವಿಳಾಸವಿಭ್ರಮಂಗಳಿಂದಂ ಕೂಡಿದೊರಂ ಬೇಡಿಯೊಂದೆ ಪಸೆಯೊಳ್ ಮದುವೆ ನಿಱಿಸಿದಳ್ ಮತ್ತೇಕಶಾಳ ದ್ವಿಶಾಳ ತ್ರಿಶಾಳ ಚತುಃಶಾಳ ಸ್ವಸ್ತಿಕ ನಂದ್ಯಾವರ್ತ್ತಂ ಮೊದಲಾಗೊಡೆಯ ಮಾಡಂಗಳಂ ಮೂವತ್ತೆರಳ್ ಬಳ್ಳಿಮಾಂಡಗಳಂ ಮಾಡಿಸಿ ತನ್ನ ಮನೆಯಂಗಣದೊಳ್ ಸೆಂಡಾಡುವ ವಾಹಳಿಯುಮಾನೆಯನೇಱುವ ವಿನೋದಂ ಮೊದಲಾಗೊಡೆಯ ವಿನೋದಸ್ಥಾನಂಗಳೆಲ್ಲಮಂ ಮಾಡಿಸಿ ಪೊಱಗೆ ಪೊರಮಡಲೀಯದೆ ಇಂತು ಮಗನೈಶ್ವರ್ಯಮುಮಂ ವಿನೋದಮುಮಂ ಅಱ್ತಿಯಿಂದಂ ದಿವಸಕ್ಕಂ ನೋಡುತ್ತಿರ್ಕ್ಕುಂ

ಸುಕೌಶಳಸ್ವಾಮಿಯುಂ ಮೂವತ್ತಿರ್ವ್ವರುಮೊಳ್ವೆಂಡಿರ್ಕ್ಕಳೊಡನೆ ಇಷ್ಟ ವಿಷಯಕಾಮಭೋಗಂಗಳ ಸುಖಂಗಳಂ ಪಲಕಾಲವನುಭವಿಸುತ್ತಮಿರೆ ಮತ್ತೊಂದು ದಿವಸಂ ಸುಕೌಶಳ ಸ್ವಾಮಿಯುಂ ಪೃಥ್ವೀಧರಮೆಂಬ ಪ್ರಾಸಾದದೇಱನೆಯ ನೆಲೆಯಮೇಗೆ ತಾನುಂ ತಾಯುಂ ಸುಬ್ರತೆ ಮೊದಲಾಗೊಡೆಯಯ್ವರುಂ ದಾದಿಯರುಂ ಸ್ವಯಂಪ್ರಭೆ ಮೊದಲಾಗೊಡೆಯ ಮೂವತ್ತಿರ್ವ್ವರ್ ಪೆಂಡಿರ್ಕ್ಕಳುಂ ಮತ್ತನಿಬರುಂ ಪರಿವೇಷ್ಟಿತನಾಗಿ ಗವಾಕ್ಷಜಾಲಾಂತರದೊಳ್ ದಿಶಾವಳೋಕನಂ ಗೆಯ್ಯುತ್ತುಂ ಸುಖಸಂಕಥಾವಿನೋದಂಗಳಿಂದಿರ್ಪ್ಪನ್ನೆಗಂ ಇತ್ತ ಸಿದ್ಧಾರ್ಥ ಭಟಾರರ್ ಗ್ರಾಮನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹರಿಸುತ್ತುಂ ಅಯೋಧ್ಯಾನಗರಮಂ ಬಂದು ಮಾಸೋಪವಾಸ ಪಾರಣೆಯಂದು ಚರಿಗೆವೊಕ್ಕು ಕಿಱುಮನೆ ಪೆರ್ಮನೆಯೆನ್ನದೆ ತಕ್ಕಮನೆಗಳಂ ಯಥಾಕ್ರಮದಿಂದಂ ಪುಗುತ್ತಂ ಬರ್ಪರ್ ಸುಕೌಶಳ ಸ್ವಾಮಿಯ ಮನೆಯಂ ಪೊಕ್ಕು ಪೊಱಮಡುವ ಗಿಡಿಗಿಡಿ ಜಂತ್ರಂ ಮಿಳಿ ಮಿಳಿ ನೇತ್ರರಪ್ಪ ಮಾಸೋಪವಾಸಂಗೆಯ್ದ ರಿಷಿಯರ ಪೋಪುದಂ ಸುಕೌಶಳಸ್ವಾಮಿ ಕಂಡೀ ಪೋಪರೇನೆಂಬರಬ್ಬಾ ಅಪೂರ್ವರೂಪರಿನ್ನರನೆಂದುಂ ಕಂಡಱಿಯೆನೆಂದು ತಾಯಂ ಬೆಸಗೊಂಡಡೆ ತಾಯಿಯಿಂತೆಂದು ಪೇೞ್ದಳ್ ಮಗನೇ ಈತನಂಗಡಿಯಲವಟು ಪೆಱುಕಿ ತಿಂದು ಬಾೞ್ವೊಂ ಬೈಕಂಗುಳಿ ಬೇಡಿ ಪೊಟಲೆಲ್ಲಮಂ ತೊಟಲ್ದು ಬಸಿಱಿಂ ಪೊರೆವೊಂ ದೇಸಿಗನಾರುಮಿಲ್ಲರೇಂ ಕೋವಣಕ್ಕಪ್ಪೊಡಂ ಭಾಗಸಮಿಲ್ಲದನೆಂದು ಜಯಾವತಿ ಪೇೞ್ದೊಡೆ ಸುಬ್ರತೆಯೆಂಬ ದಾದಿ ಮಾರ್ಕ್ಕೊಂಡಿಂತೆಂದಳ್ ಮಹಾಪೊಲ್ಲದು ನುಡಿದ್ದೆ ಸ್ವಾಮಿಯುಂ ಪರಮೇಶ್ವರನಂ ನೀಂ ಮೊದಲಾಗಿ ಮೂವತ್ತಿರ್ವ್ವರುಮೊಳ್ವೆಂಡಿರ್ಕ್ಕಳಂ ಮೂವತ್ತೆರಡು ಕೋಟಿ ಕಸವರಮುಮಂ ಕೊಳೆದ ಪುಲ್ಲಂ

ತೋಱಿವಂತನಿತುಮಂ ತೋಱಿದು ಕರ್ಮಕ್ಷಯಾರ್ಥಂ ತಪಂಬಟ್ಟಾತನನೇಳಿಸಿ ಪರಿಭವಿಸಿ ಮುಟ್ಟುಗಿಡಿಸಿ ನುಡಿಯಲ್ವೇಡೆಂದು ಬಾರಿಸಿದೊಳಂ ಜಯಾವತಿ ಕಣ್ಣಂ ಕೆತ್ತಿ ಬಾರಿಸಿದೊಡೆ ಕೆಮ್ಮಗಿರ್ದ್ದ ಪೆಱಪೆಱವನೆ ನುಡಿಯಲ್ ತಗುಳ್ದೊಡೆ ಸುಕೌಶಸ್ವಾಮಿಯಿವರಿರ್ವ್ವರ ನುಡಿ ಸಗರ್ಭವಚನಂಗಳೆಂದು ತನ್ನ ಮನದೊಳೆ ಬಗೆಯುತ್ತಿರ್ಪ್ಪಿನಂ ಬಾಣಸಿಗಂ ಬಂದು ಬೋನಮೆತ್ತಿದುದೋಗರಮಾಱಿದಪ್ಪುದೆಂದು ಪೇೞ್ದೊಡೆ ತಾಯುಂ ಸುಬ್ರತೆ ಮೊದಲಾಗೊಡೆಯರಯ್ವರ್ ದಾದಿಯರುಮಾತನ ಪೆಂಡಿರ್ಕಳ್ ಸ್ವಯಂಪ್ರಭೆ ಶ್ರೀ ದತ್ತೆ ಬಂಧುಮತಿ ಭಾನುಮತಿ ಮಿತ್ರಸೇನೆ ಪ್ರಿಯಂಗು ಸುಂದರಿ ಪ್ರಿಯಾವತಿ ಶ್ಯಾಮಲತೆ ವಿದ್ಯುಲ್ಲತೆ ಅಚಳೆ ವಿಮಲಮತಿ ಶ್ರೀಕಾಂತೆ ಶಶಿಪ್ರಭೆ ಸೂರಸೇನೆ ಅನಂತಮತಿ ಸರಸ್ವತಿ ವಿಜಯೆ ವೈಜಯಂತೆ ಅಪರಾಜಿತೆ ಕನಕಮಾಲೆ ಧಾನ್ಯೆ ಧನಶ್ರೀ ವಸುಂಧರೆ ಎಂದಿವರು ಮೊದಲಾಗೊಡೆಯ ಪೆಂಡಿರ್ಕಳುಮೆಲ್ಲಂ ನೆರೆದಿಂತೆಂದರ್ ವೇಳಾತಿಕ್ರಮಮಾದಪುದು ಆ ರೋಗಿಸಲ್ಕೇೞಿಮೆಂದು ನುಡಿದೊಡೆ ಸುಕೌಶಳಸ್ವಾಮಿ ಇಂತೆಂದಂ

ಈ ವೃತ್ತಾಂತ ಮೆಲ್ಲಮನಱಿದೊಡಲ್ಲದುಣ್ಬೆನಲ್ಲನದಱಿಂದಂ ಪೇೞ್ ಸುಬ್ರತೆ ಎನ್ನ ಕಂಡವರಾರುಳ್ಳುದನುಳ್ಳಂತೆ ಪೇೞೆಯಪ್ಪೊಡೆ ನಿನಗೆ ಎನ್ನಾಣೆ ಎಂದು ತನ್ನ ಮೇಗೆ ಸೂರುಳಿಸಿ ಬೆಸಗೊಂಡೊಡೆ ಸುಬ್ರತೆಯೆಂಬ ಮೊಲೆಯೂಡಿದ ದಾದಿ ಇಂತೆಂದು ಪೇೞ್ದಳ್ ಮಗನೆ ಇವರ್ ನಿನ್ನ ತಂದೆವಿರ್ ಸಿದ್ಧಾರ್ಥರೆಂ ನೀಂ ತೊಟ್ಟಿಲೊಳಿರ್ದ್ದಂದೆ ನಿನಗೆ ಸೆಟ್ಟಿವಟ್ಟಂಗಟ್ಟಿ ಸಂಸಾರಕ್ಕೆ ಪೇಸಿ ಕರ್ಮಕ್ಷಯಾರ್ಥಂ ತಪಂ ಬಟ್ಟು ಮೆಯ್ಯಂ ನಿಱಿಸಲ್ವೇಡಿ ಪೊೞಲೊಳಗೆ ಚರಿಗೆ ವೋಗಿ ಬಾವರಿವುಗುತ್ತುಂ ಬಂದು ನಿನ್ನ ಮನೆಯಂ ಪೊಕ್ಕು ಪೊಱಮಟ್ಟು ಪೋದರೆಂದು ಪೇೞ್ದಿನ್ನಾರೋಗಿಸಲ್ವೇೞ್ಕುಂ ಮಗನೆ ಎಂದೊಡೆ ಸುಕೌಶಳ ಸ್ವಾಮಿ ಎಂದರಂತಪ್ಪೊಡಾನುಮವರಂತಪ್ಪ ರೂಪಂ ಕೆಯ್ಕೊಂಡಲ್ಲದುಣ್ಣೆನೆಂದು ಪ್ರತಿಜ್ಞೆಗೆಯ್ದಿರ್ದೊಡೆ ಸ್ವಜನ ಪರಿಜನ ಬಂಧುವರ್ಗ್ಗಮೆಲ್ಲಂ ನೆರೆದಿಂತೆಂದರ್ ನೀನಿನ್ನುಂ ಕೂಸಯ್ ಕಾಮಭೋಗಂಗಳನನುಭವಿಸುವ ದಿವಸಂಗಳ್ ತಪಂಬಡುವ ದಿವಸಮಲ್ಲವು ಪ್ರಾಯಂ ಬೋದ ಬೞಿಕ್ಕೆ ನಿಮ್ಮಮ್ಮನೆಂತು ನಿನಗೆ ಸೆಟ್ಟಿವಟ್ಟಂಗಟ್ಟಿ ಸಮಸ್ತಭಾರಮಂ ಸಮರ್ಪಿಸಿ ತಪಂ ಬಟ್ಟನಂತೆ ನೀನುಂ ನಿನಗೆ ಮಗನಾದೊಡೆ ಮಗಂಗೆ ಸೆಟ್ಟಿವಟ್ಟಂಗಟ್ಟಿ ಸಮಸ್ತ ಭಾರಮಂ ನಿರೂಪಿಸಿ ತಪಂಬಡುವುದೆಂದೆಲ್ಲರುಂ ನುಡಿದೊಡಿಂತೆಂದನ್ ಅನ್ನೆಗಮೇಂ ಬಾೞ್ವರೋ ಸಾವರೋ ಎಂತಱಿಯಲಕ್ಕುಂ ಮಾನಸರ ಬಾೞೆಂಬುದು ಪನಿಪುಲ್ಲ ಮುಗಿಲ ಸಂಜೆಯೊಳೋರಂತಪ್ಪುದಱಿಂದಾರ್ ಬಾರಿಸಿದೊಡಂ ನಿಲ್ವೆನಲ್ಲೆಂದು ಸ್ವಯಂಪ್ರಭೆಯೆಂಬಳ್ ಬಸುರ್ಪೆಂಡತಿಯಾಕೆಯ ಬಸಿಱ ಕೂಸಿಂಗೆ ಸೆಟ್ಟಿವಟ್ಟಂಗಟ್ಟಿ ಮನೆಯಿಂದಂ ಪೊಱಮಟ್ಟು ರಿಷಿಯರಿರ್ದ್ದೆಡೆಯಂ ಬೆಸಗೊಳ್ಳುತ್ತುಂ ಪೋಗಿ ಬಹಿರುದ್ಯಾನವನದೊಳ್ ಸ್ಫಟಿಕ ಶಿಲಾತಳದ ಮೇಗಿರ್ದ್ದ ಸಿದ್ಧಾರ್ಥ ಭಟ್ಟಾರರಂ ಕಂಡು ಸುಕೌಶಳಸ್ವಾಮಿ ಜಾತಿಸ್ಮರನಾಗಿ ದರ್ಶನವಿಶುದ್ಧಿಯೊಳ್ಕೂಡಿದ ಶುಭಪರಿಣಾಮದಿಂದಂ ಬಂದಿಸಿಯವಧಿಜ್ಞಾನಮುಮಾಗೆ ಅವರಿಂ ತನ್ನ ಮುನ್ನಿನ ಭವಾಂತರಗಳೆಲ್ಲಮುಂ ಪ್ರತ್ಯಕ್ಷಮಾಗಱಿದು ಮನದೊಳ್ ಇಂತೆಂದು

ಬಗೆದಂ ಇವರ್ ಮುನ್ನಿನ ಭವಾಂತರದ ಪ್ರಿಯದರ್ಶನನೆಂಬ ಸೆಟ್ಟಿ ಕಾಲಂಗೆಯ್ದು ಮಲಯಸುಂದರನೆಂಬಾನೆಯಾಗಿ ಪುಟ್ಟಿದೊನಲ್ಲಿಂ ಬೞಿಯಂ ಕುಬೇರಕಾನ್ತನೆಂಬೊನಾದನಲ್ಲಿಂಬೞಿಯಂ ವಿದ್ಯುನ್ಮಾಲಿಯೆಂಬ ವಿದ್ಯಾಧರನಾದನಲ್ಲಿಂ ಬೞಿಯಂ ಸಿದ್ಧಾರ್ಥನೆಂಬೊನೀಗಳಾಗಿ ತಪಂ ಬಟ್ಟನಂತು ಸಿದ್ಧಾರ್ಥಭಟಾರರ ಭವಂಗಳಯ್ದು ಮತ್ತಂ ಮುನ್ನಿನ ಭವದೊಳ್ ಪ್ರಿಯಸೇನೆಯೆಂಬ ಮಾಲೆಗಾರ್ತಿಯೆ ಕಾಲಂಗೆಯ್ದು ಪದ್ಮಾವತಿಯೆಂಬ ಪಿಡಿಯಾಗಿ ಪುಟ್ಟಿದೆನಲ್ಲಿಂ ಬೞಿಯಾ ವರಾಂಗನಾದೆನಲ್ಲಿಂ ಬೞಿಯಂ ಶ್ರೀಧರನಾದೆನಲ್ಲಿಂ ಬೞಿಯಾ ಚಂಡವೇಗವೆಂಬ ವಿದ್ಯಾಧರನಾದೆನಲ್ಲಿಂ ಬೞಿಯಾ ಸಿದ್ಧಾರ್ಥಂಗಂ ಜಯಾವತಿಗಂ ಮಗನೆಂ ಸುಕೌಶಳಸ್ವಾಮಿಯಾಗಿ ಪುಟ್ಟಿದೆನಿಂತೆನ್ನ ಭವಾಂತರಮಾಱು ಮತ್ತಾನುಂ ಪ್ರಿಯಸೇನೆಯಪ್ಪಂದೆನ್ನ ಕೆಳದಿ ಸುಕೀರ್ತಿಯೆಂಬಳ್ ಪ್ರಿಯದರ್ಶನ ಸೆಟ್ಟಿಯ ಭಾರ್ಯೆ ಕಾಲಂಗೆಯ್ದು ಮಲಯಾವತಿಯೆಂಬ ಪಿಡಿಯಾಗಿ ಪುಟ್ಟಿದೊಳಲ್ಲಿಂ ಬೞಿಯಂ ಸುಕೇಶಿನಿಯೆಂಬೊಳಾದಳಲ್ಲಿಂ ಬೞಿಯಾ ಮನೋಹರಿಯೆಂಬೊಳಾದಳಲ್ಲಿಂ ಬೞಿಯಂ ವಿರಳವೇಗೆಯೆಂಬ ವಿದ್ಯಾಧರಿಯಾದಳಲ್ಲಿಂ ಬೞಿಯಂ ಶ್ರೀಕಾಂತೆಯಾದಳಾಕೆಯಂ ಸಿದ್ಧಾರ್ಥಂಗೆ ಕೊಟ್ಟರಂತು ಶ್ರೀಕಾಂತೆಯ ಭವಾಂತರಮಾಱು ಅಂತು ಮೂವರ ಭವಾಂತರಂಗಳುಮನಱಿದು ಸಂಸಾರ ವೈರಾಗ್ಯಮಾಗಿ ಸಿದ್ಧಾರ್ಥ ಭಟ್ಟಾರರ ಪಕ್ಕದೆ ಸುಕೌಶಳಸ್ವಾಮಿ ತಪಂಬಟ್ಟಂ ಸುಪ್ರಭೆಯುಱಿಯೆಯುಱಿದ ಮೂವತ್ತಿರ್ವ್ವರ್ ಪೆಂಡಿರುಂ ಸಿದ್ಧಾರ್ಥಭಟ್ಟಾರರ್ ಗುರುಗಳಾಗೆ ಗುಣಮತಿಕಂತಿಯರ್ ಕಂತಿಯರಾಗೆ ತಪಂಬಟ್ಟು ಪಲಕಾಲಮುಗ್ರೋಗ್ರ ತಪಶ್ಚರಣಂ ಗೆಯ್ದು ಸಮಾಧಿ ಮರಣದಿಂದಂ ಮುಡಿಪಿ ದೇವಲೋಕದೊಳ್ ಪುಟ್ಟಿದರ್

ಮತ್ತಿತ್ತ ಜಯಾವತಿಯುಂ ತಾಂ ಬಾರಿಸೆ ಮೀಱಿ ಸುಕೌಶಳಸ್ವಾಮಿ ತಪಂಬಟ್ಟನೆಂದು ಮುಳಿದು ಜಿನಧರ್ಮಮಂ ಪೞಿದು ಉನ್ಮಾರ್ಗಮನುಪದೇಶಂಗೆಯ್ದು ಆರ್ತರೌದ್ರ ಧ್ಯಾನದೊಳ್ ಕೂಡಿ ಸತ್ತು ಮೊಗ್ಗಳಗಿರಿಯೆಂಬ ಪರ್ವತದೊಳ್ ಪೆಣ್ಬುಲಿಯಾಗಿ ಪುಟ್ಟಿದೊಳ್ ಮತ್ತಿತ್ತ ಸುಕೌಶಳಸ್ವಾಮಿ ದ್ವಾದಶಾಂಗ ಚತುರ್ದಶ ಪೂರ್ವಮಪ್ಪಾಗಮಮೆಲ್ಲಮಂ ಕಲ್ತು ಗುರುಗಳೊಡನೆ ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತುಂ ಪಲಕಾಲಂ ತಪಂಗೆಯ್ದು ಮೊಗ್ಗಳಗಿರಿ ಎಂಬ ಪರ್ವತಕ್ಕೆ ಬಂದು ಮೞೆಗಾಲದೊಳಿರ್ವ್ವರುಮೊಂದೆ ಗುಹೆಯೊಳ್ ಜೋಗುಗೊಂಡು ನಾಲ್ಕು ತಿಂಗಳುಮಿರ್ವರುಮುಪವಾಸಂಗೆಯ್ದು ಜೋಗು ನೆಱೆದೊಡೆ ಚಾತುರ್ಮಾಸದ ಪಾರಣೆಯಂದು ಸುಕೌಶಳಸ್ವಾಮಿಯಪ್ಪರಿಷಿಯಾ ಗುಹೆಯಿಂದಂ ಮುನ್ನಂ ಪೊಱಮಟ್ಟು ದೆಸೆಗಳಂ ನೋಟ್ಪರನ್ನೆಗಂ ತಾಯಪ್ಪ ಪೆಣ್ಬುಲಿ ಪಲವು ದಿವಸಮಾಹಾರಮಂ ಪಡೆಯದೆ ಪಸಿದು ಪಾಯಲ್ ಮಲ್ಮಲ ಮಱುಗುತ್ತಿರ್ದ್ದಾ ರಿಷಿಯರಂ ಕಂಡು ಮುಳಿದು ಮಸಗಿ ಮೇಲೆ ಪಾಯಲ್ ಪರಿತಪ್ಪುದಂ ಕಂಡು ಸುಕೌಶಳಸ್ವಾಮಿಯುಂ ಆಹಾರಶರೀರಂ ಜಾವಜ್ಜೀವಂ ನಿವೃತ್ತಿಯೆಂದು ಕಾಯೋತ್ಸರ್ಗಂಗೆಯ್ದು

ಗಾಹೆ ॥ ಖಮ್ಮಾಮಿ ಸವ್ವಜೀವಾಣಂ ಸವ್ವೇ ಜೀವಾ ಖಮಂತು ಮೇ
ಮೆತ್ತೀ ಮೇ ಸವ್ವಭೂದೇಸು ವೇರಂ ಮಜ್ಝಂ ಣ ಕೇಣ ವಿ ॥
ಮಜ್ಝಸಹಾವಂ ಣಾಣಂ ದಂಸಣ ಚರಣ ಕೋವಿ ಲಾವಣ್ಣಂ
ಜೋ ಸಂವೇಯಣ ಗಾಹೀ ಸೋಹಂ ಣೋಗಾಹವೇ ಆದಾ ॥
ಛಿಜ್ಜ ಉ ಭಿಜ್ಜ ಉ ಜಾಉ ಖ ಉ ಜೋಯಿಯ ಏಹು ಸರೀರಂ
ಅಪ್ಪಾ ಭಾವ ಇ ಣಿಮ್ಮಳ ಉ ಜೇಂಪಾವ ಇ ಭವತೀರು ॥

ಎಂದಿಂತು ಕ್ಷಮೆಯಂ ಭಾವಿಸಿ ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಧ್ಯಾನಿಸುತ್ತಮಿರೆ ಪುಲಿ ಬಂದು ಪಾಯ್ತಂದು ಬಸಿಱಂ ಪೋೞ್ದು ನೆತ್ತರಂ ಕುಡಿದು ತೆಗಲೆಯಂ ಪೋೞ್ದು ತಿಂಬಾಗಳ್ ಸಿದ್ಧಾರ್ಥರಿಷಿಯುಂ ಗುಹೆಯಿಂದಂ ಪೊಱಮಟ್ಟು ಕಂಡು ಹಾ ಪಂಚಮಹಾಪಾತಕೀ ಮಗನನೇಕೆ ಕೊಂದು ತಿಂದೆ ಮುನ್ನೆ ಸತ್ಕುಂಕುಮಪಂಕಿತಮಪ್ಪ ದಿಬ್ಯದೇಹದೊಳ್ ಬೆಮರ ಬಿಂದುಗಳಂ ಕಂಡು ನೆತ್ತರೆಂದು ಬಗೆದು ಮೂರ್ಚ್ಛೆಗೆ ಸಲ್ವಾಕೆಯೆ ಈಗಳ್ ಮಗನಂ ಪೋೞ್ದು ತಿಂದಪ್ಪೆ ಅಹೋ ಕಷ್ಟಂ ಸಂಸಾರಂ ಎಂದು ಸಿದ್ಧಾರ್ಥ ಭಟ್ಟಾರರ್ ನುಡಿದ ವಚನಮಂ ಕೇಳ್ದು ವಕ್ಷಸ್ಥಳದ ಶ್ರೀಲಾಂಛನಮಂ ಕಂಡು ಜಾತಿಸ್ಮರೆಯಾಗಿ ಮೂರ್ಚ್ಛೆಗೆ ಸಂದು ನೀಡಱಿಂದೆೞ್ಚತ್ತು ಆಂ ಪಂಚಮಹಾಪಾತಕಿಯೆನೆನ್ನ ಮಗನನೆ ಪೋೞ್ದು ತಿಂದೆನೆಂದು ತನ್ನಂ ತಾಂ ನಿಂದಿಸಿ ತಲೆಯಂ ಕಾಲ್ಗಳಂ ಪಾಷಾಣ ವೃಕ್ಷಂಗಳೊಳ್ ಶತ ಚೂರ್ಣಮಾಗೆ ಬಡಿದುಕೊಂಡು ಹಾ ಎನ್ನ ಮಗನೆ ಪೊಲ್ಲಕೆಯ್ದೆನೆಂದು ಪ್ರಳಾಪಂಗೆಯ್ದು ಮಹಾಶೋಕಂ ಗೆಯ್ಯುತ್ತಿರೆ ಭಟ್ಟಾರರದರ್ಕೆ ಧರ್ಮಶ್ರವಣಂ ಗೆಯ್ದು ಸಂಸಾರಸ್ಥಿತಿಯೆಲ್ಲಮನಱಿಯೆ ಪೇೞ್ದು ಬ್ರತಂಗಳನೇಱಿಸಿದೊಡುಪಶಮನಕ್ಕೆ ಸಂದಾಹಾರ ಶರೀರಕ್ಕೆ ಜಾಯಜ್ಜೀವಂ ನಿವೃತ್ತಿಗೆಯ್ದು ತೊಱೆದು ಶುಭ ಪರಿಣಾಮದೊಳ್ ಕೂಡಿ ಮುಡಿಪಿ ಸೌಧರ್ಮಕಲ್ಪದೊಳ್ ಪುಟ್ಟಿತ್ತು ಸಿದ್ಧಾರ್ಥ ರಿಸಿಯರುಂ ಸಮ್ಯಗ್ದರ್ಶನಜ್ಞಾನ ಚಾರಿತ್ರಂಗಳಂ ಸಾಧಿಸಿ ಕರ್ಮಕ್ಷಯಂಗೆಯ್ದು ಮೋಕ್ಷಮನೆಯ್ದಿದರ್ ಸುಕೌಶಳಸ್ವಾಮಿ ರಿಷಿಯುಂ ತಿರಿಕೋಪಸರ್ಗ್ಗಮಂ ಸೈರಿಸಿ ಸರ್ವಾರ್ಥ ಸಿದ್ಧಿಯೊಳ್ ಸಯಸತ್ತಮ ದೇವನಾಗಿ ಮೂವತ್ತು ಮೂಱು ಸಾಗರೋಪಮಾಯುಷ್ಯ ಸ್ಥಿತಿಯನೊಡೆಯನಹಮಿಂದ್ರನಾದಪ್ನೊನೆಂಬುದೆಲ್ಲಮಂ ಯಶೋಧರ ಕೇವಲಿಗಳ್ ಪೇೞೆ ಚಂಪಾಪುರಾಧಿಪತಿಯಪ್ಪ ಗಂಧಭಾಜನನೆಂಬರಸಂ ಕೇಳ್ದು ಆದಮಾನುಂ ಸಂತುಷ್ಟಚಿತ್ತನಾಗಿ ಭಟ್ಟಾರರ್ಗ್ಗೆಱಗಿ ಪೊಡೆಮಟ್ಟು ಸಂಸಾರಶರೀರ ಭೋಗ ನಿರ್ಬ್ವೇಗಪರಾಯಣನಾಗಿ ಧಾತ್ರೀವಾಹನನೆಂಬ ತನ್ನ ಪಿರಿಯಮಗಂಗೆ ರಾಜ್ಯಪಟ್ಟಮಂ ಕಟ್ಟಿ ನೂರ್ವರರಸು ಮಕ್ಕಳ್ವೆರಸು ಯಶೋಧರ ಕೇವಲಿಗಳ ಪಕ್ಕದೆ ತಪಂ ಬಟ್ಟರ್ ಮತ್ತಪ್ಪರೆಯರ್ಕ್ಕಳೊಳೋರನ್ನರಪ್ಪರಸಿಯರ್ ಅಯ್ನೂರ್ವರುಂ ಯಶೋಧರ ಕೇವಳಿಗಳ್ ಗುರುಗಳಾಗಿ ಪದ್ಮಾವತಿ ಕಂತಿಯರ್ ಕಂತಿಯರಾಗಿ ತಪಂಬಟ್ಟು ಸಮಾಧಿಮರಣದಿಂದ ಮುಡುಪಿ ಸೌಧರ್ಮಂ ಮೊದಲಾಗೊಡೆಯ ದೇವಲೋಕದೊಳ್ ಪುಟ್ಟಿದರಿತ್ತ ಗಂಧಭಾಜನ ಮುನಿಯುಂ ದ್ವಾದಶಾಂಗ ಚತುರ್ದಶ

ಪೂರ್ವಮಪ್ಪಾಗಮಮೆಲ್ಲಮಂ ಕಲ್ತು ಪಲಕಾಲಮುಗ್ರೋಗ್ರ ತಪಶ್ಚರಣಂ ಗೆಯ್ದು ಗ್ರಾಮನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತುಂ ಪೋಗಿ ಪಾಂಡ್ಯ ವಿಷಯದೊಳ್ ಪದಿಕುಂಡಮೆಂಬ ಪರ್ವತದ ಮೇಗಿರ್ದ್ದು ಬಾಹ್ಯಾಭ್ಯಂತರ ಪರಿಗ್ರಹ ಪರಿತ್ಯಾಗಪೂರ್ವಕಂ ಕಾಯೋತ್ಸರ್ಗಂ ಗೆಯ್ದು ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಧ್ಯಾನಿಸಿ ಕರ್ಮಕ್ಷಯಂ ಗೆಯ್ದು ಸುರನರೇಂದ್ರರಿಂ ಪೂಜೆಯನೆಯ್ದಿ ಮೋಕ್ಷಕ್ಕೆ ವೋದರ್

ಮತ್ತಾರಾಧಕರಪ್ಪವರ್ಗ್ಗಳ್ ಸುಕೌಶಳಸ್ವಾಮಿಯ ತಿರಿಕೋಪಸರ್ಗ್ಗಮಂ ಮನದೆ ಬಗೆದು ಪಸಿವುಂ ನೀರಟ್ಕೆ ದಾಹವಾತಂ ಶೂಲೆಯೆಂದಿವು ಮೊದಲಾಗೊಡೆಯ ವೇದನೆಗಳುಮಂ ಸೈರಿಸಿ ದರ್ಶನಜ್ಞಾನ ಚಾರಿತ್ರಂಗಳಂ ಸಾಧಿಸಿ ಸಮಾಧಿ ಮರಣದಿಂದ ಮುಡಿಪಿಯಭ್ಯುದಯ ನಿಃಶ್ರೇಯಸ ಸುಖಂಗಳನೆಯ್ದುಗೆ.

■

೩. ಗಜಕುಮಾರನ ಕಥೆ

ಗಜಕುಮಾರನ ಕಥೆಯಂ ಪೇೞ್ವೆಂ

ಗಾಹೆ ॥ ಭೂಮಿಏ ಸಮಂಖೀಳಾ ಭಾಇದ ದೇಹೋವಿಯಲ್ಲಚಮ್ಮಂವಾ
ಭಗವಂಪಿ ಗಜಕುಮಾರೋ ಪಡಿವಣ್ಣೋ ಉತ್ತಮಂ ಅಟ್ಠಂ ॥

[ಭೂಮಿಏ ಸಮಂ = ನೆಲದೊಳೋರಂತಾಗೆ ಮಲರ್ಚೆಕ್ಕಿಯುರದಿಂ ತಗುಳ್ದು ನಾಭಿವರೆಗಂ ಬಸಿಱಂ ಪೋೞ್ದು । ಅಲ್ಲಚಮ್ಮಂವಾ = ಪಂದೊವಲಂ ತೆಗೆದು । ಖೀಳಾ ಭೋಇದದೇಹೋವಿ = ಕಾಯ್ದು ಕರ್ಬೊನ್ನ ನಿಡಿಯವುಂ ತೋರಮುಮಪ್ಪ ಕೀಲ್ಗಳಿಂದಮುಂ ಮ್ಮೆಯೆಲ್ಲಮಂ ನಿರಂತರಮುರ್ಚೆ ಪೋಗಿ ನೆಲನಂ ತಾಪಿನಂ ಕೀಲಿಱಿಯೆ ಪಟ್ಟಮೆಯ್ಯೊಡೆಯನಾಗಿಯುಂ । ಭಗವಂಪಿ = ಪಿರಿದಪ್ಪ ಪೆರ್ಮೆಯನೊಡೆಯಂ । ಗಜಕುಮಾರೋ = ಗಜಕುಮಾರನುಂ । ಪಡಿವಣ್ಣೋ = ತಾಳಿದೊಂ। ಉತ್ತಮಂ ಅಟ್ಠಂ =ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ -

ಸುರಟಮೆಂಬುದು ನಾಡು ಅಲ್ಲಿ ದ್ವಾರಾವತಿಯೆಂಬುದು ಪೊಟಲದನಾಳ್ವೊಂ ವಿಷ್ಣು ಅರ್ಧಚಕ್ರವರ್ತಿಯಾತನ ತಂದೆ ವಸುದೇವಸ್ವಾಮಿಯೆಂಬೊನಾ ವಸುದೇವ ಸ್ವಾಮಿಯರಸಿ ಗಾಂಧರ್ವದತ್ತೆಯೆಂಬೊಳಾಯಿರ್ವರ್ಗ್ಗಂ ಮಗಂ ಗಜಕುಮಾರನೆಂಬೊನಾದಮಾನುಂ ಪ್ರಚಂಡಂ ಅಂತವರ್ಗ್ಗಳೆಲ್ಲಮಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತುಂ ಕಾಲಂ ಸಲೆ ಮತ್ತಿತ್ತ ಸುರಮ್ಯಮೆಂಬುದು ನಾಡಲ್ಲಿ ಪೌದನಪುರಮೆಂಬುದು ಪೊಟಲದನಾಳ್ವೊಂ ಅಪರಾಜಿತನೆಂಬೊನರಸನಾದಮಾನುಂ ಪ್ರಚಂಡಂ ಬಲಗರ್ವಿತನಾರುಮಱಿದೊಂ ವಿಷ್ಣುಗಂ ಬೆಸಕೆಯ್ಯದೊಂದು ದಿವಸಂ ವಿಷ್ಣು ಗೋಸನೆಯಂ ತ್ತೊಡರ್ಚೆಯಾವನೊರ್ವ್ವಂ ಪೌದನ ಪುರಾಧಿಪತಿಯಪ್ಪಪರಾಜಿತನಂ ಸಂಗ್ರಾಮದೊಳ್ ಕಾದಿ ಗೆಲ್ದು ಪಿಡಿದುಕೊಂಡು ಬರ್ಕುಮಾತಂಗೆಯಾತನ ಬೇಡಿದುದೆಲ್ಲಮಂ ಕುಡುವೆನೆಂದು ಪೊಟಲೊಳಗೆಲ್ಲಂ ತೊಟಲ್ವ ಗೋಸನೆಯಂ ಗಜಕುಮಾರಂ ಕೇಳ್ದು ಪಿಡಿದೊಡಾಮಾತನರಸಂ ಕೇಳ್ದು ಗಜಕುಮಾರನಂ

ಕರೆಯಿಸಿಯಾತನೊಡನೆ ಮಹಾಯುದ್ಧಂಗೆಯ್ದು ಗೆಲ್ದು ಪೆಂಡಗೆಯ್ಯುಡಿಯೆ ಕಟ್ಟಿ ಗಜ ತುರಗ ವಸ್ತುವಾಹನ ಸಹಿತಂ ತಂದು ವಿಷ್ಣುಗೊಪ್ಪಿಸಿದೊಡಾತನುಮೊಸೆದು ನಿನ್ನ ಮೆಚ್ಚಿದುದಂ ಬೇಡಿಕೊಳ್ಳೆಂದೊಡೆ ಪೆಱತೇನುಮನೊಲ್ಲೆಂ ನಿಮ್ಮ ಪ್ರಸಾದದಿಂದೆನಗೆಲ್ಲಮುಂಟು ಒಂದಂ ಬೇೞ್ಪೆಂ ನಿಮ್ಮಂತಃಪುರಮುೞಿಯೆ ಪೊೞಲೊಳಗೆನ್ನ ಮೆಚ್ಚಿದ ಪೆಂಡಿರನೆ ಕೊಂಡೆನ್ನಿಚ್ಛೆಯೊಳೆ ಮೆಚ್ಚಿದಂತೆ ಬಾೞ್ವೆನೀ ದಾಯುವಂ ಬೇಡಿದ್ರ್ದೆನಿದನೆನಗೆ ದಯೆಗೆಯ್ದು ಸಲಿಸುವುದೆಂದೊಡರಸನುಮಂತೆಗೆಯ್ಯೆಂದು ಗಜಕುಮಾರನ ಬೇಡಿದುದು ಕೊಟ್ಟಂ

ಗಜಕುಮಾರನುಂ ತನ್ನ ಬೇಡಿದ ಬರವಂ ಪೆತ್ತು ಪರದರ ಪಾರ್ವರೊಕ್ಕಲಿಗರ ಸಾಮಂತರ ಪೊೞಲೊಳಗುಳ್ಳೊಳ್ಪೆಂಡಿರ್ಕಳೆಲ್ಲರೊಳಂ ಕಣ್ಗಂ ಮನಕ್ಕಂ ಮೆಚ್ಚಿದವರೊಳು ತನ್ನಿಚ್ಛೆಯಿಂದಂಮೊಱೆದುಮೊಟ್ಟಯಿಸಿಯುಯ್ದು ಬಾೞುತ್ತಿರೆ ಮತ್ತಾ ಪೊೞಲೊಳ್ ಪಂಗುಳನೆಂಬ ಸುವರ್ಣಕಾಱನ ಪೆಂಡತಿ ವಸುಂಧರೆಯೆಂಬೊಳತ್ಯಂತ ರೂಪುಲಾವಣ್ಯ ಸೌಭಾಗ್ಯಕಾಂತಿ ಹಾವಭಾವ ವಿಳಾಸ ವಿಭ್ರಮಂಗಳನೊಡೆಯಳಂ ಕಂಡು ಗಜಕುಮಾರನಾಕೆಗಾಟಿಸಿ ತನ್ನ ಮನೆಯೊಳಿಟ್ಟಾಕೆಗಾಸಕ್ತನಾಗಿ ಬಾೞುತ್ತಿರ್ಕುಂ

ಆ ಪಿರಣಿಗನುಂ ಪೆಂಡತಿಯ ವಿಯೋಗದೊಳಪ್ಪ ಸಂತಾಪದಿಂದಮಿರುಳುಂ ಪಗಲುಮನವರತಂ ಬೇವುತ್ತುಮಸಮರ್ಥನಪ್ಪುದಱಿಂದಂ ಮನದೊಳ್ ಗಜಕುಮಾರಂಗೆ ಮುಳಿಯುತ್ತಿರ್ಕುಂ ಇಂತು ಪಲಕಾಲಂ ಸಲೆ ಮತ್ತೊಂದು ದಿವಸಮರಿಷ್ಟನೇಮಿಭಟಾರರ ಸಮವಸರಣಂ ವಿಹಾರಿಸುತ್ತಂ ದ್ವಾರಾವತಿಗೆ ವಂದೊಡೆ ವಿಷ್ಣುವಿನೊಡನೆ ಗಜಕುಮಾರಂ ತ್ರಿಭುವನ ಪರಮೇಶ್ವರನಲ್ಲಿಗೆ ಪೋಗಿ ಬಂದಿಸಿ ಪೂಜಿಸಿದ್ರ್ದು ಭಟಾರರ್ ಧರ್ಮಮಂ ಪೇೞ್ವಲ್ಲಿಯಗಮ್ಯಾಗಮನಂ ಗೆಯ್ದೊಡಂ ಪೆಱರ ದುರ್ಜನಂಗಳೊಳ್ ಬದ್ಧಾತಂ ಯೆಯ್ದುವ ದುರ್ಗತಿಗಳೊಳಪ್ಪ ದಃಖಂಗಳಂ ಪೇೞೆ ಕೇಳ್ದು ನಾನ್ಯಥಾ ಜಿನಭಾಷಿತಂ ಎಂದು ನಂಬಿ ಭೋಗಂಗಳ್ಗೆ ಪೇಸಿ ವೈರಾಗ್ಯಮಾಗಿ ಎಲ್ಲಮಂ ತೊಱೆದರಿಷ್ಟನೇಮಿ ಭಟಾರರ ಪಕ್ಕದೆ ತಪಂ ಬಟ್ಟುಗ್ರೋಗ್ರ ತಪಶ್ಚರಣಂಗೆಯ್ದು ಪನ್ನೆರಡು ವರ್ಷಂ ಪೋದೊಡೆ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತುಂ ಮತ್ತಮಾ ದ್ವಾರಾವತಿಗೆ ಬಂದು ರೇವತೋದ್ಯಾನದೊಳ್ ರಾತ್ರಿ ಪ್ರತಿಮೆ ನಿಂದೊನಂ ಸ್ವಜನ ಪರಿಜನ ಬಂಧುವರ್ಗಮುಂ ಶ್ರಾವಕರ್ಕಳುಂ ಬಂದರ್ಚ್ಚಿಸಿ ಪೊಡೆವಟ್ಟು ಪೋಪರಂ ಪಂಗುಳನೆಂಬ ಸ್ವರ್ಣಕಾರಂ ಕಂಡು ಬೆಸಗೊಂಡು ಭಟ್ಟಾರರ ಬರವಂ ಕೇಳ್ದಱಿದು ಪಗೆಯನಿಱಿಯಲ್ ಪೆತ್ತೆನೆಂದು ರಾಗಿಸಿ ಪಲವು ನಿಡಿಯವುಂ ತೋರವುಂ ಕರ್ಚ್ಬೊನ್ನ ಕೀಲ್ಗಳಂ ಕೊಂಡು ಬಂದು ಕ್ಷಮಾಂಗನಾಲಿಂಗಿತರಪ್ಪ ಮಹಾಮುನಿಯಂ ಮಲರ್ಚ್ಚಿ ಪಟ್ಟಿರಿಸಿಯುರಃಸ್ಥಳಮಂ ನಾಭಿವರೆಗಂ ವಿದಾರಿಸಿ ಪಂದೊವಲ್ ಪೊರೆತಾಪಿನೆಗಂ ಸಮಸ್ತಾವಯವ ಪ್ರದೇಶಂಗಳೊಳಂ ಕಾಯ್ದು ಕರ್ಬೊನ್ನ ಕೀಳಲಳಂ ನೆಲನಂ ತಾಪಿನಮುರ್ಚ್ಚಿ ಪೋಗಿಱಿದೊಡೆ ಕ್ಷಮೆಯಂ ಭಾವಿಸಿ ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಜಾನಿಸಿ ಸಮಾಧಿಮರಣದಿಂದಂ ಮುಡಿಪಿ ಮಿಕ್ಕ ರತ್ನತ್ರಯಮಂ ಸಾಧಿಸಿ ದೇವಲೋಕಮೆಂಬ

ಪ್ರಾಸಾದಕ್ಕೆ ಕಳಸಮಾಗುತ್ತಿರ್ದ್ದ ಸರ್ವಾರ್ಥಸಿದ್ಧಿಯೆಂಬ ಸ್ವರ್ಗದೊಳ್ ಮೂವತ್ತಮೂಱು ಸಾಗರೋಪಮಾಯುಷ್ಯ ಸ್ಥಿತಿಯನೊಡೆಯೊನೇಕಹಸ್ತಪ್ರಮಾಣನುಂ ಪುಡರೀಕ ವರ್ಣಂಗಳನೊಡೆಯೊನಹಮಿಂದ್ರದೇವನಾಗಿ ಪುಟ್ಟಿದೊಂ

ಮತ್ತೆ ಪೆಱರುಮಾರಾಧಕರುಮಪ್ಪವರ್ಗ್ಗಳ್ ಗಜಕುಮಾರನುಂ ಮನುಷ್ಯೋಪಸರ್ಗ್ಗದೊಳಾದ ವೇದನೆಯಂ ಮನದೊಳ್ ಭಾವಿಸುತ್ತುಂ ಪಸಿವುಂ ನೀರಟ್ಕೆ ದಾಹ ವಾತಂ ಸೂಲೆ ಮೊದಲಾಗೊಡೆಯ ವೇದನೆಗಳಂ ಸೈರಿಸಿ ಸಮಾಧಿಮರಣದಿಂದಂ ಮುಡಿಪಿ ಮಿಕ್ಕ ದರ್ಶನಜ್ಞಾನಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

■

೪. ಸನತ್ಕುಮಾರ ಚಕ್ರವರ್ತಿಯ ಕಥೆ

ಸನತ್ಕುಮಾರ ಚಕ್ರವರ್ತಿಯ ಕಥೆಯಂ ಪೇೞ್ವೆಂ

ಗಾಹೆ ॥ ಕಚ್ಛುಜರ ಖಾಸ ಸೋಸೋ ಭತ್ತಚ್ಛದಿ ಅಚ್ಛಿಕುಚ್ಛಿ ದುಕ್ಖಾಣಿ
ಅಧಿಯಾಸಿಯಾಣಿ ಸಮ್ಮಂ ಸಣಕ್ಕುಮಾರೇಣ ವಾಸಸದಂ ॥

[ಕಚ್ಛು -ಕೆರಂಕು । ಜರ - ಮೆಯ್ಯುೞುಂ । ಖಾಸ - ಕೆಮ್ಮುಂ । ಸೋಸೋ -ಬಾಯ್ ಬತ್ತುವುದುಂ । ಭತ್ತಚ್ಛದಿ - ಛರ್ದಿಯುಂ । ಅಚ್ಛಿ ಕುಚ್ಛಿದುಕ್ಖಾಣಿ -ಕಣ್ಣ ಬಸಿಱ ಬೇನೆಗಳುಮೆಂದಿವು ಮೊದಲಾಗೊಡೆಯ ।ಅಧಿಯಾಸಿಯಾಣಿ - ಸೈರಿಸೆಪಟ್ಟವು ।ಸಮ್ಮಂ - ಒಳ್ಳಿತ್ತಾಗಿ । ಸಣಕ್ಕುಮಾರೇಣ -ಸನತ್ಕುಮಾರ ಚಕ್ರವರ್ತಿಯಪ್ಪ ರಿಷಿ ಯಿಂದಂ । ವಾಸಸದಂ - ನೂಱು ಬರಿಸಂ]

ಅದೆಂತೆಂದೊಡೆ

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಕುರುಜಾಂಗಣಮೆಂಬುದು ನಾಡು ಅಲ್ಲಿ ಹಸ್ತಿನಾಪುರಮೆಂಬುದು ಪುರಮದನಾಳ್ವೊಂ ವಿಶ್ವಸೇನ ಮಹಾರಾಜನೆಂಬೊನರಸನಾತನ ಮಹಾದೇವಿ ಸಹದೇವಿಯೆಂಬೊಳಾಯಿರ್ವರ್ಗ್ಗಂ ಸನತ್ಕುಮಾರನೆಂಬೊಂ ಪುಟ್ಟಿದೊಂ ಆತಂ ಸರ್ವಲಕ್ಷಣಸಂಪೂರ್ಣಂ ಸಕಳಕಳಾಪಾರಗಂ ಚೆಲ್ವಿನಿಂದಂ ದೇವಾಸುರರ್ಕಳಂ ಗೆಲ್ವರೂಪನೊಡೆಯನಾತಂಗೆ ಕೆಳೆಯಂ ಸಹವಿಕ್ರಮನೆಂಬ ಸಾಮಂತನ ಮಗಂ ಮಹೇಂದ್ರಸಿಂಹನೆಂಬನಂತವರ್ಗ್ಗಳನ್ಯೋನ್ಯ ಪ್ರೀತಿಯಿಂದಂ ಕಾಲಂ ಸಲೆ ಮತ್ತೊಂದು ದಿವಸಂ ಏಕಚಕ್ರಪುರಾಧಿಪಂ ಭೂರಾಮ ನಾಮಧೇಯನಪ್ಪ ಶತ್ರುವಿನಿಂದಂ ವಿಶ್ವಸೇನಮಹಾರಾಜಗೆ ಪಾಗುಡಮನಟ್ಟೆ ಪಟ್ಟವಾರ ತುರಂಗಮೆಂಬ ದುಷ್ಟಾಶ್ವಮಂ ಕುಮಾರನೇಱಿ ಲಕ್ಷ್ಮೀಗೃಹಮೆಂಬುದ್ಯಾನವನಮಧ್ಯಸ್ಥಮಪ್ಪ ವಾಹಳಿಗೆಗೆ ಕ್ರೀಡಿಸಲ್ವೇಡಿ ಸಲ್ವೊಂ ಆ ದುಷ್ಟಾಶ್ವಮಂ ಕೊಸೆಗೊಳೆ ಗಾಳಿಯಿಂದಂ ಬೇಗಮಾಗಿ ವಾರಿತ ಪೂರಿತಂ ಪರಿದು ಕುಮಾರನಂ ಕೊಂಡು ಮಹಾಟವಿಯಂ ಪೊಕ್ಕೋಡಿತ್ತು

ಇತ್ತ ವಿಶ್ವಸೇನ ಮಹಾರಾಜನುಂ ಸಾಮಂತ ಮಹಾಸಾಮಂತರ್ಕಳುಂ ಪರಿವಾರಮುಮೆಲ್ಲಂ ಕುದುರೆಯಡಿವಜ್ಜೆಯಂ ನೋಡಿ ನಾಡೆ ಗೆಂಟು ಪೋಗಿ ಮೂಱನೆಯ ದಿವಸದಂದು ಅಡಿವಜ್ಜೆಗೆಟ್ಟೊಡೆ ಪೋಪ ದೆಸೆಯನಱಿಯದೆ ಹಾ ಪುತ್ರಾ ಎಂದು ಮಹಾ ದುಃಖಾಕ್ರಾಂತನಾಗಿ ಪ್ರಳಾಪಂ ಗೆಯ್ದು ನೃಪತಿಯಂ ಮಹೇಂದ್ರಸಿಂಹಂ ಸಂತಯಿಸಿ ಇಂತೆಂದು ನುಡಿದಂ ಸ್ವಾಮಿ ಕುಮಾರನಂ ಪಾತಾಳಮಂ ಪೊಕ್ಕಪ್ಪೊಡಮಱಿಸಿಕೊಂಡು ಬರ್ಪೆಂ ನಿಮ್ಮಡಿ ನೀ ಮುಬ್ಬೆಗಂ ಬಡದೆ ಮಗುಳಿಮೆಂದರಸನಂ ಮಗುಳ್ಚಿ ಪರಿವಾರಜನಂ ಬೆರಸಿ ಮಹಾಟವಿಯ ತೊಳವು ನೋೞ್ಪನ್ನೆಗಂ ಪರಿವಾರ ಜನಂಗಳ್ ಕುಮಾರನನಱಿಸಿ ಕಾಣದೆ ಬೇತಸ್ತು ಮಹೇಂದ್ರಸಿಂಹನಂ ಬಿಸುಟ್ಟು ಪೊೞಲ್ಗೆ ಪೋದರ್

ಇತ್ತ ಮಹೇಂದ್ರಸಿಂಹನೊರ್ವ್ವನೆ ನಾನಾವಿಧ ಗಿರಿಗಹನವಿಷಯ ವಿಷಮಪ್ರದೇಶಗಳುಮಂ ವ್ಯಾಧನಿವಾಸಂಗಳಂ ಯಥಾಶ್ರಮದಿಂದಂ ಕಟಿದು ಪೋಗಿ ಪ್ರಿಯಂಗುಷಂಡಮೆಂಬ ವನಮನೆಯ್ದಿ ತದ್ ವನಮಧ್ಯಸ್ಥ ಗೃಹದೊಳಿರುಳಿರ್ದ್ದು ಮಿತ್ರನ ವಿಯೋಗದೊಳಪ್ಪ ದುಃಖದಿಂದಂ ಕಾರುಣ್ಯಮಾಗೆ ಪ್ರಳಾಪಂಗೆಯ್ದು ಅಲ್ಲಿ ದೇವತೆಯ ಮುಂದೆ ನಿದ್ರೆಗೆಯ್ದುಂ ಮನೋಹರಿಯೆಂಬ ಜಾವದಾಗಳ್ ಕರಣೇಶತಂಗಳಿಂ ಪರಿವೇಷ್ಟಿತನಾಗಿ ತಿಳಿನೀರ ಕೊಳದೊಳಗೆ ಕ್ರೀಡಿಸುವ ಸೊರ್ಕ್ಕಾನೆಯುಮಂ ಫಲಭರಿತಮಾದ ಮಾವಿನ ಮರನುಮಂ ಕನಸಿನೊಳ್ ಕಂಡು ಮನೋರಥ ಸಿದ್ಧಿಯಾಯ್ತೆಂದು ಒಸೆದು ಮಗುಳ್ದು ನಿದ್ರಾವಶಗತನಾದನಂ ಕಂಡು ಕರುಣಿಸಿ ಭೂತಾಂಬರನೆಂಬ ವೆಂತರನೆತ್ತಿಕೊಂಡು ಪೋಗಿ ವಿಜಯಾರ್ಧಪರ್ವತಕ್ಕಾಸನ್ನಮಪ್ಪ ಭೂತರಮಣಮೆಂಬ ಬನದ ನಡುವಿನೊಳಿರ್ದ್ದ ಕ್ಷುಲ್ಲಕಮಾನಸಮೆಂಬ ಸರೋವರದ ತಡಿಯೊಳಿಕ್ಕಿ ಪೋದನ್ ಆಗಳಾತನುಂ ನೇಸಱ್ ಮೂಡುವಾಗಳ್ ತೂಂಕಡುಗೆಟ್ಟು ದೆಸೆಗಳಂ ನೋೞ್ಪಂ ಸಮುದ್ರದೊಳೋರಂತಪ್ಪುದಂ ಕೋಕನದ ಕುಮುದ ಕುವಳಯ ಕಲ್ಹಾರೇಂದೀವರಾದಿಗಳಿಂದಂ ಹಂಸ ಚಕ್ರವಾಕ ಬಳಾಕಾದಿ ಪಕ್ಷಿಗಣಂಗಳಿಂ ನೀರೊಳಗಾಡುತ್ತುಂ ಮುಳುಗುತ್ತುಂ ನಾನಾ ಪ್ರಕಾರದಿಂದವಱುಲಿವ ದನಿಗಳಿಂದಮತಿರಮಣೀಯಮಪ್ಪ ಕೊಳನಂ ಕಂಡಾದಮಾನುಂ ವಿಸ್ಮಯಚಿತ್ತನಾಗಿಯಾ ಭೂತರಮಣಮೆಂಬ ವನಮನಶೋಕ ಪುನ್ನಾಗ ವಕುಲ ತಿಲಕ ಚಂಪಕ ಸಹಕಾರ ಲವಂಗ ಕ್ರಮುಕ ನಾಳಿಕೇರ ನಾಗವಲ್ಲೀ ಪೀನದ್ಧದ್ರುಮ ಷಂಡಮಂಡಿತನಿಂದ್ರವನದೊಳೋರಂತಪ್ಪುದಂ ನೋಡುತ್ತುಂ ತೊೞಲ್ವಾತಂಗನುಕೂಲಮಪ್ಪ ಶಕುನ ನಿಮಿತ್ತಂಗಳಂ ಕಂಡಿಂದಮೋಘಮೆನ್ನ ಸ್ವಾಮಿಯಂ ಕಾಣ್ಬೆನೆಂದು ಸಂತುಷ್ಟ ಚಿತ್ತನಾಗಿಯಾ ಬನದ ನಡುವೆ ತೊೞಲ್ವೊಂ ಮೃದು ಮಧುರ ಗಂಭೀರ ಧ್ವನಿಯೊಳ್ ಕೂಡಿದ ಮೃದಂಗ ವಂಶ ತಾಳಾದಿಗಳಂ ಧ್ವನಿಗಳಂ ಮಂದ್ರತಾರಲಯಾನ್ವಿತಮಾಗೆ ಕಿವಿಗಂ ಮನಕ್ಕಂ ಸೊಗಯಿಸುವಂತಪ್ಪ ಪಾಡುವ ಪಾಟಮುಮಂ ಕೇಳ್ದು ಹರಿ ಚಂದನ ಕಾಳಾಗರು ಮಲಯಜ ತುರಷ್ಕರಾದಿಗಳ ಕಂಪು ಬಂದು ತೀಡಿದೊಡಿದು ದೇವತಾ ನಿವಾಸಮಕ್ಕುಮೆಂದು ಬಗೆದು ಭಯಾಶ್ಚರ್ಯದಿಂದ ವ್ಯಾಕುಲಿತ ಮನದೊನಾಗಿ ಇನ್ನಿದನಮೋಘಂ ನೋೞ್ಪೆನೆಂದಾ ದೆಸೆಗಾಗಿ ಸಲ್ವೊನಂ ಕನತ್ಕನಕ ವಿನಿರ್ಮಿತಮಂ

ನಾನಾಮಣಿಗಣಪಿನದ್ಧಮಂ ಚಳತ್‌ಕೇತು ಪತಾಕಾದ್ಯಮಂ ವಿದ್ಯಾಧರ ಯುವತೀಜನಕ್ರೀಡನಾರ್ಥಮಪ್ಪ ಪ್ರಾಸಾದಮಂ ಕಂಡು ವಿಸ್ಮಯ ಚಿತ್ತನಾಗಿಯದಱ ಸಮೀಪಕ್ಕೆ ಸಾರ್ದ್ದೊಂದು ಮರನಂ ಮಱೆಗೊಂಡು ನೋಟ್ಟಂ ತತ್ಪುರಃ ಸ್ಥಿತಮಪ್ಪ ಮಣಿ ಮಂಟಪದೊಳ್ ದಿವ್ಯಸ್ತ್ರೀಜನಂಗಳ್ ವಿಳಾಸದಿಂ ಚಾಮರಮಿಕ್ಕೆ ದಿವ್ಯಶಯ್ಯಾ ತಳದ ಮೇಗಿರ್ದ್ದು ನಾಟಕಮಂ ನೋೞ್ಪ ಕುಮಾರನಂ ಕಂಡು ಹರ್ಷಚಿತ್ತದಿಂದಂ ಕುಸುಮಿತ ಕದಂಬವೃಕ್ಷಂಬೊಲ್ ಕಂಟಕಿತ ರೋಮಾಂಚಿತಗಾತ್ರನಾಗಿ ಪರಿದು ಬರ್ಪೊನಂ ಕಂಡಿದಿರೆಯ್ದೆಯಾತನುಂ ಕುಮಾರನ ಚರಣಾರವಿಂದಂಗಳ್ಗೆರಗಿ ಬಿರ್ದು ಮೂರ್ಚ್ಛಾಗತನಾದೊಡಾಗಳ್ ಶೀತಳಕ್ರಿಯೆಗಳಿಂದೆೞ್ಚತ್ತುಱುದಿಂಗಳಿಂಗೆ ಕಂಡೆಂ ಸ್ವಾಮಿ ನಿನ್ನಂ ನಂಬಿರ್ದ್ದೆನಾನೆಂದು ಮಹಾ ದುಃಖದಿಂದೞ್ವನಂ ಸಂತವಿಸಿ ವಿಪುಳಶ್ರೀಯೆಂಬ ವಿದ್ಯಾಧರ ವಿಳಾಸಿನಿಯಂ ಕರೆದಿಂತೆಂದು ಪೇೞ್ದನ್ ಎನ್ನ ಸಹೋದರನೆಂತುಂ ಶ್ರಮದಿಂ ನೀಗಿ ಸುಖದಿಂ ತಣಿದೊನಕ್ಕುಮಂತಾಗೆ ಸ್ನಾನಪಾನಭೋಜನಾದಿಕ್ರಿಯುಗಳಂ ಬೇಗಂ ಮಾಡೆಂದು ಪೇೞ್ದೊಡಾಕೆಯುಮಂತೆಗೆಯ್ವೆನೆಂದಾತನಂ ಮಹಾವಿಭೂತಿಯಿಂದಂ ವಿದ್ಯಾಧರ ವಿಳಾಸಿನಿ ಮಜ್ಜನಂಬುಗಿಸಿ ದಿವ್ಯಾಹಾರಮನೂಡಿ ವಸ್ತ್ರಾಭರಣ ಗಂಧ ಮಾಲ್ಯಾದಿ ತಾಂಬೂಲಾದಿಗಳಿಂ ತಣಿಪಿದಾಗಳಾತನುಂ ಮುನ್ನಿನ ದುಃಖಮೆಲ್ಲಮಂ ಮಱೆದು ಮುನ್ನಂ ಕ್ಲೇಶಭಾಗಿಯಪ್ಪ ಪುರುಷಂ ಸ್ವರ್ಗಮನೆಯ್ದಿ ಮಾಱುಪ್ಪೊಲೆಯಾಯ್ತಾಗಳಲ್ಲಿಂ ಬಂದು ಕುಮಾರನೋರಾಸನದೊಳಿರ್ದ್ದು ಸರ್ವಾಭರಣ ವಿಭೂಷಿತನಾಗಿ ನೇತ್ರ ಮನೋಹರಿಯಪ್ಪ ದಿವ್ಯಸಭೆಯಂ ನೋಡಿ ವಿಸ್ಮಿತಚಿತ್ತನಾಗಿ ಇಂತೆಂದಂ ಸ್ವಾಮೀ ಬ್ರತ ಶೀಲೋಪವಾಸ ತಪಶ್ಚರಣ ಸನ್ಯಸನಾದಿ ಶುಭಾನುಷ್ಠಾನ ಕ್ರಿಯೆಗಳಿಂ ಸತ್ಪುರುಷಂ ಮಱುಭವದೊಳ್ ದೇವಾಗಂನೆಯರ್ಕಳೆಱೆಯನಕ್ಕುಂ ನೀನೀ ಭವದೊಳಿಂತಪ್ಪ ವಿಭವಮನೆಯ್ದಿದಿರಿದೆನಗೆ ಮಹಾ ವಿಸ್ಮಯಮೆನೆ ಕುಮಾರನಿಂತೆಂದನ್ ಇವರ್ಗ್ಗಳ್ ದೇವಕನ್ನೆಯರಲ್ಲರ್ ವಿದ್ಯಾಧರಿಯರ್ಕಳೆನೆ ಇವರ್ಗ್ಗಳಂ ನೀಮೆಂತು ಪೆತ್ತಿರೆಲ್ಲಿ ಮೇಣಾವ ಸ್ವರೂಪದಿಂ ಬಂದಿರಿದನೆನಗೆ ತಿಳಿಯೆ ಪೇೞಿಮೆನೆ ಕುಮಾರನಿರುಳೆಲ್ಲಮತಿರಂಜನೆಯೆಂಬ ನಾಟಕಮಂ ನೋಡಿ ನಿದ್ರಾಸುಖದೋಷಿಯಿರ್ದ್ದೊಂ ಕಮಳಮತಿಯೆಂಬ ವಿದ್ಯಾಧರ ವಿಳಾಸಿನಿಯಂ ವಿದಗ್ಧೆಯ ಕರೆದೆನ್ನ ಸಂಬಂಧಿಯಪ್ಪ ಕಥೆಯೆಲ್ಲಮಂ ಮಹೇಂದ್ರಸಿಂಹಂಗೆ ಪೇೞ್ ಎಂದು ನಿದ್ರಾವಶಗತನಾಗಿ ವಾಸಗೃಹಮಂ ಪೊಕ್ಕಂ ಇತ್ತಾಕೆಯುಂ ಆತಂಗಿಂತೆಂದು ಪೇೞಲ್ತಗುೞ್ದಳ್

ಕುಮಾರನಿಂದಾರೂಢಮಪ್ಪ ದುಷ್ಟಾಶ್ವಂ ಕುಮಾರನಂ ಕೊಂಡು ಮನೋವೇಗದಿಂದಂ ಗಿರಿವನ ದರಿ ನದೀ ಪ್ರದೇಶಂಗಳೊಳ್ ಮೂಱುದಿವಸಮಿರುಳುಂ ಪಗಲುಂ ಪರಿಯುತ್ತಿರ್ದ್ದುದು ಕರುಳ್ಪಱಿದು ತೆಗಲೆಯೊಡೆದು ಕಾಲಂ ಗೆಯ್ದತ್ತಾಗಳ್ ಕುಮಾರನುಂ ಪಸಿವುಂ ನೀರೞ್ಕೆಯಿಂದಂ ಬಾಧಿಸೆ ಪಟ್ಟು ಬಸಮೞಿದು ಪಿರಿದೊಂದಾಲದ ಮರದ ಕೆಳಗೆ ಶಿಳಾತಳದ ಮೇಗೆ ಪಟ್ಟಿರ್ದನಾಗಳ್ ಅಲ್ಲಿಯಾವಟವೃಕ್ಷ ನಿವಾಸಿಯಪ್ಪ ಮನೋಹರನೆಂಬ ಯಕ್ಷಂ ಕಂಡು ಈ ಪುರುಷಂ ಸಕಳ ಚಕ್ರವರ್ತಿಯಪ್ಪನೆಂದಱಿದು ಗಂಧೋದಕಮಂ ಮೇಗೆ ತಳಿದು ತಂಗಾಳಿಯಂ

ವಿಗುರ್ವ್ವಿಸಿ ದೇಹಕ್ಕಾಘ್ರಾಯನಂ ಮಾಡೆ ಸುವರ್ಣಭಾಜನದಿಂದಾಮೋದ ಸುಗಂಧಮಪ್ಪ ಕೋಡುವ ನೀರನಾತಂಗೆ ಕುಡಿಯಲ್ಕೆಱೆದನಾಗಳ್ ಕುಮಾರಂ ನೀನಾರ್ಗ್ಗೀ ನೀರನೆಲ್ಲಿಂ ತಂದಯ್ ಪೇೞೆಂದು ಬೆಸಗೊಂಡೊಡಾತನಿಂತೆಂದನಾನೀ ವಟವೃಕ್ಷ ನಿವಾಸಿಯೆಂ ಮನೋಹರನೆಂಬ ಯಕ್ಷನೆಂ ಕ್ಷುಲ್ಲಕ ಮಾನಸಮೆಂಬ ಸರೋವರದಿಂ ತಂದೆನೀ ನೀರನನೆ ಅಂತಪ್ಪೊಡೆ ನೀನೆನ್ನನಾ ಕೊಳಕ್ಕೊಡಗೊಂಡು ಪೋಗಲ್ಲಿಯಾ ನೀರಂ ಮಿಂದು ಕುಡಿದೊಡಲ್ಲದೆನಗೆ ನೀರೞ್ಕೆ ಕಿಡದೆಂದು ಪೇೞ್ದೊಡೆ ಕುಮಾರನನೆತ್ತಿಕೊಂಡು ಪೋಗಿ ಯಕ್ಷನಾ ಸರೋವರದ ತಡಿಯೊಳಿಳಿಪಿ ಪೋದನ್ ಆಯವಸರದೊಳ್ ಸಿತಯಕ್ಷನೆಬಂ ವೆಂತರದೇವಂ ಕುಮಾರನ ಪೂರ್ವಭವದ ವೈರಿ ಭೌಮವಿಹಾರಕ್ಕೆ ಬಂದು ಕುಮಾರನಂ ಕಂಡು ಕ್ರೋಧಾಗ್ನಿ ಪೆರ್ಚ್ಚೆ ಭೈರವ ರೂಪಧಾರಿಯಾಗಿ ಕಳ ಕಳ ಧ್ವನಿಯಿಂದಂ ಗರ್ಜ್ಜಿಸಿ ಬರ್ಪ್ಪನಂ ಕಂಡಾಗಳ್ ಸಿಂಹನಾದಂಗೆಯ್ದು ಖಟ್ಗಸನ್ನಿಭಮಪ್ಪ ಮಹಾಶಿಲೆಯಂ ಕಿತ್ತೆತ್ತಿಕೊಂಡು ಪ್ರತಿರಾಕ್ಷಸಂಬೊಲ್ ನಿಂದ ಕುಮಾರನಂ ನೋಡಿ ವ್ಯಂತರದೇವಂ ನಾಗಪಾಶದಿಂ ವೇಷ್ಟಿಸಿದೊಡೆ ಕುಮಾರಕನದಂ ಹಸ್ತತಳದಿಂ ಪಱಿಯೆ ಪೊಯ್ದನಾಗಳಾ ದೇವಂ ನಾನಾವಿಧ ಮಾಯಾ ಯುದ್ಧಂಗಳಿಂ ಕಾದೆ ಕುಮಾರನುಂ ಯಷ್ಟಿ ಮುಷ್ಟಿ ಪ್ರಹಾರಾದಿಗಳಿಂ ಗೆಲ್ದಿರ್ದ್ದನನೆತ್ತಿಕೊಂಡು ಸಮುದ್ರದ ಬಡವಾಮುಖದೊಳಿಕ್ಕಿ ಕೊಲ್ವೆನಮೋಘಮೆಂದು ನೆಲದಿಂದುರ್ಬಿ ಬಂದಾಕಾಶಕ್ಕೆ ನೆಗಪಿದೊನ ಸ್ಕಂಧನಂ ತಿವಿದೊಂ ಕುಮಾರನುಂ ಅವ್ಯಷ್ಟಿ ವಜ್ರಘಾತಂಬೊಲಪ್ಪ ಮುಷ್ಟಿಯಿಂ ದಿವ್ಯ ಪುರುಷನ ಹಸ್ತಪ್ರಹಾರಮೆಂಬ ಮಹಾ ಮುದ್ರಾಪೀಡೆಯಿಂ ತ್ರಸ್ತಾಭಿಭೂತನಾಗಿ ಬೆನ್ನಿತ್ತೋಡಿದನಾಗಳ್ ತನ್ನಿವಾಸಿಗಳಪ್ಪ ಯಕ್ಷ ಕಿನ್ನರಾದಿಗಳ್ ಮಸ್ತಕದೊಳ್ ನ್ಯಸ್ತ ಹಸ್ತರ್ಕಳಾಗಿ ಜಯ ಜಯ ಶಬ್ದಂಗಳಿಂದಂ ಪುಷ್ಪಾದಿಗಳಿಂದಂ ಕುಮಾರನಂ ಪೂಜಿಸಿದರ್ ಆ ಅವಸರದೊಳಿಂದ್ರಪ್ರಭನೆಂಬ ವಿದ್ಯಾಧರಂ ಬಂದು ಕುಮಾರನ ಚರಣಾರವಿಂದಂಗಳ್ಗೆಱಗಿ ಪೊಡೆವಟ್ಟಿಂತೆಂದನ್ ಸ್ವಾಮೀ ಮೂವತ್ತಾಱು ವರುಷಂ ನಿನ್ನೀಬರವನಾನೆನ್ನರಸನ ಬೆಸದಿಂ ಪಾರುತ್ತಿರ್ದ್ದೆಂ ನೀನೆನ್ನ ಭಾಗ್ಯದಿನಿಲ್ಲಿಗೆ ಬಂದ್ಯೆ ಏಱು ವಿಮಾನಮನೆನೆ ಅಂತೆಗೆಯ್ವನೆನ್ನ ಬಯಕೆಯಂ ತೀರ್ಚ್ಚಿದ ಬೞಿಕ್ಕೇಱುವೆನೆಂದು ಕೊಳನಂ ಪೊಕ್ಕು ಸ್ವೇಚ್ಛೆಯಿಂ ಕ್ರೀಡಿಸಿ ಪೊಱಮಟ್ಟನನಾ ಖೇಚರಂ ಕೊಂಡು ಪೋಗಿ ತದ್ವನದೊಳತಿ ರಮಣೀಯಮಪ್ಪ ಪ್ರದೇಶದೊಳಾಡುತ್ತಿರ್ದ್ದ ವಿದ್ಯಾಧರಕನ್ನೆಯರ್ಕ್ಕಳ ಪಕ್ಕದಿರಿಸಿ ಪೋದನ್ ಇತ್ತ ಖೇಚರ ಕನ್ನೆಯರ್ಕ್ಕಳ ಕಣ್ಗಳೆಂಬ ಮೀನ್ಗಳ್ ಕುಮಾರನ ರೂಪಮೆಂಬ ಗಾಳದಿಂ ತೆಗೆಯೆಪಟ್ಟು ತಪನ ತಾಪನ ದಹನ ವಿಮೋಹನ ಮರಣ ಸ್ವರೂಪದ ಕಾಮಶರಂಗಳವರ್ಗ್ಗಳೆರ್ದ್ದೆಯನುರ್ಚ್ಚಿ ಪೋಗಿ ಪರವಸೆಯರಾಗಿ ಮಱುಗಿದಱುನೀರ ಮೀಂಗಳ್ವೊಲಾದರಿದೇಂ ಚೋದ್ಯಮೋ ಕುಸುಮ ಬಾಣನ ಬಿಲ್ಲ ಬಲ್ಮೆ

ಶ್ಲೋಕ॥ ಅಹೋ ಧನುಷಿ ಕೌಶಲ್ಯಂ ಮನ್ಮಥಸ್ಯ ಮಹಾತ್ಮನಃ
ಅಸ್ಪೃಶ್ಯನ್ನಪಿ ಗಾತ್ರಾಣಿ ಭಿನತ್ತ್ಯಂತರ್ಗತಂ ಮನಃ॥

ಇವರ್ ಮನ್ಮುಖ ನಿರೀಕ್ಷಣದೊಳಾಸಕ್ತೆಯರಾಗಿರ್ದ್ದರಾಗಳಾ ಇಂದ್ರಪ್ರಭನೆಂಬ ವಿದ್ಯಾಧರಂ ಪ್ರಿಯಸಂಗಮಮೆಂಬ ಪೊಲಿಲನೆಯ್ದಿ ಭಾನುವೇಗನೆಂಬ ವಿದ್ಯಾಧರಂಗೆ ಪೇೞ್ದನಾದೇಶ ಪುರುಷನಂ ತಂದು ಭೂತರಮಣದ ಜ್ಯೋತಿರ್ವಿತಾನವೆಂಬ ಮಣಿಮಂಡಪದೊಳ್ ಕನ್ನೆಯರ ಪಕ್ಕದಿರಿಸಿ ಬಂದೆನೆನೆ ಆಗಳಾತಂಗೆ ತಣಿವಿನೆಗಂ ತುಷ್ಟಿದಾನಮಂ ಕೊಟ್ಟು ವಿಪುಳಶ್ರೀಯೆಂಬ ಖೇಚರಿಯಂ ಕರೆದಿಂತೆಂದಂ ಶೀಘ್ರಂ ಪೋಗಿ ಕೀರ್ತಿಧವಳಂಗೆ ಭೋಜನಾದಿ ವಿಧಿಯಂ ಮಾಡೆಂದು ಪೇೞ್ದೊಡಾಕೆಯುಮಂತೆ ಗೆಯ್ವೆನೆಂದು ಸಪರಿವಾರಂ ಬೆರಸಿ ಬಂದಾತಂಗೆ ಮಜ್ಜನ ಭೋಜನ ಪ್ರಸಾಧನಾದಿಗಳಂ ಮಾಡಿಸುತ್ತಂ ಮತ್ತೀಕುಮಾರನಂ ದಿವ್ಯ ಶಯ್ಯಾತಳದೊಳ್ ಸುಖದೊಳಿರಿಸಿ ಅನಂಗಸುಂದರಿಯೆಂಬ ವಿದ್ಯಾಧರಿಯನಾಡವೇೞ್ದು ನಾಟಕಮನಭಿನಯಿಸುತ್ತುಂ ಕುಮಾರನ ಮುಂದೆ ವಿನಯಾನ್ವಿತೆಯಾಗಿರ್ದೊಳಂ ಕುಮಾರಂ ನೋಡಿ ಇಂತೆಂದಂ ನೀಮೆನಗೀ ದೃಗ್ ವಿಧಮಪ್ಪುಪಕಾರಮನೇಕೆ ಗೆಯ್ದಪ್ಪಿರ್ ನೀಮಾರ್ಗ್ಗೇನೆಂದು ಬೆಸಗೊಂಡೊಡಾಕೆಯಿಂತೆಂದಳ್

ಕೇಳ್ ಪೇೞ್ವೆಂ ಸ್ವಾಮಿ ವಿಜಯಾರ್ಧ ಪರ್ವತದೊಳ್ ಪ್ರಿಯಸಂಗಮ ಪುರಾಧಿಪನಪ್ಪ ಭಾನುವೇಗನೆಂಬ ವಿದ್ಯಾಧರಂ ಶ್ರೀಮಾಲೆ ಮೊದಲಾಗೊಡೆಯ ಮಹಾದೇವಿಯರೆಣ್ಬರವರ್ಗೆ ಪುಟ್ಟಿದೊರೀ ಎಣ್ಬರುಂ ಕನ್ನೆಯರ್ಕಳ್ ಲಕ್ಷ್ಮೀಮತಿ ಕನಕಕಾಂತೆ ಮಂದರಸೇನೆ ಅಳಕೆ ಅಳಂಬುಸೆ ಹೇಮವತಿ ಹೇಮಮಾಳಿನಿ ವಿಜಯಾರ್ಧವತಿ ಎಂದೀ ಪೆಸರ್ಗಳನೊಡೆಯರೆಣ್ಬರುಂ ಮಕ್ಕಳನಾರ್ಗ್ಗೆ ಕುಡುವೆನೆಂದೊಂದು ದಿವಸಂ - ನೈಮಿತ್ತಿಕನಂ ಭಾನುವೇಗಂ ಬೆಸಗೊಂಡೊಡಾತನಿಂತೆಂದಂ ಕ್ಷುಲ್ಲಕ ಮಾನಸಮೆಂಬ ಕೊಳದೊಳ್ ಸಿತಯಕ್ಷನೆಂಬ ದೇವನಂ ಸಂಗ್ರಾಮದೊಳಾವಂ ಗೆಲ್ದನಾತಂಗೆ ಕೂಸುಗಳಂ ಕುಡಿಮೆಂದು ಪೇೞ್ದನದಱಿಂ ನೀನೆಮ್ಮ ಸ್ವಾಮಿಯೆಂದು ಪೇೞ್ದವರಸದೊಳ್ ಮಹಾ ವಿಭೂತಿಯಿಂ ಬರ್ಪ ಖೇಚರೇಂದ್ರನಂ ತೋಱಿದೊಡೀತಂ ನಿಮ್ಮ ಮಾವನೆಂದಾಗಳ್ ಕುಮಾರನುಮಿದಿರೆೞ್ದು ತದ್ಯೋಗ್ಯಮಪ್ಪ ವಿನಯಮಂಗೆಯ್ದಿರ್ದ್ದನಂ ವಿದ್ಯಾಧರೇಂದ್ರಂ ಕುಮಾರನಂ ನೋಡಿ ತ್ರಿಭುವನಕ್ಕೆಲ್ಲಂ ತಿಲಕಮಾಗಿರ್ದ್ದಳಿಯನಂ ನಾನೆ ಪೆತ್ತೆನೆಂದಾದಮಾನುಂ ಸಂತುಷ್ಟಚಿತ್ತನಾಗಿ ಕುಮಾರನಂ ಕೊಂಡು ಪೋಗಿ ತನ್ನ ಪೊಲಿಲಂ ಪೊಕ್ಕಾ ದೆವಸದೊಳೆಣ್ಬರ್ ಕನ್ನೆಯರ್ಕಳಂ ಕೈನೀರೆರೆದು ಕುಮಾರಂಗೆ ಕೊಟ್ಟಂ ಕುಮಾರನುಂ ದಿವ್ಯಾಂಗನೆಯರ್ಕಳುಂ ತಾನುಂ ಪ್ರಾಸಾದದ ಮೇಗೆ ಶಯ್ಯಾತಳದೊಳ್ ಸುಖದಿಂದೊಂದಿದನಾಗಳೊಂದು ವನದೇವತೆ ಬಂದು ಸುನಂದೆಯೆಂಬ ಕನ್ನೆಯ ದುಃಖಮಂ ಕಾಣಲಾಱದೆ ಕರುಣಿಸಿ ಕುಮಾರರನೆತ್ತಿಕೊಂಡು ಪೋಗಿ ಹರಿಕೂಟಮೆಂಬ ಪರ್ವತದ ಜ್ಯೋತಿರ್ವನದೊಳ್ ದಿವ್ಯ ಶಯ್ಯಾತಳಮಂ ವಿಗುರ್ವ್ವಿಸಿ ಯದಱ ಮೇಗೆ ಕುಮಾರನನಿಟ್ಟು ಪೋದೊಡಾತನುಂ ಪ್ರಭಾತಸಮಯದೊಳೆೞ್ಚತ್ತು ದೆಸೆಗಳಂ ನೋೞ್ಪನಾ ವನಮುಮಂ ತನ್ನಿರ್ದ್ದ ಲತಾಮಂಟಪಮುಮಂ ನೋಡಿ ಎನಗಿದು ಮಹಾವಿಸ್ಮಯಂ ರಾತ್ರಿಯೊಳ್ ವಿವಾಹ ಕಲ್ಯಾಣಮೆನಗೆ ಸ್ವಪ್ನದೊಳಾದುದೋ

ನಿರುತಮೆಯಾದುದೋ ಎಂದು ಸಂದೇಹಚಿತ್ತನಾಗಿ ತನ್ನ ಕೈಯೊಳ್ ಕಟ್ಟಿರ್ದ ಕಂಕಣಮಂ ನೋಡಿ ಕಂಡು ಕುಮಾರನಿಂತೆಂದು ಬಗೆದಂ

ಶ್ಲೋಕ ॥ ಭವಿತವ್ಯಂ ಭವತ್ಯೇವ ಕರ್ಮಣಾಮೇಷ ನಿಶ್ಚಯಃ
ವಿಪತ್ತೌ ಕಿಂ ವಿಷಾದೇನ ಸಂಪತ್ತೌ ವಿಸ್ಮಯೇನ ಕಿಂ ॥

ಎಂದಿಂತು ವಸ್ತು ಸ್ವರೂಪಮಂ ಕುಮಾರಂ ಬಗೆಯುತ್ತಿರ್ಪಿನೆಗಂ ದೂರಾಂತರದೊಳ್ ಸಂಛನ್ನಮಾಗುತ್ತಿರ್ದ ವನದೊಳಿರ್ದ ಕನ್ನೆಯಿಂತೆಂದು ಪುಯ್ಯಲಿಟ್ಟಳ್ ಸಾಕೇತಪುರಾಧಿಪನಪ್ಪ ಸುರಥನೆಂಬರಸಂಗಂ ಚಂದ್ರಯಶೆಯೆಂಬ ಮಹಾದೇವಿಗಂ ಪುಟ್ಟಿದೆಂ ಸನತ್ಕುಮಾರನ ಭಾರ್ಯೆಯೆನ್ ಸುನಂದೆಯೆನ್ ಎನ್ನನನ್ಯಾಯದಿಂ ವಜ್ರವೇಗನೆಂಬ ವಿದ್ಯಾಧರಂ ತಂದಂ ಕಿನ್ನರ ಕಿಂಪುರುಷ ಗರುಡ ಗಾಂಧರ್ವ ಯಕ್ಷ ರಾಕ್ಷಸಾದಿ ದೇವರ್ಕಳಿರಾ ವಿದ್ಯಾಧರರ್ಕಳಿರಾ ಶರಣಾಗಿಮಾರಪ್ಪೊಡಮೆನ್ನಂ ರಕ್ಷಿಸಿಮೆಂಬ ಕಾರುಣ್ಯಸ್ವರಮಂ ಕೇಳ್ದಾಶ್ಚರ್ಯಮನದೊನಾಗಿ ದೆಸೆಯಂ ನೋಡಿ ಸಲ್ವೊಂ ಸ್ಫಟಿಕ ಮಯಮಪ್ಪ ಶಿಳಾಗೇಹದ ಕೆಳಗಿರ್ದ ಯಕ್ಷಕನ್ನೆಯಂ ಕಂಡು ನೀನಾರ್ಗೆನೆಂಬೆಯಾ ಸನತ್ಕುಮಾರನಾರ್ಗೆಂದು ಕುಮಾರಂ ಬೆಸಗೊಂಡೊಡಾಕೆ ಇಂತೆಂದು ಪೇಟ್ದಳ್

ಅಯೋಧ್ಯಾಪುರಮನಾಳ್ವೊಂ ಸುರಥನೆಂಬೊನರಸನಾತನ ಮಹಾದೇವಿ ಚಂದ್ರಯಶೆಯೆಂಬೊಳಾ ಇರ್ವರ್ಗಂ ಪುಟ್ಟಿದೆಂ ಸುನಂದೆಯೆಂಬೆಂ ಸನತ್ಕುಮಾರಂಗೆ ಗರ್ಭದೊಳಿರ್ದಂದೆ ನಿವೇದಿಸೆ ಸಂದೆನ್ನಂ ಮದನೋದ್ಯಾನದೊಳುಯ್ಯಲಾಡುತ್ತಿರ್ದೊಳಂ ಭೌಮವಿಹಾರಾರ್ಥಂ ಬಂದು ವಜ್ರವೇಗನೆಂಬ ವಿದ್ಯಾಧರಂ ಕಂಡೆನ್ನನೆತ್ತಿಕೊಂಡು ಪುಯ್ಯಲಿಡೆ ಯಿಡೆಕೊಂಡು ಬಂದನಿಂದಿಂಗೇಟು ದಿವಸಮುಂಟು ಮತ್ತಾ ಸನತ್ಕುಮಾರನೆಂಬೊಂ ಹಸ್ತಿನಾಪುರಮನಾಳ್ವೊಂ ವಿಶ್ವಸೇನಮಹಾರಾಜನೆಂಬೊನರಸನಾತನ ಮಹಾದೇವಿ ಸಹದೇವಿಯೆಂಬೊಳಾ ಇರ್ವರ್ಗಂ ಪುಟ್ಟಿದಂ ಸನತ್ಕುಮಾರನೆಂಬೊನೆಂದು ಪೇಟ್ದೊಡಾ ಕುಮಾರನೆಂದನ್ ಆತನಂ ಕಂಡೊಡೇನಱಿವೋ ಎಂದು ಬೆಸಗೊಂಡೊಡೆ ಸುನಂದೆಯಿಂತೆಂದಳ್ ಎನ್ನ ತಂದೆ ವಿಶ್ವಸೇನ ಮಹಾರಾಜನೊಳಪ್ಪ ಮಿತ್ರಸಂಬಂಧದಿನೊಂದು ದಿವಸಂ ಹಸ್ತಿನಾಪುರಕ್ಕೆ ಪೋಗಿ ಕುಮಾರನಂ ಕಂಡಾತನ ರೂಪಂ ಪಟದೊಳ್ ಬರೆದು ತಂದಾ ರೂಪನೆಲ್ಲಾ ಪೊಟ್ತುಂ ನೋೞ್ಪೆನುಂ ಬರೆವೆನುಂ ಭಾವಿಸುತ್ತಿರ್ಪೆನಪ್ಪುದಱಿಂದಱಿವೆನಾ ರೂಪುಂ ನಿಮ್ಮನೆ ಪೋಲ್ಕುಮೆನೆ ಅಂತಪ್ಪೊಡಾಂ ಸನತ್ಕುಮಾರನಪ್ಪೆನೆಂದಾಗಳ್ ಹರ್ಷ ರೋಮಾಂಚ ಕಂಚುಕಿತೆ ವಿಕಸಿತ ವದನೆಯಾಗಿಯಱಿಪ ಬಳ್ಳಿ ಕಾಲ್ತೊಡರ್ದತ್ತೆಂಬಂತೆ ವೊಲಾಯ್ತೆನ್ನ ಭಾಗ್ಯದಿಂದಂ ಸ್ವಾಮಿ ನೀಮಿಲ್ಲಿಗೆ ಬಂದಿರಾ ವಜ್ರವೇಗಂ ತನ್ನ ತಂಗೆಯನೆನಗೆ ಕಾಪಿಟ್ಟು ತನ್ನ ಪೊೞಲ್ಗೆ ನಿದ್ರೆಗೆಯ್ಕೆ ಪೋದನಾಕೆಯುಂ ಜಳಕ್ರೀಡೆಗೆ ವೋದಳವಳ್ ಬಾರದನ್ನೆಗಂ ಬೇಗಂ ಪೋಪಮೆನೆ ಕೇಳ್ದು ಕುಮಾರನಿಂತೆಂದನಂಜದಿರ್ನಿನ್ನಂ ತಂದೊನನಮೋಘಂ ಮೃತ್ಯುಮುಖಕ್ಕೊಯ್ವಲ್ಲದೆ ಪೋಗೆನೆನೆ ಭಯದಿಂ ನಡುಗಿ ಇಂತೆಂದಳಾತನಾಕಾಶಗಾಮಿ ನೀಮೆಂತು ಕೊಲ್ವಿರೆನೆ ಕುಮಾರಂ

ನಕ್ಕಿಂತೆಂದಂ ಆಕಾಶಗಾಮಿಯಪ್ಪ ಕಾಗೆಯನೇಂ ಕೊಲ್ವುದಱಿದೇ ಎಂದು ನುಡಿಯುತ್ತಿರ್ಪ್ಪನ್ನೆಗಂ ವಜ್ರವೇಗನ ಬರವಂ ಕಂಡು ಕನ್ಯೆಯಂಜಿ ಪ್ರಾಸಾದದೊಳಗೆ ಪೋಗಿ ಪೊಕ್ಕಿರ್ದ್ದಳ್

ಖೇಚರನುಂ ಕುಮಾರನಂ ಕಂಡು ಪುರುಡಿಂ ಮುಳಿಸು ಪೆರ್ಚ್ಚೆಯೆನ್ನ ಪೆಂಡತಿಯೊಡನೆ ನುಡಿಯುತ್ತಿರ್ದ್ದೋನನಮೋಘಂ ಕೊಲ್ವೆನೆಂದು ಕಿೞ್ತಿ ಬಾಳ್ವೆರಸು ಬಂದೆಱಗಿ ಇಱಿದಾತನನೇಱಿಂ ಬಂಚಿಸಿ ಸಿಂಹಲಂಘನದಿಂ ಮೇಗೆ ನೆಗೆದು ವಜ್ರಸಮಾನಮಪ್ಪ ಕೈಯಿಂದಂ ಕುಮಾರನಾತನ ತೆಗಲೆಯಂ ತಿವಿದೊಡಾತನಲ್ಲಿ ತನ್ನ ವಿದ್ಯಾಧರಕರಣಮಂ ತೋರ್ಪ್ಪಂಬೊಲೆ ಮೇಗುಚ್ಚಳಿಸಿ ಬಿೞ್ದಾಗಳೆ ಮಡಿದಂ ಕುಮಾರನುಮಿಂತೆಂದು ಬಗೆದನೊರ್ವ್ವಂಗಿರ್ದ್ದ ಸ್ತ್ರೀಯ ಪಕ್ಕದೆ ಸತ್ಪುರುಷಂಗಿರಲ್ತಕ್ಕುದಲ್ತೆಂದು ಮುನ್ನೆ ತನ್ನಿರ್ದ್ದ ಲತಾಮಂಟಪದೊಳ್ ಪೋಗಿರ್ದ್ದನನ್ನೆಗಂ ಇತ್ತ ವಜ್ರವೇಗನ ತಂಗೆ ಸಂಧ್ಯಾವಳಿಯೆಂಬೊಳ್ ಮಾನಸ ಸರೋವರದೊಳ್ ಜಳಕ್ರೀಡೆಯಾಡಿ ಬಪ್ಪೊರ್ವ್ವಳನ್ನೆಗಂ ತಮ್ಮಣ್ಣನುಂ ಸತ್ತುದಂ ಕಂಡು ಮೂರ್ಚ್ಛಾಗತೆಯಾಗಿ ಬಿೞ್ದು ನೀಡಱಿಂದೆೞ್ಚತ್ತು ಕ್ರೋಧಾಗ್ನಿ ಪೆರ್ಚ್ಚೆ ಎಮ್ಮಣ್ಣನಂ ಕೊಂದ ದುರಾತ್ಮನಂ ಪಾತಾಳಮಂ ಪೊಕ್ಕಿರ್ದ್ದೊನಪ್ಪೊಡಮಱಸಿ ಕೊಲ್ವೆನಮೋಘಮೆಂದು ಭಯಂಕರಮಪ್ಪ ರೂಪಂ ಕೆಯ್ಕೊಂಡು ದೆಸೆಗಳಂ ನೋೞ್ಪೊಳನ್ನೆಗಮಾರುಮಂ ಕಾಣದೆ ಸುನಂದೆಯಂ ಬೆಸಗೊಂಡೊಡಾಕೆಯುಮಿಂತೆಂದಳ್ ದುಷ್ಟನಿಗ್ರಹ ಶಿಷ್ಟಪ್ರತಿಪಾಳನ ಸ್ವರೂಪದಿಂ ಪೃಥುವಿಯಂ ರಕ್ಷಿಸುವ ಸ್ವಾಮಿ ಚೋರ ಜಾರ ಪಾದರಿಗರ್ಕ್ಕಳಂ ಕೊಲ್ಲದಿರ್ಕ್ಕುಮೆ ಎಂದೊಡಾತನಾವೊಮೆಲ್ಲಿರ್ದ್ದೊಂ ತೋಱೆಂದು ಬೆಸಗೊಂಡೊಡೆ ಸುನಂದೆಯುಂ ಪೋಗಿ ಕುಮಾರನಂ ತೋಱಿದೊಡಾಕೆಯುಮಸಿ ಖೇಟಕ ಹಸ್ತೆಯಾಗಿ ವಿಭೀಷಣಮಪ್ಪ ರೂಪಮಂ ವಿಗುರ್ವ್ವಿಸಿ ಕೊಲ್ವೆನೆಂದು ಸಾರ್ದೊಳ್ ಕುಮಾರನ ಸೌಷ್ಠವಮಂ ನೋಡಿ ಕ್ರೋಧಂ ಕೆಟ್ಟು ಸ್ನೇಹಂ ಪೆರ್ಚ್ಚೆ ಕಾಮಶರಂಗಳಿಂ ಪರವಶಹೃದಯೆಯಾಗಿ ಇಂತೆಂದು ತನ್ನೊಳ್ ಬಗೆದಳ್ ಎಮ್ಮಣ್ಣನುಂ ತನ್ನ ದೋಷದಿಂ ಸತ್ತೊನ್ ಈತಂಗೇನುಂ ದೋಷಮಿಲ್ಲೆಂದು ವಿಕಾರಮಪ್ಪ ರೂಪಮನುಪಸಂಹಾರಿಸಿ ತನ್ನ ಮುನ್ನಿನ ಸ್ವಾಭಾವಿಕಮಪ್ಪ ರೂಪಮಂ ಕೆಯ್ಕೊಂಡು ತಮ್ಮಣ್ಣನಂ ಸಂಸ್ಕಾರಿಸಿ ನೀರಿೞಿದು ತದ್ವಿರಹಾನಳನಿಂ ಬೆಂದು ಕೊರಗೆ ಬಸವೞಿದಿರ್ದ್ದ ಮೆಯ್ಯನೊಡೆಯೊಳ್ ಬಂದು ಸುನಂದೆಗಿಂತೆಂದಳ್ ನಿನ್ನ ಪ್ರಸಾದದಿಂ ಬಾೞ್ವೆಂ ನೀನೆ ಸೋದರಮುಂ ಕಲ್ಯಾಣಮಿತ್ರೆಯುಮಾದೆಯದಱಿಂ ನೀನೀ ಕುಮಾರಂಗೆ ಪೋಗಿ ಇಂತೆಂದು ಪೇೞ್ ವಿಜಯಾರ್ಧಪರ್ವತದೊಳಗ್ರಮಂದಿರ ಪುರಾಧಿಪತಿಯಪ್ಪಶನಿವೇಗನೆಂಬ ವಿದ್ಯಾಧರಂಗಂ ವಿದ್ಯುತ್ಪ್ರಭೆಯೆಂಬ ಮಹಾದೇವಿಗಂ ಮಗಳ್ ಸಂಧ್ಯಾವಳಿಯೆಂಬೊಳ್ ನೀಮೆ ಶರಣೆಂದಿರ್ದ್ದೊಳಾಕೆಯಂ ನೀಮಮೋಘಂ ಕೈಕೊಳಲ್ವೇೞ್ಕುಮೆಂದು ಇಂತು ನುಡಿಯೆಂದು ಕಲ್ಪಿಸಿ ಅಟ್ಟಿದೊಡಾಕೆಯುಂ ಕುಮಾರಂಗೆ ತದ್‌ವೃತ್ತಾಂತಮೆಲ್ಲಮಂ ಪೇೞ್ದೊಡಾತನುಂ ಪಿತೃಮಾತೃಗಳೀಯದ ಸ್ತ್ರೀಯರಂ ಕೈಕೊಳ್ವುದೆನಗಯೋಗ್ಯಮೆಂದು ಮಱುಮಾತುಗೊಟ್ಟೊಡೆ ಸುನಂದೆಯೆಂಬೊಳ್ ಮಿತ್ರಸಂಬಂಧಿಗಳಪ್ಪ ಜನಂಗಳ್ ಮುಂತಿಟ್ಟು ಕುಱೆ ಕೊಳಲ್ತಕ್ಕುದೆಂದು

ನುಡಿದೊಡಂಬಡಿಸಿ ದಿವ್ಯ ದೇವತೆಗಳನೆ ಬಾಂಧವಜನಮಾಗೊಡೆಯಳಂ ಮಹಾ ವಿಭೂತಿಯಿಂದಂ ಪಾಣಿಗ್ರಹಣಪುರಸ್ಸರಂ ಸಂಧ್ಯಾವಳಿಯಂ ಕುಮಾರಂಗೆ ಕೊಟ್ಟಳಿಂತನ್ಯೋನ್ಯ ಸಂಬಂಧದಿಂ ಗಾಂಧರ್ವವಿವಾಹ ಕಲ್ಯಾಣದೊಳ್ಕೂಡಿ ಸುಖದಿಂದಿರ್ಪ್ಪನ್ನೆಗಂ

ಇತ್ತ ಅಶನಿವೇಗಂ ತನ್ನ ಮಗಂ ಪಿರಿದು ಪೊೞ್ತು ಪೋಗಿ ತಡೆದನೆಂದು ಮಗನವಸ್ಥೆಯನಱಿದು ಬಾ ಎಂದವಳೋಕಿನಿ ವಿದ್ಯೆಯನಾರಯ್ಯಲಟ್ಟಿದೊಡಾ ವಿದ್ಯೆಯುಂ ಪಾರಾವಥರೂಪದಿಂದಾರಯ್ದು ಪೋಪುದಂ ಸಂಧ್ಯಾವಳಿಯಱಿದಿಂತೆಂದು ತನ್ನ ಭರ್ತಾರಂಗೆ ಪೇೞ್ಗುಂ ಸ್ವಾಮಿ ಎನ್ನ ತಂದೆ ವಿದ್ಯಾಧರನಾದವಾನುಂ ಪ್ರಚಂಡಂ ಮಹಾಬಲಪರಾಕ್ರಮಾನ್ವಿತಂ ವಜ್ರವೇಗನ ಸಾವನಱಿದಮೋಘಂ ನಿಮ್ಮ ಮೇಗೆ ಬರ್ಕ್ಕುಮದಱಿಂ ನೀಮಿ ಪ್ರಜ್ಞಪ್ತಿಯೆಂಬ ಮಹಾವಿದ್ಯೆಯಂ ಕೊಳ್ಳಿಮೆನೆ ಕುಮಾರಂ ನಕ್ಕು ಪ್ರಹಸಿತವದನನಾಗಿ ಖೇಚರರೆಂಬೆರಳೆಗಳಂ ನಿವಾರಿಸಲ್ಕೆನಗೆ ವಿದ್ಯೆಯುಂ ಬೇೞ್ಕುಮೆ ಎಂದೊಲ್ಲದಿರ್ದ್ದನ ಪಾದದ್ವಯಂಗಳ್ಗೆಱಗಿ ಪೊಡವಟ್ಟಮೋಘಂ ಕೊಳಲ್ವೇೞ್ಕುಮೆಂದು ಬಲಾತ್ಕಾರದಿಂ ವಿದ್ಯೆಯಂ ಕೊಟ್ಟೊಡಾ ಅವಸರದೊಳ್ ಮತ್ತಿತ್ತ ರಥನೂಪುರಚಕ್ರವಾಳ ಪುರಾಧಿಪತಿಯಪ್ಪ ಚಂದ್ರಯಶನೆಂಬ ವಿದ್ಯಾಧರಂಗಂ ವಿದ್ಯುದ್ವೇಗೆಯೆಂಬ ಮಹಾದೇವಿಗಂತಿರ್ವರ್ಗ್ಗ ಪುಟ್ಟಿದರ್ ಚಂದ್ರವೇಗನುಂ ಭಾನುವೇಗನುಂ ಎಂಬಮ್ಮರ್ಕ್ಕಳಾಗಿ ಇಂತಿಪ್ಪ ವಿಷಯ ಕಾಮ ಭೋಗಂಗಳನನುಭವಿಸುತ್ತಿರೆ ಮತ್ತೊಂದು ದಿವಸಂ ನೃಪತಿ ಸಂಸಾರ ವೈರಾಗ್ಯಮಾಗಿ ಚಂದ್ರವೇಗನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ಕಿಱಿಯಾತನಪ್ಪ ಭಾನುವೇಗಂಗೆ ಯುವರಾಜಪಟ್ಟಮಂ ಕಟ್ಟಿ ಗುಣಧಧರೆಂಬ ಚಾರಣರಿಸಿಯರ ಪಕ್ಕದೆ ಜೈನದೀಕ್ಷೆಯಂ ಕೈಕೊಂಡು ಪಲಕಾಲಂ ತಪಂಗೆಯ್ದು ಸಮ್ಮೇದ ಪರ್ವತದೊಳ್ ಮೋಕ್ಷಕ್ಕೆ ವೋದರ್ ಮತ್ತಾ ಚಂದ್ರವೇಗಂಗೆ ನೂರ್ವ್ವರ್ ಪೆಣ್ಗೂಸುಗಳಾದರವರ್ಗ್ಗಳತಿಶಯ ರೂಪ ಲಾವಣ್ಯಮನೊಡೆಯರ್ ಅವರನಶನಿವೇಗಂ ತನ್ನಂ ಮಗಂ ವಜ್ರವೇಗಂಗೆ ಅನವರತಂ ಪಾಗುಡಮಂ ಪೆರ್ಗ್ಗಡೆಗಳನಟ್ಟುತ್ತಿರ್ಕ್ಕುಂ ಮತ್ತಂ ಪೆಱರುಂ ವಿದ್ಯಾಧರರ್ಕ್ಕಳನವರತಂ ಕೂಸುಗಳಂ ಬೇಡಿಯುಟ್ಟುತ್ತಿರೆ ಆರ್ಗ್ಗಂ ಕುಡಲೊಲ್ಲದೆ ಮತ್ತೊಂದು ದಿವಸಂ ಮಕ್ಕಳನಾರ್ಗ್ಗೆ ಕುಡುವಮೆಂದು ದೈವಜ್ಞನಂ ಬೆಸಗೊಂಡೊಡಾತಂ ಇಂತೆಂದು ಪೇೞ್ದಂ ಮಾನಸ ಸರೋವರದೊಳ್ ಸಿತಯಕ್ಷನಂ ಯುದ್ಧದೊಳಾವೊಂ ಗೆಲ್ವೊಂ ಮತ್ತಶನಿವೇಗನ ಮಗಂ ವಜ್ರವೇಗನುಮಂ ಮುಷ್ಟಿ ಪ್ರಹಾರದಿಂ ಕೊಲ್ವೊಂ ಅಶನಿವೇಗನುಮಂ ಸಂಗ್ರಾಮದೊಳು ನಿಪಾತಿಸುವನಾವನೋರ್ವನಾತಂಗೆ ನಿಮ್ಮ ಮಕ್ಕಳಂ ಕುಡಿಮೆಂದು ದೇವಗುರುವೆಂಬ ನೈಮಿತ್ತಿಕಂ ಪೇೞ್ದಂ ಮತ್ತೆಯಾತನುಪದೇಶದಿಂದಂ ತಱಿಸಂದೊಂದೆ ಮನದೊನಾಗಿ ಸರ್ವಾಯುಧ ಸನ್ನದ್ಧನಾಗಿ ದಿವ್ಯರಥಂಬೆರಸು ಹರಿಶ್ಚಂದ್ರ ಚಂದ್ರಸೇನರ್ಕ್ಕಳೆಂಬ ಮಕ್ಕಳನಟ್ಟಿದೊಡವರ್ಗ್ಗಳುಂ ಬಂದು ಕುಮಾರಂಗೆಱಗಿ ಪೊಡೆವಟ್ಟು ಇಂತೆಂದರ್ ರಥನೂಪುರಚಕ್ರವಾಳಪುರೇಶ್ವರನಪ್ಪ ಚಂದ್ರವೇಗಂಗಂ ಮಣಿದೇವಿಗಂ ಪುಟ್ಟಿದೆವು ಹರಿಶ್ಚಂದ್ರಚಂದ್ರ ಸೇನರ್ಕ್ಕಳೆಮೆಂಬೆಮ್ಮಮ್ಮನ ಬೆಸದಿಂ ನಿಮ್ಮನೋಲಗಿಸಲ್ ಬಂದೆವೆಂದು ಪೇೞ್ದು ಸುಖ ಸಂಕಥಾ ವಿನೋದದಿನಿರ್ಪ್ಪನ್ನೆಗಂ

ಅವರ ಬೞಿಯನೆ ಸಹೋದರರ್ಕ್ಕಳಪ್ಪ ವಜ್ರವೇಗನುಂ ಭಾನುವೇಗನುಂ ತಮ್ಮ್ಮಳ್ಳ ಸಮಸ್ತ ಬಲಂಬೆರಸು ಕುಮಾರನಂ ಕೂಡಿದರ್ ಮತ್ತಿತ್ತಮಶನಿವೇಗಂ ತನ್ನ ಮಗನ ಕೞಿದ ವೃತ್ತಾಂತಮೆಲ್ಲಮನವಳೋಕಿನಿಯೆಂಬ ವಿದ್ಯೆ ಪೇೞೆ ಕೇಳ್ದಱಿದು ಮುಳಿದು ಗರ್ಜ್ಜಿಸಿ ಮಸಗಿ ಸಮಸ್ತ ಬಲಂಬೆರಸಿಂದ್ರನ ಮಱವೊಕ್ಕಡಮಮೋಘಂ ಕೊಲ್ವೆನೆಂದು ಮೇಲೆಟ್ಟಿಂದನಂ ಚಂದ್ರವೇಗಂ ಕಂಡು ಸನತ್ಕುಮಾರಂಗಿಂತೆದಂ ದೇವ ನಾನಾ ವಿಧಮಪ್ಪ ವಿದ್ಯಾಧರಯುದ್ಧಮಂ ನೀಂ ಕೆಮ್ಮನೆ ನೋಡುತ್ತಿರಾನೆ ಸಾಲ್ವೆನೆಂದು ಸಂಗ್ರಾಮಕ್ಕಭಿಮುಖನಾಗಿ ಕಾದಲ್ ತಗುಳ್ದನ್ ಇತ್ತ ಕುಮಾರನುಂ ಗಗನತಳದೊಳ್ ವಜ್ರಸಾರಮೆಂಬ ರಥಮನೇಱಿ ಛತ್ರ ಚಾಮರ ಪಿಂಛಾತಪತ್ರ ಪಾಳಿಧ್ವಜ ಪತಾಕಾದ್ಯನೇಕ ಮಹಾವಿಭೂತಿಯೊಳ್ ಕೂಡಿ ಸಂಗ್ರಾಮಮಂ ನೋಡುತ್ತಿರೆ ಮತ್ತಶನಿವೇಗಂ ಕುಮಾರನಂ ಕಂಡು ಕ್ರೋಧಾಗ್ನಿ ಪೆರ್ಚ್ಚಿ ಎನ್ನ ಮಗನಂ ಕೊಂದಾತನಂ ಬೇಗಂ ಮೃತ್ಯುರಾಜನಂ ಕಾಣ್ಬಂತಿರೆ ಮಾಡುವೆನೆಂದು ಮುಳಿದು ಮಸಗಿ ಬರ್ಪ್ಪನಂ ಕುಮಾರಂ ಕಂಡಾಗಳ್ ಬಾಣಾಸನ ಹಸ್ತನಾಗಿ ಅರ್ಧಚಂದ್ರಮೆಂಬ ಶರದಿಂದಾತನ ತಲೆಯಂ ಮೊಕ್ಕೆನೆವೋಗೆಚ್ಚಂ ಅದು ಜ್ವಲನ್ ಮಣಿಮಕುಟ ಕುಂಡಲಂಗಳಿಂದೊಪ್ಪುತ್ತಿರ್ದ್ದುದು ವಿದ್ಯುತ್ಕಪಾಳಂಬೊಲ್ ನೆಲದೊಳ್ ಬಿಟ್ಟಿತ್ತಾಗಳಾ ತಲೆಯಂ ಮಱುವಕ್ಕದವರ್ ಕಂಡು ಕೆಲರಂಜಿ ತ್ರಸ್ತಾಭಿಭೂತರಾಗಿ ಓಡಿದರ್ಕ್ಕೆಲರ್ ಶರಣು ಶರಣೆಂದು ಕುಮಾರನ ಕಾಲ್ಗೆಱಗಿ ಪುಲ್ಲಂ ಕರ್ಚ್ಚಿ ಪೊಡೆವಟ್ಟರ್ ಕುಮಾರನುಮಾಗಳಭಯ ಘೋಷಣೆಯಂ ಪೊಯ್ಸಿ ಅವರ್ಗ್ಗಭಯದಾನಮಂ ಕೊಟ್ಟನ್ ಆಗಳ್ ಚಂದ್ರವೇಗನುಂ ಸಂಗ್ರಾಮ ಭೂಮಿಯನರ್ಚ್ಚಿಸಿ ಮಹಾ ವಿಭೂತಿಯಿಂದಂ ಕುಮಾರನೊಡಗೊಂಡು ಪೋಗಿ ಪೊೞಲಂ ಪೊಕ್ಕು ಪ್ರಶಸ್ತ ದಿವಸ ವಾರ ನಕ್ಷತ್ರ ಹೋರಾಮುಹೂರ್ತ ಲಗ್ನದೊಳ್ ತನ್ನ ಮಕ್ಕಳ್ ಚಂದ್ರಮತಿ ಚಂದ್ರಶ್ರೀ ಚಂದ್ರಲೇಖೆ ಶಶಿಕಾಂತೆ ಮನೋಹಾರಿಣಿ ಹರಿಣಾಂಕೆ ಕಮಲಮುಖಿ ಪ್ರಿಯದರ್ಶನೆ ಎಂದಿವರ್ಮೊದಲಾಗೊಡೆಯ ನೂರ್ವರ್ ಕನ್ನೆಯರ್ಕ್ಕಳುಂ ಪ್ರಾಣಿಗ್ರಹಣ ಪುರಸ್ಸರಂ ಕುಮಾರಂಗೆ ಕೊಟ್ಟರ್ ಅಂತಾನೂರ್ವರ್ ಕನ್ನೆಯರ್ಕ್ಕಳುಂ ಮುನ್ನಿನ ಖೇಚರಿಯರ್ಕ್ಕಳುಂ ಪೆಱವುಮೆಂದಿವರೊಳ್ಕೂಡಿ ಕುಮಾರಂ ವಿದ್ಯಾಧರ ಶ್ರೇಣಿಯೊಳು ಸುಖಮನನುಭವಿಸುತ್ತಿರ್ಪನ್ನೆಗಂ ಮತ್ತೊಂದು ದಿವಸಂ ಚಂದ್ರವೇಗಂ ಸಿದ್ಧಕೂಟಕ್ಕೆ ವಂದನಾ ಭಕ್ತಿಗೆ ಪೋಗಿ ದೇವರನರ್ಚ್ಚಿಸಿ ಬಂದಿಸಿ ಸುಮಾಳಿಗಳೆಂಬವಧಿಜ್ಞಾನಿಗಳಪ್ಪ ಚಾರಣ ರಿಷಿಯರಂ ಗುರುಭಕ್ತಿಗೆಯ್ದು ಬಂದಿಸಿ ಧರ್ಮಮಂ ಕೇಳ್ದು ತದನಂತರಮಿಂತೆಂದಂ ಭಟಾರಾ ಸನತ್ಕುಮಾರಂಗಂ ಸಿತಯಂಕ್ಷಂಗಂ ವೈರಸಂಬಂಧಕ್ಕೆ ಕಾರಣಮೇನೆಂದು ಬೆಸಗೊಂಡೊಡೆ ಭಟಾರರುಂ ತತ್ಸಂಬಂಧಿಯಪ್ಪ ಕತೆಯನಿಂತೆಂದು ಪೇಳಲ್ ತೊಡಗಿದರ್

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಕಾಂಚಪುನೆಂಬುದು ಪೊೞಲದನಾಳ್ವೊಂ ಪ್ರತಿಮುಖನೆಂಬೊನರಸನಷ್ಟ ಶತಮಂತಃಪುರಕ್ಕಧಿಪನಾಗಿ ಕಾಲಂ ಸಲೆ ಮತ್ತಾ ಪೊೞಲೊಳ್ ನಾಗಚಂದ್ರನೆಂಬೊಂ ಸಾರ್ಥಾಧಿಪತಿಯಾತನ ಭಾರ್ಯೆ ವಿಷ್ಣುಶ್ರೀಯೆಂಬೊಳತ್ಯಂತ ರೂಪು ಲಾವಣ್ಯ ಸೌಭಾಗ್ಯಕಾಂತಿ

ಹಾವ ಭಾವ ವಿಳಾಸ ವಿಭ್ರಮಂಗಳಿಂ ಕೂಡಿದೊಳೊಂದು ದಿವಸಮರಸನುದ್ಯಾನವನಕ್ಕೆ ಪೋಗುತ್ತಂ ಪ್ರಾಸಾದ ತಳದೊಳಿರ್ದ್ದ ದೇವಾಂಗನಾ ಸನ್ನಿಭೆಯಂ ಕಂಡು ಕಾಮ ಶರಂಗಳಿಂ ಜರ್ಜ್ಜರಿತ ಹೃದಯನಾಗಿ ಮಂತ್ರ ಪ್ರಯೋಗದಿಂದಂ ವಿಷ್ಣುಶ್ರೀಯನೊಳಕೊಂಡಾಕೆಯುಮಮಾತಂಗಗ್ರವಲ್ಲಭೆಯಾಗಿ ಸಲ್ವೊಳಂ ಸಮಸ್ತಮಂತಃಪುರಮಾಕೆಗೆ ಮುಳಿಯುತ್ತಿರ್ಕ್ಕುಂ ಒಂದು ದಿವಸಂ ಸಾರ್ವಭೌಮನೆಂಬ ಪಟ್ಟವರ್ಧನ ಗಜಂ ಸೊಕ್ಕಿ ಮಸಗಿ ಕಟ್ಟುಗಳೆಲ್ಲಮಂ ಪಱಿದು ಹತ ವಿತತ ಕೋಳಾಹಳಮೆೞಿದು ಮಸಗಿ ಪೊೞಲೆಲ್ಲಮಂ ಕೊಲ್ವುದನರಸಂ ಕೇಳ್ದು ಆನೆಯಂ ಕಟ್ಟಿಸಲೆಂದು ಪೋದನ್ ಅನ್ನೆಗಮಿತ್ತನಿಬರುಮರಸಿಯರ್ಕ್ಕಳ್ ನೆರೆದು ವಿಷ ಪ್ರಯೋಗದಿಂದಂ ವಿಷ್ಣುಶ್ರೀಯಂ ಕೊಂದಾರುಮಱಿಯದಂತಿರೆ ಸ್ಮಶಾನದೊಳೀಡಾಡಿಸಿದರ್ ಅನ್ನೆಗಂ ಅರಸನಾನೆಯಂ ಕಟ್ಟಿಸಿ ಬಂದರಸಿಯಂ ಕಾಣದೆಲ್ಲಿದ್ದೊಳೆಂದು ಬೆಸಗೊಂಡೊಡೆ ಸತ್ತಳೆಂಬ ಮಾತಂ ಕೇಳ್ದು ಮೂರ್ಛಾಗತನಾಗಿ ನೀಡಱಿಂದೆೞ್ಚತ್ತು ಮಹಾದುಃಖಂಗೆಯ್ದು ಸ್ಮಶಾನಕ್ಕಾಕೆಯ ದೇಹಮಂ ನೋಡಲೆಂದು ಪೋಗಿಯದಱ ಭೀಭತ್ಸತ್ವಮುಮಂ ವಿರೂಪತ್ವಮುಮಂ ಕಂಡಾದಮಾನುಂ ಪೇಸಿ ಶರೀರ ವೈರಾಗ್ಯಮನೊಡೆಯನಾಗಿಯನ್ಯಾಯದಿಂ ಪರಸ್ತ್ರೀ ಹರಣಂಗೆಯ್ದೆಂ ಮಹಾಪಾತಕನೆನೆಂದು ತನ್ನನಾದಮಾನುಂ ನಿಂದಿಸಿ ವಿಮಲವಾಹನನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ಸುಬ್ರತರೆಂಬಾಚಾರ್ಯರ ಪಕ್ಕದೆ ದೀಕ್ಷೆಯಂ ಕೈಕೊಂಡು ಪಲಕಾಲಂ ತಪಂಗೆಯ್ದು ಸಮಾಧಿ ಮರಣದಿಂದಂ ಮುಡಿಪಿ ಪ್ರಾಣತಕಲ್ಪದೊಳಿರ್ಪ್ಪತ್ತು ಸಾಗರೋಪಮಾಯುಷ್ಯ ಸ್ಥಿತಿಯನೊಡೆಯೊಂ ಪ್ರತೀಂದ್ರನಾಗಿ ಪುಟ್ಟಿ ದೇವಲೋಕದ ದಿವ್ಯ ಸುಖಮಂ ಪಲಕಾಲಮನುಭವಿಸಿ ಬಂದಿಲ್ಲಿ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಕನಕಪುರಮೆಂಬುದು ಪೊೞಲದನಾಳ್ವೊಂ ಹರಿವಾಹನನೆಂಬನರಸಂ ಮತ್ತಮಾ ಪೊೞಲೊಳ್ ರಾಜ ಶ್ರೇಷ್ಠಿ ಅರ್ಹದ್ದಾಸನೆಂಬೊನಾತನ ಭಾರ್ಯೆ ಜಿನದತ್ತೆಯೆಂಬೊಳ್ ಇರ್ವ್ವರ್ಗ್ಗಂ ಮಗಂ ಜಿನವರ್ಮನೆಂಬೊನಾಗಿ ಪುಟ್ಟಿ ರೂಪು ಲಾವಣ್ಯ ಸೌಭಾಗ್ಯ ಕಾಂತಿತ್ವದಿಂದಾದಮಾನುಂ ನೆಗೆದೊನಾಗಿ ಇಂತು ಕಾಲಂ ಸಲೆ ಅರ್ಹದ್ದಾಸಂಗೇನಾನುಮೊಂದು ಕಾರಣದಿಂದಂ ವೈರಾಗ್ಯಮಾಗಿ ಜಿನವರ್ಮಂಗೆ ರಾಜಶ್ರೇಷ್ಠಿ ಪದಮಂ ಕೊಟ್ಟು ಶಿವಗುಪ್ತಾಚಾರ್ಯರ ಪಕ್ಕದೆ ದೀಕ್ಷೆಯಂ ಕೈಕೊಂಡು ಪಲಕಾಲಂ ತಪಂಗೆಯ್ದು ಮೋಕ್ಷಕ್ಕೆ ಪೋದಂ ಮತ್ತಿತ್ತ ಜಿನವರ್ಮನುಂ ಪಲವುಂ ಜಿನಾಲಯಂಗಳಂ ಮಾಡಿಸಿ ದಾನಪೂಜೆ ಶೀಲಮುಪವಾಸಮೆಂದಿಂತು ಚತುರ್ವಿಧಮಪ್ಪ ಶ್ರಾವಕ ಧರ್ಮದೊಳಗಗ್ಗಳಮಾಗಿ ನೆಗೞುತ್ತಮಿಂತು ಕಾಲಂ ಸಲೆ

ಮತ್ತಾ ಮುನ್ನಿನ ಭವದ ನಾಗಚಂದ್ರನೆಂಬ ಸಾರ್ಥಾಧಿಪತಿ ವಿಷ್ಣುಶ್ರೀ ಎಂಬ ತನ್ನ ಭಾರ್ಯೆಯ ವಿಯೋಗಂ ಕಾರಣಮಾಗಿ ಆರ್ತಧ್ಯಾನದಿಂ ಸತ್ತು ತಿರ್ಯಙ್ನರಕಾದಿಗಳೊಳ್ ಪಲಕಾಲಂ ತೊೞಲ್ದೀ ಭರತಕ್ಷೇತ್ರದೊಳ್ ಕಪಿಲನೆಂಬ ಪಾರ್ವ್ವಂಗಂ ಗಂಗೆಯೆಂಬ ಪಾರ್ವ್ವಂತಿಗಂ ಭಾರದ್ವಾಜನೆಂಬ ಮಗನಾಗಿ ಪುಟ್ಟಿ ಕನಕದಂಡಿಯೆಂಬ ಪರಿವ್ರಾಜಕಂಗೆ

ಶಿಷ್ಯನಾಗಿ ನಾನಾ ವಿಧ ದೇಶಂಗಳಂ ವಿಹಾರಿಸುತ್ತಂ ಕನಕಪುರಕ್ಕೆ ವಂದು ಮಾಸೋಪವಾಸಂಗಳಂ ಗೆಯ್ಯುತ್ತುಂ ಮಹಾ ತಪಸ್ವಿಯಾಗಿ ನೆಗಟುತ್ತಿರೆ ತತ್ಪುರಾಧಿಪಂ ಹರಿವಾಹನನೆಂಬರಸಂ ಕಂಡಾದವಾನುಂ ಆ ತಪಸ್ವಿಗೆ ಭಕ್ತನಾಗಿ ಬೆಸಕೆಯ್ಯೆ ಕಾಲಂ ಸಲೆ ಮತ್ತೊಂದು ದಿವಸಮರಸನೊಡನೆ ಜಿನವರ್ಮನಾ ಪರಿಬ್ರಾಜಕನ ನಿವಾಸಕ್ಕೆ ಪೋದೊಡೆ ಜಿನವರ್ಮನಂ ಕಂಡು ಪೂರ್ವ ವೈರಸಂಬಂಧದಿಂದಾದ ಕ್ರೋಧಾಗ್ನಿ ಪೆರ್ಚ್ಚಿ ಮಱುಗುತ್ತಿರ್ದ ಮನಮನೊಡೆಯ ತಪಸ್ವಿಯನರಸನಿಂತೆಂದಂ ನೀವೆಮ್ಮ ಮನೆಯೊಳ್ ಪಾರಿಸಲ್ವೇಟ್ಟುದೆಂದು ಪ್ರಾರ್ಥಿಸಿದೊಡಾತನಿಂತೆಂದನ್ ಒಂದು ಪಾಂಗಿನೊಳು ನಿಮ್ಮ ಮನೆಯೊಳ್ ಪಾರಿಸುವೆಂ ಈ ಜಿನವರ್ಮನ ಬೆನ್ನೊಳಡಿಯಿಲ್ಲದ ತಳಿಗೆಯನಿಟ್ಟು ಬಿಸಿಯ ತುಯ್ಯಲನುಣ್ಬುದೆನಗಟ್ಟಿಯೀ ಪಾಂಗಿನೊಳೆನ್ನನೂಡಲಾರ್ಪೊಡುಣ್ಬೆನಲ್ಲದಾಗಳುಣ್ಣೆನೆಂದು ಪೇಟ್ದೊಡೆ ಕೇಳ್ದು ಅಚ್ಚಿಗನಾದರಸನಂ ಜಿನವರ್ಮ್ಮಂ ಕಂಡಿಂತೆಂದಂ ದೇವಾ ತಪಸ್ವಿಗಾವ ಪಾಂಗಿನೊಳ್ ಮೆಚ್ಚು ಮೆಚ್ಚಿದ ಪಾಂಗಿನೊಳುಣ್ಗೆಂದೊಡಂಬಟ್ಟನಾಗಳಾ ಗರ್ಭಸುಖಿಯ ಬೆನ್ನೊಳ್ ಪಿರಿಯ ಪರಿಯಾಣಮನಿಟ್ಟು ಅದಂ ತೆಕ್ಕನೆತೀವಿ ಬಡ್ಡಿಸಿದೊಡೆ ಕುದಿಯುತ್ತಿರ್ದ್ದ ತುಯ್ಯಲು ತಣ್ಣಿತ್ತಾಗಿಯಾಱುವನ್ನಂ ಪಾರುತ್ತಿರ್ದ್ದು ನೀಡುಂ ಬೇಗಮುಂಡು ಸಮೆದ ಬಟಿಕ್ಕೆ ತಳಿಗೆಯನೆತ್ತಿದೊಡಾ ತಳಿಗೆಯೊಡನೆ ಬೆನ್ನ ತೊವಲೆಲ್ಲಮೆರ್ದ್ದು ಪೋದುದನರಸಂ ಕಂಡು ಈತಂ ತಪಸ್ವಿಯಲ್ಲಂ ರಾಕ್ಷಸಂ ಪಂಚಮಹಾಪಾತಕನನೀ ಪೊಟಲೊಳಿರಲೀಯದಟ್ಟಿ ಕಳೆಯಿಮೆಂದು ನೃಪತಿ ಮುಳಿದೊಡೆ ಜಿನವರ್ಮಂ ತಪಸ್ವಿಗೆ ಮುಳಿಯಲ್ವೇಡೆಂದು ಬಾರಿಸಿ ಈತಂಗೇನುಂ ದೋಷಮಿಲ್ಲೆನ್ನ ಪೂರ್ವಕೃತ ಫಲವಿಪಾಕಮೆಂದು ನೃಪತಿಗೆ ಪೇಟ್ದು ಪರಿಬ್ರಾಜಕಂಗೆ ನಿಃಶಲ್ಯಂಗೆಯ್ದರಸನುಮಾ ಸ್ವಜನ ಪರಿಜನ ಬಂಧುವರ್ಗ್ಗಮುಮಂ ಬಿಡಿಸಿ ಶ್ರೀವರ್ಮರೆಂಬಾಚಾರ್ಯರ ಪಕ್ಕದೆ ದೀಕ್ಷೆಯಂ ಕೈಕೊಂಡು ಮಹಿಷಗಿರಿ ಎಂಬ ಪರ್ವತದೊಳೀ ಪುಣ್ಣು ತೀರ್ವನ್ನೆಗಂ ಕೈಯನೆತ್ತಿ ಕೊಳ್ಳೆನೆಂದು ಕಾಯೋತ್ಸರ್ಗದಿಂ ನಿಂದೊನಂ ಗೃಧ್ರವಾಯಸಾದಿಗಳ್ ಪುಣ್ಣಂ ತೋಡಿ ತಿನೆ ಮೇರು ಪರ್ವತಂಬೊಲಚಳಿತ ಧೈರ್ಯನಾಗೊಂದು ತಿಂಗಳ್ವರೆಗಂ ಸೈರಿಸಿ ಸಮಾಧಿ ಮರಣದಿಂದಂ ಮುಡಿಪಿ ಅಚ್ಯುತಕಲ್ಪದೊಳಿರ್ಪ್ಪತ್ತೆರಡು ಸಾಗರೋಪಮಾಯುಷ್ಯ ಸ್ಥಿತಿಯೊಡೆಯೊನಚ್ಯುತೇಂದ್ರನಾಗಿ ಪುಟ್ಟಿಯಲ್ಲಿಯ ದೇವಲೋಕದ ದಿವ್ಯ ಸುಖಮಂ ಪಲಕಾಲಮನುಭವಿಸಿ ಬಂದಿಲ್ಲಿ ಸನತ್ಕುಮಾರನಾದನ್ ಆ ಪರಿಬ್ರಾಜಕನುಮಾ ಆಚ್ಯುತೇಂದ್ರಂಗೆ ವಾಹನದೇವನಾದೋನಲ್ಲಿಂ ಬಟ್ಚಿ ಬಂದಿಲ್ಲಿ ಚತುರ್ಗತಿ ಸಂಸಾರದೊಳ್ ನೀಡುಂ ತಾಪಸಾಶ್ರಮದೊಳ್ ವಶಿಷ್ಠನೆಂಬ ತಾಪಸಂಗಂ ಘೂಕೆಯೆಂಬ ತಾಪಸಿಗಂ ಜಠರನೊಂಬೊಂ ಮಗನಾಗಿ ಪುಟ್ಟಿ ತಾಪಸ ತಪಮಂ ಕೈಕೊಂಡು ನೆಗಟ್ದು ಮಡಿದು ಸಿತಕ್ಷಯನಾದನೆಂದಿಂತಿರ್ವ್ವರ ಪೂರ್ವಭವ ವೈರಸಂಬಂಧಿಯಪ್ಪ ಕಥೆಯಂ ಸವಿಸ್ತರಂ ಸುಮಾಳಿಗಳೆಂಬವಧಿಜ್ಞಾನಿಗಳಪ್ಪ ಚಾರಣರಿಷಿಯರ್ ಪೇಟೆ ಎಮ್ಮ ಸ್ವಾಮಿಯಪ್ಪಂ ಖೇಚರೇಂದ್ರಂ ಕೇಳ್ದಾದಪ್ಪಾನುಂ ಸಂತುಷ್ಟಚಿತ್ತನಾಗಿ ಭಟಾರರಂ ಬಂದಿಸಿ ತನ್ನ ಪೊಟಲ್ಗೆ ಪೋದನೆಂದಿಂತೆಂದು ಕಥಾಸಂಬಂಧಮೆಲ್ಲಮಂ ಕಮಳಮತಿಯೆಂಬ ಖೇಚರವಿಳಾಸಿನಿ

ಸನತ್ಕುಮಾರಂ ಪೇೞವೇೞ್ದೊಡೆ ಮಹೇಂದ್ರಸಿಂಹಂಗೆ ಪೇೞ್ದೊಡೆ ಆ ಅವಸರದೊಳ್ ತೊಳಲ್ದಂಜನಗಿರಿಯೆಂಬ ಪರ್ವತದ ತಟದೊಳ್ ಕುವಾರನುಂ ನಿದ್ರಾಸುಖ ವಿಮುಕ್ತನಾದೊಡಾತನ ಸಮೀಪಕ್ಕೆ ಮಹೇಂದ್ರಸಿಂಹಂ ಪೋಗಿ ಇಂತೆಂದಂ ನಿನ್ನ ವಿಯೋಗದೊಳಪ್ಪ ದುಃಖದಿಂದಂ ವಿಶ್ವಸೇನ ಮಹಾರಾಜನುಂ ಸಹದೇವಿ ಮೊದಲಾದೊಡೆಯವರ್ಗ್ಗಳ್ಗೆಲ್ಲಂ ಪ್ರಾಣಸಂದೇಹಮಾಗಿರ್ಕ್ಕುಂ ಅದಱಿಂ ನಮ್ಮ ಪೊೞಲ್ಗೆ ಪೋಪಮೆಂದು ಪೇೞ್ದೊಡಾತನುಮಂತೆ ಗೆಯ್ವೆನೆಂದು ತಮ್ಮ ಮಾವಂಗಳಂ ಬರಿಸಿ ವಿಚಿತ್ರಮಪ್ಪ ರಥ ತುರಂಗ ಗಜ ಗರುಡ ಕಳಹಂಸ ಮಯೂರ ಮಕರ ಸಿಂಹ ವಿಮಾನಾಧಿರೂಢರ್ಕ್ಕಳಪ್ಪ ವಿದ್ಯಾಧರರ್ಕ್ಕಳುಮಷ್ಟ ಸಹಸ್ರಸಂಖ್ಯಾ ಪ್ರಮಾಣಮರಸಿಯರ್ಕ್ಕಳುಂ ಬೆರಸು ಮಹಾವಿಭೂತಿಯಿಂದಂ ಬಂದು ಹಸ್ತಿನಾಗಪುರಮಂ ಪೊಕ್ಕು ಅನಿಬರುಂ ವಿಶ್ವಸೇನ ಮಹಾರಾಜಂಗಂ ಸಹದೇವಿ ಮಹಾದೇವಿಗಂ ಸಾಷ್ಟಾಂಗಮೆಱಗಿ ಪೊಡೆವಟ್ಟವರಾಶೀರ್ವಚನ ಶತಸಹಸ್ರಂಗಳನಾಂತುಕೊಂಡು ಸುಖದಿಂದಿರೆ ಸನತ್ಕುಮಾರಂಗೆ ಚಕ್ರಂ ಪುಟ್ಟಿ ಸಕಲ ಚಕ್ರವರ್ತಿಯಾಗಿ ಭೋಗೋಪಭೋಗಂಗಳೆಂಬ ಮಹಾ ಸಮುದ್ರದೊಳ್ ಪಲಕಾಲಂ ಕ್ರೀಡಿಸುತ್ತಿರ್ಪನ್ನೆಗಂ

ಮತ್ತೊಂದು ದಿವಸಂ ಸೌಧರ್ಮ ಕಲ್ಪದೊಳ್ ಸೌಧರ್ಮೇಂದ್ರಂ ತನ್ನಮರಸಭೆಯ ನಡುವೆ ಸಿಂಹಾಸನಮಸ್ತಕಸ್ಥಿತಂ ದೇವರ್ಕ್ಕಳಿಂದಂ ಪರಿವೇಷ್ಟಿತನಾಗಿ ಸೋರಾಮಣೆಯೆಂಬ ನಾಟಕಮಂ ನೋಡುತ್ತಿರ್ಪನ್ನೆಗಂ ಈಶಾನಕಲ್ಪದಿಂದಂ ಸಹೋತ್ಪನ್ನ ಸಂಗಮದೇವಂ ಬಂದು ಸೌಧರ್ಮೇಂದ್ರನ ಸಭೆಯನವಯವದಿಂದೆ ಪೊಕ್ಕಿರ್ದಾಗಳಾ ಸಭೆಯೊಳಿರ್ದ ದೇವರ್ಕ್ಕಳ ರೂಪುಂ ತೇಜಮುಂ ಲಾವಣ್ಯಮುಂ ಮಾಸಿ ತನ್ನ ತೇಜಮೆಯಗ್ಗಳಮಾಗಿರ್ದ್ದಂತು ಚಂದ್ರನುದಯಂ ಗೆಯ್ದಾಗಳ್ ಗ್ರಹ ನಕ್ಷತ್ರ ತಾರೆಗಳ ತೇಜಂ ಕುಂದುಗುಮಂತೆಲ್ಲರ ತೇಜಮುಮಂ ಕುಂದಿಸಿ ತಾನೆಯಗ್ಗಳಮಾಗಿ ಸಭೆಯೊಳಿರ್ದ್ದೊಡೆ ದೇವರ್ಕ್ಕಳೆಲ್ಲಂ ವಿಸ್ಮಯಂಬಟ್ಟು ನೋಡಿ ಸೌಧರ್ಮ್ಮೇಂದ್ರನನಿಂತೆಂದು ಬೆಸಗೊಂಡರ್ ಸ್ವಾಮಿ ಈ ಸಂಗಮನೆಂಬ ದೇವನತಿಶಯಮಪ್ಪ ರೂಪು ಲಾವಣ್ಯಮುಂ ತೇಜಮುಂ ದ್ವಾದಶಾದಿತ್ಯರ್ಕ್ಕಳುದಯಂ ಗೆಯ್ದಂತೆ ಬೆಳಗಿದಪ್ಪುದೇಕಾರಣದಿಂದಾವ ಪುಣ್ಯದಿಂದಾದುದೆಂದು ಬೆಸಗೊಂಡೊಡಿಂತೆಂದು ಸೌಧರ್ಮೇಂದ್ರಂ ಪೇೞಲ್ ತೊಡಗಿದನ್ ಈತಂ ಮುನ್ನಿನ ಭವದೊಳೀ ಜಂಬೂದ್ವೀಪದ ಭರತದ ಪೂರ್ವ ವಿದೇಹದೊಳ್ ಸೀತೆಯೆಂಬ ತೊಱೆಯ ಬಡಗಣ ದೆಸೆಯೊಳ್ ಪುಷ್ಕಳಾವತಿಯೆಂಬುದು ನಾಡಲ್ಲಿ ಪುಂಡರೀಕಿಣಿಯೆಂಬುದು ಪೊೞಲದನಾಳ್ವೊಂ ಸಕಳಚಕ್ರವರ್ತಿ ವಿಮಳವಾಹನನೆಂಬನರಸನಾತನ ಮಹಾದೇವಿ ವಿಮಳಮತಿಯೆಂಬೊಳಾ ಇರ್ವ್ವರ್ಗ್ಗಂ ಪುಟ್ಟಿದೊಂ ಮಗಂ ಕ್ಷೀರಕುಮಾರನೆಂಬೊನಾತಂ ವೈರಾಗ್ಯಮನೊಡೆಯನಾಗಿ ತಪಂಬಡಲ್ಕೆಂದು ಬಗೆದೊಡೆ ತಾಯ್ ತಪಃ ಬಡಲೀಯದೆನಿತಾನುಂ ತೆಱದಿಂ ನುಡಿದು ತಗುಳ್ದೊಡೆ ತಾಯ ವಚನಮನತಿಕ್ರಮಿಸಲಾಱದೆ ಮನೆಯೊಳಿರ್ದಂತೆ ಬ್ರಹ್ಮಚರ್ಯಂ ಮೊದಲಾಗೊಡೆಯ ಬ್ರಂತಗಳಂ ಪರಿಪಾಲಿಸಿಯುಂ ಭಾವಿಸಿ ಆಚಾಮ್ಲ

ವರ್ಧಮಾನವೆಂಬ ನೋಂಪಿಯಂ ಪನ್ನೆರಡು ವರ್ಷಬರೆಗಂ ನೋಂತು ಸಮಾಧಿಮರಣದಿಂದಂ ಮುಡಿಪಿ ಇಂತಪ್ಪ ರೂಪುಂ ತೇಜಮುಂ ಲಾವಣ್ಯಮುಮದಱಿಂದೀತಂಗಾದುದೆಂದು ಸೌಧರ್ಮೇಂದ್ರಂ ಪೇೞ್ದೊಡೆ ಮತ್ತಂ ದೇವರ್ಕಳಿಂತೆಂದು ಬೆಸಗೊಂಡರ್ ಸ್ವಾಮಿ ಈತನಂತಪ್ಪ ರೂಪುಂ ತೇಜಮುಂ ಲಾವಣ್ಯಮುಮನೊಡೆಯರ್ ಪೆಱರಾರಾನುಮೊಳರೇ ಎಂದು ಬೆಸಗೊಂಡೊಡೆ ಸೌಧರ್ಮೇಂದ್ರನೆಂದನ್ ಒಳನ್ ಹಸ್ತಿನಾಗಪುರದೊಳು ಕುರುವಂಶದಾತಂ ಸನತ್ಕುಮಾರನೆಂಬೊಂ ಸಕಲ ಚಕ್ರವರ್ತಿಯಾತಂಗೆ ದೇವರ್ಕಳ ರೂಪುಂ ಲಾವಣ್ಯಮುಂ ತೇಜಮುಮನೊಡೆಯನಾದಮಾನುಂ ಅಗ್ಗಳಮೆಂದು ಪೇೞ್ದೊಡಿಂದ್ರನ ಮಾತಂ ನಂಬದೆ ವಿಜಯ ವೈಜಯಂತರೆಂಬರಿರ್ವ್ವರುಂ ದೇವರ್ಕಳ್ ಪಾರ್ವ್ವರ ರೂಪಂ ಕೈಕೊಂಡು ಹಸ್ತಿನಾಗಪುರಕ್ಕೆ ಸನತ್ಕುಮಾರ ಚಕ್ರವರ್ತಿಯ ರೂಪಂ ನೋಡಲ್ಕೆಂದು ಬಂದು ಬಾಗಿಲೊಳಿರ್ದ್ದ ಪಡಿಯರಱನೆಂದರ್ ನಿಮ್ಮರಸಂಗಿಂತೆಂದು ಪೋಗಿ ಪೇೞಿಂ ಗೆಂಟಱಿಂ ಬಂದೆವುಂ ನಿಮ್ಮ ರೂಪನಱ್ತಿವಟ್ಟು ನೋಡಲ್ಕೆಂದೊಡವರುಂ ಪೋಗಿ ತಮ್ಮರಸಂಗಱಿಪಿದೊಡೆ ಅರಸನನುಮತದಿಂದರಮನೆಯಂ ಪೊಕ್ಕರಸನ ಸಾರೆ ಪೋಗಿ ನೋೞ್ಪಾಗಳರಸಂ ಸುಗಂಧ ತೈಲದಿಂದಂ ಮೆಯ್ಯನಭ್ಯಂಗನಂ ಗೆಯ್ದು ಮಜ್ಜನಂ ಬುಗಲೆಂದಿರ್ದ್ದವಸರದೊಳ್ ದೇವರ್ಕಳ್ ಸನತ್ಕುಮಾರ ಚಕ್ರವರ್ತಿಯ ರೂಪಂ ವಾಳಾಗ್ರದಿಂ ತೊಟ್ಟು ನಖಾಗ್ರಂ ಬರೆಗಂ ನಖಾಗ್ರದಿಂ ತೊಟ್ಟು ವಾಳಾಗ್ರಂ ಬರೆಗಂ ಏಱಿಯುಮಿೞಿಯೆಯುಂ ನೀಡುಂ ಭಾವಿಸಿ ನೋಡಿ ಚೋದ್ಯಂ ಬಟ್ಟು ಇಂತು ರೂಪುಂ ತೇಜಮುಂ ಗಾಡಿಯುಂ ಯೌವನಮುಂ ದೇವರ್ಕಳ್ಗಮಿಲ್ಲೆಂದು ಚಕ್ರವರ್ತಿಯ ರೂಪಂ ಪೊಗೞ್ದೊಡರಸನೆಂದನ್ ನೀಮಾರ್ಗ್ಗೇನೆಂಬಿರೆಲ್ಲಿಂ ಬಂದಿರೆಂದು ಬೆಸಗೊಂಡೊಡವರೆಂದರ್ ದೇವಲೋಕದಿಂ ಬಂದೆಮುಂ ಸೌಧರ್ಮಕಲ್ಪದೊಳ್ ದೇವರ್ಕಳ ಸಭೆಯ ನಡುವೆ ಸೌಧರ್ಮೇಂದ್ರಂ ನಿಮ್ಮ ರೂಪಮನಾದಮಾನುಂ ನೆಚ್ಚಿ ಬಣ್ಣಿಸಿದೊಡಿಂದ್ರನ ಮಾತಂ ನಂಬದೆ ನಿನ್ನ ನೋಡಲ್ಬಂದೆಂ ಇಂದ್ರನ ಬ್ಯಾವರ್ಣಿಸುದುದರ್ಕ್ಕಗ್ಗಳಮೆ ನಿಮ್ಮ ರೂಪುಂ ತೇಜಮುಂ ಜವ್ವನಮುಂ ಲಾವಣ್ಯಮುಮಂ ಕಂಡೆಮೆಂದು ಪೇೞ್ದಾವಿನ್ನೆಮ್ಮ ದೇವಲೋಕಕ್ಕೆ ಪೋಪೆಮೆಂದೊಡೆ ಅರಸಂ ಮನಂ ಮೆಚ್ಚಿ ತನ್ನರೂಪಂ ನಚ್ಚಿಕಿಱಿದು ಬೇಗಂ ಮಾಣೆಮಭ್ಯಂಗನಂ ಗೆಯ್ದ ರೂಪಂ ಕಂಡಿರಿಂ ಮಜ್ಜನಂಪೊಕ್ಕು ಪಸದನಂಗೊಂಡಿರ್ದ್ದ ರೂಪಂ ನೋಡಿ ಪೋಗಿಂ ಎಂದರಸಂ ನುಡಿದೊಡಂತೆ ಗೆಯ್ವೆಮೆಂದು ದೇವರ್ಕಳಿರ್ದ್ದೊಡೆ ಅರಸನುಂ ಮಜ್ಜನಂ ಪೊಕ್ಕು ಬೇಗಂ ಸರ್ವಾಭರಣ ವಿಭೂಷಿತನಾಗಿಯಾಸ್ಥಾನ ಮಂಟಪದೊಳ್ ಸಿಂಹಾಸನ ಮಸ್ತಕಸ್ಥಿತನಾಗಿ ಸಾಮಂತ ಮಹಾಸಾಮಂತರುಂ ಮೂವತ್ತಿರ್ಚ್ಛಾಸಿರರ್ವ್ವರ್ ಮಕುಟ ಬದ್ಧರ್ಕಳುಂ ವಿದ್ಯಾಧರರ್ಕಳುಂ ಯಕ್ಷದೇವರ್ಕಳುಂ ಬಳಸಿಯುಮಿರ್ದ್ದೋಲಗಿಸೆ ಮೂವತ್ತೆರಡುಂ ಚಾಮರಂಗಳಿಕ್ಕೆ ಸೌಧರ್ಮೇಂದ್ರ ನಿರ್ಪ್ಪಂತಿರ್ದ್ದು ದೇವರ್ಕಳ್ಗೆ ಬೞಿಯನಟ್ಟಿ ಬರಿಸಿ ನೋಡಿಮಿನ್ನೆನ್ನ ರೂಪನೆಂದು ತನ್ನಂ ತೋಱಿದೊಡೆ ದೇವರ್ಕಳ್ ನೋಡಿ ವಿಸ್ಮಯಂ ಬಟ್ಟಿದೇಂ ಚೋದ್ಯಮೋ

ಶ್ಲೋಕ ॥ ಅನೇಕ ರಾಂಗಸಂಕೀರ್ಣಂ ಘನ ಲಗ್ನಮಪಿ ಕ್ಷಣಾತ್
ಮಾನುಷ ಯೌವನಂ ಕಷ್ಟಂ ನಶ್ಯತೀಂದ್ರಧನುರ್ಯಥಾ ॥

ಎಂಬೀ ಕ್ಷಣಮಾತ್ರದೊಳೆ ಮನುಷ್ಯರ ರೂಪುಂ ಗಾಡಿಯುಂ ಚೆಲ್ವುಂ ತೇಜಮುಂ ಯೌವನಮುಂ ಕುಂದಿತ್ತೆಂದೊಡೆ ಚಕ್ರವರ್ತಿಯೆಂದನ್ ಎನ್ನ ರೂಪಂ ಮುನ್ನೆ ನೀಮುಂ ಪೊಗೞ್ದೀಗಳೇಕೆ ಪಳಿದಪ್ಪಿರೆನೆ ದೇವರೆಂದರ್ ಕೇಳ್ ಅರಸಾ ದೇವರ್ಕ್ಕಳ ತೇಜಮುಂ ಲಾವಣ್ಯಮುಂ ಪುಟ್ಟಿದ ಪ್ರಥಮ ಸಮಯದಿಂ ತೊಟ್ಟು ಪೆರ್ಚ್ಚುತ್ತಂ ಪೋಕುಮಾಯುಷ್ಯದ ನಡುವರೆಗಂ ಅಲ್ಲಿಂದತ್ತ ಕುಂದುತ್ತಂ ಪೋಕುಮಾಯುಷ್ಯಾಂತಂಬರೆಗಂ ಮತ್ತಾಮುಂ ನಿಮ್ಮ ರೂಪ ಯೌವನಂ ಭರದೊಳಿರ್ದ್ದುದುಮಂ ಕಂಡೆವು ಈಗಳಾಯುಷ್ಯಮುಂ ತೇಜಮುಂ ನಿಮ್ಮ ರೂಪುಂ ಲಾವಣ್ಯಮುಂ ಯೌವನಮುಂ ಕಿಱಿದು ಕುಂದಿದುದಂ ಕಂಡೆಮೆನೆ ಚಕ್ರವರ್ತಿಯೆಂದಂ ನೀವೆಂತಱಿದಿರಿ ಎಂದು ಬೆಸಗೊಂಡೊಡೆ ದೇವರ್ಕ್ಕಳೆಂದರ್ ಎಮಗವಧಿಜ್ಞಾನಮುಂಟಪ್ಪುದಱಿಂದಱಿದೆಮುಂ ಮನುಷ್ಯರ್ಗ್ಗಱಿಯಲಾಗದೆಂದೊಂದು ದೋಣಿಕೊಂಡಮಂ ತರಿಸಿ ನೀರಂ ತೆಕ್ಕನೆ ತೀವಿಯಿದಱೊಳಗೆ ಚಮರಿಗೆಯನದ್ದಿ ತೆಗೆದು ಬಳಸಿಯುಂ ಬೀಸಿದಾಗಳ್ ಸಭೆಯೊಳಿರ್ದ ಮಾನಸರ ಮೇಗೆಲ್ಲಂ ನೀರ್ ಸೂಸಿ ಪನಿತುದಂ ತೋಱಿ ದೇವರೆಂದರ್ ಪೇೞಿಮೀ ಚಮರಿಗೆಯೊಳ್ ತಗುಳ್ದು ಬಿಯಮಾದನಿತ್ತು ನೀರಂ ಕೊಂಡದೊಳ್ ಕುಂದಿದುದಂ ತೋಱಿಮೆಂದೊಡೆ ಅವರುಮಱಿಯದಿರ್ದ್ದೊಡೆಂತಿದಂ ನಿಮಗಱಿಯಲಾಗದಂತೆ ಮಾನಸರಾಯುಷ್ಯಮುಂ ತೇಜಮುಂ ಲಾವಣ್ಯಮುಂ ಯೌವನಮುಂ ಪ್ರಾಯುವಮುಂ ಪ್ರತಿಸಮಯಂ ಕುಂದುತ್ತಿರ್ದ್ದಾವೀಚಿಯೆಂಬ ಮರಣಮುಮಂ ನಿಮಗಱಿಯಲಾಗದೆಂದು ಪೇೞ್ದು ಹೇತು ದೃಷ್ಟಾಂತಗಳಿಂದಂ ಪ್ರತ್ಯಕ್ಷಮಂ ತೋಱಿ ಚಕ್ರವರ್ತಿಯ ನಂಬೆ ನುಡಿದು ದೇವರ್ಕ್ಕಳ್ ತಮ್ಮ ಸೌಧರ್ಮ ಕಲ್ಪಕ್ಕೆ ಪೋದರ್ ಮತ್ತಿತ್ತ ಸನತ್ಕುಮಾರ ಚಕ್ರವರ್ತಿಗಮದುವೆ ನಿರ್ಬೇಗ ಕಾರಣಮಾಗಿ ಸಂಸಾರ ಶರೀರ ಭೋಗಕ್ಕೆ ಪೇಸಿ ಇಂತೆಂದು ಮನದೊಳ್ ಬಗೆಗುಂ

ವೃತ್ತ ॥ ರೂಪಂ ಯೌವನಮಾಯುರಕ್ಷವಿಷಯಾ ಭೋಗೋಪಭೋಗಾಽ ಭವದ್
ವೀರ್ಯಂ ಸ್ವೇಷ್ಟಸಮಾಗಮೇ ವಸುಮತೀಃ ಸೌಭಾಗ್ಯ ಭಾಗ್ಯೋದಯೋ
ನೋ ವಿದ್ಯಾ ಸ್ಫುಟಮಾತ್ಮನಸ್ಸಮುದಿತೋ ಜ್ಞಾನೇಕ್ಷಣಾಭ್ಯಾಮ್ಯತೇ ।
ಶೇಷಾ ಇತ್ಯನುಚಿಂತಯಂತು ಸುಧಿಯಃ ಸರ್ವೇ ಸದಾಽನಿತ್ಯತಾಂ ॥

ಶ್ಲೋಕ ॥ ಅದೌ ಜನ್ಮ ಜರಾರೋಗಂ ಮಧ್ಯೇಽಪ್ಯಂತೇ ಖಲೊಂತಕಃ
ಇತಿ ಚಕ್ರಸ್ಯ ಸಂಭ್ರಾತಿರ್ಜಂತೋರ್ಮಧ್ಯೇ ಭವಾರ್ಣವಂ ॥

ಎಂದಿಂತು ವೈರಾಗ್ಯಮಂ ಬಾವಿಸಿ ವಿಜಯಕುಮಾರನೆಂಬ ಪಿರಿಯಮಗಂಗೆ ರಾಜ್ಯಪಟ್ಟಂಗಟ್ಟಿ ಪರಿವಾರಕ್ಕೆಲ್ಲಂ ನಿಃಶಲ್ಯಂಗೆಯ್ದು ಬಾಹ್ಯಾಭ್ಯಂತರ ಪರಿಗ್ರಹಂಗಳೆಲ್ಲಮಂ ತೊಱೆದು ಪಲರುಂ ಮಕುಟಬದ್ಧರ್ಕ್ಕಳ್ವೆರಸುಮರಸಿಯರುಂ ಬೆರಸು ವಿನಯಂಧರ ಭಟ್ಟಾರರ

ಪಕ್ಕದೆ ತಪಂಬಟ್ಟು ದೀಕ್ಷೋಪವಾಸ ತ್ರಿರಾತ್ರಂ ಗೆಯ್ದು ಶರೀರ ಸಂಧಾರಣ ನಿಮಿತ್ತಂ ಚರಿಗೆವೊಕ್ಕರ್ದೋರ್ವರ್ಗಳ್ ಬಡಬಿರ್ದ್ದಿ ನಿಱಿಸಿ ಪ್ರಥಮ ದಿವಸದೊಳೆ ಪಾತಕ್ಕಿನ ಕೂಳುಮವರೆಯುಮೆಕ್ಕೆಯುಮಾಡಿನಳೆಯುಮಂ ಬಡ್ಡಿಸಿದೊಡದನಮೃತಮನುಣ್ಬಂತುಂಡು ಮತ್ತಂ ತ್ರಿರಾತ್ರಕ್ಕೆ ಪಚ್ಚಕ್ಖಾಣಂಗೊಂಡರಾ ಕಾಲದಿಂ ತೊಡ್ಡಾಹಾರದೊಳಪ್ಪ ಧೋಷದಿಂದಂ ಕಚ್ಛು ಜರ ಖಾಸ ಸೋಸೋ ಭತ್ತಚ್ಛಟ ಅಚ್ಛಿ ಕುಚ್ಛಿ ದುಕ್ಖಾಣಿ ಎಂದಿವು ಮೊದಲಾಗೊಡೆಯವೇೞ್ನೂಱು ವ್ಯಾಧಿಗಳಂ ನೂಱು ವರ್ಷಂ ಬರೆಗಂ ಒಳ್ಳಿತ್ತಾಗಿ ಸಯಿರಿಸಿ ಉಗ್ರೋಗ್ರ ತಪದಿಂ ದೀಪ್ತತಪಂ ತಪ್ತತಪಂ ಮಹಾತಪಂ ಘೋರತಪಮೆಂದಿವು ಮೊದಲಾಗೊಡೆಯ ತಪಂಗಳಂ ಗೆಯ್ಯೆ ತಪದ ಮಹಾತ್ಮ್ಯದಿಂದಂ ಆಮೋಸಧಿ ಖೇಳೋಸಧಿ ಜಲ್ಲೋಸಧಿ ವಿಪ್ಪೋಸದಿ ಸಬ್ಬೋಸಧಿಯೆಂದಿವು ಮೊದಲಾಗೊಡೆಯ ಋದ್ಧಿಗಳ್ ಪುಟ್ಟಿದೊಡೆ ವ್ಯಾಧಿಗೆ ತಕ್ಕ ಪ್ರತೀಕಾರಮಂ ಮಾಡದಿಂತು ಘೋರ ವೀರ ತಪಶ್ಚರಣಂಗೆಯ್ಯೆ ಮತ್ತೊಂದು ದಿವಸಂ ಸೌಧರ್ಮೇಂದ್ರಂ ತನ್ನ ಸಭೆಯೊಳ್ ಸಿಂಹಾಸನಮಸ್ತಕ ಸ್ಥಿತನಾಗಿ ಧರ್ಮಶ್ರವಣಾನನ್ತರಂ ರಿಷಿಯರ್ಕಳ ಗುಣಂಗಳಂ ವ್ಯಾವರ್ಣಿಸುತ್ತಿರ್ದ್ದು ಸನತ್ಕುಮಾರ ರಿಷಿಯರ ಗುಣಮನಾದಮಾನುಂ ಕೈಕೊಂಡಿಂತೆಂದು ಪೇೞಲ್ತಗುಳ್ದಂ

ವಾತ ಪಿತ್ತ ಶ್ಲೇಷ್ಮ ಖಾಸ ಶ್ವಾಸ ಜರಾರುಚಿ ಛರ್ದ್ಯತಿಸಾರಾಕ್ಷಿ ಕುಕ್ಷಿ ವೇದನಾಸ್ಫೋಟಕಂ ಪಿಟಕಂ ಶೂಲ ಭಗಂಧರ ಕುಷ್ಠ ಕ್ಷಯಗಂಡ ಶಿರೋವೇದನೆ ಮೊದಲಾಗೊಡೆಯಮೇೞ್ನೂಱು ವ್ಯಾಧಿಗಳ್ ಪೊರ್ಮೊದಲೆ ಮೆಯ್ಯೊಳ್ ಪುಟ್ಟಿದೊಡಂತು ತಾಮುಂ ಋದ್ಧಿಸಂಪನ್ನರಾಗಿಯುಂ ವ್ಯಾಧಿಗೆ ತಕ್ಕ ಪ್ರತೀಕಾರಂ ಗೆಯ್ಯೆ ನೂಱು ವರ್ಷಂ ಬರೆಗಂ ಸೈರಿಸಿ ತಂಪಗೈಯ್ವಪ್ಪರೆಂದು ಸೌಧರ್ಮೇಂದ್ರಂ ಪೊಗೞ್ದೊಡೆ ಕೇಳ್ದಾಮುನ್ನ ಬಂದ ದೇವರ್ಕಳಿರ್ವ್ವರುಂ ವೈದ್ಯರ ರೂಪಿನೊಳ್ ಮರ್ದ್ದುಗಳಂ ಪಸುಂಬೆಯೊಳ್ ತೆಕ್ಕನೆ ತೀವಿ ಪರೀಕ್ಷಿಸಲ್ಕೆಂದು ಸಾರೆ ವಂದು ಬಂದಿಸಿ ಇಂತೆಂದರ್ ಭಟಾರಾ ನಿಮ್ಮ ಮೆಯ್ಯ ಕುತ್ತಂಗಳೆಲ್ಲಮಂ ಮರ್ದ್ದಂ ಮಾಡಿ ಕಿಡಿಸಲ್ ನೆಱೆವೆವು ಮರ್ದ್ದಂ ಮಾಡುವುದನೊಡಬಡವೇೞ್ಕುಂ ಎಂದೊಡೆ ಭಟಾರರುಂ ಮೋನಂಗೊಂಡು ನುಡಿಯದೆ ಕೆಮ್ಮಗಿರ್ದ್ದೊಡೆ ಪಿರಿದುಂ ಬೇಗಮಿರ್ದ್ದುದ್ದು ಪೋಗಿ ಮರುದಿವಸಂ ಮಗುೞ್ದು ಬಂದಿಂತೆಂದರ್ ಭಟಾರಾ ವೈದ್ಯಶಾಸ್ತ್ರದೊಳಾದಂ ಕುಶಲರೆವಱುಂ ಗ್ರಂಥಾರ್ಥಂಗಳೊಳೆಲ್ಲಂ ಕುಶಲರೆಂ ಮರ್ದ್ದುಗಳುಮಭಿನವಂಗಳಾದಮೊಳ್ಳಿದವಿರ್ದ್ದುವು ನಿಮ್ಮ ಮೆಯ್ಯ ಕುತ್ತಂಗಳೆಲ್ಲಮನೇೞು ದಿವಸದಿಂದೊಳಗೆ ಕಿಡಿಸಿ ನಿರೋಗಮಪ್ಪಂತಿರೆ ಮಾಡುವೆಮುಂ ಬಳಿಕ್ಕೇನುಂ ಸಂಕ್ಲೇಶಮಿಲ್ಲದೆ ತಪಂಗೆಯ್ಯಿಮೆಂದೊಡೆ ಭಟ್ಟಾರರವರೊಡನೆ ನುಡಿವಾಗಳುಗುೞ ಸೀವರಂಗಳ್ ತಮ್ಮ ಮುಂಗೈಯ ಮೇಲೆ ಬಿೞ್ದೊಡೆ ಬೆರಳಿಂ ಸೀಂಟಿ ತೋಱಿದಾಯೆಡೆ ಸುವರ್ಣಾಯಮಾನಮಾಗಿ ತೊಳಗುತ್ತಿರ್ದ್ದ ಮೆಯ್ಯ ತೇಜಮಂ ದೇವರ್ಕಳ್ ಕಂಡು ವಿಸ್ಮಯಂ ಬಟ್ಟು ನೋಡುತ್ತಿರೆ ಭಟಾರರಿಂತೆಂದರ್ ಎಮಗೆ ಮರ್ದ್ದು ಬಾಯಱಿತ್ತೊಪ್ಪೊಡೆಮಗಾಮೆ ಮರ್ದ್ದಂ ಬಲ್ಲೆಮೆಮಗದುಂ ಬಾೞ್ತೆಯಲ್ತು ನೀಮುಂ ಜಾತಿ ಜರಾ ಮರಣಂಗಳೆಂಬೆಮ್ಮ ಕುತ್ತಮಂ ಕಿಡಿಸಲಾರ್ಪೊಡಾಮರ್ದ್ದ

ನೊಡಂಬಡುವೆಮ್ಮುಱಿದಾವ ಮದ್ದುಮನೊಡಂಬಡುವೆಮಲ್ಲೆಮೆಂದೊಡೆ ದೇವರ್ಕಳಿಂತೆಂದರ್ ಜಾತಿ ಜರಾ ಮರಣಂಗಳೆಂಬ ಕುತ್ತಮಂ ಕಿಡಿಸಲಾಮಾಱೆಮಾ ಕುತ್ತಮಂ ಕಿಡಿಸಲ್ಕೆ ಭಟರಾ ನೀಮೆ ಸಮರ್ಥರಿರ್ ಪರಮವೈದ್ಯರಿರದರ್ಕೆಂದು ಮತ್ತಂ ದೇವರ್ಕಳಿಂತೆಂದರ್ ಭಟಾರಾ ಸೌಧರ್ಮೇಂದ್ರಂ ನಿಮ್ಮ ತಪದೊಳಪ್ಪ ಗುಣಮುಮಂ ವ್ಯಾಧಿಗಳಂ ಸೈರಿಸಿ ನೆಗೞ್ದ ನೆಗೞ್ತೆಯುಮಂ ದೇವರ್ಕಳ ಸಭೆಯ ನಡುವೆಯಾದಮಾನುಂ ಪೊಗೞ್ದೊಡಾಮಿಂದ್ರನ ಮಾತಂ ನಂಬದೆ ನಿನ್ನ ಪರೀಕ್ಷಿಸಲ್ಕೆಂದು ಬಂದೆಮುಂ ಸೌಧರ್ಮೇಂದ್ರನುಂ ಕೆಯ್ಕೊಂಡು ಪೊಗೞ್ದುದೇನುಂ ತಪ್ಪಿಲ್ಲೆಂದು ನುಡಿದು ಗುಣಂಗೊಂಡು ಪೊಗೞ್ದು ಬಂದಿಸಿ ಮದ್ದುಗಳೆಲ್ಲಮನೊಂದು ಪಱವಾವಿಯೊಳ್ಪೊಯ್ದು ದೇವರ್ಕಳುಂ ತಮ್ಮ ದೇವಲ್ಲೋಕಕ್ಕೆ ಪೋದರ್ ಆ ಮದ್ದಿನ ಬಾವಿಯ ನೀರಂ ಮಿಂದರ್ಗ್ಗೆಲ್ಲಂ ಕುತ್ತಂಗಳ್ಕಿಡುವುವಾದವು ಸನತ್ಕುಮಾರ ಭಟ್ಟಾರರುಮೇೞ್ನೂಱು ವ್ಯಾಧಿಗಳಂ ನೂಱು ವರ್ಷಂಬರಂ ಸೈರಿಸಿ ಘೋರವಾರ ತಪಶ್ಚರಣಂಗೆಯ್ದಾಲದ ಮರದ ಕೆಳಗೆ ಸಂನ್ಯಸನಂ ಗೆಯ್ದು ಸಮಾಧಿ ಮರಣದಿಂದಂ ಮುಡಿಪಿ ಮಿಕ್ಕ ರತ್ನತ್ರಯಂಗಳಂ ಸಾಧಿಸಿ ಸನತ್ಕುಮಾರಕಲ್ಪದೊಳೇೞು ಸಾಗರೋಪಮಾಯುಷ್ಯ ಸ್ಥಿತಿಯನೊಡೆಯನಿಂದ್ರನಾಗಿ ಪುಟ್ಟಿದೊಂ

ಮತ್ತಾರಾಧಕರಪ್ಪ ಭಬ್ಯರ್ಕಳೆಲ್ಲಂ ಸನತ್ಕುಮಾರ ಭಟ್ಟಾರರಂ ಮನದೊಳ್ ಬಗೆದು ವ್ಯಾಧಿಗಳೊಳಪ್ಪ ವೇದನೆಗಳುಮಂ ಪಸಿವುಂ ನೀರೞ್ಕೆ ಮೊದಲಾಗೊಡೆಯ ಬಾಧೆಯಂ ಸೈರಿಸಿ ದೇವರಂ ಧ್ಯಾನಿಸುತ್ತಂ ಪಂಚನಮಸ್ಕಾರಮಂ ಮನದೊಳ್ ಭಾವಿಸುತ್ತುಂ ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗ್ಗ ಸುಖಂಗಳನೆಯ್ದುಗೆ

■

೫. ಅಣ್ಣಿಕಾ ಪುತ್ರನ ಕಥೆ

ಅಣ್ಣಿಕಾ ಪುತ್ರನ ಕಥೆಯಂ ಪೇೞ್ವೆಂ

ಗಾಹೆ ॥ ಣಾವಾಏ ಣಿಬ್ಬುಡಾಏ ಗಂಗಾಮಜ್ಝೇ ಅಮೂಢಮಾಣಮದೀ
ಆರಾಧಣಂ ಪವಣ್ಣೋ ಕಾಲಗದೋ ಅಣ್ಣಿಯಾಪುತ್ತೋ ॥

[ಣಾವಾಏ =ನಾವೆ । ಣಿಬ್ಬುಡಾಏ =ಮುಳುಗಿದುದಾದೊಡೆ । ಗಂಗಾಮಜ್ಝೇ _ ಗಂಗಾ ಮಹಾನದಿಯ ನಡುವೆ । ಅಮೂಢಮಾಣಮದೀ =ಮೋಹಿಸದ ಬುದ್ಧಿಯನೊಡೆಯನಾಗಿ । ಆರಾಧಣಂ = ನಿಜಾತ್ಮಾರಾಧನೆಯಂ । ಪವಣ್ಣೋ =ಲೇಸಾಗಿಪೊರ್ದಿದೊಂ । ಕಾಲಗದೋ = ಕಾಲಂ ಗೆಯ್ದನಾಗಿ । ಅಣ್ಣಿಕಾಪುತ್ತೋ =ಅಣ್ಣಿಕೆಯ ಮಗಂ]

ಅದೆಂತೆಂದೊಡೆ

ಮಗಧೆಯೆಂಬುದು ನಾಡಲ್ಲಿ ಉತ್ತರ ಮಧುರೆಯೆಂಬುದು ಪೊಬಲದನಾಳ್ವೊಂ ಪ್ರಜಾಪಾಲನೆಂಬರಸನಾತನ ಮಹಾದೇವಿ ಸುಪ್ರಭೆಯೆಂಬೊಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತಾ ಪೊೞಲೊಳ್ ಸಾರ್ಥಾಧಿಪತಿ ಧನದತ್ತನೆಂಬೊಂ ಪರದಂ ಧನಕನಕ ಸಮೃದ್ಧನಾತನ ಭಾರ್ಯೆ ಧನಶ್ರೀಯೆಂಬೊಳಾ ಇರ್ವ್ವರ್ಗ್ಗಂ ಮಗಂ ಧನದೇವನೆಂಬೊನಂತವರ್ಗ್ಗೆ ಸುಖದಿಂ ಕಾಲಂ ಸಲೆ ಮತ್ತೊಂದು ದಿವಸಂ ಪರದಿಂಗೆಂದು ಪಿರಿದುಂ ಸಾರಮಪ್ಪ ಭಂಡಮಂ ತೀವಿಕೊಂಡು ಪಿರಿದುಂ ಸಾರ್ಥರುಂವೆರಸು ದಕ್ಷಿಣಮಧುರೆಗೆ ಪೋದೊಡಾ ಪೊೞಲ ರಾಜಶ್ರೇಷ್ಠಿ ತಿಳಕಶ್ರೇಷ್ಠಿಯೆಂಬೊನಾತನ ಭಾರ್ಯೆ ನಂದೆಯೆಂಬೊಳಾ ಇರ್ವ್ವರ್ಗ್ಗಂ ಮಕ್ಕಳ್ ಪದ್ಮಾವತಿ ಪ್ರಭಾವತಿ ಸುಮತಿ ಗುಣಮತಿ ಎಂದಿವರ್ಮೊಲಾಗೊಡೆಯ ಎಣ್ಬರುಂ ಪೆಣ್ಗೂಸುಗಳಾದೊಡವರೊಳಗೆಲ್ಲರಿಂ ಕಿಱಿಯಳಣ್ಣಿಕೆಯೆಂಬೊಳಾಕೆಯಂ ಧನದತ್ತನ ಮಗನಪ್ಪ ಧನದೇವನಂ ರೂಪಲಾವಣ್ಯ ಸೌಭಾಗ್ಯ ಕಾಂತಿಗುಣಂಗಳಿಂದಂ ಕೂಡಿದೊನಂ ತಿಳಕಶ್ರೇಷ್ಠಿಯುಂ ನಂದೆಯುಂ ಕಂಡಾತಂಗೆ ಬಯಸಿ ಅಣ್ಣಿಕೆಯೆಂಬ ಕೂಸಂ ಕೊಟ್ಟೊಡೆ ಕೆಲವು ದಿವಸಮಾ ಪೊೞಲೊಳಿರ್ದ್ದು ತಮ್ಮ ಕೊಂಡು ಪೋದ ಭಂಡಮಂ ಮಾಱಿ ಪರದಂ

ತಮ್ಮ ನಾಟಿಗೆ ಅಪೂರ್ವಮಪ್ಪ ಭಂಡಮಂ ತೀವಿಕೊಂಡು ತಮ್ಮ ಪೊಟಿಲ್ಲುಗೆ ಉತ್ತರಮಧುರೆಗೆ ವಂದಿರ್ದ್ದರನ್ನೆಗಂ ಅಣ್ಣಿಕೆಗೆ ಗರ್ಭಮಾಗಿ ಮಗಂ ಪುಟ್ಟಿದೊಡೆ ಧನದೇವನ ತಾಯುಂ ತಂದೆಯುಂ ನಂಟರುಂ ಎಲ್ಲಂ ನೆಱೆದಣ್ಣಿಕೆಯ ಮಗನೆಂದಾತಂಗಣ್ಣಿಕಾಪುತ್ರನೆಂಬ ಪೆಸರನಿಟ್ಟೊಡಾತನುಂ ಕ್ರಮಕ್ರಮದಿಂ ಸುಖದಿಂ ಬೆಳೆದು ನವಯವ್ವನ ನಾಗಿರ್ಪನ್ನೆಗಂ ಇತ್ತ ಜಮಸೂರಿಗಳೆಂಬವಧಿಜ್ಞಾನಿಗಳಪ್ಪಾಚಾರ್ಯರ್ಪಿರಿದುಂ ರಿಷಿ ಸಮುದಾಯಂ ಬೆರಸು ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳುಂ ವಿಹಾರಿಸುತ್ತುಂ ಬರ್ಪ್ಪರುತ್ತರ ಮಧುರೆಗೆ ಬಂದು ಬಹಿರುದ್ಯಾವನದೊಳಿರ್ದ್ದರಂ ಅಣಿಕಾಪುತ್ರಂ ಪೋಗಿ ಬಂದಿಸಿ ಧರ್ಮಮಂ ಕೇಳ್ದು ಸಮ್ಯಕ್ತ್ವ ಪೂರ್ವಕಂ ಶ್ರಾಬಕವ್ರತಗಳೆಲ್ಲಮಂ ಕೆಯ್ಕೊಂಡು ತದನಂತರಮೆ ಭಟಾರಾ ಎನಗಾಯುಷ್ಯಮೆನಿತುಂಟೆಂದು ತನ್ನಾಯುಷ್ಯಮಂ ಬೆಸಗೊಂಡೊಡೆ ಭಟಾರರುಂ ಕಿಱಿದೆ ನಿನಗಾಯುಷ್ಯಮೆಂದು ಪೇೞ್ದೊಡೆ ವೈರಾಗ್ಯಪರಾಯಣನಾಗಿ ತಾಯುಂ ತಂದೆಯುಂ ನಂಟರುಮಂ ಬಿಡಿಸಿ ನಿಶ್ಶಲ್ಯಂಗೆಯ್ದು ದಮಸೂರಿಗಳೆಂಬಾಚಾರ್ಯರ ಪಕ್ಕದೆ ತಪಂಬಟ್ಟು ದ್ವಾದಶಾಂಗ ಚತುರ್ದಶ ಪೂರ್ವಮಪ್ಪಾಗಮಮೆಲ್ಲಮಂ ಕಲ್ತು ಗುರುಗಳನೊಡಬಂಡಿಸಿ ಏಕವಿಹಾರಿಯಾಗಿ ಗ್ರಾಮೇಕ ರಾತ್ರಂ ನಗರೇ ಪಂಚರಾತ್ರಂ ಅಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂದ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತುಂ ತೀರ್ಥಂಗಳೆಲ್ಲಮಂ ಬಂದಿಸಲ್ಕೆಂದು ಗಂಗಾ ಮಹಾನದಿಯಂ ಪಾಯ್ದು ಪೋಪ ಬಗೆಯಿಂದಂ ನಾವೆಯನೇಱಿದೊಡದಂದುತ್ಪಾತ ವಾತದಿಂದಂ ಗಂಗಾ ಮಹಾನದಿಯ ನಡುವೆ ಮಡುವಿನೊಳ್ ಭಯಂಕರವಾಗುತ್ತಿರ್ದ್ದ ತೆರೆಯನೊಡೆಯದಱೊಳ್ ಮುೞುಗಿದೊಡಾ ಅಣ್ಣಿಕಾಪುತ್ರನೆಂಬ ರಿಸಿ ಪಿರಿದಪ್ಪ ಮಹಾತ್ಮ್ಯಮುಂ ಮೋಹಿಸದ ಬುದ್ಧಿಯೊಡೆಯೊಂ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಜಾವಜ್ಜೀವಂ ನಿವೃತ್ತಿಗೆಯ್ದು ಕಾಯೋತ್ಸರ್ಗಂ ನಿಂದು ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಧ್ಯಾನಿಸಿ ಕರ್ಮಂಗಳಂ ಕಿಡಿಸಿ ಅಂತರ್ಗತಕೇವಲಿಯಾಗಿ ಮೋಕ್ಷಕ್ಕೆ ಪೋದರ್

ಮತ್ತಂ ಪೆಱರಾರಾಧಕರಪ್ಪವರ್ಗ್ಗಳೆಲ್ಲಂ ಅಣ್ಣಿಕಾಪುತ್ರನೆಂಬ ಋಷಿಯರಂ ಮನದೊಳಿಟ್ಟಚೇತನೋಪಸರ್ಗ್ಗಂ ಮೊದಲಾಗೊಡೆಯವಪ್ಪುಪಸರ್ಗ್ಗಂಗಳುಮಂ ಪಸಿವುಂ ನೀರೞ್ಕೆ ಮೊದಲಾಗೊಡೆಯ ಪರೀಷಹಂಗಳಂ ಸೈರಿಸಿ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗದ ಸುಖಂಗಳಂ ಭವ್ಯರ್ಕಳೆಯ್ದುಗೆ.

■

೬. ಭದ್ರಬಾಹು ಭಟ್ಟಾರರ ಕಥೆ

ಭದ್ರಬಾಹು ಭಟ್ಟಾರಕರ ಕಥೆಯಂ ಪೇಳ್ವೆಂ

ಗಾಹೆ ॥ ಓಮೋದರಿಏ ಘೋರಾಏ ಭದ್ದಬಾಹೂ ಆಸಂಕಿಲಟ್ಠಮದೀ
ಘೋರಾಏ ತಿಗಿಂಚ್ಛಾಏಪಿ ಪಡಿವಣ್ಣೋ ಉತ್ತಮಂ ಅಠ್ಠಂ ॥

[ಓಮೋದರಿಏ = ಅರೆಯುಣಿಸಿನಿಂದಂ । ಘೋರಾಏ = ಆದಮಾನುಂ ಕಡಿದಪ್ಪುದಱಿಂದಂ । ಭದ್ದ ಬಾಹೂ =ಭದ್ರಬಾಹು ಭಟ್ಟಾರರುಂ । ಅಸಂಕಿಲಿಟ್ಠಮದೀ = ಸಂಕ್ಲೇಶ ಪರಿಣಾಮಮಿಲ್ಲದೊನಾಗಿ । ಘೋರಾಏ= ಕಡಿದಪ್ಪ । ತಿಗಿಂಚ್ಛಾ ಏ = ಪಸಿವಿನಿಂದಂ । ಅಪಿ = ಮತ್ತೆ । ಪಡಿವಣ್ಣೋ = ಪೊರ್ದಿದೊಂ । ಉತ್ತಮಂ ಅಟ್ಠಂ - ಮಿಕ್ಕದರ್ಶ ಜ್ಞಾನಚಾರಿತ್ರಂಗಳಾರಾಧನೆಯಂ]

ವ ॥ ಅದೆಂತೆಂದೊಡೆ

ಈ ಜಂಬೂದ್ವೀಪದ ಭರತಕ್ಷೇತ್ರದೊಳಂ ಪುಂಡ್ರವರ್ಧನಮೆಂಬುದು ನಾಡಲ್ಲಿ ಕೋಟಿನಗರಮೆಂಬುದು ಪೊೞಲದನಾಳ್ವೊಂ ಪದ್ಮರಥನೆಂಬೊನರಸನಾತನ ಮಹಾದೇವಿ ಪದ್ಮಶ್ರೀಯೆಂಬೊಳಂತವರ್ಗ್ಗಳಿಷ್ಟ ವಿಷಯ ಕಾಮ ಭೋಗಂಗಳನುಭವಿಸುತ್ತಿರೆ ಮತ್ತಾ ಅರಸನ ಪುರೋಹಿತಂ ನಾಲ್ಕು ವೇದಮುಂ ಆಱಂಗಮುಂ ಪದಿನೆಂಟು ಧರ್ಮಶಾಸ್ತ್ರಗಳಂ ಬಲ್ಲೊಂ ಸೋಮಶರ್ಮನೆಂಬ ಪಾರ್ವ್ವನಾತನ ಭಾರ್ಯೆ ಪ್ರತ್ಯಕ್ಷ ಶ್ರೀಯಾದೇವತೆಯನೆ ಪೋಲ್ವಳ್ ಸೋಮಶ್ರೀಯೆಂಬೊಳ್ ಇರ್ವ್ವರ್ಗ್ಗಂ ಮಗಂ ಪುಟ್ಟಿದೊಂ ತಾಯ್ಗಂ ತಂದೆಗಮೆಲ್ಲಾ ನೆಂಟರ್ಗ್ಗಮುತ್ಸಾಹಮುಂ ಸುಖಮುಂ ವಿಭವಮುಂ ಪಡೆವುದಱಿಂದಂ ಆ ಕೂಸಿಂಗೆ ಭದ್ರಬಾಹುವೆಂಬ ಪೆಸರನೆಲ್ಲರುಂ ನೆರೆದಿಟ್ಟರ್ ಆತನುಂ ಬಿದಿಗೆಯ ಚಂದ್ರಮನಂತೆ ಕ್ರಮಕ್ರಮದಿಂದಂ ಸುಖದಿಂದಂ ಬಳೆದು ಮುಂಜಿಗಟ್ಟುವ ಪ್ರಾಯಮಾದೊಡೆ ಪ್ರಶಸ್ತ ದಿವಸ ವಾರ ನಕ್ಷತ್ರ ಮಹೂರ್ತದೊಳ್ ಮುಂಜಿಗಟ್ಟಿ ಬಂಧನ ಕ್ರಿಯೆಯಂ ಮಾಡಿ ಬಟಿಕ್ಕೆ ತನ್ನೋರಗೆಗಳಪ್ಪ ಪಲಂಬರ್ ಮಾಣಿಗಳ್ವೆರಸು ಪೊಱವೊೞಲೊಳ್ ಬಟ್ಟಾಡುತ್ತಿರೆ ಭದ್ರಬಾಹುವೆಂಬ ಮಾಣಿಯೊಂದೆ ಬಟ್ಟಿನಮೇಗೆ ಪದಿನಾಲ್ಕು ಬಟ್ಟನೊಂದೊಂದಱ ಮೇಗೋಳಿಯೊಳಿಟ್ಟಾಡುತ್ತಿರ್ಪ್ಪನ್ನೆಗಂ ಇತ್ತ ವರ್ಧಮಾನ ಭಟ್ಟಾರರ್ ಮೋಕ್ಷಕ್ಕೆ ವೋದಿಂ

ಬೞಿಕ್ಕೆ ಚತುರ್ದಶಪೂರ್ವಧಾರಿಗಳಪ್ಪ ಶ್ರುತಕೇವಲಿಗಳ್ ನಾಲ್ಕನೆಯವರ್ ಗೋವರ್ಧನ ಭಟ್ಟಾರರುಜ್ಜಯಂತಮಂ ವಂದಿಸಲೆಂದು ವಿಹಾರಿಸುತ್ತಂ ಬರ್ಪೋರಾ ಕೋಟಿ ನಗರಕ್ಕೆ ವಂದು ಪೊಱವೊಳಲೊಳೊಂದು ಬಟ್ಟಿನ ಮೇಲೆ ಪದಿನಾಲ್ಕು ಬಟ್ಟನೊಂದೊಂದಱ ಮೇಗೋಳಿಯಿಟ್ಟಾಡುತಿರ್ಪ್ಪ ಭದ್ರಬಾಹು ಮಾಣಿಯಂ ಗೋವರ್ಧನ ಭಟ್ಟಾರರ್ ಪಿರಿದುಂ ಬೇಗಂ ನೋಡುತ್ತಿರ್ದ್ದಿಂತೆಂದಾದೇಶಂ ಗೆಯ್ದರೀತನೆಮ್ಮಿಂ ಬಳಿಕ್ಕೆ ಚತುರ್ದಶಪೂರ್ವಧಾರಿಯಪ್ಪನೆಯ್ದನೆಯ ಶ್ರುತಕೇವಲಿ ಅವಧಿಜ್ಞಾನಿ ಪಲವುಂ ಋದ್ಧಿಗಳಿಂದಂ ಕೂಡಿದೊಂ ದೇವರಿಂದಂ ಮನುಷ್ಯರಿಂದಂ ಅರ್ಚಿಸಿ ಪೂಜಿಸಿ ಬಂದಿಸೆಪಡುವೊಂ ಪಿರಿದಪ್ಪ ಮಾಹಾತ್ಮ್ಯಮನೊಡೆಯೊಂ ಭದ್ರಬಾಹುಭಟ್ಟಾರರೆಂಬೊರಪ್ಪರೆಂದು ಬಗೆದವರ ಮನೆಗಾತನನೊಡಗೊಂಡು ಪೋಗಿ ಅವರ ತಾಯ್ ತಂದೆಗಮಿಂತೆಂದರ್ ಈತನನೆಮಗೊಪ್ಪಿಸಿಂ ಎಲ್ಲಾ ಶಾಸ್ತ್ರಂಗಳಂ ಕಲ್ಪಿಸಿ ಪಂಡಿತನಂ ಮಾಡಿ ನಿಮಗೊಪ್ಪಿಸುವೆಪೆಂದೊಡವರು ಮಂತೆಗೆಯ್ಕೆಮೆಂದೊಡಾತನನೊಡಗೊಂಡು ಪೋಗಿ ಕೆಲವು ದಿವಸದಿಂದೊಳಗೆ ವ್ಯಾಕರಣಂ ಪ್ರಮಾಣಂ ಛಂದಮಳಂಕಾರ ನಿಘಂಟು ಕಾವ್ಯ ನಾಟಕಂ ಮೊದಲಾಗೊಡೆಯ ಲೋಕದೊಳುಳ್ಳ ಶಾಸ್ತ್ರಂಗಳೆಲ್ಲಮಂ ಕಲ್ಪಿಸಿದೊಡೆ ಅಧಿಗಮಸಮ್ಯಗ್ ದೃಷ್ಟಿಯಾಗಿ ಆಗಮದೊಳಗೆಲ್ಲಮನಱಿದು ಸಂಸಾರ ಶರೀರ ಭೋಗ ವೈರಾಗ್ಯ ಪರಾಯಣನಾಗಿ ಭಟಾರಾ ಎನಗೆ ದೀಕ್ಷೆಯಂ ದಯೆಗೆಯ್ಯಿಮೆಂದೊಡೆ ಭಟಾರರಿಂತೆಂದರ್ ಎಮಗಿಂತು ದೀಕ್ಷೆಯಂ ಕೊಡಲಾಗ ಮಗನೇ ನಿಮ್ಮ ಪೊಟಲ್ಗೆ ನೀಂ ಪೋಗಿ ನಿನ್ನ ಕಲ್ತ ವಿದ್ಯೆಯಂ ಪಂಡಿತಿಕ್ಕೆಯುಮನಾ ಪೊಟಲೊಳ್ ನೆಗಟ್ಚಿ ನೆಗಟ್ದ ಪಂಡಿತರ್ಕಳೊಡನೆ ಬಾದಂ ಗೆಯ್ದವರಂ ಗೆಲ್ದು ದಶದಿಶೆಗಳೊಳೆಲ್ಲಂ ನಿನ್ನ ಪಾಂಡಿತ್ಯದ ಯಶಮಂ ಪರಪಿ ನಿನ್ನನಾ ಮೊಡಗೊಂಡು ಬಂದುದಕ್ಕೆ ತಾಯ್ತಂದೆಯುಮಂ ಕಂಡು ತಾಯ್ತಂದೆಗಂ ಸಂತೋಸಂ ಮಾಡಿ ಅವರನೊಡಂಬಡಿಸಿ ಬಂದೊಡೆ ತಪಮಂ ಕುಡಲಕ್ಕುಮಂತೆಯಾಗದೆಂದೊಡೆ ಭದ್ರಬಾಹು ಮಾಣಿಯುಂ ಭಟ್ಟಾರರಂ ವಂದಿಸಿ ತನ್ನ ಪೊಟಲ್ಗೆವೋಗಿ ತಾಯುಂ ತಂದೆಯುಮಂ ಕಂಡು ಪೊಟಲೊಳ್ ನೆಗಟ್ದ ಪಂಡಿತರ್ಕಳೊಡನೆ ವಾದಂಗೆಯ್ದು ಗೆಲ್ದುದಶ ದಿಶೆಗಳೊಳೆಲ್ಲಂ ತನ್ನ ಪಾಂಡಿತ್ಯದ ಯಶಮಂ ಪಸರಿಸಿ ತಾಯ್ತಂದೆಗಂ ಸಂತೋಸಂ ಮಾಡಿಯವರನೊಡಂಬಡಿಸಿ ಬಂದು ಗೋವರ್ಧನ ಭಟಾರರ ಪಕ್ಕದೆ ಕುಮಾರಂ ಬ್ರಹ್ಮಚಾರಿಯಾಗಿ ಭದ್ರಬಾಹು ತಪಂಬಟ್ಟು ಕೆಲವು ದಿವಸದಿಂದೊಳಗೆ ದ್ವಾದಶಾಂಗ ಚತುರ್ದಶ ಪೂರ್ವಮಪ್ಪ ಆಗಮಮೆಲ್ಲಮಂ ಗ್ರಂಥಾರ್ಥಸ್ವರೂಪದಿಂ ಕಲ್ತು ಸಕಲ ಶಾಸ್ತ್ರಪಾರಗನಾಗಿ ಎಲ್ಲಾಯೋದುಗಳಂ ನೆಱಿಯೆಯೋದಿ ಕಲ್ತು ಶ್ರುತದೊಳಪ್ಪ ಭಕ್ತಿಕಾರಣಮಾಗಿ ಪ್ರತಿಮಾಯೋಗಂ ನಿಂದೊಡಂ ಮನುಷ್ಯರ್ಕ್ಕಳುಂ ದೇವರ್ಕ್ಕಳುಂ ಬಂದು ಪಿರಿದಪ್ಪ ಪೂಜೆಯಂ ಮಾಡಿಯರ್ಚ್ಚಿಸಿ ಪೂಜಿಸಿ ಬಂದಿಸಿದೊಡೆ ಎಲ್ಲಾ ಋಷಿ ಸಮುದಾಯಮುಮಂ ಪ್ರತಿಪಾಲಿಸಲ್ಕೆ ಸಮರ್ಥರಾಗಿರ್ಪ್ಪನ್ನೆಗಂ ಗೋವರ್ಧನಭಟಾರರ್ ಸಮಾಧಿ ಮರಣದಿಂದಂ ರತ್ನತ್ರಯಮಂ ಸಾಧಿಸಿ ಮುಡಿಪಿ ದೇವಲೋಕಕ್ಕೆ ವೋದರ್

ಇತ್ತ ಭದ್ರಬಾಹುಭಟಾರರ್ ಚತುರ್ದಶ ಪೂರ್ವಧಾರಿಗಳುಂ ಕಡೆಯ

ರಿಸಿಯಯ್ದುನೆಯ ಶ್ರುತಕೇವಲಿಗಳವಧಿ ಜ್ಞಾನಿಗಳುಂ ಪಲವುಂ ಋದ್ಧಿಗಳಿಂದಂ ಕೂಡಿದೋರ್ ಎಲ್ಲಾ ಋಷಿ ಸಮುದಾಯಮುಮಂ ಪ್ರತಿಪಾಲಿಸುತ್ತುಂ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತುಮಿರ್ಪ್ಪನ್ನೆಗಂ

ಮತ್ತಿತ್ತ ಮಗಧೆಯೆಂಬುದು ನಾಡಲ್ಲಿ ಪಾಟಲೀಪುತ್ರಮೆಂಬುದು ಪೊಱಲದನಾಳ್ವೊಂ ನಂದನೆಂಬೊನರಸಂ ಪಲಕಾಲಮರಸುಗೆಯ್ಯುತ್ತಿರೆ ಮತ್ತೊಂದು ದಿವಸಂ ಚಾಣಾಕ್ಯನೆಂಬೊಂ ಭಟ್ಟನಂ ನಂದಂ ಪರಿಭವಿಸಿ ನೂಂಕಿಯಟ್ಟೆ ಕಳೆಯಿಸಿದೊಡಾತನುಂ ಮುಳಿದು ನಂದನ ಕಿಡಿಸಿ ನಂದನಂ ರಾಜ್ಯಸ್ಥಾನದೊಳ್ ಪೆಱನೊರ್ವನಂ ಚಂದ್ರಗುಪ್ತನೆಂಬೊನಂ ನಿಲಿಸಿದೊಡಾತನುಂ ಪಲಕಾಲಮರಸುಗೆಯ್ದುಂ ಕಱಿದೊಡಾತನ ಮಗಂ ಬಿಂದುಸಾರನೆಂಬೊನರಸು ಗೆಯ್ಯುತ್ತಿರೆಯಾತನ ಕಱಿದ ಬೞಿಕ್ಕೆಯಾತನ ಮಗನಶೋಕನೆಂಬೊನರಸುಗೆಯ್ಯುತ್ತಿರೆಯಾತನ ಮಗಂ ಪ್ರತಾಪದಿಂದಂ ತೇಜದಿಂದಮಾದಿತ್ಯನೊಳೋರನ್ನನಪ್ಪೊಂ ಕುಣಾಳನೆಂಬೊನಂತವರ್ಗ್ಗಳಿಪ್ಪ ವಿಷಯ ಕಾಮ ಭೋಗಂಗಳನನುಭವಿಸುತ್ತು ಕಾಲಂ ಸಲೆ ಮತ್ತೊಂದು ದಿವಸಮಶೋಕಮಹಾರಾಜಂ ಪರಚಕ್ರದ ಮೇಲೆ ಪೋಗಿಯಲ್ಲಿಂದಂ ಮಂತ್ರಿ ಪುರೋಹಿತ ತಳವರಾದಿಳ್ಗಿಂತೆಂದೋಲೆಯನಟ್ಟಿದೊನುಪಾಧ್ಯಾಯಂಗೆ ಕೞವೆಯ ಕೂೞುಂ ತುಪ್ಪಮಂ ತೋವೆಯುಮನುಣಲ್ಕೊಟ್ಟು ಕುಮಾರನನೋದಿಸುಗೆಂದೋಲೆಯನಟ್ಟಿದೊಡೆ ವಾಚಕನೋಲೆಯರ್ಥಮನಱಿಯದೆ ವಿಪರೀತಮಾಗಿಂತೆಂದು ಬಾಜಿಸಿದಂ ಉಪಾಧ್ಯಾಯಂ ಸಾಳಿಕೂರಂ ಚ ಮಸಿಂ ಘೃತಂ ದತ್ವಾ ಕುಮಾರ ಮಂಧಾಪಯೇತ್ ಎಂದಿಂತು ವಿಪರೀತಮಾಗಿ ಲೇಖಾರ್ಥಮಂ ಬಾಜಿಸಿದೊಡೆ ಅನಿಬರುಂ ಕೇಳ್ದು ಅಪ್ರತಿಹತಶಾಸನನಪ್ಪ ನೃಪತಿಯಾಜ್ಞೆಗೆ ಭಯಸ್ಥರಾಗಿಯುಪಾಧ್ಯಾಯಂಗೆ ಕೞಮೆಯ ಕೂೞುಂ ಮಸಿಯುಂ ತುಪ್ಪಮುಮನುಣಲ್ಕೊಟ್ಟು ಕುಣಾಳನೆಂಬ ಕುಮಾರನೆರಡುಂ ಕಣ್ಗಳುಮನೊಡೆದು ಕುರುಡಂ ಮಾಡಿ ಕೆಲವು ದಿವಸದಿಂದರಸಂ ಪರಚಕ್ರಮಂ ಸಾಧಿಸಿ ಬಂದು ಮಗನ ಕುರುಡಾದುದಂ ಕಂಡಾದಮಾನುಂ ಉಬ್ಬೆಗಂ ಬಟ್ಟು ಸೈರಿಸಲಾಱದೆ ಕುಣಾಳನರಸಿ ಚಂದ್ರಾನನೆಯೆಂಬೊಳ್ಗೆ ಮಗಂ ಪುಟ್ಟಿದೊಡಾತಂಗೆ ಸಂಪ್ರತಿ ಚಂದ್ರಗುಪ್ತನೆಂದು ಪೆಸರನಿಟ್ಟು ರಾಜ್ಯಾಭಿಷೇಕಂ ಗೆಯ್ದು ಪಟ್ಟಂಗಟ್ಟಿ ಸಮಸ್ತ ರಾಜ್ಯಭಾರಮೆಲ್ಲಮಂ ನಿರೂಪಿಸಿ ಕುಣಾಳನುಮನೆಂದಂ ಮಗನೇ ಬೇಡು ನೀನೆಂದೊಡಾತನುಂ ಕಾಕಿಣೀರತ್ನಮಂ ಬೇಡಿದೊಡಾ ರತ್ನಂ ಚಕ್ರವರ್ತಿಗಲ್ಲದಿಲ್ಲೆಂದು ಮಗಂಗೆ ಮಱುಮಾತುಗೊಟ್ಟು ಸಂಸಾರ ವೈರಾಗ್ಯಮಾದಮಾನುಂ ಪೆರ್ಚ್ಚೆ ಸುಬ್ರತರೆಂಬ ಭಟಾರರ ಪಕ್ಕದೆ ಜಿನದೀಕ್ಷೆಯಂ ಕೈಕೊಂಡು ಪರತ್ರೆಯಂ ಸಾಧಿಸಿದಂ

ಮತ್ತಿತ್ತ ಸಂಪ್ರತಿ ಚಂದ್ರಗುಪ್ತನುಮರಸುಗೆಯ್ಯುತ್ತಿರೆ ಸಮಾಧಿಗುಪ್ತರೆಂಬಾಚಾರ್ಯರವಧಿ ಜ್ಞಾನಿಗಳುಂ ವಿಹಾರಿಸುತ್ತುಂ ಬರ್ಪ್ಪರಾ ಪಾಟಲೀಪುತ್ರಕ್ಕೆವಂದು ಪೊಱವೊಱಲ ಬಹಿರುದ್ಯಾನವನದೊಳಿರ್ದ್ದರಂ ಸಂಪ್ರತಿ ಚಂದ್ರಗುಪ್ತಂ ಪೋಗಿ ವಂದಿಸಿ ಧರ್ಮಮಂ ಕೇಳ್ದು ತದನಂತರಂ ತನ್ನ ಭವಾಂತರಂಗಳಂ ಬೆಸಗೊಂಡಡೆ

ಭಟಾರರ್ ಪೇೞಲ್ ತೊಡಗಿದಱ್ ಈ ಜಂಬೂ ದ್ವೀಪದ ಭರತ ಕ್ಷೇತ್ರದೊಳವಂತಿ ಎಂಬುದು ನಾಡಲ್ಲಿ ವೈದಿಶಮೆಂಬುದು ಪೊೞಲ್ ಅದನಾಳ್ವೊಂ ಜಯವರ್ಮನೆಂಬನರಸನಾತನ ಮಹಾದೇವಿ ವಾರುಣಿಯೆಂಬೊಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತಾಪೊೞಲ ಸಾರೆ ಪಳಾಳಕೂಟಮೆಂಬೂರೊಳ್ ದೇವಿಲನೆಂಬೊಂ ಶಾಕಟಿಕ ಪರದನಾತನ ಭಾರ್ಯೆ ಪೃಥುವೀಶ್ರೀಯೆಂಬೊಳಾಕೆಯ ಗರ್ಭದೊಳ್ ಪಾಪಕರ್ಮಜೀವಂ ನೆಲಸಿದೊಡೇನುಂ ನೆವಮಿಲ್ಲದೆ ಕಸವರಮೆಲ್ಲಂ ಕೆಟ್ಟಿತ್ತು ಮತ್ತೊಂದು ದಿವಸಂ ಪಲಂಬರ್ ಶಾಕಟಿಕ ಪರದರ್ ಬೆರಸು ಬಂಡಿಗಳೊಳ್ ಪಟ್ಟಿಯುಂ ಪಲ ಧಾನ್ಯಂಗಳಂ ತೀವಿ ಪೊೞಲ್ಗೆ ಮಾಱಲೆಂದು ಪೋಪನ್ನೆಗಮೆಡೆಯೊಳಡವಿಯೊಳ್ ಬೇಡರುಂ ಬಟ್ಟೆಗಟ್ಟಿ ಮೇಲ್ವಾಯ್ದುಱಿದೊಡೆ ದೇವಿಲಂ ಮೊದಲಾಗಿ ಪಲಂಬರುಂ ಪರದರ್ ಸತ್ತರ್ ಉಳಿದರೆಲ್ಲಮೋಡಿ ಕೆಟ್ಟೊಡೆ ಬಂಡಮುಮೆತ್ತುಗಳುಂ ಮೊದಲಾಗೆಲ್ಲಮಂ ಕಳ್ಳರ್ ಕೊಂಡು ಪೋದರಾ ಪ್ರಸ್ತಾವದೊಳ್ ಪೃಥುವಿಶ್ರೀ ಬೆಸಲೆಯಾಗಿಯೊರ್ಗ್ಗೆ ಬಂದು ನಂದಿಮಿತ್ರನೆಂದಾ ಕೂಸಿಂಗೆ ಪೆಸರನಿಟ್ಟೆರಱ್ ಮೂಱು ತಿಂಗಳೊಳಗೆ ತಾಯುಂ ಕೞಿದೊಡೆ ಬಡನಂಟರ್ ನಡಪೆ ಬಳೆದನಾ ನಂಟರುಂ ಕೞಿದು ಕುಲಕ್ಷಯಮಾದೊಡೂರವರೆಲ್ಲಂ ಇಂತೆಂದರ್ ಈ ತರುವಲಿ ನಮ್ಮೂರೊಳಿರೆ ನಮಗೆ ಸಾವುಂ ಕೇಡುಮಮೋಘಮಕ್ಕುಮಿವನನಟ್ಟಿ ಕಳೆಯಿಮೆಂದೂರಿಂದಮನಿಬರುಮಟ್ಟಿ ಕಳೆದೊಡಾತನುಂ ಕೆಲದೂರ್ಗಳುಮಂ ನಾಲ್ಕೆಡೆಯುಮಂ ತೊೞಲ್ದು ಬೈಕಂದಿರಿದೆಲ್ಲಿಯಾನುಂ ಪೆತ್ತು ಪೆಱದೆಯಮಿಂತು ಬಾೞುತ್ತುಂ ಪದಿನೈದು ಪದಿನಾಱು ವರ್ಷದ ಪ್ರಾಯದಾನಾಗಿ ವೈದಿಶಮೆಂಬ ಪೊೞಲ್ಗೆ ಬರ್ಪೊನ್ನೆಗಂ ಕಾಷ್ಠಕೂಟನೆಂಬ ಬೆಸದವಂ ಪುಳ್ಳಿಯ ಪೊಱೆಯುಂ ಪೊತ್ತು ಪೊೞಲ್ಗೆ ಬರ್ಪೊನಂ ಕಂಡಾತನೊಡನೆ ಗೋಷ್ಠಿಯೊಳ್ ಬಂದು ಪೊಳವೊೞಲೊಳಾರಮೆಯೊಳು ಕಾಷ್ಠಕೂಟಂ ಸೇದೆಗೆಟ್ಟು ಪುಳ್ಳಿಯ ಪೊಱೆಯನಿಳಿಪಿ ಪಟ್ಟಿರ್ದ್ದೊಡೆ ತಾನುಂ ಪಟ್ಟಿರಲೆಂದು ಬಗೆದು ತಲೆಯೆತ್ತಿಡಲ್ಕರಸಿಯೇನುಮಂ ಕಾಣದೆ ತರ್ಪೊರ್ಮೆಣ್ಬರಿಂದಂ ತಳರ್ಚಲಾಱದಂತಪ್ಪ ಪಿರಿದೊಂದು ಸಿಲೆಯಂ ತಲೆಯತ್ತಿಟ್ಟು ಪಟ್ಟಿರ್ದ್ದುದಂ ಕಾಷ್ಠಕೂಟನಾತನ ಬಲಮಂ ಕಂಡು ತನ್ನ ಮನೆಗೊಡಗೊಂಡು ಪೋಗಿಯೂಡಿ ನಿನಗೀ ಪೊೞಲೊಳಾರಾನುಂ ನಂಟರೊಳರೆ ಎಂದು ಬೆಸಗೊಂಡೊಡಾರುಮಿಲ್ಲೆಂದೊಂಡಂತಪ್ಪೊಡೆ ನೀನೆಮ್ಮೊಡನಿರೆತ್ತಲುಂ ಪೋಗದಿರೆಂದು ತಾನುಮಾತನುಮಿಂತಿರ್ವ್ವರುಂ ದಿವಸಕ್ಕಂ ಪುಳ್ಳಿಯಂ ತರೆ ಪದಿಂಬರ್ ತರ್ಪ್ಪ ಪೊಱೆಯನೊರ್ವ್ವನೆ ತಪ್ಪನಂತು ಪಲವು ದಿವಸಮುಂ ತರೆ ಕಾಷ್ಠಕೂಟಂ ತನ್ನ ಪೆಂಡತಿಯಂ ಜಯಘಂಟೆಯೆಂಬೊಳನಿಂತೆಂದು ಕಲ್ಪಿಸಿದಂ ಈತಂಗೆ ನೀಂ ಬಸಿಱಿಂ ತೀವಿ ಬಡ್ಡಿಸದಿರೆಣ್ಣೆಯಂ ತಿಣ್ಣನೆಱೆಯದಿರ್ ಮೀಯಲ್ವೇಡಿದೊಡಮೆಱೆಯದಿರೆಂದು ಕಲ್ಪಿಸಿದೊಡಾಕೆಯುಮಾ ಪಾಂಗಿನೊಳ್ ದಿವಸಕ್ಕಂ ಬಡ್ಡಿಸೆ ನಂದಿಮಿತ್ರನುಂ ಪಿಱಿಯ ಪುಳ್ಳಿಯ ಪೊಱೆಗಳಂ ದಿವಸಕ್ಕಂ ತಂದು ಕುಡಲವಂ ಮಾಱಿ ಕಾಷ್ಠನೊಡೆಯನಾದನಿಂತು ದಿವಸಂಗಳ್ ಸಲೆ ಮತ್ತೊಂದು ದಿವಸಂ ಜಯಘಂಟೆ ಕರುಣಿಸಿ ತಣಿಯೆ ಬಡ್ಡಿಸಿದೊಡುಂಡು ಮಱುದಿವಸಮಿರ್ವ್ವರುಂ ಪುಳ್ಳಿಗೆ

ಪೋದಲ್ಲಿ ನಂದಿಮಿತ್ರನೆಂದಂ ಅಯ್ಯಾ ಎನಗುಡಲೇನುಮಿಲ್ಲ ಒಂದು ದಮ್ಮಕ್ಕಾದೊಡಂ ಸೀರೆಯುಂ ಕೊಡಿಯಿೀವೆಂದೊಡಂತೆಗೆಯ್ವೆಮೆಂದು ಮಱುಮಾತುಗೊಟ್ಟೆವರ್ವರುಂ ಪುಳ್ಳಿಯ ಪೊಱೆಯುಂ ಮನೆಗೆತಂದ ಬೞಿಕ್ಕೆ ಪೆಂಡತಿಯನೆಂದನೀತಂಗೆ ನೀ ಬಸಿಱಿಂ ತೀವಿಯುಣಲಿಕ್ಕಿದಾ ಎಂದೊಡೆ ಕರುಣಿಸಿ ಪರ್ವನೆಂದು ತಣಿಯೆಯುಣಲಿಕ್ಕಿದೆನೆಂದೊಡೆ ಮುಳಿದು ಸಾಯೆ ಬಡಿದು ಮನೆಯಿಂ ಪೆಂಡತಿನಯಟ್ಟಿ ಕಳೆದೊಡೆ ನಂದಿಮಿತ್ರಂ ಪೋಗಿ ಜಯಘಂಟೆಯುಂ ಬೆಸಗೊಂಡಂ ನಿಮ್ಮನೇಕೆ ಕಾಳಕೂಟಂ ಬಡಿದನಬ್ಬಾ ಎಂದು ಬೆಸಗೊಂಡೊಡೆ ನಿನಗೆ ನಿನ್ನೆ ತಣಿಯೆಯುಣಲಿಕ್ಕಿದೆನೆಂದು ಮುಳಿದು ಬಡಿದಟ್ಟಿ ಕಳೆದನೆಂದೊಡೆ ಇಂತಪ್ಪ ಪಂಚಮಹಾಪಾತಕನ ಮನೆಯೊಳ್ ಮಾರಿಯಿರ್ಕೆಂದು ಕಾಷ್ಠಕೂಟನಂ ಬಿಸುಟ್ಟು ಪೋಗಿ ಬೇಱೆ ತನಗೆ ಪುಳ್ಳಿಗಳಂ ದಿವಸಕ್ಕಂ ತಂದು ಮಾಱಲ್ ತಗುಳ್ದೊಡೆಂಟು ದಮ್ಮದ ಪುಳ್ಳಿಯಂ ತಂದಾಗಳೊಂದು ಪಣಮನಪ್ಪಡಂ ಪೆಱದೆ ಕೂಟ್ಗಿಮಂಬಲಿಗಮೆಣ್ಣೆಗಂ ಕೞಿಗಂ ಕೊಟ್ಟು ಪೋಕುಮಿಂತು ಬಾೞುತ್ತಿರೆ

ಮತ್ತೊಂದು ದಿವಸಂ ಪುಳ್ಳಿಗೆ ಪೋಗಿ ಪುಳ್ಳಿಯ ಪೊಱೆಯಂ ಪೊತ್ತು ಬಪ್ಪೊರ್ವನನ್ನೆಗಮೆಡೆಯೊಳ್ ಶಿವಗುಪ್ತರೆಂಬಾಚಾರ್ಯರಷ್ಟಾಂಗ ನಿಮಿತ್ತಂಗಳಂ ಬಲ್ಲೊರಡವಿಗೆ ಪೋಗಿ ಸಿದ್ಧಾಂತಮಂ ಪರಿವಡಿಗೆಯ್ದಂದಿನ ದಿವಸಮಲ್ಲಿಯೆ ದೇವರಂ ಬಂದಿಸಿ ಪಕ್ಷೋಪವಾಸದ ಪಾರಣೆಗೆಂದು ಪೊಟಲ್ಗೆ ಚರಿಗೆವುಗುತ್ತಂ ಬಂದೊಡಂ ನಂದಿಮಿತ್ರಂ ಕಂಡು ಆಶ್ಚರ್ಯಭೂತನಾಗಿ ನೀಡುಂ ನೋಡಿ ಇವರೆಲ್ಲಿಗೆ ವೋದಪ್ಪರೋ ಎಂದು ಬೞಿವೞಿಯನೆ ಬಂದು ಪೊಟವೊಟಲ ಬಸದಿಯ ಪ್ರಾಕಾರದೊಳಗೆ ಪುಳ್ಳಿಯ ಪೊಱೆಯನಿಕ್ಕಿ ನೋಟ್ಪಿ ನನ್ನೆಗಮಿವರನೆಂದವರ ಬೞಿವೞಿಯನೆ ಬರ್ಪ್ಪನ್ನೆಗಮಾ ದಿವಸಮರಸಂ ಶಿವಗುಪ್ತಭಟ್ಟಾರಗ್ಗಾಂ ಪಾರಣೆಯಂ ಮಾಡುವೆಂ ಪೆಱರಾರುಂ ನಿಱಿಸಲ್ ಸಲ್ಲದೆಂದು ಪೊಳಲೊಳಗೆ ಗೋಸಣೆಯಂ ತೊಟಲ್ಚಿದೊಡಂಜಿ ಯಾರುಂ ನಿಱಿಸುವರಿಲ್ಲದೆ ಭಟಾರರುಂ ಕಿಱುಮನೆ ಪೆರ್ಮನೆಯನ್ನದೆ ಯೋಗ್ಯಮಪ್ಪ ಮನೆಗಳಂ ಚರಿಗೆವುಗುತ್ತುಂ ಬಪ್ಪೊರರಮನೆಯಂ ಪೊಕ್ಕಾಗಳ್ ಕಂಡರಸನುಂ ಮಹಾದೇವಿಯುಂ ಸುವರ್ಣ ಪೂರ್ಣ ಕಲಶಮುಂ ಕನ್ನಡಿಯುಂ ಮಾದು ಫಲಮುಂ ಮೊದಲಾಗರ್ಚನೆಯಂ ಕೊಂಡಿದಿರಂ ಬಂದು ನಿಲಿಸಿ ಬಲಗೊಂಡು ತಂದುಚ್ಚಾಸನದೊಳಿರಿಸಿ ಭಟಾರರ ಕಾಲ್ಗೆ ಮಹಾದೇವಿ ನೀರ್ವೊಯ್ಯೆ ಅರಸಂ ತಾನೆ ಪ್ರಕ್ಷಾಳಿಸಿ ಬೞಿಕ್ಕೊಡವೋದ ಬೋಟದಲೆಯ ದೇಸಿಗನ ಕಾಲಂ ಬ್ರಹ್ಮಯ್ಯಾ ನೀಡಿ ನಿಮ್ಮ ಕಾಲಂ ತೊಳೆವೆನೆಂದು ಮಹಾದೇವಿ ತಾನೆ ಕಾಲಂ ಕರ್ಚ್ಚಿ ಭಟಾರರಗ್ಗಱಗಿ ಕುಳ್ಳಿರಿಸಿ ಪಿರಿಯ ಪೊನ್ನ ತಳಿಗೆಯುಮುಚ್ಚಮಪ್ಪಡ್ಡಣಿಗೆಯನಿಟ್ಟು ಬ್ರಹ್ಮಚಾರಿಗಂ ಪೊನ್ನ ತಳಿಗೆಯುಮಡ್ಡಣಗೆಯುಮನಿಟ್ಟು ಭಟಾರಕರ್ಗ್ಗರಸಂ ತಾ ಬಡ್ಡಿಸಲು ತಗುಳ್ದ ಬಳಿಯಂ ರಾಜಾನ್ನದ ಕೂೞುಂ ಪೆಸಱ ತೊವೆಯುಂ ಬೆಣ್ಣೆಗಾಸಿದಾಮೋದಂ ಸುಗಂಧ ಪರಿಮಳಮಪ್ಪ ತುಪ್ಪಮುಂ ಪಲವುಂ ತೆಱದ ಬಾಡುಗಳುಂ ತುಯ್ಯಲುಂ ಪೂರಿಗೆ ಘಾರಿಗೆ ಸೊಜ್ಜಿಗೆ ಘೃತಪೂರಂ ಲಡ್ಡುಗೆ ಮಂಡಗೆ ಮೊದಲಾಗೊಡೆಯ ಪದಿನೆಂಟು ತೆಱದ ಭಕ್ಷ್ಯಂಗಳಂ ನಾನಾಪ್ರಕಾರದ

ಪಾಕಂಗಳಂ ಭಟ್ಟಾರರ್ಗ್ಗೆ ಬಡ್ಡಿಸಿದಂತೆ ಬ್ರಹ್ಮಯ್ಯಂಗಂ ಮಹಾದೇವಿ ಬಡ್ಡಿಸಿದೊಡೆ ದೇಸಿಗಂ ಕಂಡು ಬೆಱಗಾಗಿ ಪುಟ್ಟಿದಂದಿಂ ದಿನ ತೊಟ್ಟಿಂತಪ್ಪುಣಿಸಂ ಕನಸಿನೊಳಪ್ಪೊಡಂ ಕಂಡಱಿಯದ ದೇಸಿಗಂ ನಾನಾ ಪ್ರಕಾರದುಣಿಸಂ ಸುಗಂಧಮಪ್ಪ ದಿವ್ಯಾಹಾರಮನಾಕಂಠ ಪ್ರಮಾಣಂ ಬರೆಗಂ ತಣಿಯೆಯುಂಡು ಬಳಿಕ್ಕೆ ಕರ್ಪೂರ ಸಮ್ಮಿಶ್ರಮಪ್ಪ ನೆಲವತ್ತಿಯಡಕೆಯ ಭಾಗಮಂ ಕೆಯ್ಯೀವಿ ಬ್ರಹ್ಮಯ್ಯಂಗೆ ಕೊಟ್ಟು ಭಟಾರರುಂ ಚರಿಗೆ ಮಾಡಿದ ಬೞಿಕ್ಕರಸನುಮಂ ಮಹಾದೇವಿಯುಮಂ ಕರ್ಮಕ್ಷಯಮುಮಕ್ಷಯ ದಾನಮಕ್ಕೆಂದು ಪರಸಿ ಪೊಱಮಟ್ಟು ಬಸದಿಯಂ ಬಲಗೊಂಡು ಭಟಾರರ ಬೞಿವೞಿಯನೆ ಪೋದಂ ಭಟ್ಟಾರರುಂ ಬಸದಿಯಂ ಬಲಗೊಂಡು ಈರ್ಯಾಪತ್ತಿಯಂ ಬಿಡಿಸಿ ಕಾಲಂ ಕರ್ಚ್ಚಿ ಗೋಚಾರ ನಿಯಮಂ ಗೆಯ್ವುದಂ ನಂದಿಮಿತ್ರಂ ನೋಡುತ್ತಿರ್ದ್ದಿಂತೆಂದು ಮನದೊಳ್ ಬಗೆದನನಿತಪ್ಪ ರೂಪುಮಂ ಕೆಯ್ಕೊಂಡೊಡೆ ದೇವಲೋಕದುಣಿಸುಂ ಪೂಜೆಯುಮಂ ಪಡೆಯಲಕ್ಕುಮೊಂದುಂ ಕ್ಲೇಶಮಿಲ್ಲದೆಲ್ಲಾ ಕಾಲಮುಮೆಂದು ಬಗೆದು ಭಟ್ಟಾರರ್ ನಿಯಮಂ ಗೆಯ್ದು ಸಮೆದಿರ್ದ ಬೞಿಕ್ಕೆ ಬಂದು ಮುಂದೆ ನಿಂದು ಕೈಗಳಂ ಮುಗಿದಿಂತೆಂದಂ ಎನ್ನಂ ನಿಮ್ಮಂತೆ ಮಾಡಿಮೆಂದೊಡೆ ಭಟಾರರಾತನಂ ನೋಡಿ ಅಲ್ಪಾಯುಷ್ಯನುಂ ಆಸನ್ನ ಭವ್ಯನುಮಪ್ಪುದನಱಿದೊಳ್ಳಿತಪ್ಪ ಮುಹೂರ್ತದೊಳ್ ತಪಂಬಡಿಸಿದೊಡಾತನುಂ ತಪಂ ಬಟ್ಟು ದೀಕ್ಷೋಪವಾಸಂ ಗೆಯ್ದಿರ್ದನನ್ನೆಗಂ ಅರಸನುಮರಸಿಯುಂ ಭಟಾರರೊಡವಂದ ಬ್ರಹ್ಮಚಾರಿ ತಪಂ ಬಟ್ಟನೆಂಬುದಂ ಕೇಳ್ದೊಸೆದು ಮುನ್ನೆ ನಮ್ಮ ಮನೆಯೊಳುಂಡು ತಪಂಬಟ್ಟನಿನ್ನು ನಾಳೆ ನಮ್ಮ ಮನೆಯೊಳಂ ಪಾನಿಗಟ್ಟುವಮೆಂದು ಬಗೆದಿರ್ದ್ದು ಮಱುದಿವಸಂ ಸಾಮಂತ ಮಹಾಸಾಮಂತರ್ಕಳುಂ ರಾಜ್ಯ ಚಿಹ್ನೆಂಗಳ್ವೆರಸು ಮಹಾವಿಭೂತಿಯಿಂದರಸಂ ಪೊತ್ತಾಱೆ ಬಸದಿಗೆ ಬಂದು ವಾಹನಂಗಳಿಂದಿೞಿದು ಬಲಗೊಂಡು ಗಂಧಪುಷ್ಪ ಧೂಪ ದೀಪಾಕ್ಷತಂಗಳಿಂ ದೇವರನರ್ಚ್ಚಿಸಿ ಕ್ರಿಯಾಪೂರ್ವಕಂ ಪಂಚಮುಷ್ಟಿಯಿಂ ಬಂದಿಸಿದಂತೆ ಕಿತ್ತಯ್ಯಂಗಳಂ ಬಂದಿಸಿ ಭಟಾರರಲ್ಲಿಗೆ ಬಂದು ಕುಳ್ಳಿರ್ದು ಭಟಾರಾ ಬಿನ್ನಪಂ ಕಿತ್ತಯ್ಯಗಳನಿಂದೆಮಗೆ ಕಾರುಣ್ಯಂ ಗೆಯ್ವುದು ನಾವು ಪಾನೆಗಟ್ಟಿಸಿ ಪುಣ್ಯಮಂ ನೆರಪಿಕೊಳ್ವೆಮೆಂದೊಡಂತೆಗೆಯ್ಯಿಮೆಂದೊಡಾ ನುಡಿಯಂ ಕಿತ್ತಯ್ಯಂಗಳ್ ಕೇಳ್ದು ಸಾಮಂತ ಮಹಾಸಾಮಂತಾದಿಗಳ ಸ್ವಾಮಿಯಪ್ಪ ಪೃಥ್ವೀಶ್ವರಂ ಬಂದೆನ್ನುಮನರ್ಚ್ಚಿಸಿ ನೀಚವೃತ್ತಿಯಿಂ ಕಿಂಕುರ್ವಾಣಂ ಗೆಯ್ದಪ್ಪನಹೋ ಆಶ್ಚರ್ಯಂ ತಪದ ಧರ್ಮದ ಫಲಮಿಲ್ಲಿಯೆ ಪ್ರತ್ಯಕ್ಷಮಾಯ್ತು ಇನ್ನುಂ ಮುಂದೆ ಪಿರಿದಾಗದೆ ಮಾಣದೆಂದು ತನ್ನೊಳೆ ತಱಿಸಂದು ಮತ್ತಮಾ ದಿವಸಂ ಉಪವಾಸಮಂ ಕೈಕೊಂಡರಿತ್ತಲ್ ಜಯಮರ್ವ ಮಹಾರಾಜಂ ಭಟ್ಟಾರರುಮಂ ಕಿತ್ತಯ್ಯಂಗಳುಮಂ ಬಂದಿಸಿರ್ದ್ದಂ ಭಟಾರರಱಿದೆ ಕಿತ್ತಯ್ಯಂಗಳ್ಗೆ ಏಷಣಾ ಸಮಿತಿ ಮೊದಲಾಗೊಡೆಯ ಬ್ರತಂಗಳಂ ಮತ್ತಂ ಸಂಕ್ಷೇಪದಿಂ ಪೇೞ್ದು ಕಿತ್ತಯ್ಯಂಗಳಿರಾ ನಿಮಗೆ ಶ್ರಮಮಾಯ್ತು ದೇವರಂ ಬಂದಿಸಿ ಚರಿಗೆಗೆ ಪೊಱಮಡುವುದೆನೆ ಮತ್ತಂ ತಾವು ಕೈಕೊಂಡುಪವಾಸಮಂ ಗುರುಗಳ್ಗೆ ಪ್ರಕಟಿಸಿದರದಂ ಕಿತ್ತಯ್ಯಂಗಳುಮಂ ಬಂದಿಸಿ ತನ್ನ ಮನೆಗೆ ಪೋಗಿ ಮಹಾದೇವಿಗೆಂದಂ ಇಂದೆನಗೆ ರಿಷಿಯರು ನಿಱಿಸಿ ಪುಣ್ಯಂಗೊಳ್ವ

ಭಾಗ್ಯಮಿಲ್ಲೆಂದೊಡೆ ಮಹಾದೇವಿಯಂತಪ್ಪೊಡೆ ನಾಳೆಯಾಂ ನಿಱಿಸಿ ಪುಣ್ಯಂ ಕೈಕೊಳ್ವೆನೆಂದೊಡರಸನೆಂದಂ ನಿನಗಮೆನಗಂ ಸಮಭಾಗ ಪುಣ್ಯಮೆಂದುಸಿರೆ ನೀಮೇಕೆನಗಿಂದು ಸಮಭಾಗಮೀಯದಾದಿರೀಪುಣ್ಯಮನಾನಿಂದು ನಿಱಿಸಿ ಕೈಕೊಳ್ವೆಂ ನೀಂ ನಾಳೆ ನಿಱಿಸೆಂದು ನುಡಿದು ಬಸದಿಗೆ ವೋಗಿಮೆನ್ನ ಭಾಗ್ಯಮೇಂ ಕಿಡಿಸುಗುಮೆ ನಾಳೆಯಾಂ ನಿಱಿಸಿಯಾವಗಂ ಪುಣ್ಯಮಂ ಕೈಕೊಳ್ವೆನೆಂದರಸಂಗೆ ಮಱು ಮಾತುಗೊಟ್ಟು ಮಱುದಿವಸಂ ಧಾರುಣಿ ಮಹಾದೇವಿ ಅಯ್ನೂರ್ವರರಸಿಯರ್ಕ್ಕಳುಂ ಪೆಂಡವಾಸದಗ್ಗಳದ ಸೂಳೆಯರ್ಕ್ಕಳುಂ ಬೆರಸು ವೇಸರಿಗೞ್ತಿಗಳುಂ ಪಿಡಿಗಳುಂ ಸಿಬಿಗೆಗಳುಮನೇಱಿ ಸೀಗುರಿಗಳುಮಂ ಕೊಡೆಗಳುಮಂ ಪಿಡಿಯಿಸಿ ಎಕ್ಕಮದ್ದಳೆಯ ಕೊಟಿಲ ಝುಂಕಾರದ ಪಱೆಗಳ್ಮುಂದೆ ಬಾಜಿಸುತ್ತುಂ ಬಳಿಯುಂ ಕಾಪಿನವರ್ವ್ವರೆ ಮುಂದಣ ಮಾನಸರಂ ಪಡಿಯರರ್ ತೊಲಗಿಸುತ್ತುಂ ವಿದ್ಯಾಧರಿಯಕ್ಕಳುಂ ಬರ್ಪಂತೆ ಬಂದು ಬಾಗಿಲ್ಮಾಡದ ಪೊಱಗಣ ದೆಸೆಯೊಳ್ ತಮ್ಮ ವಾಹನಂಗಳಿಂದಿೞಿದು ಬಸದಿಯಂ ಬಲಗೊಂಡೊಳಗಂ ಪೊಕ್ಕು ದರ್ಶನ ವಂದನೆಗಳಂ ಪೇೞ್ದೀರ್ಯಾಪತ್ತಿಯಂ ಬಿಡಿಸಿ ಗಂಧ ಪುಷ್ಪದೀಪ ಧೂಪಾಕ್ಷತಂಗಳಿಂದರ್ಚ್ಚಿಸಿ ಕ್ರಿಯಾಪೂರ್ವಕಂ ದೇವರಂ ಬಂದಿಸಿ ಶಿವಗುಪ್ತಭಟಾರರುಮನರ್ಚ್ಚಿಸಿ ಗುರುಭಕ್ತಿಗೆಯ್ದು ಬಂದಿಸಿ ಶ್ರಾವಕ ಬ್ರತಂಗಳನೇಱಿಸಿಕೊಂಡು ಬಳಿಕ್ಕಂತೆಂದಳ್ ಭಟಾರಾ ಇಂದೆಮ್ಮ ಮನೆಗೆ ಕಿತ್ತಯ್ಯಂಗಳನೊಡಗೊಂಡು ಬಂದು ಪಕ್ಕದಿರ್ದ್ದು ಪಾನೆಗಟ್ಟಿಸಿ ಮಾರ್ಗ್ಗಮಂ ತೋಱಿ ಮಗುೞಿ ಬಿಜಯಂಗೆಯ್ಯಿಮೆನೆ ಕಿತ್ತಯ್ಯಂಗಳಂ ನೀಮೆ ಬೆಸಗೊಳ್ಳಿಮವರೊಡಂಬಟ್ಟೊಡಾಮೊಡಗೊಂಡು ಬಂದಪ್ಪೆವೆಂದೊಡೆ ಮಹಾದೇವಿ ಕಿತ್ತಯಂಗಳಲ್ಲಿಗೆ ಪೋಗಿ ಕಾಲಂಪಿಡಿದು ಬಂದಿಸಿ ಇಂತೆಂದಳ್ ಕಿತ್ತಯ್ಯಾ ನಿಮಗಾವಿಂದು ಪಾನೆಗಟ್ಟುವೆಮೆಮ್ಮ ಮನೆಗೆೞ್ತರಲ್ ವೇೞ್ಪುದೆಂದು ಕಾಲಂ ಪಿಡಿದು ಪೊಡೆವಟ್ಟಿರ್ದ್ದಾಗಳರಸಿಯ ಮೊಗಮಂ ನೋಡಿ ನೆಱೆಯೆ ತೊಟ್ಟುಟ್ಟು ಪಸದನಂಗೊಂಡು ದೇವಗಣಿಕೆಯರನೆ ಪೋಲ್ವಯ್ನೂರ್ವರರಸಿಯರ್ಕ್ಕಳಿಂದಂ ಸೂಳೆಯರ್ಕ್ಕಳಿಂದಂ ಪರಿವೇಷ್ಟಿತೆಯಾಗಿರ್ದ್ದ ಶಚಿ ಮಹಾದೇವಿಯನೆ ಪೋಲ್ವ ಧಾರಿಣಿ ಮಹಾದೇವಿ ಎನ್ನ ಕಾಲ್ಗೆಱಗಿ ಪೊಡಮಟ್ಟಿರ್ದ್ದುದೆಲ್ಲಮೀ ತಪದ ಫಲಮಿನ್ನುಂ ಮುಂದೆ ಪಿರಿದು ಫಲಮುಂಟೆಂದು ಬಗೆದು ಅರಸಿಂಗಿಂತೆಂದರ್ ಅಬ್ಬಾ ಇಂದೆಮಗುಣಲ್ಕೆ ಬಗೆಯಿಲ್ಲುಪವಾಸಂ ಗೆಯ್ದಪ್ಪೆಮೆಂದು ಪರಿಚ್ಛೇದಿಸಿ ನುಡಿದೊಡೆ ಬಿನ್ನನೆ ವೊಗಂ ಮಾಡಿ ಭಟ್ಟಾರರಂ ಬಂದಿಸಿ ಪೋಗಿಯರಸಂಗೆ ಕಿತ್ತಯ್ಯಂಗಳಿಂದುಪವಾಸಂ ಗೆಯ್ದರೆಂದು ಪೇೞ್ದಾಗಳ್ ಮತ್ತಿರುಳಿನ ಕರಣ ವೇಳೆಯೊಳ್ ವಜ್ರಸೇನನೆಂಬ ಮಂತ್ರಿ ಅರಸಂಗಿಂತೆದು ಬಿನ್ನಪಂಗೆಯ್ದಂ ದೇವಾ ನಾಳೆಯಾಂ ನಿಱಿಸಿ ಕಿತ್ತಯ್ಯಂಗಳ್ಗೆ ಪಾರಣೆಯಂ ಮಾಡಿಸುವೆನೆನೆ ಎಂದೊಡಂತೆ ಗೆಯ್ಯೆಂದೊಡೆ ಮಱು ದಿವಸಂ ಬಸದಿಗೆ ಬಂದು ಭಟ್ಟಾರಾ ಕಿತ್ತಯ್ಯಂಗಳನೆಮ್ಮ ಮನೆಗೊಡಗೊಂಡು ಬಂದು ಚರಿಗೆದೋಱಿ ನೀಮುಂ ಬಿಜಯಂಗೆಯ್ಯಿಮೆನೆ ಕಿತ್ತಯ್ಯಂಗಳೊಡಂಬಟ್ಟೊಡೊಡಗೊಂಡು ಬರ್ಪ್ಪೆಂ ಅವರನೊಡಂಬಡಿಸಿಮೆಂದೊಡೆ ಕಿತ್ತಯ್ಯಂಗಳಲ್ಲಿಗೆ ಪೋಗಿ ಕಿತ್ತಯ್ಯಾ ಇಂದೆಮ್ಮ ಮನೆಯೊಳ್ ಪಾರಿಸಲ್ಕೆ ವೇೞ್ಕುಮೆಂದು ಕಾಲಂ ಪಿಡಿದು ಪೊಡವಟ್ಟಿರ್ದ್ದೊನಂ ನೋಡಿ ರಾಜೋವಾ

ರಾಜಾಮಾತ್ಯೋವಾ ಎಂದು ಸಾಮಂತ ಮಹಾ ಸಾಮಂತರ್ಕಳಿಂದಂ ಪರಿವೇಷ್ಟಿನಾಗಿರ್ದ್ದ ಮಂತ್ರಿ ಎನಗೆ ಪೊಡವಟ್ಟನಿದೆಲ್ಲಂ ತಪದ ಮಹಾತ್ಮ್ಯಮಿನ್ನುಂ ಮುಂದೆ ಪಿರಿದುಂಟೆಂದು ಬಗೆದು ಇಂತೆಂದರ್ ಆಮಿಂದುಪವಾಸಂಗೆಯ್ದೆಮೆಂದೊಡಾತನುಮೆನಗೆ ಪುಣ್ಯಮಿಲ್ಲಾಗದೆಂದು ನುಡಿದು ಭಟಾರರಂ ಬಂದಿಸಿ ಪೋದಂ ಮತ್ತಮಿರುಳಿನ ಕರಣ ವೇಳೆಯೊಳರ್ಹದ್ದಾಸನೆಂಬೊಂ ರಾಜಶ್ರೇಷ್ಠಿ ಅರಸರ್ಗ್ಗೆ ಬಿನ್ನಪಂಗೆಯ್ದಂ ನಾಳೆಯಾಂ ಕಿತ್ತಯ್ಯಂಗಳ್ಗೆ ಪಾರಣೆಯಂ ಮಾಡಿಸುವೆಂದೊಡರಸನಂತೆ ಗೆಯ್ಯೆಂದೊಡಾತನು ಬಸದಿಗೆ ಪೋಗಿ ಭಟಾರರಂ ಬಂದಿಸಿ ಕಿತ್ತಯ್ಯಂಗಳಂ ಬಂದಿಸಿ ಗುರುಗಳನುಮತದಿಂದೆಮ್ಮ ಮನೆಗೆ ಚರಿಗೆ ಬರಲ್ವೇಟ್ಕುಮೆಂದೊಡುಪವಾಸಂ ಗೆಯ್ದೆನೆಂದೊಡಾತನುಂ ಭಟಾರರಂ ಬಂದಿಸಿ ಪೋದಂ

ಇತ್ತ ನಂದಿಮಿತ್ರ ಕಿತ್ತಯ್ಯಂಗಳ್ಗೆ ಶ್ರಮಮಂ ಭಟ್ಟಾರರಱಿದು ಕಿತ್ತಯ್ಯಾ ಪಂಚನಮಸ್ಕಾರಮ ಂಮಾಣದಿರುಳುಂ ಪಗಲುಂ ಓದುತ್ತಿರಿಮೆಂದು ಕಲ್ಪಿಸಿದೊಡವರುಮಿರುಳಂ ಪಗಲುಂ ಓದುತ್ತಿರೆ ಮತ್ತಿತ್ತಂ ಇರುಳಿನೋಲಗದೊಳ್ ನೆರೆದಿರ್ದ ನೆರವಿಯೊಳರಸನುಂ ಮಹಾದೇವಿಯಂ ಕಿತ್ತಯ್ಯಂಗಳ ತಪಮಂ ಗುಣಮುಮಂ ಪೊಗಳುತ್ತುಂ ತಪಂಬಟ್ಟ ದಿವಸದಿಂ ತಗುಳ್ದು ಇಂದಿಂಗಯ್ದು ದಿವಸಮುಣ್ಬುದಿಲ್ಲ ಕುಡಿವುದಿಲ್ಲುಪವಾಸಂ ಗೆಯ್ದಿರ್ದ್ದರಾಮೆನಿತುಂ ಕೇಱಿ ನುಡಿದೊಡಂ ಚರಿಗೆ ಮಾಡಲೊಲ್ಲರಿನ್ನವು ಸಾಹಸಮುಂ ಸತ್ವಮುಮಾರ್ಗ್ಗಮೊಳವೆ ಎಂದರಸನುಮರಸಿಯುಂ ಪೊಗಟ್ಬುದಂ ಕೇಳ್ದು ಯುವರಾಜನೆರ್ದ್ದು ಬಿನ್ನಪಂಗೆಯ್ದಂ ದೇವಾ ಕಿತ್ತಯ್ಯಂಗಳ್ಗೆ ನಾಳೆಯಾಂ ಪಾರಣೆಯಂ ಮಾಡಿಸುವೆನೆಂದೊಡರಸನಂತೆ ಗೆಯ್ಯೆಂದೊಡೆ ಮಱು ದಿವಸಂ ಯವರಾಜಂ ಮಹಾ ವಿಭೂತಿವೆರಸು ಬಸದಿಗೆ ಪೋಗಿ ದೇವರಂ ಭಟಾರರುಮನರ್ಚಿಸಿ ಬಂದಿಸಿ ಭಟಾರಾ ಕಿತ್ತಯ್ಯಂಗಳಿಂದೆಮ್ಮ ಮನೆಯೊಳ್ ಪಾರಿಸುವಂತಿರೆ ಬೆಸಸಿಮೆನೆ ಕಿತ್ತಯ್ಯಂಗಳನೊಡಂಬಡಿಸಿ ನಿಱಿಸಿಮೆನೆ ಕಿತ್ತಯ್ಯಂಗಳ ಕಾಲಂ ಪಿಡಿದು ಪೊಡೆವಟ್ಟು ಕಿತ್ತಯ್ಯಾ ಎಮ್ಮ ಮನೆಯೊಳಿಂದು ಪಾರಿಸಲ್ವೇಟ್ಕುಮೆಂದೊಡೆ ಕಿತ್ತಯ್ಯಂಗಳಾತನ ಶ್ರೀಯುಂ ವಿಭೂತಿಯುಂ ತೇಜಮುಮಂ ಕಂಡಿಂತಪ್ಪ ಕ್ಷತ್ರಿಯ ಪುತ್ರಾದಿಗಳೆಲ್ಲಮೆನಗೆಱಗಿ ಪೊಡೆಮಟ್ಟ ಕಿಂಕುರ್ವಾಣಂ ಗೆಯ್ದಪ್ಪರುಣ್ಬುದರ್ಕ್ಕೆ ಈಗಲ್ ಸಂಕಟಮೆ ಇನ್ನುಂ ಮುಂದೆ ಪಿರಿದುಂಟೆಂದು ಬಗೆದು ಇಂದುಪವಾಸಂ ಗೆಯ್ದೆಮೆಂದು ಮಱುಮಾತುಗೊಟ್ಟೊಡೆ ವಿರಾಗನಾಗಿ ಯುವರಾಜಂ ಭಟ್ಟಾರರಂ ಬಂದಿಸಿ ಪೋದನ್ ಇಂತು ಆಱು ದಿವಸಂ ಪೋದ ಬಳಿಕ್ಕೇೞನೆಯ ದಿವಸದಂದು ನೇಸಱ್ ಮೂಡಿದೊಡೆ ಭಟಾರರಲ್ಲಿಗೆ ನಂದಿಮಿತ್ರಂ ಬಂದು ಬಂದಿಸಿ ಇಂತೆಂದಂ ಭಟಾರಾ ಇನಿತು ಕಾಲಮುಮುಂಡುಣಿಸು ಸಾಲ್ಗುಮೆಮಗೆ ಜಾವಜ್ಜೀವಂ ಬಾಟ್ಟನ್ನೆಗಂ ಉಪವಾಸಂ ಪಚ್ಚಕ್ಖಾಣಂಗುಡುವುದೆಂದೊಡೆ ಭಟಾರರೆಂದರ್ ನೀಮುಂ ಮಹಾ ಪುರುಷರ್ ನಿಮ್ಮನ್ನರ್ ಧೈರ್ಯವಂತರುಂ ಸತ್ವವಂತರುಂ ಆಱುಮಿಲ್ಲಾಮಿನಿತು ಕಾಲಂ ತಪಂಗೆಯ್ದಪ್ಪೆಮೆಮಗಪ್ಪೊಡಮಿನಿತು ಧೈರ್ಯಮುಂ ಸತ್ವಮಿಲ್ಲೆಂದು ಗುರುಗಳ್ ಪೊಗಟ್ಟೊಡೆ ಗುರುಗಳ ಪೊಗಳ್ತೆಗೆ ರಾಗಿಸಿ ಸಂತೋಷಂಬಟ್ಟಿರ್ದ್ದೊಡೆ ಭಟಾರರೆಂದರ್ ನಿಮಗಿಂದಿನ ದಿವಸದನಿತೆಯಾಯುಷ್ಯಮೆಂದು ಪೇೞ್ದುಂ ಜಾವಜ್ಜೀವಂ ಚತುರ್ವಿಧಮಪ್ಪಾಹಾರಕ್ಕಂ

ಶರೀರಕ್ಕಂ ನಿವೃತ್ತಿಗೆಯ್ಯೆಂದು ಪಚ್ಚಕ್ಖಾಣಂಗೊಟ್ಟು ಬಸದಿಯೊಂದು ಕೋಣೆಯೊಳೀ ಎಡೆಯೊಳ್ ನೀಮೊಂದೆ ಕೆಲದೊಳ್ ಮಗುಟಿದೆ ತಳರದೆ ಕೈಯಂ ಕಾಲ್ಗಳುಮನುಡುಗದೆ ನೀಡದೆ ಬಾಟ್ಟಿನ್ನೆಗಂ ಪಟ್ಟಿರ್ದ್ದು ಪಂಚನಮಸ್ಕಾರಮಂ ಮನದೊಳೋದುತ್ತಿರಿಮೆಂದು ಕಲ್ಪಿಸಿ ಪಟ್ಟಿರಿಸಿಯಾರಾಧನೆಯನರ್ಚ್ಚಿಸಿ ಭಟಾರರಾರಾಧನೆಯಂ ವಕ್ಖಾಣಿಸುವುದಂ ಕೇಳುತ್ತಿರ್ದ್ದರ್ ಮತ್ತಿತ್ತ ಕಿತ್ತಯ್ಯಂಗಳ್ ಸನ್ಯಸನಂ ಗೆಯ್ದರೆಂಬೀ ಮಾತನರಸನಾದಿಯಾಗಿ ಪೊಟಿಲ ಜನಂಗಳೆಲ್ಲಂ ಕೇಳ್ದು ಪಿರಿದುಂ ಸಂಭ್ರಮಮಾಗಿ ಅರಸನುಂ ಮಹಾದೇವಿಯುಂ ಮಂತ್ರಿಯುಂ ರಾಜಶ್ರೇಷ್ಠಿಯುಂ ಯುವರಾಜನುಂ ಮೊದಲಾಗಿ ಪೊಟಿಲ ಜನಂಗಳೆಲ್ಲಂ ಕೇಳ್ದು ಮಿಪ್ಪೊರ್ವ್ವುತ್ತುಮರ್ಚನೆಯಂ ಕೊಂಡು ಬಂದು ಅರ್ಚಿಸಿ ಕಿಱಿದುಂ ಬೇಗಮಿರ್ದ್ದಾರಾಧನೆಯಂ ವಕ್ಖಾಣಿಸುವುದಂ ಕೇಳ್ದು ಮಿಥ್ಯಾದೃಷ್ಟಿಗಳಪ್ಪವರ್ ಶ್ರಾವಕ ಬ್ರತಂಗಳಂ ಕೈಕೊಂಡರ್ ಶ್ರಾವಕರುಂ ದೃಢ ಸಮ್ಯಗ್ ದೃಷ್ಟಿಗಳಾಗಿ ಬಂದಿಸಿ ಪೋದರ್ ಇತ್ತ ನೇಸರ್ ಪಟ್ಟಾಗಳ್ ಕಿತ್ತಯ್ಯಂಗಳ್ಗಾ ಸನ್ನ ಕಾಲಮಾದುದೆಂಬುದಂ ಭಟಾರರಱಿದಿಂತೆಂದರ್ ಕಿತ್ತಯ್ಯಾ ನಿಮಗೀಗಳ್ ಪ್ರಾಣಂ ಪೋಗಲ್ ಬಗೆದಪ್ಪುದು ದೇವರಂ ಧ್ಯಾನಿಸುವುದು ಪಂಚನಮಸ್ಕಾರಮನೋದುತ್ತುಮುಚ್ಚರಿಸುವುದಂ ಕೇಳುತ್ತಮಿರಿ ಎಂದು ಕಲ್ಪಿಸಿ ಭಟಾರರ್ ಪಂಚನಮಸ್ಕಾರಮಂ ಪಿರಿದುಂ ಬೇಗಂ ಪೇಟಿ ಪ್ರಾಯೋಪಗಮನದಿನೆಂತಂತೆ ಶುಭ ಪರಿಣಾಮದಿಂ ಸಹಜ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಮುಡಿಪಿ ಸೌಧರ್ಮ ಕಲ್ಪದೊಳೆರಡು ಸಾಗರೋಪಮಾಯುಷ್ಯಮನೊಡೆಯೊಂ ಕನಕಧ್ವಜನೆಂಬೊಂ ದೇವನಾಗಿ ಪುಟ್ಟಿಯವಧಿಜ್ಞಾನದಿಂ ತನ್ನ ಭವಮನರಿದಾ ಶರೀರದಿಂದಮಿಂತಪ್ಪ ದಿಬ್ಯ ಶರೀರಮಂ ಪೂಜಿಸಲ್ಕೆಂದು ಮೂಱು ಕೋಟಿ ಪರಿವಾರ ದೇವರ್ಕ್ಕಳುಂ ಮೂಱು ಲಕ್ಕೆ ದೇವಿಯರ್ಕ್ಕಳುಂ ಅಪ್ಸರೆಯರ್ಕ್ಕಳುಂ ಗಣಿಕೆಯರ್ಕ್ಕಳುಂ ಬೆರಸು ಸುರತ್ನವತಿಯುಮಪ್ಪ ದಿವ್ಯ ವಿಮಾನಮುಂ ಘಂಟಾಜಾಳ ಮುಕ್ತಾಜಾಳ ಹೇಮಜಾಳಂಗಳಿಂದೊಪ್ಪುವ ವಿಮಾನಮನೇಱಿ ಮಹಾ ವಿಭೂತಿಯಿಂ ತಗುಳ್ದು ರಗಾಮರಂ ಬೆರಸು ಪಾಡುತ್ತುಮಾಡುತ್ತುಂ ಬರ್ಪನ್ನೆಗಂ

ಇತ್ತ ವೈದಿಶಮೆಂಬ ಪೊಟಿಲೊಳ್ ನಂದಿಮಿತ್ರ ಕಿತ್ತಯ್ಯಂಗಳ್ಮುಡಿಪಿದರೆಂಬುದಂ ಕೇಳ್ದರಸನುಂ ಮಹಾದೇವಿಯುಂ ಮಂತ್ರಿಯುಂ ಪೆರ್ಗ್ಗಡೆಯುಂ ಮೊದಲಾಗಿ ಪೊಟಿಲೊಳುಳ್ಳ ಜನಮೆಲ್ಲಮರ್ಚ್ಚನೆಗಳಂ ಕೊಂಡು ಬಂದರಸಂ ತಾಂ ಪಕ್ಕದಿರ್ದ್ದು ಕ್ಷಪಣಕನನೊಯ್ವ ವಿಮಾನಮುಮಂ ಮತ್ತಂ ಶೋಭೆಗೆಂದು ಪಲವುಂ ವಿಮಾನಂಗಳುಮನೊಳ್ಳಿದುವಾಗಿ ಮಾಡಿಸಿ ಪಲವುಂ ನೇತ್ರದ ಪಟಿವುಲ್ಲವಂಗಳಂ ಧ್ವಜ ಪತಾಕೆಗಳುಮನೆತ್ತಿಸಿ ಚಾತುರ್ವರ್ಣ ಶ್ರವಣ ಸಂಘ ಸಹಿತಂ ಪಟುಪಟಹ ಪಣವ ತುಣವ ಬಂಭೆ ಮರ್ದ್ದಳೆ ಝಲ್ಲರಿ ಮುಕುಂದ ತಾಳ ಕಾಹಳ ಶಂಖ ವಂಶ ವೀಣಾಸ್ವರಂಗಳೆಸೆಯೆ ಕವಿವರರುಂ ಪೆಂಡವಾಸದೊಳ್ವೆಂಡಿರ್ಕ್ಕಳುಂ ವಿಮಾನಂಗಳ ಮುಂದೆ ಪಾಡುತ್ತುಮಾಡುತ್ತುಂ ದಮ್ಮಮುಮಂ ಪೊನ್ನುಮುಮಂ ಕೇಳಿ ಮಾಡಿ ಮುಂದೆ ಸೂಸುತ್ತಮೊಯ್ವುದಂ ಕನಕ ಧ್ವಜನೆಂಬ ದೇವಂ ಕಂಡೆನ್ನ ದೇಹಕ್ಕಿವರೆಲ್ಲಮಿನಿವಿರಿದರ್ಚ್ಚನೆಯುಮಂ ಪೂಜೆಯುಮಂ ವಿಭವಮಂ ಪ್ರಭಾವನೆಯಂ

ಮಾಡಿದಪ್ಪರೆಂದೊಡಾನೆನ್ನ ದೇಹಕ್ಕೆ ಮಾಡದಿರ್ಪನೆ ಎಂದು ಪಲವು ವಿಮಾನಂಗಳನಂತಗುರ್ವಿಸಿ ಕ್ಷಪಣಕನ ವಿಮಾನದ ಮುಂದೆ ಬಳಸಿಯುಂ ಪೋಪಂತು ಮಾಡಿಯಾಕಾಶಮೆಲ್ಲಮಂ ವಿಮಾನಮಯನಾಗಿ ವಿಗುರ್ವ್ವಿಸಿ ದೇವಲೋಕದ ಪಱೆಗಳಂ ಬಾಜಿಸುತ್ತುಂ ನಮೇರು ಮಂದಾರ ಪಾರಿಜಾತಮೆಂಬ ಪೂಗಳಂ ಸುರಿಯುತ್ತುಂ ದೇವರ್ಕ್ಕಳು ದೇವಿಯರ್ಕ್ಕಳು ಸಹಿತಂ ಕ್ಷಪಣಕನ ವಿಮಾನದ ಮುಂದಿದ್ದಿರ್ಪ್ಪಂತೆಂದು ಪೇೞ್ದಾಡಿದಂ

ಗಾಹೆ ॥ ಪೆಚ್ಚ ಪೆಚ್ಚಹ ಓದಣ ಮುಂಡಂ ಅಚ್ಛರಮಜ್ಝಗಯಂ ರಮಣೆಜ್ಜಂ
ಜೆಂಜೆಣ ಮಂತೆಣ ಕಾರಣ ಏಣ ಪವ್ವಯವ್ವಂ ಹೋಇ ಣರೇಣ ॥

ಎಂದು ಭಂದಭಂದದಿಂದಂ ಪೇೞ್ದಾಡುವುದಂ ಕಂಡರಸಂ ಮೊದಲಾಗಿ ಪೊೞಲ ಜನಮೆಲ್ಲಂ ಚೋದ್ಯಂಬಟ್ಟು ಬೆಱಗಾಗಿ ನೋಡುತ್ತಿರ್ದ್ದಿರ್ಪ್ಪಂತೆಂದರಸಂ ಬೆಸಗೊಂಡಂ ನೀಮಾರ್ಗ್ಗೇನೆಂಬಿರೆಲ್ಲಿಂ ಬಂದಿರಿಂತೇಕೆ ಪೇೞ್ದಾಡಿದಪ್ಪಿರೆಂದು ಬೆಸಗೊಂಡೊಡಾನಲ್ತೆ ನಂದಿಮಿತ್ರನಪ್ಪ ಕಿತ್ತಯ್ಯನೆನುಣಿಸಿಂಗೆಂದು ತಪಂಬಟ್ಟಾಱು ದಿವಸಮುಪವಾಸಂ ಗೆಯ್ದು ಸನ್ಯಸನಂಗೆಯ್ದು ಮುಡಿಪಿ ದೇವಲೋಕದೊಳ್ ಕನಕಧ್ವಜನೆಂಬೊಂ ದೇವನಾಗಿ ಪುಟ್ಟಿ ಎನ್ನ ದೇಹಮಂ ಪೂಜಿಸಲ್ ನಿಮಗೆನ್ನ ವಿಭವಮಂ ತೋಱಿಸಲ್ ಬಂದೆನೆಂದು ಪೇೞ್ದು ತನ್ನ ಶರೀರಮಂ ದಿವ್ಯಮಪ್ಪ ಗಂಧಪುಷ್ಪದೀಪಧೂಪಾಕ್ಷತೆಗಳಿಂದಮರ್ಚ್ಚಿಸಿ ತನ್ನ ಗುರುಗಳಪ್ಪ ಶಿವಗುಪ್ತರೆಂಬಾಚಾರ್ಯರುಮಂ ಪೂಜಿಸಿ ಬಂದಿಸಿ ನಿಮ್ಮ ಪ್ರಸಾದದಿಂದೆನಗಿನಿವಿರಿದು ಶ್ರೀಯುಂ ವಿಭೂತಿಯುಮೈಶ್ವರ್ಯಮುಂ ದೇವತ್ವ ಮುಮಾದುದೆಂದು ಪೇೞ್ದು ಪೊಡೆವಟ್ಟು ತನ್ನ ದೇವಲೋಕಕ್ಕೆ ಪೋದನ್ ಇತ್ತರಸನುಮದೆಲ್ಲಮಂ ಕಂಡು ಸಂಸಾರ ಶರೀರ ಭೋಗ ವೈರಾಗ್ಯ ಪರಾಯಣನಾಗಿ ಶ್ರೀವರ್ಮನೆಂಬ ತನ್ನ ಪಿರಿಯ ಮಗಂಗೆ ರಾಜ್ಯ ಪಟ್ಟಂಗಟ್ಟಿ ಪಲರುಮರಸು ಮಕ್ಕಳುಂ ಮಹಾದೇವಿ ಮೊದಲಾಗಿ ಪಲಂಬರುಮರಸಿಯರ್ಕ್ಕಳುಂ ಪರಿವಾರದವರುಂ ಪೊೞಲ ಪಲಂಬರು ಜನಂಗಳೆಲ್ಲಂ ಶಿವಗುಪ್ತ ಭಟ್ಟಾರರ ಪಕ್ಕದೆ ತಪಂಬಟ್ಟು ದರ್ಶನ ಜ್ಞಾನ ಚಾರಿತ್ರಂಗಳಳೊಳೊಳ್ಳಿತ್ತಾಗಿ ನೆಗೞ್ದು ಪಶ್ಚಾತ್ಕಾಲದೊಳ್ ಸಂನ್ಯಸನಂ ಗೆಯ್ದು ಮುಡಿಪಿಯನಿಬರುಂ ದೇವಲೋಕಕ್ಕೆ ಪೋದರ್ ಮತ್ತಂ ಕನಕ ಧ್ವಜನೆಂಬೊಂ ದೇವಂ ಪಲಕಾಲಂ ದೇವಲೋಕದ ಸುಖಮನನುಭವಿಸಿ ಬಂದಿಲ್ಲಿ ನೀಂ ಸಂಪ್ರತಿ ಚಂದ್ರಗುಪ್ತನಾಗಿ ಪುಟ್ಟಿದೆ ಎಂದು ಸಮಾಧಿಗುಪ್ತ ಭಟಾರರ್ ತನ್ನ ಭವಮಂ ಪೇೞ್ದೊಡಾ ದಮಾನುಮೊಸೆದು ಸಂತೋಸಂಬಟ್ಟು ಭಟಾರರಂ ಬಂದಿಸಿ ತನ್ನ ಮನೆಗೆ ಪೋಗಿ ಇಂತು ಸಂಪ್ರತಿ ಚಂದ್ರಗುಪ್ತ ಮಹಾರಾಜಂ ಪೃಥುವಿಯನೇಕ ಛತ್ರಚ್ಛಾಯೆಯಿಂದಂ ಆಳುತ್ತುಮುಜ್ಜೇನಿಯೊಳ್ ಸುಖದಿಂದಿರ್ಪ್ಪನ್ನೆಗಂ

ಇತ್ತ ದ್ವಾದಶಾಂಗ ಚತುರ್ದಶ ಪೂರ್ವಧಾರಿಗಳಪ್ಪ ಭದ್ರಬಾಹು ಭಟಾರರ್ ಪಿರಿದುಂ ರಿಷಿ ಸಮುದಾಯಂಬೆರಸು ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತು ಬರ್ಪೊರುಜ್ಜೇನಿಗೆ ವಂದು ಪೊೞಲ ಬಪಿರುದ್ಯಾನ

ವನದೊಳಿರ್ದ್ದರಾ ಮಾತನರಸಂ ಕೇಳ್ದು ಸಪರಿವಾರಂ ಬೆರಸು ಪೋಗಿ ಭಟಾರರಂ ಬಂದಿಸಿ ಸದ್ಧರ್ಮ್ಮಮಂ ಕೇಳ್ದು ಶ್ರಾವಕ ಬ್ರತಂಗಳನೇಱಿಸಿಕೊಂಡು ಬಂದಿಸಿ ತನ್ನ ಮನೆಗೆ ಪೋದನ್

ಇತ್ತ ಭಟಾರರುಂ ಪಲವು ದಿವಸಮಾ ಪೊಟಿಲೊಳಿರೆ ಮತ್ತೊಂದು ದಿವಸಂ ಸಮುದಾಯಮೆಲ್ಲಮಂ ಚರಿಗೆವುಗಿಸುತ್ತುಮೆಲ್ಲರುಮಂ ನಿಱಿಸಿ ತಾಮೊರ್ವ್ವರೆವೊಂದು ಮನೆಯುಂ ಪೊಕ್ಕಾಗಳಾ ಮನೆಯೊಳಾರುಮಿಲ್ಲೋಸರಿಗೆಯೊಳ್ ತೊಟ್ಟಿಲೊಳಿರ್ದ್ದವ್ಯಕ್ತ ಕಿಱುಗೂಸು ಬೋಳಹ ಬೋಳಹ ಭಟಾರಾ ಎಂದತ್ತಾಗಳಾ ವಚನಮಂ ಭಟ್ಟಾರರ್ ಕೇಳ್ದು ದಿಬ್ಯವಾಕ್ಯಮೆಂದಱಿದು ಕಾಲ ಪ್ರಮಾಣಮಂ ಬೆಸಗೊಂಡಡೆ ದ್ವಾದಶ ವರ್ಷಮೆಂದು ಪೇಳ್ದಿತ್ತು ಭಟಾರರುಮಿದು ಕಾಲದೋಷದಿಂದಂ ಪ್ರಜಾಪೀಡೆಯಾದಪುದೆಂದಱಿದು ಕಾರುಣ್ಯಬುದ್ಧಿಯಿಂದಾಹಾರಂಗೊಳ್ಳದಲಾಭಂ ಮಾಡಿಯಂತೆ ಬಸದಿಗೆ ಪೋಗಿ ಗೋಚಾರನಿಯಮಂಗೆಯ್ದು ಬಳಿಕ್ಕೆ ರಿಷಿಯರ್ಕ್ಕಳ್ಗೆಲ್ಲಂ ಇಂತೆಂದರ್ ಈ ನಾಡೊಳ್ ಪನ್ನೆರಡು ವರ್ಷಂಬರೆಗಮನಾವೃಷ್ಟಿಯಾಗಿ ದುರ್ಭಿಕ್ಷಮಾದಪುದು ಈ ನಾಡೊಳಗಿರ್ದ್ದ ರಿಷಿಯರ್ಕ್ಕಳ್ಗೆಲ್ಲಂ ಬಱಿಯಟ್ಟಿ ಬರಿಸಿ ಪೋಪಂ ದಕ್ಷಿಣಾಪಥಕ್ಕೆಂದು ರಿಷಿಯರ್ಕ್ಕಳ್ಗೆಲ್ಲಂ ಬಳಿಯನಟ್ಟಿ ಬರಿಸಿದರ್ ಇತ್ತರಸನುಮಾ ದಿವಸದಿರುಳು ಪದಿನಾಱು ಪೊಲ್ಲಗನಸುಗಳಂ ಕಂಡನವಾವುವೆಂದೊಡೆ ಆದಿತ್ಯನಸ್ತಮಾನಕ್ಕೆ ಸಲ್ವುದುಂ ಕಲ್ಪವೃಕ್ಷದ ಕೋಡ್ಮುಡಿವುದುಮಂ ನೆಲಕ್ಕೆ ವರುತ್ತಿರ್ದ್ದ ವಿಮಾನಂ ಬಾರದೆಡೆಯಿಂದೆ ಮೇಗೆ ಮಗುೞ್ವುದುಮಂ ಪನ್ನೆರಡು ತಲೆಯ ಪಾವುಮಂ ಚಂದ್ರನೊಡೆದುದುಮಂ ಕಡುಗಡಿಯವಪ್ಪೆರಡಾನೆಗಳ್ ತಮ್ಮೊಳ್ ಪೋಟಿಲ್ ಸಾರ್ದ್ದು ಪೆಱಪಿಂಗಿ ಪೋಪುದುದುಮಂ ಮೀನಂಬುೞುವುಮಂ ನೀರಿಲ್ಲದ ಕೆಱೆಯ ನಡುವುಮಂ ಪೊಗೆಪೆರ್ಚ್ಚೆ ನೆಗೆವ ಕಾೞ್ಕಿಚ್ಚುಮಂ ಸಿಂಹಾಸನದ ಮೇಗೇಱಿರ್ದ್ದ ಕೋಡಗಮುಮಂ ಪೊನ್ನ ತಳಿಗೆಯೊಳು ನಾಯ್ ತುಯ್ಯಲನುಣ್ಬುದಂ ಕೋಡಗಮೇಱಿರ್ದ ಸೊಕ್ಕಾನೆಯುಮಂ ಕಸಕುಪ್ಪೆಯೊಳ್ ತಾಮರೆ ಪುಟ್ಟಿದುದುಮಂ ಸಮುದ್ರಂ ಮೇರೆದಪ್ಪಿದುದುಮಂ ಬೆಳ್ಗಟ್ಟಿ ಪೂಡಿದ ಪೊನ್ನರಥಮಂ ಬೆಳ್ಗಳ್ತೆಗಳನರಸರ್ಕ್ಕಳೇಱುವುದುಮಂ

ಇಂತೀ ಪದಿನಾಱುಂ ಕನಸುಗಳಂ ಸಮ್ಯಗ್ ದರ್ಶನಶುದ್ಧಿ ಮೊದಲಾಗೊಡೆಯ ಗುಣಂಗಳಿಂ ಕೂಡಿದ ಸಂಪ್ರತಿ ಚಂದ್ರಗುಪ್ತ ಮಹಾರಾಜಂ ಪೊಲ್ಲಗನಸುಗಳಂ ಕಂಡೆನೆಂದಂಜಿ ನೇಸಱ್ ಮೂಡಿದಾಗಳ್ ಭದ್ರಬಾಹು ಭಟಾರರಲ್ಲಿಗೆ ಪೋಗಿ ಬಂದಿಸಿ ತನ್ನ ಕಂಡ ಕನಸುಗಳಂ ಭಟ್ಟಾರರ್ಗ್ಗೆ ಪೇಳ್ದವಱ ಫಲಂಗಳಂ ಬೆಸಗೊಂಡೊಡೆ ಭಟಾರರಿಂತೆಂದು ಪೇಟಿಲ್ ತೊಡಗಿದರ್ ಆದಿತ್ಯನಸ್ತಮಾನಕ್ಕೆ ಸಲ್ವುದಂ ಕಂಡುದಱಿಂದೀ ಭರತಕ್ಷೇತ್ರದೊಳ್ ಚತುರ್ದಶ ಪೂರ್ವಧಾರಿಗಳುಮವಧಿ ಜ್ಞಾನಿಗಳುಮಿಲ್ಲಿಂದಿತ್ತಲಾಗರ್ ಕಲ್ಪವೃಕ್ಷದ ಕೋಡುಡಿವುದುಮಂ ಕಂಡುದಱಿಂದಿಂದಿನ ದಿವಸಂ ಕಱಿದೊಡೆ ಕುಲ ಬಲ ವಿಭವದಿಂ ಪಿರಿಯರಪ್ಪರಸುಗಳ್ ಮುಕುಟಬದ್ಧರುಂ ತಪಂಬಡುವರಲ್ಲರ್ ನೆಲಕ್ಕೆ ವರುತ್ತಿರ್ದ್ದ ವಿಮಾನಂ ಎಡೆಯಿಂದಂ ಮೇಗೆ ಮಗುೞ್ದುದಂ ಕಂಡುದಱಿಂ ದೇವರ್ಕ್ಕಳ್ ವಿದ್ಯಾಧರರ್ಕ್ಕಳುಮಿಲ್ಲಿಂದಿತ್ತೀ ಕ್ಷೇತ್ರಕ್ಕೆ ಬಾರರ್ ಪನ್ನೆರಡು ತಲೆಯ ಪಾವಂ ಕಂಡುದಱಿಂದಿಲ್ಲಿಂ ತೊಟ್ಟೀ ನಾಡೊಳ್ ಪನ್ನೆರಡು ವರ್ಷಂಬರೆಗಂ

ರೌದ್ರ ಪಸವಮಕ್ಕುಂ ಚಂದ್ರನೊಡೆದುದಂ ಕಂಡುದಱಿಂ ಸದ್ಧರ್ಮದ ಮೊದಲ ಪೊರ್ದ್ದಿದ ಮಾರ್ಗದಿಂ ಬೇಱೆಯೋದುಗಳ್ ಪಲವಕ್ಕುಂ ಕಡುಗಡಿಯವಪ್ಪೆರಡಾನೆಗಳ್ತಮ್ಮೊಳ್ ಪೋಱಲ್ ಸಾರ್ದ್ದು ಪೆಱಪಿಂಗುವುದಂ ಕಂಡುದಱಿಂ ಪ್ರಜೆಗಳ ಮೆಚ್ಚಿದಂತೆ ಮಱೆ ಕೊಳ್ಳವು ಮಂಡಲವರ್ಷಮಕ್ಕುಂ ಮೀನಂ ಬುೞುವಂ ಕಂಡುದಱಿಂ ಮೀನಂಬುೞಿವಿನೊಳೋರನ್ನವು ಶಾಸ್ತ್ರಂಗಳುಮಂಗಬಾಹ್ಯಮಪ್ಪ ಚತುರ್ದಶ ವಿದ್ಯಾಸ್ಥಾನಂಗಳುಂ ಕುಂದಿಯುಪದೇಶತನು ಮಾತ್ರಮೆ ನಿಲ್ಕುಂ ನಟ್ಟ ನಡುವಾದಮೊಣಗಿದ ನೀರನೊಡೆಯ ನೀರಿಲ್ಲದ ಕೆಱೆಯ ನಡುವಂ ಕಂಡುದಱಿಂ ತೀರ್ಥಂಕರ ಚಕ್ರವರ್ತಿಗಳ ಪುಟ್ಟಿದ ಮಧ್ಯದೇಶದೊಳ್ಪಿನ್ನ ನೆಗೞ್ತೆಯಾಗದು ಆ ಮಧ್ಯದೇಶಕ್ಕೆ ಸಂಬಂಧಿ ಈ ಗಾಹೆ

> ಪುವ್ವೇಣ ಅಂಗವಿಸ ಓ ದಕ್ಷಿಣದೋ ಜಾವಹ್ಯೋಣ ಕೋಸಂಬೀ
> ಅವರೇಣ ಜಾವದೂಣಾ ಕುಣಾಲ ವಿಸಯೋಯ ಉತ್ತರದೋ ॥

ಎಂದು ಮಧ್ಯದೇಶ ಪ್ರಮಾಣಂ ಮತ್ತಂ ಪೊಗೆಯಿಂದಂ ಪೆರ್ಚ್ಚಿ ನೆಗೆದ ಕಾಟ್ಕಿರ್ಚ್ಚಂ ಕಂಡುದಱಿಂ ಧೂರ್ತರಪ್ಪ ಪೊಲ್ಲ ಲಿಂಗಿಗಳ ಪೆರ್ಚಕ್ಕುಂ ಮತ್ತಂ ದಯೆ ಮೊದಲಾಗೊಡೆಯ ಸದ್ಧರ್ಮಕ್ಕೆ ವಿರುದ್ಧಮಾಗಿ ನೆಗೞ್ವ ಪಿರಿದಪ್ಪ ಹಿಂಸಾದಿಗಳಂ ಗೆಯ್ವ ವೇದಾದಿ ಶಾಸ್ತ್ರಂಗಳ ಪೆರ್ಚ್ಚಕ್ಕುಂ ಸಿಂಹಾಸನಮನೇಱಿರ್ದ್ದ ಕೋಡಗನಂ ಕಂಡುದಱಿಂ ಕುಲಜರಲ್ಲದವರರಸುಗೆಯ್ವರ್ ಪೊನ್ನ ತಳಿಗೆಯೊಳ್ ನಾಯ್ ತುಯ್ಯಲನುಣ್ಬುದಂ ಕಂಡುದಱಿಂ ಪೊಲ್ಲಲಿಂಗಿಗಳರಸರ್ಕಳಿಂದಂ ಪೂಜಿಸೆಪಡುವರ್ ಕೋಡಗನಾನೆಯನೇಱಿದುದಂ ಕಂಡುದಱಿಂದಾದಮಾನುಂ ಶುದ್ಧಮಪ್ಪ ಕುಲದೊಳ್ ಪುಟ್ಟಿದರಸುಮಕ್ಕಳುತ್ತಮ ಕುಲದೊಳಪ್ಪಭಿಮಾನಮಂ ತೊಱೆದು ಬಾಟ್ಯಾರಣಮಾಗಿ ಕುಲಜರಲ್ಲದವರ್ಗ್ಗಾಳಾಗಿ ಬಾೞ್ವರ್ ಕಸಕುಪ್ಪೆಯೊಳ್ ತಾಮರೆ ಮೂಡಿದುದಂ ಕಂಡುದಱಿಂ ದಯೆಯುಪಶಮಮೆ ಪರಿಗ್ರಹ ಪರಿತ್ಯಾಗಮೆ ಸಮಾಧಿಯೆ ಸತ್ಯಮೆ ಶೌಚಮೆ ಕ್ಷಮೆಯೆಂದಿವು ಮೊದಲಾಗೊಡೆಯವಱೊಳ್ ಕೂಡಿದ ಮಿಕ್ಕ ಸದ್ಧರ್ಮಮಾರ್ಗ್ಗಮಂ ದ್ರವ್ಯಪತಿಗಳುಂ ಅರಸು ಮಕ್ಕಳುಂ ತಮ್ಮ ದ್ರವ್ಯಾದಿ ಮದದಿಂದಂ ತೊಱೆವರ್ ನೀಚಜಾತಿಗಳುಂ ಬಡವರುಂ ಸದ್ಧರ್ಮಮಂ ಕೈಕೊಂಡು ನೆಗೞ್ವರ್ ಸಮುದ್ರ ಮೇೞೆದಪ್ಪುವುದಂ ಕಂಡುದಱಿಂ ಅರಸು ಮಕ್ಕಳ್ ತಮ್ಮ ಮರ್ಯಾದೆಯಂ ಮಿಕ್ಕು ದ್ರವ್ಯಂ ಮೊದಲಾಗೊಡೆಯವಱೊಳ್ ಲೋಭಿಷ್ಠರಪ್ಪರ್ ಒಳ್ಳಿತಪ್ಪ ಸತ್ಯ ಶೌಚ ಚಾರಿತ್ರಮೆಂದಿವಱಿಂದಂ ಕೂಡದೆಯಾದಮಾನುಂ ನಿರ್ದ್ದಯರ್ಕ್ಕಳುಮಪ್ಪರ್ ಬೆಳ್ಗೞ್ತೆ ಪೂಡಿದ ಪೊನ್ನರಥಮಂ ಕಂಡುದಱಿಂದಂ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಿಂದಂ ಪವಿತ್ರಮಪ್ಪ ನಿರ್ಗ್ರಂಥಲಿಂಗಮಪ್ಪುದನಱಿದುಮೊಳ್ಳಿತಪ್ಪ ತಪಮಂ ಕೈಕೊಳೆ ಪಟ್ಟುದಂ ಪಿರಿದಪ್ಪ ಪುರುಷಕಾರಮುಂ ಸತ್ಯಮುಂ ಮನೋಬಲಮುಂ ವೀರ್ಯಮುಮೆಂದಿವಱಿಂದಂ ಕೂಡಿದವರ್ಗ್ಗಳಿಂದಮೊಳ್ಳಿದರಪ್ಪ ತೀರ್ಥಕರ ಪರಮದೇವರ್ಕ್ಕಳಿಂದಂ ಸಕಳ ಚಕ್ರವರ್ತಿಗಳಿಂದಂ ಬಲದೇವರ್ಕ್ಕಳಿಂದಂ ಚರಮ ದೇಹಧಾರಿಗಳಿಂದಂ ನೆಗೞೆ ಪಟ್ಟುದನೊಳ್ಳಿತಪ್ಪ ಮೋಕ್ಷಮಾರ್ಗಮಂ ಪೊರ್ದ್ದಿಯುಂ ವಿಷಯ ಸುಖಂಗಳೊಳ್ ಮೋಹಿತರ್ಕ್ಕಳಾಗಿ ಕಿಡುವರ್

ಬೆಳ್ಗಟ್ಟಿಯುನರಸರ್ಕ್ಕಳೇಱುವುದಂ ಕಂಡುದಱಿಂದಮುತ್ತಮ ಕುಲಜರಿಗೆ ಕುಲಜರಲ್ಲದವರೊಡನೆ ಮದುವೆಯೊಳ್ ತೊಟ್ಟ ನಣ್ಪುಗಳಕ್ಕುಮೆಂದಿಂತು ಪದಿನಾಱುಂ ಕಂಡ ಕನಸುಗಳ ಫಲಂಗಳಂ ಸಂಪ್ರತಿ ಚಂದ್ರಗುಪ್ತ ಮಹಾರಾಜಂಗೆ ಭದ್ರಬಾಹುಭಟಾರರ್ ಪೇಳ್ದು ಮತ್ತಮಿ ಕಲಿಯುಗ ಮಹಾರಾಜನ ಸ್ವರೂಪಮುಮನಿಂತೆಂದರಸಂಗೆ ಪೇಟಲ್ ತೊಡಗಿದರ್.

ನಾನಾ ಚೋರಗಣಾ ಮುಷಂತಿ ಪೃಥಿವೀ ಮಾರ್ಯ್ಯೋಜನಃ ಕ್ಷೀಯಂತೆ
ದೇವಾಶ್ಚ ಪ್ರಲಯಂಗತಾಃ ಭವಲ್ಲೌಲ್ಯಂ ಗತಾಃ ಪಾರ್ಥಿವಾಃ ॥

ಅನೃತಂಗತಾಃ ಕತದನೇ ಲೋಭಂಗತಾಃ ಸ್ವಾರ್ಥಿವಾಃ
ಪುತ್ರಸ್ಯಾಪಿನ ವಿಶ್ವಸಂತಿಪಿತರಃ ಕಷ್ಟಂಯುಗಂ ವರ್ತತೇ ॥

ನಿರ್ವೀರ್ಯಾ ಪೃಥಿವೀ ನಿರೌಷಧಿರಸಾ ನೀಚಾ ಮಹತ್ತ್ವಂ ಗತಾಃ
ರಾಜಾನೋರ್ಥಪರಾ ನಧರ್ಮನಿರತಾ ವಿಪ್ರಾ ವಿಕರ್ಮಸ್ಥಿತಾಃ
ಭಾರ್ಯ್ಯಾ ಭರ್ತರಿ ನಾಸ್ತಿಬದ್ಧ ಹೃದಯಾ ಪುತ್ರಾಃ ಪಿತೃದ್ವೇಷಿಣಃ
ಇತ್ಯೇವಂ ಸಮುಪಸ್ಥಿತೇ ಕಲಿಯುಗೇ ಧನ್ಯಾ ವನಂ ಪ್ರಸ್ಥಿತಾಃ

ಯತಿಷು ನಿಯತಂ ವಾಕ್ಪಾರುಷ್ಯಂ ವಿಪತ್ತಿಷು ಚ ಕ್ರಿಯಾ
ಕಲಿಯುಗ ಮಹಾರಾಜಸ್ಯೇತಾನಿ ರಾಜವಿಭೂತ ಯಃ ॥

ಎಂದಿಂತು ಭಟಾರರ್ ಪೇಟೆ ಸಂಪ್ರತಿ ಚಂದ್ರಗುಪ್ತ ಮಹಾರಾಜಂ ಕೇಳ್ದು ಮತ್ತಂದಿನ ದಿವಸಂ ಕಟೆದೊಡೆ ಮಂಡಳಿಕರ್ ಜಿನದೀಕ್ಷೆಯಂ ಕೈಕೊಳ್ಳರೆಂಬುದಂ ಕೇಳ್ದಾದಮಾನುಂ ಭೀತನಾಗಿ ಸಿಂಹಸೇನನೆಂಬ ತನ್ನ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ಭದ್ರಬಾಹು ಭಟಾರರ ಪಕ್ಕದೆ ಪಲರುಮರಸು ಮಕ್ಕಳ್ವೆರಸು ಆ ದಿವಸಮೆ ತಪಂಬಟ್ಟಂ ಮತ್ತಿತ್ತ ಮಧ್ಯದೇಶದೊಳಿರ್ದ ರಿಷಿಯರ್ಕಳ್ಗೆಲ್ಲಂ ಬಟೆಯಟ್ಟಿ ಭಟಾರರಿಂತೆಂದರ್ ಪನ್ನೆರಡು ವರ್ಷಂಬರೆಗಮೀ ನಾಡೊಳನಾವೃಷ್ಟಿಯಾಗಿ ಮಹಾರೌದ್ರ ಪಸವಮಕ್ಕುಂ ಮಧ್ಯಮ ದೇಶಮೆಲ್ಲಂ ಪಾಟಕ್ಕುಂ ಈ ನಾಡೊಳಿರ್ದ್ಡೊಡೆ ರಿಷಿಯರ್ಕ್ಕಳ್ಗೆ ಬ್ರತಭಂಗಮಕ್ಕುಂ ಅದಱಿಂ ಪೋಪಂ ದಕ್ಷಿಣಾಪಥಕ್ಕೆಂದು ಆಚಾರ್ಯರ್ಕ್ಕಳ್ ಸಹಿತಂ ಎಣ್ಸಾಸಿರ ರಿಷಿ ಸಮುದಾಯಮುಂ ಚಂದ್ರಗುಪ್ತಮುನಿಯಂ ಬೆರಸು ದಕ್ಷಿಣಾಪಥಕ್ಕೆ ಪೋದರ್ ಇತ್ತ ರಾಮಿಲ್ಲಾಚಾರ್ಯರುಂ ಸ್ಥೂಲಭದ್ರಾಚಾರ್ಯರುಂ ಸ್ಥೂಲಾಚಾರ್ಯರುಮಂತು ಮೂವರುಮಾಚಾರ್ಯರ್ಕ್ಕಳ್ ಭಟಾರರೊಡ ಪೋಗಲೊಲ್ಲದೆ ತಂತಮ್ಮ ರಿಷಿ ಸಮುದಾಯಂ ಬೆರಸು ಸಿಂಧು ವಿಷಯಕ್ಕೆ ಪೋದರ್ ಇತ್ತ ಭಟಾರರುಂ ಪಿರಿದುಂ ರಿಷಿ ಸಮುದಾಯಂ ಬೆರಸು ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾ ಮುಖಂಗಳಂ ಕಟೆದು ಪೋಗಿ ಕಟ್ಟಿಪ್ಪನಾಡನೆಯ್ದಿ ಪೋಗುತ್ತಂ ಭದ್ರಬಾಹು ಭಟಾರರ್ ತಮ್ಮಾಯುಷ್ಯ ಪ್ರಮಾಣಮನಱಿದಾಂ ಇಲ್ಲಿ

ಸಂನ್ಯಸಂಗೆಯ್ದಪ್ಪೆವು ನೀಮೆಲ್ಲಂ ಪೋಗಿಮೆಂದು ತಮ್ಮ ಪಿರಿಯ ಶಿಷ್ಯರ್ ದಶಪೂರ್ವಧಾರಿಗಳ್ ವಿಶಾಖಾಚಾರ್ಯರೆಂಬೊರಲ್ಲಿಂ ಬೞಿಯಮಾರ್ಯ ಸುಹಸ್ತಿಗಳುಂ ಅರಭದ್ರರುಂ ಸುಭದ್ರ ಮಿತ್ರರುಂ ಮಹಾಗಿರಿಯುಂ ಸುಮತಿಯುಂ ಮಹಾಮತಿಯುಂ ರಾಮಿಲ್ಲರುಂ ಪ್ರೋಷ್ಠಿಲರುಂ ವಿಶಾಖನಂದಿಯುಮಿಂತಿವರ್ಗ್ಗಳೆಲ್ಲರುಮನಾಚಾರ್ಯರ್ಮಾಡಿ ದ್ರವಿಳ ವಿಷಯಕ್ಕೆ ಪೋಗಿಮೆಂದು ವಿಶಾಖಾಚಾರ್ಯರೊಡನೆ ಎಣ್ ಸಾಸಿರ್ವರು ರಿಷಿಯರನಟ್ಟಿದರ್ ಚಂದ್ರಗುಪ್ತ ಮುನಿಯುಮನಿವರೊಡವೋಗಿಮೆಂದು ಭಟಾರರ್ ಕೀೞಿ ಪೋಗವೇೞ್ಕೊಡಾಮುಂ ಪೋಗಲೊಲ್ಲೆವು ನಿಮ್ಮಡಿಗಳೊಳ್ ವಿನಯಂಗೆಯ್ಯುತ್ತ ಮಿರ್ದಪ್ಪೆವೆಂದು ಪೋಗಲೊಲ್ಲದೆ ಪಕ್ಕದಿದ್ದರೆಲ್ಲಂ ವೋದರ್ ಇತ್ತ ಭದ್ರಬಾಹು ಭಟಾರರುಂ ಕಟ್ವಪ್ಪು ನಾಡಡವಿಯ ಬೆಟ್ಟದ ಮೇಗಣೇಕ ಶಿಲೆಯ ಮೇಗಿರ್ದು ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಜಾವಜ್ಜೀವಂ ನಿವೃತ್ತಿ ಪೂರ್ವಕಂ ಸನ್ಯಸನಂಗೆಯ್ದರ್

ಇತ್ತ ಚಂದ್ರಗುಪ್ತಮುನಿಯುಮಷ್ಟೋಪವಾಸಂ ಗೆಯ್ದಿರ್ದೊಡಂ ಭಟಾರರೆಂದ ರಾಮುಂ ನೋಂತಿರ್ಪೆವು ನೀಮುಂ ಚರಿಗೆವುಗುವುದಲ್ತೆಯೆಂದೊಡೆ ಭಟಾರಾ ಊರಿಲ್ಲ ಕೇರಿಯಿಲ್ಲಾ ಇಲ್ಲೀ ಅಡವಿಯೊಳೆಲ್ಲಿಗೆ ಚರಿಗೆವುಗುವುದೆಂದೊಡೆ ಭಟಾರರೆಂದರ್ ಕಾಂತಾರಭೈಕ್ಷಮೆಂಬುದಾಮಗಮದೊಳು ನಿಷಿದ್ಧಮೆಂದು ಪೇಳ್ದುಮಾರಾನುಂ ಬಟ್ಟೆವೋಪರ್ ಬೀಡಂಬಿಟ್ಟಿರ್ದವರ್ ನಿಱಿಸುವರಪ್ಪುದಱಿಂದಂ ಚರಿಗೆವುಗುವುದೆಂದೊಡಂತೆಗೆಯ್ವೆಮೆಂದು ದೇವರಂ ಬಂದಿಸಿ ಚರಿಗೆವೊಕ್ಕೊಡಡವಿಯಂ ತೊೞಲ್ವಲ್ಲಿ ಒಂದು ಮರದ ಪೊೞಲೊಳಿರ್ದು ಮಾಣಿಕದ ಮುತ್ತಿನ ಪಿಂಡುಗಂಕಣಮಂ ತೊಟ್ಟ ಕೈಯಿಂದಂ ಪೊನ್ನ ಸಟ್ಟುಗಮಂ ತೀವಿ ಭೈಕ್ಷಮಂ ಪಿಡಿಯೆಂದು ನೀಡಿದ ಕೈಯನೀತನೆ ಕಂಡು ತೊೞಲ್ದಲಾಭಮಾಗಿ ತಮ್ಮಾವಾಸಕ್ಕೆ ಪೋದೊಡೆ ಭಟ್ಟಾರರ್ ನಿಲೆವಟ್ಟುದೆಯೆಂದು ಬೆಸಗೊಂಡೊಡವರುಂ ತಮ್ಮ ಕಂಡುದಂ ಪೇಳ್ದೊಡೆ ಬೇಸಱದೆ ದಿವಸಕ್ಕಂ ಚರಿಗೆವುಗುವುದೆಂದು ಭಟಾರರ್ ಕಲ್ಪಿಸಿದೊಡಂತೆಗೆಯ್ವೆಮೆಂದು ಮಱುದಿವಸಂ ಚರಿಗೆವೊಕ್ಕಡವಿಯಂ ತೊೞಲ್ವಲ್ಲಿಯೊಂದು ಮರದ ಕೆೞಗೆ ಪೊನ್ನ ಮಡಕೆಗಳೊಳ್ ಬೋನಮನೊಡ್ಡಿ ನೆಱೆಯೆ ತೊಟ್ಟುಟ್ಟು ಮಂಗಳವಸದನಂಗೊಂಡು ದಿವ್ಯಸ್ತ್ರೀ ಬಂದು ನಿಱಿಸಿದೊಡಿಂತೆಂದರ್ ಅಬ್ಬಾ ನೀಮುಮೊರ್ವ್ವರೆಯಾಮುಮೊರ್ವರೆ ಪೆಱ ರಾರಾನುಮಿಲ್ಲಿಂತು ರಿಷಿಯರ್ಕ್ಕಳ್ಗೆ ನಿಲಲಾಗದೆಂದು ಪೇೞ್ದು ತಮ್ಮಿರ್ದೆಡೆಗೆ ಪೋದೊಡೆ ಭಟಾರರಿಂತೆಂದರ್ ನಿಲೆವಟ್ಟುದೆ ಎಂದು ಬೆಸಗೊಂಡೊಡೆ ಅವರಿಂತೆಂದರ್ ಓರ್ವಳ್ ದಿವ್ಯಸ್ತ್ರೀ ಸರ್ವಾಭರಣಭೂಷಿತೆಯೊಂದು ಮರದ ಕೆೞಗೆ ಬೋನಮನೊಡ್ಡಿರ್ದ್ದಿದಿರಂ ಬಂದು ನಿಱಿಸಿದೊಡೋರ್ವರೆ ಪೆಱರಾರುಮಿಲ್ಲೆಂದು ನಿಲ್ಲದೆ ಬಂದೆಮೆಂದೊಡೊಳ್ಳಿಕೆಯ್ದಿರೆಂದರಿಂತು ಪತ್ತುಪವಾಸಂಗೆಯ್ದು ಪನ್ನೊಂದನೆಯ ದಿವಸದಂದು ಚರಿಗೆವೊಕ್ಕೊಡಡವಿಯಂ ತೊೞಲ್ವನ್ನೆಗಂ ಪಿರಿದೊಂದು ಪೊೞಲುಂ ಧವಳಾರಂಗಳುಂ ಅಂಗಡಿಗಳುಂ ಸೂಳೆಗೇರಿಗಳುಂ ದೇವಾಲಯಗಳುಂ ಆನೆಗಳುಂ ಕುದುರೆಗಳುಂ ಮಾನಸರ ಬರವುಂ ಪೋಗುಮಂ ಕಂಡಿನಿತು ದಿವಸಮೀ ಮರಗಳ ಗಿಡುಗಳ ಪೊದಱುಗಳ ಮಱಿಗಳೊಳೀ ಪೊೞಲಂ ಕಂಡೆಮಿಲ್ಲೆಂದು

ಮನದೊಳೆ ಬಗೆದು ಪೊೞಲೊಳಗೆ ಚರಿಗೆವೊಕ್ಕಾಗಳೊರ್ವ್ವಳು ದಿಬ್ಯಸ್ತ್ರೀ ಪರಿವಾರ ಸಹಿತಮಿದಿರಂ ಬಂದು ನಿಱಿಸಿ ತನ್ನ ಮಾಡಕ್ಕೊಡಗೊಂಡು ಪೋಗಿ ಕಾಲಂ ಕರ್ಚ್ಚಿಯರ್ಚ್ಚಿಸಿ ಗುರುಭಕ್ತಿಗೆಯ್ದು ಬಂದಿಸಿಯಾದಮಾನುಂ ಭಕ್ತಿಯಿಂದಂ ದಿವ್ಯಾಹಾರಮಂ ಮಗುೞಿಮಗುೞಿ ಬಡ್ಡಿಸೆ ಚರಿಗೆ ಮಾಡಿ ಪರಸಿ ತಮ್ಮ ವಾಸಕ್ಕೆ ಪೋದಡೆ ಭಟಾರರ್ ನಿಲೆವಟ್ಟುದೆ ಎಂದು ಬೆಸಗೊಂಡೊಡೆ ನಿಲೆವಟ್ಟುದೆಂದೊಡೆಲ್ಲಿ ನಿಂದಿರೆಂದು ಬೆಸಗೊಂಡೊಡಿಂತೆಂದರ್

ಭಟಾರಾ ಇನಿತು ದಿವಸಂ ಮರಗಳಂ ಗಿಡುಗಳ ಪೊದಱುಗಳ ಮೞೆಗಳೊಳು ಈ ಪೊೞಲಂ ಕಂಡುದಿಲ್ಲಮಿಲ್ಲಿಂದಿನಿಸಾನುಂ ತಿಣ್ಣಂ ತೊೞಲ್ವಲ್ಲಿ ಪಿರಿದೊಂದು ಪೊೞಲಂ ಕಂಡು ಚರಿಗೆವೊಕ್ಕೊಡೊರ್ವ್ವಳ್ ದಿವ್ಯಸ್ತ್ರೀ ಪರಿವಾರ ಸಹಿತಮಿದಿರಂ ಬಂದು ನಿಱಿಸಿ ತನ್ನ ಮಾಡಕ್ಕೊಡಗೊಂಡು ಪೋಗಿ ಕಾಲಂ ಕರ್ಚ್ಚಿಯರ್ಚ್ಚಿಸಿ ಗುರುಭಕ್ತಿಗೆಯ್ದು ಬಂದಿಸಿಯಾದಮಾನುಂ ಭಕ್ತಿಯಿಂದಂ ದಿವ್ಯಾಹಾರಂಗಳಂ ಬಡ್ಡಿಸೆ ಶ್ರಮಂ ಪೋಗೆ ಚರಿಗೆ ಮಾಡಿ ಪರಸಿ ಬಂದೆಮೆಂದು ಭಟಾರರ್ಗ್ಗೆ ಪೇೞ್ದೊಡೊಳ್ಳಿತ್ತಾಯ್ತೆಂದು ಸಂತೋಸಂ ಬಟ್ಟಿರ್ದ್ದರ್ ಇಂತು ದಿವಸಕ್ಕಂ ಪೊೞಲ್ಗೆ ಚರಿಗೆವೋಗಿ ಚರಿಗೆ ಮಾಡುವರ್ ಇತ್ತ ಭದ್ರಬಾಹುಭಟಾರರುಂ ಮುನ್ನೆ ತಮ್ಮ ತಪಂಗೆಯ್ವಂದೆಲ್ಲಾ ಕಾಲಮುಮವಮೋದರ್ಯಂ ಚರಿಗೆ ಮಾಡಿ ಪಸಿವಂ ಸೈರಿಸಿ ತಮ್ಮ ಮೆಯ್ಯಂ ಕ್ಷಯಕ್ಕೆ ತಂದು ಸಂನ್ಯಸನಂ ಗೆಯ್ದು ಪಲವು ದಿವಸದಿಂದಂ ಪಸಿವು ನೀರಳ್ಕೆಯುಮಂ ಸೈರಿಸಿ ಶುಭಪರಿಣಾಮದಿಂದ ಪರಮ ಶುದ್ಧ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಮುಡಿಪಿ ಬ್ರಹ್ಮಕಲ್ಪದೊಳಿರ್ಪ್ಪತ್ತು ಸಾರಗೋಪಮಾಯುಷ್ಯಮನೊಡೆಯೊಂ ಅಮಿತಕಾಂತಿಯೆಂಬೊಂ ದೇವನಾಗಿ ಪುಟ್ಟಿದೊಂ ಚಂದ್ರಗುಪ್ತಮುನಿಯುಂ ಭಟಾರರ ನಿಸಿದಿಗೆಯಂ ಬಂದಿಸುತ್ತುಂ ದೇವತೆ ಬೆಸಗೆಯ್ಯೆ ಚರಿಗೆ ಮಾಡಿ ತಪಂಗೆಯ್ಯುತ್ತುಂ ಪನ್ನೆರಡು ವರ್ಷಂಗಳ್ ವರೆಗಂ ಇಂತಿರ್ಪ್ಪನ್ನೆಗಮಿತ್ತ ತಿಮುೞನಾಟ್ಗೆ ಪೋದ ರಿಷಿಸಮುದಾಯಮೆಲ್ಲಂ ಪನ್ನೆರಡು ವರ್ಷಂ ಬರೆಗಂ ಸುಖದೊಳಿರ್ದ್ದು ನಿರುಪಸರ್ಗ್ಗದಿಂದಂ ದರ್ಶನ ಜ್ಞಾನ ಚಾರಿತ್ರಂಗಳಂ ಪ್ರತಿಪಾಲಿಸಿ ಬಡಗನಾಡ ಪಸವುಂ ತಿೞಿದುದೆಂಬುದನಾ ನಾಡಿಂ ಬಂದರ್ ಪೇೞೆ ಕೇಳ್ದಱಿದು ಭಟಾರರ ನಿಸಿದಿಗೆಯಂ ಬಂದಿಸಿಪೋಪಮೆಂದು ವಿಶಾಖಾಚಾರ್ಯರ್ ಮೊದಲಾಗಿ ರಿಷಿಸಮುದಾಯಮೆಲ್ಲಂ ದಕ್ಷಿಣಾಪಥದಿಂದಂ ಬಂದು ಭಟಾರರ ನಿಸಿದಿಗೆಯನೆಯ್ದಿದಾಗ ಚಂದ್ರಗುಪ್ತಮುನಿಯುಂ ರಿಷಿಯರ್ಕ್ಕಳ ಬರವಂ ಕಂಡಿದಿರಂ ಪೋಗಿ ರಿಷಿಸಮುದಾಯಮೆಲ್ಲಮಂ ಬಂದಿಸಿರ್ದ್ದೊಡೆ ರಿಷಿಯರ್ಕ್ಕಳಿಂತೆಂದು ಬಗೆದೊರೀ ಅಡವಿಯೊಳಿನ್ನೆಗಮಿವರ್ಕ್ಕಂದಮೂಲ ಫಲಂಗಳಂ ತಿಂದು ತೊೞೆಯ ಪಳ್ಳಂಗಳ ನೀರಂ ಕುಡಿದು ಪನ್ನೆರಡು ವರ್ಷಂಬರೆಗಮಿಂತು ಬಟ್ಟಿರೆಂದು ತಮ್ಮೊಳ್ ನುಡಿದು ಮತ್ತಂ ತಲೆ ನವಿರು ಬೆಳೆದುದುಮಂ ಕಂಡರಪ್ಪಡಂ ಪ್ರತಿವಂದನೆಯಂ ಕೊಟ್ಟರಿಲ್ಲ ಮತ್ತಾ ರಿಷಿಯರ್ಕ್ಕಳನಿಬರುಮಾ ದಿವಸಮುಪವಾಸಂಗೆಯ್ದರ್ಚ್ಚಿಸಿ ಕ್ರಿಯೆಗೆಯ್ದು ಭಟಾರರ ನಿಸಿದಿಗೆಯಂ ಬಂದಿಸಿ ಆ ದಿವಸಮಲ್ಲಿಯೆ ಕೆಂದು ಮಱುದಿವಸಂ ಪೋಪಾಗಳ್ ಚಂದ್ರಗುಪ್ತಮುನಿಯಂದರ್ ಭಟಾರಾ ನಿನ್ನೆ ಶ್ರಮಂಬಟ್ಟಿರುಪವಾಸಂಗೆಯ್ದು

ಸೇದೆಯಿಂದಿರ್ದ್ದಿರಿಂದು ಚರಿಗೆವೊಕ್ಕು ಸೇದೆಯನಾಱಿಸಿ ನಾಳೆ ಪೋಗಿಮೆಂದೊಡೆ ಭಟಾರರೆಂದರ್ ಊರಿಲ್ಲ ಕೇರಿಯಿಲ್ಲ ಎಲ್ಲಿ ಚರಿಗೆವುಗುವಮಂತು ಕೆಮ್ಮಗೇಕೆಮ್ಮ ತಾಗಿದಪಿರೆಂದೊಡೆ ಪಿರಿದೊಂದು ಪೊಟಿಲುಂಟು ನೀಮುಂ ಸಂಕ್ಲೇಶಂಬಡದಿರಿಂದಿನ ದಿವಸಮಿರ್ಕೆಂದೊಡನಿಬರುಂ ಎಂದರ್ ಇಂದಿನ ದಿವಸವುಪವಾಸಂಗೆಯ್ದಪ್ಪೊಡಮಿವರೆಂಬುದನಿಂಬುಕೆಯ್ವುವೆಂದಿರ್ದ್ದೊಡೆ ಮಧ್ಯಾಹ್ನಮಪ್ಪಾಗಳ್ ದೇವರಂ ಬಂದಿಸಲೆಟ್ಟೊಡನಿಬರುಂ ದೇವರಂ ಬಂದಿಸಿ ಚಂದ್ರಗುಪ್ತಮುನಿಯ ಬಳಿಯಂ ರಿಷಿ ಸಮುದಾಯಮೆಲ್ಲಂ ತಗುಳ್ದು ಕಿಱಿದಂತರಮಂ ಪೋಪನ್ನೆಗಂ ಪಿರಿದೊಂದು ಪೊಳಲಂ ಕಂಡು ಚರಿಗೆವೊಕ್ಕನಿಬರುಮಂ ನಿಱಿಸಿ ಕೆಲಬರುಂ ಶ್ರಮಂ ಪೋಗೆ ಚರಿಗೆ ಮಾಡಿ ತಮ್ಮಾವಾಸಕ್ಕೆ ಬಂದುಮಾಚಾರ್ಯರ್ಕ್ಕಳುಂ ಬೆರಸು ತಾಮೊಂದು ಮನೆಯೊಳ್ ನಿಂದಂತನಿಬರುಂ ನಿಱಿಸಿ ಪೋಪನ್ನೆಗಂ ಪಿರಿದೊಂದು ಪೊಟಿಲಂ ಕಂಡು ಚರಿಗೆವೊಕ್ಕನಿಬರುಮಂ ಕೆಲಬರುಂ ರಿಷಿಯರು ವಿಶಾಖಾಚಾರ್ಯರೆಂದರ್ ಬ್ರಹ್ಮಯ್ಯಾ ಕಾಲಂ ಕರ್ಚಲ್ ಗುಂಡಿಗೆಯಂ ಕೊಂಡುಬನ್ನಿಮೆಂದೊಡೆ ಬ್ರಹ್ಮಯ್ಯನೆಂದಂ ಗುಂಡಿಗೆಯನುಂಡ ಮನೆಯೊಳ್ ಮಱೆದು ಬಂದೆನೆನೆ ಬೇಗಂ ಪೋಗಿ ಕೊಂಡು ಬಾಯೆನೆ ಬ್ರಹ್ಮಯ್ಯಂ ಪೋಗಿ ನೋಳ್ಪನ್ನೆಗಂ ಪೊಟಿಲೆಡೆಯಂ ಕಾಣದಡವಿಯೆಲ್ಲಮಂ ತೊಟಿಲ್ದು ನೋಡಿ ಗುಂಡಿಗೆಯಂ ಕಾಣದತ್ತಮಿತ್ತಂ ನೋಟ್ಪನ್ನೆಗಮೊಂದು ಮರದ ತುತ್ತ ತುದಿಯೊಳಿರ್ದ್ದಟಿಲ್ವ ಗುಂಡಿಗೆಯಂ ಕಂಡು ಗುರುಗಳ್ಗಿಂತೆಂದು ಪೇಟ್ದರ್ ಭಟಾರಾ ನಾಮುಂಡೆಡೆಯೊಳಾ ಪೊಟಿಲಿಲ್ಲ ನಮ್ಮುಂಡ ಮನೆಯುಮಿಲ್ಲ ಗುಂಡಿಗೆಯುಮೊಂದು ನಿಡಿಯಮರದ ತುತ್ತತುದಿಯೊಳಿರ್ದ್ದುದಾರಾನುಮೇಱಲ್ ಬಲ್ಲೊರನಟ್ಟುಗೆಂದೊಡನಿಬರುಂ ರಿಷಿಯರ್ಕ್ಕಳೆಲ್ಲಂ ಚೋದ್ಯಂಬಟ್ಟು ನೋಡಲ್ಪೋಗಿ ಪೊಟಿಲಂ ಕಾಣದಡವಿಯೊಳ್ ನಿಡಿಯ ಮರದ ತುತ್ತತುದಿಯೊಳಿರ್ದ್ದಟಿಲ್ವ ಗುಂಡಿಗೆಯಂ ಕಂಡು ತೆಗೆಯಿಸಿಕೊಂಡು ಪೋಗಿ ಚಂಗ್ರಗುಪ್ತಮುನಿಯುನನಿಬರುಂ ರಿಷಿಯರ್ಕ್ಕಳ್ ನೆರೆದಿಂತೆಂದರಾವುಂ ನಿಮ್ಮನೀಯಡವಿಯೊಳ್ ಕಂದಮೂಲ ಫಲಂಗಳಂ ತಿಂದು ಪಳ್ಳಂಗಳ ನೀರ್ಗ್ಗಳಂ ಕುಡಿದಿನಿತು ಕಾಲವುಂ ಬರ್ದ್ದಿರೆಂದು ನಿಮ್ಮಂ ಬಗೆದು ಬಂದಿಸಿದೆಮಿಲ್ಲಿದಕ್ಕೆ ನೀವುಂ ಮನದೊಳೇವಂಗೊಳ್ಳದೆ ಕ್ಷಮಿಯಿಸಿಮೆಂದು ನುಡಿದು ಬಂದಿಸಿ ಮತ್ತಮಿಂತೆಂದರ್ ನೀಮುಂ ದೇವತಾಧಿಷ್ಠಿತರ್ ನಿಮಗೆ ದೇವತೆಗಳ್ ಬೆಸಕೆಯ್ವುವು ದೇವತೆಗಳ ಮಾಡಿದಾಹಾರಮಂ ನೀಮಿನ್ನೆಗಮುಂಡು ತಪಂಗೆಯ್ದಿರ್ದ್ದಿರಿನ್ನುಣಲ್ವೇಡ ದೇವತೆಗಳ್ ಮಾಡಿದಾಹಾರಮಂ ರಿಷಿಯರ್ಗ್ಗೆ ಚರಿಗೆ ಮಾಡಲಾಗದೆಂದು ಬಾರಿಸಿಯವರ್ಗ್ಗೆ ಲೋಚುಗೆಯ್ದು ಬ್ರತಂಗಳನೇಱಿಸಿ ಪಡಿಕಮಣಂ ಪೇಟ್ದೊಡಗೊಂಡುತ್ತರಾಪಥಕ್ಕೆ ಪಯಣಂ ಬೋಗಿ ಕತಿಪಯಂ ದಿನಂಗಳಿಂದಂ ಮಧ್ಯ ದೇಶಮನೆಯ್ದಿಯಾ ನಾಡೊಳ್ ರಿಷಿ ಸಮುದಾಯಮೆಲ್ಲಂ ನಿರುಪಸರ್ಗ್ಗಮಿರ್ದ್ದತ್ತು

ಮತ್ತಿತ್ತ ರಾಮಿಲಾಚಾರ್ಯರುಂ ಸ್ಥೂಳಾಚಾರ್ಯರುಂ ಸ್ಥೂಳಭದ್ರಾಚಾರ್ಯರುಮಂತು ಮೂವರುಂ ಸಿಂಧುವಿಷಯಕ್ಕೆ ತಂತಮ್ಮ ರಿಷಿಸಮುದಾಯಂ

ಬೆರಸು ಪೋದೊಡಾ ನಾಡೊಳ್ ಮಾನಸರ್ ಮಾನಸರಂ ತಿಂಬಂತುಟಪ್ಪ ಮಹಾಘೋರಂ ಪಸವಾದೊಡಲ್ಲಿಯ ಶ್ರಾವಕರೆಲ್ಲಂ ನೆರೆದು ರಿಷಿಯರಲ್ಲಿಗೆ ಪೋಗಿ ಇಂತೆಂದರ್ ಭಟಾರಾ ಲವಟುಗಳ ಕೈಯೊಳ್ ಪಗಲುಣಲುಮಡಲುಂ ಪೆಱಲಾಗ ಮೇಲ್ವಾಯ್ದೆಟೆದು ಕೊಂಡುಂಬರು ಲೋಗರೆಲ್ಲಮವರ ಭಯಕೆ ಪಗಲಡುಗೆಯಂ ಬಿಸುಟ್ಟು ಇರುಳುಣಲ್ತಗುಳ್ದಱದಱಿಂ ನೀಮುಮಿಂತಿನಿರುಳ್ ಭೈಕ್ಷದ ಭಾಜನಂಗಳಂ ಕೊಂಡು ಪೋಗಿ ಶ್ರಾವಕರ ಮನೆಗಳಂ ತೊಟಲ್ದು ಭೈಕ್ಷಂ ಬೇಡಿಕೊಂಡು ಕೂಟಿನಿರುಳ್ ತಂದಿಟ್ಟು ಪಗಲುಣ್ಬು ದೆಂದೊಡಂತೆಗೆಯ್ವೆಮೆಂದು ಇರುಳ್ ತೊಟಲ್ದು ಭೈಕ್ಷಮಂ ತಂದು ಮಡಗಿಟ್ಟು ಪಗಲುಣ್ಬೊರಾದರಿಂತೀ ಪಾಂಗಿನೊಳ್ ಕಾಲಂ ಸಲೆ ಮತ್ತೊಂದು ದಿವಸಮೊರ್ವ್ವ ನಿರ್ಗ್ರಂಥ ಯತಿ ಭೈಕ್ಷ ಭಾಜನಮಂ ಕೊಂಡು ಶ್ರಾವಕರ ಮನೆಗಳಿನಿರುಳ್ ಭೈಕ್ಷಮಂ ಬೇಡಿದೊಡೊರ್ವಳ್ ಪೊಸಶ್ರಾವಕಿ ಬಸಿಪ್ಪೆಂಡತಿ ವೇಳಾ ಸ್ವಾಮಿನಿಯೆಂಬೊಳ್ ಕರ್ದ್ದಿಂಗಳಿರುಳೊಳ್ ಕಟ್ತಲೆಯೊಳ್ ನಿರ್ಗ್ರಂಥಮಪ್ಪ ರೂಪಂ ಕಂಡು ಬೆರ್ಚ್ಚಿದೊಡಾಕೆಗೆ ಬಸಿಱಿಳಿದತ್ತದಂ ಕಂಡು ಶ್ರಾವಕರೆಲ್ಲಂ ನೆರೆದು ರಿಷಿಯರಲ್ಲಿಗೆ ಪೋಗಿ ಇಂತೆಂದರ್ ಭಟಾರಾ ಕಾಲಮಪ್ಪೊಡೆ ಕೆಟ್ಟಿತ್ತೊಳ್ಳಿತಪ್ಪ ಕಾಲಮಾದಂದು ಪ್ರಾಯಶ್ಚಿತ್ತಂಗೊಂಡು ನಿಮ್ಮ ತಪಂಗಳೊಳ್ ನಿಲ್ಲಿಮನ್ನೆಗಮೀಗಳೀ ಪಸವುಗೆಟಿವನ್ನೆಗಂ ನೀಮುಮೆಡದ ಕೈಯನೆಟಲಿಕ್ಕಿಯರ್ದ್ಧಕಪ್ಪಡಮನೆಡದ ಮುಯ್ಯಿನ ಮೇಗಿಕ್ಕಿಯೊಳಗೆ ನಿರ್ಗ್ರಂಥಮಪ್ಪ ರೂಪಂ ತಾಳ್ದಿ ಬಲದ ಕೆಯ್ಯೊಳ್ ಭೈಕ್ಷ ಭಾಜನಮಂ ಪಿಡಿದು ತೊಟಲ್ದು ಭೈಕ್ಷಮಂ ಬೇಡಿ ಮಡಗಿಟ್ಟು ಪಗಲುಣ್ಣಿಮೆಂದೊಡವರ್ಗ್ಗಳುಮಂತೆಗೆಯ್ವೆಮೆಂದವರ ಪೇಟ್ದ ಪಾಂಗಿನೊಳ್ ನೆಗಟ್ದು ಪಸವಂ ನೀಗಿ ಕಾಲಮೊಳ್ಳಿತ್ತಾದೊಡೆ ರಾಮಿಲ್ಲಾಚಾರ್ಯರುಂ ಸ್ಥೂಳಾಚಾರ್ಯರುಂ ಸ್ಥೂಳ ಭದ್ರಾಚಾರ್ಯರುಮಂತು ಮೂವರುಂ ತಂತಮ್ಮ ರಿಷಿಸಮುದಾಯಂ ಬೆರಸು ವಿಹಾರಿಸುತ್ತುಂ ಮಧ್ಯ ದೇಶಕ್ಕೆ ರಿಷಿಯರ್ಕ್ಕಳಿರ್ದ್ದಲ್ಲಿಗೆ ಬಂದೊಡೆ ವಿಶಾಖಾಚಾರ್ಯರ್ ಮೊದಲಾಗೊಡೆಯ ಆಚಾರ್ಯರ್ಕ್ಕಳವರನಿಂತೆಂದರ್ ನೀಮೆಲ್ಲಮರ್ಧ ಕಪ್ಪಡಮಂ ಬಿಸುಟ್ಟು ನಿರ್ಗ್ರಂಥ ರೂಪಮಂ ಕೆಯ್ಕೊಂಡು ಬ್ರತಂಗಳನೇರಿಸಿ ಪ್ರಾಯಶ್ಚಿತ್ತಂಗೊಂಡು ಪಡಿಕಮಣಂಗೇಟ್ದು ತಪದೊಳ್ ನಿಲ್ಲಿಮೆಂದೊಡಂತೆ ಗೆಯ್ವೆಮೆಂದು ರಾಮಿಲ್ಲಾಚಾರ್ಯರುಂ ಸ್ಥೂಳಾಚಾರ್ಯರುಂ ತಂತಮ್ಮ ರಿಷಿ ಸಮುದಾಯಂ ಬೆರಸು ವಿಶಾಖಾಚಾರ್ಯರ ಪಕ್ಕದೆ ಅರ್ಧಕಪ್ಪಡಮಂ ಬಿಸುಟ್ಟು ಪಡಿಕಮಣಂಗೇಟ್ದು ಪ್ರಾಯಶ್ಚಿತ್ತಂಗೊಂಡು ಯಥೋಕ್ತಮಪ್ಪ ಚಾರಿತ್ರದೊಳ್ ನಿಂದರ್ ಸ್ಥೂಳಭದ್ರಾಚಾರ್ಯರ್ ಮೊದಲಾಗಿ ಕೆಲಂಬರ್ ಕೊಳಲೊಲ್ಲದೆ ಯಾವಜ್ಜಿನ ಕಲ್ಪಂ ಸ್ಥವಿರಕಲ್ಪಮೆಂದೆರಡುಂ ಭೇದಮಂ ಮಾಡಿ ಅರ್ಧಕಪ್ಪಡದ ತೀರ್ಥಮಂ ನೆಗಟ್ಚಿದರ್ ಇಂತರ್ಧಕಪ್ಪಡದ ತೀರ್ಥ ಪಾರಂಪರ್ಯದಿಂದಂ

ಸುರಥಮೆಂಬುದು ನಾಡಲ್ಲಿ ವಳಭಿಯೆಂಬುದು ಪೊಟಲದನಾಳ್ವೊಂ ವಪ್ರಪಾಳನೆಂಬೊನರಸನಂ ರಾಜ್ಯಂ ಬರೆಗಮರ್ಧಕಪ್ಪಡದ ತೀರ್ಥಂ ನೆಗಟ್ದಿತ್ತು ಮತ್ತಂ ವಪ್ರಪಾಳನೆಂಬರಸಂ ಮಿಥ್ಯಾ ದೃಷ್ಟಿಯಾತನ ಮಹಾದೇವಿ ಸ್ವಾಮಿನಿಯಂಬೊಳರ್ಧಕಪ್ಪಡದ ತೀರ್ಥದ ತಪಸ್ವಿಯರ ಶ್ರಾವಕಿಯಾಗಿ ಇಂತು ಕಾಲಂ ಸಲೆ ಮತ್ತೊಂದು ದಿವಸಂ

ನಡುಪಗಲರಸನುಂ ಮಹಾದೇವಿಯುಮಿಂತಿರ್ವ್ವರುಂ ಪ್ರಾಸಾದದ ಮೇಗಿರ್ದ್ದು ಗವಾಕ್ಷಜಾಳಾಂತರಂಗಳಿಂದಂ ದಿಶಾವಳೋಕನಂ ಗೆಯ್ಯುತ್ತಿರ್ಪ್ಪನ್ನೆಗಮರ್ಧಕಪ್ಪಡದ ಸಂಘಂ ಭೈಕ್ಷ ಕಾರಣಮಾಗಿಯರಮನೆಯಂ ಪುಗುವುದನರಸಂ ಕಂಡರಸಿಗಿಂತೆಂದೆನ್ ಎಲೆ ಮಹಾದೇವಿ ಈ ನಿನ್ನರ್ಧಕಪ್ಪಡದ ಯತಿಯರ ಧರ್ಮ್ಮವೊಳ್ಳಿತ್ತಲ್ತಿವರುಟ್ಟರುಮಲ್ಲರ್ ಬತ್ತಲೆಗರುಮಲ್ಲರೆಂದು ನುಡಿದು ಮತ್ತೊಂದು ದಿವಸಂ ಅರ್ಧ ಕಪ್ಪಡದ ಸಂಘಮನರಸಂ ಬೞಿಯಟ್ಟಿ ಬರಿಸಿ ಇಂತೆಂದಂ ನೀಮರ್ಧಕಪ್ಪಡಮಂ ಬಿಸುಟ್ಟು ನಿರ್ಗ್ರಂಥಮಪ್ಪ ರಿಷಿರೂಪಂ ಕೈಕೊಂಡು ಬೞಿಕ್ಕೆ ತಪಂಗೆಯ್ಯಿಮೆಂದೊಡವರೊಲ್ಲದಿರ್ದ್ದೊಡರಸಂ ಮತ್ತಮಿಂತೆಂದಂ ನಿರ್ಗ್ರಂಥರೂಪಮಂ ಕೈಕೊಳ್ಳಲೊಲ್ಲಿರಪ್ಪೊಡೆ ಅರ್ಧಕಪ್ಪಡಮಂ ಬಿಸುಟ್ಟು ಕಚ್ಚೆಗಟ್ಟದೆ ಪೞಿಯಂ ಸಯ್ಯುತ್ತುಟ್ಟುಕೊಂಡಿರಿಮೆಂದೊಡಂತೆಗೆಯ್ವೆಮೆಂದಾ ದಿವಸಂ ತಗುೞ್ದು ಬಡಗ ನಾಡವರ್ ವಪ್ರವಾಳರಸನ ರಾಜ್ಯದೊಳರ್ಧಕಪ್ಪಡಮಂ ಬಿಸುಟ್ಟು ಸಯ್ಯುತ್ತುಡುವರುಂ ಕುೞುವಡವಂ ಪೊದೆವರುಮಾದೊಡಲ್ಲಿಂದಿತ್ತ ಕಂಬಲಿತೀರ್ಥಮೆಂದಾದುದು ಅವರ್ ಶ್ವೇತಪಟರೆಂಬೊರಾದರ್ ದಕ್ಷಿಣಾಪಥದೊಳ್ ಸಾಮಳಿಪುತ್ರನೆಂಬರಸನಪ್ಪನವರಯೆ ಸಂತತಿಯ ಶ್ವೇತಭಿಕ್ಷು ಜಾಪುಲಿ ಸಂಘಕ್ಕೆ ಮೊದಲಿಗನಾದಂ

ಮತ್ತಿತ್ತ ಸಂಪ್ರತಿ ಚಂದ್ರಗುಪ್ತ ಮುನಿಯುಮುಗ್ರೋಗ್ರ ತಪಶ್ಚರಣಂ ಗೆಯ್ದು ಸಂನ್ಯಸನ ವಿಧಾನದಿಂದಂ ಪರಮ ಶುದ್ಧ ಸಹಜ ರತ್ನತ್ರಯಮಂ ಸಾಧಿಸಿ ಮುಡುಪಿ ಬ್ರಹ್ಮ ಕಲ್ಪದೊಳ್ ಪತ್ತು ಸಾಗರೋಪಮಾಯುಷ್ಯಮನೊಡೆಯೊಂ ಶ್ರೀಧರನೆಂಬೊಂ ದೇವನಾಗಿ ಪುಟ್ಟಿದನ್ ಇಂತು ಇದು ಭದ್ರಬಾಹು ಭಟಾರರ ಕಥೆಯಂ ಪೇೞ್ದುದು.

ಪೆಱರುಂ ಸಂನ್ಯಸನಂಗೆಯ್ದೊರೆಲ್ಲಂ ಭದ್ರಬಾಹು ಭಟಾರರಂ ಮನದೆ ಬಗೆದವರೆಂತು ಪಸಿವುಂ ನೀರಱ್ಕೆ ಶೀತಮುಷ್ಣದಂಶಮಸಕಾದಿ ಪರೀಷಹಂಗಳಂ ಸೈರಿಸಿ ಪರಮ ಶುದ್ಧ ರತ್ನತ್ರಯಂಗಳಂ ಸಾಧಿಸಿದರಂತೆ ಸಂನ್ಯಸನಂ ಗೆಯ್ದು ಭವ್ಯರ್ಕ್ಕಳುಂ ಪಸಿವಿಂದಂ ಮುಡಿಪಿ ಪರಮ ಶುದ್ಧ ಸಹಜ ರತ್ನತ್ರಯಂಗಳಂ ಸಾಧಿಸಿ ಸ್ವರ್ಗ್ಗಾಪವರ್ಗ್ಗದ ಸುಖಂಗಳಂ ಭವ್ಯರ್ಕ್ಕಳೆಯ್ದುಗೆ

■

೭. ಲಲಿತಘಟೆಯ ಕಥೆ

ಲಲಿತಘಟೆಯ ಕಥೆಯಂ ಪೇೞ್ವೆಂ

ಗಾಹೆ ॥ ಕೋಸಂಬೀ ಲಲಿತಘಟಾ ಓಢಾ ಣಯೀ ಪೂರೇಣ ತಿವ್ವೇಣ
ಆರಾಧಣಂ ಪವಣ್ಣಾ ಪಾವೋವಗಯಾ ಅಮೂಢಮದೀ ॥

[ಕೋಸಂಬೀ= ಕೌಶಂಬಿ ಎಂಬ ಪೊಳಲೊಳ್ । ಲಲಿತಘಟಾ =ಲಲಿತಘಟೆ । ಓಢಾ =ಎಳೆಯೆ ಪಟ್ಟತ್ತು । ಣಯೀಪೂರೇಣ = ತೊಱೆಯ ಪೂರದಿಂದಂ । ತಿವ್ವೇಣ= ಆದಮಾನುಂ ಕಡಿದಪ್ಪುದಱಿಂದಂ । ಆರಾಧಣಂ = ನಿಜಾತ್ಮರಾಧನೆಯಂ ಪವಣ್ಣೋ = ಪೊರ್ದಿತ್ತು । ಪಾವಗಯಾ = ಪ್ರಾಯೋಪಗಮನಕ್ಕೆ ಸಂದುದಾಗಿ ಅಮೂಢಮದೀ = ಮೋಹಿಸದ ಬುದ್ಧಿಯನೊಡೆಯರ್]

ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ವತ್ಸವೆಂಬುದು ನಾಡಲ್ಲಿ ಕೌಶಂಬಿ ಎಂಬುದು ಪೊಟಲದನಾಳ್ವೊಂ ಹರಿಧ್ವಜನೆಂಬೊನರಸನಾತನ ಮಹಾದೇವಿ ವಾರುಣಿ ಎಂಬೊಳಾಯಿರ್ವರ್ಗ್ಗಂ ಮಕ್ಕಳ್ ಶ್ರೀವರ್ಧನಂ ವಿಜಯಂಧರಂ ವೀರಬಾಹು ಮೊದಲಾಗಿ ಮೂವತ್ತಿರ್ವರ್ ಕುಮಾರರುಂ ಸಾಮಂತ ಮಹಾಸಾಮಂತರ ಮಕ್ಕಳು ಮಂತೆಲ್ಲಮಯ್ನೂರ್ವರುಂ ರೂಪಿನೊಳಂ ತೇಜದೊಳಂ ಯೌವನದೊಳಂ ಶ್ರೀಯೊಳಂ ತಮ್ಮೊಳೋರನ್ನರಪ್ಪವರ್ಗ್ಗಳ್ ಲಲಿತಘಟೆಯೆಂಬೊರನಿಬರುಂ ಮಿಥ್ಯಾ ದೃಷ್ಟಿಗಳ್ ಪಂಡಿತರುಮೊಂದು ದಿವಸಂ ಶ್ರೀಕಾಂತಮೆಂಬ ಪರ್ವತದಲ್ಲಿಗನಿಬರುಂ ಬೇಂಟೆಯಾಡಲ್ ಪೋದಲ್ಲಿ ಅಲ್ಲಿರ್ದ್ದೊರಭಯಘೋಷರೆಂಬ ಭಟಾರರವರ್ಗ್ಗಭಯಘೋಷಮೆಂಬ ಪೆಸರೆಂತಾದುದೆಂದೊಡವರ್ ಗರ್ಭದೊಳಿರ್ದ್ದಂದವರ ತಾಯಿ ಜೀವಂಗಳಂ ಕೊಲ್ಲದಂತಪ್ಪ ಬಯಕೆಯಾಗಿ ಅಭಯ ಘೋಷಣೆಯಂ ಪೊಟಲೊಳಂ ನಾಡೊಳಂ ಪೊಯಿಸಿ ಜೀವಂಗಳ್ಗಭಯ ದಾನಮಂ ಕೊಟ್ಟು ಪುಟ್ಟಿದರಂತಪ್ಪುದಱಿಂದವರ್ಗ್ಗಭಯ ಘೋಷರೆಂಬ ಪೆಸರಾದುದಂತಪ್ಪ ಭಟಾರರಡವಿಯೊಳಿರೆ ತಪದ ಮಹಾತ್ಮ್ಯದಿಂದಂ ಲಲಿತಘಟೆಗೊಂದು ಮಿಗವಪ್ಪೊಡಂ ಬೇಂಟೆಯೊಳ್ ಸಮನಿಸದೆ ಪೊಟಲ್ಗೆ ಪೋದರಿಂತೇೞು ದಿವಸಮುಂ ಬಿಡದೆ ಅಡವಿಗೆ

ಬೇಂಟೆಯಾಡಲ್ ಪೋಗಿ ಒಂದು ಮೃಗವಪ್ಪಡಂ ಸಮನಿಸದೆ ಬೇಸತ್ತೞಿಲ್ದು ಪೊೞಲ್ಗೆ ಪೋಗಿ ಎಂಟನೆಯ ದಿವಸದಂದು ಶ್ರೀಕಾಂತಮೆಂಬ ಪರ್ವತದಡವಿಗೆ ಲಲಿತಘಟೆ ಬೇಟೆಯಾಡಲ್ ಪೋಗಿ ಅಡವಿಯೊಳ್ ಮೃಗಂಗಳನರಸುತ್ತುಂ ತೊೞಲ್ವರನ್ನೆಗಮಭಯಘೋಷ ಭಟಾರರಾಯತಿಯಿಂ ತೊಟ್ಟನೆ ಸರ್ವಾಂಗ ಮಲಧಾರಿಗಳೊಂದು ಶಿಳಾತಳದ ಮೇಗಿರ್ದ್ದಾಗಮಮಂ ಪರಿವಿಡಿಗೆಯ್ಯುತ್ತುಂ ಅರ್ಥಮಂ ಭಾವಿಸುತ್ತುಂ ಸ್ವಾಧ್ಯಾಯದೊಳ್ ತಗುಳ್ದಿರ್ದ್ದೋರಂ ಸಂಚ್ಛನ್ನಮಪ್ಪಡವಿಯ ಮಱೆಯೊಳ್ ಗೆಂಟಱಿಂದಂ ಲಲಿತಘಟೆ ಕಂಡಪೂರ್ವಮಿದೊಂದು ಕರಿಯ ಮೃಗಮಿರ್ದ್ದುದೆಂದು ಬಗೆದು ಶ್ರೀವರ್ಧನಕುಮಾರಂ ಮೊದಲಾಗನಿಬರುಂ ಬಿಲ್ಲುಗಳನೇಱಿಸಿ ತಿರುಬಾಯೊಳಂಬನಿಟ್ಟಿಸಲೆಂದು ತೆಗೆದೆಸುವನ್ನೆಗಂ ಅನಿಬರ ಬಿಲ್ಗಳುಂ ಮುಱಿದುವವರ್ಗ್ಗಳನಿಬರುಂ ಪೆಱಗಣ್ಗುರುಳ್ದು ಬಿೞ್ದೊಡಿದು ಮಹಾಚೋದ್ಯಂ ಸಾರೆ ಪೋಗಿ ನೋೞ್ಪಮೆಂದು ಪೋಪರನ್ನೆಗಂ ರಿಷಿರೂಪಂ ಕಂಡಿವರ್ ರಿಷಿಯರ್ ಮೃಗಮಲ್ಲೆಂದುಸಾರೆ ಪೋಗಿ ಅವರುಪಶಮಮುಮಂ ತಪಮುಮಂ ಕಂಡನಿಬರ್ಗ್ಗೆ ಉಪಶಮಮಾಗಿ ಕುಳ್ಳಿರ್ದು ಪೇೞಿಂ ಭಟಾರಾ ಎಂದು ಬೆಸಗೊಂಡೊಡೆ ಭಟಾರರಿಂತೆಂದು ಪೇೞಲ್ ತೊಡಗಿದರ್

ಗಾಹೆ ॥ ಸೋಧಮ್ಮೋ ಜತ್ಥ ದಯಾ ಸೋವಿ ತಓ ವಿಸಯಣಿಗ್ಗಹೋಜತ್ಥ
ದಸ ಅಟ್ಠದೋಸರಹಿಓ ಸೋ ದೇವೋ ಣತ್ಥಿ ಸಂದೇಹೋ ॥

ವ ॥ ಎಂಬುದುಂ ಜೀವಂಗಳಂ ಕೊಲ್ಲದುದೆ ಧರ್ಮಂ ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದಯ್ದುಮಿಂದ್ರಿಯಂಗಳಂ ಗೆಲ್ದಿಪ್ಪತ್ತೆರಡು ಪರೀಷಹಂಗಳಂ ಸೈರಿಸಿ ಯಮ ನಿಯಮ ಸ್ವಾಧ್ಯಾಯ ಧ್ಯಾನಾನುಷ್ಠಾನ ಪಾರಾಯಣರಾಗಿ ತಪಂಗೆಯ್ವ ರಿಷಿಯರ್ಕ್ಕಳೆ ತಪಸ್ವಿಯರ್ ಪಸಿವುಂ ನೀರೞ್ಕೆ ಮೊದಲಾಗೊಡೆಯ ಪದಿನೆಂಟು ದೋಷಂಗಳಿಲ್ಲದೊಂ ಪರಮಾತ್ಮನೆಂದಿಂತು ಪೇೞ್ದು ಮತ್ತಮಿಂತೆಂದರ್

ಗಾಹೆ ॥ ಪಾವೇಣ ಣಿರಯತಿರಿಯಂ ಗಮ್ಮ ಇ ಧಮ್ಮೇಣ ದೇವಲೋಗಂ ತು
ಮಿಸ್ಸೇಣ ಮಾಣುಸಂ ಜಂ ತಂ ದೊಣ್ಹಾ ಪಿ ಖಯೇಣ ಣಿವ್ವಾಣಂ ॥

ಎಂಬುದುಂ ಪಾಪಂ ಗೆಯ್ದವರುಂ ವೇಂಟೆಯಾಡುವರುಂ ಮಧುಮದ್ಯ ಮಾಂಸಗಳಂ ಸೇವಿಸುವರುಂ ಬಾಲವಧೆ, ಸ್ತ್ರೀ ವಧೆ, ಗೋವಧೆ, ಬ್ರಾಹ್ಮಣವಧೆ, ರಿಷಿವಧೆ ಎಂದೀ ಪಂಚ ಮಹಾ ಪಾತಕಂಗಳಂ ಗೆಯ್ದವರುಂ ಅಗಮ್ಯಾಗಮನಮಪೇಯ ಪೇಯಮಭಕ್ಷ್ಯಾ ಭಕ್ಷ್ಯಂ ಮೊದಲಾಗೊಡೆಯ ಪೊಲ್ಲಮೆಗಳೊಳ್ ನೆಗೞ್ದು ಘೋರಮುಂ ಪಿರಿಯವುಮಪ್ಪ ಪಾಪಂಗಳಂ ಗೆಯ್ದೇಳನೆಯ ನರಕದೊಳ್ ಮೂವತ್ತು ಮೂಱು ಸಾಗರೋಪಮಾಯುಷ್ಯಮನೊಡೆಯರ್ ನಾರಕರಾಗಿ ಪುಟ್ಟಿ ಛೇದನ ಭೇದನ ಪೂರಣ ಚೂರಣ ಪೀಡನ ಬಂಧನಗಳಂ ಮುಟ್ಟಿಗೆಯೊಳಿಟ್ಟು ತೆಗಪುವುದುಂ ಕೊಂತಂಗಳಿಂದಿಟ್ಟಿಗಳಿಂದಂ ಕರುಳ್ಗಳಂ ಸೋರೆ ಕುತ್ತುವುದುಂ ಚಕ್ರಂಗಳಿಂದಂ ತಲೆಯಂ ಮೊಕ್ಕನೆ ಪೋಗಿಡುವುದುಂ ಮರಂಗಳಂ ಪೋೞ್ವಂತೆ ಗರಗಸದಿಂದಮುದ್ದಂ ಬಿಡಿದು

ಪೋೞ್ವುದು ಮೆಂದಿವು ಮೊದಲಾಗೊಡೆಯ ದುಖಂಗಳಂ ಕಣ್ಣೆಮೆಯಿಕ್ಕುವನಿತು ಪೊತ್ತುಪ್ಪೊಡಂ ಉಸಿರ್ ಪತ್ತಿಲ್ಲದೆ ದುಃಖಂಗಳನನುಭವಿಸುವರ್ ಮತ್ತೊಯ್ಯನೆ ಪಾಪಂಗಳಂ ಗೆಯ್ದುವರಾನೆಯುಂ ಸಿಂಹಮುಂ ಪುಲಿಯುಂ ಕರಡಿಯುಂ ಪುಲ್ಲೆಯುಂ ಮೊಲನುಂ ಪಂದಿಯುಂ ತೋಳನುಂ ಸೀಳ್ನಾಯುಂ ಮೊದಲಾಗೊಡೆಯಡವಿಯ ಮೃಗಂಗಳುಂ ಮತ್ತಮೆೞ್ತುಂ ಕೞ್ತೆಯುಂ ನಾಯುಮೊಟ್ಟೆಯುಂ ಉಡುವುಂ ಪಾವರಣೆಯುಂ ಪಾವುಮಿಲಿಯು ಬೆಕ್ಕುರ್ಮೋಂತಿಯುಂ ಕಪ್ಪೆಯುಂ ಮುಂಗುರಿಯುಂ ಮೊದಲಾಗೊಡೆಯ ಸ್ಥಳಚಂರಗಂಳುಂ ಮೀನುಂ ಮೊಸಳೆಯುಂ ನೆಗೞುಮಾಮೆಯುಂ ಮಕರಮುಂ ತಿಮಿ ತಿಮಿಂಗಿಳಂ ಮೊದಲಾಗೊಡೆಯ ಜಲಚರ [ಗಳುಂ] ಕಾಗೆ ಗೂಗೆ ಪರ್ದು ಚಕೋರಂ ಹಂಸೆ ಕುಕ್ಕು ಮರ್ಕುಗಿಳಿ ಪುರುಳಿ ಪೆಂಗುರು ಕಾರಂಡಮಾಂದೆ ಮೊದಲಾಗೊಡೆಯ ಗಗನಚರಂ ಪಂಚೇಂದ್ರಿಯಂಗಳುಮಾಗಿ ಮತ್ತಮೇಕೇಂದ್ರಿಯ ದ್ವೀಂದ್ರಿಯ ತ್ರೀಂದ್ರಿಯ ಚತುರಿಂದ್ರಿಯಂಗಳಾಗಿ ತಿರಿಕಗತಿಯೊಳ್ ಪುಟ್ಟಿ ಜೀವಂಗಳಿಂತು ಪಾಪದ ಫಲಂಗಳಿಂದಂ ದುಃಖಂಗಳನೆಯ್ದುಗುಂ ಮತ್ತಂ

ಮಿಸ್ಸೇಣ ಮಾಣುಸತ್ತನೆಂಬುದು ಧರ್ಮ ಪಾಪಂಗಳನೆರಡುಮಂ ನೆಗೞ್ದರ್ ಮನುಷ್ಯಗತಿಯೊಳ್ ಪುಟ್ಟಿ ಮುಂ ಗೆಯ್ದ ಪಾಪಕರ್ಮದುದಯದಿಂದಂ ಶರೀರ ಮಾನಸಾಗಂತುಕ ಸಹಜಮಪ್ಪ ದುಃಖಂಗಳುಮನಿಷ್ಟ ಸಂಯೋಗಮುಮಿಷ್ಟವಿಯೋಗಮುಂ ರೋಗ ಶೋಕಂಗಳುಂ ದಾರಿದ್ರ್ಯಮುಮೆಂದಿವು ಮೊದಲಾಗೊಡೆಯವಱಿಂದಮಪ್ಪ ದುಃಖಗಳನೆಯ್ದಿ ಮತ್ತಮಾ ಜೀವಂಗಳ್ ಶಭಕರ್ಮದುದಯದಿಂದಂ ಶ್ರೀಯುಂ ಸಂಪತ್ತುಂ ವಿಭವಮುಮೈಶ್ವರ್ಯಮುಮಾರೋಗ್ಯ ಶರೀರಂಗಳಾಗೆ ಪುತ್ರಮಿತ್ರ ಕಳತ್ರ ಸ್ವಜನ ಬಂಧುಜನದೊಳ್ ಕೂಡಿ ಸುಖಂ ಬಾೞ್ವುದುಮಕ್ಕುಮಿಂತು

ಶ್ಲೋಕಂ ॥ ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ
ಚಕ್ರವತ್ ಪರಿವರ್ತಂತೇ ದುಃಖಾನಿ ಚ ಸುಖಾನಿ ಚ ॥

ಇಂತು ಮುನಷ್ಯಗತಿಯೊಳ್ ಪುಟ್ಟಿ ಸೂೞ್ ಸೂೞೊಳ್ ದುಃಖಂಗಳಂ ಜೀವಂಗಳನುಭವಿಸುಗುಂ

ಅಂತೆ ಗಮ್ಮ ಇ ಧಮ್ಮೇಣ ದೇವಲೋಯ ಎಂಬುದು ಕೇವಳಮೆ ಧರ್ಮಂಗೆಯ್ದವರ್ ಸೌಧರ್ಮ ಈಶಾನ ಸನತ್ಕುಮಾರ ಮಹೇಂದ್ರ ಬ್ರಹ್ಮ ಬ್ರಹ್ಮೋತ್ತರ ಲಾಂತವ ಕಾಪಿಷ್ಠ ಶುಕ್ರ ಮಹಾಶುಕ್ರ ಶತಾರ ಸಹಸ್ರಾರ ಆನತ ಪ್ರಾಣತ ಆರಣ ಅಚ್ಯುತಮೆಂಬ ಪದಿನಾಱು ಕಲ್ಪಂಗಳೊಳಮಲ್ಲಿಂ ಮೇಗಣ ಸುದರ್ಶನಾಮೋಘ ಸುಪ್ರಬುದ್ಧ ಯಶೋಧರ ಸುಭದ್ರ ಸುವಿಸಾಳ ಸುಮನಸ ಸೌಮನಸ ಪ್ರೀತಿಂಕರಮೆಂಬ ನವಗ್ರೈವೇಯಕಂಗಳಳೊಳಮಲ್ಲಿಂ ಮೇಗಣ ಲಚ್ಛಿ ಮಹಾಲಚ್ಛಿಮಾಳಿನಿ ವೈರೆ ವೈರೋಚನೆ ಸೋಮೆ ಸೋಮರೂಪೆ ಅಂಕೆ ಪಳಿಕೆ ಅಿಇಚ್ಚೆಯೆಂಬ ನವಾನುದ್ದಿಸೆಗಳೊಳಮಲ್ಲಿಂ ಮೇಗಣ ವಿಜಯ ವೈಜಯಂತ ಜಯಂತ

ಅಪರಾಜಿತ ಸರ್ವಾರ್ಥಸಿದ್ಧಿ ಎಂದಿಂತು ಪಂಚಾನುತ್ತರೆಗಳೊಳೆರಡು ಘಳಿಗೆಯಿಂದೊಳಗೆ ಪಾಸಿನ ಪೊರೆಯೊಳ್ ಪುಟ್ಟಿ ಇಂದ್ರ ಪತೀಂದ್ರ ಸಾಮಾನಿಕ ತ್ರಯಸ್ತ್ರಿಂಶ ಪಾರಿಷದಾತ್ಮರಕ್ಷ ಲೋಕಪಾಳಾಹಮಿಂದ್ರತ್ವಮೆಂದೀ ಮಹರ್ಧಿಕದೇವರಾಗಿ ಅಣಿಮಾ ಮಹಿಮಾ ಲಘಿಮಾ ಪ್ರಾಪ್ತಿ ಪಾಗಲ್ಭ್ಯ ವಶಿತ್ವ ಕಾಮರೂಪಿತ್ವಮೆಂದಿಂತು ಅಷ್ಟಗುಣೈಶ್ವರ್ಯಂಗಳೊಳ್ ಕೂಡಿ ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿತ್ವಮುಂ ಸುಗಂಧಮಪ್ಪುಚ್ಛ್ವಾಸ ನಿಶ್ವಾಸಂಗಳನೊಡೆಯರಾಗಿ ಆಯುಷ್ಯಾಂತಂಬರೆಗಂ ನವ ಯೌವನರಾಗಿ ಮುಪ್ಪುಮಪಮೃತ್ಯು ಮೂತ್ರ ಪುರೀಷಂಗಳುಂ ಗಂಡ ಕಕ್ಷ ಕುಕ್ಷಿ ಪ್ರದೇಶ[ಗಳುಂ] ರೋಮಂಗಳುಂ ರೋಗ ಶೋಕ ದುಃಖಂಗಳುಂ ರಸ ರುಧಿರ ಮಾಂಸ ಮೇದೋಸ್ಥಿ ಮಜ್ಜ ಶುಕ್ಲಮೆಂದಿಂತು ಸಪ್ತಧಾತುಗಳುಮೆಂದಿವು ಮೊದಲಾಗೊಡೆಯವನಿಲ್ಲದೊರ್ ಸಹಜಮಪ್ಪ ಕಟಕ ಕಟಿಸೂತ್ರ ಕುಂಡಲಾಭರಣಂ ಮೊದಲಾಗೊಡೆಯ ಪದಿನಾಱುಮಾಭರಣಂಗಳಂ ತೊಟ್ಟು ದಿವ್ಯ ವಸ್ತ್ರಂಗಳನುಟ್ಟು ಆದಿತ್ಯನ ತೇಜದಿನಗ್ಗಳಮಪ್ಪ ತೇಜದೊರಾಗಿ ಕಣ್ಣೆಮೆಯಿಕ್ಕುವನಿತು ಪೊತ್ತಪ್ಪೊಡಂ ದುಃಖಮಿಲ್ಲದೊಂದೆರಡು ಸಾಗರೋಪಮಂ ಮೊದಲಾಗಿ ಮೂವತ್ತುಮೂಱುಸಾಗರೋಪಮಂಬರಮಾಯುಷ್ಯಮನೊಡೆಯರಾಗಿ ಆಟ ಪಾಟ ವಿನೋದಂಗಳಿಂದಂ ದೇವಿಯುಪ್ಪಪ್ಸರೆಯರೊಡನೆ ಪಲಕಾಲಂ ದಿವ್ಯ ಸುಖಂಗಳನನುಭವಿಸಿಯಾಯುಷ್ಯಾಂತದೊಳಿಲ್ಲಿ ಮನುಷ್ಯಗತಿಯೊಳ್ ಕುರುವಂಶೋಗ್ರ ವಂಶಮಿಕ್ಷ್ವಾಕು ವಂಶ ನಾಥವಂಶ ಹರಿವಂಶ ಸೂರ್ಯವಂಶ ಸೋಮವಂಶಮೆಂದಿವು ಮೊದಲಾಗೊಡೆಯುತ್ತಮ ಕುಲದೊಳ್ ಶ್ರಾವಕರ ಬಸಿಱೊಳ್ ಪುಟ್ಟಿ ಪೂರ್ವಕೋಟಿಯಾಯುಷ್ಯಮನೊಡೆಯರಾಗಿ ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿತ್ವದೊಳ್ ಕೂಡಿ ಏಕಛತ್ರಚ್ಛಾಯೆಯಿಂದಂ ಪೃಥುವಿಯೆಲ್ಲಮನಾಳ್ದು ಪಶ್ಚಾತ್ಕಾಲದೊಳೇನಾನುಮೊಂದು ವೈರಾಗ್ಯಂ ಕಾರಣಮಾಗಿ ಮಗಂಗೆ ರಾಜ್ಯಪಟ್ಟಂಗಟ್ಟಿ ಬಾಹ್ಯಾಭ್ಯಂತರ ಪರಿಗ್ರಹಂಗಳೆಲ್ಲಮಂ ತೊಱೆದೆಲ್ಲರೊಳ್ ನಿಃಶಲ್ಯಂ ಗೆಯ್ದು ತಪಂ ಬಟ್ಟು ಘೋರ ವೀರತಪಶ್ಚರಣಂ ಗೆಯ್ದು ಉತ್ಕೃಷ್ಟದಿಂದಂ ಮೂಱು ಭವಂಗಳ್ ಮೇಣ್ ಮಧ್ಯಮದಿಂದಮಯ್ದು ಭವಂಗಳ್ ಮೇಣ್ ಕನಿಷ್ಠದಿಂದಮೇೞುಭವಂಗಳೊಳಗೆ ಅಷ್ಟವಿಧ ಕರ್ಮಂಗಳಂ ಕಿಡಿಸಿ ಮೋಕ್ಷಮನೆಯ್ದುವರ್

ದೊಣ್ಣಂ ಪಿ ಖಯೇಣ ಣಿವ್ವಾಣಂ ಎಂದು ತಪದಿಂದುಭಯ ಕರ್ಮಮೆಂದಿಳ್ತೆಱದ ಕರ್ಮದ ಕೇಡಿನಿಂದಂ ಮೋಕ್ಷಮನೆಯ್ದುವರಂತಪ್ಪ ಮೋಕ್ಷಮೆಂತೆಂದೊಡೆ ಜಾತಿ ಜರಾ ಮರಣಂಗಳಂ ಭಯಮುಮಂ ಅನಿಷ್ಟಸಂಯೋಗಮುಮಿಷ್ಟ ವಿಯೋಗಮುಂ ಶಾರೀರಮಾನಸಾಗಂತುಕ ಸಹಜಮಪ್ಪ ದುಃಖಂಗಳುಂ ಆಹಾರ ಭಯ ಮೈಥುನ ಪರಿಗ್ರಹಗಳು ವಾತ ಪಿತ್ಥ ಶ್ಲೇಷ್ಮ ಜ್ವರ ಖಾಸ ಶ್ವಾಸ ಅರುಚಿ ಛರ್ದಿಯತಿಸಾರ ಅಕ್ಷಿ ಕುಕ್ಷಿ ವೇದನಾ ಸ್ಫೋಟಕ ಶೂಲ ಭಗಂಧರ ಕುಷ್ಠಕ್ಷಯ ಗಂಡ ಶಿರೋವೇದನೆಯೆಂದಿವು ಮೊದಲಾಗೊಡೆಯ ಅಯ್ದು ಕೋಟಿಯುಮಱುವತ್ತೆಂಟುಲಕ್ಕೆಯುಂ ತೊಂಬತ್ತೊಂಬಯ್ ಸಾಸಿರದಯ್ನೂಱೆಣ್ಬತ್ತ

ನಾಲ್ಕು ವ್ಯಾಧಿಗಳುಂ ಕ್ರೋಧ ಮಾನಮಾಯಾ ಲೋಭಂಗಳುಂ ರಾಗ ದ್ವೇಷ ಮೋಹಂಗಳುಂ ಮಗುಟ್ದು ಬರವುಂ ಶೋಕಮುಮಾವ ಬಾಧೆಗಳುಮೆಂದಿಂತಿವು ಮೊದಲಾಗೊಡೆಯ ದುಃಖಂಗಳುಮಿಲ್ಲದುದನುಪಮಾರಹಿತ ಮಪ್ಪುದನಳಿವಿಲ್ಲದುದನಾವಕಾಲಮುಂ ಕಿಡದುದಂ ಪಾಪದಿಂ ಪೊರೆಯದುದಂ ಸುಖಮನೊಡೆತಪ್ಪುದುಂ ತನ್ನಿಂತಾನಾದುದನಂತಪ್ಪ ಮೋಕ್ಷ ಸುಖಮನೆಯ್ದಿ ಅನಂತಜ್ಞಾನ ಅನಂತದರ್ಶನ ಅನಂತವೀರ್ಯ ಅನಂತಸುಖಮೆಂಬನಂತ ಚತುಷ್ಟಯದೊಳ್ ಕೂಡಿ ಲೋಕಾಲೋಕಮನೆಲ್ಲಮನೊರ್ಮೊದಲೆ ಕಾಣುತ್ತುಮಱಿವುತ್ತುಮನಂತಸುಖಮುಮನಂತ ವೀರ್ಯಕ್ಕವೊಡೆಯರಾಗಿ ಅನಂತಕಾಲಂ ಮೋಕ್ಷದೊಳಿರ್ಪ್ಪರ್ ಎಂಬುದಿಂತಭಯಘೋಷ ಭಟಾರರ್ ಲಲಿತಘಟೆಗೆ ಧರ್ಮಶ್ರವಣಂಗೆಯ್ಯೆ ಕೇಳ್ದು ಶ್ರೀವರ್ಧನಂ ಮೊದಲಾಗನಿಬರುಂ ಪಶ್ಚಾತ್ತಾಪವಾಗಿ ಪಂಚಮಹಾಪಾತಕರೆಮುಂ ಪೊಲ್ಲಕೆಯ್ದೆಮುಂ ಭಟ್ಟಾರಕರುಂ ಕೊಂದೆಮವರ ತಪದ ಮಹಾತ್ಮ್ಯದಿಂ ಬರ್ದುಂಕಿದೆವೆಂದು ಮನದೆ ಬಗೆದೀ ಗೆಯ್ದ ಪಾಪಮೆಲ್ಲಮಿಂತಲ್ಲದೆ ಪಿಂಗದೆಂದು ಇವರ ಕಾಲಡಿಗಳನೆಮ್ಮ ತಲೆಗಳೆಂಬ ತಾಮರೆಯ ಪೂಗಳಿಂದಮರ್ಚ್ಚಿಸಿದೊಡಲ್ಲದೆ ಪಾಪಂ ಪಿಂಗದೆಂದು ಬಗೆದು ಕಯ್ದುಗಳತ್ತ ಕೈಯಂ ನೀಡಲ್ ಬಗೆವನ್ನೆಗಂ ಭಟಾರರ್ ವಾರಿಸಿದರ್ ಅಂತು ಬಗೆಯಲ್ ವೇಡೆಂದೊಡೆ ಶ್ರೀವರ್ಧನ ಕುಮಾರನಾಮೇನಂ ಬಗೆದೊಮೆಂದೊಡೆ ನೀಮುಂ ನಿಮ್ಮ ತಲೆಗಳನರಿದೆಮ್ಮ ಕಾಲಡಿಗಳನರ್ಚ್ಚಿಸುವೆಮೆಂದು ಬಗೆದಿರೆಂದೊಡಿಂತು ಮನದೆ ಬಗೆದುದನಾರಾನುಮಱಿವರೊಳರೆ ಎಂದನಿಬರುಂ ಚೋದ್ಯಂಬಟ್ಟು ಭಟಾರರ್ಗ್ಗೆಱಗಿ ಪೊಡೆವಟ್ಟರಲ್ಲಿ ಶ್ರೀವರ್ಧನ ಕುಮಾರನೆಂದಂ ಭಟಾರಾ ನಿಮ್ಮಡಿಗಳಂ ತಲೆಗಳಿಂದರ್ಚ್ಚಿಸಿದಾಗಳೆಮ್ಮ ಗೆಯ್ದ ಪಾಪಮೆಂತು ಕಿಡುಗುಮೆಂದೊಡಾ ಪಾಂಗಿನಿಂ ಕಿಡದೆನೆಯಂತಪ್ಪೊಡೆ ದೀಕ್ಷೆಯಂ ದಯೆಗೆಯ್ಯಿಮೆಂದೊಡೆ ಭಟಾರರೆಂದರ್ ಒಳ್ಳಿತ್ತಂ ಬಗೆದಿರ್ ಎಂತುಂ ನಿಮಗೆಲ್ಲರ್ಗ್ಗೆ ಕಿಱಿದೆಯಾಯುಷ್ಯಮೆಂದೊಡೆ

ಶ್ರೀವರ್ಧಕುಮಾರನ ತಮ್ಮಂ ಮೂವತ್ತಿರ್ವ್ವರಿಂ ಕಿಱಿಯಂ ನಂದಿಮಿತ್ರನೆಂಬೊಂ ಭಟಾರರ ಮಾತಂ ಕೇಳ್ದು ನಕ್ಕಿಂತೆಂದಂ ನಾಮೆಲ್ಲಂ ಕೂಸುಗಳೆಮುಂ ನವಯೌವನರೆಮುಂ ತೇಜದೊಳಂ ಸತ್ವದೊಳಂ ಬಲ ಪರಾಕ್ರಮದೊಳಂ ಕೂಡಿದೆಮೆಮಗೆಲ್ಲರ್ಗ್ಗಂ ಕಿಱಿದೆಯಾಯುಷ್ಯಮೆಂಬುದನೆಂತು ನಂಬಲಕ್ಕುಮೆಂದೊಡೆ ಭಟಾರರ್ ನೀನೇಕೆ ನಕ್ಕಪೆಯಮ್ಮಾ ನಿಮಗೆಲ್ಲರ್ಗ್ಗಮಿಪ್ಪತ್ತೊಂದು ದಿವಸಮಾಯುಷ್ಯಂ ನೀರದೆಸೆಯಿಂದಂ ಸಾವಕ್ಕುಮೆಂದೊಡೆ ಶ್ರೀವರ್ಧನಕುಮಾರನೆಂದಂ ಭಟಾರಾ ಎಮಗಿಪ್ಪತ್ತೊಂದು ದಿವಸಮಾಯುಷ್ಯಮೆಂಬುದರ್ಕ್ಕೆ ಸಾಭಿಜ್ಞಾನಮೇನೆಂದು ಬೆಸಗೊಂಡೊಡೆ ಭಟಾರರೆಂದರ್ ನೀಮೀಗಳ್ ಪೊಟಿಲ್ಗೆ ಪೋಗುತ್ತುಂ ನಿಮಗಿದಿರನೆರಟ್ ಕಾಳಿಂಗ ನಾಗಂಗಳ್ ಪೆಡೆಗಳನೆತ್ತಿ ನಾಲಗೆಗಳಂ ಪೊಳೆಯಿಸುತ್ತುಂ ಬಂದೊಡೆ ನೀಮೊದಱೆಯವಂ ಬಗ್ಗಿಸಿದೊಡದೃಶ್ಯಂಗಳಾಗಿ ಪೋಕುಂ ಇದೊಂದು ಸಾಭಿಜ್ಞಾನಂ ಮತ್ತಮಂತೆ ಪೋಪಾಗಳೊಂದು ಕಿಱುಗೂಸು ಕೋಲಂ ಪಿಡಿದು ನಿಮ್ಮಂ ಬಡಿಯಲೆಂದು ಬಂದೊಡದಱ ಕೆಯ್ತಂ ಕಂಡು ನೀಮುಂ ನಕ್ಕೊಡೆ ನಿಮ್ಮ ನೋಡೆ ನೋಡೆ ಭಯಂಕರಮಪ್ಪ ಪಿರಿದೊಂದು

ಬೇತಾಳ ರೂಪಂ ಕೈಕೊಂಡು ಆಕಾಶಂಬರೆಗಂ ಬಳೆದದೃಶ್ಯಮಕ್ಕುಂ ಇದೊಂದು ಸಾಭಿಜ್ಞಾನಂ ಮತ್ತಮುಂತೆ ಪೋಪನ್ನೆಗಂ ತೊಱೆ ತೀವುಗುಮಿದೊಂದು ಸಾಭಿಜ್ಞಾನಂ ಮತ್ತಮಿಂದಿನಿರುಳು ನಿಮ್ಮ ತಾಯ್ ನಿಮ್ಮಂ ಮೂವತ್ತಿವ್ವರುಮಂ ರಾಕ್ಷಸಂ ನುಂಗಿದನೆಂಬುದಂ ಕನಸುಗಾಣುಮಿದೊಂದು ಸಾಭಿಜ್ಞಾನಮೆಂದು ಭಟಾರರ್ ಪೇೞ್ದೊಡೆ ಭಟಾರರಂ ಬಂದಿಸಿ ತಮ್ಮ ಪೊೞಲ್ಗೆ ಪೋಪಾಗಳ್ ಭಟಾರರ್ ಪೇೞ್ದುದೆಲ್ಲಮಂ ಪೇೞ್ದಪಾಂಗಿನೊಳ್ ಪೋಗುತ್ತುಂ ಕಂಡು ಪ್ರತ್ಯಕ್ಷಮಾಗಿ ಮತ್ತಿರುಳ್ ತಮ್ಮ ಮೂವತ್ತಿವ್ವರುಂ ರಾಕ್ಷಸಂ ನುಂಗಿದುದುಮಂ ತಾಯ್ ಕನಸುಗಂಡು ತಮಗೆ ನೇಸಱ್ ಮೂಡೆ ಪೇೞ್ದೊಡೆ ನಂಬುಗೆಯಾಗಿಯುಬ್ಬೆಗಂ ಬಟ್ಟಿಂತಿಪ್ಪಿನೆಗಂ ವರ್ಧಮಾನ ಭಟಾರರ ತೀರ್ಥಂ ವಿಹಾರಿಸುತ್ತುಂ ಕೌಸುಂಬಿಗೆ ವಂದೊಡೆ ಲಲಿತ ಘಟೆ ಪಿರಿದರ್ಚ್ಚನೆಯಂ ಕೊಂಡು ಪೋಗಿ ಭಟಾರರನರ್ಚ್ಚಿಸಿ ಬಂದಿಸಿ ಧರ್ಮಶ್ರವಣಾನಂತರಂ ಇಂತೆಂದು ವರ್ಧಮಾನ ಭಟಾರರಂ ಬೆಸಗೊಂಡರ್, ಭಟಾರಾ ಎಮಗಾಯುಷ್ಯಮೆನಿತುಂಟೆಂದು ಬೆಸಗೊಂಡೊಡೆ ಭಟಾರರೆಂದರ್ನಿಮಗನಿಬರ್ಗ್ಗಂ ಕಿಱಿದೆಯಾಯುಷ್ಯಮೆಂದು ಪೇೞ್ದೊಡಾಮೇನೋ ಭವ್ಯರೋ ಅಭವ್ಯರೋ ಎಂದು ಬೆಸಗೊಂಡೊಡೆ ನೀಮೆಲ್ಲಂ ಭವ್ಯರಿರ್ ಭವ್ಯರಾದೊಡಂ ಪರಮ ಶುದ್ಧ ಸಹಜ ದರ್ಶನ ಜ್ಞಾನಚಾರಿತ್ರಂಗಳಂ ಕೈಕೊಂಡು ನೆಗೞ್ದೊಡಲ್ಲದೆ ಮೋಕ್ಷಮಾಗದೆಂತು ಸುವರ್ಣ ಪಾಷಾಣದೊಳ್ ಸುವರ್ಣಮುಂಟಾಗಿಯುಂ ದಹನ ತಾಪನ ಪಿಂಡಿ ಬದ್ಧನಾದಿಕ್ರಿಯೆವೆಸಗ ದನ್ನೆಗಂ ಪೊನ್ನಾಗದಂತೆ ತಪದಿಂದಲ್ಲದೆ ಮೋಕ್ಷಮಾಗದೆಂದು ಪೇೞ್ದೊಡನಿಬರುಂ ವರ್ಧಮಾನ ಭಟಾರರ್ಗೆ ಶಿಷ್ಯರಾಗಿ ತಪಂಬಟ್ಟು ಪಂಚಮಹಾವ್ರತಂಗಳನೇಱಿಸಿಕೊಂಡು ಪ್ರಾಯೋಪಗಮನ ಮರಣ ವಿಧಾನಮಂ ಬೆಸಗೊಂಡೊಡೆ ಭಟಾರರಿಂತೆಂದು ಪೇೞ್ದರ್

ಶ್ಲೋಕಂ । ಸ್ಥಿತಸ್ಯ ವಾ ನಿಷಣ್ಣಸ್ಯ ಯಾವತ್ ಸುಪ್ತಸ್ಯ ವಾ ಪುನಃ
ಸರ್ವಾಭೀಷ್ಟ ಪರಿತ್ಯಾಗಃ ಪ್ರಾಯೋಪಗಮನಂ ಸ್ಮೃತಂ ॥

ವ॥ ಇಂತುಟಾ ಪ್ರಾಯೋಪಗಮನ ಲಕ್ಷಣಮೆಂದು ಭಟಾರರ್ ವಕ್ಖಾಣಿಸಿ ಪೇೞೆ ಕೇಳ್ದಱಿದು ಲಲಿತಘಟೆಯನಿಬರುಂ ಭಟಾರರ ಪಕ್ಕದೆ ಚತುರ್ವಿಧಮಪ್ಪಾಹಾರಮಂ ಶರೀರಮುಮಂ ಜಾವಜ್ಜೀವಂ ತೊಱೆದು ಭಟ್ಟಾರರಂ ಬಂದಿಸಿ ಪೋಗಿ ವಿಶಾಳೆಯೆಂಬ ತೊಱೆಯ ತಡಿಯೊಳನಿಬರುಮೇಕ ಪಾರ್ಶ್ವದೊಳ್ ಪಟ್ಟಿರ್ದು ಕೈಯುಂ ಕಾಲುಮನಾಡಿಸದೊಂದು ಕೆಲದಿಂದೊಂದು ಕೆಲಕ್ಕೆ ಮಗುೞದೆ ಕುೞ್ಳಿರದೆ ನಿಂದಿರದೆ ನುಡಿಯದೆ ಕೆಲಂಗಳಂ ನೋಡದಿಂತು ಪ್ರಾಯೋಪಗಮನಂ ಗೆಯ್ದು ಪದಿನೆಯ್ದು ದಿವಸಂ ಮೆಯ್ಯಂ ತೊಱೆದಿರ್ದ್ದರನ್ನೆಗಂ ಮೇಗೆ ಪಿರಿದೊಂದು ಮೞೆಕೊಂಡು ಪೂರಂ ಬಂದವರಮೆೞೆದುಕೊಂಡು ಪೋಗಿ ಪಿರಿದೊಂದು ಮಡುವಿನೊಳಿಕ್ಕಿದೊಡೆ ನೀರೊಳಗಿರ್ದ್ದು ಮೋಹಿಸದ ಬುದ್ಧಿಯನೊಡೆಯರಾಗಿ ದೇವರಂ ಧ್ಯಾನಿಸುತ್ತುಂ ಪಂಚನಮಸ್ಕಾರಮಂ ಮನದೊಳುಚ್ಚರಿಸುತ್ತುಂ ಶುಭಧ್ಯಾನದೊಳ್ ಪರಿಣತರಾಗಿ ದರ್ಶನ ಜ್ಞಾನ ಚಾರಿತ್ರಂಗಳನಾರಾಧಿಸಿ ಮುಡಿಪಿಯಯ್ಯೂರ್ವರುಂ ವೈಜಯಂತಮೆಂಬ

ಪಂಚಾಣುತ್ತರೆಯೊಳುತ್ಕೃಷ್ಟಮಪ್ಪ ಮೂವತ್ತು ಮೂಱು ಸಾಗರೋಪಮಾಯುಷ್ಯಮನೊಡೆಯರೇಕ ಹಸ್ತ ಪ್ರಮಾಣ ಶ್ವೇತವರ್ಣ್ಣದೊಳಹಮಿಂದ್ರ ದೇವರಾಗಿ ಪುಟ್ಟಿದರ್

ಮತ್ತೆ ಪೆಱರುಂ ರತ್ನತ್ರಯಂಗಳನಾರಾಧಿಸುವಾರಾಧಕರ್ಕ್ಕಳುಂ ಲಲಿತಘಟೆಯಂ ಮನದೊಳ್ ಬಗೆದು ಚತುರ್ವಿಧಮಪ್ಪುಪಸರ್ಗ್ಗಮಂ ಪಸಿವುಂ ನೀರಟ್ಕಿ ಮೊದಲಾಗೊಡೆಯಮಿರ್ಪ್ಪತ್ತೆರಡು ಪರೀಷಹಂಗಳಂ ಸೈರಿಸಿ ಶುಭ ಪರಿಣಾಮದಿಂ ದರ್ಶನ ಜ್ಞಾನ ಚಾರಿತ್ರಂಗಳನಾರಾಧಿಸಿ ಸ್ವರ್ಗ್ಗಾಪವರ್ಗ್ಗ ಸುಖಂಗಳನೆಯ್ದುಗೆ

■

೮. ಧರ್ಮಘೋಷ ಭಟಾರರ ಕಥೆ

ಧರ್ಮ ಘೋಷ ಭಟಾರರ ಕಥೆಯಂ ಪೇಳ್ವೆಂ

ಗಾಹೆ ॥ ಚಂಪಾಏ ಮಾಸಖವಣಂ ಕರಿತ್ತು ಗಂಗಾತಟಮ್ಮಿ ತಣ್ಹಾ ಏ
ಘೋರಾ ಏ ಧಮ್ಮ ಘೋಸೋ ಪಡಿವಣ್ಣೋ ಉತ್ತಮಂ ಅಟ್ಠಂ ।

ಚಂಪಾಏ=ಚಂಪೆಯೆಂಬ ಪೊೞಲೊಳ್ । ಮಾಸ ಖವಣಂ ಕರಿತ್ತು = ಮಾಸೋಪವಾಸಂ ಗೆಯ್ದು । ಗಂಗಾತಟಮ್ಮಿ = ಗಂಗಾಮಹಾನದಿಯ ತಡಿಯೊಳ್ । ತಣ್ಹಾಏ=ನೀರಳ್ಕೆಯಿಂದಂ ।ಘೋರಾಏ =ಆದಮಾನುಂ ಕಡಿದಪ್ಪುದಱಿಂದಂ । ಧಮ್ಮಘೋಸೋ = ಧರ್ಮಘೋಷನೆಂಬ ಭಟಾರಕಂ । ಪಡಿವಣ್ಣೋ= ಪೊರ್ದಿದೊಂ। ಉತ್ತಮಂ ಅಟ್ಠಂ =ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ

ವಚನ । ಅದೆಂತೆಂದೊಡೆ

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಕೌಶಂಬಿ ಎಂಬುದು ನಾಡು ಅಲ್ಲಿ ವಾರಣಾಸಿಯೆಂಬುದು ಪೊೞಲ್ ಅದನಾಳ್ವೊಂ ಕೀರ್ತಿಧರನೆಂಬನರಸನಾತನ ಮಹಾದೇವಿಯರ್ಕಳ್ ಅರತಿ ರತಿಯೆಂಬೊರಾ ಇರ್ವ್ವರ್ಗಂ ಮಕ್ಕಳ್ ಧರ್ಮಘೋಷನುಂ ಧರ್ಮಕೀರ್ತಿಯುಮೆಂಬರಂತವರ್ಗಳಿಷ್ಟ ವಿಷಯ ಕಾಮಭೋಗಂಗಳನನು ಭವಿಸುತ್ತಿರ್ಪನ್ನೆಗಂ ಮತ್ತೊಂದು ದಿವಸಂ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತುಂ ಬರ್ಪೊರಾ ವಾರಣಾಸಿಗೆ ಬಂದು ಬಹಿರುದ್ಯಾನವನದೊಳ್ ಸ್ಫಟಿಕ ಶಿಳಾತಳದ ಮೇಲೆ ಪಂಥಾತಿಚಾರನಿಯಮಂ ಗೆಯ್ದಿರ್ದ್ದ ಗುಣೋತ್ತಮರೆಂಬ ಭಟಾರರಂ ವನಕ್ರೀಡೆಗೆ ವೋದ ಧರ್ಮಘೋಷನುಂ ಧರ್ಮಕೀರ್ತಿಕುಮಾರನುಂ ಕಂಡು ಬಂದಿಸಿ ಭಟಾರಾ ಎಮಗೆ ಧರ್ಮಮಂ ಪೇೞಿಮೆಂದೊಡೆ ಭಟಾರರಿಂತೆಂದು ಧರ್ಮಮಂ ಪೇೞ್ದರ್

ವೃತ್ತ ॥ ಕೋ ಧರ್ಮ ಪ್ರವರೋ ದಯಾತ್ಮ ಸುಭಗಃ ಕಃ ಸ್ಯಾನ್ನರಃ ಪಂಡಿತಃ
ಕಾಯೋಷಿದ್ವಶಗಾ ಕಲಿಷ್ಕ ಇತಿ ಚೇತ್ ಕ್ರೋಧೋ ಶುಭಸ್ಯೋದಯಃ
ಕಾಽ ಲಕ್ಷ್ಮೀರವಿಚಾರ ಕಾರ್ಯ ಘಟನಾ ಕಿಂಮಿತ್ರಮಾತ್ಮಾಽಽತ್ಮನಃ
ಕಿಂ ಸೌಖ್ಯಂ ಭುವಿ ಶಾಸ್ತ್ರವಾಚನಮನಂ ಕೋವಾಗತಿರ್ನಿರ್ವೃತಿಃ ॥

ಸಮ್ಯಕ್ತ್ವೋತ್ತಮ ಹಸ್ತಿ ಮಸ್ತಕಗತಃ ಸುಜ್ಞಾನ ಕೇತುಬ್ರಜೋ
ನಾನಾ ಶೀಲ ಗುಣವ್ರತೋರು ಪೃಥುನಾ ಸ್ವಾಧ್ಯಾಯ ಶಂಖ ಧ್ವನಿಃ ॥
ಭಾಸ್ವತ್ ಸಂವರ ಭೂರಿ ಚಾರು ಕವಚೋ ಧ್ಯಾನಾತಿ ತೀಕ್ಷ್ಣಾಯುಧಃ
ಸೇವ್ಯೋ ಧರ್ಮ ಮಹಾನೃಪೋ ಬುಧಘಟ್ಯೈಃ ಸ್ವರ್ಮೋಕ್ಷವೃತ್ತಿ ಪದಃ ॥

ಶ್ಲೋಕ ॥ ಧರ್ಮಾರ್ಥಕಾಮ ಮೋಕ್ಷೇಷು ಯಸ್ಯೈತೋऽಪಿ ನ ವಿದ್ಯತೇ
ಅಜಾಗಳಸ್ತನಸ್ಯೈವ ತಸ್ಯ ಜನ್ಮ ನಿರರ್ಥಕಂ ॥

ವೃತ್ತ ॥ ಏಷಾಂ ನ ವಿದ್ಯಾ ನ ತಪೋ ನ ದಾನಂ
ನಾಪ್ಯೇವ ಶೀಲಂ ನಗುಣೋ ನ ಧರ್ಮಃ
ತೇ ಮರ್ತ್ಯಲೋಕೇ ಭುವಿ ಭಾರಭೂತಾಃ
ಮನುಷ್ಯರೂಪೇಣ ಮೃಗಾಶ್ಚರಂತಿ ॥

ಶ್ಲೋಕಃ ॥ಕ್ರಿಮಯಃ ಕಿಂ ನ ಜೀವಂತಿ ಭಕ್ಷ್ಯಯಿತ್ವಾ ಪರಸ್ಪರಂ
ಪರಲೋಕಾವಿರೋಧೇನ ಯೋ ಜೀವತಿ ಸ ಜೀವತಿ ॥
ಅಪವಾದೋ ಭವೇದ್ಯೇನ ಯೇನ ಚಾಪ್ರತ್ಯಯೋ ಭವೇತ್
ನರಕೋ ಗಮ್ಯತೇ ಯೇನ ತತ್ಕರ್ಮ ನ ಸಮಾಚರೇತ್ ॥

ಇಂತು ಸಂಕ್ಷೇಪದಿಂದಂ ಭಟಾರರ್ ಧರ್ಮಮಂ ಪೇೞೆ ಕೇಳ್ದಿರ್ವರ್ಗ್ಗಂ ವೈರಾಗ್ಯಮಾಗಿ ತಾಯುಂ ತಂದೆಯುಂ ಸ್ವಜನಬಂಧುವರ್ಗ್ಗಮುಮಂ ಬಿಡಿಸಿ ನಿಶ್ಚಲಂ ಗೆಯ್ದು ಬಾಹ್ಯಾಭ್ಯಂತರ ಪರಿಗ್ರಹಮಂ ತೊಱೆದು ಗುಣೋತ್ತಮ ಭಟಾರರ ಪಕ್ಕದೆ ತಪಂಬಟ್ಟು ಪನ್ನೆರಡು ವರುಷಂಬರೆಗಂ ಗುರುಗಳೊಡನಿರ್ದ್ದು ಪ್ರಥಮಾನುಯೋಗ ಚರಣಾನುಯೋಗ ಕರಣಾನುಯೋಗ ದ್ರವ್ಯಾನುಯೋಗಗಂಗಳಂ ಕಲ್ತು ಶಾಸ್ತ್ರಪಾರಗರಾಗಿ ಭಟಾರರಂ ಬೆಸಗೊಂಡವರನುಮತದಿಂದಿರ್ವ್ವರುಂ ಬೇಱೆವೇಱೆ ವಿಹರಿಸಲ್ ತಗಳ್ದು ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತುಂ ಚಂಪಾನಗರಕ್ಕೆ ಪೋಗಿ ತಾಮರೆಗೊಳದ ತಡಿಯ ಮನೆಯೊಳಿರ್ವ್ವರುಂ ಮಾಸೋಪವಾಸಂಗೆಯ್ದು ಪಾರಣೆಯ ದಿವಸದಂದು ಚಂಪಾನಗರದ ಶ್ರಾವಕರ್ಕಳೆಲ್ಲಂ ನಮ್ಮ ನೋಂತುದನಱಿವರದು ಕಾರಣದಿಂ ನಮಗೆ ಪಾರಣೆಯಂ ಮಾಳ್ಪಾಗಳಯಥಾ ಕರ್ಮದ ದೋಷಂ ಸಾರ್ತರ್ಕ್ಕುಮದಱಿಂ ನಾಮಿಲ್ಲಿ ಚರಿಗೆ ವುಗದೆ ಗಂಗೆಯ ತಡಿಯೊರ್ದ ತುಱುಪಟ್ಟಿಗೆ ಪೋಪಮೆಂದಿರ್ವ್ವರುಂ ಪೋಪರ್

ಅನ್ನೆಗಮಾ ತುಱು ಪಟ್ಟಿಯುಮಲ್ಲಿಂದೆರ್ದ್ದು ನಾಡೆ ಗೆಂಟು ಪೋದತ್ತು ಪೋದೊಡೆ ಧರ್ಮಕೀರ್ತಿ ಭಟಾರರುಂ ಪೆಱತೊಂದು ತುಱುಪಟ್ಟಿಗೆ ಪೋದರ್ ಧರ್ಮಘೋಷ ಭಟಾರರುಂ ಪೋಗಲಾಱದೆ ಗಂಗೆಯ ತಡಿಯ ಮರದ ಕೆೞಗೆ ಪಸಿವುಂ ನೀರಟ್ಕೆಯಿಂದಂ ಸೇದೆಗೆಟ್ಟು ಬಸವೞಿದಿರ್ದ್ದೋರಂ ಗಂಗಾದೇವತೆ ಕಂಡು ಅನುಕಂಪೆಯುಂ ಭಕ್ತಿಯುಂ ಕಾರಣಮಾಗಿ

ಸರ್ವಾಭರಣ ಭೂಷಿತೆಯಾಗಿ ದಿವ್ಯಮಪ್ಪ ಶ್ವೇತವಸ್ತ್ರಂಗಳನುಟ್ಟು ಸುವರ್ಣಮಯಮಪ್ಪ ಪಿರಿಯ ಕರಗಮಂ ತೆಕ್ಕನೆ ತೀವಿ ತಣ್ಣಿದವುಂ ಸುಗಂಧಮುಮಪ್ಪ ನೀರ್ಗ್ಗಳಂ ತಂದು ಧರ್ಮಘೋಷ ಭಟಾರರನಿತೆಂದಳ್ ಭಟಾರಾ ಪ್ರಾಸುಕಮಪ್ಪ ನೀರಂ ಪೊಳ್ತಱೊಳ್ ಬಂದುದಂ ಕುಡಿದು ನಿಮ್ಮ ಸೇದೆಯನಾರಿಸಿಂ ನಿಮಗರಮನೆಗೆ ಪೋಗಿ ಕೂೞುಮಂ ತಂದಪೆನನ್ನೆಗಂ ನೀರಂ ಕುಡಿದು ತೃಷೆಯಂ ಪಿಂಗಿಸುವುದೆಂದೊಡೆ ಭಟಾರರ್ ಆವೊಲ್ಲೆಮಬ್ಬಾ ಕುಡಿಯಲ್ಕಾಗದೆಂದೊಡೆ ಗಂಗಾದೇವತೆ ಪೂರ್ವವಿದೇಹಕ್ಕೆ ಪೋಗಿ ಸೀಮಂಧರ ತೀರ್ಥಂಕರ ಪರಮ ದೇವರಂ ಕಂಡು ಬಂದಿಸಿ ಇಂತೆಂದು ಬೆಸಗೊಂಡಳ್ ಭಟಾರಾ ಒರ್ವರ್ ಋಷಿಯರ್ ನೀರಟ್ಕೆಯಿಂದಂ ಕರಂ ಸೇದೆಗೆಟ್ಟು ಬಸಮೞಿದಿರ್ದೋರಂ ಕಂಡು ಪಿರಿದೊಂದು ಪೊನ್ನ ಕರಗಮಂ ತೆಕ್ಕನೆ ತೀವಿಯಾದಮಾನುಂ ತಣ್ಣಿದುವುಂ ಕಮ್ಮಿದುವುಮಪ್ಪ ನೀರ್ಗ್ಗಳಂ ಪೊೞ್ತೞೊಳ್ಕೊಂಡು ಪೋಗಿ ಕುಡಿಯಲೆೞೆಯೆ ಏಕೊಲ್ಲದಿರ್ದ್ದರೆಂದೊಡೆ ಭಟಾರರೆಂದರ್ ಪ್ರಾಸುಕಮಾದೊಡಂ ಪೊೞ್ತೞೊಳ್ ತಂದೊಡಂ ದೇವರ್ಕ್ಕಳ ದೇವಿಯರ್ಕ್ಕಳ ಕೈಯೊಳ್ ರಿಷಿಯರ್ಕ್ಕಳ್ಗೆ ಉಣಲುಂ ಕುಡಿಯಲುಂ ತಗದು ನಿಮಗೆ ಸಮ್ಯಕ್ತ್ವಮುಂ ಪೂಜೆಯುಂ ರಿಷಿಯರ್ಕ್ಕಳ್ಗೆ ಪ್ರಾತಿಹಾರ್ಯಮಂ ಗೆಯ್ವುದುಂ ನಿಮ್ಮಭಿಪ್ರಾಯಮಿನಿತೆಯೆಂದು ಪೇೞ್ದೊಡೆ ತೀರ್ಥಂಕರ ಪರಮ ದೇವರ ಮಾತಂ ಕೇಳ್ದು ಬೇಗಂ ಗಂಗಾದೇವತೆ ಧರ್ಮಘೋಷ ಭಟಾರರ್ಗೆ ತಣ್ಣಿತಪ್ಪ ಗಾಳಿಯುಂ ಸುಗಂಧ ಜಳವರ್ಷಮುಮಂ ಮಾಡಿದೊಡಾಪ್ಯಾಯನಮಾಗಿ ಶುಕ್ಲಧ್ಯಾನಮಂ ಧ್ಯಾನಿಸಿ ಘಾತಿಕರ್ಮಂಗಳಂ ಕಿಡಿಸಿ ಕೇವಳಜ್ಞಾನಿಯಾದೊಡೆ ಚತುರ್ವಿಧಮಪ್ಪ ದೇವನಿಕಾಯಂ ಬಂದರ್ಚ್ಚಿಸಿ ಪೂಜಿಸಿ ಬಂದಿಸಿ ಪೋದೊಡವರುಂ ಒೞಿಕ್ಕಘಾತಿ ಕರ್ಮಂಗಳಂ ಕಿಡಿಸಿ ಮೋಕ್ಷಕ್ಕೆ ವೋದರ್

ಮತ್ತವರಿಂ ಕಿಱಿಯರ್ ಧರ್ಮಕೀರ್ತಿ ಭಟಾರರ್ ಪೞಿತೊಂದು ತುಱುಪಟ್ಟಿಗೆ ಪೋದೊಡಾ ತುಱುಪಟ್ಟಿಯುಮಲ್ಲಿಂದಂ ಪೆರತೊಂದು ದೆಸೆಗೆ ನಾಡೆ ಗೆಂಟುಪೋದೊಡೆ ನಿರಾಶೆಯಾಗಿ ಪಸಿವುಂ ನೀರಟ್ಕೆಯಿಂದಂ ಬಾಧಿಸೆಪಟ್ಟೋರಾಗಿ ಸೇದೆಗೆಟ್ಟು ಬಸವೞಿದು ಶುಭಪರಿಣಾಮಕ್ಕೆ ಸಂದೊರಂ ಮುನ್ನಿನ ದೇವತೆ ಕಂಡೞಿದು ಪ್ರತಿಬೋಧಿಸಲ್ ತಗುಳ್ದವರಂ ತಿಳಿಪಲಾಱದೆ ಮತ್ತೆ ಪೂರ್ವ ವಿದೇಹಕ್ಕೆ ಪೋಗಿ ಸೀಮಂಧರ ತೀರ್ಥಂಕರ ಪರಮಸ್ವಾಮಿಯಂ ಕಂಡು ಪೊಡೆವಟ್ಟವರಸವಾವಸ್ಥೆಯೆಲ್ಲಮಂ ಭಟಾರರ್ಗ್ಗೆ ಪೇೞ್ದು ಸಮಾಧಿ ಸಂಧಾನೋಪಾಯಮಂ ಬೆಸಗೊಂಡೊಡೆ ಸರ್ವಜ್ಞರಿಂತೆಂದು ಪೇೞ್ದರ್ ಆಸನ್ನ ಭವ್ಯರ್ ಮೂಱನೆಯ ಭವದೊಳ್ ಮೋಕ್ಷಕ್ಕೆ ಪೋಪರೆಂದು ಸೀಮಂಧರ ತೀರ್ಥಂಕರ ಪರಮದೇವರು ಪೇಳ್ದರೆಂಬುದಂ ಕೇಳ್ದಾಗಳೆಯಶುಭ ಪರಿಣಾಮಮಂ ತೊಱೆದು ನೀಗಿ ಶುದ್ಧ ಪರಿಣಾಮದೊಳ್ ಕೂಡಿ ಸಮಾಧಿಯನೊಡೆಯರಪ್ಪರ್ ನೀಂ ಬೇಗಂ ಪೋಗಿ ಪ್ರತಿಬೋಧಿಸೆಂದು ಪೇೞ್ದೊಡೆ ಗಂಗಾದೇವತೆಯಂತೆ ಗೆಯ್ವೆನೆಂದು ಪೊಡೆವಟ್ಟು ಪೋಗಿ ರಿಷಿಯರನೆಯ್ದಿ ಇಂತೆಂದಳ್ ಭಟಾರಾ ನೀಮೀ ಭವದಿಂ ತೊಟ್ಟು ಮೂಱನೆಯ ಭವದೊಳ್ ಕರ್ಮಕ್ಷಯಂ ಗೆಯ್ದು

ಕೇವಳಜ್ಞಾನಿಯಾಗಿ ಮೋಕ್ಷಕ್ಕೆ ಪೋಪಿರೆಂದು ಸೀಮಂಧರ ತೀರ್ಥಂಕರ ಪರಮ ದೇವರ್ ಪೇಟ್ದರೆಂದೊಡಾ ಮಾತಂ ಧರ್ಮಕೀರ್ತಿ ರಿಷಿಯರ್ ಕೇಳ್ದುನ್ಮಾರ್ಗದಿಂದಂ ಮನುಮುಡುಗಿ ಸನ್ಮಾರ್ಗದೊಳ್ ನಿಱಿಸಿ

ಗಾಹೆ ॥ ಹಾ ದುಟ್ಠು ಕಯಂ ಹಾ ದುಟ್ಠು ಕಾರಿಯಂ ಹಾ ದುಟ್ಠು ಅಣುಮೋದಿಯಂ
ಜೀವೋ ಅಂತೋ ಅಂತೋ ದಝ್ಝು ಇ ಪಚ್ಚಾತ್ತಾವೇಣ ವೇಪತ್ತಾ ॥

ಎಂದು ಪೊಲ್ಲದುದಂ ಬಗೆದೆನೆಂದು ತನ್ನಂ ತಾಂ ಪೞಿಯುತ್ತುಂ ಸೀಮಂಧರ ಸ್ವಾಮಿಗಳ ನಾಮಗ್ರಹಣಂಗೊಂಡಾಗಳ್ ಅಶುಭಪರಿಣಾಮಂ ಪಿಂಗಿ ಶುಭ ಶುದ್ಧ ಪರಿಣಾಮದೊಳ್ಕೂಡಿ ಮಿಕ್ಕ ರತ್ನತ್ರಯಂಗಳಂ ಸಾಧಿಸಿ ಪರಿನಾಱನೆಯ ಕಲ್ಪದೊಳ್ ಉತ್ಕೃಷ್ಟಮಪ್ಪಿರ್ಪ್ಪತ್ತೆರಡು ಸಾಗರೋಪಮಾಯುಷ್ಯಮನೊಡೆಯನಚ್ಯುತೇಂದ್ರನಾಗಿ ಪುಟ್ಟಿದೊಂ

ಮತ್ತಂ ಪೆಱರುಮಾರಾಧಕರಪ್ಪವರ್ಗ್ಗಳ್ ಧರ್ಮಘೋಷ ಭಟಾರರಂ ಮನದೊಳ್ ಬಗೆದು ಪಸಿವುಂ ನೀರಟ್ಕೆ ಮೊದಲಾಗೊಡೆಯ ಪರೀಷಹಂಗಳಂ ಸೈರಿಸಿ ಮಿಕ್ಕ ದರ್ಶನ ಜ್ಞಾನ ಚರಿತ್ರಂಗಳನಾರಾಧಿಸಿ ಸ್ವರ್ಗಾಪವರ್ಗ್ಗ ಸುಖಂಗಳನೆಯ್ದುಗೆ

■

೯. ಸಿರಿದಿಣ್ಣನೆಂಬ ರಿಷಿಯ ಕಥೆ

ಸಿರಿದಿಣ್ಣನೆಂಬ ರಿಷಿಯ ಕಥೆಯಂ ಪೇಳ್ವೆಂ

ಗಾಹೆ ॥ ಸೀದೇಣ ಪುವ್ವವೇರಿಯ ದೇವೇಣ ವಿಗುಬ್ಬಿದೇಣ ಘೋರೇಣ
ಸಂಸಿತ್ತೋ ಸಿರಿದಿಣ್ಣೋ ಪಡಿವಣ್ಣೋ ಉತ್ತಮಂ ಅಟ್ಠಂ

[ಸೀದೇಣ = ಆಯ್ಕಿಲಿಂದಂ। ಪುವ್ವವೇರಿಯ ದೇವೇಣ =ಮುನ್ನಿನ ಭವದ ಪಗೆವನಪ್ಪ ದೇವನಿಂದಂ। ವಿಗುಬ್ಬಿದೇಣ = ವಿಗುರ್ವಿಸಿಪಟ್ಟುದಱಿಂದಂ।ಘೋರೇಣ -ಆದಮಾನುಂ ಕಡಿದಪ್ಪುದಱಿಂದಂ। ಸಂಸಿತ್ತೋ =ತಳಿಯೆಪಟ್ಟೊನಾಗಿ। ಸಿರಿದಿಣ್ಣೋ =ಸಿರಿದಿಣ್ಣನೆಂಬ ಭಟಾರಕಂ । ಪಡಿವಣ್ಣೋ =ಪೊರ್ದಿದೊಂ । ಉತ್ತಮಂ ಅಟ್ಠಂ =ಮಿಕ್ಕದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ

ಅದೆಂತೆಂದೊಡೆ ಈ ಜಂಬೂದ್ವೀಪದ ಭರತಕ್ಷೇತ್ರದೊಳ್

ಅಂಗೆಯೆಂಬುದು ನಾಡು ಅಲ್ಲಿ ಚಂಪಾನಗರಮೆಂಬುದು ಪೊಟಲ್ ಅದನಾಳ್ವೊಂ ಅರಸನಧಿಗಮ ಸಮ್ಯಗ್ ದೃಷ್ಟಿ ಶ್ರಾವಕಂ ಸಿಂಹರಥನೆಂಬರಸಂ ಮತ್ತಿತ್ತ ಮಗಧೆ ಎಂಬ ನಾಡಲ್ಲಿ ಸಾಕೇತಪುರಮದನಾಳ್ವೊಂ ಶ್ರಾವಕಂ ಸುಮಂತನೆಂಬೊನರಸಂ ಮತ್ತಿತ್ತ ಮಂಗಳಾವತಿಯೆಂಬುದು ನಾಡಲ್ಲಿ ಇಳಾಪಟ್ಟಣಮೆಂಬುದು ಪೊಟಲದ ನಾಳ್ವೊಂ ಅಧಿಗಮ ಸಮ್ಯಗ್ ದೃಷ್ಟಿ ಶ್ರಾವಕಂ ಜಿತಶತ್ರುವೆಂಬೊನರಸನಾತನರಸಿ ಇಳಾದೇವಿಯೆಂಬೊಳಾ ಅರಸನ ದಾದಿ ವಿನಯಮತಿಯೆಂಬೊಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನುಭವಿಸುತ್ತಿರ್ದ್ದು ಕಾಲಂ ಸಲೆ ಫಾಲ್ಗುಣ ನಂದೀಶ್ವರಂ ಬಂದೊಡೆ ಮೂವರುಂ ಮಂಡಳಿಕರುಂ ತಂತಮ್ಮ ಪೊಟಲ್ಗಳೊಳೆಂಟು ದಿವಸಮರ್ಹದ್ಭಟ್ಟಾರಕರ್ಗ್ಗೆ ಜಿನಮಹಾಮಹಿಮೆಯಂ ಮಾಡಲ್ ತೊಡಗಿದರಿತ್ತ ಜಿತಶತ್ರುವುಂ ತನ್ನ ಪೊಟಲೊಳೆಂಟು ದಿವಸಂ ಜಿನಮಹಾಮಹಿಮೆಯಂ ಮಾಡಲ್ ತೊಡಗಿದನಾತನ ದಾದಿ ವಿನಯಮತಿಯೆಂಬೊಳ್ ಗುಜ್ಜಿ ವಿರಳದಂತೆಯಾದಮಾನುಂ ವಿರೂಪೆ ಪೇಸೆ ಪಡುವಳ್ ನೋಡಿದ ಜನಕ್ಕೆ ಭಯಮಂ ಪಡವೊಳ್ ನಾಣ್ಚೆಪಡುವಳಂತಪ್ಪಾಕೆ ಅರಸನೊಡನೆ ಜಿನಮಹಿಮೆಯ ನೋಡಲ್ ಪೋಪಾಗಳರಸನೆಂದನ್ ಅಬ್ಬಾ ನೀಮುಂ ಮಹಿಮೆಗೆ ಬರಲ್ವೇಡ ನಿಮ್ಮಂ ಕಂಡು ಮಹಿಮೆಗೆ ಬಂದ ನೆರವಿಯಂಜುಗುಂ

ಪೇಸುಗುಮಮಂಗಳಕಮೆಂಗುಮದಱಿಂ ನೀವು ಮನೆಯೊಳಿರಿಮೆಂದಿರಿಸಿ ತಾನುಂ ಸಹಸ್ರ ಕೂಟಮೆಂಬ ಚೈತ್ಯಾಲಯಕ್ಕೆ ಮಹಾಮಹಿಮೆಯ ಮಾಡಲ್ಪೋದನ್

ಇತ್ತ ದಾದಿಯುಂ ಮಗನ ಮಾಡುವ ಮಹಾಮಹಿಮೆಯಂ ನೋಡಲ್ ಪೆತ್ತನಿ[illegible]ದುದಬ್ಬೆಗಂ ಬ[illegible] ತನ್ನಂ ತಾ[illegible] ಪೞಿದು ನಂದೀಶ್ವರದೆಂಟು ದಿವಸಮುಮಷ್ಟೋಪವಾಸಂ ಗಯ್ದು ಮನೆಯೊಳೆಂಟು ದಿವಸಮುಂ ಸಹಣಮು (?) ಮರ್ಚನೆಯುಮಂ ಮಾಡಿ ದೇವರಂ ಬಂದಿಸುತ್ತಂ ಪೂಜಿಸುತ್ತ ಮಿರ್ದ್ದಳ್ ಇತ್ತರಸನುಮೆಂಟು ದಿವಸಂ ಮಹಾಮಹಿಮೆಯುಮಭಿಷೇಕಮುಮಂ ಮಾಡಿ ಸಮೆಯಿಸಿದ ಬೞಿಕ್ಕೆ ದಾದಿಗೆ ಬೞಿಯಟ್ಟಿ ಬರಿಸಿ ಇಂತೆಂದನಬ್ಬಾ ನೀಮಿಂತೇಕೆ ಕರಂ ಬಡಪಟ್ಟಿರ್ದ್ದಿರೆಂದೊಡೆ ದಾದಿ ಇಂತೆಂದಳ್ ಮಗನೇ ಎಂಟು ದಿವಸಮುಪವಾಸಂ ಗೆಯ್ದು ಮನೆಯೊಳ್ ದೇವರ್ಗ್ಗೆ ಅಭಿಷೇಕಮುಂ ಪೂಜೆಯುಮಂ ಮಾಡಿಸಿ ಬಂದಿಸುತ್ತಿರ್ದ್ದೆನೆಂದೊಡದಂ ಕೇಳ್ದಾದಮಾನುಮರಸನೊಸೆದು ಬಡವಾದುದುಮಂ ಕಂಡು ಕರುಣಿಸಿ ಅಬ್ಬಾ ನಿಮಗೊಸೆದೆಂ ಬರಮಂ ಬೇಡಿಕೊಳ್ಳಿ ಮೆಂದೊಡಾಕೆಯಿಂತೆಂದಳ್ ಮಗನೆ ನೀನೆಮಗೊಸೆದೆಯಪ್ಪೊಡೆನಗೆಂದು ಮತ್ತಮೆಂಟು ದಿವಸಂ ದೇವರ್ಗ್ಗಂ ಮಹಾಮಹಿಮೆಯಂ ಮಾಡೆಂದು ಪೇೞ್ದೊಡಂತೆಗೆಯ್ವೆನೆಂದರಸಂ ದಾದಿ ಕಾರಣಮಾಗಿ ಮತ್ತಮೆಂಟು ದಿವಸಂ ಮಹಾಮಹಿಮೆಯಂ ಮಾಡಲ್ ತೊಡಂಗಿದೊಡೆನ್ನ ಮಹಾಮಹಿಮೆಯೊಳೆಂತುಣ್ಬೆನೆಂದು ಪಾರಿಸದೆ ಮತ್ತಮಷ್ಟೋಪವಾಸಂಗೆಯ್ದು ಪಾರಣೆಯ ದಿವಸದಂದಾಕೆಯ ಶ್ರಮಮಂ ಸೇದೆಯುಮಂ ಕಂಡು ಹಿಮವಂತ ಪರ್ವತದ ಪದ್ಮೆಯೆಂಬ ಕೊಳದೊಳ್ ವಸಿಯಿಸುವ ಶ್ರೀಯಾದೇವತೆಯುಂ ತನ್ನ ಪರಿವಾರ ಸಹಿತಂ ವಿಮಾಂಗಳನೇಱಿ ಮಹಾ ವಿಭೂತಿಯಿಂದಂ ಬಂದು ಸುವರ್ಣ ಪೀಠದೊಳ್ ದಾದಿಯನಿರಿಸಿ ಸುಗಂಧೋದಕಂಗಳಿಂದಂ ತೀವಿದ ಸುವರ್ಣ ಕಲಶಂಗಳಿಂದಂ ಅಭಿಷೇಕಂ ಗೆಯ್ದು ನಮೇರು ಮಂದಾರ ಸಂತಾನಕ ಪಾರಿಯಾತ್ರಮೆಂಬ ಪೂಗಳಂ ಸುರಿದು ಕಮ್ಮಿತಪ್ಪ ತಂಬೆಲರ್ ವೀಸೆ ದೇವದುಂದುಭಿಗಳಂ ಬಾಜಿಸಿ ಪೂಜಿಸಿ ಶ್ರೀಯಾದೇವತೆ ತನ್ನಾವಾಸಕ್ಕೆ ಪೋದಳ್

ಇತ್ತ ದಾದಿಯುಂ ಶ್ರೀಯಾದೇವತೆಯ ವಿಭೂತಿಯಂ ಕಂಡು ನಿದಾನಂಗೆಯ್ದು ಕೆಲವು ದಿವಸದಿಂ ಕಾಲಂ ಗೆಯ್ದು ಈ ಜಂಬೂದ್ವೀಪದ ಹಿಮವಂತ ಪರ್ವತದ ಪದ್ಮೆಯೆಂಬ ಕೊಳದೊಳ್ ಶ್ರೀಯಾದೇವತೆಯಾಗಿ ಪುಟ್ಟಿ ಇಳಾಪಟ್ಟಣಕ್ಕೆ ಬಂದಾ ಪೊೞಲ ಜನಂಗಳ್ಗೆಲ್ಲಮಿರುಳ್ ಕನಸಿನೊಳಾಂ ಶ್ರೀಯಾದೇವತೆಯೆಂ ನಿಮ್ಮ ಪೊೞಲ್ಗೆ ವಂದೆನೆನಗೆ ಶ್ರೀವಿಹಾರಮಂ ಮಾಡಿ ಎನ್ನ ಪ್ರತಿಮೆಯನಿಟ್ಟು ಪೂಜಿಸುತ್ತಮೋಲಗಿಸುತ್ತುಮಿರಿಮಾನುಂ ನಿಮಗೆ ಬೇಡಿದ ಬರವನೀವೆನೆಂದು ಕನಸಿನೊಳ್ ತೋರಿದೊಡೆ ಪೊೞಲ ಜನಮೆಲ್ಲಂ ನೆರೆದು ಶ್ರೀ ವಿಹಾರಮಂ ಮಾಡಿ ಶ್ರೀಯಾದೇವತೆಯ ಪ್ರತಿಮೆಯಂ ಸ್ಥಾಪಿಸಿ ಮಹಿಮೆಯಂ ಮಾಡುತ್ತುಂ ಪೂಜಿಸುತ್ತುಮೋಲಗಿಸುತ್ತುಮಿಪ್ಪುದಂ ಕಂಡಿಳಾಮಹಾದೇವಿ ಅಪುತ್ರಿಕೆ ಮಕ್ಕಳಂ ಬೇಡಿ ಪನ್ನೆರಡು ವರ್ಷಂ ಬರೆಗಂ ನಿಚ್ಚಲುಂ ಶ್ರೀವಿಹಾರಕ್ಕೆ ಪೋಗಿ ಶ್ರೀಯಾದೇವತೆಯನರ್ಚ್ಚಿಸುತ್ತುಂ

ಪೂಜಿಸುತ್ತುಂ ಮಹಾಮಹಿಮೆಯುಂ ಮಾಡುತ್ತುಂ ಆಡುತ್ತುಂ ಪಾಡುತ್ತು ಮೋಲಗಿಸುತ್ತುಮಿರೆಯದಂ ಕಂಡಱಿದು ಶ್ರೀಯಾದೇವತೆ ಪೂರ್ವ ವಿದೇಹಕ್ಕೆ ಪೋಗಿ ಸ್ವಯಂ ಪ್ರಭರೆಂಬ ತೀರ್ಥಂಕರ ಪರಮ ದೇವರಂ ಕಂಡೆಱಗಿ ಪೊಡೆವಟ್ಟಿಂತೆಂದು ಬೆಸಗೊಂಡಳ್

ಭಟಾರಾ ಎನ್ನ ಪೊಟಿಲೊಳಿರ್ಪಿಳಾದೇವಿಗೆ ಮಕ್ಕಳೇನಕ್ಕುಮೋ ಎಂದು ಬೆಸಗೊಂಡೊಡೆ ಭಟಾರರೆಂದರ್ -ಸ್ವರ್ಗ್ಗದಿಂಬಟ್ಟಿ ಬಂದಿಲ್ಲಿ ಒರ್ವ ದೇವಂ ಬಂದು ಇಳಾ ಮಹಾದೇವಿಗೆ ಮಗನಾಗಿ ಪುಟ್ಟುಗುಮೆಂದೊಡದಂ ಕೇಳ್ದು ಭಟಾರರ್ಗ್ಗೆರಗಿ ಪೊಡೆವಟ್ಟಿಳಾ ಪಟ್ಟಣಕ್ಕೆ ಪೋಗಿ ಇರುಳಾ ಮಹಾದೇವಿಗೆ ಕನಸಿನೊಳಿಂತೆಂದು ಪೇಟ್ದಳ್

ಇಳಾಮಹಾದೇವಿ ನಿನಗೆನ್ನ ಪ್ರಸಾದದೆ ಸೌಧರ್ಮಕಲ್ಪದೊಳ್ ಮೇಘಮಾಲನೆಂಬ ವಿಮಾನದಿ ಬಟ್ಟಿದ ವರ್ಧಮಾನನೆಂಬ ದೇವಂ ಬಂದು ನಿನಗೆ ಮಗನಾಗಿ ಪುಟ್ಟುಗುಮೆಂದು ಶ್ರೀಯಾದೇವತೆ ಪೇಟ್ದೊಡೆ ಇಳಾಮಹಾದೇವಿಯಾದಮಾಸುಂ ಸಂತೋಸಂ ಬಟ್ಟಿರ್ದ್ದು ಕೆಲವು ದಿವಸದಿಂ ಗರ್ಭಮಾಗಿ ನವಮಾಸಂ ನೆಱೆದು ಮಗನಂ ಪೆತ್ತೊಡೆ ಶ್ರೀಯಾದೇವತೆ ಮಗನಂ ಕೊಟ್ಟಳೆಂದು ಕೂಸಿಂಗೆ ತಾಯುಂ ತಂದೆಯುಂ ನಂಟರುಮೆಲ್ಲಂ ನೆರೆದು ಸಿರಿದಿಣ್ಣನೆಂದು ಪೆಸರನಿಟ್ಟೊಡಾತನುಂ ಶುಕ್ಲಪಕ್ಷದ ಚಂದ್ರನಂತೆ ಕ್ರಮಕ್ರಮದಿಂ ಬಳೆದು ನವಯವ್ವನನುಂ ಸರ್ವಕಳಾಕುಶಳನುಮಾಗುತ್ತಿರ್ಪನ್ನೆಗಂ

ಇತ್ತ ಸಾಕೇತಪುರಾಧಿಪತಿಯಪ್ಪ ಸುಮಂತನೆಂಬರಸನ ಮಗಳ್ ಸುಮತಿಯೆಂಬೊಳಾಕೆಯ ಸ್ವಯಂವರಕ್ಕರಸು ಮಕ್ಕಳೆಲ್ಲ ನೆರಿದಿರ್ದ್ದರಲ್ಲಿಗೆ ಸಿರಿದಿಣ್ಣಂಗಂ ಬಱಿಯನಟ್ಟಿ ಬರಿಸಿದೊಡೆ ಸ್ವಯಂಬರದೊಳ್ ಸುಮತಿಯೆಲ್ಲರುಮಂ ನೋಡಿ ಯಾರುಮಂ ಮೆಚ್ಚದೆ ಸಿರಿದಿಣ್ಣಂಗೆ ಮಾಲೆ ಸೂಡೆ ಮದುವೆಯಾಗಿ ಕೆಲವು ದಿವಸಮಲ್ಲಿರ್ದ್ದು ಮಾವನಂ ಬೆಸಗೊಂಡಿಳಾಪಟ್ಟಣಕ್ಕೆ ಪೋಪೆಮೆಂದೊಡೆ ಸುಮಂತಂ ಮಗಳ್ಗೆ ಬಱುವಱಿಗೊಟ್ಟು ಮಗಳೊಡನೆ ವಾಚಾಳನಪ್ಪ ಗಿಳಿಯನಟ್ಟಿದೊಡವರ್ಗ್ಗಳುಂ ಕತಿಪಯ ದಿವಸಂಗಳಿಂದಿಳಾ ಪಟ್ಟಣಕ್ಕೆ ಪೋಗಿ ಸುಖದಿನಿರೆ

ಮತ್ತೊಂದು ದಿವಸಂ ಗಿಳಿಯಂ ಸಾಕ್ಷಿಮಾಡಿ ಇರ್ವ್ವರುಂ ಚದುರಂಗಮಾಡುತ್ತಿರೆ ಯರಸಿಯರಸನಂ ಗೆಲ್ದೊಡೆ ಗೆಳಿ ನೆಲದೊಳೆರಡು ಬರೆಯಂ ಬರೆಗುಮರಸನರಸಿಯಂ ಗೊಲ್ದೊಡೊಂದು ಬರೆಯಂ ಬರೆಗುಮಿಂತು ಪಿರಿದುಂ ಬೇಗಮಾಡೆಯರಸಿಗೆಲ್ದೊಡೆರಡು ಬರೆಯಂ ತೆಗೆದುದನರಸಂ ಕಂಡು ಮುಳಿದದಱ ಗೋಣಂ ಮುಱಿದು ಕೊಂದೊಡಾ ಗಿಳಿಯುಂ ಸತ್ತಾ ಪೊಟಿಲ ಬಹಿರುದ್ಯಾನವನದೊಳ್ ವೆಂತರ ದೇವನಾಗಿ ಪುಟ್ಟಿದನಿಂತಿರ್ವ್ವರುಂ ಪಲಕಾಲಮಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಿರ್ಪ್ಪ ರನ್ನೆಗಂ ಮತ್ತೊಂದು ದಿವಸಂ ಸಪ್ತತಳ ಪ್ರಾಸಾದದ ಮೇಗಿರ್ವ್ವರು ದಿಶಾವಲೋಕನಂಗೆಯ್ಯುತ್ತಿರ್ಪ್ಪನ್ನೆಗಂ ಸಹಸ್ರ ಕೂಟಾಕಾರಮಪ್ಪುದೊಂದು ಮುಗಿಲುಂ ಕಂಡಿಂತುಟೊಂದು ಚೈತ್ಯಾಲಯಮಂ ಮಾಡಿಸುವೆನೆಂದು ಪಲಗೆಯೊಳ್ ರೇಖೆಗೊಂಡು ಮತ್ತೆ ನೋಟ್ಪನ್ನೆಗಂ ಕರಗಿದುದಂ ಕಂಡದುವೆ ನಿರ್ವ್ವೇಗಕ್ಕೆ

ಕಾರಣಮಾಗಿ ತಾಯುಂ ತಂದೆಯುಂ ನಂಟರುಮಂ ಬಿಡಿಸಿ ನಿಶ್ಶಲ್ಯಂ ಗೆಯ್ದು ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ವರಧರ್ಮರೆಂಬ ಭಟಾರರ ಪಕ್ಕದೆ ತಪಂ ಬಟ್ಟು ಪನ್ನೆರಡು ವರ್ಷಂಬರೆಗಂ ಗುರುಗಳನಗಲದಿರ್ದ್ದು ದ್ವಾದಶಾಂಗ ಚತುರ್ದಶ ಪೂರ್ವಮಪ್ಪಾಗಮಮುಮೆಲ್ಲಮಂ ಕಲ್ತು ಬಳಿಕ್ಕೆ ಗುರುಗಳಂ ಬೆಸಗೊಂಡವರನುಮತದಿಂದೇಕ ವಿಹಾರಿಯಾಗಿ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಮಾಘಮಾಸದಂದಿಳಾಪಟ್ಟಣಕ್ಕೆ ಬಂದಾ ಪೊಱಲ ಬಹಿರುದ್ಯಾನವನದೊಳಿರ್ದ್ದು ರಾತ್ರಿ ಪ್ರತಿಮಾ ಯೋಗದೊಳಿರ್ದ್ದರನ್ನೆಗಂ ಮುನ್ನವರ ಕೈಯೊಳ್ ಸತ್ತ ಗಿಳಿ ವ್ಯಂತರ ದೇವನಾಗಿಯಲ್ಲಿ ಪುಟ್ಟಿದ್ದುದಂತೇನುಂ ಕಾರಣಮಿಲ್ಲದೆನ್ನಂ ಕೊಂದನೆಂದು ಮುಳಿದಾದಮಾನುಂ ಘೋರಮಪ್ಪ ವಾತಶೀತಮಂ ವಿಗುರ್ಬ್ಬಿಸಿ ನೀರ್ಗಳಂ ಮೇಗೆ ಸುರಿದು ಬೀಸುತ್ತಮಿಂತು ನಾಲ್ಕು ಜಾವಮುಂ ಘೋರಾಕಾರಮಾಗೆಯುಪಸರ್ಗ್ಗಮಂ ಮಾಡೆ ಭಟಾರರುಂ ದೇವೋಪಸರ್ಗ್ಗಮೆಂಬುದನಱಿದು

ಗಾಹೆ ॥ ಖಮ್ಮಾಮಿ ಸವ್ವಜೀವಾಣಂ ಸವ್ವೇ ಜೀವಾ ಖಮಂತು ಮೇ
ಮೆತ್ತೀ ಮೇ ಸವ್ವಭೂದೇಸು ವೇರಂ ಮಜ್ಝಂ ಣ ಕೇಣಚಿ ॥

ಶ್ಲೋಕ ॥ ಅಚ್ಛೇದ್ಯೋಽನಂತಸೌಖ್ಯೋಽಹಂ ವೇತ್ತಾಽಪೂರ್ವೋನಿರಂಜನಃ
ಸರ್ವದುಃಖಾಕರಂ ದೇಹಂ ತ್ಯಜಾಮ್ಯೇತತ್ ಪರಿಸ್ಫುಟಂ ॥

ಎಂದಿಂತು ಸಮತ್ವೀಭಾವಮಂ ಭಾವಿಸಿ ಶುಕ್ಲಧ್ಯಾನಮಂ ಧ್ಯಾನಿಸಿ ಎಂಟು ಕರ್ಮಂಗಳಂ ಕಿಡಿಸಿ ಮೋಕ್ಷಕ್ಕೆವೋದರ್

ಮತ್ತಂ ಪೆಱರುಂ ರತ್ನತ್ರಯಂಗಳನಾರಾಧಿಸುವ ಭಬ್ಯರ್ಕ್ಕಳುಂ ಸಿರಿದಿಣ್ಣ ಭಟಾರರಂ ಮನದೊಳ್ ಬಗೆದು ದೇವೋಪಸರ್ಗ್ಗ ಮನುಷ್ಯೋಪಸರ್ಗ್ಗ ತಿರಿಕೋಪ ಸರ್ಗ್ಗಮಚೇತನೋಪಸರ್ಗ್ಗಮೆಂದಿಂತು ಚತುರ್ವಿಧಮಪ್ಪುಪಸರ್ಗಮುಮಂ ಪಸಿವು ನೀರೞ್ಕೆ ಮೊದಲಾಗೊಡೆಯ ಇರ್ಪ್ಪತ್ತೆರಡು ಪರೀಷಹಂಗಳಂ ವ್ಯಾಧಿಗಳಿಂದಪ್ಪ ವೇದನೆಗಳಂ ಸೈರಿಸಿ ಸ್ವರ್ಗಾಪವರ್ಗ್ಗಸುಖಂಗಳನೆಯ್ದುಗೆ

■

೧೦. ವೃಷಭಸೇನ ಭಟ್ಟಾರರ ಕಥೆ

ವೃಷಭಸೇನ ಭಟ್ಟಾರರ ಕ ಥೆಯಂ ಪೇೞ್ವೆಂ

ಗಾಹೆ ॥ ಉಣ್ಣಂವಾದಂ ಉಣ್ಣಂ ಸಿಳಾತಳಂ ಆದವಂ ಚ ಅದಿಉಣ್ಹಂ
ಸಹಿದೂಣ ಉಸಹಸೇಣೋ ಪಡಿವಣ್ಣೋ ಉತ್ತಮಂ ಅಟ್ಠಂ ॥

[ಉಣ್ಹಂವಾದಂ =ಬಿಸಿದಪ್ಪ ಗಾಳಿಯುಮಂ।ಉಣ್ಹಂ =ಬಿಸಿದಪ್ಪುದಂ।ಸಿಳಾದಳಂ =ಯೋಗಪೀಠದ ಸಿಲೆಯ ಮೇಗುಮಂ । ಆದವಂ ಚ =ಬಿಸಿಲುಮಂ । ಅದಿಉಣ್ಹಂ = ಅದಂ ಬಿಸಿದಪ್ಪುದಂ। ಸಹಿದೂಣ = ಲೇಸಾಗಿ ಸಯಿರಿಸಿ। ಉಸಹಸೇಣೋ =ವೃಷಭಸೇನನೆಂಬ ಮುನಿ । ಪಡಿವಣ್ಣೋ =ಪೋರ್ದ್ದಿದೊಂ । ಉತ್ತಮಂ ಅಟ್ಠಂ =ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ.]

ಅದೆಂತೆಂದೊಡೆ -

ಈ ಜಂಬೂದ್ವೀಪದ ಭರತಕ್ಷೇತ್ರದೊಳವಂತಿಯೆಂಬುದು ನಾಡಲ್ಲಿ ಉಜ್ಜೇನಿಯೆಂಬುದು ಪೊೞಲದನಾಳ್ವೊಂ ಪ್ರದ್ಯೋತನೆಂಬನರಸನಾತನ ಮಹಾದೇವಿ ಜ್ಯೋತಿರ್ಮ್ಮಾಲೆಯೆಂಬೊಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತೊಂದು ದಿವಸಮರಸಂ ಕಾಡಾನೆಯಂ ಪಿಡಿಯಲ್ವೇಡಿ ಸೊಕ್ಕಾನೆಯನೇಱಿಯಡವಿಗೆ ವೋದಡದು ಮದವಿಹ್ವಳಿತನಾಗಿ ಮೆಯ್ಯಱಿಯದೆ ದಿಶಾಪಟ್ಟಂಗೊಂಡೊಂದು ದೆಸೆಗೆ ಕೊಂಡೋಡಿ ದಂಡಕಾರಣ್ಯಮಪ್ಪಡವಿಯ ನಡುವೆ ತನ್ನ ಬೇಗದಿಂ ಪರಿಯೆ ನಾಡೆಯಂತರಂ ಪೋದೊಡೊಂದು ಮರದಡ್ಡಮಿರ್ದ್ದ ಕೊಂಬಂ ಕಂಡರಸಂ ಪಿಡಿದು ನೇಲ್ದಿರ್ದ್ದೊಡಾನೆಯುಂ ಪೆಱತೊಂದುದೆಸೆಗೆ ಪೋದೊಡೊತ್ತರಸನುಂ ಮರದಿಂದಿೞಿದು ನಾಡ ಬಟ್ಟೆಯೊಳ್ತಗುಳ್ದ ಅಡವಿಯಂ ಪೊಱಮಟ್ಟು ಬಂದೊಂದು ಖೇಡ ಮೆಂಬೂರನೆಯ್ದಿಯದಱ ಸಾಱೆಯೊಂದು ಕೈಯುಂಟದಱ ಸಾರೆಯೊಂದು ಬಾವಿಯುಂಟದಱಡಿಯೊಳ್ ಕುಳ್ಳಿರ್ದ್ದ ಪಸಿವಿನಿಂದಂ ತೃಷೆಯಿಂದಂ ಪಥಶ್ರಮದಿಂದಾದಮಾನುಂ ಸೇದೆಗೆಟ್ಟು ಬಂಬಳಂ ಬಾಡಿರ್ಪ್ಪನ್ನೆಗಮಾವೂರ ಗಾವುಂಡಂ ಜಿನವಾದಿಕನೆಂಬೊನಾತನ ಗಾವುಂಡಿ ಜಿನಮತಿಯಂಬೊಳಾ ಇರ್ವ್ವರ್ಗ್ಗಂ ಮಗಳ್ ಜಿನದತ್ತೆ ಯೆಂಬೊಳತ್ಯಂತ ರೂಪಲಾವಣ್ಯ ಸೌಭಾಗ್ಯಕಾಂತಿಯುಮೆಂದಿವನೊಡೆಯೊಳ್ ನೀರಂ

ತರಲ್ಕೆಂದು ಬಾವಿಗೆ ಪೋದಾಕೆಯಂ ಕಂಡರಸಂ ಎಲೆ ಕೂಸೆ ನೀರಂ ಕುಡಿಯಲೆಱೆಯಾ ಎಂದೊಡಂತೆ ಗೆಯ್ವೆನೆಂದಾತನ ರೂಪುಂ ಗಾಡಿಯುಂ ತೇಜಮುಂ ಲಾವಣ್ಯಮುಮಂ ಕಂಡಾಟಿಸಿ ನೀರಂ ಸೇದಿಕೊಂಡು ಬಂದು ಕುಡಿಯಲೆಱೆಯೆ ಕುಡಿಯೆ ಕುಡಿಯೆ ಕರಗದ ದಾರೆಯನುಗಿದು ಕೊಂಡೂಡೆ ಅರಸನಾಕೆಯ ಮೊಗಮಂ ನೋಡಿ ನಕ್ಕೇಕೆ ಕಾಡುವೌ ಕೂಸೆ ಕಾಡದೆ ಕುಡಿಯಲೆಱೆಯಾ ಎಂದೊಡಾಕೆಯುಂ ಕುಡಿಯಲ್ಕೆಱೆದು ತನ್ನ ಮನೆಗೆ ಪೋಗಿ ತನ್ನ ತಂದೆಗಿಂತೆಂದಳ್ ಅಮ್ಮಾ ಊರ ಪೊರಗಣ ಬಾವಿಯೊಳೊರ್ವ್ವಂ ಮಹಾಪುರುಷಂ ಬಂದಿರ್ದ್ದೋನಾತನಂ ನೀವೊಡಗೊಂಡು ಮನೆಗೆ ಬನ್ನಿಮೆಂದೊಡಂತೆ ಗೆಯ್ವನೆಂದಾತನುಂ ಪೋಗಿಯೊಡಗೊಂಡು ಬಂದಾತನ ಶ್ರಮಂ ಪೋಗೆ ದಿವ್ಯಮಪ್ಪಾಹಾರಮನೂಡಿರ್ದ್ದನ್

ಅನ್ನೆಗಮರಸನಡಿವಜ್ಜೆಯಂ ನೋಡುತ್ತಂ ಪೆಱಗಣಿಂದಂ ತಂತ್ರಮೆಲ್ಲಂ ಬಂದರಸ ನಿಲ್ಲಿಗೆ ವಂದೊನೆಯೆಂದು ಊರೊಳಗೆಲ್ಲಮಱಸಿ ಬೆಸಗೊಂಡವರರಸನಂ ಕಂಡೆಱಗಿ ಪೊಡೆವಡುವುದುಮಂ ಜೀಯಂ ಮಹಾಪ್ರಸಾದವೆಂಬುದುಮಂ ಗಾವುಂಡಂ ಕಂಡು ಎಲೆ ಈತನರಸನೆಂದಱಿದಗ್ಗಳಂ ಪ್ರತಿಪತ್ತಿಯುಂ ಗೌರವಮುಮಂ ಮಾಡಿದೊಡರಸಂ ತನ್ನ ಪೆರ್ಗ್ಗಡೆಗಳಿಂದಂ ಕೂಸಂ ಬೇಡಿ ಪೆತ್ತು ಮದುವೆನಿಂದಾಕೆಗೆ ಮಹಾದೇವಿವಟ್ಟಂಗಟ್ಟಿ ತನ್ನ ಪೊೞಲ್ಗೆ ಪೋಗಿ ಕರುಮಾಡಮಂ ಬಳಸಿಯುಮಿರ್ದ್ದಂತಃಪುರದೊಳಗೊಂದೊಳ್ಳಿತಪ್ಪ ಮಾಡಮಂ ಕೊಟ್ಟಿರಿಸಿ ಎಲ್ಲಾ ಅರಸಿಯರ್ಕ್ಕಳುಮನುೞಿದು ಜಿನದತ್ತೆಗಾಸಕ್ತನಾಗಿ ಪಲಕಾಲಮಾಕೆಯೊಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಿರ್ಪ್ಪನ್ನೆಗಮೊಂದು ದಿವಸಂ ಅಡವಿಯಂ ಸೊರ್ಕ್ಕಿದಾನೆ ಗಣೆಯಾನೆಗಳ್ ವೆರಸು ಬಂದು ಬಾವಿಯಂ ಪೊಕ್ಕೊಡೆ ಪಿರಿದುಂ ಕಳವಳಮಾಗಿ ಅರಸಂಗಱಿಪಿದೊಡರಸನುಂ ಕೇಳ್ದು ತುರಿಪದಿಂ ಪೊಱಮಟ್ಟು ಕಾಡಾನೆಯಂ ಕಟ್ಟಿಸಲೆಂದು ಬಾವಿಗೆ ಪೋದನಾ ಪ್ರಸ್ತಾವದೊಳ್ ಜಿನದತ್ತೆ ಪಸದನಂ ಗೊಂಡಿರ್ದ್ದಾಕೆ ಎನ್ನಂ ಬಿಸುಟ್ಟರಸಂ ಪೋದನೆಂದು ಮುಳಿದು ನುಡಿವುದುಂ ಅರಸನಾಕೆಯನೊಡಗೊಂಡು ಪೋಗದುದಂ ಕಂಡರಸಿಯರ್ಕ್ಕಳೆಲ್ಲಂ ಸಂತೋಷವಾಗಿ ಇನ್ನೆಮಗಮರಸಂ ಸೂೞುಂ ಪಾಳಿಯುಮನೀಗುಮೆಂದು ರಾಗಿಸಿ ನುಡಿವ ಮಾತುಗಳಂ ಜಿನದತ್ತೆ ಕೇಳ್ದು ಕಿನಿಸಿ ಇನ್ನಾತನೆನಗೆ ಬಾೞ್ತೆಯಲ್ಲನೆಂದು ತನ್ನ ಮಾಡದಿಂ ಪೊಱಮಟ್ಟು ಪೆಱತೊಂದು ಪ್ರಾಸಾದದೊಳ್ ಪೋಗಿರ್ದ್ದೋಳ್

ಅನ್ನೆಗಮಿತ್ತ ಅರಸನಾನೆಯ ಕಟ್ಟಿಸಿ ಜಿನದತ್ತೆಯ ಮಾಡಕ್ಕೆ ಪೋಗಿಯರಸಿಯಂ ಕಾಣದೆಲ್ಲಿರ್ದ್ದಳೆಂದು ಬೆಸಗೊಂಡೊಡೋರ್ವ್ವನಿಂತೆಂದಂ ನೀವೊಡಗೊಂಡು ಪೋದಿರಿಲ್ಲೆಂದರಸಿ ಮುಳಿದು ಪುರುಷವ್ರತಮಂ ಕೊಂಡು ತಪಸ್ವಿನಿಯಾಗಿ ಪೆಱತೊಂದು ಮಾಡದೊಳಿರ್ದ್ದೋಳೆಂದು ಪೇೞ್ದೊಡಾ ಮಾತನರಸಂ ಕೇಳ್ದಾದಮಾನುಂ ಮುಳಿದಿಂತಪ್ಪ ವ್ರತಮಂ ತಪಮುಮೆನ್ನಲ್ಲಿ ಕೂಡದೆಂದು ನುಡಿದಾಕೆಯಂ ಬೆಳ್ಕಾಡೊಳ್ ಮಸಣದೊಳ್ ಕೊಂಡುಪೋಗಿಕ್ಕಿಮೆಂದಾಳ್ಗಳ್ಗೆ ಬೆಸನಂ ಪೇೞ್ದೊಡವರುಮಂತೆ ಗೆಯ್ವೆಮೆಂದರಸಿಯ ನೊಡಗೊಂಡು ಪೋಗಿ ಮಸಣದೊಳೊಂಬತ್ತು ತಿಂಗಳ ಗರ್ಭಿಣಿಯಂ ಪೊತ್ತು

ಪೋಗಿಯಾಕೆಯನಲ್ಲಿಕ್ಕಿ ಇಂತೆಂದರ್ ಅಬ್ಬಾ ಎಮಗೇನುಂ ದೋಷಮುಂ ಪಾಪಮುಮಿಲ್ಲ ಕ್ಷಮಿಸಿಯಿಸಿಮರಸನ ಬೆಸದೊಳ್ ತಂದಿಕ್ಕಿದೆಮೆಂದು ನುಡಿದು ಪೋಪರನ್ನೆಗಮಾ ಇರುಳೊಳರಸಿ ಬೆಸಲೆಯಾಗಿ ಮಗನಂ ಪೆತ್ತಳ್

ಇತ್ತರಸನುಮಾ ಇರುಳೊಳ್ ಶ್ವೇತವೃಷಭನಂ ಕನಸಿನೊಳ್ ಕಂಡು ಪೊೞ್ತಱಿ ನೋಲಗದೊಳ್ ಆಸ್ಥಾನದ ನಡುವೆ ಸಿಂಹಾಸನಮಸ್ತಕಸ್ಥಿತನಾಗಿ ತನ್ನ ಕಂಡ ಕನಸಂ ಮಂತ್ರಿಗೆ ಪೇೞ್ದೊಡೆ ಮಂತ್ರಿಯುಮಿಂತೆಂದು ಕನಸಿನ ಫಲನನರಸಂಗೆ ಪೇೞ್ದಂ

ದೇವಾ ನಿಮಗಿಂದು ಪುತ್ರ ಲಾಭಮಾದುದೆಂದು ಪೇೞ್ದೊಡದಂ ಕೇಳ್ದರಸಿಯರ್ಕ್ಕ ರೊಳಗಾರ್ ಬೆಸಲೆಯಾಗಿ ಮಗನಂ ಪೆತ್ತಳೆಂದಾರಯ್ದು ಬನ್ನಿಮೆಂದು ಪಡಿಯಱರ್ಗ್ಗೆ ಬೆಸವೇೞ್ದೊಡವರ್ ರಾಣಿವಾಸಕ್ಕೆ ಪೋಗಿ ಅರಸಿಯರ್ಕ್ಕಳೆಲ್ಲರುಮಂ ಬೇಱವೇಱ ನಿಮಗಂ ಮಗಂ ಪುಟ್ಟಿದನೆ ಎಂದು ಬೆಸಗೊಂಡೊಡವರ್ಗ್ಗಳನಿಬರುಂ ಇಂತೆಂದರ್ ಎಮಗೆ ಸೌಭಾಗ್ಯಮಿಲ್ಲದವರ್ಗ್ಗೆ ಭರ್ತಾರನ ದೆಸೆಯಿಂದಪ್ಪ ಸೂೞುಂ ಪಾೞಿಯುಮಿಲ್ಲದೊರ್ಗ್ಗೆ ಬಸಿಱುಂ ಮಗನುಮೆಂತಕ್ಕುಂ ನೀಮಾರಾನುಂ ಸೌಭಾಗ್ಯಮುಳ್ಳೊರಲ್ಲಿ ಬಸಿಱುಂ ಮಗನು ಮನಾರಯ್ಯಿಂ ಎಮ್ಮಲ್ಲಿ ಏನನಾರಯ್ವಿರೆಂದು ನುಡಿದೊಡವರ್ಗ್ಗಳುಂ ಸ್ಮಶಾನಕ್ಕೆ ವೋಗಿ ಜಿನದತ್ತೆ ಬೆಸಲೆಯಾಗಿ ಮಗನಂ ಪೆತ್ತಿರ್ದ್ದೊಳಂ ಕಂಡರಸಂಗೆ ಪೋಗಿ ಇಂತೆಂದರ್

ದೇವಾ ಸ್ಮಶಾನದೊಳ್ ಜಿನದತ್ತೆಯರಸಿ ಬೆಸಲೆಯಾಗಿ ಮನಗಂ ಪೆತ್ತಿರ್ದ್ದಳೆಂದು ಪೇೞ್ದೊಡದಂ ಕೇಳ್ದರಸಂ ಕೂಸುಮನರಸಿಯುಮನೊಡಗೊಂಡು ಬನ್ನಿಮೆಂದು ತರಿಸಿ ಮುನ್ನಿನಂದದೊಳಿರಿಸಿ ಕನಸಿನೊಳ್ ವೃಷಭನಂ ಕಂಡುದಱಿಂದಾ ಕೂಸಿಂಗೆ ವೃಷಭ ಸೇನನೆಂದು ಪೆಸನಿಟ್ಟರಸಿಯುಂ ದಾನ ಸನ್ಮಾದಿಗಳಿಂ ಪೂಜಿಸಿಯಾಕೆಯೊಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಮಿರೆ

ವೃಷಭಸೇನ ಕುಮಾರನುಮೆಂಟು ವರುಷದ ಪ್ರಾಯದಾತನಾಗಿರ್ಪನ್ನೆಗಂ ಒಂದು ದಿವಸಮರಸಂ ತಪಂಬಡುವ ಬಗೆಯಿಂದಂ ವೃಷಭಸೇನಕುಮಾರಂಗಿಂತೆಂದಂ ಮಗನೆ ನಿನಗೆ ಪಟ್ಟಂಗಟ್ಟಲ್ ಬಗೆದಪ್ಪೆನೆಂದೊಡಾತನಿಂತೆಂಧಂ ಅಯ್ಯಾ ಎನಗೆ ನೀಮುಂ ರಾಜ್ಯಪಟ್ಟಂಗಟ್ಟಿದಪಿರೋ ಮೋಕ್ಷಪಟ್ಟಂಗಟ್ಟಿದಪಿರೊ ಎಂದು ತಂದೆಯಂ ಬೆಸಗೊಂಡೊಡೆ ಮಗನೆ ನಿನಗೆ ಮನುಷ ರಾಜ್ಯಪಟ್ಟಬಂಧನಮುಮೆಂತೆನೆ ಮೋಕ್ಷಸುಖ ರಾಜ್ಯಪಟ್ಟಮಂ ತಪಂಗೆಯ್ದಂಗೆ ಕಟ್ಟುವುದೆಂದೊಡಂತಪ್ಪೊಡೆ ಮನುಷ್ಯ ರಾಜ್ಯಪಟ್ಟಂಗಟ್ಟಿದಪ್ಪೆನೆಂಬುದುಂ ದೇವಾ ರಾಜ್ಯಪಟ್ಟಬಂಧನಮುಮನೊಲ್ಲೆನೆನಗೆ ಮೋಕ್ಷರಾಜ್ಯಪಟ್ಟಂಗಟ್ಟಿಮೆಂದು ನುಡಿದೊಡರಸನೆಂದಂ ಮಗನೆ ನೀನಿನ್ನುಂ ಕೂಸನ್ನೆ ಬಾಲವದ್ದೆಯನ್ನೆಗಂ ಬಳೆದರಸುಗೆಯ್ದಿಷ್ಟ ವಿಷಯ ಕಾಮ ಭೋಗಂಗಳನುಭವಿಸುತ್ತಂ ಬೞಿಕ್ಕೆ ಪಶ್ಚಾತ್‌ಕಾಲದೊಳ್ ತಪಂಬಡುವುದೆಂದೊಡೆ ಕುಮಾರನಿಂತೆಂದಂ ಅನ್ನೆಗಂ ಸಾವರೋ ಬಾೞ್ವರೋ ಎಂತಱಿಯಲಕ್ಕುಂ ಮನುಷ್ಯರ ಬಾೞುಂ

ಕಂದ ॥ ಪನಿಪುಲ್ಲ ಮುಗಿಲ ಸಂಜೆಯ
ಕನಸಿನ ಸುರಧನುವ ನೆಗೆದ ನೊರೆಗಳ ತೆಱನಂ
ತನಿತುಂ ನಿಲ್ಲವು ಬಗೆವೊಡೆ
ಮನುಜರ ಯೌವನಮುಮರ್ಥಮುಂ ಬಾೞ್ಕೆಗಳುಂ ॥

ಶ್ಲೋಕ ॥ ಭೋಗಸ್ತೃಷ್ಣಾಗ್ನಿ ಸಂವೃಧ್ಯೈ ದೀಪನೀಯೋ ವನೋಪಮಃ ॥
ಏಭಿಃ ಸ್ತ್ರೀವೃದ್ಧತೃಷ್ಣಾಗ್ನಿ ಶಾಂತ್ಯೈ ಚಿಂತ್ಯಮಹಾಪರಂ

ಗಾಹೆ ॥ ಸಣ್ಣಿಂವಾ ಬದರಂ ತಂ ಮಜ್ಝಂ ವಿಮುತ್ತಾಣ ಮುತ್ತಿಪಹಂ
ಅಮಿಸಾಮಾ ಭೋಗಸುಹ ಲೋಹವಿರದೋ ಮೋಕ್ಖೇಮದಿಂ ಕುಜ್ಝಾ ॥

ಆರ್ಯೆ ॥ ಯದ್ಯಪಿ ನಿಷೇವ್ಯಮಾಣಾ ಮನಸ್ಸಂತುಷ್ಟಿ ಕಾರಕಾ ವಿಷಯಾಃ
ಕಿಂಪಾಕ ಫಲಾಶನವದ್ ಭವಂತಿ ಪಶ್ಚಾದತಿ ದುರಂತಾಃ ॥

ಎಂಬುದಱಿಂ ಭೋಗಂಗಳುಂ ಕಿಂಪಾಕಫಲದೋರನ್ನವದು ಕಾರಣದಿಂ ರಾಜ್ಯದೊಳಪ್ಪ ಭೋಗಸುಖಂಗಳನೊಲ್ಲೆಂ ಜಾತಿಜರಾಮರಣಂಗಳಿಂದಪ್ಪ ಬಾಧೆಯಿನಗಲ್ದ ಶಾಶ್ವತಮಪ್ಪ ಮೋಕ್ಷ ಸುಖಮನೆ ಬೇೞ್ಪೆನೆಂದು ತಱಿಸಂದು ನುಡಿದೊಡರಸಂ ಜ್ಯೋತಿರ್ಮಾಲೆಯೆಂಬರಸಿಯ ಮಗಂ ವಸುಪಾಲನೆಂಬೊಂಗೆ ರಾಜ್ಯ ಪಟ್ಟಂಗಟ್ಟಿ ತಂದೆ ಮಕ್ಕಳಿರ್ವ್ವರುಮೆಲ್ಲರೊಳಂ ನಿಶ್ಶಲ್ಯಂಗೆಯ್ದು ಬಾಹ್ಯಾಭ್ಯಂತರ ಪರಿಗ್ರಹ ಪರಿತ್ಯಾಗಂಗೆಯ್ದು ಗುಣಧರರೆಂಬಾಚಾರ್ಯರ ಪಕ್ಕದೆದೀಕ್ಷೆಯುಂ ಕೈಕೊಂಡು ಪನ್ನೆರಡು ವರುಷಂಬರೆಗಂ ಗುರುಗಳನಗಲದಿದ್ರ್ವಾಗಮಂಗಳೆಲ್ಲಮಂ ಕಲ್ತು ಭಟಾರರಂ ಬೆಸಗೊಂಡವರನುಮತದಿಂ ವೃಷಭಸೇನ ಮುನಿಯುಂ ಗ್ರಾಮನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾ ಮುಖಂಗಳಂ ವಿಹಾರಿಸುತ್ತಂ ಬರ್ಪೊರ್ ವತ್ಸೆಯೆಂಬುದು ನಾಡೊಳ್ ಕೌಶಂಬಿಯೆಂಬ ಪೊೞಲ್ಗೆವಂದದಱ ಸಾರೆ ಉದಯಾವತ ಪರ್ವತಮೆಂಬ ಪರ್ವತಮುಂಟದರ ಮೇಗೆ ವೃಷಭಸೇನ ಭಟಾರರ್ ನಾಲ್ಕು ತಿಂಗಳುಮಾತಪಸ್ಥಿತಯೋಗಮಂ ಕೈಕೊಂಡು ದಿವಸಕ್ಕಂ ಕಲ್ಮೆಲೆ ನಿಲೆ ಪೊೞಲವರ್ಗ್ಗಳ್ ಕಂಡನಿಬರುಂ ಶ್ರಾವಕಭಕ್ತರುಂ ಬೆಸಕೆಯ್ವರುಮಾದರ್

ಮತ್ತಾ ಪೊೞಲೊಳ್ ಬುದ್ಧಜನೆಂಬೊನುಪಾಸಕನಾತಂ ಋಷಿಯರೊಳಪ್ಪ ಮಾತ್ಸರ್ಯಂ ಕಾರಣಮಾಗಿ ಭಟಾರರ್ ಚರಿಗೆ ವೋದರನ್ನೆಗಂ ಪಿಂದೆ ಪಾಪಕರ್ಮಂ ಯೋಗಶಿಲೆಯ ಮೇಗುಮಂ ಕೆಳಗುಮಂ ಬಳಿಸಿಯಂ ಪಲವುಂ ಪಿರಿಯವುಮಪ್ಪ ತಱಿಯ ಪುಳ್ಳಿಗಳಂ ಕಡಿದೊಟ್ಟಿ ಕಿಚ್ಚನಿಕ್ಕಿ ಸುಟ್ಟು ಕಿಚ್ಚಿನ ಬಣ್ಣದಂತಾಗಿ ಸಿಲೆಯಂ ಮಾಡಿ ಕೆಂಡಂಗಳನೊಂದು ಕೆಲಂ ಸಾರ್ಚ್ಚಿ ಪೋದನನ್ನೆಗಂ ಭಟಾರರ್ ಚರಿಗೆ ವೋಗಿ ಬರ್ಪ್ಪೊರ್ ಧಗಧಗಿಸುತ್ತಿರ್ದ ಕಿಚ್ಚಿನ ಬಣ್ಣದಂತಪ್ಪ ಕೆಚ್ಚನಾಗಿರ್ದ್ದ ಸಿಲೆಯಂ ಕಂಡೆ ಮಗಿನಿತೆಯಾಯುಷ್ಯಮೆಂದಱಿದು ಕ್ರಿಯೆಗೆಯ್ದು ಚತುರ್ವಿಧಮಪ್ಪಾಹಾರಮುಂ ಶರೀರಮುಮಂ

ಜಾವಜ್ಜೀವಂ ತೊಱೆದು ಕಾಯ್ಬಿರ್ದ್ದ ಯೋಗಪೀಠಮನೇಱಿ ಕಾಯೋತ್ಸರ್ಗಂ ಗೆಯ್ದು ಜೇಷ್ಠಮಾಸದ ಬಿಸಿಲುಂ ಝುಳಮುಂ ಬೆಂಕೆಯುಂ ಕಿಚ್ಚುಮಂ ಸೈರಿಸಿ ನೀರೊಳಗಿರ್ಪ್ಪಂತಿರ್ದ್ದು ಶುಕ್ಲ ಧ್ಯಾನಮಂ ಧ್ಯಾನಿಸಿ ಎಂಟು ಕರ್ಮಂಗಳಂ ಕಿಡಿಸಿ ಮೋಕ್ಷಕ್ಕೆ ಪೋದರ್ ಮತ್ತೆ ಪ್ರದ್ಯೋತನೆಂಬ ಋಷಿ ಸಮ್ಯಗ್ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗದೊಳ್ ಪುಟ್ಟಿದಂ

ಮತ್ತಂ ಪೆಱರುಮಾರಾನುಂ ಸಹಜ ರತ್ನತ್ರಯಮನಾರಾಧಿಸುತ್ತಿರ್ದ್ದ ಭವ್ಯರ್ಕಳ್ ವೃಷಭಸೇನ ಭಟಾರರಂ ಮನದೊಳ್ ಬಗೆದು ಝುಳಮಂ ಬೆಂಕಿಯುಮಂ ದಾಹಮುಷ್ಣಮುಂ ಶೀತಮುಂ ವಾತಮುಂ ಬೇನೆಯುಂ ಪಸಿವುಂ ನೀರಟ್ಕೆ ಮೊದಲಾಗೊಡೆಯವಿರ್ಪ್ಪತ್ತೆರಡು ಪರೀಷಹಂಗಳಂ ಸೈರಿಸಿ ಶುಭ ಪರಿಣಾಮದಿಂ ಸಮ್ಯಗ್ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗ್ಗ ಸುಖಂಗಳನೆಯ್ದುಗೆ

■

೧೧. ಕಾರ್ತಿಕ ಋಷಿಯ ಕಥೆ

ಅಗ್ನಿ ರಾಜನ ಮಗನಪ್ಪ ಸ್ವಾಮಿ ಕಾರ್ತಿಕ ಋಷಿಯ ಕಥೆಯಂ ಪೇೞ್ವೆಂ

ಗಾಹೆ ॥ ರೋಹೇದಯಮ್ಮಿ ಸತ್ತೀಏ ಹದೋ ಕೊಂಚೇಣ ಅಗ್ಗಿದಯಿದೋ ವಿ
ತಂ ವೇದಣಮಧಿಯಾಸಿಯ ಪಡಿವಣ್ಣೋ ಉತ್ತಮಂ ಅಟ್ಠಂ ॥

[ರೋಹೇದಯಮ್ಮಿ = ರೋಹೇದಕಮೆಂಬ ಪೊೞಲೊಳು । ಸತ್ತೀಏ ಹದೋ - ಶಕ್ತಿಯೆಂಬಾಯುಧದಿಂದಿಱಿಯೆ ಪಟ್ಟೊನಾಗಿ । ಕೊಂಚೇಣ =ಕ್ರೌಂಚನೆಂಬರಸನಿಂದಂ । ಅಗ್ಗಿದಯಿದೋವಿ =ಅಗ್ನಿರಾಜನ ಕಾದಲಿಸೆ ಪಡುವ ಮಗಂ । ತಂ ವೇದಣಂ = ಆ ವೇದನೆಯಂ। ಅಧಿಯಾಸಿಯ = ಲೇಸಾಗಿ ಸೈರಿಸಿ । ಪಡಿವಣ್ಣೋ = ಪೊರ್ದಿದೋಂ । ಉತ್ತಮಂ ಅಟ್ಠಂ = ಮಿಕ್ಕ ದರ್ಶನಜ್ಞಾನ ಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ-

ಈ ಜಂಬೂದ್ವೀಪದ ಭರತ ಕ್ಷೇತ್ರದೊಳ್ ಲಾಳವಿಷಯದೊಳ್ ಕೃತ್ತಿಕಾಪುರ ಮೆಂಬುದು ಪೊೞಲದನಾಳ್ವೊನಗ್ನಿರಾಜನೆಂಬರಸನಾತನ ಮಹಾದೇವಿ ವೀರಮತಿ ಯೆಂಬೊಳಾಯಿರ್ವರ್ಗ್ಗಂ ಮಕ್ಕಳ್ ಬಂಧುಮತಿ ಶಿವಸೇನೆ ಶ್ರೀಮತಿ ಸ್ವಯಂಪ್ರಭೆ ಲಕ್ಷ್ಮೀಮತಿ ಕೃತ್ತಿಕೆಯೆಂದಿಂತಱುವರ್ ಪೆಣ್ಗೂಸುಗಳಂತವರ್ಗ್ಗಳಿಷ್ಟ ವಿಷಯ ಕಾಮ ಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತೊಂದು ದಿವಸಂ ಫಾಲ್ಗುಣ ಮಾಸದ ನಂದೀಶ್ವರದಂದಱುವರುಂ ಕೊಡಗೂಸುಗಳುಪವಾಸಂಗೆಯ್ದು ಬಸದಿಗರ್ಚ್ಚನೆಯಂ ಕೊಂಡು ಪೋಗಿ ದೇವರನರ್ಚ್ಚಿಸಿ ನಂದೀಶ್ವರಂಗೆಯ್ದು ಬಂದಿಸಿ ರಿಸಿಯರ್ಕ್ಕಳುಮಂ ಗುರುಪರಿವಿಡಿಯಿಂದಂ ವಂದಿಸಿ ವ್ರತಂಗಳನೇಱಿಸಿಕೊಂಡು ಸಿದ್ಧಶೇಷೆಯಂ ಕೊಂಡು ಬಂದು ತಾಯ್ಗಂ ತಂದೆಗಂ ಕೊಟ್ಟು ಪೋಪಾಗಳರಸಂ ಕಿಱಿಯ ಮಗಳಪ್ಪ ಕೃತ್ತಿಕೆಯ ರೂಪುಂ ತೇಜಮುಂ ಗಾಡಿಯುಮಂ ಕಂಡಾಕೆಗಾಟಿಸಿ ಸಾಮಂತ ಮಹಾ ಸಾಂತರ್ಕ್ಕಳ್ಗಂ ಪರಿವಾರಕ್ಕಂ ಮಂತ್ರಿವರ್ಗಕ್ಕಂ ವೀರಮತಿ ಮಹಾದೇವಿಗಮೆಲ್ಲ ಸಮಯಿಗಳ್ಗಂ ಬೞಿಯಟ್ಟಿ ಬರಿಸಿಯರಸನಿಂತೆಂದಂ ಎನ್ನಾಳ್ವ ಮಂಡಳಂಗಳೊಳ್ ಪುಟ್ಟಿದ ಲೇಸಪ್ಪ ವಸ್ತುವಾರ್ಗ್ಗಕ್ಕುಮೆಂದು ಬೆಸಗೊಂಡೊಡವರ್ಗ್ಗಳೆಲ್ಲಮಿಂತೆಂದರ್ ಬೇೞ್ವೇೞ್ಯರಸರನನಿಬರುಮಂ

ಒಳ್ಳಿತಪ್ಪಾನೆಯುಂ ಕುದುರೆಯುಂ ಮುತ್ತುಂ ಮಾಣಿಕವುಂ ಸ್ತ್ರೀರತ್ನಮುಂ ಮೊದಲಾಗೊಳ್ಳಿತಪ್ಪಗ್ಗಳ ವಸ್ತುವೆಲ್ಲಂ ಪೃಥ್ವಿಯನಾಳ್ವೊಂಗಕ್ಕುಮೆಂದು ಪೇೞ್ದೊಡರಸಂ ಋಷಿಯರುಮಂ ಬೆಸಗೊಂಡೊಡೆ ಋಷಿಯರೆಂದರ್ ಆವುವಸ್ತು ಪೇೞಿಂ ಪೇೞ್ದೊಡೆ ತಕ್ಕುದು ತಗದುದುಮನಱಿಯಲಕ್ಕುಮೆಂದೊಡರಸನಿಂತೆದಂ

ಇವರೆಲ್ಲರ ಪೇೞ್ದಂತು ಪೇೞ್ವರಲ್ಲರೊಡಂಬಡುವರಲ್ಲರ್ ಬಹು ಪ್ರಳಾಪಿಗಳಿವರಂ ಪೊಟಲಿಂದಟ್ಟಿ ಕಳೆಯಿಮೆಂದಟ್ಟಿ ಕಳೆದುೞಿದರೆಲ್ಲರುಮಂ ಬೆಸಗೊಂಡೊಡನಿಬರುಂ ಒಡಂಬಟ್ಟೊಳ್ಳಿತ್ತಪ್ಪ ವಸ್ತು ನಿನಗಕ್ಕುಮೆಂದೊಡೆ ಅರಸನೆನಗಕ್ಕುಂ ವಲಮೆಂದು ಮೂಱು ಸೂೞ್ವರಂ ಸಾೞಿ ನುಡಿದೊಡಂಬಡಿಸಿ ವೀರಮತಿ ಮಹಾದೇವಿಯಂ ಬೇಡಿ ಕೃತ್ತಿಕೆಯಪ್ಪ ಕಿಱಿಯ ಮಗಳಂ ಮದುವೆನಿಂದೊಂ ಆ ದಿಸವಮೆ ವೀರಮತಿ ಮಹಾದೇವಿಯುಂ ಬ್ರಹ್ಮಚರ್ಯ ವ್ರತಮಂ ಕೈಕೊಂಡು ನೆಗೞ್ದಳ್

ಮತ್ತೆ ಕೃತ್ತಿಕೆಗೆ ನವಮಾಸಂ ಗರ್ಭಮಾದಂದು ಸರವಣಮೆಂಬುದ್ಯಾನವನ ದೊಳಗಣ ಸರವಣವೆಂಬ ಬಾವಿಯೊಳ್ ಜಲಕ್ರೀಡೆಯಾಡಲ್ ಬಯಕೆಯಾದುದೆಂದ ಸರಂಗಱಿಪಿದೊಡರಸನನುಮತದಿಂ ಜಲಕ್ರೀಡೆಯಾಡಿ ಮಗನಂ ಪೆತ್ತೊಡಾತಂಗೆ ಸ್ವಾಮಿ ಕಾರ್ತಿಕನೆಂದು ಪೆಸರನಿಟ್ಟರ್ ಮತ್ತಾತನಿಂ ಬೞಿಯಂ ಪೆಣ್ಗೂಸುಮಂ ಪೆತ್ತೊಡೆ ಆಕೆಗೆ ವೀರಶ್ರೀಯೆಂದು ಪೆಸರನಿಟ್ಟು ಬಳೆದೊಡಾಕೆಯಂ ಕೋಗಳಿಯನಾಳ್ವ ಕ್ರೌಂಚನೆಂಬರಸಂಗೆ ಕೊಟ್ಟರ್ ಇಂತು ಕಾಲಂ ಸಲೆ ಮತ್ತಿತ್ತ ನಮಿ ಮೊದಲಾಗೊಡೆಯ ತಮ್ಮಂದಿರಪ್ಪ ಕುಮಾರರೊಡನೆ ಸ್ವಾಮಿ ಕಾರ್ತಿಕಂ ಬಳೆದು ಪದಿನಾಱು ಮರುಷದ ಪ್ರಾಯಮಾದಂದು ಮತ್ತೊಂದು ದಿವಸಮನಿಬರುಂ ಕುಮಾರರ್ಕಳುದ್ಯಾನವನಕ್ಕೆ ವನಕ್ರೀಡೆಯಾಡಲ್ ಪೋಗಿಯಾಡುತ್ತಿರ್ಪನ್ನೆಗಮೆಲ್ಲಾ ಕುಮಾರರ್ಕಳ್ಗಂ ತಾಯ್ ತಂದೆಯಜ್ಜರ್ಕಳ ಮನೆಯಿಂದಂ ಪೂಸಲುಮುಡಲುಂ ತುಡಲುಂ ಪೂವುಂ ತಂಬುಲಮುಂ ತಿಂಬಡಂಗಳುಂ ಬಂದುವು ಸ್ವಾಮಿ ಕಾಂರ್ತಿಕಂಗಾರುಮಟ್ಟದಿರ್ದೊಡೆ ಮನದೊಳ್ ಬಳ್ದಿದೊನಾಗಿ ವನಕ್ರೀಡೆಯನಾಡಿ ಮನೆಗೆ ವಂದು ತಾಯನಿಂತೆಂದನ್ ಅಬ್ಬಾ ನಿಮ್ಮ ತಂದೆಯಪ್ಪೆಮ್ಮಜ್ಜನೊಳನೊ ಇಲ್ಲೆಯೊ ಎಂದು ಬೆಸಗೊಂಡೊಡೆ ತಾಯ್ ಮನದೊಳ್ ಬೞಿದ್ದಿದೊಳಾಗಿ ಏನಂ ಪೇೞ್ವೆಂ ಮಗನೆ ನಿನಗೆ ತಂದೆಯಪ್ಪಾತನೆನಗಂ ತಂದೆಯೆಂದು ಪೇೞ್ದೊಡದಂ ಕೇಳ್ದು ಅದುವೇ ವೈರಾಗ್ಯ ಕಾರಣಮಾಗಿ ಶ್ರೀವರರೆಂಬಾಚಾರ್ಯರ ಪಕ್ಕದೆ ತಪಂ ಬಟ್ಟಾಗಮಂಗಳೆಲ್ಲಮಂ ಕಲ್ತು ಗುರುಗಳಂ ಬೆಸಗೊಂಡವರನುಮತದಿಂದೇಕ ವಿಹಾರಿಯಾಗಿ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ತೆಂಕನಾಡ ಕಿಷ್ಕಿಂಧಮೆಂಬ ಪರ್ವತಮನೆಯ್ದಿಯದಱಮೇಲೆ ರಾತ್ರಿ ಪ್ರತಿಮಾಯೋಗಂ ಗೆಯ್ದೊರ್ ಆ ಇರುಳು ಪಿರಿದೊಂದು ಮಳೆಕೊಂಡು ಮೆಯ್ಯ ಮಲಮೆಲ್ಲಮಂ ಕರ್ಚ್ಚಿ ಕಳೆದು ಪಾಷಾಣಮೆಂಬ ನೀರಂ ಮಿಂದವರ್ಗ್ಗೆಲ್ಲಾ ವ್ಯಾಧಿಯುಂ ಕಿಡುವುವಾದುವಲ್ಲಿಂ ತೊಡಗಿ ದಕ್ಷಿಣಾಪಥದೊಳದು ತೀರ್ಥಮಾಯ್ತು.

ಮತ್ತೆ ಸ್ವಾಮಿ ಕಾರ್ತಿಕ ರಿಷಿಯುಂ ವಿಹಾರಿಸುತ್ತಂ ಬಂದು ಕೋಗಳಿಯನೆಯ್ದಿಯಲ್ಲಿಯ ಬಸದಿಯೊಳ್ ಪಂಥಾತಿಚಾರ ನಿಯಮಂಗೆಯ್ದು ದೇವರಂ ಬಂದಿಸಿ ಮಧ್ಯಾಹ್ನದಾಗಳ್ ಚರಿಗೆವೊಕ್ಕು ಚಾತುರ್ವರ್ಣದ ಮನೆಗಳುಮಂ ತೊಟಲುತ್ತುಂ ಬಂದರಮನೆಯಂ ಪೊಕ್ಕಾಗಳಾ ಪ್ರಸ್ತಾವದೊಳ್ ಕರುಮಾಡದ ಮೇಗಣ ನೆಲೆಯೊಳಿರ್ದು ವೀರಶ್ರೀ ಮಹಾದೇವಿಯರಸನ ತಲೆಯಂ ತನ್ನ ತೊಡೆಯ ಮೇಲಿಟ್ಟುಗುರಿಸುತ್ತಿರ್ದ್ದಾಕೆ ಭಟಾರರ ಬರವಂ ಕಂಡೞಿದೆಮ್ಮಣ್ಣಂಗಳಪ್ಪ ಭಟಾರರ್ ಚರಿಗೆವಂದಪ್ಪೊರೆಂದು ಮಱಲುಂದಿದರಸನ ತಲೆಯಂ ಕೆಳಗೊಂದಾಧಾರಮನಿಟ್ಟು ನಿೞಿಸಲೆಂದು ಕರು ಮಾಡದಿಂದಿೞಿದು ಪರಿತರ್ಪನ್ನೆಗಂ ಭಟಾರರ್ ವಂದು ಅರಮನೆಯಂಗಳಮಂ ಪೊಕ್ಕು ಮಗುಟ್ದು ಪೋಗಿ ಬಾಗಿಲ್ ಮಾಡಮನೆಯ್ದಿದಾಗಳರಸಿ ಪೆಱಗಣಿಂ ಪರಿತಂದು ಬಂದು ಮುಂದೆ ನಿಂದು ಕೈಗಳಂ ಮುಗಿದೆಱಗಿ ನಿಲ್ಕೆ ಭಟಾರಾ ಎಂದು ನಿೞಿಸಿದೊಡೆ ಭಟಾರರೆಂದರ್ ಅಬ್ಬಾ ಮನೆಯಂ ಪೊಕ್ಕು ಬಂದೊಮಿನ್ನೆಮಗೆ ನಿಲಲಾಗದೆಂದೊಡೆ ಅರಸಿಯಿಂತೆಂದಳ್ ಭಟಾರಾ ನೀಮೆನಗೆ ದಯೆಗೆಯ್ದಮೋಘಂ ನೀಲಲ್‌ವೇೞ್ಕುಮೆಂದು ಪೋಗಲೀಯದೆ ಕಾಲಂ ಪಿಡಿದು ತಾಂಗುತ್ತಿರ್ಪ್ಪನ್ನೆಗಮ್

ಇತ್ತರಸನೆಟ್ಟುತ್ತು ದೆಸೆಗಳಂ ನೋಡಿಯರಸಿಯಂ ಕಾಣದರಸಿಯೆಲ್ಲಿರ್ದ್ದೊಳೆಂದು ಕೆಲದವರಂ ಬೆಸಗೊಂಡೊಡವರೆಂದರ್ ಅರಸಿಯೊರ್ವ ಸವಣಂ ಬಂದೊಡಾತನಂ ಕಂಡು ಕರುಮಾಡದಿಂದಿೞಿದು ಪರಿದು ಬೞಿಯಂ ತಗುಟ್ದು ಬಾಗಿಲ್ ಮಾಡದಲ್ಲಿ ಸವಣನೊಡನಾ ಪೋರುತ್ತಿರ್ಪ್ಪೊಳ್ ನೋಡಿಮೆಂದರಸಂಗೆ ತೋಱಿದೊಡರಸಂ ಕಂಡೆನ್ನನಗಲ್ದು ನಿಚ್ಚಲೀ ಸವಣನಲ್ಲಿಗೆ ಪರಿವಳೆಂದು ಕಿನಿಸಿಂ ಕರುಮಾಡದಿಂದಿೞಿದು ರಿಸಿಯರಿರ್ದ್ದಲ್ಲಿಗೆ ಪೋಗಿ ಶಕ್ತಿಯೆಂಬಾಯುಧದಿಂದುರಮನುರ್ಚ್ಚೆ ಪೋಗಿಟ್ಟರಸಿಯುಮಂ ತಲೆನವಿರಂ ಪಿಡಿದು ದೞದೞನೆೞೆದುಕೊಂಡು ಬಂದಂ

ಸ್ವಾಮಿ ಕಾರ್ತಿಕ ಋಷಿಯುಂ ಕ್ಷಮೆಯಂ ಭಾವಿಸಿ ನೆತ್ತರೊಕ್ಕು ಬಸವೞಿದು ಬೇಸಗೆಯ ಕಡುವಿಸಿಲಿಂದಂ ಝಳದಿಂದಂ ಬೆಂಕಿಯಿಂದಂ ನೀಱಟ್ಕೆಯಧಿಕಮಾಗಿ ತಣ್ಪನೊಳೊಳ್ಪಿತ್ತು ಸಮಾಧಿಯಕ್ಕುಮೆಂದು ಮನದೊಳ್ ಬಗೆದಿರ್ದ್ದನನ್ನೆಗಂ ತಮ್ಮಜ್ಜಿಯಪ್ಪ ವೀರಮತಿ ಮಹಾದೇವಿ ಬ್ರಹ್ಮಚರ್ಯ ವ್ರತಮಂ ಕೊಂಡು ಕಾಲಂ ಗೆಯ್ದು ವ್ಯಂತರ ದೇವತೆಯಾಗಿ ಪುಟ್ಟಿದಾಕೆಗಾಸನಕಂಪಮಾಗಿಯಱಿದು ಬಂದು ಭಟಾರಾ ಬೆಸನೇನಿವರೆಲ್ಲರುಮಂ ಕೊಂದಪ್ಪೆನೆಂದೊಡೆ ಭಟಾರರೆಂದರ್ ಅಂತೇನುಂ ಬೇಡ ನೀನೆಮ್ಮಂ ತಣ್ಪೆನೆಡೆಗೆ ಕೊಂಡು ಪೋಗೆಂದೊಡೆ ದೇವತೆ ನವಿಲ ರೂಪಿನಿಂದೆತ್ತಿಕೊಂಡು ಬೆನ್ನೊಳಿಟ್ಟು ಕೋಗಳಿಯ ಮೂಡಣ ದೆಸೆಯ ಪರ್ವತದ ಕೊಳದ ತಡಿಯೊಳ್ ಲತಾ ಮಂಟಪದೊಳಿರಿಸಿ ಪೋದೊಡೆ ಬೆಟ್ಟದ ಮೇಗಣಿಂ ಪಾಯ್ತರ್ಪ ನಿರ್ಝರ ಸೀಕರಂಗಳಿಂ ಮೆಯ್ಯಾಪ್ಯಾಯನ ಮಾಗಿ ಸಂನ್ಯಸಂನಂಗೆಯ್ದು ಶುಭ ಪರಿಣಾಮದಿಂ ಮುಡಿಪಿ ಸರ್ವಾರ್ಥಸಿದ್ಧಿಯೊಳ್ ಮೂವತ್ತು ಮೂಱು ಸಾಗರೋಪ ಮಾಯುಷ್ಯಮನೊಡೆಯೊನಹಮಿಂದ್ರನಾಗಿ ಪುಟ್ಟಿದೊಂ

ಮತ್ತಿತ್ತ ಭಟಾರರ ತಂಗೆಯಪ್ಪ ವೀರಶ್ರೀಯುಂ ಹಾ ಭಟಾರಾ ಎಂದಿರುಳುಂ ಪಗಲುಂ ಪಲವು ದಿವಸಮೊಂದೆ ಪಾಂಗಿನೊಳು ಪ್ರಳಾಪಿಸಿ ದುಃಖಂಗೆಯ್ಯೆ ಅರಸನುಮಾಕೆಗೆ ಕಡು ನಲ್ಲನಪ್ಪುದಱಿಂದಾದಮಾನುಂ ಉಬ್ಬೆಗಂ ಬಟ್ಟಿರ್ದ್ದು ಇಂತೆಂದನ್ ಆರೋರ್ವ್ವರರಸಿಯಟ್ಕೆಯಂ ಮಱಿಗ್ಗಿಸಿ ದುಃಖಮಂ ಮಱೆಯಿಸುವೊರವಗ್ಗೊ್ಸಗೆಯಂ ಮಾಡುವೆನೆಂದು ಪೊಟಲೊಳಗೆ ಗೋಸಣೆಯಂ ತೋಟಲ್ಚಿದೊಡದಂ ಕೇಳ್ದು ಲೋಗರ್ ಪಗರಣೆಗರಾಗಿ ಎನಿತಾನುಂ ತೆಱದ ರೂಪುಗಳಂ ಕೈಕೊಂಡು ಮರಮೊಗಂಗಳನಿಟ್ಟು ಬಂದ್ದು ಮುಂದೆ ಆಡಿಯುಂ ಪಾಡಿಯುಂ ನಗಿಸಿಯುಮೆಂತುಮಟ್ಕೆ ಮಟ್ಗದಿರ್ದ್ದೊಡೊರ್ವ್ವಂ ಕರಿಯ ಕಚ್ಚುಟಮನುಟ್ಟು ಮೆಯ್ಯೆಲ್ಲಂ ಮಸಿಯಂ ಪೂಸಿ ಬೋಟುದಲೆವೆರಸು ಬಾಯೊಳ್ ಕವಡಿಕೆಗಳಂ ಪಲ್ಗಳಂತೆ ಮಾಡಿ ಕುಂಚಮುಂ ಗುಂಡಿಗೆಯುಮಂ ಪಿಡಿದು ಬಪ್ಪೊನನರಸಂ ಕಂಡಿಂತೆದಂ ಎಲೆಯರಸಿ ನಿನ್ನ ಸಹೋದರಂಗಳಪ್ಪ ಭಟಾರರಾ ಬಪ್ಪೊರೆಯೆಂದು ಪೇಟ್ದಾಗಳೆಲ್ಲಿರ್ದರೆಂದೆಟ್ದು ನೋಡಿ ಕಾಣದಾ ರೂಪಂ ಕಂಡು ನಕ್ಕು ದುಃಖಮಂ ಮಱದೊಳಾಗಳಾ ನಗಿಸಿದ ಪರಗಣೆಗಂಗೆ ಪಿರಿದು ಕಸವರಮನಿತ್ತೊಂ ಅಂದಿಂದಿತ್ತ ಬಾದುಬ್ಬೆಯ ಪರ್ವ್ವಮುಂ ಪರಗಣದಾಟಪಾಟಮುಮಾದುವು ಮತ್ತೆ ಸ್ವಾಮಿ ಕಾರ್ತಿಕ ಋಷಿಯರ್ ಮುಡಿಪಿದಲ್ಲಿಯವರ ತಂಗೆಯಪ್ಪ ವೀರಶ್ರೀ ಬಸದಿಯಂ ಮಾಡಿದೊಡೆ ಅಂದಿಂದಿತ್ತ ಸ್ವಾಮಿಯೆಂಬ ತೀರ್ಥಮಾಯ್ತು

ಮತ್ತಿತ್ತ ಕೃತ್ತಿಕೆಯೆಂಬ ಪೊಳಲನಾಳ್ವ ಅಗ್ನಿರಾಜನೆಂಬರಸಂ ತನ್ನ ಮಗಳಂ ತಾನೆ ಕಂಡು ಮೋಱೆಯಳಿದನಪ್ಪುದಱಿಂದಲ್ಲಿಯ ಜನಮುಂ

ಶ್ಲೋಕ ॥ ರಾಜ್ಞಿ ಧರ್ಮಿಣಿ ಧರ್ಮಿಷ್ಠಾಃ ಪಾಪೇ ಪಾಪಸಮಾಶ್ರಿತಾಃ
ರಾಜಾನಮನುವರ್ತಂತೇ ಯಥಾ ರಾಜಾ ತಥಾ ಪ್ರಜಾಃ ॥

ಎಂದರಸನಂ ಕಂಡು ಮೋಱೆಯಳಿದು ನೆಗಟಲ್ ತಗುಳ್ದೊಡಾ ಪೊಟಲ್ಗೆ ಭೋಗಂಕಾರೋಹಣಮೆಂದು ಪೆಸರನಿಟ್ಟರಿದು ಸ್ವಾಮಿ ಕಾರ್ತಿಕ ಋಷಿಯ ಕತೆ

ಮತ್ತಂ ಪೆಱರುಂ ಪರಮ ಸಹಜ ರತ್ನತ್ರಯಂಗಳನಾರಾಧಿಸುವಗ್ಗರ್ಳ್ ಸ್ವಾಮಿ ಕಾರ್ತಿಕ ಋಷಿಯಂ ಮನದೊಳ್ ಬಗೆದೇಱುಂ ಪುಣ್ಣುಂ ವ್ಯಾಧಿಯುಂ ಪಸಿವುಂ ನೀರಟ್ಕೆ ಶೀತವಾತೋಷ್ಣಂಗಳುಮಂ ಸೈರಿಸಿ ಸ್ವರ್ಗಾಪವರ್ಗ್ಗ ಸುಖಂಗಳನೆಯ್ದುಗೆ

■

೧೨. ಅಭಯ ಘೋಷ ಮುನಿಯ ಕಥೆ

ಅಭಯಘೋಷರೆಂಬ ಮುನಿಯ ಕಥೆಯಂ ಪೇೞ್ವೆಂ

ಗಾಹೆ॥ ಕಾಕಂದಿ ಅಭಯಘೋಸೋವಿ ಚಂಡಯಗೇಣ ಛಿಣ್ಣಸವ್ವಂಗೋ
ತಂ ವ್ವೇದಣಮಧಿಹಾಸಿಯ ಪಡಿವಣ್ಣೋ ಉತ್ತಮಂ ಅಟ್ಠಂ।

[ಕಾಕಂದಿ = ಕಾಕಂದಿ ಎಂಬ ಪೊೞಲೊಳ್ । ಅಭಯಘೋಸೋವಿ = ಅಭಯ ಘೋಷರೆಂಬ ರಿಷಿಯುಂ। ಚಂಡವೇಗೇಣ= ಚಂಡವೇಗನೆಂಬರಸನಿಂದಂ। ಛಿಣ್ಣ ಸವಂಗೊ = ಕೊಱೆಯೆಪಟ್ಟೆಲ್ಲಾಮೆಯ್ಯೆನೊಡೆಯನಾಗಿ । ತಂ ವೇದಣಂ = ಆ ವೇದನೆಯಂ । ಅಧಿಹಾಸಿಯ = ಲೇಸಾಗಿ ಸೈರಿಸಿ । ಪಡಿವಣ್ಣೋ = ಪೊರ್ದ್ದಿದೊಂ। ಉತ್ತಮಂ ಅಟ್ಠಂ = ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳರಾಧನೆಯಂ]

ಅದೆಂತೆಂದೊಡೆ -

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡು ಅಲ್ಲಿ ಕಾಕಂದಿಯೆಂಬುದು ಪೊೞಲ್ ಅದನಾಳ್ವೊಂ ಅಭಯಘೋಷನೆಂಬರಸನಾತನ ಮಹಾದೇವಿ ಅಭಯಮತಿಯೆಂಬಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತುಂ ಕಾಲಂ ಸಲೆ ಮತ್ತೊಂದು ದಿವಸಮರಸಂ ಪೊಱಮಟ್ಟು ಪೊಱವೊೞಲ ಶೋಭೆಯಂ ತೊೞಲ್ದು ನೋಡುತ್ತಿರ್ಪ್ಪನ್ನೆಗಂ ಒರ್ವ ಮೀಂಗುಲಿಗನೊಂದಾಮೆಯಂ ಬಾೞೆವಾೞೆ ನಾಲ್ಕು ಕಾಲಂ ಕಟ್ಟಿ ಬಳ್ಳಿಯಂ ಕೊರಲೊಳ್ ತಗುೞ್ಚಿಯೆೞಲೆ ಪಿಡಿದುಕೊಂಡು ಪೊೞಲ್ಗಿದಿರಂ ಬರ್ಪ್ಪೊನನರಸಂ ಕಂಡು ತನ್ನ ಬಿನ್ನಣಮಂ ಮೆಱೆಯಲ್ ವೇಡಿ ಗೆಂಟಱಿಂ ಚಕ್ರದಿಂದಂ ನಾಲ್ಕು ಕಾಲುಮನೊರ್ಮ್ಮೊದಲೆ ಪಱಿಯಿಟ್ಟೊಡೆ ಮೀಂಗುಲಿಗಂ ಪ್ರಾಣಮುಳ್ಳಂತಿರೆ ಆಮೆಯಂ ತನ್ನ ಮನೆಗೆ ಕೊಂಡು ಪೋದೊಡಾ ಇರುಳೊಳಾಮೆ ಪಿರಿದು ವೇದನೆಯಿಂದಂ ನಮೆದು ಸತ್ತಾ ಪೊೞಲೊಳ್ ಅಭಯಘೋಷ ನೃಪತಿಗಮಭಯಮತಿ ಮಹಾದೇವಿಗಂ ಚಂಡವೇಗನೆಂಬೊಂ ಮಗನಾಗಿ ಪುಟ್ಟಿದನ್ ಅಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತುಂ ಪಲವುಕಾಲಂ ಸಲೆ ಮತ್ತೊಂದು

ದಿವಸವುರಸನುವುರಸಿಯುಂ ಕರುವಾಡದ ಮೇಗಣ ನೆಲೆಯೊಳ್ ಭೋಗೋಪಭೋಗಸುಖಂಗಳನನುಭವಿಸುತ್ತುಂ ವಿನೋದದಿಂದಿರ್ಪನ್ನೆಗಂ ಚಂದ್ರಗ್ರಹಣ ಮಾದುದನರಸಂ ಕಂಡನಿತ್ಯಮಂ ಭಾವಿಸಿಯದುವೆ ವೈರಾಗ್ಯಕ್ಕೆ ಕಾರಣಮಾಗಿ ಚಂಡವೇಗನೆಂಬ ಮಗಂಗೆ ರಾಜ್ಯಪಟ್ಟಂಗಟ್ಟಿ ಬಾಹ್ಯಾಭ್ಯಂತರ ಪರಿಗ್ರಹ ಪರಿತ್ಯಾಗಂಗೆಯ್ದು ನಂದನರೆಂಬಾಚಾರ್ಯರ ಪಕ್ಕದೆ ತಪಂ ಬಟ್ಟು ಪನ್ನೆರಡು ವರ್ಷಮವರೊಡನಿರ್ದ್ದೆಲ್ಲಾ ಓದುಗಳಂ ಕಲ್ತು ಗುರುಗಳಂ ಬೆಸಗೊಂಡವರನುಮತದಿಂದೇಕವಿಹಾರಿಯಾಗಿ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೊರ್ ತಮ್ಮ ಮುನ್ನಿನ ಕಾಕಂಬಿ ಎಂಬ ಪೊಟಲ್ಗೆ ವಂದುದ್ಯಾನವನದೊಳ್ ವೀರಾಸನಮಿರ್ದೊರನ್ನೆಗಂ ಮುನ್ನಿನಾಮೆಯಪ್ಪ ಜೀವನವರ ಮಗನಪ್ಪ ಚಂಡವೇಗಂ ಕರುಮಾಡದ ಮೇಗಣ ನೆಲೆದೊಳಿರ್ದ್ದು ನೋಂಟಕ್ಕೆ ಗೆಂಟು ಪೋಗೆ ಚಕ್ರಮನಿಟ್ಟೊಡಾ ಚಕ್ರಂ ಬಂದು ರಿಷಿಯರೆರಡುಂ ಕೈಯುಂ ಕಾಲುಮಂ ಮೊಕ್ಕನೆವೋಗೆ ಕೊಂಡೊಡೆ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಜಾವಜ್ಜೀವಂ ನಿವೃತ್ತಿಗೆಯ್ದು ವೇದನೆಯಂ ಸೈರಿಸಿ ಶುಭ ಪರಿಣಾಮದಿಂದಂ ರತ್ನತ್ರಯಮಂ ಸಾಧಿಸಿ ಪದಿನಾಲ್ಕನೆಯ ಪ್ರಾಣತವೆಂಬ ಕಲ್ಪದೊಳ್ ಇಪ್ಪತ್ತು ಸಾಗರೋಪಮಾಯುಷ್ಯಮನೊಡೆಯನಿಂದ್ರನಾಗಿ ಪುಟ್ಟಿದೊಂ

ಮತ್ತೆ ಪೆಱರುಮಾರಾಧಕರುಂ ರತ್ನತ್ರಯಮನಾರಾಧಿಸುತ್ತಿರ್ದ್ದ ಭವ್ಯರ್ಕಳ್ ಅಭಯ ಘೋಷ ಭಟಾರರಂ ಮನದೆ ಬಗೆದು ಪಸಿವುಂ ತೃಷಿಯುಮೇಱುಂ ಬೇನೆಯುಂ ವ್ಯಾಧಿಯುಂ ಶೀತ ವಾತೋಷ್ಣಂಗಳುಮೆಂದಿವು ಮೊದಲಾಗೊಡೆಯ ದುಃಖಂಗಳಂ ಸೈರಿಸಿ ಪರಮ ಶುದ್ಧ ಸಹಜ ದರ್ಶನ ಜ್ಞಾನಚರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

■

೧೩. ವಿದ್ಯುಚ್ಚೋರನೆಂಬ ರಿಸಿಯ ಕತೆ

ವಿದ್ಯುಚ್ಚೋರನೆಂಬ ರಿಷಿಯ ಕಥೆಯಂ ಪೇೞ್ವೆಂ

ಗಾಹೆ|| ದಂಸೇಹಿಯ ಮಸಕೇಹಿಯ ಖಜ್ಜಂತೋ ವೇದಣಂ ಪರಮಘೋರಂ
ವಿಜ್ಜುಚ್ಚೋರೋ ಅಧಿಹಾಸಿಯ ಪಡಿವಣ್ಣೋ ಉತ್ತಮಂ ಅಟ್ಠಂ

[ದಂಸೇಹಿಯ = ಚಿಕ್ಕುಟುಗಳಿಂದಂ । ಮಸಕೇಹಿಯ = ಗುಂಗುಱುಗಳಿಂದಂ । ಖಜ್ಜಂತೊ = ತಿನೆಪಡುತಿರ್ದೋನಾಗಿ । ವೇದಣಂ = ವೇದನೆಯಂ । ಪರಮಘೋರಂ = ಆದಮಾನು ಕಡಿದಪ್ಪುದಂ । ವಿಜ್ಜುಚ್ಚೋರೋ =ವಿದ್ಯುಚ್ಚೋರನೆಂಬ ರಿಷಿ । ಅಧಿಹಾಸಿಯ =ಲೇಸಾಗಿ ಸೈರಿಸಿ । ಪಡಿವಣ್ಣೋ =ಪೊರ್ದ್ದಿದೊಂ । ಉತ್ತಮಂ ಅಟ್ಠಂ = ಮಿಕ್ಕದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ]

||ವ|| ಅಂದೆಂತೆಂದೊಡೆ

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ವಿದೇಹಮೆಂಬುದು ನಾಡು ಅಲ್ಲಿ ಮಿಥಿಲೆಯೆಂಬುದು ಪೊೞಲ್ ಅದನಾಳ್ವೊಂ ಪದ್ಮರಥನೆಂಬೊನರಸನ ಸಂತತಿಯಿಂ ಬಂದ ವಾಮರಥನೆಂಬೊನರಸನಾತನ ಮಹಾದೇವಿ ಬಂಧುಮತಿಯೆಂಬೊಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಂ ಪಲವು ಕಾಲಂ ಸಲೆ ಮತ್ತಾ ಪೊೞಲೊಳ್ ಯಮದಂಡನೆಂಬೊಂ ತಳಾಱಂ ಮತ್ತಲ್ಲಿರ್ಪೊಂ ವಿದ್ಯುಚ್ಚೋರನೆಂಬೊಂ ಕಳ್ಳನಾತಂ ಜೃಂಭಿನಿ ಸ್ತಂಭಿನಿ ಮೋಹಿನಿ ಸರ್ಷಪಿ ತಾಳೋದ್ಘಾಟಿನಿ ವಿದ್ಯಾಮಂತ್ರ ಚೂರ್ಣಯೋಗ ಘುಟಿಕಾಂಜನಮೆಂದಿವು ಮೊದಲಾಗೊಡೆಯ ತಸ್ಕರ ಶಾಸ್ತ್ರಂಗಳೊಳಾದಮಾನುಂ ಕುಶಲನಂತಪ್ಪ ಕಳ್ಳಂ ಪೊೞಲ ಕಸವರಂಗಳನಿರುಳ್ ಕಳ್ದು ಪೊೞಲ್ಗೆ ನಾಡೆಯಂತರದೊಳೊಂದು ಪರ್ವತಮುಂಟಲ್ಲಿ ಪಿರಿದೊಂದು ಗುಹೆಯುಂಟದಱೊಳಗೆ ಕಳ್ದ ಕಸವರಂಗಳೆಲ್ಲಮಂ ಪೂೞ್ಟಿಟ್ಟು ಗುಹೆಯ ಬಾಗಿಲಂ ಪಿರಿದೊಂದು ಸಿಲೆಯಂ ತಂದಿಟ್ಟು ಮುಚ್ಚಿ ಬಂದು ಪಗಲೆಲ್ಲಂ ಪಾೞ್ದೇಗುಲದೊಳಂಜನಮೆಚ್ಚಿ ತಾಂ ತೊನ್ನನಾಗಿ ಮುರುಂಟಿದ ಕೈಯುಂ ಕಾಲುಂ ಬೆರಸು ಮೂಗೊಳಗರ್ದ್ದು ರಸಿಗೆ ಸುರಿಯೆ ನೊಱವುಗಳ್ಮುಸುಱಿಕೊಂಡು ತಿನೆ ದೇಸಿಗನಾಗಿ ಲೋಗರ ಮನೆಗಳೊಳ್ ಭೈಕ್ಷಮಂ ಬೇಡಿ ಮನೆಮನೆಯಂ ತೊೞಲ್ದು ತನ್ನ ತೊನ್ನುಗೊಂಡಿರ್ಪುದನಱಿಪುತ್ತುಮಿಂತು ಪಗಲೆಲ್ಲಮಿರ್ದಿರುಳಪ್ಪಾಗಳ್ ದಿವ್ಯಮಪ್ಪ ತನ್ನ

ಸ್ವಾಭಾವಿಕಮಪ್ಪ ಮುನ್ನಿನ ರೂಪಂ ಕೈಕೊಂಡು ಪುಟ್ಟಿಗೆಯನುಟ್ಟು ಮೆಯ್ಯಂ ಪೂಸಿ ಪೂವಂ ಮುಡಿದು ಕರ್ಪೂರಸಂಮಿಶ್ರೀತಮಪ್ಪ ತಂಬುಲಂದಿನುತ್ತುಂ ಸೂಳೆಗೇಱಿಗಳಂ ತೊಟಿಲ್ದು ತನ್ನಂ ಮೆಱೆಯುತ್ತಂ ಭೋಗೋಪಭೋಗಂಗಳ್ಗೆ ಕಸವರಮಂ ಕೊಟ್ಟನುಭವಿಸುತ್ತಮಾರುಮಱಿಯಂತಿರ್ದ್ದು ಬಚ್ಚರ ದೂಸಿಗರ ನಿಯೋಗಿಗಳಗ್ಗಳಮಪ್ಪ ಸೂಳೆಯರ ಸಾಮಂತರ ಕಸವರಂಗಳೆಲ್ಲಮಂ ಕಳ್ದು ಮತ್ತೊಂದು ದಿವಸಂ ಪದ್ಮರಥಂಗೊಸೆದಚ್ಯುತೇಂದ್ರನಟ್ಟಿದ ದಿವ್ಯಮಪ್ಪ ಸರ್ವ್ವರುಜಾಪಹಾರಮೆಂಬ ಹಾರಂ ಸಂತತಿಯಿಂ ವಾಮರಥಂಗೆ ಬಂದುದಂ ವಾಮರಥಂ ಕರುಮಾಡದೇೞನೆಯ ನೆಲೆಯೊಳ್ ತನ್ನ ಲುಂದುವೋವರಿಗೆಯ ಪುಡುಕೆಯೊಳಿಟ್ಟೆಲ್ಲಾ ಕಾಲಮುಂ ಗಂಧ ಪುಷ್ಪ ದೀಪ ಧೂಪಾಕ್ಷತಂಗಳಿಂದರ್ಚ್ಚಿಸುತ್ತುಂ ಪೊಡೆವಡುತ್ತಿರ್ಕ್ಕುಮಂತಪ್ಪ ಹಾರಮಂ ವಿದ್ಯುಚ್ಚೋರನಂಜನಮಂ ಕಣ್ಣೊಳೆಚ್ಚಿ ಯಾರುಂ ತನ್ನಂ ಕಾಣದಂತಾಗಿರೆ ಅರಮನೆಯಂ ಪೊಕ್ಕು ಅರಸನ ಮಱಲುಂದುವೋವರಿಯಂ ಪೊಕ್ಕು ತಲೆದೆಸೆಸೊಳರ್ಚ್ಚಿಸಿರ್ದ್ದ ಪುಡುಕೆಯಂ ತೆಱೆದು ಹಾರಮಂ ಕೊಂಡರಮನೆಯಿಂ ಪೊಱಮಟ್ಟು ಪೋಗಿ ಪೊಱವೊೞಲ ಗುಹೆಯೊಳ್ ಪೂೞ್ದಿಟ್ಟು ಪೊೞಲ್ಗೆ ವಂದು ಮುನ್ನಿನಂತೆ ತೊನ್ನರೂಪಂ ಕೈಗೊಂಡಿರ್ದ್ದಂ ಮತ್ತಿತ್ತಲರಸಂ ನೇಸರ್ಮೂಡೆ ಹಾರಮಂ ಕಾಣದೆ ಆಸ್ಥಾನ ಮಂಟಪದೊಳ್ ಸಿಂಹಾಸನ ಮಸ್ತಕಸ್ಥಿತನಾಗಿರ್ದ್ದು ತಳಾರನಪ್ಪ ಯಮದಂಡಂಗೆ ಬಳಿಯನಟ್ಟಿ ಬರಿಸಿ ಇಂತೆಂದನ್

ಎಲವೋ ಯಮದಂಡಾ ಪೊೞಲ ಪಾರ್ವರ ಪರದರ ಸೂಳೆಯರ ಒಕ್ಕಲು ಮಕ್ಕಳ ಕಸವರಮೆಲ್ಲಮಂ ಕಳ್ದೊಡಮಾರಯ್ಯದೆ ಕೆಮ್ಮಗಿರ್ಪೆಯಲ್ಲದೆಯುಮೆಮ್ಮ ಸೆಜ್ಜೆವೋವರಿಯಂ ಕಳ್ಳಂ ಪೊಕ್ಕು ಪುಡುಕೆಯಂ ತೆಱೆದಿಂದ್ರನಿತ್ತ ಕುಲಧನಮಪ್ಪ ಹಾರಮಂ ಕೊಂಡು ಪೋದಂ ಬೇಗಂ ಕಳ್ಳನನಾರಯ್ದು ಹಾರಮಂ ಕೊಂಡು ಬಾ ಅಲ್ಲದಾಗಳ್ ಕಳ್ಳಂಗೆ ತಕ್ಕ ನಿಗ್ರಹಮಂ ನಿನಗೆ ಮಾಡಿದಪ್ಪೆನೆಂದೊಡೆ ತಳಾರನೆಂದಂ ದೇವಾ ಏೞು ದಿವಸಮೆನಗೆಡೆಯನೀವುದೇೞು ದಿವಸದೊಳಗೆ ಕಳ್ಳನ ನಾರಯ್ಯಲಾಱದಾದಳ್ ದೇವರೆನ್ನಂ ಮೆಚ್ಚುಕೆಯ್ವುದೆಂದೊಡರಸನಂತೆಗೆಯ್ಕೆಂದೆಡೆ ಅರಮನೆಯಿಂದಂ ಪೊಱಮಟ್ಟು ಪೊೞಲೊಳಂ ಸೂಳೆಗೇಱಿಗಳೊಳಮಂಗಡಿಗಳೊಳಂ ಬಸದಿಗಳೊಳಂ ವಿಹಾರಂಗಳೊಳಂ ಕೇರಿಗಳೊಳಂ ಆರವೆಗಳೊಳಂ ಪೊಱವೊೞಲೊಳಂ ಕೆಲದ ಪೊೞಲ್ಗಳೊಳಂ ಆಱುಂ ದಿವಸಂ ನಿರಂತರಮಾರಯ್ದೆಲ್ಲಿಯುಂ ಕಾಣದೇೞನೆಯ ದಿವಸದಂದು ಪಾೞ್ದೇಗುಲದೊಳಿರ್ದ್ದು ತೊನ್ನಂ ಪೋಪಾಗಳಳಿಱುವಳ್ಳಮಂ ಕಂಡದಂ ವಿದ್ಯಾಧರ ಕರಣದಿಂ ಲಂಘಿಸಿ ಪೋಪುದಂ ಯಮದಂಡಂ ಗೆಂಟಱೊಳಿರ್ದ್ದು ಕಂಡಿವನೆ ಕಳ್ಳನೆಂದು ನಿಶ್ಚಯಿಸಿ ಪಿಡಿದರಮನೆಗೆ ಪುಯ್ಯಲಿಡೆಯಿಡೆ ಕೊಂಡು ಪೋಗಿಯರಸಂಗೆ ಕಳ್ಳನಂ ತಂದೆನೆಂದು ತೋಱಿ ಈತಂ ಕಳ್ಳನೆಂದು ಅರಸಂಗೆ ವೇೞ್ದೊಡೆ ತೊನ್ನನಿಂತೆಂದಂ

ದೇವಾ ನಾಂ ಕಳ್ಳನಲ್ಲದುದಕ್ಕೆ ಪೊೞಲೆಲ್ಲಮಱಿಗುಂ ಕಳ್ಳನನಾರಯ್ಯಲಾಱದೆ ತನ್ನ ಸಾವಿಂಗಂಜಿ ಎನ್ನಂ ಬಡವನ ದೇಸಿಗನಂ ಪೊಳಲೊಳ್ ಬೈಕಂದಿರಿದುಂಡು ಬಾೞ್ವನಂ

ಪಿಡಿಕುಕೊಂಡು ಬಂದು ಕೊಲಿಸಿದಪ್ಪನೆಂದೊಡೆ ತಳಾಱಂ ಕಳ್ಳರನಾರಯ್ವ ಶಾಸ್ತ್ರಂಗಳೊಳಾದಮಾನುಂ ಕುಶಲನಪ್ಪುದಱಿಂದರಸಂಗಿಂತೆಂದನ್

ಈತಂ ತನ್ನ ರೂಪುಗಳೆದಿರುಳ್ ಪೊಱಲೆಲ್ಲಮಂ ಕಳ್ದು ದೆವಸಕ್ಕೀ ಪಾಂಗಿನೊಳ್ ತೊನ್ನನಾಗಿರ್ಪೊಂ ನೀಮುಂ ನಂಬದಾಗಳ್ ಪ್ರತ್ಯಯಮಂ ಮಾಡಿ ತೋರ್ಪೆನೆಂದಾಗಳ್ ಪ್ರತಿಘುಟಿಕಾಂಜನಂಗಳಂ ತೊನ್ನನ ಕಣ್ಣೊಳೆಚ್ಚಿದೊಡೆ ದಿವ್ಯಮಪ್ಪ ತನ್ನ ಮುನ್ನಿನ ರೂಪಾಗೆ ಇಂತೆಂದಂ ಈತಂ ಘುಟಿಕಾಂಜನ ಕುಹಕಂ ಇಂದ್ರಜಾಲಂಗಳಂ ಬಲ್ಲೊನಪ್ಪುದಱಿಂದೆಲ್ಲಾ ರೂಪುಗಳಂ ಮಾಡಲ್ ಬಲ್ಲೊನೆಂದೊಡೆ ತಳಾಱನೆಂದಂ ಪೆಱರ್ಗ್ಗೆ ಮಾಡೀ ಪ್ರತ್ಯಯಮಂ ತೋರ್ಪ್ಪೆನೆಂದರಸನನುಮತದಿಂದರಸಿಯರ ಸೂಳೆಯರ ಕಣ್ಗಳೊಳ್ ಘುಟಿಕಾಂಜನಂಗಳನೆಚ್ಚಿದೊಡನಿಬರುಂ ತೊನ್ನೆಯರಾಗಿರ್ಪ್ಪನ್ನೆಗಂ ಮತ್ತಂ ಬೞಿಕ್ಕೆ ಪ್ರತಿಘುಟಿಕಾಂಜನಂಗಳನೆಚ್ಚಿದೊಡೆ ಸ್ವಾಭಾವಿಕಮಪ್ಪ ತಮ್ಮ ಮುನ್ನಿನ ರೂಪುಗಳಂ ಕೈಕೊಂಡಿರ್ದ್ದೋರಾಗಳರಸಂಗೆ ನಂಬುಗೆಯಾಗೆ ನೆಟ್ಟನಿವಂ ಕಳ್ಳನಪ್ಪೊನೀತನಂ ದಂಡಿಸೆಂದು ಯಮದಂಡಂಗೆ ಬೆಸವೇೞ್ದೊಡಾತನಂತೆಗೆಯ್ವೆನೆಂದಾತನಂ ತನ್ನ ಮನೆಗೊಡುಗೊಂಡು ಪೋಗಿ ಮಾಘ ಮಾಸದಿರುಳ್ ಕಡುಸೀತದೊಳ್ ಘೋರಮಪ್ಪ ಮೂವತ್ತೆರಡ್ ದಂಡಣೆಗಳಿಂದಂ ನೀಡುಂ ಕಳ್ಳನಂ ದಂಡಿಸೆಯನಿತುಮಂ ಬಾೞಿ ವಾೞಿ ಅವಯವದೆ ಸೈರಿಸಿಯುಂ ಕಳ್ಳನಲ್ಲಂ ಅಯ್ಯೋ ಬಲ್ಲಾಳ್ತನದಿಂದೆನ್ನಂ ತಳಾಱಂ ಕೊಂದಪ್ಪನೆಂದಳಱಿ ಪುಯ್ಯಲಿಡೆ ತಳಾಱಂಗೆ ಕಳ್ಳನೀತನಲ್ಲೆಂಬುದೊಂದು ನಂಬುಗೆಯಾಗಿ ನೇಸಱ್ ಮೂಡೆಯರಮನೆಗೆ ಪೋಗಿಯರಸಂಗಿಂತೆಂದುಂ ಬಿನ್ನಪಂ ಗೆಯ್ದಂ

ದೇವಾ ಮೂವತ್ತೆರಡ್ ಘೋರಮಪ್ಪ ದಂಡಣೆಗಳಿಂದಂ ಕಳ್ಳನಂ ದಂಡಿಸಿ ನೋಡಿದೆನಾತನಮೋಘಂ ಕಳ್ಳನಲ್ಲೆನ್ನಂ ದೇವರ್ ಮೆಚ್ಚುಕೆಯ್ವುದೆಂದೊಡರಸಂ ಶ್ಮಶಾನದ ಸೂಲದೊಳ್ ಯಮದಂಡನನಿಕ್ಕಿಮೆಂದಾಳ್ಗಳ್ಗೆ ಬೆಸವೇೞ್ದೊಡವರುಮಾತನಂ ಶ್ಮಶಾನಕ್ಕೆೞೆದುಕೊಂಡು ಪೋಗಿ ದರ್ಕ್ಕಂ ಬಸಿದು ಸೂಲದೊಳಿಕ್ಕುವಾಗಳವರೊಡವೋಗಿ ತೊನ್ನಂ ರೂಪಪರಾವರ್ತನಂ ಗೆಯ್ದು ತನ್ನ ಸ್ವಾಭಾವಿಕಮಪ್ಪ ವಿದ್ಯುಚ್ಚೋರನಪ್ಪ ದಿವ್ಯರೂಪಂ ಕೈಕೊಂಡು ಸೂಲದೊಳಿಕ್ಕಲೀಯದೆ ಅಡ್ಡಮಾಗಿರ್ದ್ದರಸನ ಕಾಪಿನವರನೆಂದನ್ ಎಲೆ ಅಣ್ಣಗಳಿರಾ ನೀಮೀತನಂ ಕೊಂದಿರಿ ಈತನುಂ ಸೂಲದೊಳಿಕ್ಕೆ ಪಟ್ಟನಾಗಿ ಸತ್ತಪನೆಂದವರೊಳ್ ನುಡಿದು ತಳಾಱನನಿಂತೆಂದನ್ ಎಲೆ ಗಳಾ ಯಮದಂಡಾ ನೀನುಮಾನುಂ ಕಿಱಿಯಂದೊರ್ವ್ವರೆಯುಪಾಧ್ಯಾಯರ ಪಕ್ಕದೊಳ್ ಓದುವಂದು ನಂದನವನದೊಳಗೆ ನೀನೆನ್ನ ಪೂಣ್ದ ಪ್ರತಿಜ್ಞೆಯಂ ನೆನೆದಾ ಒಂದುಂ ದೋಷಮಿಲ್ಲದೆ ನಿನ್ನಂ ಕೊಲಿಸಿದೆನೊ ಕೊಲಿಸೆನೊ ಪೂಣ್ದಪ್ರತಿಜ್ಞೆಯಂ ನೆನೆವೆಯೊ ನೆನೆಯೆಯೊ ಎನೆ ಯಮದಂಡನೊಳ್ಳಿತ್ತಾಗಿ ನೆನೆದೆನೆಂದೊಡೆ ವಿದ್ಯುಚ್ಚೋರಕನಿಂತೆಂದಂ ಮತ್ತೀಗಳ್ ನೀನೇನ್ ಸತ್ತೆಯೊ ಸಾಯ್ದೆಯೊ ಮತ್ತೇನೊ ಎಂದಾಗಳ್ ಯಮದಂಡನೆಂದಂ ದೇವಾ ನೀಂ ಗೆಲ್ದೆಯಾಂ ಸೋಲ್ತೆನುಂ ಸತ್ತೆನುಮೆಂದಿರ್ವ್ವರ

ಪದಿರಿನಿಂ ನುಡಿದ ಸೂೞ್ಮಾತುಗಳಂ ಕಾಪಿನವರುಂ ಪೊೞಲ ಜನಮುಂ ಕೇಳ್ದು ಚೋದ್ಯಂಬಟ್ಟು ಬೞಿಗಾಗಿರ್ದೊಡೆ ವಿದ್ಯುಚ್ಚೋರಂ ಕಾಪಿನವರನಿಂತೆದನಿನ್ನಮೀತನುಮನಮರಸನಲ್ಲಿಗೆ ಕೊಂಡು ಪೋಗಿಯರಸನ ಮುಂದೀತಂಗಮೆನಗಂ ಮಾತುಂಟಲ್ಲಿ ನುಡಿದ ಬೞಿಕ್ಕಂ ಅರಸನೀತನಂ ಮೆಚ್ಚುಕೆಯ್ಗ್ಗಯೆಂತುಂ ಕೊಲವೇೞ್ಕೊಡಂ ಮೂಱು ಸೂೞ್ ಬೆಸಗೊಂಡೊಡಲ್ಲದೆ ಕೊಲಲಾಗದೆಂದು ನೀತಿ ಶಾಸ್ತ್ರದೊಳ್ ಪೇೞ್ದುದಱಿಂದೆಮ್ಮಿರ್ವ್ವರುಮನರಮನೆಗೆ ಕೊಂಡು ಪೋಗಿಯರಸಂಗೆ ತೋಱಿಮೆಂದೊಡಾ ಕಾಪಿನವರೀರ್ವ್ವರುಮನರಸನಲ್ಲಿಗೆ ಕೊಂಡು ಪೋಗಿ ಇಂತೆಂದು ಬಿನ್ನಪಂಗೆಯ್ದರ್

ದೇವಾ ಈತಂ ಯಮದಂಡನಂ ಕೊಲಲೀಯದೆ ಬಾರಿಸಿದನೆಂದು ವಿದ್ಯುಚ್ಚೋರನಂ ತೋಱಿ ನುಡಿದೊಡರಸನೇಕೆ ನೀಂ ಬಾರಿಸಿದೆಯೆಂದು ಬೆಸಗೊಂಡೊಡೆ ವಿದ್ಯುಚ್ಚೋರನೆಂದಂ ಯಮದಂಡಂಗೇನುಂ ಪೊಲ್ಲಮೆಯುಂ ದೋಸಮುಮಿಲ್ಲ ನಿಮ್ಮ ದೇವತಾರಕ್ಷಿತಮಪ್ಪ ಸರ್ವ್ವರುಜಾಪಹಾರಮೆಂದು ಮೊದಲಾಗಿ ಪೊೞಲ ಕಸವರಮನಿರುಳೀ ರೂಪಿನೊಳ್ ಕಳ್ದು ಪಗಲೆಲ್ಲಂ ತೊನ್ನನಾಗಿ ಪಾೞ್ದೇಗುಲದೊಳಿರ್ಪ್ಪೆನದಱಿಂದೆನ್ನಂ ಕೊಲ್ಲಿಮೀತಂಗೇನುಂ ದೋಷಮಿಲ್ಲೆಂದೊಡರಸನೆಂದನಾ ಕಳ್ದ ಕಸವರಮೆಲ್ಲಮನೇಗೆಯ್ದೆಯೆಂದು ಬೆಸಗೊಂಡೊಡನಿತುಮಿರ್ದ್ದುದವಱು ಸಾಸಿರ ದೀನಾರಮೊನ್ನ ಸೂಳೆಗೆ ಬಿಯಮಾದುವುಳಿದುವೆಲ್ಲಂ ವಣ್ಣವಳಿಯದಿರ್ದ್ದುವೆಂದೊಡರಸಂ ವಿದ್ಯುಚ್ಚೋರನಂ ಹಾರಮಂ ಕೊಂಡು ಬಾ ಪೊೞಲವರ ಕಸವರಮಂ ಮಡಗಿದೆಡೆಯಂ ತೋಱೆಂದೊಡಾತನೊಡನೆ ಪೊೞಲ ಜನಮುಮನಟ್ಟೆ ಕಾಪುವೆರಸು ಪೋಗಿ ಪೊೞಲ್ಗೆ ನಾಡೆಯಂತರದೊಳ್ ಪಿರಿದೊಂದು ಪರ್ವತಮುಂಟಲ್ಲಿಯೊಂದು ವಿಸ್ತೀರ್ಣ ಗುಹೆಯುಂಟದಱ ಬಾಗಿಲಂ ಮುಚ್ಚಿರ್ದ ಪಿರಿಯ ಸಿಲೆಯಂ ಕಳೆದದಱೊಳಗೆ ಪೊಕ್ಕು ಹಾರಮಂ ಕೊಂಡು ಪೊೞಲ ಜನಮೆಲ್ಲನೆಂದಂ ನಿಮ್ಮ ನಿಮ್ಮ ಕಸವರಮಪ್ಪುದನಾರಯ್ದು ಪಲ್ಲಟಿಸಲೀಯದೆ ನೋಡಿಕೊಳ್ಳಿಯೆಂದು ತೋಱಿದೊಡವರುಂ ತಂತಮ್ಮ ಕಸವರಮೆಲ್ಲಮನಾಯ್ದು ಕೊಂಡರ್ ಮತ್ತೆ ವಿದ್ಯುಚ್ಚೋರನುಂ ಹಾರಮಂ ಕೊಂಡು ಪೋಗಿ ಅರಸಂಗೊಪ್ಪಿಸಿದೊಡರಸನಿಂತೆಂದು ವಿದ್ಯುಚ್ಚೋರನಂ ಬೆಸಗೊಂಡಂ ಮಾಘಮಾಸದಿರುಳೀ ಸೀತದೊಳ್ ನಾಲ್ಕು ಜಾವಮುಂ ಮೂವತ್ತೆರಡುಂ ಘೋರಮಪ್ಪ ದಂಡನೆಯನೆಂತು ಸೈರಿಸಿದೆಯೆಂದೊಡಾತನಿಂತೆದಂರಸಂಗೆ ಪೇೞ್ಗುಂ ದೇವಾ ಒಂದು ದಿವಸಂ ಸಹಸ್ರಕೂಟ ಚೈತ್ಯಾಲಯಕ್ಕೆ ಕಿಱಿಯಂದೆನ್ನನೋದಿಸುವೋಜರುಮಾನುಂ ಪೋಗಿಯೋಜಂ ದೇವರಂ ಬಂದಿಸುವನ್ನೆಗಂ ಚರಿತೆ ಪುರಾಣಂಗಳಂ ವಕ್ಕಾಣಿಸುತ್ತಿರ್ದ್ದ ಶಿವಗುಪ್ತರೆಂಬಾಚಾರ್ಯ್ಯರ ಪಕ್ಕದೆ ಕುಳ್ಳಿರ್ದ್ದು ಕೇಳುತ್ತಿರ್ಪನ್ನೆಗಂ ನರಕವ್ಯಾವರ್ಣನೆಯನಾ ಭಟಾರಿರಂತೆಂದು ಪೇೞ್ದುದಂ ಕೇಳ್ದೆಂ ಬ್ರತ ಶೀಲ ಗುಣಂಗಳಿಲ್ಲದರ್ಜೀವಂಗಳಂ ಕೊಲ್ವರುಂ ಬೇಂಟೆಯಾಡುವರುಂ ರಾಗ ದ್ವೇಷ ಲೋಭಂ ಕಾರಣಾಗಿ ಪುಸಿ ನುಡಿದು ಜೀವಂಗಳ್ಗೆ ಸಂತಾಪಮಂ ವಧೆಯುಮಂ ಮಾಡಿಸುವರುಮಾಱಿಡಿಗೊಳ್ವರುಂ ಕಳ್ವರುಂ ಪೆಱರ ಪೆಂಡಿರೊಳ್

ಮಱೆವಾಡ್ಡಿರುಂ ಅಪರಿಮಿತ ಪರಿಗ್ರಹಮಂ ನೆರಪುವರುಂ ಮತ್ತಂ ಮಧು ಮದ್ಯ -ಮಾಂಸಗಳಂ ಐದು ಪಾಲ್ಮರದ ಪಣ್ಗಳುಮಾಳಂಬೆಯುಂ ಜೇನ್ನೆಯ್ಯುಂ ಸಳಂಬಿನ ಪೂವುಮೆಂದಿವಂ ಸೇವಿಸುವರುಂ ಮತ್ತಮಗಮ್ಯಾಗಮನಮಂ ಅಪೇಯಾಪೇಯ ಭಕ್ಷ್ಯಾಭಕ್ಷ್ಯಮೆಂಬಿವಱೊಳ್ ನೆಗಱ್ದರುಂ ಪಂಚ ಮಹಾಪಾತಕಂಗಳಂ ಗೆಯ್ವೊರುಮಿವರೆಲ್ಲಂ ನಿವೃತ್ತಿ ಪರಿಣಾಮಮಿಲ್ಲದೆ ಕಾಲಂಗೆಯ್ದೀೞುಂ ನರಕಂಗಳೊಳ್ ಪುಟ್ಟಿ ದುಃಖಂಗಳನೆಯ್ದುವರ್

ಗಾಹೆ । ಅಚ್ಛಿಣಿಮೀಲಣಮೆತ್ತಂ ಣತ್ಥಿ ಸುಹಂ ದುಖ್ಖಮೇವ ಅಣುಬದ್ಧಾ
ಣಿರಯೇ ಣಿರಿಯಾಣಂ ಅಹೋಣಿಸಂ ಪಚ್ಚಮಾಣಾಣರಂ ॥

॥ವೃತ್ತ॥ ಕರಜನಿವೇಸಿತ ತೀಕ್ಷ್ಣಶಲಾಕಾಃ ।
ಕ್ರಕಚ ವಿಪಾಟಿತ ಭಿನ್ನ ಶರೀರಾಃ ।
ನರಕಭವೇ ವಿರಸಾ ವಿಷವಂತೇ ।
ಚಿರಮಪಿ ತತ್‌ಕ್ಷಣ ದುಃಖವಿಷಾದಃ ॥

ಮತ್ತಂ

॥ ಕಂದ ॥ ಇಱಿಕಿಱಿದನೊದಱಿ ಖೈರಂ
ದಱಿಮುಱಿ ನಿಟ್ಟೆಲ್ವನಱಿದು ನೆಱೆದೆದೆಗಳ್ ಬಾ ॥
ಯ್ದೆಱೆಯೆ ಪೊಸಪುಣ್ಗಳೊಳ್ ಪೊಯ್ ।
ಮಱುಗುವಿನಂ ಲೋಹವಾರಿಯಂ ಮಱುಗುವಿನಂ ॥

ಕಡಿ ಕಟಿವಮನುಡಿ ತೊಡೆಯಂ
ನಡನಡನಡಗುವಿನಮಡಸಿ ತಡೆಯದೆ ಖಳನಂ ॥
ಪಿಡಿದುಡಿಯೆ ಕಟ್ಟು ಮಿಡ ಮಿಡ ।
ಮಿಡುಕುವಿನಂ ಬಡಿಗೆಯೊಳೊಡೆಯೆ ಪೊಡೆ ಪೆಡತಲೆಯಂ ।

ಪಿಡಿಕೊಲ್ ಕಟ್ಟೆಱಿ ತಱಿ ಮುಱಿ
ಕಡಿ ನಡುವಂ ಕೊಱೆ ಕರುಳ್ಗಳಂ ತೆಗೆ ಮೊಗಮಂ ॥
ಸುಡುಪಿಡಿ ಬಡಿ ನಿಮಿರ್ದಿಱಿ ಬಯ್
ಕಡಂಗಿ ನುಂಗೆಂದು ಮುಸುಱಿ ನಾರಕರಾಗಳ್ ॥

ಮತ್ತಂ ಕೊಂತಂಗಳಿಂದಮಿಟ್ಟಿಗಳಿಂದಂ ಬಸುಱ ಕರುಳ್ ವೊಲೆಗಳ್ ನೆಲದೊಳ್ಸುರಿಯೆಯುಂ ಕುತ್ತುವುದುಂ ಮಿಟ್ಟಿಗಳೊಳಿಟ್ಟು ತೆಗೆವುವದುಂ ಕರಗಸದಿಂದ ಮರನಂ ಪೋೞ್ವಂತೆ ಕೈಯ್ಯಂ ಕಾಲುಮನಗಳ್ಚಿ ಪಿಡಿದಡಸಿ ಕಟ್ಟಿ ಯುದ್ದಂ ಬಾೞ್ವುದುಮಿಂತಿವು ಮೊದಲಾಗೊಡೆಯ ದುಃಖಂಗಳಂ ಕಣ್ಣೆಮೆಯಿಕ್ಕುವನಿತು ಪೊತ್ತಪ್ಪೊಡಮುಸಿರ್ ಪತ್ತಿಲ್ಲ

ದುತ್ಕೃಷ್ಟದಿಂದಮೇೞನೆಯ ನರಕದೊಳ್ ಮೂವತ್ತುಮೂಱು ಸಾಗರೋಪಮ ಕಾಲಂ ಬರೆಗಂ ದುಃಖಂಗಳನೆಯ್ದುವರ್ ಮತ್ತಂ ದಾನ - ಪೂಜೆ -ಶೀಲಮುಪವಾಸಮೆಂದಿಂತು ಚತುರ್ವಿಧಮಪ್ಪ ಶ್ರಾವಕ ಧರ್ಮದೊಳ್ ನೆಗೞ್ವವರುಂ ತಪಂ ಗೆಯ್ವವರುಂ ಸ್ವರ್ಗ್ಗಾಪವರ್ಗ್ಗ ಸುಖಂಗಳನೆಯ್ದುವರೆಂದು ಪೇೞೆ ಕೇಳ್ದು ಭಟಾರರ ಪಕ್ಕದೆ ಅಣುಬ್ರತ - ಗುಣಬ್ರತ - ಶಿಕ್ಷಾಬ್ರತಮೆಂದಿಂತು ದ್ವಾದಶ ವಿಧಮಪ್ಪ ಶ್ರಾವಕಧರ್ಮಮುಮನರಹಂತ ಪರಮ ದೇವರೆ ದೇವರ್ ಕೊಲ್ಲದುದೆ ಧರ್ಮಂ ಬಾಹ್ಯಾಭ್ಯಂತರ ಪರಿಗ್ರಹಂಗಳಿಲ್ಲದುದೆ ತಪಮರಹಂತಂ ಪರಮ ದೇವರಾಗಮದೊಳ್ ಪೇೞೆಪಟ್ಟ ಜೀವಾಜೀವ - ಪುಣ್ಯ - ಪಾಪಾಸ್ರವ ಸಂವರ - ನಿರ್ಜರ - ಬಂಧ - ಮೋಕ್ಷಮೆಂದಿಂತು ನವ ಪದಾರ್ಥಂಗಳ ಷಡ್ದ್ರವ್ಯಂಗಳಂ ನಂಬುವುದು ಸಮ್ಯಕ್ತ್ವಮೆಂಬುದಕ್ಕುಂ ಆ ಸಮಕ್ತ್ವದತಿಚಾರಂಗಳ್ -ಶಂಕಾದ್ಯಷ್ಟಮಲಂಗಳುಮೆಂಟು ಮದಂಗಳುಂ ಮೂಱು ಮೂಢಮುಮಾಱನಾಯತನ ಸೇವೆಗಳುಮೆಂದಿಂತಿರ್ಪ್ಪತ್ತಯ್ದಕ್ಕುಂ ಅವಂ ಪಿಂಗಿಸಿ ನಿಃಶಂಕಾದ್ಯಷ್ಟ ಗುಣಂಗಳಿಂ ಕೂಡಿದ ಶುದ್ಧಮಪ್ಪ ಸಮ್ಯಕ್ತ್ವ ಪೂರ್ವ್ವಕಂ ಬ್ರತಂಗಳನೇಱಿಸಿ ಕೈಕೊಂಡು ಮತ್ತೆ ನರಕಗಂಳ ದುಃಖಂಗಳ ಕೇಳ್ವವಱ ಶತ - ಸಹಸ್ರ ಭಾಗಕ್ಕಪ್ಪೊಡಮೀದುಃಖಮಿಲ್ಲೆಂದು ಮನದೊಳ್ ಬಗೆದು ಮೂವತ್ತೆರಡುಂ ದಂಡಣೆಗಳಂ ಸೈರಿಸೆದೆನೆಂದೊಡರಸಂ ಕೇಳ್ದು ನಿನಗೊಸೆದೆಂ ಬೇಡಿಕೊಳ್ ನಿನ್ನ ಬೇಡಿದುದೆಲ್ಲಮಂ ಕುಡುವೆನೆಂದೊಡೆ ಪೆಱತೇನುಮನೊಲ್ಲೆ ನನ್ನ ಕೆಳೆಯನಪ್ಪ ಯಮದಂಡಂಗೆ ಕ್ಷಮಿಯಿಸುವುದನೆ ಬೇಡಿದೆನೆಂದೊಡರಸನಿಂತೆಂದು ಬೆಸಗೊಂಡಂ - ಯಮದಂಡಂ ನಿನಗೆಂತು ಕೆಳೆಯನಾದಂ ಮತ್ತೆ ನೀಂ ಶ್ರಾವಕ ಬ್ರತಂಗಳಂ ಕೈಕೊಂಡೆಯಪ್ಪೊಡೇಕೆ ಕಳ್ವೆಯೆಂದು ಬೆಸಗೊಂಡೊಡಾತನಿಂತೆಂದಂ - ಯಮದಂಡನೆನಗೆ ಕೆಳೆಯನಪ್ಪುದುಮಂ ನಿಮ್ಮ ಪೊೞಲ ಕಸವರಮಂ ಕಳ್ದುದಕ್ಕೆ ಕಾರಣಮುಮಂ ಪೇೞ್ವೆಂ ಕೇಳ್ ಅರಸಾ ಎಂದು ವಿದ್ಯುಚ್ಚೋರನಿಂತೆಂದು ಪೇೞಲ್ ತೊಡಂಗಿದಂ

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ತಿಲಕಮನೆ ಪೋಲ್ವುದು ದಕ್ಷಿಣಾಪಥದೊಳಾಭೀರಮೆಂಬುದು ನಾಡು ಅಲ್ಲಿ ವೆಣ್ಣೆಯೆಂಬ ತೊಱೆಯದಱ ತಡಿಯೊಳ್ ವೇಣಾತಟಮೆಂಬುದು ಪೊೞಲ್ ಅದು ಪೊೞಲ ಗುಣಂಗಳಿನಾದಮಾನುಂ ರಮ್ಯಮಪ್ಪುದು ಸ್ವರ್ಗ್ಗಮನೆ ಪೋಲ್ವುದದನಾಳ್ವೊಂ ಜಿತಶತ್ರುವೆಂಬೊನರಸನಾತನ ಮಹಾದೇವಿ ವಿಜಯಮತಿಯೆಂಬೊಳಾ ಇರ್ವ್ವರ್ಗ್ಗಂ ಮಗನೆ ನಾಂ ವಿದ್ಯುಚ್ಚೋರನೆಂಬೆಂ ಮತ್ತಾ ಪೊೞಲೊಳ್ ಯಮಪಾಶನೆಂಬೊಂ ತಳಾರನಾತನ ಪೆಂಡತಿ ನಿಜಗುಣದೇವತೆಯೆಂಬೊಳಾ ಇರ್ವ್ವರ್ಗ್ಗಂ ಮಗನೀತಂ ಯಮದಂಡನೆಂಬೊಂ ಮತ್ತಾಮಿರ್ವ್ವರುಮುಂ ಸಮಾನ ವಯಸರಪ್ಪುಂ ಅಯ್ದಾಱು ವರ್ಷದ ಪ್ರಾಯದಂದು ಶ್ರಾವಕನಪ್ಪ ಸಿದ್ಧಾರ್ಥನೆಂಬುಪಾಧ್ಯಾಯರ ಪಕ್ಕದೆ ಇರ್ವ್ವರುಮನೋದಲಿಟ್ಟೊಡೇೞೆಂಟು ಬರಿಸದೊಳಗೆ ವ್ಯಾಕರಣ- ಪ್ರಮಾಣ -ಛಂದಮಳಂಕಾರ -ನಿಘಂಟು-ಕಾವ್ಯ-ನಾಟಕ- ಸಾಮುದ್ರಿಕ ವಾತ್ಸ್ಯಾಯನಂ ಶಾಲಿಹೋತ್ರಂ ಪಾಳಕಾಪ್ಯ - ಚಾಣಾಕ್ಯ ವೈದ್ಯಂ ಮೊದಲಾಗೊಡೆಯ ಶಾಸ್ತ್ರಂಗಳೆಲ್ಲಮನಿರ್ವ್ವರುಂ ಕಲ್ತು ಬೞಿಕ್ಕೀತಂ ತಳಾಱನ

ಮಗನಪ್ಪುದಱಿಂ ತನಗೆ ತಕ್ಕ ಕಳ್ಳರನಾರಯ್ದು ತೆಱನಂ ಪೇೞ್ದು ಸುರಖಿಮೆಂಬುದಂ ಕಲ್ತೊನಾನುಂ ಕಳ್ವುಪಾಯಮಂ ಪೇೞ್ದು ಕರಪಟಶಾಸ್ತ್ರಮಂ ಕಲ್ತೆನಿಂತೆಮಗನ್ಯೋನ್ಯ ಪ್ರೀತಿಯಿಂದಂ ಕಾಲಂ ಸಲೆ ಮತ್ತೊಂದು ದಿವಸಂ ಇರ್ವ್ವರುಂ ವನಕ್ರೀಡೆಯಾಡಲೆಂದಿಂದ್ರೋಪಮಮೆಂಬ ವನಕ್ಕೆ ಪೋಗಿಯಲ್ಲಿಯಶೋಕ ಪುನ್ನಾಗ ವಕುಳ-ತಿಳಕ-ಚಂಪಕ-ಕ್ರಮುಕ- ನಾಳಿಕೇರ -ಖರ್ಜೂರ-ಜಂಬು-ಜಂಬೀರ-ಪನಸ-ದಾಡಿಮ -ಕದಳಿ-ದ್ರಾಕ್ಷಿ-ಸಹಕಾರಂ ಮೊದಲಾಗೊಡೆಯ ಪಲವು ತೆಱದ ವೃಕ್ಷಜಾತಿಗಳಿಂ ಕಿಕ್ಕಿಱಿಗಿಱಿದಿರ್ದ್ದ ನಂದನನವದೊಳಿರ್ವ್ವರುಂ ಮುಳಿಸೆಂಡನಾಡುತ್ತಿರೆಯವ ಲೋಕನ ವಿದ್ಯೆಯನೀತಂ ಕಲ್ತನಪ್ಪುದಱಿಂ ಎಲ್ಲಿಯುಳಿದೊಡಂ ಕಾಣಲಾಗದೀತನಂ ನೀಡುಮಱಸಿ ಕಾಣದೆ ಸೇದೆಗೆಟ್ಟು ಬೇಸತ್ತಾನಿಂತೆಂದೆಂ -ಮಗನೇ ನೀಂ ತಳಾಱನಪ್ಪಂದು ನಿನ್ನ ಕಾಪಿನೊಳ್ ಕಳ್ದು ನಿನ್ನಂ ಕೊಲಿಸಿದಾಗಳೇನಾಯ್ತೆಂದು ನುಡಿದೊಡೀತನುಮಿಂತೆಂದಂ ಮಗನೇ ನೀನೆನ್ನ ತಳಾಱುಗೆಯ್ವಂದು ಕಳ್ದೊಡೆ ನಿನ್ನಂ ಪಿಡಿದುಡಿಯೆ ಕಟ್ಟಿ ಕಳ್ಳರ ದಂಡಣೆಯಿಂ ದಂಡಿಸದಾಗಳೇನಾಯ್ತೆಂದು ನುಡಿದೊಡೀ ನುಡಿಯಂ ಮಱೆಯಲ್ವೇಡೆಂದಿರ್ವ್ವರು ಮೋರೋರ್ವ್ವರಂ ಮೂದಲಿಸೆ ಪ್ರತಿಜ್ಞೆಗೆಯ್ದು ಕೆಲ ಕಾಲದಿಂದೆನ್ನ ತಂದೆಯೆನಗೆ ರಾಜ್ಯಂ ಪಟ್ಟಂಗಟ್ಟಿ ದ್ರುತಸಾಗರರೆಂಬ ಭಟಾರರ ಪಕ್ಕದೆ ತಪಂಬಟ್ಟನೀತನ ತಂದೆಯುಂ ತನ್ನ ಪದಮನೀತಂಗೆ ಕೊಟ್ಟು ಅರಸನೊಡನೆ ತಪಂಬಟ್ಟಂ ಮತ್ತಾನುಂ ರಾಜ್ಯಂಗೆಯ್ಯುತ್ತಿರೆ ಈತನುಮಾ ಪೊೞಲೊಳ್ ತಳಾಱುಗೆಯ್ಯುತ್ತಿರೆ ಇಂತು ಸುಖದೊಳೆಮಗಿರ್ವ್ವರ್ಗ್ಗಂ ಕಾಲಂ ಸಲೆ ಮತ್ತೊಂದು ದಿವಸಮೀತಂ ತನ್ನ ಮನದೊಳಿಂತೆಂದು ಬಗೆದಂ -

ಎನ್ನರಸಂ ಕಳ್ಳನಾನುಮೀ ಪೊೞಲೊಳ್ ತಳಾಱುಗೆಯ್ವುದಿದು ಕಜ್ಜಮೊಳ್ಳಿತ್ತಲ್ತೆಂದು ಎನಗಂಜಿ ನಾಡಂ ಬಿಟ್ಟು ಬಂದು ನಿಮಗಾಳಾದನಾನುಂ ಈತನನೆನ್ನಾಳ್ವ ನಾಡೆಂಟು ದೆಸೆಯ ಗ್ರಾಮ-ನಗರ-ಖೇಡ-ಖರ್ವಡ-ಮಡಂಬ-ಪಟ್ಟಣ-ದ್ರೋಣಾಮುಖಂಗಳೊಳಾರಯ್ಸಿ ಕಾಣದೆ ಪರ ಮಂಡಲಂಗಳೊಳಾರಯ್ಸಿಯುಂ ಕಾಣದಿಲ್ಲಿಗಾರಯ್ಯಲಟ್ಟಿದೊಡೆ ಚರ ಪುರುಷರಾರಯ್ದು ಕಂಡು ಬಂದೆನಗಿಂತೆಂದು ಪೇೞ್ದರ್

ದೇವಾ ಮಿಥಿಳೆಯೆಂಬುದು ಪೊೞಲದನಾಳ್ವೊಂ ವಾಮರಥನೆಂಬರಸಂಗೆ ಯಮದಂಡಂ ಪೋಗಿಯಾಳಾಗಿ ಪೊೞಲ ಕಾಪಂ ಪೆತ್ತು ತಳಾಱನಾಗಿ ಸುಖದೊಳಿರ್ದ್ದನೆಂದು ಪೇೞ್ದೊಡಾ ಮಾತನಾಂ ಕೇಳ್ದು ಪುರುಷೋತ್ತಮನೆಂಬ ಮಂತ್ರಿಗೆ ಮಿಥಿಳೆ ಎಂಬ ಪೊೞಲ್ಗೆಯಾರಾನುಮಱಿಯದಂತಿರೆ ಪೋಗಿ ಯಮದಂಡನನೊಡಗೊಂಡು ಬಂದಪೆನೆಂದು ಪೇಳ್ದು ವಜ್ರಸೇನನೆಂಬ ಪೆರ್ಗ್ಗಡೆಯಂ ಕರೆಯಿಸಿಯಾನೊಂದು ಮನ್ನೆವಾೞ್ತಿಗೆ ಪೋಗಿ ಬಂದಪೆನೆನ್ನ ಬರ್ಪನ್ನೆಗಂ ರಾಜ್ಯಮಂ ಪ್ರತಿಪಾಳಿಸುತ್ತುಮಿರೆಂದು ಕಲ್ಪಿಸಿ ಸಮಸ್ತ ರಾಜ್ಯಮಂಭಾರಮೆಲ್ಲಮಂ ಸಮರ್ಪಿಸಿಯರ್ಧರಾತ್ರದಾಗಳ್ ಕಪ್ಪಡಮಂ ಪೞಿದಾರುಮಱಿಯಲೀಯದೊರ್ವ್ವನೆ ಪೊಱಮಟ್ಟು ಬಂದೀ ಪೊೞಲಂ ಪೊಕ್ಕು ಪ್ರತಿಜ್ಞೆ ಕಾರಣಮಾಗಿ ಕಸವರಮಂ ಕಳ್ದೀತನಂ ಕೊಲಿಸುವಂತು ಮಾಡಿದೆನಿದು ಕಳ್ದುದರ್ಕ್ಕೆ ಕಾರಣಂ

ಈತನುಮೆನಗೀ ಘಾಂಗಿನೊಳ್ ಮಿತ್ರನೆಂದು ಪೇೞ್ದು ಮತ್ತಮಿಂತೆಂದಂ ನಿಮ್ಮ ದೇವತಾಧಿಷ್ಠಿತಮಪ್ಪ ಸರ್ವರುಜಾಪಹಾರಮೆಂಬ ಹಾರಮನಧಿಗಮ ಸಮ್ಯಗ್ ದೃಷ್ಟಿಯೆನಪ್ಪುದಱಿಂದೆನ್ನ ಕೆಯ್ಗೆವಂದುೞಿದ ಮಿಥ್ಯಾ ದೃಷ್ಟಿಗಳ ಕೈಗೆ ಬಾರದೆಂದೊಡರಸಂ ತನ್ನ ಸಭೆಯೊಳಿರ್ದ್ದ ನೆರವಿಗೆಲ್ಲಂ ಹಾರಂ ಬಂದ ತೆಱನಿಂತೆಂದು ಪೇೞಲ್ತೊಡಗಿದೊಂ

ಧನ್ವಂತರಿ -ವಿಶ್ವಾನುಲೋಮರ್ಕ್ಕಳ ಕಥೆಯಂ ಮೊದಲಿಂ ತಗುಳ್ದು ಪೇೞುತ್ತ ಮಿಂತೆಂದಂ ಎಮ್ಮ ಸಂತತಿಯ ಪದ್ಮರಥನೆಂಬರಸನೊಂದು ದಿವಸಂ ವಾಸುಪೂಜ್ಯ ತೀರ್ಥಕರ ಪರಮ ದೇವರಂ ಬಂದಿಸಲ್ ಪೋಗುತ್ತಿರ್ದ್ದೊನನೆಡೆಯೊಳಚ್ಯುತೇಂದ್ರನುಂ ವಿಶ್ವಾನುಲೋಮಚರನಪ್ಪ ವಾಹನದೇವನುಮಿಂತಿರ್ವ್ವರುಂ ಕಂಡಚ್ಯುತೇಂದ್ರ ವಾಹನ ದೇವನನಿಂತೆಂದನೀತಂ ಅಧರ್ಮಿಯಿಂದೆ ಧರ್ಮಮಂ ಕೈಕೊಂಡು ವಾಸುಪೂಜ್ಯ ತೀರ್ಥಕರ ಪರಮ ದೇವರಂ ಬಂದಿಸಿದಲ್ಲದುಣ್ಣೆನೆಂದಾಗ್ರಹಂಗೊಂಡು ಚಂಪಾನಗರಕ್ಕೆ ಪೋದಪ್ಪೊನೀತನಂ ಪೋಗಲೀಯದೆ ಮಗುೞ್ಚಲಾರ್ಪ್ಪೊಡೆ ಮಗುೞ್ಚೆಂದು ನುಡಿದೊಡೆ ವಾಹನದೇವನುಂ ತನ್ನಾರ್ಪ್ಪ ತೆಱದಿಂದೆಲ್ಲಮೆನಿತಾನುಂ ತೆಱದುಪಸರ್ಗ್ಗಂ ಗೆಯ್ದು ಮಗುೞ್ಚಲಾಱದೆ ಬೇಸತ್ತುೞಿದೊಡಚ್ಯುತೇಂದ್ರಂ ಪದ್ಮರಥಂಗೊಸೆದು ತನ್ನ ತೊಟ್ಟ ಸರ್ವರುಜಾಪಹಾರಮೆಂಬ ಹಾರಮನಾತನ ಕೊರಳೊಳ್ತಾನೆ ಕಟ್ಟಿ ಪೊಗೞ್ದು ಪೂಜಿಸಿ ಪೋದಂ ಇಂತೀ ಪಾಂಗಿನೊಳೆಮಗೀ ಹಾರಂ ಸಂತತಿಯಿಂ ಬಂದುದೆಂದು ಕಥೆಯಂ ಪೇೞ್ದಿರ್ದ ತದನಂತರಮಿರ್ವರ್ ಪರಿವಟ್ಟೆಯವರೋಲೆಯಂ ಕೊಂಡು ಬಂದರಮನೆಯ ಬಾಗಿಲೊಳ್ ನಿಂದು ಪಡಿಯಱಂಗೆ ಪೇೞ್ದೊಡೆ ಪಡಿಯಱನುಂ ತಮ್ಮರಸಂಗೆ ಪೇೞ್ದೊಡರಸನನುಮತದಿಂದರಮನೆಯಂ ಪೊಕ್ಕಾಸ್ಥಾನ ಮಂಟಪದೊಳಿರ್ದ್ದ

ವಿದ್ಯುಚ್ಚೋರನಂ ಕಂಡು ಪೊಡೆವಟ್ಟಾತನ ಮುಂದೋಲೆಯನಿಕ್ಕಿದಾಗಳ್ ಸಂಧಿ- ವಿಗ್ರಹಿಯೋಲೆಯಂ ಕೊಂಡರಸನ ಮುಂದೆ ಇಂತೆಂದು ಬಾಜಿಸಿದಂ ವಿದ್ಯುಚ್ಚೋರ ಪರಮ ಸ್ವಾಮಿಗೆ ಮಂತ್ರಿ ಪುರುಷೋತ್ತಮನುಂ ಪೆರ್ಗ್ಗಡೆ ವಜ್ರಸೇನನು ಸಾಷ್ಟಾಂಗವೆಱಗಿ ಪೊಡೆವಟ್ಟು ಕಾರ್ಯಮಂ ಬಿನ್ನವಿರ್ಪ್ಪರ್ ತಾಮುಂ ಪಲದಿವಸಂ ಪೋಗಿರ್ದ್ದರ್ ಪೆಱಗಣ ಮನೆವಾೞ್ತೆಯಂ ಮರೆದಿರ್ದ್ದರ್ ತಾಮಿಲ್ಲದೆ ರಾಜ್ಯಮಂ ಪ್ರತಿಪಾಲಿಸುವರಾರುಮಿಲ್ಲೆಂದೋಲೆಯಂ ಕಾಣಲೊಡಂ ತಡೆಯದೆ ಪೊಱಮಟ್ಟು ಬೇಗಂ ಬರ್ಕೆಂದು ಬಾಜಿಸುವುದಂ ವಾಮರಥಂ ಕೇಳ್ದು ಮುನ್ನೀತನ ಪೇಳ್ದುದುಮೋಲೆಯ ಮಾತುಮೊಂದೆಯಾದುದೆಂದು ಸಂದೇಹಮಿಲ್ಲದಾಗಳ್ ನಂಬಿ ಈತಂ ಮಂಡಳಿಕನೆಂದಱಿದು ತನ್ನ ಸಿಂಹಾಸನದೊಳೋರಂತಪ್ಪ ಆಸನಮನಿಕ್ಕವೇೞ್ದಿರಿಸಿ ಇಂತೆಂದನೆನ್ನ ತಂಗೆಯ ಮಗನ್ನೆ ಸೋದರಳಿಯನ್ನೆ ನಿನಗೆನ್ನ ಮಕ್ಕಳ್ ಶ್ರೀಮತಿ ವಸುಮತಿ ಗುಣಮತಿ ಸುಲೋಚನೆ -ಸುಪ್ರಭೆ-ಸುಕಾಂತೆ-ಸುಶೀಲೆ-ಮನೋಹರಿ ಎಂದೆಣ್ಬರು ಕನ್ನೆಯರತ್ಯಂತ ರೂಪ -ಲಾವಣ್ಯ-ಕಾಂತಿ - ಹಾವ ಭಾವ - ವಿಳಾಸ- ವಿಭ್ರಮಂಗಳನೊಡೆಯರ್ ನವಯೌವ್ವನೆಯರಕ್ಷರಾಲೇಖ್ಯ - ಗಣಿತ - ಗಾಂಧರ್ವ -ನೃತ್ಯ ಚಿತ್ರಕರ್ಮ ಪತ್ರಚ್ಛೇದಮೆಂದಿವು

ಮೊದಲಾಗೊಡೆಯ ಚತುಷ್ಷಷ್ಟಿ ಕಲೆಗಳೊಳ್ ಆದಮಾನುಂ ಕುಶಲೆಯರುಂ ಪರಮಂಡಲಿಕರ್ ಪಲಂಬರ್ ಪಾಗುಂಡಗಳುಮೋಲೆಗಳುಂ ಪೆರ್ಗ್ಗಡೆಗಳನನವರತಂ ಕೂಸುಗಳಂ ಬೇಡಿಯಟುತ್ತಿರ್ಪ್ಪವರನಾರುಮಮಂ ನಾಂ ಮೆಚ್ಚುಗೆ ಕುಡದಿರ್ದ್ದೆನನ್ನೆಗಮಿಂತಿವರ್ಗ್ಗಳಂ ಈ ಕನ್ಯಾರತ್ನಂಗಳ್ಗೆ ನೀನೆ ಯೋಗ್ಯನೈ ನಿನಗೆಣ್ಬರುಮಂ ಕೊಟ್ಟೆಂ ಮದುವೆನಿಲ್ಲೆಂದೊಡಾತನಿಂತೆಂದಂ ನಾನೊರ್ವಳ್ಗೆ ಬೇಂಟಂಗೊಂಡಿರ್ದ್ದೆನಿವರಂ ಕೊಂಡೇವೆನೆಂದೊಡರಸನಾರ್ಗ್ಗೆ ಬೇಂಟಂಗೊಂಡಿರ್ದ್ದೆಯೆಂದು ಬೆಸಗೊಂಡೊಡಾತನಿಂತೆಂದಂ - ಮುಕ್ತಿಶ್ರೀಯೆಂಬೊಳ್ ಪೆಂಡತಿಗೆ ಬೇಂಟಂಗೊಂಡಿರ್ದ್ದೆನಾಕೆಯಂ ಮದುವೆ ನಿಲಲ್ವೇೞ್ಕುಮೆಂದು ಪರಿಚ್ಛೇದಿಸಿ ನುಡಿದು ಮತ್ತಮಿಂತೆಂದನೆನ್ನ ಕೆಳೆಯನನೆನಗೊಪ್ಪಿಸಲ್ವೇೞ್ಕುಮೆಂದೊಡರಸನೊಪ್ಪಿಸಿದನೆಂದೊಡೆ ಅರಸನಂ ಬೀೞ್ಕೊಂಡು ಯಮದಂಡಪುರಸ್ಸರಮಿರ್ವರುಮೊಟ್ಟೆಯನೇರಿ ತುರಿಪದಿಂ ಕತಿಪಯ ದಿವಸಂಗಳಿಂ ವೇಣಾತಟಮನೆಯ್ದಿ ಪೊೞಲೊಳಗಿರ್ದ್ದು ಪೇಟ್ಟಿಟ್ಟೆ ಅಷ್ಟಶೋಭೆಯಂ ಮಾಡಿಸಿ ಮಂತ್ರಿ ಮಹತ್ತರ ಪರಿವಾರ ಸಾಮಂತರ್ಕ್ಕಳುಂ ಪೆಂಡವಾಸದ ಸೂಳೆಯರ್ಕ್ಕಳುಂ ಪೊೞಲ ಜನಮೆಲ್ಲಮಿದಿರಂ ಬಂದು ಕಂಡು ಪೊಡೆವಟ್ಟು ಸೇಸೆಗಳನಿಕ್ಕಿ ಬೞಕ್ಕೆ ಪಟ್ಟವರ್ದ್ಧಮನಿರ್ವ್ವರುಮೇಱಿ ಬೆಳ್ಗೊಡೆ ಮೊದಲಾಗೊಡೆಯ ರಾಜ್ಯ ಚಿಹ್ನಂಗಳ್ ಮುಂದೆ ಪರಿಯೆ ಪಂಚಮಹಾಶಬ್ದಗಳುಂ ಬದ್ಧವಣದ ಪಱೆಗಳುಂ ಬಾಜಿಸೆ ಅರಮನೆಯಂ ಪೊಕ್ಕು ಮರುದಿವಸಮಾಸ್ಥಾನ ಮಂಟಪದೊಳ್ ಸಿಂಹಾಸನಮಸ್ತಕಸ್ಥಿತಮಾಗಿ ಸಾಮಂತ ಮಹಾಸಾಮಂತರ್ಕಳಂ ಮಂತ್ರಿ ಮಹತ್ತರ ಪುರೋಹಿತ ಪರಿವಾರ ವರ್ಗ್ಗಕ್ಕಮರಸಿಯರ್ಕ್ಕಳ್ಗಂ ಬೞಿಯಟ್ಟಿ ಬರಿಸಿ ಇಂತೆಂದು ನುಡಿದಂ ಆನೀ ಸಂಸಾರದೊಳಪ್ಪ ಭೋಗೋಪಭೋಗಂಗಳ್ಗೆ ಪೇಸಿ ವಿರಕ್ತನಾಗಿ ತಪಂಬಡಲ್ ಬಗೆದಪ್ಪೆನೆಂದೊಡನಿಬರುಂ ನೆರೆದಿಂತೆಂದರ್ ಇನ್ನುಮಾವುದು ಕಾಲಂ ತಪಂಬಡಲ್ ನೀಂ ಕೂಸೈ ನವಯೌವ್ವನನೈ ಕೆಲವು ಕಾಲಮರಸುಗೆಯ್ದು ಪಶ್ಚಾತ್ ಕಾಲದೊಳ್ ತಪಂ ಬಡಲಕ್ಕುಮೆಂದೊಡರಸನಿಂತೆಂದಂ ಎಂತಱಿಯಲಕ್ಕುಮನ್ನೆಗಂ ಸಾವರೋ ಬಟ್ಟರೋ ಎಂದು ಪ್ರಸ್ತುತಂಗಳನವರ್ಗ್ಗಾಡಿ ಪೇೞಲ್ ತೊಡಂಗಿದಂ -

ಶ್ಲೋಕ। ಡಿಂಡ್ಡೀರ ಪಂಡ-ಸಂಕಾಶ -ಮಾಯುಃ ಸಂಸಾರವರ್ತಿನಾಂ।
ಆಖಂಡಲ ಧನುಷ್ಕಾಂಡ - ಸನ್ನಿಭಂ ರೂಪ ಯೌವನಂ ॥

ವೃತ್ತ ॥ ರೂಪಂ ಯೌವನಮಾಯುರಕ್ಷ ವಿಷಯಾ ಭೋಗೋಪಭೋಗಾ ವಪುಃ।
ವೀರ್ಯಂ ಸ್ನೇಷ್ಟ ಸಮಾಗಮೋ ವಸಮತಿಃ ಸೌಭಾಗ್ಯಭೌಗ್ಯೋದಯೋ
ನೋಽ ನಿತ್ಯಾ ; ಸ್ಫುಟಮಾತ್ಮನಃ ಸಮುದಿತಾ ಜ್ಞಾನೇಕ್ಷಣೋ ಭೂಭೃತಾಂ
ಶೇಷಾ ಇತ್ಯನು ಚಿಂತಯಂತು ಸುಧಿಯಃ ಸರ್ವೇ ಸದಾಽ ನ್ಯಿತತಾಂ ॥

ಯದಿ ಜಾತಿ ಜರಾ ಮರಣಂ ಭವೇತ್ ।
ಯದಭೀಷ್ಟವಿಯೋಗಭಯಂ ನ ಭವೇತ್ ।

ಯದಿ ಸರ್ವಮನಿತ್ಯಮಿದಂ ನ ಭವೇತ್ ।
ಇಹ ಜನ್ಮನಿ ಕಸ್ಯ ರತಿರ್ನ ಭವೇತ್ ॥

ಮತ್ತಂ ಅದಱಿಂ ಮಾನಸರ ರೂಪುಂ ಯೌವನಮುಂ ತೇಜಮುಂ ಲಾವಣ್ಯಮುಂ ಸೌಭಾಗ್ಯಮುಮಾಯುಷ್ಯಮುಂ ಶ್ರೀಯುಂ ಸಂಪತ್ತುಂ ವಿಭವಮುಂ ನಲ್ಮೆಯುಂ ಎಂದಿವು ಮೊದಲಾಗೊಡೆಯವನಿತ್ಯಂಗಳ್

ಮತ್ತಂ ಮೈಯೊಳ್ಪಿತ್ತೆಂದೊಡದುವುಂ ತಾನಿಂತುಟೆ -

ಗಾಹೆ ॥ ಏದಂ ಶರೀರಮಸುಚಿಂ ಣಿಚ್ಚಂ ಕಳಿ ಕಲುಸಭಾಯಣ ಮಚೊಕ್ಖಂ
ಅಂತೋ ಛ್ಛಾಯದಿಟ್ಠಂ ಸಕ್ಕಿಬ್ಬಿಸ ಭರಿದಂ ಅಮೇಜ್ಝಹವಂ ॥

ರಸ-ಮಜ್ಜಮಾಂಸ -ಸೋಣಿದ ಪುಪ್ಪುಸ ಕಾಲಿಜ್ಜ ಸೇಣಾಸಿಂಹಾಣಂ
ಬಿಡಜಾಳ ಆದ್ಧಿ ಸಂಕಲ ಭಮ್ಮಾಣದ್ಧಂ ಸರೀರಪುರಂ ॥

ಅಟ್ಠಿಹಿ ಛಣ್ಣಂಣಾಳಿಹಿ ಹದ್ಧಂ ಕಳಿಮಳ ಭರಿದಂ ಕಿಮಿಕುಳಪುಣ್ಣಂ
ಮಾಂಸವಿಲಿತ್ತಂ ತಯಪಡಿವಣ್ಣಂ ಸರೀರಪುರ್ಘತಂ ಸತತ ಮಚೊಕ್ಖಂ ॥

ಏದಾಲಿಸೇ ಸರೀರೇ ದುಗ್ಗಂದೇ ಕುಳಿಮಪೂದಿಏ ಅಚೋಕ್ಖೇ ।
ಸಡಣಪಡಣೇ ಆಸಾರೇ ರಾಗಂ ಣ ಕರೇಂತಿ ಸಪ್ಪುರಿಸಾ ॥

ಹಾಏವ ಸಕದಂ ಕಮ್ಮಂ । ಅಣುವಾವಟ ಕಾವಗಂ ।
ಣ ಸೇಫಳಾಯಿ ಗುಸ್ಸಂಕಾ । ಅಣ್ಣತ್ಥ ಜಿಣಸಾಸಣೇ ॥

ಶ್ಲೋಕಛಂದ ॥ ದುರ್ಗಂಧೇ ದುರ್ಧರೇ ದುಃಖೇ ದುಃಸ್ವಭಾವೇಚ ನಶ್ವರೇ ।
ದುರ್ವಿಲೋಕೇ ವೃಥಾಕಾಯೇ ಕಿಂತುಜ್ಞಾನೀ ತವಾಗ್ರಹಃ ॥
ಅಚ್ಛೇದ್ಯೋಽನಂತ ಸೌಖ್ಯೋಽಹಂ ಅತ್ಮಪೂರ್ವೋ ನಿರಂಜನಃ
ಸರ್ವದುಃಖಾಕರಂ ದೇಹಂ ತ್ಯಜಾಮ್ಯೇತತ್ ಪರಿಸ್ಫುಟಂ ॥

ವೃತ್ತ ॥ ಜಾತಿಕ್ಷ್ಮಾಜರತೇ ಕೃತಾಂತಕುಪಿತ ಕ್ರೂರೋರುದುಸ್ವಾಪದೇ ।
ವ್ಯಾಧಿಂ ವ್ಯಾಧಬಯಾದ್ದುರಂತ ದುರಿತ ಸ್ಫೂರ್ಜದ್ದವಾಗ್ನೀಚ್ಛದೇ ॥
ನಿಸ್ತ್ರಾಣ ಸುವಿಚೇತಸೋ ತ್ರಿತದೃಷಾ ದುರಾಕುಳ ಸ್ಯಾಂಗಿನೋ ।
ಜೈನಂ ಶಾಸನಮೇಕವೇವ ಶರಣಂ ಜನ್ಮಾಟವೀ ಸಂಕಟೇ ॥
ಅದಱಿಂ

ವೃತ್ತ ॥ ಯಾವತ್ ಸ್ವಸ್ಥಮಿದಂ ಶರೀರಮರುಜಂ ಯಾವಜ್ಜರಾ ದೂರತಂ ।
ಯಾಚ್ಚೇಂದ್ರಿಯ ಶಕ್ತಿರಪ್ರತಿಹತೋ ಯಾವತ್ ಕ್ಷಯೇಣಾಯುಷಂ ॥
ಆತ್ಮಶ್ರೇಯಸಿ ತಾವದೇವ ವಿದುಹಿಕಾರ್ಯ ಪ್ರಯತ್ನೋಮಹಾನ್ ।
ಯಾ ದೀಪ್ತೇ ಭವನೇತು ಕೂಪಘನನಂ ಪ್ರತ್ಯುದ್ಯಮಃ ಕಿದೃಶಃ ॥

ವಚನ ॥ ಎಂದಿವು ಮೊದಲಾಗೊಡೆಯವನೋದಿಯವಱರ್ಥಮೆಲ್ಲಮಂ ನೆರವಿಗೆಲ್ಲಂ
ವಕ್ಕಾಣಿಸಿ ಪೇೞ್ದು ಮತ್ತಮರಸನಿಂತೆಂದು ಪೇೞ್ದಂ

ಕಂದ ॥ ಆನಾಳ್ದನಾಳ್ಗಳಿವರೆನ
ಗೇನಾಯ್ತೆಂದಱಿದುಮಱಿಯದುಱದಾಂ ನುಡಿದೊಂ
ದೇವಾನುಮೇವಮುಳ್ಳೊಡ
ಮಾ ನುಡಿಯಂ ಮಱೆಯಿಮೆಲ್ಲಮಿಂ ನಿಶ್ಶಲ್ಯಂ

ಗಾಹೆ ॥ ಖಮ್ಮಾಮಿ ಸವ್ವಜೀವಾಣಂ ಸವ್ವೇಜೀವಾ ಖಮಂತು ಮೇ ॥
ಮೆತ್ತೀ ಮೇ ಸವ್ವ ಭೂದೇಸು ವೇರಂಮಜುಂ ಣ ಕೇಣಚಿ ।

ಎಂದೆಲ್ಲರುಮಂ ಕ್ಷಮೆಗೊಳಿಸಿ ನಿಶ್ಶಲ್ಯಂ ಗೆಯ್ದು ವಿದ್ಯುದಂಗನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ರಾಜ್ಯಾಭಿಷೇಕಂಗೆಯ್ದೀತನಂ ಪಿಡಿದು ನೀಮೆಲ್ಲಂ ಸುಖಂ ಬಾೞಿಮೆಂದು ಕಲ್ಪಿಸಿ ಯಮದಂಡಂಗಂ ಪೊಬಲ ತಳಾಱಿಕೆಯಂ ಕೊಟ್ಟು ಮಂಗಳ ಮಜ್ಜನಂಗೊಂಡು ಪಟ್ಟವರ್ಧನಮನೇಱಿ ಸತಿಯರ್ ಸಂಗಂಡಂ ಪೆಂಡವಾಸದ ಸೂಳೆ ಯರಿರ್ವರ್ ಪೆಱಗೇಱಿ ಇರ್ಕೆಲದೊಳಂ ಚಾಮರಂಗಳನಿಕ್ಕುತ್ತುಂ ಬರೆ ಬೆಳ್ಗೊಡೆಗಳುಂ ಪಾಳಿಧ್ವಜಂಗಳುಂ ತಜಿನವಬಿಯಿಗೆಗಳುಂ ಚಂದ್ರಾದಿತ್ಯರ್ಕಳುಂ ಸಿಂಹ -ವ್ಯಾಘ್ರ ಮಕರ ಮತ್ಸ್ಯಂಗಳೆಂದಿವು ಮೊದಲಾಗೊಡೆಯ ರಾಜ್ಯ ಚಿಹ್ನಂಗಳ್ ಮುಂದೆ ಪರಿಯೆ ಪಂಚ ಮಹಾಶಬ್ದಂಗಳುಂ ಬದ್ದವಣದ ಪಱೆಗಳುಂ ಬಾಜಿಸೆ ವಂದಿ ಮಾಗಧ ಯಾಚಕ ಪ್ರಭೃತಿಗಳ್ಗಂ ದೀನಾನಾಥಾನೇಕರ್ಗಂ ತುಷ್ಟಿದಾನಮಂ ಕುಡುತ್ತುಂ ಪೋಗಿ ಸಹಸ್ರ ಕೂಟ ಚೈತ್ಯಾಲಯಮನೆಯ್ದಿ ಪಟ್ಟವರ್ಧನದಿಂದಿೞಿದು ಬಸದಿಯಂ ತ್ರಿಪ್ರದಕ್ಷಿಣೆ ಗೆಯ್ದು ದೇವರಂ ಬಂದಿಸಿ ಗುಣಧರರೆಂಬಾಚಾರ್ಯರಂ ಗುರುಭಕ್ತಿಗೆಯ್ದು ಬಂದಿಸಿ ಇಂತೆಂದಂ ಭಟಾರಾ ಸಂಸಾರಮೆಂಬ ಸಮುದ್ರದೊಳ್ ಮುೞುಗುತ್ತಿರ್ದೆನ್ನಂ ಮುೞುಗಲೀಯದೆತ್ತಿ ಎನಗೆ ದೀಕ್ಷೆಯಂ ಪ್ರಸಾದಂ ಗೆಯ್ಯಿಮೆಂದು ನುಡಿದೊಡಂಬಡಿಸಿ ಸಾಸಿರ್ವರರಸು ಮಕ್ಕಳ್ವೆರಸು ಕಟಕ ಕಟಿಸೂತ್ರ ಕುಂಡಲಾಭರಣಾದಿಗಳಂ ಕಳೆದು ಬಾಹ್ಯಾಭ್ಯಂತರ ಪರಿಗ್ರಂಹಂಗಳಂ ತೊಱೆದು ಗುಣಧರಭಟಾರರ ಪಕ್ಕದೆ ತಪಂ ಬಟ್ಟಂ

ಮತ್ತಂ ದೇವಗಣಿಕೆಯುರನೆ ಪೋಲ್ವ ವಸುಂಧರೆ ಮಹಾದೇವಿ ಮೊದಲಾಗೆೞ್ನೂರರಸಿಯರ್ಕಳ್ ಗುಣಧರ ಭಟಾರರೆ ಗುರುಗಳಾಗೆ ತಮ್ಮತ್ತೆವಿರಪ್ಪ ಜಯಮತಿ ಕಂತಿಯರ್ ಕಂತಿಯರಾಗೆ ತಪಂಬಟ್ಟು ಗಿಡಿ ಗಿಡಿ ಜಂತ್ರಂ ಮಿಳಿ ಮಿಳಿ ನೇತ್ರರಾಗಿ ಘೋರ ವೀರ-ತಪಶ್ಚರಣದೊಳ್ ನೆಗೞುತ್ತಿರ್ದರ್ ಇತ್ತ ವಿದ್ಯುಚ್ಚೋರ ಮುನಿಯುಂ ಪನ್ನೆರಡು ವರ್ಷಂ ಬರೆಗಂ ಗುರುಗಳನಗಲದೆ ದ್ವಾದಶಾಂಗ -ಚತುರ್ದಶ ಪೂರ್ವಮಪ್ಪಾಗಮಮೆಲ್ಲಮಂ ಕಲ್ತುಗ್ರೋಗ್ರ ತಪಶ್ಚರಣದೊಳ್ ನೆಗೞುತ್ತುಮಾಚಾರ್ಯರಾಗಿಯಯ್ನೂರ್ವರ್ ಶಿಷ್ಯರ್ವೆರಸು

ಗ್ರಾಮ-ನಗರ-ಖೇಡ ಖರ್ವಡ-ಮಡಂಬ-ಪಟ್ಟಣ ದ್ರೋಣಾ ಮುಖಂಗಳಂ ವಿಹಾರಿಸುತ್ತುಂ ಪೋಗಿ ಪೂರ್ವ ದೇಶದೊಳ್ ಮಂಡಳಮೆಂಬ ನಾಡೊಳ್ ತಾಮ್ರಲಿಪ್ತಿಯೆಂಬ ಪೊೞಲ ಪೊಱವೊೞಲನೆಯ್ದಿದಾಗಳಲ್ಲಿ ವರಾಂಗಾಯಿಯೆಂಬ ಉಗ್ರದೇವತೆಗಳಱುದಿಂಗಳು ಅಱುದಿಂಗಳ್ಗೆಲ್ಲಾ ಕಾಲಂ ಜಾತ್ರೆಯಪ್ಪುದಾ ಜಾತ್ರೆಗೆ ನಾಡೆಲ್ಲಮಷ್ಟಮಿಯಂದು ಬಂದು ನೆರೆದು ಜಾತ್ರೆಯಂ ಮಾಡೆ ದುರ್ಗಾದೇವತೆ ರಿಷಿಯರ ಬರವಂ ಗೆಂಟಱೊಳಿರ್ದು ಕಂಡಿದಿರಂ ಪೋಗಿ ಇಂತೆಂದಳ್ ಎನ್ನ ಜಾತ್ರೆ ಸಮೆವನ್ನೆಗಂ ನೀಮೀ ಪೊೞಲಂ ಪೊಗದಿರಿಮೆಂದು ಬಾರಿಸಿದೊಂಡೆ ಶಿಷ್ಯರ್ಕಳೆಂದರ್ ನಮ್ಮಂ ದೇವತೆಯೇಗೆಯ್ದಪ್ಪೊಳ್ ಪೋಪಂ ಭಟಾರಾ ಎಂದು ಭಟಾರರನೊಡಗೊಂಡು ದೇವತೆ ಬಾರಿಸೆ ಬಾರಿಸೆ ಪೊೞಲಂ ಪೊಕ್ಕು ಪೊೞಲ ಪಡುವಣ ದೆಸೆಯ ಕೋಂಟೆಯ ಪೊಱಗಣ ದೆಸೆಯೊಳ್ ವಿದ್ಯುಚ್ಚೋರ ಭಟಾರರ್ ಪ್ರತಿಮಾಯೋಗಂ ನಿಂದೊಡೆ ದೇವತೆ ಮುಳಿದು ಪೊಱಸುಗಳನಿನಿವಿರಿಯವು ದಂಸ-ಮಸಕಂಗಳಂ ವಿಗುರ್ವಿಸಿ ಮೆಯ್ಯೆಲ್ಲಮನಿರುಳ್ ನಾಲ್ಕು ಜಾವಮುಂ ತಿನೆ ನರಕ ವೇದನೆಯಿಂದಗ್ಗಳ ವೇದನೆಯಪ್ಪಂತುಪಸರ್ಗಂ ಗೆಯ್ಯೆ ಅಂತಪ್ಪ ದುಃಖಮಂ ವೇದನೆಯುಮಂ ಮನದೊಳಿಲ್ಲದಂತಿರೆ ಸೈರಿಸಿ ಆಜ್ಞಾವಿಚಯಮಪಾಯವಿಚಯ -ವಿಪಾಕವಿಚಯ ಸಂಸ್ಥಾನ ವಿಚಯ ಮೆಂಬ ನಾಲ್ಕು ಧರ್ಮಧ್ಯಾನಂಗಳಂ ಧ್ಯಾನಿಸಿ ಬೞಿಕ್ಕೆ ಪೃಥಕ್ತ ವಿತರ್ಕವೀಚಾರಮೆಂಬ ಪ್ರಥಮ ಶುಕ್ಲಧ್ಯಾನಮಂ ಧ್ಯಾನಿಸುತ್ತಂ ಕ್ಷಪಕ ಶ್ರೇಢಿಯನೇಱಿ ಏಕತ್ವ -ವಿತರ್ಕ - ವಿಚಾರಂ ಸೂಕ್ಷ್ಮಕ್ರಿಯಾ ಪ್ರತಿಪಾತಿ -ಸಮುಚ್ಛಿನ್ನ ಕ್ರಿಯಾನಿವೃತ್ತಿ ಎಂಬ ಶುಕ್ಲ ಧ್ಯಾನಂಗಳಂ ಧ್ಯಾನಿಸಿ ಘಾತಿಕರ್ಮಂಗಳಂ ಕಿಡಿಸಿ ಅಂತರ್ಗತ ಕೇವಳಿಯಾಗಿ ಅಘಾತಿ ಕರ್ಮಂಗಳಂ ಕಿಡಿಸಿ ಮೋಕ್ಷಕ್ಕೆ ವೋದರ್

ಮತ್ತೆ ಸನ್ಯಸನಂ ಗೆಯ್ಯುತ್ತಿರ್ದ ಭವ್ಯರ್ಕಳ್ ಪರಮ ಶುದ್ಧ ಸಹಜ ರತ್ನತ್ರಯ ಮನಾರಾಧಿಸುತ್ತಿರ್ದೋರ್ ವಿದ್ಯುಚ್ಚೋರ ರಿಷಿಯರಂ ಮನದೊಳ್ ಬಗೆದು ದಂಡಣೆಗಳಂ ವೇದನೆಗಳಂ ವ್ಯಾಧಿಗಳಂ ಚತುರ್ವಿಧಮಪ್ಪುಸಮರ್ಗಮಂ ಪಸಿವುಂ ನೀರೞ್ಕೆಯಂ ಶೀತೋಷ್ಣವಾತ ದಂಸ-ಮಸಕಂ ಮೊದಲಾಗೊಡೆಯವಱಿಂದಪ್ಪ ವೇದನೆಗಳಂ ದುಃಖಂಗಳಂ ಸೈರಿಸಿ ಪರಮ ಶುದ್ಧ ಸಹಜ ರತ್ನತ್ರಯಂಗಳಂ ಸಾಧಿಸಿ ಸ್ವರ್ಗ್ಗಾಪ ವರ್ಗ ಸುಖಂಗಳನೆಯ್ದುಗೆ

■

೧೪. ಗುರುದತ್ತ ಭಟಾರರ ಕಥೆ

ಗುರುದತ್ತ ಭಟಾರರ ಕಥೆಯಂ ಪೇೞ್ವೆಂ

ಗಾಹೆ ॥ ಹತ್ಥಿಣಪುರ ಗುರುದತ್ತೋ ಸಂಪಳಿತಾಳೀವ ದೊಣ್ಣಿಮಂತಹಿ
ದಜ್ಝಂತೋ ಅಧಿಯಾಸಿಯ ಪಡಿವಣ್ಣೋ ಉತ್ತಮಂ ಆಟ್ಠಂ ॥

[ಹತ್ಥಿಣಪುರ = ಹಸ್ತಿನಾಪುರಮುಮನಾಳ್ವ । ಗುರುದತ್ತೋ = ಗುರುದತ್ತ ರಿಷಿ । ಸಂವಳಿತಾಲೀವ =ಕಲ್‌ನೆಲೆವೊಲಾ । ದೊಣ್ಣಿಮಂತಂಹಿ = ದೋಣಿಮತಮೆಂಬ ಪರ್ವತದ ಸಾರೆ । ದಜ್ಝಂತೋ = ಬೇಯುತ್ತಿರ್ದ್ದೊನಾಗಿ । ಅಧಿಯಾಸಿಯ = ಉಪಸರ್ಗಮಂ ಸೈರಿಸಿ । ಪಡಿವಣ್ಣೋ = ಪೊರ್ದ್ದಿದೊಂ । ಉತ್ತಮಂ ಆಟ್ಠ =ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಕುಣಾಳಮೆಂಬುದು ನಾಡು ಅಲ್ಲಿ ಸಾವಸ್ತಿಯೆಂಬುದು ಪೊಟಲ್ ಅದನಾಳ್ವೊಂ ಉಪರಿಚರನೆಂಬೊನರಸನಾತನ ಮಹಾದೇವಿಯರ್ ಪದ್ಮಾವತಿ ಅಮಿತಪ್ರಭೆ ಸುಪ್ರಭೆ ಪ್ರಭಾವತಿಯಂತು ನಾಲ್ವರುಂ ಮಹಾದೇವಿಯರ್ ಮೊದಲಾಗಿ ಅರಸಿಯರ್ಕ್ಕಳಯ್ನೂರ್ವರ್ ಪದ್ಮಾವತಿ ಮಹಾದೇವಿಯ ಮಗನನಂತವೀರ್ಯಂ ಅಮಿತಪ್ರಭೆಯ ಮಗಂ ವಜ್ರಪಾಣಿ ಪ್ರಭಾವತಿಯ ಮಗಂ ವಜ್ರಧರಂ ಸುಪ್ರಭೆಯ ವಗಂ ವಜ್ರಬಾಹು ಇಂತು ನಾಲ್ವರುಂ ಮಹಾದೇವಿಯರ ಮಕ್ಕಳ್ ಉೞಿದರಸಿಯರ ಮಕ್ಕಳೈನೂರ್ವರಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನು ಭವಿಸುತ್ತುಂ ಪಲಕಾಲಂ ಸಲೆ ಮತ್ತೊಂದು ದಿವಸಂ ವಸಂತ ಕಾಲದೊಳಂಕುರಿತ ಪಲ್ಲವಿತ - ಕೋರಕಿತ-ಕುಸುಮಿತ-ಫಳಿತಮಪ್ಪ ಮನೋಹರೋದ್ಯಾನವನಕ್ಕೆ ಅಯ್ನೂರ್ವ್ವರರಸಿಯರ್ಕ್ಕಳುಮಣುಗರ್ಕ್ಕಳುಂ ಬೆರಸು ಪೋಗಿ ಮಹಾ ವಿಭೂತಿಯಿಂ ವನಕ್ರೀಡೆಯಂ ಪಿರಿದು ಬೇಗಂಮಾಡಿ ಬೞಿಕ್ಕಾ ನಂದನದೊಳಗಣ ಸುದರ್ಶನಮೆಂಬ ಮಣಿಕುಟ್ಟಿಮಮಪ್ಪ ಬೊಡ್ಡಣ ವಾವಿಯೊಳ್ ಕರ್ಪೂರ -ಕಾಳಾಗರು -ತುರುಷ್ಕ -ಕುಂಕುಮ-ಚಂದನಾದಿ ಸುಗಂಧ ದ್ರವ್ಯಂಗಳಿಂ ಬೆರಸೆಪಟ್ಟುದ ಋೊಳ್ ಮತ್ತಂ ನೀಳೋತ್ಪಳ -ರಕ್ತೋತ್ಪಳ ಕುವಳಯಂ ಮೊದಲಾಗೊಡೆಯ

ನಾನಾ ಪ್ರಕಾರದ ಪುಷ್ಪಜಾತಿಗಳಿಂದಂ ಸಂಛನ್ನಮಪ್ಪುದಱೊಳ್ ಚಕ್ರವಾಕ -ಬಕ -ಬಳಾಕ-ಹಂಸ-ಮಂಡೂಕ- ಜೀವಂಜೀವಕ -ಚಕೋರಾದಿ ಜಲಚರ ವಿಹಂಗ ಸಮೂಹಂಗಳೊಡನೆಯದಱೊಳ್ ನಾಲ್ವರುಂ ಮಹಾದೇವಿಯರ್ಬ್ಬೆರಸು ಓರೋರ್ವ್ವರುಂ ನಾನಾ ಪ್ರಕಾರದ ಯಂತ್ರಗಳಿಂದಂ ಜೀರ್ಕೋೞ್ವಿಗಳಿಂದಂ ತಳಿಯುತ್ತುಂ ನೀರ್ಗಳಂ ಸೂಸುತ್ತುಂ ಜಲಕ್ರೀಡೆಯಂ ಮನಕ್ಕೆವಂದರಸಿಯರ್ಕ್ಕಳೊಡನೆ ನೀಡುಂ ಬೇಗಮಾಡುತ್ತಿರ್ಪ್ಪನ್ನೆಗಂ

ಮತ್ತಿತ್ತ ವಿಜಯಾರ್ಧ ಪರ್ವತದುತ್ತರ ಶ್ರೇಢಿಯೊಳಳಕಾಪುರಿಯೆಂಬುದು ಪೊೞಲದನಾಳ್ವೊಂ ವಜ್ರದಾಡನೆಂಬ ವಿದ್ಯಾಧರನನೇಕ ವಿದ್ಯಾಬಲಗರ್ವ್ವಿತನಾತನ ಮಹಾದೇವಿ ಮದನವೇಗೆಯೆಂಬೊಳಂತವರ್ಗ್ಗಳಿರ್ವ್ವರುಂ ಒಂದು ದಿವಸಂ ರಮ್ಯ ಪ್ರದೇಶಂಗಳೊಳ್ ಕ್ರೀಡಿಸಲ್ವೇಡಿ ಭೌಮ ವಿಹಾರಕ್ಕೆ ವಿಚಿತ್ರಮಾಗುತಿರ್ದ್ದ ವಿಮಾನಮನೇಱಿಯಾಕಾಶ ಪಥದೊಳ್ ಪೋಗುತ್ತಿರ್ದ್ದವರ್ಗ್ಗಳ್ ದೇವಸಮಾನರಪ್ಪ ಸಾಮಂತ -ಮಹಾಸಾಮಂತರ್ಕ್ಕಳಿಂದಂ ದೇವಗಣಿಕೆಯರುಮಪ್ಪಪ್ಸರೆಯರ್ಕ್ಕಳಂ ಪೋಲ್ವಯ್ನೂರ್ವರರಸಿಯ ರ್ಕ್ಕಳಿಂದಂ ಪೆಂಡವಾಸದ ಪಲಬರೊಳ್ವೆಂಡಿರ್ಕ್ಕಳಿಂದಂ ಪರಿವಾರ ಜನಂಗಳಿಂದಮಿಂತು ದಿವ್ಯಮಪ್ಪ ಸಭೆಯಿಂದಂ ಪರಿವೇಷ್ಟಿತನಾಗಿ ಪಟುಪಟಹ -ಪಣವ -ತುಣವ ಭಂಭಾ-ಮದ್ದಳ -ಝಲ್ಲಕಿ -ಮುಕುಂದ-ಶಂಖ-ವಂಶ-ತಾಳ-ಭೇರಿ-ಮೃದಂಗ ವೀಣಾ ಕಾಹಳಾದಿ ನಾನಾ ಪ್ರಕಾರದ ತೂರ್ಯ ರವಂಗಳುಂ ದೇವದುಂದುಭಿಗಳ್ ಮೊಳಗುವಂತೆ ಭೋರ್ಗರೆದು ಮೊಳಗೆ ಮಹಾವಿಭೂತಿಯಿಂ ಜಲಕ್ರೀಡೆಯನಾಡುತ್ತಿರ್ಪ್ಪ ಉಪಚರಿಚರ ಮಹಾ ನೃಪತಿಯನಿರ್ವ್ವರುಂ ಕಂಡು ವಿಮಾನಮಂ ನಿಱಿಸಿ ನೀಡುಂ ಬೇಗಂ ನೋಡಿ ಮದನವೇಗೆಯಿಂತೆಂದಳ್ ನಾಮಾಕಾಶದೊಳ್ ಕಾಗೆಗಳಂತೆ ಪಾಱುವನಿತಲ್ಲದೆ ನಮಗಿನಿತು ವಿಭವಮುಮೈಶ್ವರ್ಯಮುಮುಂಟೇ ಶ್ರೀಯೊಳಂ ರೂಪಿನೊಳಂ ವಿಭವದೊಳಂ ನಾನಾ ಪ್ರಕಾರದ ವಿನೋದಂಗಳಿಂದುಪರಿಚರ ಮಹಾರಾಜನಿಂದಗ್ಗಳಂ ಪೆಱರಾರುಮಿಲ್ಲ ಸಂಸಾರದೊಳ್ ಬರ್ದ್ದ ಬಾೞನೀತನೆ ಬರ್ದ್ದನೆಂದು ಪೊಗೞ್ವೊಡೆ ವಜ್ರದಾಡಂ ಕೇಳ್ದು ಮನದೊಳ್ ಮುನಿದು ಪುರುಡಿಸಿ ತನ್ನ ಪೊೞಲ್ಗೆವೋಗಿ ಮದನವೇಗೆಯನಲ್ಲಿಟ್ಟು ತಾನೋರ್ವನೆ ವಿಮಾನಮನೇಱಿ ತುಱಿಪದಿಂ ಬಂದು ಜಳಕ್ರೀಡೆಯನಾಡುತ್ತಿರ್ಪ್ಪುಪರಿಚರ ಮಹಾನೃಪತಿಯ ಮೇಗೆ ವಿದ್ಯೆಯಿಂದಂ ವಿಗುರ್ಬ್ಬಿಸಿ ಪಿರಿದೊಂದು ಸಿಲೆಯನೆತ್ತಿಕೊಂಡು ಬಂದು ಮಣಿಕುಟ್ಟಿಮಮಪ್ಪ ಸುದರ್ಶನಮೆಂಬ ಬಾವಿಯ ಬಾಗಿಲೆಲ್ಲಮಂ ನಿಚ್ಛಿದ್ರಮಾಗಿ ಮುಚ್ಚಿ ಕವಿದಿಕ್ಕಿ ಪೋದಂ ಪೋದೊಡೆ ಪದ್ಮಾವತಿ ಮೊದಲಾಗೊಡೆಯ ನಾಲ್ವರುಂ ಮಹಾದೇವಿಯರುಂ ಮೋಹಿಸದ ಬುದ್ಧಿಯನೊಡೆಯರ್ ಅಧಿಗಮ ಸಮ್ಯಗ್ ದೃಷ್ಟಿಗಳ್ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಜಾವಜ್ಜೀವಂ ನಿವೃತ್ತಿಗೆಯ್ದು ಪಂಚನಮಸ್ಕಾರಮನುಚ್ಚರಿಸುತ್ತುಂ ದೇವರಂ ಧ್ಯಾನಿಸುತ್ತಂ ದರ್ಶನ -ಜ್ಞಾನ-ಚಾರಿತ್ರಂಗಳನಾರಾಧಿಸುತ್ತುಂ ಮುಡಿಪಿ ಸೌಧರ್ಮ ಕಲ್ಪದೊಳ್ ಸ್ವಸ್ತಿಕಾವರ್ತಮೆಂಬ ವಿಮಾನದೊಳೊಂದು ಸಾಗರೋಪಮಾಯುಷ್ಯಮನೊಡೆಯರ್ ಸಾಮಾನಿಕ ದೇವರಾಗಿ

ನಾಲ್ವರುಂ ಪುಟ್ಟಿದರ್ ಮತ್ತುಪರಿಚರನಪ್ಪರಸಂ ಮಿಥ್ಯಾದೃಷ್ಟಿಯಪ್ಪುದಱಿಂ ತನ್ನುದ್ಯಾನವನದೊಳಂ ರಾಜ್ಯ ವಿಭೂತಿಯೊಳಾದವಾನುಂ ಮೋಹಿಸುವ ಬುದ್ಧಿಯನೊಡೆಯನಾರ್ತಧ್ಯಾನದಿಂ ಸತ್ತು ತನ್ನ ಮನೋಹರೋದ್ಯಾನದೊಳ್ ಪೆರ್ವಾವಾಗಿ ಪುಟ್ಟಿದಂ ಮತ್ತೆರಡನೆಯ ದಿವಸದಂದು ಸಾಮಂತ -ಮಹಾಸಾಮಂತರ್ಕಳುಂ ಪರಿವಾರಮುಂ ನೆರೆದು ಅನಂತವೀರ್ಯನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿದರ್ ಮೂಱನೆಯ ದಿವಸದಂದು ಸಾರಸ್ವತರೆಂಬಾಚಾರ್ಯರ ವಧಿಜ್ಞಾನಿಗಳಯ್ನೂರ್ವರ್ ಗ್ರಾಮ-ನಗರ-ಖೇಡ -ಮಡಂಬ -ಪಟ್ಟಣ- ದ್ರೋಣಾಮುಖಂಗಳಂ ವಿಹಾರಿಸುತ್ತುಂ ಆ ಪೊೞಲ್ಗೆ ಬಂದು ಮನೋಹರಮೆಂಬ ನಂದನವನದೊಳಗಣ ಸ್ಫಟಿಕ ಶಿಲಾತಳದ ಮೇಗಿರ್ದ್ದೋರಂ ರಿಷಿನಿವೇದಕಂ ಕಂಡು ಬಂದನಂತವೀರ್ಯ ನೃಪತಿಗೆ ಪೇೞ್ದೊಡಾತನುಂ ಸಪರಿವಾರಂ ಬೆರಸು ಭಟಾರರಲ್ಲಿಗೆ ವಂದನಾಭಕ್ತಿಗೆ ಪೋಗಿ ಬಲಗೊಂಡು ಗುರಭಕ್ತಿಗೆಯ್ದು ಬಂದಿಸಿ ಉೞಿದ ರಿಷಿಯರೆಲ್ಲರುಮಂ ಗುರು ಪರಿವಿಡಿಯಿಂ ಬಂದಿಸಿ ಪಿರಿದು ಬೇಗಂ ಧರ್ಮಮಂ ಕೇಳ್ದು ಬೞಿಕ್ಕಿಂತೆಂದು ಬೆಸಗೊಂಡೊಡೆ ಭಟಾರಾ ಎನ್ನ ತಂದೆಗಂ ತಾಯ್ವಿರ್ಕಳ್ಗಮಾಕಸ್ಮಿಕಮೊರ್ಮೊದಲನಿಬರ್ಗಮೇ ಕಾರಣಂ ಸಾವಾದುದು ಆರ್ ಕೊಂದರೆಂದು ಬೆಸಗೊಂಡೊಡೆ ಭಟಾರರಿಂತೆಂದು ಪೇೞ್ದರ್

ಸುದರ್ಶನಮೆಂಬ ಬೊಡ್ಡಣಬಾವಿಯೊಳ್ ನಿಮ್ಮ ತಂದೆಯುಂ ತಾಯ್ವರುಂ ಜಲಕ್ರೀಡೆಯನಾಡುತ್ತಿರ್ಪನ್ನೆಗಂ ಭೌಮವಿಹಾರಾರ್ಥಂ ವಿಮಾನಮನೇಱಿ ಪೋಗುತ್ತಿರ್ದ್ದ ವಜ್ರದಾಡನೆಂಬ ವಿದ್ಯಾಧರನುಮಾತನ ಮಹಾದೇವಿ ಮದನವೇಗೆಯೆಂಬೊಳಾ ಇರ್ವ್ವರುಂ ಕಂಡು ನಿಮ್ಮ ತಂದೆಯ ವಿಭವಮಂ ಮದನವೇಗೆ ಪೊಗೞ್ದೊಡೆ ವಜ್ರದಾಡಂಗೆ ಪುರುಡು ಪುಟ್ಟಿ ಬಾವಿಯ ಬಾಗಿಲು ನಿಚ್ಛಿದ್ರಮಾಗಿ ಮುಚ್ಚಿ ಮೇಗೆ ಪಿರಿದೊಂದು ಸಿಲೆಯನಿಕ್ಕಿ ಪೋದೊಡೀ ಪಾಂಗಿನೊಳನಿಬರ್ಗ್ಗಂ ಮೃತ್ಯುವಾದುದೆಂದು ಪೇೞ್ದೊಡೆ ಮತ್ತಮವರೆಲ್ಲಿ ಪುಟ್ಟಿದರೆಂದು ಬೆಸಗೊಂಡೊಡೆ ಭಟಾರರಿಂತೆಂದರ್ ನಿಮ್ಮ ತಾಯ್ವಿರ್ಕಳ್ ಬ್ರತಂಗಳಂ ಪ್ರತಿಪಾಲಿಸಿ ಸಾವ ಕಾಲದೊಳಾಹಾರಕ್ಕಂ ಶರೀರಕ್ಕಂ ಜಾವಜ್ಜೀವಂ ನಿವೃತ್ತಿಗೆಯ್ದು ಸಮಾಧಿಮರಣದಿಂದಂ ಮುಡಿಪಿ ಸೌಧರ್ಮ ಕಲ್ಪದೊಳ್ ಸ್ವಸ್ತಿಕಾವರ್ತಮೆಂಬ ವಿಮಾನದೊಳೊಂದು ಸಾಗರೋಪಮಾಯುಷ್ಯಮನೊಡೆಯರ್ ಆನಂದನುಂ ಸನಂದನುಮೆಂಬ ದೇವರ್ಕಳಾಗಿ ಪುಟ್ಟಿದವರ್ಗ್ಗಳ್ ನಿಮ್ಮುಮಂ ನಿಮ್ಮ ತಂದೆಯುಮಂ ಪ್ರತಿಬೋಧಿಸಲ್ಕೀಗಳೆ ಬಂದಪ್ಪರೆಂದು ಪೇೞ್ದು ನಿಮ್ಮ ತಂದೆಯುಂ ತನ್ನ ಪೆಂಡಿರ್ಮ್ಮಕ್ಕಳ್ ಪರಿವಾರಂ ಕಸವರ ಮೆಂದಿವಱೊಳ್ ಮೋಹಿಸುವ ಬುದ್ಧಿಯನೊಡೆಯನಾಗಿ ಇಲ್ಲಿಯ ನಂದನವನದೊಳಗಣ ಸರ್ಪಾಶ್ರಯಮೆಂಬ ಗುಹೆಯೊಳ್ ಮಹಾಕಾಯಂ ಪೆರ್ವಾವಾಗಿ ಪುಟ್ಟಿದನೆಂದೊಡೆ ಧರ್ಮಮಂ ಕೈಕೊಳ್ಗುಮೋ ಕೈಕೊಳ್ಳನೋ ಎಂದು ಬೆಸಗೊಂಡೊಡೆ ಭಟಾರರಿಂತೆಂದರ್ ನೀನುಂ ಪೇೞ್ ಧರ್ಮಮಂ ಕೈಕೊಳ್ಗುಮೆಂದೊಡೆ ತಮ್ಮಂದಿರುಂ ಪರಿವಾರಮಂ ಬೆರಸು ಪೋಗಿ ಗುಹೆಯ ಬಾಗಿಲೊಳಿರ್ದ್ದಿಂತೆಂದಂ ಎಲೆ ಉಪರಿಚರ ಮಹಾರಾಜಾ ಪೆರ್ವಾವಾಗಿ

ಪುಟ್ಟಿಯುಮಿಂತಪ್ಪವಸ್ಥೆಯೊಳಂ ಬಾಟ್ಕೆಯೊಳಂ ಇನ್ನುಂ ನಿನಗಟ್ಟಿಯೇ ನಿನಗೆ ದೋಷಮಿಲ್ಲೇಕೆಂದೊಡೆ ಜೀವಂಗಳ ಸ್ವಭಾವಮಿಂತುಂಟೆ -

॥ಶ್ಲೋಕ॥ ಯತ್ರ ಯತ್ರೋಪಪದ್ಯಂತೇ ಜೀವಾಃ ಕರ್ಮಾವಶಾನುಗಾಃ
ತತ್ರ ತತ್ರ ರತಿಂ ಯಾಂತಿ ಸ್ವೇನ ಸ್ವೇನೈವ ಕರ್ಮಣಾ ॥

॥ವಚನ॥ ಎಂಬುದುಂ ತನ್ನ ಕರ್ಮವಶದಿಂ ಸಂಸಾರಿ ಜೀವಂಗಳೆಲ್ಲಿ ಪುಟ್ಟುಗುಮಲ್ಲಿಯಲ್ಲಿಯಟ್ಟಿಯುಂ ಮೆಚ್ಚುಗೆಯುಮಕ್ಕುಂ ಮುನ್ನೆ ನೀಂ ಕರುಮಾಡದೊಳ್ ಸಿಂಹಾಸನ ಮಸ್ತಕಸ್ಥಿತನಾಗಿ ಸಾಮಂತ ಮಹಾಸಾಮಂತರ್ಕಳಿಂದ ಮಯ್ಯೂರ್ವರರರಸಿಯರ್ಕಳಿಂದಂ ಪೆಂಡವಾಸದಗ್ಗಳದ ಸೂಳೆಯರ್ಕಳಿಂದಂ ಪರಿವಾರದಿಂದಮಿಂತಪ್ಪ ದಿವ್ಯ ಸಭೆಯಿಂದಂ ಪರಿವೇಷ್ಟಿತನಾಗಿ ಆಟ ಪಾಟ ವಿನೋದಂಗಳಿಂದಿಪ್ಪಾತನೆ ಈಗ ಪೆರ್ವಾವುಗಳೊಡನೆ ನೆರೆದಿರವಾಯ್ತು ಮತ್ತೆ ದಿವ್ಯಮಪ್ಪ ಶಯ್ಯಾತಳದೊಳ್ ನಿದ್ರೆಗೆಯ್ವಾತನೆಯ್ ಪೆಟ್ಟೆಗಳುಂ ಕಿಱುಗಲ್ಗಳುಮೊತ್ತೆ ನಿದ್ರೆಗೆಯ್ವೆಯಾದಯ್ ಮತ್ತಮೃತೋಪಮಮಪ್ಪ ದಿವ್ಯಾಹಾರಮನುಣ್ಬಾತನೆ ಈಗಳ್ ಕಪ್ಪೆಗಳುಮೆಸಡುಗಳುಮಿಲಿಗಳುಮೊಂತಿಗಳುಂ ಮೊದಲಾಗೊಡೆಯ ಜೀವರಾಶಿಗಳಂ ಕೊಂದು ತಿಂಬೆಯಾದ್ಯೆ ಇನ್ನವಂ ತಿಂದು ನರಕಂ ಪೊಗಲಾಟಿಸಿದಪ್ಪೆ ಎಂದು ಪೇಟೆ ಜಾತಿಸ್ಮರನಾಗಿ ಗುಹೆಯ ಬಾಗಿಲೊಳ್ ಬಂದಿರ್ದ್ದು ಧರ್ಮಮಂ ಕೇಳುತ್ತಿರ್ಪ್ಪನ್ನೆಗಮಾ ಸೌಧರ್ಮಕಲ್ಪದೊಳ್ ಪುಟ್ಟಿರ್ದ ನಾಲ್ವರು ದೇವಿಯರ್ಕಳ್ ತಮ್ಮ ಮುನ್ನಿನ ಪೆಣ್ಣರೂಪುಗಳಂ ಕೈಕೊಂಡು ಬಂದು ಮುಂದೆ ನಿಂದಾಗಳ್ ಮಕ್ಕಳ್ ತಮ್ಮ ತಾಯ್ವಿರ್ಕಳ್ಗೆ ಕ್ಷೇಮಂಗುಡಲೆಂದು ಪೋದೊಡನ್ನೆಗಮವರಂ ಮುಟ್ಟದೆ ಮೇಗಣ್ಗೆ ನೆಗೆದಿರ್ದ್ದೊಡಿದೇನೆಂದು ಬೆಸಗೊಂಡೊಡವರ್ ವಜ್ರದಾಡಂ ಕೊಲೆ ಸತ್ತು ತಮ್ಮ ದೇವಗತಿಯೊಳ್ ಪುಟ್ಟಿದ ತೆಱನೆಲ್ಲಮಂ ಪೇಟ್ಟು ಪರಿಚರ ಮಹಾನೃಪತಿಯಂ -

ವೃತ್ತ ॥ ಏತತ್ ಕ್ಷೇತ್ರಂ ಮದೀಯಂ ಗೃಹಮಿದಮಪರಂ ಮಾತೃಭಾರ್ಯಾ ಮಮೈತಾಃ
ಪುತ್ರೋಮೇಯಂ ಮೇ ಸುಕಾಂತ ಸ್ವಸೃ ದುಹಿತೃಜನೋ ಮಾನವೋ ಬಂಧುವರ್ಗಃ
ಅಶ್ವಾದಾಸಾ ಮನುಷ್ಯಾ ಮಮ ಪರಮಹಿತಾ ದ್ರವ್ಯಗಾವೋ ಮಹಿಷ್ಯಃ।
ಇತ್ಯೇವಂ ಮೇ ಬ್ರುವಾಣೋ ನರಪಶು ನಿರತಂ ನಾಶಯತ್ಯಾತ್ಮಕಾರ್ಯಂ ॥

ಮತ್ತಂ॥ ಅರ್ಥೋ ಮೇ ಭಾರ್ಯಾ ಮೇ ಪುತ್ರೋ ಮೇ ಸ್ವಜನ ಬಂಧುವರ್ಗೋ ಮೇ
ಇತಿ ಮೇ ಮೇ ಕುರ್ವಾಣಂ ಪುರುಷಂ ಪಸುಂ ಹಂತಿ ಕಾಲಳವೃಕಃ ॥

ಎಂದಿವರರ್ಥಮನಿತೆಂದು ಪೇಟ್ದರ್ - ಎನ್ನಮಾಡಮೆನ್ನ ಪೊಟಲ್ ಎನ್ನ ನಾಡೆನ್ನ ತಾಯೆನ್ನ ಪೆಂಡಿರೆನ್ನ ಮಕ್ಕಳೆನ್ನ ತಂದೆವಿರೆನ್ನ ಮಾಮಂದಿರ್ ಎನ್ನ ಬಂಧು ವರ್ಗ್ಗಮೆನ್ನಾನೆಗಳೆನ್ನ ಕುದುರೆಗಳೆನ್ನೆಮ್ಮೆಗಳೆನ್ನ ಪಶುಗಳೆನ್ನ ಪರಿವಾರಮೆನ್ನ ತೊತ್ತಿರೆನ್ನ

ಮಾಣಿಕಭಂಡಾರಂ ಸುವರ್ಣಭಂಡಾರಂ ಪಟ್ಟಿಸಭಂಡಾರಮೆಂದಿವಱೊಳ್ ಮೋಹಿಸಿದ ಬುದ್ಧಿಯನೊಡೆಯನಾಗಿಯಾರ್ತಧ್ಯಾನದಿಂದಂ ಸತ್ತು ಪೆರ್ವಾವಾಗಿ ಪುಟ್ಟಿರ್ದ ಈಗಳಾಮುಂ ಪೆಂಡಿರಾಗಿಯುಮಿನಿವಿರಿದು ಶ್ರೀಯುಂ ವಿಭವಮುಂ ದೇವತ್ವಮುಮನೆಯ್ದಿದೆವೆಂದು ತಮ್ಮ ದೇವತ್ವಮಂ ತೋಱಲ್ವೇಡಿ ಆಕಾಶಮೆಲ್ಲಂ ಚಿತ್ರಪಟಂಗೆದಱಿದಂತೆ ವಿಮಾನಂಗಳಿಂ ಸಂಛನ್ನವಾಗಿ ವ್ಯಾಪಿಸಿ ಪರಿವಾರ ದೇವರ್ಕ್ಕಳಿಂದಂ ದೇವಿಯರ್ಕ್ಕಳಿಂದಂ ಗಣಿಕೆಯರ್ಕ್ಕಳಿಂದಮಪ್ಸರೆಯರ್ಕ್ಕಳಿಂದಂ ಪರಿವೇಷ್ಟಿತರಾಗಿ ನಾಲ್ವರುಂ ದೇವರ್ಕ್ಕಳ್ ಘಂಟಾ ಜಾಳ ಮುಕ್ತಾಜಾಳ ಹೇಮಜಾಳಂಗಳಿಂದಂ ಸಮನ್ವಿತಮಪ್ಪ ತನ್ನ ರತ್ನಮಯಮಾಗುತ್ತಿರ್ದ ವಿಚಿತ್ರಮಪ್ಪ ವಿಮಾನಂಗಳನೇಱಿ ದೇವಿಯರ್ಕ್ಕಳ್ ಚಾಮರಂಗಳನಿಕ್ಕೆಯಾಟ ಪಾಟ ವಿನೋದಂಗಳಿಂದಿಂತು ತಮ್ಮೈಶ್ವರ್ಯಮೆಲ್ಲಮಂ ತೋಱಿ ಇಂತೆಂದರ್ -ಇದೆಲ್ಲಮೆಮಗೆ ಜಿನಧರ್ಮದ ಪರಮತತ್ವದ ಪ್ರಸಾದದಿನಾದುದೆಂದು ಮತ್ತುಪರಿಚರ ಮಹಾರಾಜಂ ಪುರುಷನಾಗಿಯುಂ ಮಹಾಸತ್ವಮನೊಡೆಯನಾಗಿಯುಂ ಮಿಥ್ಯಾತ್ವಂ ಕಾರಣಮಾಗಿ ಆರ್ತಧ್ಯಾನದಿಂ ಸತ್ತು ಪೆರ್ವ್ವಾವಾಗಿ ಪುಟ್ಟಿದನೆಂದು ಪೇೞ್ದು ಪೆರ್ವಾವುಮಂ ಮಕ್ಕಳುಮಂ ಪ್ರತಿಬೋಧಿಸಿ ತಮ್ಮ ಸ್ವರ್ಗಲೋಕಕ್ಕೆ ಪೋದರ್ ಮತ್ತೆ ಪೆರ್ವಾವುಮೆನ್ನರಸಿಯರ್ಕ್ಕಳ್ ದೇವರಾಗಿ ಪುಟ್ಟಿದರೆಂದಾದಮಾನುಂ ಸಂತೋಷಂಬಟ್ಟು ಧರ್ಮಪರಿಣಾಮದೊಳ್ ಕೂಡಿರ್ದ್ದುದಂ ಸಾರಸ್ವತ ಭಟ್ಟಾರಕರಱಿದು ರಿಷಿಸಮುದಾಯಂ ಬೆರಸು ಪೆರ್ವ್ವಾವಿರ್ದ್ದೆಡೆಗೆ ಪೋಗಿ ಇಂತೆಂದು ಧರ್ಮಮಂ ಪೇೞ್ದಪರ್

ಗಾಹೆ ॥ ಸೋ ಧಮ್ಮೋ ಜತ್ಥ ದಯಾ ಸೋವಿ ತವೋ ವಿಸಯಣಿಗ್ಗಹೋ ಜತ್ಥ
ದಸಅಟ್ಠ ದೋಸರಹಿಯೋ ಸೋ ದೇವೋ ಣತ್ಥಿ ಸಂದೇಹೋ ॥

ಮತ್ತಂ -

ಶ್ಲೋಕಂ ॥ಯತ್ನೇನ ಪಾಪಾನಿ ಸಮಾಚರಂತಿ ।
ಧರ್ಮಂ ಪ್ರಸಂಗಾದಪಿ ನಾಚರಂತಿ ॥
ಆಶ್ಚರ್ಯಮೇತದ್ಧಿ ಮನುಷ್ಯಲೋಕೇ ।
ಕ್ಷೀರಂ ಪರಿತ್ಯಜ್ಯ ವಿಷಂ ಪಿಬಂತಿ ॥
ಸಮಾಗಮ ಸ್ಸಾಮಪರೋಹಿ ಸರ್ವೇ ।
ವಿಭೂತಯೋಪಿ ಪ್ರತಿ ಭಂಗುರಾಃ ಸ್ಯುಃ ॥
ಧರ್ಮೋಽ ಹರ್ತಾಮೇವ ಸುಶಾಶ್ವತೋಯ - ।
ಮಿತಿ ಪ್ರಚಿಂತ್ಯಾತ್ಯರತಿರ್ಬಭೂವ ॥
ನಿಶ್ಚಯಮುಂದಿತಸ್ಯ ರವೇಃ
ಪತನಂ ಜಾತಸ್ಯ ಮರಣಪಿ ಸರ್ವಸ್ಯ ॥
ತಸ್ಮಾದ್ ವಿದುಷಾಂ ಭಾವ್ಯಂ
ಸದೈವ ಜಾತೇನಧರ್ಮಕರ್ಮರತೇನ

ಪುಷ್ಪ ಫಲಭಾರ ತರುವದ್ ಯೌವನ ಬಲ ವಿಭವರೂಪ ಸೌಬಾಗ್ಯಾನಿ ||
ಗಿರಿಸರಿದಂಭಃ ಪ್ರತಿಮಂ ಸರ್ವೇಷಾಂ ಜೀವಿತಂ ಚ ಧಾವತಿ ಶೀಘ್ರಂ ||

ಗಾಹೆ || ಏಗೋಯ ಮರದಿ ಜೀವೋ ಏಗೋಯ ದಿವಂ ಉವವಜ್ಜಾ ಇ
ಏಗೋ ಸ ಜಾ ಇ ಮರಣಂ ಏಗೋ ಸ ಜಾಇಣೆರಯಂ ವ ||

ಶ್ಲೋಕ || ಕಸ್ಯ ಮಾತಾ ಪಿತಾ ಕಸ್ಯ ಕಸ್ಯ ಭಾರ್ಯಾ ಸುತೋಪಿ ವಾ |
ಜಾತೌ ಜಾತೌ ಹಿ ಜೀವಾನಾಂ ಭವಿಷ್ಯಂತಿ ಭವ ಪರೇ
ಅರ್ಥಾಗೃಹೇಷು ತಿಷ್ಠಂತಿ ಶ್ಮಶಾನೇಷು ಚಬಾಂಧವಾ ||
ಶರೀರಂ ಜ್ವಾಲಮಾಲಾಯಾಂ ಸುಕೃತಂ ದುಷ್ಕೃತಂ ಬ್ರಜೇತ್ |

ಎಂದಿತು ಪಿರಿದು ಬೇಗಂ ಧರ್ಮಂ ಪೇೞ್ದು ಶ್ರಾವಕ ಬ್ರತಂಗಳನೇಱಿಸಿ ಮತ್ತಮಿಂತೆಂದರ್ ನಿನಗಾಯುಷ್ಯಂ ಪದಿನಯ್ದು ದಿವಸಂ ಎಂದು ಪೇೞ್ದೊಡಾ ಮಾತಂ ಕೇಳ್ದು ಆಹಾರ ಶರೀರಕ್ಕಂ ಜಾವಜ್ಜೀವಂ ನಿವೃತ್ತಿಗೆಯ್ದು ಸನ್ಯಸನಂ ಗೆಯ್ದಿರ್ದೊಡೆ ಭಟಾರರ್ ಅನಂತವೀರ್ಯಂಗೆ ಪೇೞ್ದರಿದು ಸನ್ಯಸನಂಗೆಯ್ದಿರ್ದ್ದುದಿದಕ್ಕೆ ಪೂಜೆಯಂ ಮಾಡಿಮೆನೆ ಆತನುಂ ಪಿರಿಯ ಮಂಟಪಮಂ ಮಾಡಿಸಿ ಅಲ್ಲಿ ನಾನಾ ಪ್ರಕಾರದ ನೇತ್ರದ ಪಳಿಯುಲ್ಲವಂಗಳುಂ ಧ್ವಜಂಗಳಂ ಕಟ್ಟಿಸಿ ದೇವತಾ ಪ್ರತಿಮೆಯಂ ನಿಱಿಸಿಯಭಿಷೇಕಂ ಗೆಯ್ಯುತ್ತುಂ ಮಹಾ ಮಹಿಮೆಯಂ ಪೂಜೆಗಳಂ ಪೊಱಮಡಿಸುತ್ತಿರೆ ಭಟಾರರುಮಾರಾಧನೆಯನರ್ಚಿಸಿ ಸ್ವಾಧ್ಯಾಯಂ ಗೊಂಡಿಂತೆಂದಾರಾಧನೆಯಂ ವಕ್ಖಾಣಿಸಲ್ ತಗಳ್ದರ್ -

ಸನ್ಯಸನೇಸ್ತಿಮಿತಯೋ ಭ್ರೂಯಾತ್ ಪ್ರಾಣ್ಯೈಃ ಕಂಠಗತ್ಯೈರಪಿ |
ಸಗರ್ಭೇನ್ಮೋಕ್ಷಸದನಂ ಪುನರಾಗಮ ವರ್ಜನಂ ||
ಇಹ ಜನ್ಮಕೃತಂ ಪಾಪಂ ಯಚ್ಚ ಪಾಪಂ ಪುರಾಕೃತಂ |
ಸನ್ಯಸನೇನ ತತ್ಸರ್ವಂ ದಹ್ಯತ್ಯಗ್ನಿರಿವೇಂಧನಂ

ಅಜ್ಞಾನಭಾವಾತ್ ಕೃತಕರ್ಮಭಾರಃ |
ಸನ್ಯಾಸನಾತ್ ಸತ್ ಪ್ರಳಯಂ ಪ್ರಯಾತಿ ||
ಮುಹೂರ್ತಕಾಲೇ ಹೃದಯೇ ಲಲಾಟೇ |
ಜೀವಂ ಕರಂ ನ್ಯಸ್ಯ ಸಮ ಸ್ಥಿತಸ್ಯ ||

ಗಾಹೆ || ಉಡ್ಢಮಹೇ ತಿರಿಯಮ್ಹಿಯಮದಾಣೆಯ ಕಾಮಗಾಣಿ ಮರಣಾಣಿ ||
ದಂಸಣಣಾಣ ಸಹಗದೊ ಪಂಡಿಯಮರಣಂ ಅಣುಮಲಿಸ್ಸ ||

ಉವ್ವೇಮರಣಂ ಜಾಈಮರಣಂ ಣೆರಏ ಸುವೇದಣಾಓಯ |
ಏದಾಣೆ ಸಂಚರಂತೋ ಪಂಡಿಯಮರಣಂ ಅಣುಮತಿಸ್ಸ ||

ಎಕ್ಕಂ ಪಂಡಿಯ ಮರಣಂ ಛಿಂದಿ ಜಾದೀ ಸದಾಣಿ ಬಹುಗಾಣಿ ॥
ತಂ ಮರಣಂ ಮರಿದವ್ವಂ ಜೇಣ ಮದಂ ಸುಮ್ಮ್ರದಂ ಹೋಇ ॥

ಜ ಇ ಉಪ್ಪಜ್ಜ ಇ ದುಕ್ಖಂ ತೋ ದತ್ತವ್ವೋ ಸಭಾವದೋ ಣಿರಯೇ ॥
ಕದಮಂ ಮ ಏಣ ಪತ್ತಂ ಸಂಸಾರೇ ಸಂಸರಂತೇಣ॥

ಸಂಸಾರ ಚಿಕ್ಕವಾಳಂ ಹಿ ಮ ಏ ಸವ್ವೇ ವಿ ಪೊಗ್ಗಳಾ ಬಹುಸೋ ।
ಆಹಾರಿದಾಯ ಪರಿಣಾಮಿ ದಾಯ ಣ ಚಮೇ ಗದಾ ತಿತ್ತೀ ॥

ಆಹಾರಣಮಿತ್ತಂ ಕಿರ ಮಿಚ್ಛಾಗಚ್ಛಂ ಸತ್ತಮಂ ಪುಢವಿಂ॥
ಸಚ್ಚಿತ್ತೋ ಆಹಾರೋ ಣಖಮದಿ ಮಣಸಾ ವಿ ಪತ್ಥೇದು ॥

ತಣಕಟ್ಠೇಣವ ಅಗ್ಗಿಂ ಲವಣ ಸಮುದ್ದೋ ಣದೀಸಹಸ್ಸೇಹಿ ।
ಣ ಇ ಜ ಜೀವೋ ಸಕ್ಕೋ ತಪ್ಪೇದುಂ ಕಾಮಭೋಗೇಹಿಂ ॥

ಜಹಜಹ ಭುಂಜ ಇ ಭೋಗೇ ತಹತಹ ಭೋಗೇಸು ವಡ್ಢದೇತಣ್ಣಾ ।
ಅಗ್ಗೀವ ಇಂಧಣಾಇಂ ತಣ್ಹಾದೇ ಹೊಂತಿ ಸೇ ಭೋಗಾ॥

ಸಲವಣರಸಮಂಭೋ ಭುಜ್ಯಮಾನಂ ತೃಷಾರ್ತೈ ।
ರಧಿಕತರ ತೃಷಾರ್ತಂ ದುಃಖಿತಾನೇನಂ ಕುರ್ಯಾತ್

ವಿಷಯ ಸುಖಮಪೀದಂ ಭುಜ್ಯಮಾನಂ ತೃಷಾರ್ತೈ
ರಧಿಕತರ ತೃಷಾರ್ತೈ ದುಃಖಿತಾನೇನ ಕುರ್ಯಾತ್ ॥

ಆರ್ಯೆ । ಯದ್ಯಪಿ ಸಿ ಸೇವ್ಯಮಾನೋ ಮನಸಸ್ಸಂತುಷ್ಟಿ ಕಾರಕಾ ವಿಷಯಾಃ
ಕಿಂಪಾಕಫಲಾದನುವದ್ ಭವಂತಿ ಪಶ್ಚಾದತಿ ದುರಂತಾಃ ॥

ವೃತ್ತ ॥ ಮರ್ದುಂ ಮಂತ್ರಮುಮಿಷ್ಟದೇವತೆಗಳುಂ ದಿವ್ಯಾಸ್ತ್ರಮುಂ ಕೋಂಟೆಯುಂ
ದುರ್ಗಂ ಪೊರ್ದಿದ ಚಾತುರಂಗಬಲಮುಂ ಮೆಯ್ಗಾಪುಮಾ ವೇಳೆಗೊಂ
ಡಿರ್ದತ್ಯುಗ್ರ ಭಟರ್ಕಳುಂ ಕವಚಮುಂ ಮಿತ್ರರ್ಕಳುಂ ಮಿಟ್ಟು ಮೇ ।
ಲೆರ್ದಾಗಳ್ ಶರಣಪ್ಪೊಡೇಕೆ ಮಡಿದರ್ ಪನ್ನಿರ್ವರುಂ ಚಕ್ರಿಗಳ್ ॥

ಸಾವನಿಂತೊಂದವಸ್ಥೆ ತನಗಾದೆಡೆಯೊಳ್ ತಱಿಸಂದು ತತ್ವಮಂ ।
ಭಾವಿಸಿ ಬಾಹ್ಯ ವಸ್ತುಗಳೊಳೊಂದದೆ ತನ್ನೊಳು ನಿಂದು ಕರ್ಮನಿ ।
ಶ್ರಾವಣೆಯಿಂ ವಿಶೋಧಿ ದೊರೆಕೊಂಡೊಡೆ ಗೆಲ್ದು ಪರೀಷಹಂಗಳಂ ।
ಜೀವಮನಿಂತು ಸಂತಮೊಡಲಿಂ ಕಳೆಯೆಂಬುದು ಜೈನಶಾಸನಂ ॥

ಆಱೊಳುಮಿಲ್ಲ ಮೋಹಮೆನಗೆಂಗೆ ಜಿನೇಂದ್ರ ಪದಂಗಳುಗ್ರ ಸಂ ।
ಸಾರ ಹರಂಗಳೆಂಗೆ ಪೆಱದಿಲ್ಲೆನಗೆನ್ನಱಿವಲ್ಲದೆಂಗೆ ನಿಂ ।

ದಾರಯೆ ಧರ್ಮಮೊಂದೆ ಶರಣೆಂಗೆ ಪಾಳಾಳಮನೋಲ್ದೆನಿನ್ ನಮಃ।
ಸ್ಕಾರಮೆ ಸಾಲ್ಗು ಮೆಂಬಿತನೆನ್ಗೆನಲಾರ್ಪೊಡೆ ಜೀವಿತಾಂತ್ಯದೊಳ್ ॥

ಜಿಣವಯಣಮೋಸಹಮಿಣಂ ವಿಸಯಸುಹ ವಿರೇಯಣಂ
ಅಮದಭೂದಂ ಜರಮರಣ ಜಮ್ಮವಾಹೀ ಖಿಯಕರಣಂ ಸವ್ವಜೀವಾಣಂ ॥

ಎಕ್ಕಮ್ಮಿ ಭವಗ್ಗಹಣೇ ಸಮಾಹಿಮರಣಂ ಪಿಬೆಜ್ಜ ಜದಿಜೀವೋ ।
ಸತ್ತಟ್ಠ ಭವಗ್ಗಹಣೇ ಣಿವ್ವಾಣಮಣುತ್ತರಂ ಲಹ ಇ ॥

ಸತ್ತಕ್ಖರ ಸಜ್ಝಾಯಂ ಅರಹಂತಾಣಂ ಣಮೊತ್ತಿ ಭಾವೇಣಂ॥
ಜೋಕುಣ ಇ ಅಣ್ಣ ಮ ಈ ಸೋಪಾವ ಇ ಸವ್ವಕಲ್ಲಾಣಂ ॥

ಏಸೋ ಪಂಚಣಮೋಕ್ಕಾರೋ ಸವ್ವ ಪಾವಪಣಾಸಣೋ ।
ಮಂಗಳೇಸು ಯ ಸವ್ವೇಸು ಪಢಮಂ ಹವ ಇ ಮಂಗಳಂ ॥

ಭಾವಣಮೊಕ್ಕಾರಗದೋ ಝೂಯಂ ಜೋ ಣೆಯ ಮಿಯಮ್ಮಿ ಚಿತ್ತಮ್ಮಿ ।
ಯೇ ಎಕ್ಕೇಣ ವಿಸುದ್ಧೋ ತೋ ಹೋಹಿ ಸುಮೊಕ್ಖ ಸುಹಭಾಈ ॥

ಆರ್ಯೆ ॥

ಗುರುಮೂಲೇ ಯತಿನಿಚಿತೇ ಚೈತ್ಯೇ ಸಿದ್ಧಾಂತವಾರ್ಧಿ ಸದ್ಫೋಷೇ ॥
ಮಮಭವತು ಜನ್ಮ ಜನ್ಮನಿ ಸನ್ಯಸನ ಸಮನ್ವಿತಂ ಮರಣಂ

॥ವ ॥ ಎಂದಿಂತಾರಾಧನೆಯಂ ಪದಿನೆಯ್ದು ದಿವಸಂ ವಕ್ಖಾಣಿಸಿ ಧರ್ಮಾನುರಾಗದಿಂ ಕೇಳ್ದು ಮುಡಿಪುವಾಗಳ್ ವಜ್ರದಾಡಂ ದುರಾತ್ಮಂ ನಿಷ್ಕಾರಣಮೆನ್ನಂ ಕೊಂದನೆಂದು ಮನದೊಳ್ ರೋಷಮಂ ಬಗೆದು ಮುಡಿಪಿ ಭವನವಾಸಿಗ ಲೋಕದೊಳ್ ಮೂಱು ಪಳಿತೋಪಮಾಯುಷ್ಯಮನೊಡೆಯೊಂ ನಾಗೇಂದ್ರದೇವನಾಗಿ ಪುಟ್ಟಿದೊಂ

ಮತ್ತನಂತವೀರ್ಯನುಂ ಭಟಾರರ್ ಪೇಳೆ ಧರ್ಮಶ್ರವಣಮಂ ಕೇಳ್ದು ಧರ್ಮದ ಫಲದಿಂದಂ ತಮ್ಮ ತಾಯ್ವಿರ್ಕಳ್ ದೇವಗತಿಯೊಳ್ ಪಿರಿದುಂ ವಿಭೂತಿಯನೊಡೆಯರ್ ದೇವರ್ಕಳಾಗಿ ಪುಟ್ಟಿದುದುಮಂ ಕಂಡು ರಾಜ್ಯ ವಿಮೋಹದಿಂ ತಂದೆಯ ಪೊಲ್ಲ ಗತಿಯೊಳ್ ಪುಟ್ಟಿದುದುಮಂ ಕಂಡು ಮನುಷ್ಯ ಜನ್ಮದ ದುರ್ಲಭತ್ವಮುಮಂ ಶರೀರದಶುಚಿತ್ವಮುಮಂ ಭೋಗೋಪಭೋಗಂಗಳಪ್ಪನಿತ್ಯತ್ವಮುಮಂ ಮನದೊಳ್ ಬಗೆದು ಸಂಸಾರ ಶರೀರ ಭೋಗದೊಳಪ್ಪ ವೈರಾಗ್ಯಮನೊಡೆಯನಾಗಿ ಸುಬಾಹುವೆಂಬ ತನ್ನ ಪಿರಿಯ ಮಗಂ ತನ್ನೊಡನೆ ತೊಱೆಯಲ್ ಬಗೆದಿರ್ದೊನಂ ಬಾರಿಸಿ ಬಲ್ಲಾಳ್ತನದಿಂ ರಾಜ್ಯ ಪಟ್ಟಂಗಟ್ಟಿ ಸಂಕ್ಷೇಪದಿಂ ರಾಜ್ಯನೀತಿಯನಿಂತೆಂದು ಕಲ್ಪಿಸಿದಂ -

ವೃತ್ತ ॥ ತೃಷ್ಣಾಂ ಛಿಂದಿ ಭಜ ಕ್ಷಮಾಂ ತ್ಯಜ ಮಳಂ ಪಾಪೇ ರತಿಂ ಮಾಕೃಥಾಃ ।
ಸತ್ಯಂ ಬ್ರೂಹ್ಯನುಯಾಹಿ ಸಾಧುಪದವೀಂ ಸೇವಸ್ವ ವಿದ್ವಜ್ಜನಂ ॥
ಮಾನ್ಯಾನ್ಮಾನಯ ವಿದ್ವಿಷೋಽಪ್ಯನುನಯ ಪ್ರಖ್ಯಾಪಯ ಪ್ರಶ್ರಯಂ ಸ್ವಾನ್
ಗುಣಾನ್ ।
ಮೈತ್ರೀಂ ಪಾಲಯ ದುಃಖಿತೇ ಕುರು ದಯಾಮೇತತ್ ಸತಾಂ ಚೇಷ್ಟಿತಂ ॥

ಎಂದಿಂತು ಮಗನಂ ಕಲ್ಪಿಸಿ ಎಲ್ಲರೊಳಂ ನಿಃಶಲ್ಯಂಗೆಯ್ದು ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ಪಲಂಬರರಸು ಮಕ್ಕಳ್ವೆರಸು ಸಾರಸ್ವತ ಭಟಾರರ ಪಕ್ಕದೆ ತಪಂಬಟ್ಟುಗ್ರೋಗ್ರ ಘೋರವೀರತಪಶ್ಚರಣಂಗೆಯ್ದು ಸಮ್ಮೇದ ಪರ್ವತದ ಮೇಗಿರ್ದೆಂಟು ಕರ್ಮಂಗಳಂ ಕಿಡಿಸಿ ಮೋಕ್ಷಕ್ಕೆ ಪೋದಂ

ಮತ್ತಿತ್ತ ಧರಣೇಂದ್ರನೊಂದು ದಿವಸಂ ಜಿನೇಂದ್ರ ಚೈತ್ಯಾಲಯಂಗಳಂ ಬಂದಿಸಲ್ವೇಡಿ ಮಂದರಗಿರಿಗೆ ವಿಮಾನಮನೇಱಿ ಪೋಪಾಗಳ್ ವಜ್ರದಾಡಂ ಮತ್ತಗ್ಗಳಮಪ್ಪಪೂರ್ವ ವಿದ್ಯೆಗಳಂ ಸಾಧಿಸಲ್ವೇಡಿ ಕಳತ್ರಸಹಿತಂ ವಿಮಾನಮನೇಱಿ ಮಂದರಗಿರಿಗೆ ಬಂದಾತನಂ ಕಂಡು ತನ್ನ ವಿಭಂಗಜ್ಞಾನದಿಂದೆನ್ನ ಪಗೆವನೀತನೆಂದಱಿದು ಎಲವೋ ಪಾಪಕರ್ಮಾ ನಿಷ್ಕಾರಣಮೆನ್ನಂ ಜಲಕ್ರೀಡೆಯಾಡುವೊನಂ ಕಳತ್ರ ಸಹಿತ ಕೊಂದೆಯೆಂದು ಮೂದಲಿಸಿಯಾತನ ವಿದ್ಯೆಯೆಲ್ಲಮಂ ಕೊಱೆದಿಕ್ಕಿ ಕಳತ್ರ ಸಹಿತಂ ಪಿಡಿದೆತ್ತುಕೊಂಡು ಪೋಗಿ ಸಮುದ್ರದೊಳ್ ಮಹಾಪಾತಾಳದ ಮೊದಲೊಳಿಕ್ಕಿ ಪುಡುಕುನೀರಟ್ಟುತ್ತುಂ ಪಿರಿದುಂ ಬೇಗಂ ದುಃಖಮನೆಯ್ದಿಸಿ ಕಾಡಿ ಕೊಲೆಯಾತನುಂ ಸತ್ತು ಪ್ರಥಮ ನರಕದೊಳತಿ ಘೋರಮಪ್ಪುದರೊಳ್ ಖಳ ಖಳಮೆಂಬ ನರಕ ಬಿಲದೊಳ್ ಮೂಱು ಪಳಿತೋಪಮಾಯುಷ್ಯಮನೊಡೆಯೊಂ ನಾರಕನಾಗಿ ಪುಟ್ಟಿ ಅಲ್ಲಿಯ ದುಃಖಂಗಳೆಲ್ಲಮನನುಭವಿಸಿ ಆಯುಷ್ಯಾಂತದೊಳ್ ಪೊಱಮಟ್ಟು ಬಂದು ಪಿರಿದಪ್ಪ ನೀಲಗಿರಿಯೆಂಬ ಪರ್ವತದೊಳ್ ಪುಲಿಯಾಗಿ ಪುಟ್ಟಿದೊಂ ಧರಣೇಂದ್ರನುಮಾಯುಷ್ಯಾಂತದೊಳ್ ಬಂದು ಕುರುಜಾಂಗಣಮೆಂಬ ನಾಡೊಳ್ ಹಸ್ತಿನಾಪುರಮೆಂಬ ಪೊಲದನಾಳ್ವೊನಿಕ್ಷ್ವಾಕುವಂಶದ ವಿಜಯದತ್ತನೆಂಬರಸಂಗಂ ವಿಜಯಮತಿ ಮಹಾದೇವಿಗಂ ಗುರುದತ್ತನಾಗಿ ಪುಟ್ಟಿದೊಂ

ಒಂದು ದಿವಸಂ ಪುತ್ರಾರ್ಥಿಯಪ್ಪ ವಿಜಯಮಹಾದೇವಿಯಿಂ ಬೆಸಗೊಳೆ ಪಟ್ಟ ಗುರುಗಳೆಂಬ ರಿಷಿಯರಾದೇಶದಿಂ ಪುಟ್ಟಿದೊಂ ಗುರುಗಳಿತ್ತರಪ್ಪುದಱಿಂದಾತಂಗೆ ಪಿತೃ - ಮಾತೃಗಳ್ ಗುರುದತ್ತನೆಂದು ಪೆಸರನಿಟ್ಟರ್ ಮತ್ತೇೞು ಬರಿಸದೊಳಗೆ ಚತುಃಷಷ್ಟಿಕಲೆಗಳುಂ ದ್ವಾಸಪ್ತತಿ ವಿಜ್ಞಾನಂಗಳುಮೆಲ್ಲಮಂ ನಿರವಶೇಶಂ ಕಲ್ತಾದಮಾನುಂ ರೂಪುಂ ತೇಜಮುಂ ಗಾಡಿಯುಂ ಸೌಭಾಗ್ಯಮುಂ ಭಾಗ್ಯಮುಮನೊಡೆಯನಾಗಿರ್ದ್ದೆಂಟನೆಯ ಬರಿಸದಂದು ಗುರುದತ್ತಂಗೆ ವಿಜಯದತ್ತ ನೃಪತಿ ರಾಜ್ಯಂಪಟ್ಟಂಗಟ್ಟಿ ಸುಧರ್ಮರೆಂಬ ಭಟಾರರ ಪಕ್ಕದೆ ತಪಂಬಟ್ಟನಿತ್ತ ಗುರುದತ್ತ ಕುಮಾರನರಸನಾಗಿ ಸಿಂಹಾಸನ ಮಸ್ತಕಸ್ಥಿತನಾಗಿ ತಂದೆಗೆಂತಪ್ಪೊಡಂ ಕಪ್ಪಂಗೊಡದ ಮಂಡಳಿಕರ್ಕಳ ಮೇಗೆತ್ತಿ ಮೊಟ್ಟಯಿಸಿಯಿಱಿದು ಮಂಡಲಂಗಳುಮಗ್ಗಳ

ವಸ್ತುವಾಹನಂಗಳಂ ಕಪ್ಪಗೊಂಡೆಲ್ಲರುಮನಂಜಿಸಿ ಯಶಮುಂ ಕೀರ್ತಿಯುಮನೊಡೆಯನಾಗಿ ಸಿಂಹಾಸನ ಮಸ್ತಕ ಸ್ಥಿತನಾಗಿ ಇಂತು ಪೃಥಿವಿಯ ರಾಜ್ಯಂಗೆಯ್ಯುತ್ತಿರ್ಪನ್ನೆಗಂ

ಒಂದು ದಿವಸಂ ಪುಲಿಯುಪದ್ರವಮಂ ನಾಡವರ್ಬಂದಿಂತೆಂದು ಪೇಳ್ದರ್ ದೇವಾ ನೀಲಗಿರಿಯೆಂಬ ಪರ್ವತದ ಬಳಸಿಯುಮಿರ್ದ್ದ ನಾಡೆಲ್ಲಂ ಪಾೞಾದುದಾ ಪರ್ವತದ ಗುಹೆಯೊಳೊಂದು ಪೆರ್ಬುಲಿಯಿರ್ದ್ದುದದು ನಾಡವೆರಲ್ಲರುಮಂ ಜವನ ರೂಪಿನೊಳ್ ಕೊಂದಪ್ಪುದಾರಪ್ಪೊಡಂ ನಾಡೊಳಿರಲಣ್ಮರೆಂದೊಡಾ ಮಾತಂ ಕೇಳ್ದು ಪೂರ್ವವೈರಂ ಕಾರಣಮಾಗಿ ಕ್ರೋಧಾಗ್ನಿ ಪೆರ್ಚ್ಚಿ ಕಡುಮುಳಿದು ಪುಲಿಯಂ ಕೊಲಲೆಂದು ಪಯಣಂ ಬೋಗಿ ಪುಲಿಯಿರ್ಪ್ಪ ಗುಹೆಯನೆಯ್ದಿಯದಂ ಬಳಸಿಯಮುಂ ಮುತ್ತಿ ಮಹಾಸಮುದ್ರದ ಗರ್ಜನೆಯನೆ ಪೋಲ್ವ ಜನರವಮುಂ ಪಟುಪಟಹ ಶಂಖ ತಾಳ ಮದ್ದಳೆ ಕಾಹಳಾದಿ ಧ್ವನಿಗಳುಮನೆನಿತೆನತಾ ಪುಲಿ ಕೇಳ್ದು ಮನಿತನಿತಂಜಿ ಗುಹೆಯೊಳಡಂಗಿರ್ದ್ದತ್ತು ಪೊಱಮಡಲೊಲ್ಲದಿರ್ದ್ದೊಡಾ ಗುಹೆಯ ಬಾಗಿಲೊಳೆನಿತಾನುಂ ಪುಲ್ಲುಂ ಪುಳ್ಳಿಯುಮನೊಟ್ಟಿ ಕಿಚ್ಚಂ ತಗುಳ್ಚಿ ಪುಲಿಯಂ ಸುಟ್ಟು ಕೊಂದು ತನ್ನ ಪೊಟಲ್ಗೆ ಪೋಗಿ ಅರಸುಗೆಯ್ಯುತ್ತಿರ್ಪ್ಪಿನಂ ಆ ಪುಲಿಯುಂ ಕರ್ಮನಿರ್ಜರೆಯಿಂ ಸತ್ತು ಸೌರಾಷ್ಟ್ರ ವಿಷಯದೊಳ್ ಪಾರ್ವಂಗಂ ಕಟುಕಿಯೆಂಬ ಪಾರ್ವಂತಿಗಂ ಹಳಮುಖನೆಂಬೊಂ ಮಗನಾಗಿ ಪುಟ್ಟಿದೊಂ

ಮತ್ತಿತ್ತಂಗಮೆಂಬುದು ನಾಡಲ್ಲಿ ಚಂಪಾನಗರಮೆಂಬುದು ಪೊಟಲದನಾಳ್ವೊಂ ಧಾತ್ರಿವಾಹನನೆಂಬರಸನಾತನ ಮಹಾದೇವಿ ಶ್ರೀಮತಿಯೆಂಬೊಳಾಯಿರ್ವ್ವರ್ಗಂ ಮಗಳಭಯಮತಿಯೊಂಬೊಳಾಕೆಯತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿ ಹಾವಭಾವ ವಿಳಾಸವಿಭ್ರಮಂಗಳೊಡೆಯೊಳಾಕೆಯಂ ಗುರುದತ್ತನೆನಿತಾನುಂ ಸೂೞ್ ಬೇಡಿಯಟ್ಟಿದೊಡಮರಸನುಂ ಕುಡಲೊಲ್ಲನಂತವರ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತೊಂದು ದಿವಸಂ ಧಾತ್ರಿವಾಹನ ನೃಪತಿ ತನ್ನ ಬಡಗಿ ವಿಶ್ವಕರ್ಮನುಂ ವಿಶ್ವಮತಿಯುಮೆಂಬೊರಂ ಕರೆಯಿಸಿ ಇಂತೆಂದನಱುದಿಂಗಳೊಳಗೆ ನೀಮಿರ್ವ್ವರುಂ ಓರೋರ್ವ್ವರಯ್ನೂರು ರಥಂಗಳಂ ಬೇಗಂ ಮಾಡಿ ಎನಗೊಪ್ಪಿಸಲ್ವೇೞ್ಕು ಮೆಂದು ಬೆಸನಂ ಪೇೞ್ದೊಡವರುಮಂತೆ ಗೆಯ್ವೆಮೆಂದು ರಥಂಗಳಂ ಮಾಡಲ್ ತಗುಳ್ದಱುದಿಂಗಳೊಳಗಯ್ನೂಱು ರಥಮಂ ಸಮೆಯಿಸಿ ವಿಶ್ವಮತಿಯರಸಂಗೆ ತಂದು ತೋಱಿದೊಡರಸಂ ಕಂಡಾದಮಾನುಮಾತಂಗೊಸೆದು ತುಷ್ಟಿದಾನಮಂ ಕೊಟ್ಟಂ ಮತ್ತೆ ವಿಶ್ವಕರ್ಮನಱುದಿಂಗಳೊಳಗೆ ರಥದೊಂದು ಗಾಲಿಯಂ ಸಮೆಯಿಸಿ ತಂದು ತೋಱಿ ದೊಡರಸಂ ಕಂಡು ಮುಳಿದಾತನಂ ಕೊಲಲ್ ಬಂದೊಡಂಜಿ ಆತನುಮಾ ಗಾಲಿಯಂ ಅರಸನ ಮುಂದೆ ಮಣಿಕುಟ್ಟಿಮಮಪ್ಪ ಭೂಮಿಯೊಳೆತ್ತಿಕ್ಕಿ ಪ್ರಾಣಭಯದಿಂದೋಡಿ ಗುರುದತ್ತ ನೃಪತಿಯಲ್ಲಿಗೆ ಪೋದೊನಾ ಗಾಲಿಯುಂ ಪದಿನಯ್ದು ದಿವಸಂಬರೆಗಂ ತನಗೆ ತಾನೆಯಂತರಿಕ್ಷದೊಳ್ ನೆಲನಂ ಮುಟ್ಟದೆ ತಿಱ್ಱನೆ ತಿರಿಯುತ್ತಿರ್ದ್ದುದಂ ಕಂಡರಸಂ ವಿಶ್ವಕರ್ಮಂಗೊಸೆದಾತನಂ

ಬೇಗಮಾರಯ್ದುಕೊಂಡು ಬನ್ನಿಮೆಂದೊಡೆ ಕೆಲದವರೆಂದರಾತಂ ನಿಮಗಂಜಿಯೋಡಿ ಪೋಗಿ ಗುರುದತ್ತಂಗಾಳಾಗಿರ್ದ್ದನೆನೆ ಕೇಳ್ದರಸಂ ಗುರುದತ್ತನಲ್ಲಿಗೆ ತನ್ನ ಪೆರ್ಗ್ಗಡೆಗಳನಿಂತೆಂದು ಕಲ್ಪಿಸಿಯಟ್ಟಿದಂ ಕಪ್ಪಂ ಬೆರಸೆಮ್ಮ ಬಡಗಿಯಂ ಬೇಗಮಟ್ಟುಗೆಂದು ಪೋಗಿ ಪೇೞಿಮೆಂದೊಡೆ ಅವರುಂ ಪೋಗಿಯಾ ಮಾತಂ ಗುರುದತ್ತ ನೃಪತಿಗೆ ತಮ್ಮರಸಂ ಕಲ್ಪಿಸಿದಂತೆ ನುಡಿದೊಡಾ ಮಾತಂ ಗುರುದತ್ತ ನೃಪತಿ ಕೇಳ್ದಾದಮಾನುಂ ಮುಳಿದಿಂತೆಂದಂ

ಮಂಡಳಮನಾಳ್ವರಸನಾಗಿಯುಂ ಪೆಱರ್ಗೆ ಕಪ್ಪಂಗುಡುವೋಡೀ ಸಿಂಹಾಸನಮುಂ ಬೆಳ್ಗೊಡೆಗಳುಂ ಚಾಮರಂಗಳುಂ ಪಾಳಿಧ್ವಜಂಗಳುಂ ಪಂಚಮಹಾಶಬ್ದಂಗಳುಂ ಸೊರ್ಕ್ಕಾನೆಗಳುಂ ಜಾತ್ಯಶ್ವಂಗಳುಮೆಂಬ ಬಲಂಗಳಿಂ ಕಜ್ಜಮೇನೆಂದು ನಿಮ್ಮರಸಂಗಿಂತೆಂದು ಪೇೞಿಂ ತನ್ನ ಮಗಳಭಯಮತಿ ಕನ್ನೆವೆರಸು ತನ್ನ ಪಟ್ಟವರ್ಧನಮುಮಗ್ಗಳದ ವಸ್ತು ವಾಹನಂಗಳುಮಂ ಬೇಗಮಟ್ಟುವುದಟ್ಟದಾಗಳ್ ತನ್ನ ತಲೆವೆರಸುಕೊಳ್ವೆನೆಂದು ಪೇೞಿಮೆಂದವರ ಪೆರ್ಗ್ಗಡೆಗಳೊಳ್ ನುಡಿದು ನಿಮ್ಮ ಬೞಿಯನೆಯಾನುಂ ಪಯಣಂ ಬಂದೆಪ್ಪೆನೆಂದು ನುಡಿದವರಂ ಪೋಗವೇೞ್ದವರ ಬೞಿಯನೆ ಪಿರಿದು ವಿಭೂತಿಯಿಂ ಚಾತುರ್ದಂತ ಬಲಂ ಬೆರಸು ಪೊಱಮಟ್ಟು ಪಯಣಂಬೋಗಿ ಕತಿಪಯ ದಿವಸಂಗಳಿಂ ಚಂಪಾನಗರಮನೆಯ್ದಿ ಪೊೞಲಂ ಮೂವಳಸು ಬಳಸಿ ಮುತ್ತಿದಾಗಳ್ ಧಾತ್ರಿವಾಹನಂ ತಮ್ಮ ಸಮಸ್ತ ಸಾಧನಂ ಬೆರಸು ಪೊಱಮಟ್ಟೊಡ್ಡಣಮನೊಡ್ಡೆ ಬಿಲ್ಲು ಬಿಲ್ಲೊಳ್ ಕುದುರೆ ಕುದುರೆಯೊಳ್ ರಥಂ ರಥದೊಳಣೆಯಣೆಯೊಳ್ ಘಟೆಯಾನೆ ಘಟೆಯಾನೆಯೊಳ್ ತಳ್ತು ತಾಗಿ ಪಲವು ದಿವಸಂ ಕಾದೆ ಗುರುದತ್ತನೃಪತಿಯ ಪ್ರಧಾನನಪ್ಪ ಮಹಾ ಸಾಮಂತಂ ಮಹೇಂದ್ರದತ್ತನೆಂಬರಸನಾತನ ಮುಂಗೈ ಧಾತ್ರಿವಾಹನನ ಯೋಧನಿಂ ಚಕ್ರಪಾಣಿಯಿಂ ಖಂಡಿಸಿ ನೆಲದೊಳ್ ಬಿರ್ದ್ದದಂ ಪರ್ದ್ದು ಕಂಡು ಕೊಂಡಾಕಾಶದೊಳ್ ಪಾಱಿ ಪೋಗುತ್ತಭಯಮತಿ ತನ್ನ ಕನ್ನೆ ಮಾಡದೆರಡನೆಯ ನೆಲೆಯ ಮುಂದಣ ಚವುಕಿಗೆಯ ಮೇಗೆ ದಾದಿಯುಂ ಸಖೀಜನಂಗಳುಂ ಬೆರಸು ನಡಪಾಡುತ್ತಿರ್ದ್ದಾಕೆಯ ಮುಂದಾ ಕೆಯ್ಯಂ ಪರ್ದ್ದು ತಂದಿಕ್ಕಿದೊಡದು ವಜ್ರ ವೈಡೂರ್ಯ ಪದ್ಮರಾಗ ಪುಷ್ಯರಾಗ ಸಸ್ಯ ಕರ್ಕೇತನ ಇಂದ್ರನೀಲ ಮೊದಲಾಗೊಡೆಯ ಅನರ್ಘ್ಯಮಪ್ಪ ಮಾಣಿಕದಿಂ ಸಮೆದ ನಾನಾ ಪ್ರಕಾರದ ಕಂಕಣಂಗಳಂ ತೊಟ್ಟ ಮುಂಗೆಯ್ಯುಂ ಬೆರಳ್ಗಳುಂ ಶಂಖ ಚಕ್ರ ಪದ್ಮಾಂಕುಶ ಚಾಮರ ತೋರಣ ಪತಾಕಾದಿ ಶುಭ ಲಕ್ಷಣಾಂಕಿತವಾಗಿ ಕೆಂದಾವರೆಯ ಬಣ್ಣದಂತಪ್ಪ ತಳಮುಮಂ ಕಂಡೀ ಕಯ್ಯನೊಡೆಯಾತಂ ಸಾಮಾನ್ಯ ಪುರುಷನಲ್ಲಂ ಪಿರಿಯನರಸನಾಗಲೆವೇೞ್ಕುಮೆಂದು ಮತ್ತೀ ಕೈಯೇಕೆ ಖಂಡಿಸಿ ಬಿರ್ದ್ದದಬ್ಬಾ ಎಂದು ದಾದಿಯಂ ಬೆಸಗೊಂಡೊಡಾಕೆ ಇಂತೆಂದಳ್ ಮಗಳೇ ನೀಂ ಕಾರಣವಾಗಿ ಇಂತಪ್ಪವಯವಂಗಳನೊಡೆಯರಸುಗಳ್ ಪಲಂಬರ್ ಸತ್ತಪ್ಪರೆಂದೊಡಾಂ ಕಾರಣಾಗಿ ಏಕೆ ಸತ್ತಪರು ಎನಗದನಱಿಯೆ ಪೇಳಬ್ಬಾ ಎಂದೊಡಾ ದಾದಿ ಇಂತೆಂದು ಪೇೞ್ಗುಂ

ಕುರುಜಾಂಗಣವೆಂಬುದು ನಾಡದರ್ಕ್ಕೆ ತಿಲಕವೆನೆ ಪೋಲ್ವುದು ಹಸ್ತಿನಾಗಪುರವೆಂಬುದು ಪೊೞಲದನಾದಮಾನುಂ ಸೇವ್ಯಮಪ್ಪುದುದನಾಳ್ವೊಂ

ಗುರುದತ್ತನೆಂಬರಸನಾತನ್ನಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿ ದೀಪ್ತಿ ಧೃತಿ ಕೀರ್ತಿ ಶೌರ್ಯ ವೀರ್ಯ ಬಲ ಪರಾಕ್ರಮಮುಮನೊಡೆಯೊಂ ನವ ಯೌವ್ವನಂ ಸಾಕ್ಷಾತ್ ಕಾಮದೇವನೆಯಾದಮಾನುಂ ಪ್ರಚಂಡ ದೋರ್ದಂಡನುಂ ಬಲಗರ್ಬ್ಬಿತನುಂ ಪರಮಂಡಲಂಗಳಂ ಪಲವುಮನೊಟ್ಟಯಿಸಿ ಕೊಂಡಾಳ್ದಪ್ಪೊನಂತಪ್ಪಾತಂ ನಿನ್ನಂ ಬೇಡಿ ಪಾಗುಂಡಗಳಂ ಪೆರ್ಗ್ಗಡೆಗಳಂ ಪಲವು ಸೂಟಿಟ್ಟದೊಡಂ ನಿಮ್ಮಮ್ಮಂ ನಿನ್ನಂ ಕುಡಲೊಲ್ಲದಿರ್ದ್ದೊಡೆ ಮುನಿದಾತನ ತಲೆವೆರಸು ಕೂಸಂ ಕೊಳ್ವೆನೆಂದು ಗರ್ಜಿಸಿ ಪ್ರಳಯ ಕಾಲದ ಸಮುದ್ರಂ ಮೇರೆದಪ್ಪಿದಂತೆ ಚಾತುರ್ದಂತ ಬಲಂ ಬೆರಸಿ ಬಂದು ಪೊಟಲಂ ಮೂವಳಸಾಗಿ ಮುತ್ತಿದೊಡೆ ನಿಮ್ಮರಸನುಂ ತನ್ನುಳ್ಳ ಬಲಂ ಬೆರಸು ಪೊಱಮಟ್ಟೊಡ್ಡಿ ನಿಂದನಿಂತೆರಡುಂ ಪಡೆಗಳಿಂದಿಂಗೇೞು ದಿವಸಂ ಕಾದಿದಪ್ಪುವು ಸಾಮಂತ ಮಹಾ ಸಾಮಂತರ್ಮೊದಲಾಗಿ ಪಲಂಬರುಮರಸು ಮಕ್ಕಳ್ ಸತ್ತರ್ ಆನೆಗಳ ಕುದುರೆಗಳ ಮಾನಸರ ಸತ್ತುದರ್ಕ್ಕೆ ಪ್ರಮಾಣಂ ಮೇರೆಯುಮಿಲ್ಲ ಮಹಾ ಘೋರತರಂ ಕಾಳೆಗನಾಗಿರ್ಕ್ಕುಮೆಂದು ಪೇಳ್ದೊಡದಂ ಕೇಳ್ದಂತಪ್ಪೊಡಬ್ಬಾ ನೀಮರಸನಲ್ಲಿಗೆ ಪೋಗಿ ಇಂತೆಂದು ನುಡಿಯಿಂ ನಿಮ್ಮ ಮಗಳಿಂತೆಂದು ಪೇೞ್ದಟ್ಟಿದೊಳೆನ್ನಂ ಗುರುದತ್ತಂಗೆ ಕುಡುವೊಡೆ ಕುಡುಗೆ ಉೞಿದ ಪುರುಷರ್ಕ್ಕಳೆಲ್ಲಂ ಮೊಱೆಯಲ್ಲದವರೆನಗೆ ತನ್ನ ಮೆಚ್ಚಲ್ಲದಾಗಳೀಗಳೆ ತಪಂ ಬಡುವೆನೆಂದಟ್ಟಿದೊಡಭಯಮತಿ ಕಲ್ಪಿಸಿದ ಮಾತೆಲ್ಲಮನರಸಂಗೆ ದಾದಿ ಪೇೞ್ದೊಡೆ ಅರಸನುಂ ಕೇಳ್ದು ತನ್ನ ಪ್ರಧಾನರಪ್ಪ ನಾಲ್ವರುಂ ಪೆರ್ಗ್ಗಡೆಗಳಂ ಕಲ್ಪಿಸಿ ಗುರುದತ್ತನಲ್ಲಿಗೆ ಕೂಸಂ ಕೊಟ್ಟೆನೆಂದಟ್ಟಿ ದೊಡಾತನುಂ ತನ್ನ ಬಲಮಂ ಕಾದಲೀಯದೆ ಬಾರಿಸಿದಂ ಧಾತ್ರಿವಾಹನನುಂ ತನ್ನ ಬಸಮಂ ಬಾರಿಸಿದಂ ಇಂತೆರಡುಂ ಪಡೆಗಳುಂ ಸಂಗ್ರಾಮಮನುಪಸಂಹಾರಿಸಿ ನೊಂದ ವರ್ಗ್ಗೆ ಸತ್ತವರ್ಗ್ಗೆ ತಕ್ಕ ವಿಧಿಯಂ ಮಾಡಿದ ಬೞಿಕ್ಕೆ ಕೆಲವು ದಿವಸದಿಂ ಪ್ರಶಸ್ತ ದಿನ ವಾರ ನಕ್ಷತ್ರದಿಂ ಹೋರಾ ಮುಹೂರ್ತದೊಳ್ ಕೂಸಿನನುಕೂಲದೊಳ್ ಮಹಾ ವಿಭೂತಿಯಿಂ ಪಾಣಿಗ್ರಹಣ ಪುರಸ್ಸರಂ ಅಭಯಮತಿ ಕನ್ನೆಯಂ ಗುರುದತ್ತ ನೃಪತಿಗೆ ಕೊಟ್ಟು ಸನ್ಮಾನ ದಾನಾದಿಗಳಿಂದಾತನಂ ಪೂಜಿಸಿದಂ ಆತನುಂ ಚಂಪಾನಗರದೊಳ್ ಪಲ ದಿವಸಮಿರ್ದ್ದು ಇನ್ನೆಮ್ಮ ನಾಡ್ಗೆ ಪೋಪಮೆಂದು ಅರಸನಂ ಬೆಸಗೊಳಲಟ್ಟಿದೊಡರಸನುಂ ಕೂಸಿಂಗೆ ತಕ್ಕ ಪೆಂಡವಾಸದ ಪಂಲಬರುಮಗ್ಗಳದ ಸೂಳೆಯರ್ಕ್ಕಳುಮಂ ಕರಿ ಕರಿಣಿ ತುರಗಾಶ್ವರಥ ಶಿಬಿಕಾದ್ಯನೇಕ ವಾಹನಂಗಳಮಂ ಮುತ್ತಿನ ಮಾಣಿಕದ ಪೊನ್ನ ಮೂತೆಱದ ಪಲವುಂ ನಾನಾ ಪ್ರಕಾರದನರ್ಘ್ಯಮಪ್ಪ ತುಡುಗೆಗಳುಂ ಬೞಿವೞಿಗೊಟ್ಟರ್ವರುಮಂ ಪರಸಿಯವರ ನಾಡ್ಗೆ ಕೞಿಪಿದಂ ಮತ್ತೆ ಗುರುದತ್ತ ನೃಪತಿಯುಂ ಕತಿಪಯ ದಿವಸಂಗಳಿಂ ತನ್ನ ಪೊಟಲಂ ಹಸ್ತಿನಾಗಪುರಮನೆಯ್ದಿ ಮಹಾ ವಿಭೂತಿಯಿಂ ಪೊಕ್ಕಿರ್ದ್ದು ಇಷ್ಟ ವಿಷಯ ಕಾಮ ಭೋಗಂಗಳಂ ಪಲ ಕಾಲಮಭಯಮತಿಯೊಳನುಭವಿಸುತ್ತಿರೆಯಾಕೆಗೆ ಸುವರ್ಣ ಭದ್ರನೆಂಬೊಂ ಮಗಂ ಪುಟ್ಟಿದಂ ಇಂತು ಸಂತೋಷದಿಂ ಕಾಲಂ ಸಲೆ ಮತ್ತೊಂದು ದಿವಸಂ ಹಸ್ತಿನಾಗಪುರದ ಸಾರೆ ಧರಣಿಭೂಷಣಮೆಂಬ ಪರ್ವತದೊಳಮೃತಾಸ್ರವರೆಂಬ ಗುರುಗಳಯ್ನೂರ್ವರ್

ರಿಷಿಯರ್ವೆರಸಿರ್ದರೆಂಬುದಂ ಕೇಳ್ದು ಪುತ್ರ ಕಳತ್ರ ಪರಿವಾರ ಸಹಿತಂ ವಂದನಾ ಭಕ್ತಿಗೆ ಪೋಗಿ ಗೆಂಟಱೊಳ್ ವಾಹನದಿಂದಿೞಿದು ಬಲಗೊಂಡು ಬಂದರ್ಚಿಸಿ ಗುರುಭಕ್ತಿ ಗೆಯ್ದು ಭಟಾರರಂ ಬಂದಿಸಿಯುೞಿದ ರಿಷಿಯರ್ಕಳುಮಂ ಗುರು ಪರಿವಿಡಿಯಿಂ ಬಂದಿಸಿ ಪಿರಿದು ಬೇಗಂ ಧರ್ಮಮಂ ಕೇಳ್ದು ತದನಂತರಮಿಂತೆಂದು ಬೆಸಗೊಂಡಂ ಭಟಾರಾ ಎನ್ನ ಮುನ್ನಿನ ಭವಂಗಳನೆನಗಱಿಯೆ ಬೆಸಸಿಮೆನೆ ಭಟಾರರಿಂತೆಂದು ಪೇೞ್ದರ್' ಈ ಭವದಿಂ ತೊಟ್ಟು ನಾಲ್ಕನೆಯ ಭವದಂದು ನೀಂ ಸಾವಸ್ತಿಯೆಂಬ ಪೊಟಲೊಳ್ ಉಪರಿಚರನೆಂಬ ಮಂಡಳಿಕನ್ನೆ ಜಳಕ್ರೀಡೆಯನಾಡುತ್ತಿರ್ಪನ್ನೆಗಂ ವಜ್ರದಾಡನೆಂಬ ವಿದ್ಯಾಧರನಿಂ ಕೊಲೆಪಟ್ಟೆಯಾಗಿ ಸತ್ತಾ ಪೊಟಲೊಳ್ ಪೆರ್ವ್ವಾವಾಗಿ ಪುಟ್ಟಿದೆಯಲ್ಲಿಂದಂ ಸತ್ತು ಭವನವಾಸಿ ಲೋಕದೊಳ್ ಧರಣೇಂದ್ರನಾಗಿ ಪುಟ್ಟಿದೆಯಲ್ಲಿಂ ಬಂದು ಈಗಳ್ ಗುರುದತ್ತನೆಯಾದ್ಯೆ ಎಂದು ಆತನ ನಾಲ್ಕು ಭವಂಗಳಂ ಸವಿಸ್ತರಂ ಭಟಾರರ್ ಪೇೞ್ದೊಡೆ ಕೇಳ್ದು ಆದವಮಾನುಂ ವೈರಾಗ್ಯಮನೊಡೆಯನಾದಂ ಮತ್ತಂ ಅಭಯ ಮತಿಯುಮೆನ್ನ ಭವಮುಮಂ ಭಟಾರಾ ಎನಗೆ ಬೆಸಸಿಮೆಂದು ಬೆಸಗಂಡೊಡೆ ಭಟಾರರಿಂತೆಂದು ಪೇೞ್ದರ್

ಚಂಪಾನಗರದೊಳೊರ್ವ್ವಂ ಪೋಡುಂಗಾಱಿಂ ಗರುಡವೇಗನೆಂಬೊನಾತಂಗೆ ನೀಂ ಮುನ್ನಿನ ಭವದೊಳ್ ಪೆಂಡತಿಯ್ಯೆ ಗೋಮತಿಯೆಂಬೆಯೊಂದು ದಿವಸಂ ಸಮಾಧಿಗುಪ್ತರೆಂಬ ಭಟಾರರ್ ಪಲಂಬಱ್ ರಿಷಿಯರ್ವ್ವೆರಸು ಗ್ರಾಮನಗರ ಖೇಡ ಖರ್ವಡ ಮಡಂಬ ಪತ್ತಣ ದ್ರೋಣಾಮುಖಂಗಳಂ ವಿಹಾರಿಸುತ್ತುಂ ಚಂಪಾನಗರಕ್ಕೆ ವಂದೊಡವರ ಪಕ್ಕದೆ ನೀಂ ಪೋಗಿ ಧರ್ಮಮಂ ಕೇಳ್ದು ಕೊಲ್ಲದ ಕಳ್ಳದ ಮಧು ಮದ್ಯ ಮಾಂಸಗಳುಮಯ್ದು ಪಾಲ್ಮರದ ಪಣ್ಣುಂ ಗಿಣ್ಣು ಮಾಳಂಬೆಯುಮಿಂತಿವೆಲ್ಲಮಂ ತಿನ್ನದ ಬ್ರತಗಂಳಂ ಕೈಕೊಂಡು ಭಟಾರರಂ ಬಂದಿಸಿ ಮನೆಗೆ ಪೋದೆಯನ್ನೆಗಂ ನಿನ್ನ ಭರ್ತಾರಂ ಬೇಟೆಯಾಡಿ ಪಲವು ಲಾವುಗೆಯುಂ ಕೊರಸುಂ ಮೊದಲಾಗೊಡೆಯ ಪಕ್ಷಿ ಜಾತಿಗಳಂ ಬಲೆಯನೊಡ್ಡಿ ಫಿಡಿದು ಕಟ್ಟಿ ಬಾಱಿವಾಱಿ ಮನೆಯೊಳ್ ತಂದಿಟ್ಟು ಮತ್ತೆ ಬೇಂಟೆಗೆ ಪೋದನನ್ನೆಗಂ ನೀನವಂ ಕಂಡು ಕಾರುಣ್ಯಭಾವದಿಂದನಿತುಮಂ ಬಿಟ್ಟು ಕಳೆದೊಡವು ಪಾಱಿ ಪೋದವು ಮತ್ತೆ ನಿನ್ನ ಭರ್ತಾರಂ ಬಂದು ಪಕ್ಕಿಗಳಂ ಕಾಣದೆ ಬಿಟ್ಟು ಕಳೆದರಾರೆಂದು ಬೆಸಗೊಂಡೊಡಾಂ ಬಿಟ್ಟು ಕಳೆದೆನೆಂದೊಡಿಂತಪ್ಪ ಧರ್ಮಾರ್ಥಿಯೆನ್ನ ಮನೆಯೊಳಿರಲ್ವೇಡೆಂದು ಬಯ್ದು ಪೊಯ್ದಟ್ಟಿ ಕಳೆದೊಂ ನೀನುಂ ಮನೆಯಿಂದಂ ಪೊಱಮಟ್ಟು ಪೋಗಿ ನೆಂಟರ ಮನೆಯೊಳಿರ್ದ್ದೊಡನ್ನೆಗಮೊಂದು ದಿವಮಾ ಚಂಪಾಪುರಮನಾಳ್ವೊಂ ಧಾತ್ರೀವಾಹನನೆಂಬೊನರಸನಾತನ ಮಹಾದೇವಿ ಶ್ರೀಮತಿಯುಮಂತಿರ್ವ್ವರುಮಂ ಮಹಾ ವಿಭೂತಿಯಿಂ ಪೊಟಲೊಳಗೋಲಗಂಗೊಟ್ಟಿರ್ದೊಡವರ ಶ್ರೀಯುಂ ವಿಭೂತಿಯಂ ಕಂಡಿವಗ್ಗಾಂ ಪುಟ್ಟಿದೊಡೊಳ್ಳಿತ್ತೆಂದು ಮನದೊಳ್ ಬಗೆದಿರ್ದ್ದು ಕೆಲ ದಿವಸದಿಂ ಸತ್ತು ಶ್ರೀಮತಿಯ ಗರ್ಭದೊಳ್ ನೆಲಸಿರೆ ಆಕೆಗೆ ಎಲ್ಲಾ ಜೀವಂಗಳಂ ದಯೆಗೆಯ್ವ ಬಯಕೆಯಾದುದನರಸಂ ಕೇಳ್ದು ತನ್ನ ಪೊಟಲೊಳಂ ನಾಡೊಳಂ ಆರಪ್ಪೊಡಂ ಜೀವಂಗಳಂ

ಕೊಲ್ಲದಂತು ಗೋಸನೆಗಳೆಯಿಸದನದು ಕಾರಣದಿಂ ನಿನಗಭಯಮತಿಯೆಂದು ತಾಯುಂ ತಂದೆಯುಂ ಪೆಸರನಿರಿಟ್ಟರೆಂದಿವ್ವರ ಭವಂಗಳುಮಂ ಭಟಾರರ್ ಪೇಳ್ದೊಡರಸನುಂ ಅರಸಿಯುಂ ಕೇಳ್ದು ಸಂಸಾರ ಶರೀರ ಭೋಗ ವೈರಾಗ್ಯಮನೊಡೆಯರಾಗಿ ಶ್ರೀದತ್ತನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ಪಲರುಮರಸು ಮಕ್ಕಳ್ ವೆರಸು ಅಮೃತಾಸ್ರವ ಭಟಾರರ ಪಕ್ಕದೆ ಗುರುದತ್ತ ಮಹಾರಾಜಂ ತಪಂಬಟ್ಟನಭಯಮತಿಯುಮಾ ಭಟಾರರೆ ಗುರುಗಳಾಗೆ ಸುವ್ರತೆಯೆಂಬ ಕಂತಿಯರೆ ಕಂತಿಯರಾಗೆ ತಪಂ ಬಟ್ಟು ಸಮ್ಯಕ್ತ್ವಪೂರ್ವಕಂ ಮಹಾಬ್ರತಂಗಳಂ ಕೈಕೊಂಡಾ ಚಾರಮಾರಾಧನೆ ಮೊದಲಾಗೊಡೆಯ ಚರಣ ಗ್ರಂಥಂಗಳಂ ಕಲ್ತು ಪಲವು ಕಾಲಮುಗ್ರೋಗ್ರ ತಪಶ್ಚರಣಂಗೆಯ್ದು ನೋಂಪಿಗಳಿಂದಂ ಗಿಡಿ ಗಿಡಿ ಜಂತ್ರಂ ಮಿಳಿ ಮಿಳಿ ನೇತ್ರಮಾಗಿ ತನ್ನ ಮೆಯ್ಯಂ ತವಿಸಿ ಪಶ್ಚಾತ್ಕಾಲದೊಳ್ ಸನ್ಯಸನಂಗೆಯ್ದು ಸಮಾಧಿಮರಣದಿಂ ಮುಡುಪಿ ಕಾಪಿಷ್ಟಮೆಂಬೆಂಟನೆಯ ಸ್ವರ್ಗದೊಳ್ ಸ್ವಯಂಪ್ರಭಮೆಂಬ ವಿಮಾನದೊಳ್ ಪದಿನಾಲ್ಕು ಸಾಗರೋಪಮಾಯುಷ್ಯಮನೊಡೆಯನಮಿತಕಾಂತನೆಂಬೊಂ ದೇವನಾಗಿ ಪುಟ್ಟಿದಳ್ ಇತ್ತ ಗುರುತದತ್ತ ಭಟಾರರುಂ ಪನ್ನೆರಡು ವರ್ಷಂ ಬರೆಗಂ ಗುರುಗಳನಗಲದಿರ್ದ್ದು ದ್ವಾದಶಾಂಗ ಚತುರ್ದಶ ಪೂರ್ವಮಪ್ಪಾಗಮಮೆಲ್ಲಮಂ ಕಲ್ತು ಗುರುಗಳಂ ಬೆಸಗೊಂಡವರನುಮತದಿಂದೇಕ ವಿಹಾರಿಗಳಾಗಿ ಘೋರ ವೀರ ತಪಶ್ಚರಣಂ ಗೆಯ್ಯುತ್ತುಂ ಗ್ರಾಮೇಕರಾತ್ರಂ ನಗರೇ ಪಂಚ ರಾತ್ರಮಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂದಂ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಕ್ರಮದಿಂ ಸುರಾಷ್ಟ್ರಮನೆಯ್ದಿಯಲ್ಲಿ ದ್ರೋಣಿಮಂತಮೆಂಬ ಪರ್ವತದ ಸಾರೆ ಹಳಮುಖನೆಂಬ ಪಾರ್ವನಿರ್ಪ ಪಲ್ಲಿಖೇಡಮೆಂಬೂರನೆಯ್ದಿ ವರೆಡೆಯೊಳ್ ನೇಸರ್ಪ್ಪಟ್ಟೊಡೆ ಯತ್ರಾಸ್ತಮಿತ ವಾಸಿಗಳೆಲ್ಲಿ ನೇಸರ್ಪಟ್ಟಿತ್ತಲ್ಲಿಯೆ ನಿಲ್ವಱಪ್ಪುದಱಿಂದೂರ ಪೊಲದೊಳ್ ಬಟ್ಟೆಯ ಕಣ್ಣೊಳ್ ರಾತ್ರಿ ಪ್ರತಿಮೆ ನಿಂದೊರನ್ನೆಗಮಿರುಳ್ ನಾಲ್ಕು ಜಾವಮುಂ ಭೋರೆಂದು ಪೆರ್ಮಟಿ ಕೊಂಡು ಕೆಸಱಾದೊಡೆ ನೇಸರ್ಮೂಡಿದೊಡಮಪ್ರಾಸುಕಂ ಬಟ್ಟೆಯೆಂದು ಕೈಯನೆತ್ತಿಕೊಳ್ಳದೆ ಮತ್ತಮಂತೆ ಸೂರ್ಯ ಪ್ರತಿಮೆ ನಿಂದೊರನ್ನೆಗಂ ಹಳಮುಖನೆಂಬ ಪಾರ್ವಂ ತನ್ನ ಮೂಡಣ ಕೈಯನುಟಲೆಂದು ಪೋಗಿ ಕೆಸಱಾದದುಂ ಕಂಡುಳಲ್ ಪದನಲ್ಲೆಂದು ಬೆಟ್ಟದ ಪಡುವಣ ಕೈಯನುಟಲ್ ಪೋಗುತ್ತುಂ ತನ್ನ ಕೈಯ ಸಾರೆ ಸೂರ್ಯಪ್ರತಿಮೆ ನಿಂದ ಭಟಾರರುಂ ಕಂಡಿಂತೆಂದಂ

ಅಜ್ಜಾ ಎನ್ನ ಪೆಂಡಿತಿ ಕೂಟಿನಿಲ್ಲಿಗೆ ಕೊಂಡು ಬಂದೊಡೆ ಪಡುವಣ ಕೆಯ್ಗೆ ಪೋದನೆಂದು ಪೇಳ್ದಟ್ಟಿಂ ಗಡಿಮೆಂದು ಪಡುವಣ ಕೆಯ್ಗೆ ಪೋದನನ್ನೆಗಮಾತನ ಪಾರ್ವಂತಿಯುಂ ಪಗಲಪ್ಪಾಗಳ್ ಕೂಟಂ ಕೊಂಡು ಬಂದು ಕೈಯೊಳಗಱಿಸಿ ಕಾಣದೆ ಸೂರ್ಯ ಪ್ರತಿಮೆ ನಿಂದ ಭಟಾರರಂ ಬೆಸಗೊಂಡಳ್ ಅಜ್ಜಾ ಎಮ್ಮ ಭಟ್ಟನೀ ಕೈಯನುಟಲೆಂದು ಬಂದಾತನೆತ್ತ ಪೋದಂ ಪೇಟಿಮೆಂದು ಬೆಸಗೊಂಡೊಡೆ ಭಟಾರರ್ ಮೋನಬ್ರತಂಗೊಂಡು ನುಡಿಯದೆ ಸುಮ್ಮಗಿರ್ದೊಡೆ ಪಿರಿದು ಬೇಗಮಿರ್ದ್ದು ಬೇಸತ್ತು ಕೂಟಂ ಕೊಂಡು ಮನೆಗೆ ಪೋದಳನ್ನೆಗಮಿತ್ತ ಹಳಮುಖನುಂ ಕೆಯ್ಯಂ ಪಿರಿದು ಬೇಗಂ ಉತ್ತು ಸೇದೆಗೆಟ್ಟು ಪಸಿದು

ನೀರಡಿಸಿ ಬಸಮೞಿದು ಕೂೞಿಂ ತಪ್ಪುದಂ ಪಿರಿದು ಬೇಗಂ ಪಾರುತ್ತಿರ್ದ್ದುದಂ ತಾರದಿರ್ದ್ದೊಡೆ ಬೇಸತ್ತು ಮುಳಿದು ಮನೆಗೆ ಪೋಗಿ ಏಕೆ ಕೂೞಿಂ ತಂದೆಯಿಲ್ಲೆಂದು ಪೆಂಡತಿಯಂ ಸೊಪ್ಪು ನಾರಾಗಿ ಬಡಿಯೆ ಆಕೆಯಿಂತೆಂದಳ್ ಏಕೆ ಬಡಿವೆ ನಾಂ ಕೂೞಿಂ ಕೊಂಡು ಪೋಗಿ ಕೆಯ್ಯೊಳರಸಿ ಪಿಱಿದು ಬೇಗಮಿರ್ದ್ದುಂ ಪಾರ್ದು ನಿಮ್ಮಂ ಕಾಣದೆ ಮನೆಗೆ ಕೂೞಿಂ ತಂದೆನೆಂದೊಡೇಕಲ್ಲಿರ್ದ್ದ ಕ್ಷಪಣಕನಂ ಬೆಸಗೊಂಡೆಯಿಲ್ಲಾತಂಗಾ ಮೂಡಣ ಕೆಯ್ಗೆ ನೀಂ ಬಂದೊಡೆ ಪಡುವಣ ಕೆಯ್ಗೆ ಕೂೞಿಂ ಕೊಂಡು ಬರ್ಪಂತಿರೆ ಪೇೞ್ದು ಪೋದೆನೆಂದೊಡಾಕೆ ಇಂತೆಂದಳ್ ಎನಿತಾನುಂ ಸೂೞಾಂ ಬೆಸಗೊಂಡೊಡೆ ಪೇೞ್ದನಿಲ್ಲೆಂದೊಡೆಯಂತಪ್ಪೊಡೆ ನಿನಗೇನುಂ ದೋಷಮಿಲ್ಲೆನ್ನನಾತಂ ಪಸಿಸಿ ಕೊಂದನೆಂದು ಪೆಂಡತಿಯ ಮೇಗಣ ಮುಳಿಸನುೞಿದು ರಿಷಿಯರ ಮೇಗೆ ಮುಳಿಸಾಗೆ ಭವಸಂಬಂಧಿಯಪ್ಪ ವೈರಂ ಕಾರಣಮಾಗಿ ಕ್ರೋಧಾಗ್ನಿ ಪೆರ್ಚ್ಚೆ ಎನ್ನಂ ಪಸಿವಿನಿಂ ಸುಟ್ಟೊನಂ ಕಿಚ್ಚಿನಿಂ ಸುಟ್ಟಲ್ಲದುಣ್ಣೆನೆಂದು ಪ್ರತಿಜ್ಞೆಗೈದು ಪುಲ್ಲಬೆಂಟೆಯಂ ಪೊಸೆದು ಕಿಚ್ಚುಮೆಣ್ಣೆಯ ಕೊಡನುಂ ಬೆಂಟೆಯುಮಂ ಕೊಡು ಪೋಗಿ ಭಟ್ಟಾರರ ಮುಂದಿಟ್ಟು ಎಲವೋ ಸವಣಾ ನೀನೆನ್ನಂ ಪಸಿವಿನಿಂದಂ ಸುಟ್ಟೆಯಂತೆಯಾನುಂ ನಿನ್ನಂ ಕಿಚ್ಚಿನಿಂದಂ ಸುಟ್ಟಪ್ಪೆಂ ಕಾವರಾರೆಂದು ಮೂದಲಿಸಿದಾಗಳ್ ಭಟಾರರಿಂತೆಂದು ಬಗೆದರ್ ಈತಂಗೇನುಂ ದೋಷಮಿಲ್ಲೆಮ್ಮ ಮುನ್ನಿನ ಗೆಯ್ದ ಕರ್ಮದುದಯದ ಕಾಲಂ ಬಂದುದಕ್ಕಂ ಅದೆಮ್ಮಂ ಸುಟ್ಟಪುದೀತನೆಮ್ಮಂ ಸುಟ್ಟಪನಲ್ಲಂ ಸುಡುವೊಡಂ ಕಿಡುವೊಡಲನೆ ಸುಡುಗುಮೆಮ್ಮ ದರ್ಶನ ಜ್ಞಾನ ಚಾರಿತ್ರ ಬ್ರತಂಗಳಂ ಸುಡಲ್ ನೇಱೆಯನೀತನೆಮಗೆ ಕಲ್ಯಾಣಮಿತ್ರನೆಂದು ಬಗೆದಿಂತೆಂದು ಭಾವಿಸಲ್ ತಗುಳ್ದರ್ -

ಗಾಹೆ ॥ ಣಿಂದಂತಂ ಸಿಳಹಂತಂ ಸತ್ತುಂ ಮಿತ್ತುಂ ತಹೇವ ಸುಹದುಕ್ಖಂ
ಜೋ ಸಮಭಾವ ಇ ಪೆಚ್ಚ ಇ ಸೋಸಮಣೋ ಸೋಯ ಪವ್ವ ಇ ಓ ॥

ದುಜ್ಜಣವಯಣ ಸಡಗರಂ ಸಹಂತಿ ಉಚ್ಚೋದಣಂ ಚ ಪಹರಂ ಚ
ಣಯಕುಪ್ಪಂತಿ ಮಹಾರಿಸಿ ಸಮಣ ಗುಣ ವಿಜಾಣದೊ ಸಮಣೋ ॥

ಛಿಣ್ಣೇವಭಿಣ್ಣೇವ ಖ ಇದೇವಲಗಿದೇವ ಉದಯಗ್ಗಿಸೀ ದುಣ್ಣಾಲೋಗಾ
ಭಿಘಾದೇಇ ॥

ಸರೀರ ವಿಣಪ್ಪದಿ ಅಣಿಚ್ಚಂ ತಿಣ್ಣಂ ಬೋಸಸ್ಸದ ಭಾಮೇಣ ಝೂಣೇಣ ಉತ್ಥಾ॥

ಜೀವಿದ ಮರಣೇ ಲಾಭಾಲಾಭೇ ಸಂಜೋಗ -ವಿಪ್ಪಜೋಗೇ ಯ
ಬಂದದಿ ಸುಹದುಕ್ಖಾದಿಸು ಸಮತಾ ಸಾಮಾಯಿಗಂ ಣಾಮ ॥

ಖಮ್ಮಾಮಿ ಸವ್ವ ಜೀವಾಣಂ ಸವ್ವೇ ಜೀವಾ ಖಮಂತು ಮೇ ॥
ಮೆತ್ತೀ ಮೇ ಸವ್ವ ಭೂದೇಸು ವೇರಂ ಮಜ್ಝ ಣಕೇಣಚಿ ॥

ವ॥ ಎಂದಿಂತು ಕ್ಷಮೆಯಂ ಭಾವಿಸುತ್ತಿರ್ಪನ್ನೆಗಂ ಹಳಮುಖಂ ಬೆಂಟೆಯನೆಣ್ಣೆಯೊಳ್ ತೊಯ್ದು ನಖಾಗ್ರದಿಂ ತೊಟ್ಟು ನೆತ್ತಿವರೆಗಂ ಬಳಸಿಯುಂ ಮೆಯ್ಯಂ ಸುತ್ತಿ

ಎಲ್ಲಾಯೆಡೆಗಳೊಳಂ ಕಿಚ್ಚಂ ತಗುಳ್ಚಿ ಎಣ್ಣೆಯಂ ತಳಿಯುತ್ತುಂ ಉರಿ ಕೊಂಡೇಕಜ್ವಾಲೆಯಾಗಿ ಸುಡೆ ಬೆಂಟೆಯ ಕಿಚ್ಚುಮೆಯ್ಯಂ ಪೊದಳ್ದದನ್ನೆಗಂ ಭಟಾರರ್ ಆಜ್ಞಾವಿಚಯಮಪಾಯವಿಚಯ ವಿಪಾಕವಿಚಯ ಸಂಸ್ಥಾನವಿಚಯಮಮೆಂದೀ ನಾಲ್ಕುಂ ಧರ್ಮಧ್ಯಾನಂಗಳಂ ಕ್ರಮದಿಂ ಧ್ಯಾನಿಸುತ್ತುಂ ಬಳಿಕ್ಕೆ ಪೃಥಕ್ತ್ವ ವಿತರ್ಕ ವೀಚಾರಮೆಂಬ ಪ್ರಥಮ ಶುಕ್ಲಧ್ಯಾನಮಂ ಧ್ಯಾನಿಸಿ ಸೂಕ್ಷ್ಮಸಾಂಪರಾಯ ಗುಣಸ್ಥಾನದೊಳ್‌ಮೋಹನೀಯದ ಕಾಂಡಕ ಘಾತಂ ತೀರ್ದ್ದು ಚರಮ ಕಾಂಡಕದ ಚರಮ ಪಾಳಿ ಬಿರ್ದ್ದ ನಂತರ ಸಮಯಂ ಮೊದಲ್ಗೊಂಡು ಜಾನಿಸಿಯಲ್ಲಿಂ ಬಳಿಯಂ ಏಕತ್ವ ವಿತರ್ಕವೀಚಾರಮೆಂಬೆರಡನೆಯಂ ಶುಕ್ಲಧ್ಯಾನಮಂ ಕ್ಷೀಣಕಷಾಯನಾಗಿ ಧ್ಯಾನಿಸಿ ಬೞಿಯಂ ಚರಮ ಸಮಯದೊಳ್ ನಾಲ್ಕು ಕರ್ಮಂಗಳಂ ಕಿಡಿಸುವ ಸಮಯದೊಳ್ ರಸ ರುಧಿರ ಮಾಂಸ ಮೇದೋಸ್ಥಿ ಮಜ್ಜ ಶುಕ್ಲಮೆಂಬ ಸಪ್ತಧಾತುಗಳುಮವರೊಡನೆ ಕೆಟ್ಟುವು ಮತ್ತೆ ಘಾತಿಕರ್ಮಂಗಳಾವುವೆಂದೊಡೆ ಅಯ್ದು ತೆಱದ ಜ್ಞಾನಾರವಣೀಯಂ ಒಂಭತ್ತು ತೆಱದ ದರ್ಶನಾವರಣೀಯಮಂತೆರಡುಂ ಕರ್ಮದ ಕೇಡಿನೊಳ್ ಲೋಕಾಲೋಕದೊಳಗಣ ಸೂಕ್ಷ್ಮಾಂತರಿತ ದೂರ ಪದಾರ್ಥವಸ್ತುಗಳೆಲ್ಲಮಂ ಕ್ರಮಕರಣ ವ್ಯವಧಾನ ರಹಿತಮಾಗಿ ಬಗೆಯದೆ ತಡೆಯದೆ ಸುಳಿಯದೆ ಮೋಹಿಸದೆಲ್ಲಾ ವಸ್ತುಗಳಮೊರ್ಮೊದಲಱಿವ ಕಾಣ್ಬಂತಪ್ಪನಂತಜ್ಞಾನಮುಮನಂತದರ್ಶನಮುಮನೊಡೆಯರಾದರ್ ಮತ್ತಿಪ್ಪತ್ತೆಂಟು ತೆಱದ ಮೋಹನೀಯಮೆಂಬ ಕರ್ಮದ ಕೇಡಿನಿಂದಮನಂತ ಸುಖಿಗಳಾದರ್ ಮತ್ತಮಯ್ದುಂ ತೆಱದಂತರಾಯುವೆಂಬ ಕರ್ಮಂಗಳ ಕೇಡಿನಿಂದನಂತವೀರ್ಯ ಮನೊಡೆಯರಾದರಂತೊರ್ಮೊದಲೆ ಘಾತಿಕರ್ಮಂಗಳ ನಾಲ್ಕರ ಕೇಡಿನಿಂದಮನಂತ ಚತುಷ್ಟಯಮನೊಡೆಯರ್ ಮುಂಡಕೇವಲಿಗಳಾಗಿರ್ದ್ದರ್ ಅನ್ನೆಗಮಿಂದ್ರನ ಬೆಸದಿಂ ಧನದಂ ಮಾಡಿದ ನೆಲದ ಮೇಗಿಂಗಯ್ಸಾಸಿರ ಬಿಲ್ಲುತ್ಸೇಧದೊಳಂತರಿಕ್ಷದೊಳೊಂದು ಯೋಜನ ವಿಸ್ತೀರ್ಣಮೇಕಶಿಲೆಯಪ್ಪಿಂದ್ರ ನೀಲಮಣಿಕಟ್ಟಮ ಭೂಮಿಯಕ್ಕುಮದಱ ಮೇಗೆ ಏಕಯೋಜನ ವಿಸ್ತೀರ್ಣ ರತ್ನಮಯಮಪ್ಪ ಶ್ರೀಮಂಟಪಮಕ್ಕುಂ ಮತ್ತಂ ನಾಲ್ಕುಂ ದೆಸೆಯೊಳಂ ಕನಕಮಯಮಪ್ಪ ನಾಲ್ಕುಂ ಸೋಪಾನ ಪಂಕ್ತಿಗಳನೊಡೆಯ ಭೂಮಿಯ ಮೇಗೆ ಸಿಂಹಾಸನಮಕ್ಕುಂ ಅದಱ ಮೇಗಲರ್ದ ಪೊಂದಾವರೆಯ ಕ್ಕುಮದಂ ನಾಲ್ವೆರಲ್ ಮುಟ್ಟದೆ ಅದಱ ಮೇಗೆ ಪಲ್ಯಂಕದೊಳಿರ್ದೊಂದು ಬೆಳ್ಗೊಡೆಯಾಗಿ ಮೂವತ್ತೆರಡುಂ ಚಾಮರಂಗಳಿಂದಂ ದೇವರ್ಕಳ್ ಬೀಸುತ್ತುಮಿಂತಿರ್ಪನ್ನೆಗಂ

ಗಾಹೆ ॥ ಸವ್ವೇಹಿ ಭವಣವಾಸೀ ವೆಂತರದೇವಾಯ ಪಳಹ ಪಳುತಸಿಯಾ
ಘಂಟೇಹಿ ಕಪ್ಪವಾಸೀ ಸಿಹಣೇಣಾ ಏಇ ಜೋಯಿಸಿಯಾ ॥

ಎಂದೀ ಪೇೞ್ದ ಚಿಹ್ನಂಗಳಿಂದಮಱಿದು ಚತುರ್ವಿಧ ದೇವನಿಕಾಯಂ ತಂತಮ್ಮ ಪರಿವಾರಂ ಬೆರಸು ಬಂದು ದಿವ್ಯಮಪ್ಪ ಗಂಧ ಪುಷ್ಪ ಧೂಪ ದೀಪಾಕ್ಷತಂಗಳಿಂದರ್ಚಿಸಿ ಬಂದಿಸಿ ಸಮವರಸಣದೊಳ್ ತಂತಮ್ಮಿರ್ಪ ಸ್ಥಾನಂಗಳೊಳ್ ದೇವರ್ಕಳುಂ ದೇವಿಯರ್ಕಳುಂ ಚಾತುರ್ವರ್ಣ ಶ್ರವಣ ಸಂಘಮುಂ ಮೃಗಂಗಳುಂ ಬಳಸಿಯುಂ ಬಂದು ಧರ್ಮಮಂ

ಕೇಳುತ್ತಿರ್ದ್ದರನ್ನೆಗಂ ಹಳಮುಖನುಂ ಧರ್ಮಮಂ ಕೇಳ್ದು ನಿಂದಿರ್ದಿಂತೆಂದು ಬಿನ್ನಪಂಗೆಯ್ದಂ ಭಟಾರಾ ನಿಮಗಾಂ ಪೊಲ್ಲಕೆಯ್ದೆನದನೆನಗೆ ಕ್ಷಮಿಯಿಸಿಮೆಂದೆಱಗಿ ಪೊಡೆವಟ್ಟೊಡೆ ಭಟಾರರೆಂದರ್ ನಿನಗೇನುಂ ದೋಷಮಿಲ್ಲೆಂದಾತನ ಭವಂಗಳಂ ಪೇೞ್ದೊಡೆ ಕೇಳ್ದೀ ಪಾಪಮಿಂತಲ್ಲದೆ ಪಿಂಗದೆನಗೆ ದೀಕ್ಷೆಯಂ ದಯೆಗೆಯ್ಯಿಮೆಂದು ಬೇಡಿ ತಪಂಬಟ್ಟು ಶಿಷ್ಯನಾಗಿಯಾಗಮಂಗಳನೋದುತ್ತಿರ್ದ್ದಂ

ಇತ್ತ ಗುರುದತ್ತ ಕೇವಳಿಯುಂ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಭವ್ಯವರ ಪುಂಡರೀಕರ್ಕಳ್ಗೆ ಧರ್ಮಾಮೃತಮಂ ಕಱೆಯುತ್ತಂ ಪಲಂಬರುಮಂ ಧರ್ಮಂಗೊಳಿಸುತ್ತಂ ಪಲವು ಕಾಲಂ ವಿಹಾರಿಸುತ್ತಂ ಮತ್ತಮಾ ಮುನ್ನಿನ ಪಲ್ಲಿಖೇಡಮೆಂಬೂರ್ಗ್ಗೆ ಬಂದು ಯೋಗನಿರೋಧಂ ಗೆಯ್ದು ಯೋಗಿ ಭಟಾರಕರಾಗಿ ಪಂಚ ಹ್ರಸ್ವಾಕ್ಷರೋಚ್ಚಾರಣ ಮಾತ್ರ ಕಾಲದಿಂದಾಯು ನಾಮಗೋತ್ರ ವೇದನೀಯಮೆಂಬ ನಾಲ್ಕುಮಘಾತಿ ಕರ್ಮಂಗಳನೊರ್ಮೊದಲೆ ಕಿಡಿಸಿ ಏಕ ಸಮಯದೊಳಗೆ ಮೋಕ್ಷ ಸ್ಥಾನದೊಳ್ ನೆಲಸಿ ಜಾತಿ ಜರಾ ಮರಣಂಗಳುಂ ಪಸಿವುಂ ನೀರಟ್ಕೆ ಶೀತೋಷ್ಣವಾತಂ ಮೊದಲಾಗೊಡೆಯ ಆವ ಬಾಧೆಗಳಿಲ್ಲದನಂತ ಜ್ಞಾನಮನಂತದರ್ಶನಮನಂತಸುಖಮನಂತವೀರ್ಯದೊಳ್ ಕೂಡಿ ಎಲ್ಲಾ ಕಾಲಮಂ ಸುಖಿಯಾಗಿರ್ದ್ದರ್

ಗಾಹೆ ॥ ಪೇಯ ರುಜಮಜರ ಮಧುರಂ ಅಕ್ಖಯಂ ಸೊಕ್ಖಂ ಅಣೋವಮಂ ಪತ್ತೋ
ಆಬ್ಬಾಬಾಧಮಣಂತಮಣಾಗಯಂ ಕಾಲಮಚ್ಛಂತಿ ॥

ಮತ್ತೆ ಹಳಮುಖ ರಿಷಿಯರುಮಾಗಮಂಗಳನೆಲ್ಲಮಂ ಕಲ್ತೇಕವಿಹಾರಿಯಾಗಿ ಗ್ರಾಮನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಕೊಂಕಣ ದೇಶಮನೆಯ್ದಿ ಆ ನಾಡೊಳ್ಪುಗುತ್ತುಂ ಊರನೆಯ್ದದೆಡೆಯೊಳ್ ಪೊಲದೊಳ್ ನೇಸರ್ಪಟ್ಟೊಡೆ ಯತ್ರಾಸ್ತಮಿತ ವಾಸಿಯೆಲ್ಲಿ ನೇಸಟ್ಟೊಡಲ್ಲಿಯೆ ನಿಲ್ವಱಪ್ಪುದಱಿಂ ಕುಮ್ಮರಿಯಂ ಸುಡಲೆಂದು ಕಡಿದೊಟ್ಟಿದ ಮರಂಗಳ ಮೇಗಿರುಳ್ ದೇವರಂ ಬಂದಿಸಿ ನಿಯಮಂಗೆಯ್ದು ಜೋಗಭಕ್ತಿ ಗೆಯ್ದಿರ್ದರನ್ನೆಗಂ ಕುಮ್ಮರಿಯಂ ಸುಡಲೆಂದು ತುಂಗಭದ್ರನೆಂಬ ಪೋಳುಂಗಾಱಂ ಸೊರ್ಕೆ ತೂಂಕಡಿಸಿ ಇರುಳ್ ಕಟ್ದಿಂಗಳ್ ಕಡುಗತ್ತಲೆಯೊಳ್ ಬಂದು ಕಿಚ್ಚಂ ತಗುಳ್ಚಿ ಪೋದನಾ ಕಿಚ್ಚಿನಿಂದಂ ಹಳಮುಖ ರಿಸಿಯುಂ ಬೇವುತ್ತುಂ ಧರ್ಮಧ್ಯಾನಂಗಳಂ ಧ್ಯಾನಿಸಿ ಶುಭಪರಿಣಾಮದಿಂ ಮುಡಿಪಿ ಪದಿನಾಱನೆಯಚ್ಯುತ ಕಲ್ಪದೊಳಿಪ್ಪತ್ತೆರಡು ಸಾಗರೋಪಮಾಯುಷ್ಯಮನೊಡೆಯನಚ್ಯುತೇಂದ್ರನಾಗಿ ಪುಟ್ಟಿದೊಂ ಮತ್ತಿತ್ತ ತುಂಗಭದ್ರನೆಂಬ ಪೋಡುಂಗಾಱಂ ನೇಸರ್ಮೂಡೆ ಕುಮ್ಮರಿಯಂ ನೋಡಲೆಂದು ಪೋದನ್ನೆಗಂ ಸತ್ತಿರ್ದ್ದ ರಿಷಿಯಂ ಕಂಡು ಪಂಚಮಹಾಪಾತಕನೆಂ ನಿಷ್ಕಾರಣಮಱಿಯದೆ ಕಾಣದೆ ರಿಷಿಯರಂ ಕೊಂದೆನೆಂದು ನಿಂದಣೆ ಗರುಹಣಂ ಗೆಯ್ದು ತಾನುಮಲ್ಲಿಯೆ ಕಿಚ್ಚಂ ಪೊಕ್ಕು ಸತ್ತು ವ್ಯಂತರ ದೇವನಾಗಿ ಪುಟ್ಟಿಯಾಯುಷ್ಯಾಂತದೊಳ್ ಬಂದಿಲ್ಲಿ ವಿಂಧ್ಯಾಟವಿಯೊಳಾದಮಾನುಂ ರೌದ್ರಮಪ್ಪ ಬಿಳಿಯ ಪೇರಾನೆಯಾಗಿ ಪುಟ್ಟಿ ಬಟ್ಟೆಯೊಳ್ ಪೋಪಬರ್ಪ ಜನಂಗಳನೆರ್ವ್ವಟ್ಟಿ ಕೊಲುತ್ತಮಿರ್ಪುದಂ

ಪಳಮುಖ ಚರನಪ್ಪಚ್ಯುತೇಂದ್ರನವಧಿ ಜ್ಞಾನದಿನಱಿದು ಬಂದು ಧರ್ಮಮಂ ಪೇಳ್ದು ಪ್ರತಿಬೋಧಿಸಿ ಶ್ರಾವಕ ಬ್ರತಂಗಳ ಫಲಮಂ ಪೇಳ್ದು ಸಮ್ಯಕ್ತ್ವಪೂರ್ವಕಂ ಬ್ರತಂಗಳಂ ಕೈಕೊಳಿಸಿ ಪೋದೊನಾನೆಯುಂ ಕೊಲೆಯನುೞಿದು ಮಧು ಮದ್ಯ ಮಾಂಸಂಗಳಂ ತೊಱೆದು ಷಷ್ಠಾಷ್ಟಮದಶಮ ದ್ವಾದಶಾದಿ ನೋಂಪಿಗಳಂ ನೋನುತ್ತಂ ಪಾರಿಸುವ ದಿವಸಂ ಪ್ರಾಸುಕಮಾಗುತ್ತಿರ್ದ್ದ ತಱಗೆಲೆಗಳಂ ಮೇದು ಗಜಯೂಥಮುಂಡು ಪೋದ ಬೞಿಕ್ಕೆ ಕದಡಿದ ನೀರ್ಗ್ಗಳನುಂಡಿಂತು ಪಲಕಾಲಂ ಸಂಯಮಾಸಂಯಮಮೆಂಬ ಬ್ರತಮಂ ಸಲಿಸುತ್ತಮಿರ್ಪನ್ನೆಗಂ ಮತ್ತೊಂದು ದಿವಸಂ ಅಡವಿಯೊಳ್ ಬೇಗೆಗಿಚ್ಚು ತಗುಳ್ದೊಡೆ ಕಿಚ್ಚಿಂಗಂಜಿ ಪಿರಿದೊಂದಾಲದಮರದ ಕೆಳಗೆ ಗಜಯೂಥದೊಡನೆ ಬಂದಿರ್ದ್ದುದಾ ಮರದೊಣಗಿದ ಕೊಂಬುಗಳೊಳ್ ಕಿಚ್ಚು ತಗಳ್ದು ತನ್ನಂ ಸುಡುವನ್ನೆಗಮೊಂದು ಮೊಲಂ ಕಿಚ್ಚಿನಿಂದಂ ಬೆಂದುರಿಯ ಬಣ್ಣಮಾಗಿ ಪರಿತಂದು ತನ್ನ ಕಾಲಕೆಳಗೆ ಪೊಕ್ಕೊಡೆಯದಂ ಕಂಡು ದಯೆಯಿಂದಕ್ಕಟಯ್ಯೋ ಎಂದು ಕಾರುಣ್ಯಮಪ್ಪ ಮನದೊಳ್ ಕೂಡಿ ಸತ್ತು ಪನ್ನೆರಡನೆಯ ಸಹಸ್ರಾರಕಲ್ಪದೊಳ್ ಪದ್ಮಗುಲ್ಮ ವಿಮಾನದೊಳ್ ಪದಿನೆಂಟು ಸಾಗರೋಪಮಾಯುಷ್ಯನೊಡೆಯೊಂ ಸಾಮಾನಿಕ ದೇವನಾಗಿ ಪುಟ್ಟಿದೊಂ ಪುಟ್ಟಿ ದೇವಲೋಕದ ಸುಖಮಂ ಪಲಕಾಲಮನುಭವಿಸಿಯಾಯುಷ್ಯಾಂತದೊಳ್ ಬೞಿಯಂ ಬಂದಿಲ್ಲಿ ಜಂಬೂ ದ್ವೀಪದ ಭರತ ಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ರಾಜಗೃಹಮೆಂಬುದು ಪೊಳಲದನಾಳ್ವೊಂ ಶ್ರೇಣಿಕ ಮಹಾರಾಜನೆಂಬೊನರಸಂ ಮಹಾ ಮಂಡಳಿಕನೆಣ್ ಛಾಸಿರ್ವರ್ ಮಕುಟ ಬದ್ಧರ್ಕಳ್ಗಮೆಣ್ ಛಾಸಿರ್ವರ್ ಅರಸಿಯರ್ಕಳ್ಗಮೆಱೆಯನಪ್ಪೊನಾತಂಗೆ ಎಣ್ಬರ್ ಮಹಾದೇವಿಯರವರೊಳಗಣ ಧನಶ್ರೀ ಎಂಬ ಮಹಾದೇವಿಯ ಗರ್ಭದೊಳ್ ನೆಲೆಸಿದನ್ ಆಕೆಗಂ ಇಂತಪ್ಪುದೊಂದು ಬಯಕೆಯಾದಪ್ಪುದು ಮೞೆಗಾಲದೊಳಾನೆಯನೇಱಿಯೆಲ್ಲಾ ಪಡೆಯೊಡನೆಯಡವಿಗೆ ಪೋಗಿಯಾಲದ ಮರದ ಪಣ್ಗಳಂ ಕೊಳ್ವುದುಂ ಮತ್ತೆ ಬಯ್ಗಿರುಳಿನ ಮನೋಹರಿಯೆಂಬ ಜಾವದಾಗಳ್ ಬಿಳಿದಪ್ಪ ಕಾಡಾನೆಯಂ ಕಾಣ್ಬುದುಮಿಂತೀ ಬಯಕೆಯುಂ ಕನಸುಮನರಂಸಗೆ ಪೇೞ್ದೊಡರಸಂ ಕೇಳ್ದು ಕಾಲಮಲ್ಲದ ಕಾಲದೊಳು ಮೞೆಗಾಲಮನೆಂತು ಪಡೆಯಲಕ್ಕುಮೀ ಬಯಕೆಯಂ ತೀರ್ಚುವುದರಿದೆಂದು ಚಿಂತಾಕುಳಿತ ಮನನಾಗಿರ್ದು ತನ್ನ ಮಗನಪ್ಪ ಭಯಕುಮಾರಂಗೆ ಬೞಿಯನಟ್ಟಿ ಬರಿಯರಸಿಯ ಬಯಕೆಯ ಪಾಂಗೆಲ್ಲಮಂ ಪೇೞ್ದಿದರ್ಕ್ಕೇಗೆಯ್ವಮೆಂದರಸಂ ಬೆಸಗೊಂಡೊಡೆ ಅಭಯಕುಮಾರನುಪಾಯಮಂ ಬಗೆಯಲಕ್ಕುಂ ನೀಮೇನುಂ ಚಿಂತಿಸಲ್ವೇಡ ನಿಶ್ಚಿಂತಮಾಗಿರಿಮೆಂದರಸನಂ ಸಂತಯಿಸಿ ಪೋದನ್-

ವಿಜಯಾರ್ಧ ಪರ್ವತದ ದಕ್ಷಿಣ ಶ್ರೇಣಿಯೊಳ್ ಗಗನತಿಳಕಮೆಂಬುದು ಪೊೞಲದನಾಳ್ವೊಂ ಮನೋಗತಿಯೆಂಬೊಂ ವಿದ್ಯಾಧರನಾತನ ಮಹಾದೇವಿ ಕನಕಮಾಲೆಯೆಂಬೊಳಾ ಇರ್ವರ್ಗ್ಗಂ ಮಗಳ್ ಕನಕನಚಿತ್ರೆಯೆಂಬೊಳ್ ಕನ್ನೆಯಾಕೆಯೊಂದು ದಿವಸಂ ಅಡವಿಗೆ ಪೋಗಿ ವಿದ್ಯೆಯಂ ಸಾಧಿಸುತ್ತಿರ್ಪನ್ನೆಗಂ ಚಿಂತಾಗತಿಯೆಂಬ ವಿದ್ಯಾಧರನಾಕೆಯ ರೂಪಲಾವಣ್ಯ ಸೌಭಾಗ್ಯಕಾಂತಿತ್ವಮಂ ಕಂಡಾಟಿಸಿ ನೀನೆನಗೆ ಪೆಂಡತಿಯಾಗೆಂದು ಕೆಯ್ಯಂ ಪಿಡಿದು ಕಾಡುತ್ತಿರ್ಪನ್ನೆಗಮಾಕೆಯ ತಂದೆ ಮಗಳ್ ಪಿರಿದು ಬೇಗಂ ತಪ್ಪೆದೊಡೆ

ತನ್ನವಳೋಕಿನಿಯೆಂಬ ವಿದ್ಯೆಯಂ ನೋಡಲಟ್ಟಿದೊಡದು ನೋಡಿ ಬಂದು ಕೂಸಂ ಚಿಂತಾಗತಿಯೆಂಬ ವಿದ್ಯಾಧರಂ ಕಾಡಿದಪ್ಪೊನೆಂದು ಪೇೞ್ದೊಡದಂ ಕೇಳ್ದು ಮನೋಗತಿ ಪ್ರಭೃತಿ ವಿದ್ಯಾಧರರರ್ಕಳೆಲ್ಲಂ ಪೋಗಿಯಾತನ ವಿದ್ಯೆಗಳೆಲ್ಲಮಂ ಕೊೞೆದಿಕ್ಕಿ ಪನ್ನೆರಡು ವರ್ಷಂ ಬರೆಗಂ ಭೂಮಿ ಗೋಚರನಾಗಿರೆಂದು ಶಾಪಂಗೊಟ್ಟೊಡಾತನುಮದಂ ನೀಗಲ್ವೇಡಿ ರಾಜಗೃಹಕ್ಕೆ ವಂದು ಪೆಂಡವಾಸದಗ್ಗಳದ ಸೂಳೆ ಕಾಮಲತೆಯೆಂಬೊಳಾಕೆಯೊಡನೆ ಬಾೞುತ್ತುಮಾಕೆಯ ಮನೆಯೊಳ್ ಪನ್ನೆರಡು ವರ್ಷಂ ಬರೆಗಂ ಇರ್ದ್ದು ಅವಧಿ ವರ್ಷಂ ನೆಱೆದೊಡೆ ತನ್ನ ವಿದ್ಯಾಧರ ಶ್ರೇಡಿಗೆ ಪೋಗಲ್ ಬಗೆದೊಂದು ದಿವಸಂ ಸ್ಮಶಾನಕ್ಕೆ ಪೋಗಿ ಇರುಳ್ವಿದ್ಯೆಗಳೆಲ್ಲಮಂ ಸಾಧಿಸುವಲ್ಲಿಯಾಕಾಶಕ್ಕೆ ನೆಗೆಯುತ್ತುಂ ಬೀಳುತ್ತುಮಿರ್ಪನ್ನೆಗಮಭಯ ಕುಮಾರಂ ತಂದೆಯ ಬೆಸನಂ ತೀರ್ಚಲೆಂದುಪಾಯಮಂ ಬಗೆಯಲ್ವೇಡಿ ಕೞ್ದಿಂಗಳೊಳ್ ನಟ್ಟನಡುವಿರುಳೊಳ್ ಮಣಿಖೇಟಮನುರದೊಳ್ ಸಾರ್ಚಿ ಕಿಳ್ತಬಾಳ್ವೆರಸು ಪೊಱಮಟ್ಟು ಪೊೞಲೊಳೆಲ್ಲಂ ತೊೞಲ್ದು ಪೊೞವೊಳಲಂ ತೊೞಲ್ವನ್ನೆಗಂ ಶ್ಮಶಾನದೊಳ್ ಮೇಗಣೊಗೆಯುತ್ತಂ ಬೀೞುತ್ತಮಿರ್ದ್ದ ಪುರುಷನಂ ಕಂಡು ನೀನಾರ್ಗ್ಗೇನೆಂಬೆ ಎಲ್ಲಿರ್ಪೆಯಾಕಾಶಕ್ಕೆ ನೆಗೆದು ಮತ್ತೆ ನೆಲದೊಳೇಕೆ ಬೀೞ್ವೆಯೆಂದು ಬೆಸಗೊಂಡೊಡೆಯಾತನಿಂತೆಂದನ್ ನಾಂ ವಿದ್ಯಾಧರಂ ಚಿಂತಾಗತಿ ನಾಮಧೇಯನೆಂದು ತನ್ನ ವೃತ್ತಾಂತಮೆಲ್ಲಮಂ ಪೇೞ್ದೊಡೆ ಮತ್ತೀಗಳ್ ನೀನೇಗೆಯ್ದಪೆಯೆಂದು ಬೆಸಗೊಂಡೊಡೆಯಾತನಿಂತೆಂದನಾ ವಿದ್ಯೆಗಳ್ ಸಾಧಿಸಿ ಎನ್ನ ವಿದ್ಯಾಧರಲೋಕಕ್ಕೆ ಪೋಗಲ್ ಬಗೆದಪ್ಪೆಂ ವಿದ್ಯೆಗಳುಂ ಸಾಧನೆಗೆ ಸಲ್ಲವಾದಪ್ಪುವದಱಿಂದಾಕಾಶಕ್ಕೊಗೆದು ಮತ್ತಂ ನೆಲದೊಳು ಬೀೞ್ವೆನೆಂದೊಡಾ ವಿದ್ಯಾಮಂತ್ರಂಗಳನೆನಗೆ ಪೇಳೆಂದಭಯಕುಮಾರಂ ಬೆಸಗೊಂಡು ಮಂತ್ರ ವ್ಯಾಕರಣದೊಳಾದಮಾನುಂ ಕುಶಲನಪ್ಪುದಱಿಂ ಪ್ರಸ್ತಾರಿಸಿ ನೋೞ್ಪನ್ನೆಗಂ ಮಂತ್ರಂಗಳ್ ಹೀನಾಧಿಕಾಕ್ಷರ ಸಹಿತಂಗಳೆಂದಱಿದು ಹೀನಮಪ್ಪಲ್ಲಿಯಕ್ಷರಂಗಳನಿಟ್ಟ ಧಿಕಮಪ್ಪಲ್ಲಿಯಕ್ಷರಂಗಳಂ ಕಳೆದು ತಿದ್ದೀಪಾಂಗಿನೊಳು ಮಂತ್ರಂಗಳನೋದೆಂದು ಪೇೞ್ದೊಡಾತಮನುಮಾ ಪಾಂಗಿನೊಳ್ ಮಂತ್ರಗಳನೋದಿದೊಡೆ ವಿದ್ಯೆಗಳ್ ಸಾಧನೆಗೆ ಸಂದವು ಸಂದೊಡೆ ವಿದ್ಯಾಧರನೆಂದನೆನಗುಪಕಾರಿಯಯ್ ವರಮಿತ್ರನಯ್ ನಿನಗಾಂ ಬೆಸಕೆಯ್ವೆಂ ಎನಗೇನಪ್ಪೊಡಮೊಂದು ಬೆಸನಂ ಪೇಳೊಂದೊಡೆ ಅಭಯ ಕುಮಾರನೆಂದಂ ಎಮ್ಮಬ್ಬೆಯ ಬಯಕೆಯಂ ತೀರ್ಚೆಂದೊಡಾತನುಂ ಬಯಕೆಯಂ ಬೆಸಗೊಂಡು ನೇಸಱ್ ಮೂಡಿದೊಡೆ ವಿದ್ಯೆಗಳಿಂದಂ ಬೇಸಗೆಯನೆ ಮೞೆಗಾಲಂ ಮಾಡಿ ಬಿಳಿಯಾನೆಯನರಸಿಯನೇಱಿಸಿ ಪರಿವಾರಮುಂ ಪಡೆಯುಂ ಬೆರಸಿ ಸುಗಂಧಪುಷ್ಪ ವೃಷ್ಟಿಯಂ ಕಱೆಯುತ್ತುಂ ಪಟು ಪಟಹ ಪಣವ ತುಣವ ಭಂಭಾ ಮದ್ದಳೆ ಝಲ್ಲರೀ ಮೃಗಂದ ಶಂಖ ವಂಶ ಕಾಹಳಾದಿಗಳುಂ ಮುಂದೆ ಬಾಜಿಸೆ ಪೊೞಲಂ ಪೊಱಮಟ್ಟು ವಿಂಧ್ಯಾಟವಿಗೆ ಪೋಗಿ ಅಡವಿಯೆಲ್ಲಮಂ ತೊೞಲ್ದು ನೋಡಿಯಾಲದ ಪಣ್ಗಳಂ ತಾವೆಯಾಯ್ದು ಸೋಂಕಿಲಂ ತೀವಿಕೊಂಡಾಗ ಬಯಕೆ ನೆಱೆದೊಡೆ ಮತ್ತಂ ಪೊೞಲ್ಗರಸಿಯಂ ತಂದು ಕರುಮಾಡಮಂ ಪುಗಿಸಿದ ಬೞಿಕ್ಕಭಯಕುಮಾರನನಿಂತೆಂದಂ

- ನಾನಿಂ ಪೋಪೆನೆತ್ತಾನುಂ ನಿನಗೆ ಬಾಟ್ತಿಯಾದಂದೆನ್ನಂ ನೆನೆವುದೆಂದಭಯಕಮಾರನಂ ಬೀಟ್ಕೊಂಡು ಕಾಮಲತೆಗೆ ಪೇಟ್ದು ತನ್ನ ವಿದ್ಯಾಧರಲೋಕಕ್ಕೆ ಪೋದಂ

ಮತ್ತೆ ಧನಶ್ರೀ ಮಹಾದೇವಿಯುಂ ನವಮಾಸಂ ನೆರೆದು ಬೆಸಲೆಯಾಗಿ ಮಗಂ ಪುಟ್ಟಿದೊಡಾತಂಗೆ ತಾಯುಂ ತಂದೆಯುಂ ಗಜಕುಮಾರನೆಂದು ಪೆಸರನಿಟ್ಟರ್ ಇಂತು ಇಷ್ಟ ವಿಷಯ ಕಾಮ ಭೋಗಂಗಳನನುಭವಿಸುತ್ತುಂ ಪಲಕಾಲಂ ಸಲೆ ಮತ್ತೊಂದು ದಿವಸಂ ರಾಜಗೃಹದ ನೈಋತಿಯೊಳ್ ವಿಪುಳಗಿರಿಯೆಂಬ ಪರ್ವತದ ಮೇಲೆ ವರ್ಧಮಾನ ಭಟಾರರ ಸಮವಸರಣಂ ಬಂದಿರ್ದ್ದೊಡೆ ರಿಷಿನಿವೇದಕಂ ಕಂಡು ಪೋಗಿ ಶ್ರೇಣಿಕ ಮಹಾರಾಜಂಗೆ ಭಟ್ಟಾರರ ಬರವಂ ಪೇಟ್ದೊಡಾತನುಂ ಸಿಂಹಾಸನದಿಂದೆಟ್ದು ದೆಸೆಯತ್ತೇೞಡಿಯಂ ಪೋಗಿ ನಡೆದು ಸಾಷ್ಟಾಂಗವೆಱಗಿ ಪೊಡಮಟ್ಟು ಪೇಟ್ದಾತಂಗೆ ತುಷ್ಟಿದಾನಮಂ ಕೊಟ್ಟು ಆನಂದಭೇರಿಯಂ ಪೊಯ್ಸಿ ಪುತ್ರ ಪೌತ್ರ ಕಳತ್ರ ಮಿತ್ರ ಪರಿವಾರ ಸಹಿತಂ ವಂದನಾಭಕ್ತಿಗೆ ಪೋಗಿ ಸ್ಫಟಿಕಮಯ ಸೋಪಾನಪಂಕ್ತಿಗಳಿಂದೇಱಿ ಸಮವಸರಣಮಂ ಪೊಕ್ಕು ಗಂಧಕುಟಿ ಪ್ರಾಸಾದಮಂ ತ್ರಿಪ್ರದಕ್ಷಿಣಂಗೆಯ್ದು ಮುಂದೆ ನಿಂದು ಸ್ತುತಿಶತಸಹಸ್ರಂಗಳಿಂ ಸ್ತುತಿಯಿಸಿ ಬಂದಿಸಿ ಗಂಧ ಪುಷ್ಪ ಧೂಪ ದೀಪಾಕ್ಷತಂಗಳಿಂದರ್ಚಿಸಿ ಗಣಧರ ದೇವರ್ ಮೊದಲಾಗೊಡೆಯ ರಿಷಿಯರ್ಕ್ಕಳಂ ಗುರುಪರಿವಿಡಿಯಿಂದಂ ಬಂದಿಸಿ ತಮ್ಮಿ ಪೊರ್ವ್ವೀವರಿಯೊಳಿರ್ದ್ದು ಪಿರಿದು ಬೇಗಂ ಧರ್ಮಮಂ ಕೇಳ್ದು ತದನಂತರಮೆ ಗಜಕುಮಾರಂ ತನ್ನ ಭವಾಂತರಂಗಳಂ ಬೆಸಗೊಂಡೊಡೆ ಗಣಧರ ದೇವರಿಂತೆಂದು ಪೇಟ್ದರ್

ಈ ಭವದಿಂ ತೊಟ್ಟು ಎಂಟನೆಯ ಭವದಂದು ನೀಂ ಕೊಂಕನಾಡೊಳ್ ತುಂಗಭದ್ರನೆಂಬ ಪೋಡುಂಗಾಱನ್ನೆ ನೀನುಂ ಕುಮ್ಮರಿಯಂ ಸುಟ್ಟು ಪೋಗಿ ಪೊತ್ತಾಱಿ ಬಂದು ನೋಟ್ಪನ್ನೆಗಮಾ ಕಿಚ್ಚಿನೊಳ್ ಬೆಂದು ಸತ್ತ ರಿಷಿರೂಪಂ ಕಂಡು ಕರುಣಿಸಿಯಲ್ಲಿ ಕಿಚ್ಚಂ ಪೊಕ್ಕು ಸತ್ತು ವೆಂತರದೇವನಾಗಿಯಾಯುಷ್ಯಾಂತದೊಳ್ ವಿಂಧ್ಯಾಟವಿಯೊಳ್ ಬಿಳಿಯಾನೆಯಾಗಿ ಪುಟ್ಟಿಯಚ್ಯುತೇಂದ್ರಂ ಪ್ರತಿಬೋಧಿಸೆ ಸಮ್ಯಕ್ತ್ವಪೂರ್ವಕಂ ಶ್ರಾವಕಬ್ರತಂಗಳಂ ಕೈಕೊಂಡು ಪ್ರತಿಪಾಳಿಸಿಯಾಯುಷ್ಯಾಂತದೊಳ್ ಸಹಸ್ರಾರ ಕಲ್ಪದೊಳ್ ಪದಿನೆಂಟು ಸಾಗರೋಪಮಾಯುಷ್ಯಮನೊಡೆಯೊಂ ದೇವನಾಗಿ ಪುಟ್ಟಿಯಲ್ಲಿಂದಂ ಬಂದಿಲ್ಲಿ ಗಜಕುಮಾರನೆಯಾದೆಯೆಂದು ಪೇಟ್ದೊಡೆ ತನ್ನಭವಂಗಳಂ ಕೇಳ್ದು ವೈರಾಗ್ಯಮನೊಡೆಯನಾಗಿ ಯೆರ್ದ್ದು ವರ್ಧಮಾನ ಭಟಾರರ್ಗಿದಿರಂ ನಿಂದು ಕೈಗಳಂ ಮುಗಿದು ದೀಕ್ಷಾ ಪ್ರಸಾದಂಗೆಯ್ಯಿಮೆಂದು ಬೇಡಿ ತಪಂಬಟ್ಟಾಗಮಂಗಳೆಲ್ಲಮಂ ಕಲ್ತು ಏಕ ವಿಹಾರಿಯಾಗಿ ಗ್ರಾಮೇಕರಾತ್ರಂ ನಗರೇ ಪಂಚರಾತ್ರಮಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂ ಗ್ರಾಮನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹರಿಸುತ್ತುಂ ಕಳಿಂಗ ನಾಡನೆಯ್ದಿಯಲ್ಲಿ ದಂತಪುರವೆಂಬ ಪೊಟಿಲ ಪಡುವಣ ಬೆಟ್ಟದ ಮೇಗೇಕಸ್ಥಿರಯೋಗಂಗೊಂಡು ಕಲ್ಲೆಲೆನಿಂದರನ್ನೆಗಂ ಆ ಪೊಟಿಲನಾಳ್ವೊಂ

ನರಸಿಂಹನೆಂಬರಸನಾತನ ಮಹಾದೇವಿ ವಸುಮತಿಯೆಂಬೊಳಾಯಿರ್ವರ್ಗ್ಗಂ ಮಗಂ ನರಪಾಳನೆಂಬೊಂ ಮಂತ್ರಿ ಬುದ್ಧದಾಸನೆಂಬೊಂ ಅಂತವರ್ಗಳ್ಪೆರಸೊಂದು ದಿವಸಂ ಕರುಮಾಡದ ಮೇಗಣ ನೆಲೆಯೊಳಿರ್ದ್ದರಸಂ ದಿಶಾವಳೋಕನಂಗೆಯ್ಯುತ್ತಿರ್ದ್ದಾತಂ ಬೆಟ್ಟದ ಮೇಗಾತಪಮಿರ್ದ್ದ ರಿಷಿಯರಂ ಕಂಡೀ ತಪಸ್ವಿ ಬೇಸಗೆಯೊಳ್ ಬೆಟ್ಟದ ಮೇಗಿರ್ದ್ದೇಕೆ ಬಿಸಿಲ್ಗಾಯ್ವಪ್ಪನೆಂದು ಮಂತ್ರಿಯಪ್ಪ ಬುದ್ಧದಾಸನಂ ಬೆಸಗೊಂಡೊಡಾತಂ ಕೌಟಿಲ್ಯಭಾವದಿಂದಿಂತೆಂದನೀ ತಪಸ್ವಿಗೆ ಮಹಾವಾತಂ ತಗುಳ್ದುದಱಿಂದಂ ನಿಂದಿರ್ದೋನೆಂದೊಡರಸನಿದರ್ಕ್ಕೆ ಮರ್ದೇನೆಂದು ಬೆಸಗೊಂಡೊಡಾತನಿಂತೆಂದಂ

ಆ ತಪಸ್ವಿಯೇಱಿರ್ದ ಸೆಲೆಯಂ ಕಾಸುವುದೆಂದದಡಂತಪ್ಪೊಡೆ ನೀನೆ ಪಕ್ಕದಿರ್ದ್ದು ಕಾಸೆಂದು ಬೆಸವೇೞ್ದೊಡಾತನುಮಂತೆಗೆಯ್ವೆನೆಂದು ಪೋಗೆಯಾ ರಿಷಿಯರ್ ಚರಿಗೆವೋದರನ್ನೆಗಂ ಯೋಗಪೀಠದ ಸೆಲೆಯಂ ಕಿಚ್ಚಿನ ಬಣ್ಣಮಾಗಿ ಕಾಸಿ ಪೋದನನ್ನೆಗಂ ಚರಿಗೆವುಗುತ್ತಿರ್ದ್ದ ರಿಷಿಯಂ ದೇವತೆ ಕಂಡಿಂತೆಂದಳ್ ನಿಮಗಾಯುಷ್ಯಮಿಲ್ಲೇಕೆ ಚರಿಗೆ ಮಾಡಲ್ ಪೋದಪಿರೆಂದಡೆ ಚರಿಗೆ ವುಗದಂತೆ ಮಗುಳ್ದು ಬರ್ಪರನ್ನೆಗಂ ಕಿಚ್ಚಿನ ಬಣ್ಣಮಾಗಿ ಕಾಯ್ದಿರ್ದ ಸೆಲೆಯಂ ಕಂಡೆಮಗಿನ್ನಾಯುಷ್ಯಮಿನಿತೆಯೆಂದು ಪರಿಚ್ಛೇದಿಸಿ ಸಿದ್ಧಭಕ್ತಿಯುಂ ಜೋಗಭಕ್ತಿಗೆಯ್ದು ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಜಾವಜ್ಜೀವ ನಿವೃತ್ತಿಗೆಯ್ದಾಚಾರ್ಯ ಭಕ್ತಿಗೆಯ್ದು ಕಾಯ್ದಿರ್ದ ಜೋಗಪೀಠಮನೇಱಿ ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ಸಮತ್ವೀಭಾವಮನೆ ಭಾವಿಸಿ ಕಿಚ್ಚಿನುಪಸರ್ಗಮಂ ಸೈರಿಸಿ ಚತುರ್ವಿಧಮಪ್ಪ ಧ್ಯಾನಮಂ ನಾಲ್ಕು ತೆಱದ ಶುಕ್ಲಧ್ಯಾನಂಗಳುಮಂ ಧ್ಯಾನಿಸಿ ಎಂಟು ಕರ್ಮಂಗಳನೊರ್ಮೊದಲೆ ಕಿಡಿಸಿ ಮೋಕ್ಷಕ್ಕೆ ವೋದರನ್ನೆಗಂ ಚತುರ್ವಿಧ ದೇವನಿಕಾಯಂ ಬಂದು ದಿವ್ಯಮಪ್ಪ ಗಂಧಪುಷ್ಪಧೂಪ ದೀಪಾಕ್ಷತಂಗಳಿಂ ಶ್ರೀಪಾದಮನರ್ಚಿಸಿ ಪೊಡೆವಟ್ಟು ಮತ್ತೆ ಬುದ್ಧದಾಸನಂ ದೇವರ್ಕ್ಕಳ್ ಜಡಿದು ನುಡಿದೊಡವನಂಜಿಯೆಂದಂ ಆನಱಿಯದೆ ಪಂಚಮಾಹಾಪಾತಕನೆಂ ಪೊಲ್ಲಕೆಯ್ದೆನೆನಗೊರ್ಮ್ಮೆಗೆ ಕ್ಷಮಿಯಿಸಿಮೆಂದು ನುಡಿದೊಡೆ ದೇವರ್ಕ್ಕಳುಂ ಕ್ಷಮಿಯಿಸಿ ತಂತಮ್ಮ ಸ್ಥಾನಂಗಳ್ಗೆ ಪೋದೊಡಿತ್ತ ಬುದ್ಧದಾಸನುಮಾ ರಿಷಿಯರ ತಪದ ಮಹಾತ್ಮ್ಯಮುಮಂ ದೇವರ್ಕ್ಕಳ್ ಬಂದು ಪೂಜಿಸುವುದಂ ಕಂಡಿದುವೇ ಧರ್ಮಂ ಇದುವೇ ತಪಮೆಂದು ನಂಬಿ ಸಮ್ಯಕ್ತ್ವ ಪೂರ್ವಕಂ ಶ್ರಾವಕಬ್ರತಂಗಳಂ ಕೈಕೊಂಡು ನೆಗೞ್ದಂ ಮತ್ತಾ ನರಸಿಂಹ ನೃಪತಿಯುಂ ಪಶ್ಚಾತ್ತಾಪಮಾಗಿ ರಿಷಿವಧೆಗೆಯ್ದು ಪಾಪಮಿಂತಲ್ಲದೆ ಪೋಗದೆಂದು ನರಪಾಲನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ಪಲಂಬರುಂ ಅರಸು ಮಕ್ಕಳ್ ವೆರಸು ಸುಧರ್ಮರೆಂಬ ಭಟಾರರ ಪಕ್ಕದೆ ತಪಂಬಟ್ಟು ಪಲಕಾಲಮುಗ್ರೋಗ್ರ ತಪಶ್ಚರಣಂಗೆಯ್ದು ಸಮಾಧಿಮರಣದಿಂದಂ ಮಿಕ್ಕ ರತ್ನತ್ರಯಗಳಂ ಸಾಧಿಸಿ ಸರ್ವಾರ್ಥ ಸಿದ್ಧಿಯೊಳ್ ಮೂವತ್ತು ಮೂಱು ಸಾಗರೋಪಮಾಯುಷ್ಯಮನೊಡೆಯೊಂ ಅಹಮಿಂದ್ರದೇವನಾದೊಂ

ಇಂತೀ ಪೇೞ್ದ ಕಥೆಗಳೆಲ್ಲಂ ಗುರುದತ್ತ ಭಟಾರರ ಕಥೆಗೆ ಪ್ರತಿಬದ್ಧಂಗಳ್ ಮತ್ತಂ ಪೆಱರುಂ ಸನ್ಯಸನಂಗೆಯ್ದ ಭವ್ಯರ್ಕ್ಕಳ್ ಗುರುದತ್ತ ಭಟ್ಟಾರರುಮಂ ಹಳಮುಖ ರಿಷಿಯರುಮಂ ಗಜಕುಮಾರಭಟಾರರುಮನಿಂತಿವರ್ಗ್ಗಳಂ ಮನದೊಳ್ ಬಗೆದುಪಸರ್ಗಂಗಳುಮಂ ಪಸಿವು ನೀರೞ್ಕೆ ಮೊದಲಾಗೊಡೆಯ ಇಪ್ಪತ್ತೆರಡು ಪರೀಷಹಂಗಳಂ ಸೈರಿಸಿ ಸಮಾಧಿಮರಣದಿಂದಂ ಪರಮ ಶುದ್ಧ ಸಹಜ ದರ್ಶನ ಜ್ಞಾನಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗದ ಸುಖಂಗಳನೆಯ್ದುಗೆ

■

೧೫. ಚಿಲಾತ ಪುತ್ರನ ಕಥೆ

ಚಿಲಾತಪುತ್ರನ ಕಥೆಯಂ ಪೇೞ್ವೆಂ

ಗಾಹೆ ॥ ಗಾಢಪ್ಪಹಾರ ವಿದ್ಧೋ ಮೂಇಂಗಾಳೀಹಿ ಚಾಳಿಣಿ ಕದೋ ವಾ

ತದವಿಯ ಚಿಳಾದಪುತ್ತೋ ಪಡಿವಣ್ಣೋ ಉತ್ತಮಂ ಆಟ್ಠಂ ॥

[ಗಾಢಪ್ಪಹಾರ=ಆದಮಾನುಂ ಸೈರಿಸಲ್ಕರಿಯವಪ್ಪ । ಪಹಾರ =ಏಱುಗಳಿಂದಂ । ವಿದ್ಧೋ= ಉರ್ಚ್ಚೆಪಟ್ಟನಾಗಿ । ಮೂಇಂ ಗಾಳೀಹಿ = ಕಟ್ಟಿಱುಂಪೆಗಳಿಂದಂ । ಚಾಳಿಣಿಕದೋವಾ =ಪೊನಲಿಯವೊಲಂ ಛಿದ್ರಂ ಮಾಡೆಪಟ್ಟ ಮೆಯ್ಯನೊಡೆಯನಾಗಿ । ತದವಿಯ = ಅಂತು । ಚಿಳಾದ ಪುತ್ತೊ - ಚಿಲಾತಪುತ್ರನೆಂಬ ರಿಷಿ । ಪಡಿವಣ್ಣೋ = ಪೊರ್ದಿದೊಂ । ಉತ್ತಮಂ ಅಟ್ಠಂ = ಮಿಕ್ಕ ದರ್ಶನಜ್ಞಾನ ಚಾರಿತ್ರಂಗಳಾರಾಧನೆಯಂ]

ವಚನ ॥ ಅದೆಂತೆಂದೊಡೆ - ಈ ಜಂಬೂದ್ವೀಪದ ಭರತ ಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಗಾಜಗೃಹಮೆಂಬುದು ಪೊೞಲದನಾಳ್ವೊಂ ಉಪಶ್ರೇಣಿಕನೆಂಬ ರಸನಾತಂಗೆ ಜಯಾವತಿ ಮಹಾದೇವಿ ಮೊದಲಾಗಿ ಮೂಸಾಸಿರ್ವರರಸಿಯರ್ಕಳಂತವರೊಳ್ ಇಷ್ಟ ವಿಷಯ ಕಾಮಭೋಗಗಂಳನನುಭವಿಸುತ್ತಂ ಪಲವು ಕಾಲಂ ಸಲೆ ಮತ್ತೊಂದು ದಿವಸಂ ಉಪಶ್ರೇಣಿಕಂ ಬೇಂಟೆಯಾಡಲ್ ಪೋಗಿಯಡವಿಯೊಳ್ ದುಷ್ಟಾಶ್ವಮನೇಱಿ ಪಂದಿಯ ಬೞಿಯಂ ತಗುಳ್ವೊಡದು ಗಾಳಿಗೊಂಡೊಂದು ದೆಸೆಗೆ ವೞಿದು ವಿಂಧ್ಯಾಟವಿಯ ನಟ್ಟನಡುವೆ ಸುರಮ್ಯಮೆಂಬ ಬೇಡವಳ್ಳಿಯ ಸಾರೆ ತೋಟಿಯ ತಡಿಯೊಳ್ ಕುದುರೆ ತನ್ನಿಂತಾನೆ ಸೇದೆಗೆಟ್ಟು ನಿಂದಾಗಳ್ ಕುದುರೆಯಿಂದಿೞಿದು ಪಲ್ಲಣಮುಂ ಚದುರಸಿಗೆಯುಮಂ ಕೀೞುಮಂ ಕಳೆದು ಕುದುರೆಯಂ ನೀರೂಡಿ ಮಿಸಿಸಿ ಕಟ್ಟಿ ತಾನುಂ ನೀರಂ ಕುಡಿದೊಂದು ಮರದ ಕೆಳಗೆ ಚದುರಸಿಗೆಯಂ ಪಾಸಿ ಪಟ್ಟಿರ್ದ್ದನ್

ಅನ್ನೆಗಮಾ ಬೇಡವಳ್ಳಿಯರಸಂ ಮಹಾಕಾಳನೆಂಬೊನಾತಂ ಕುಲದೊಳರಸುಕುಲಂ ದಾಯಿಗರಿಂದಮುಚ್ಚಾಟಿಸಿ ಕಳೆಯೆಪಟ್ಟೊನಾಗಿ ಬಂದಲ್ಲಿ ಪೊೞಲಂ ಮಾಡಿ ಪಲಕಾರಮಿರ್ದ್ದೊನಾತನರಸಿ ಸುಂದರಿಯೆಂಬೊಳಾಯಿರ್ವ್ವರ್ಗ್ಗಂ ಮಗಳ್ ಗುಣ ಸುಂದರಿಯೆಂಬೊಳ್ ಅತ್ಯಂತ ರೂಪ ಲಾವಣ್ಯ ಸೌಭಾಗ್ಯಕಾಂತಿ ಹಾವ ಭಾವ ವಿಲಾಸ

ವಿಭ್ರಮಂಗಳನೊಡೆಯೊಳ್ ಪಲರುಂ ಕನ್ನೆಯರ್ಕಳುಂ ಸುಖೀಜನಂಗಳುಂ ಕಾಪಿನವರುಂ ಬೆರಸುದ್ಯಾನ ವನದೊಳ್ ವನಕ್ರೀಡೆಯನಾಡಿ ಬರ್ಪಾಕೆ ಉಪಶ್ರೇಣಿಕನ ರೂಪಂ ಕಂಡಾಟಿಸಿ ನೋಡೆಯಾತನುಮಾಕೆಗಾಟಿಸಿ ಸೋಲ್ತು ನೋಡಿ ಬಸಮಟಿದು ನೀಡುಮೊಲ್ದು ನೋಡೆ ಕಾಪಿನವರ್ಜಡಿದು ಕೊಂಡು ಪೋಪಾಗಳೊಂದು ಓಲೆಯನಿಂತೆಂದು ಬರೆದಳ್ ನೀನಲ್ಲದೆನಗುಟಿದ ಪರಪುರುಷರ್ ಮೊಜೆಯಲ್ಲರೆಂದು ಬರೆದು ಪೆಜಗಣೆಂದೋಲೆಯ ನಿಕ್ಕಿಪೋದಾಗಳೋಲೆಯಂ ಬಾಚಿಸಿ ನೋಡಿ ಸಂತುಷ್ಟಚಿತ್ತನಾಗಿರ್ದ್ದನ್ನೆಗಂ ಪೆಜಗಣಿಂ ದಡಿವಚ್ಚೆಯಂ ನೋಡಿ ತೇನತೇನದಿಂ ತಂತ್ರನೆಲ್ಲಂ ನೆರೆದು ಬಂದು ಪಜೆಯ ಕಾಳೆಯ ಶಂಖ ಧ್ವನಿಗಳೊಮ್ಮೊದಲೆ ಬಾಜಿಸೆ ಬೇಡರಸಂ ಕೇಳ್ದು ದಾಟೆ ಬಂದುದೆಂದಂಜಿ ತ್ರಸ್ತಾಭಿಭೂತನಾಗಿಯೋಡಲ್ ತಗುಳ್ದೊಡೆ ಉಪಶ್ರೇಣಿಕಂ ತನ್ನ ಪೆರ್ಗ್ಗಡೆಗಳನಟ್ಟಿ ಯೋಡಲೀಯದೆ ಸಂತವಿಸಿದೊಡಾತನುಂ ಆನೆಗಳ ದಂತಂಗಳುಂ ಮುತ್ತುಗಳುಂ ಪುಲಿಯ ತೊಗಲ್ಗಳುಮಂ ಚವುರಿಗಳುಂ ಕೊಂಡು ಬಂದು ಕಂಡು ಕ್ಷೇಮ ಕುಶಲಂಗಳಂ ಬೆಸಗೊಂಡ ಬಟಿಕ್ಕೆ ನಿಮ್ಮ ಕುಲಮೇನೆಂದು ಬೆಸಗೊಂಡೊಡಾತನರಸು ಕುಲಮೆಂದು ಪೇಟ್ದೊಡೆ ಕೇಳ್ದು ಸಂತೋಷಂ ಬಟ್ಟಿರ್ದ್ದೊಡಾತನುಂ ಅರಸಂಗೆ ಬಿರ್ದ್ದುಮಾಡಿರ್ದ್ದ ಬಳಿಕ್ಕೆ ಕೂಸಂ ಬೇಡಿಯಟ್ಟಿ ಪೆತ್ತು ಪ್ರಶಸ್ತ ದಿವಸ ವಾರ ನಕ್ಷತ್ರ ಮೂಹೂರ್ತದೊಳ್ ಮದುವೆ ನಿಂದು ಕೂಸನೊಡಗೊಂಡು ತನ್ನ ಪೊಟಲ್ಗೆ ಪೋಗಿ ಚಿಳಾತಮಹಾದೇವಿಯೆಂದು ಪೆಸರನಿಟ್ಟು ಇಂತಿಷ್ಟವಿಷಯ ಕಾಮ ಭೋಗಂಗಳನನುಭವಿಸುತ್ತಂ ಪಲವುಕಾಲಂ ಸಲೆ

ಮತ್ತಿತ್ತಾ ನಾಡೊಳ್ ಸಾರ್ಥಾಧಿಪತಿ ನಂದಿಮಿತ್ರನೆಂಬೊಂ ಸೆಟ್ಟಿ ಸಾರ್ಥಂಬೆರಸು ಪರದಿಂಗೆ ಪೋಗುತ್ತಿರ್ದ್ದಾತನೆಡೆಯೊಳೊಂದೂರೊಳ್ ಬೀಡಂ ಬಿಟ್ಟಿರ್ದ್ದನ್ನೆಗಂ ತಪೋವರರೆಂಬ ರಿಷಿಯರೇಕವಿಹಾರಿಗಳ್ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪ್ಪೊರಾ ಸಾರ್ಥಾಧಿಪತಿಯ ಬೀಡು ಬಿಟ್ಟಿರ್ದ್ದಲ್ಲಿಗೆ ಬಂದು ಪಂಥಾಚಿತಾರ ನಿಯಮಂಗೆಯ್ದು ಪಗಲ್ ದೇವರಂ ಬಂದಿಸಿಯೂರ್ಗ್ಗೆ ಚರಿಗೆಪೋಗಿಯೂರೆಲ್ಲಮಂ ತಿಙ್ಞನೆ ತಿಱಿದು ತೊಟಲ್ವಾರುಂ ನಿಲಿಸದಿರ್ದ್ದೊಡೂರಂ ಪೊಱಮಟ್ಟು ಪೋಪ ರಿಷಿಯರಂ ನಂದಿಮಿತ್ರಂ ಕಂಡು ಕಾರುಣ್ಯದಿಂದ ನಿರಿಸಿ ಎಳ್ಳುಂಡೆಯನಿಕ್ಕಿದೊಡದಂ ಚರಿಗೆ ಮಾಡಿ ಪ್ರಾಸುಕಮಪ್ಪ ನೀರಂ ಕುಡಿದು ಪರಸಿ ಪೋದರಾ ನಂದಿಮಿತ್ರನುಂ ಪಲಕಾಲಂ ಬರ್ದ್ದಾಯುಷ್ಯಾಂತದೊಳ್ ಜಂಬೂದ್ವೀಪದ ಹೈಮವತಮೆಂಬ ಜಘನ್ಯ ಭೋಗಭೂಮಿಯೊಳೊಂದು ಪಳಿತೋಪಮಾಯುಷ್ಯಮನೊಡೆಯೊಂ ಭೋಗಭೂಮಿಜನಾಗಿ ಪುಟ್ಟಿದೊಂ ಪುಟ್ಟಿಯಲ್ಲಿ

ವೃತ್ತ : ಮದ್ಯಾಂಗ ತೂರ್ಯಾಂಗ ವಿಭೂಷಣಾಂಗ
ಜ್ಯೋತಿರ್ಗೃಹಾ ಭೋಜನಭಾಜನಾಂಗಾಃ
ಪ್ರದೀಪ ವಸ್ತ್ರಾಂಗ ವರಸ್ರಜಾಂಗಾ
ದಶಪ್ರಕಾರಾಸ್ತರವಸ್ತು ತತ್ರ ॥

ಅಂತುಂ ಪತ್ತುಂ ತೆಱದ ಕಲ್ಪವೃಕ್ಷಂಗಳ್ ಭೋಗಂಗಳಂ ಕುಡೆ ಪಲಕಾಲಂ ಭೋಗೋಪಭೋಗಂಗಳನನುಭವಿಸಿಯಾಯುಷ್ಯಾಂತದೊಳಂ ಮಂದರದ ನಂದನಮೆಂಬ ವನದೊಳ್ ವ್ಯಂತರದೇವನಾಗಿ ಪುಟ್ಟಿ ಅಲ್ಲಿಂ ಬಂದು ರಾಜಗೃಹದೊಳುಪಶ್ರೇಣಿಕಂಗಂ ಚಿಳಾತ ಮಹಾದೇವಿಗಂ ಚಿಳಾತಪುತ್ರನೆಂಬೊಂ ಪಿರಿಯ ಮಗನಾಗಿ ಪುಟ್ಟಿದನಲ್ಲಿಂ ಬೞಿಯಂ ಜಯಾವತಿಯೆಂಬ ಪಿರಿಯ ಮಹಾದೇವಿಗೆ ಶ್ರೇಣಿಕನೆಂಬೊಂ ಮಗನಾಗಿ ಪುಟ್ಟಿದನುೞಿದರಸಿಯರ್ಕಳ್ಗೆ ಮಕ್ಕಳ್ ಪುಟ್ಟಿದರ್ ಅಂತೆಲ್ಲ ಉಪಶ್ರೇಣಿಕಂಗೆ ಮಕ್ಕಳಯ್ನೂರ್ವರಂತು ಉಪಶ್ರೇಣಿಕನಯ್ನೂರ್ವರ್ ಮಕ್ಕಳ್ವೆರಸು ಭೋಗೋಪಭೋಗಂಗಳನನುಭವಿಸುತ್ತಂ ಕಾಲಂ ಸಲೆ

ಮತ್ತೊಂದು ದಿವಸಂ ನೈಮಿತ್ತಕನನರಸಂ ಬೆಸಗೊಂಡನೆನ್ನ ಮಕ್ಕಳೊಳಗೆ ರಾಜ್ಯಾರ್ಹರಾರೆಂದು ಬೆಸಗೊಂಡೊಡಾತನಿಂತೆಂದನಯ್ನೂರ್ವರ್ ಮಕ್ಕಳಿಗಮೊಂದೆ ಪಂತಿಯೊಳ್ ತುಯ್ಯಲಂ ಬಡ್ಡಿಸಿಯಯ್ನೂಱು ನಾಯನವರ ಮೇಗೆ ಬಿಟ್ಟೊಡಾವನೋರ್ವನಂಜದುಣ್ಗುಮಾತನಕ್ಕುಂ ಮತ್ತರಮನೆಯೊಳ್ ಕಿರ್ಚ್ಚುರ್ದೊಡಾವನೋರ್ವಂ ಸಿಂಹಾಸನಮುಂ ಬೆಳ್ಗೊಡೆಯುಂ ಪಾಳಿಧ್ವಜಂ ಮೊದಲಾಗೊಡೆಯ ರಾಜ್ಯಚಿಹ್ನಂಗಳಂ ಪುಡಿಕೆಯುಮಂ ಕೈಕೊಳ್ಗುಮಾತಂ ರಾಜ್ಯಕ್ಕರ್ಹನಕ್ಕುಮೆಂದು ಪೇೞ್ದುದಂ ಕೇಳ್ದು ಒಂದು ದಿವಸಂ ಅವರ್ಗ್ಗುಣಲಿಕ್ಕವೇೞ್ದು ಪರೀಕ್ಷಿಸಿ ನೋಡಿದೊಡೆ ಶ್ರೇಣಿಕಂ ನಾಯ್ಗಳಂ ತುಯ್ಯಲನಿಕ್ಕಿ ತಾನುಮುಂಡನುೞಿದವರೆಲ್ಲಮೋಡಿದರ್ ಮತ್ತೊಂದು ದಿವಸಂ ಅರಮನೆಯೊಳ್ ಕಿರ್ಚ್ಚುರ್ದೊಡುೞಿದ ಮಕ್ಕಳೆಲ್ಲಂ ಭಂಡಾರಂಗಳುಮಾನೆಗಳುಂ ಕುದುರೆಗಳುಂ ಜೇನಸಾಲೆಯುಮಂ ಕೈಕೊಂಡರ್ ಶ್ರೇಣಿಕಂ ರಾಜ್ಯ ಚಿಹ್ನಂಗಳಂ ಕೈಕೊಂಡನದನರಸನಱಿದೀತಂ ರಾಜ್ಯಕ್ಕರ್ಹನಕ್ಕುಮಿಲ್ಲಿರ್ದೊಡೆ ಪಲಂಬರುಂ ಮುಳಿವ ಪ್ರಮಾದಮಕ್ಕುಮೆಂದು ಬಗೆದು ನೀಂ ನಾಯೊಡನುಂಡೆಯೆಮ್ಮ ರಾಜ್ಯಚಿಹ್ನಂಗಳಂ ಕೈಗೊಂಡೆಯೆಮ್ಮ ಬಾೞುತ್ತಿರೆಯರಸಿಂಗಾಟಿಸಿದೆಯೆಂದು ನೆವಮಿಟ್ಟಟ್ಟಿ ಕಳೆದನಾತನುಂ ದಕ್ಷಿಣ ಮಧುರೆಗೆ ಪೋಗಿ ಇಂದ್ರದತ್ತನೆಂಬ ಸೆಟ್ಟಿಗಂ ಶ್ರೀಕಾಂತೆಯೆಂಬ ಪರದಿಗಂ ಮಗಳಭಯಮತಿಯೊಂಬೊಳಾಕೆಯಂ ಮದುವೆ ನಿಂದನಾಕೆಗಭಯಕುಮಾರನೆಂಬೊಂ ಮಗಂ ಪುಟ್ಟೆ ಇಂತು ಇಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಮಿರೆ

ಮತ್ತಿತ್ತಂ ಉಪಶ್ರೇಣಿಕಂ ರೋರುಗಮೆಂಬ ಪೊೞಲನಾಳ್ವ ಉದ್ದಾಯನನೆಂಬ ಮಹಾಸಾಮಂತಗಿಂತೆಂದು ಪೇೞ್ದಟ್ಟಿದನುಜ್ಜೇನಿಯನಾಳ್ವ ಪ್ರದ್ಯೋತನೆಂಬರಸನೀಗಳೆಮ್ಮನುೞಿದಿರ್ಪ್ಪೊನಾತನಂ ಪಿಡಿದು ಕಟ್ಟಿಕೊಂಡು ಬರ್ಕ್ಕೆಂದು ಬೆಸವೇೞ್ದಟ್ಟಿದೊಡಾತನುಂ ತಮ್ಮಾಳ್ದ ಚಾತುರ್ದಂತ ಬಲಮೆಲ್ಲಮಂ ಕೂಡಿಕೊಂಡು ಆತನ ಮೇಲೆೞ್ದು ಕಾದಿದೊಡೆ ಪ್ರದ್ಯೋತಂ ಕಾಳೆಗಮಂ ಗೆಲ್ದುದ್ದಾಯನನಂ ಪಿಡಿದು ಕಟ್ಟಿ ಸೆರೆಯಿಟ್ಟಂ ಮತ್ತೆ ವಿಜಯನೆಂಬ

ಕುಮಾರಂ ಪಿರಿದು ತಂತ್ರಂ ಬೆರಸು ಪೋಗಿ ಏನಾನುಮೊಂದುಪಾಯದೊಳುದ್ದಾಯನನ ಸೆಱೆಯ ಬದ್ದ್ವಂಕಿಸಿ ರಾಜಗೃಹಕ್ಕೊಡಗೊಂಡು ಪೋದೊಡೆ ಪ್ರದ್ಯೋತಂ ಮುಳಿದವರ ನಾಡಂ ಸೂಱೆಗೊಳುತ್ತಂ ಸುಡುತ್ತಂ ಕಿಡಿಸುತ್ತಂ ಉಪಶ್ರೇಣಿಕನ ಮೇಗೆ ಪೋಗೆಯಾತನ ಬರವನಱಿದುಪಶ್ರೇಣಿಕಂ ತನ್ನ ಪೊೞಲ್ಗೆ ಗೋಸನೆಯನಿಂತೆಂದು ತೋೞಿಲ್ಪಿದೊಂ ಆವನೋರ್ವ್ವಂ ಪ್ರದ್ಯೋತನಂ ಪಿಡಿದು ಕಟ್ಟಿಕೊಂಡು ಬರ್ಕ್ಕುಮಾತಂಗಾತನ ಬೇಡಿದೊಸಗೆಯಂ ಕುಡುವೆನೆಂದು ತೋೞಲ್ಪ ಗೋಸನೆಯಂ ಚಿಳಾತಪುತ್ರ ಕೇಳ್ದು ಪಿಡಿದರಸಂಗೆ ಪೇೞ್ದು ಪಿರಿದುಂ ತಂತ್ರಂ ಬೆರಸು ಪೋಗಿ ಚರಪುರುಷರ್ಕಳನಟ್ಟಿ ಬೇಗಂ ದಾೞಿಯೋಗಿ ಜಲಕ್ರೀಡೆಯಾಡುವೊನನಱಿದು ಪಿಡಿದು ಕಟ್ಟಿಕೊಂಡುಪಶ್ರೇಣಿಕಂಗೊಂಪ್ಪಿಸಿ ದೊಡಾತನುಮಾದಮಾನುಂ ಮೆಚ್ಚಿಯೊಸಗೆಯಂ ಬೇಡಿಕೊಳ್ ನಿನ್ನ ಬೇಡಿದುದೆಲ್ಲಮ ನೀವೆನೆಂದರಸಂ ನುಡಿದೊಡಾತನಿಂತೆಂದಂ ನಿಮ್ಮ ಪ್ರಸಾದದಿಂದೆನಗೆಲ್ಲಮುಂಟೊಂದಂ ಬೇಡುವೆಂ ನಿಮ್ಮಂತಃಪುರಮುೞಿಯೆ ಪನ್ನೆರಡು ವರ್ಷಂ ಬರೆಗಂ ಪೆಂಡಿರ್ಕ್ಕಳೊಳೆಲ್ಲಮೆನ್ನ ಮೆಚ್ಚಿದಂತೆ ಸಯ್ದುಂ ಬಾೞ್ವನಿದಂ ಬೇಡಿದೆನಿದನೆನಗೆ ದಯೆಗೆಯ್ದು ಸಲಿಸುವುದೆಂದೊಡರಸುಮನಂತೆ ಗೆಯ್ಕೆಂದೊಡೊಸಗೆಯಂ ಪೆತ್ತು ಪ್ರಸಾದಮೆಂದು ಪೊಡೆವಟ್ಟು ಸಾಮಂತ ಮಹಾಸಾಮಂತ ಪರಿವಾರದೇರಣಿಗರೊಕ್ಕಲಿಗರ ಪಾರ್ವ್ವರ ಪರದರೊಳ್ಪೆಂಡಿರ್ಕ್ಕಳೆಲ್ಲರುಮಂ ಎೞೆದು ಬಗ್ಗಿಸಿಯುಮೊಟ್ಟಯಿಸಿಯುಂ ಕೊಂಡು ಅವರೊಳ್ ಬಾೞುತ್ತಮಿಂತು ಪನ್ನೆರಡು ವರ್ಷಂ ಬರೆಗಂ ತನ್ನಿಚ್ಛೆಯೊಳ್ ಬೞ್ದು ಅವಧಿಯ ದಿವಸಂ ನೆಱೆದೊಡರಸನಿಂತಪ್ಪ ಗೊಡ್ಡಮನಿನ್ನಾಡಲ್ ಸಲ್ಲೆಂದು ಬಾರಿಸಿದೊಡಮುೞಿಯದೆ ತನ್ನ ಮೆಚ್ಚಿದಂತೆ ಬಾೞ್ ಅರಸಂ ಮುಳಿದು ನಾಡಿಂದಟ್ಟಿ ಕಳೆದೊಡಾತನುಮಡವಿಯೊಳ್ ತಾಯ ತಂದೆಯಪ್ಪ ಮಹೇಂದ್ರನೆಂಬ ತಾಪಸನ ಪಕ್ಕದೆ ವೋಗಿಯಲ್ಲಿ ದುರ್ಗಮಮಪ್ಪ ಎಡೆಯೊಳ್ ಪೊೞಲಂ ಮಾಡಿಯದರ್ಕ್ಕೆ ಬಳಸಿಯುಂ ಕೋಂಟೆಯುಂ ಗೋಪುರದ್ವಾರಮುಮಂ ಮಾಡಿ ಕೆಲದೂರ್ಗ್ಗಳನೊಟ್ಟಯಿಸಿಯುಂ ಓಡಿಸಿಯುಂ ಎಳೆದು ಸೂಱೆಗೊಂಡುಮಿಂತು ಪಲವು ಕಾಲಂ ಸುಖದಿಂ ಬಾೞುತ್ತಿರ್ಪ್ಪನ್ನೆಗಂ

ಇತ್ತಲುಪಶ್ರೇಣಿಕಂ ಕರ್ಮ್ಮಂಗಳುಪಶಮಂ ಕಾರಣಮಾಗಿ ಯಮಧರ ಭಟ್ಟಾರಕರ ಪಕ್ಕದೆ ಧರ್ಮ್ಮಮಂ ಕೇಳ್ದು ಶ್ರಾವಕ ಬ್ರತಂಗಳಂ ಕೈಕೊಂಡು ವೈರಾಗ್ಯ ಪರಾಯಣನಾಗಿ ಶ್ರೇಣಿಕಂಗೆ ಬೞಿಯಟ್ಟಿ ಬರಿಸಿ ರಾಜ್ಯಪಟ್ಟಂಗಟ್ಟಿ ಯಮಧರ ಭಟ್ಟಾರಕರ ಪಕ್ಕದೆ ತಪಂಬಟ್ಟು ಪಲಕಾಲಂ ತಪದೊಳ್ ನೆಗೞ್ದು ಸಮಾಧಿಮರಣದಿಂ ಸ್ವರ್ಗದೊಳ್ ಪುಟ್ಟಿದೊಂ ಮತ್ತಿತ್ತ ಶ್ರೇಣಿಕ ಮಹಾರಾಜನರಸು ಗೆಯ್ಯುತ್ತಿರ್ಪ್ಪನ್ನೆಗಂ ಚಿಲಾತ ಪುತ್ರನಾಳು ಭಟ್ಟಿಮಿತ್ರನೆಂಬೊನಾತನ ಸೋದರಮಾವಂ ರುದ್ರಮಿತ್ರನೆಂಬೊಂ ರಾಜಗೃಹದೊಳಿರ್ಪ್ಪಂ ಆತನ ಮಗಳ್ ಸುಭದ್ರೆಯೆಂಬೊಳಾಕೆಯಂ ಭಟ್ಟಿಮಿತ್ರಂ ಬೇಡಿದೊಡಾತಂಗೆ ಕುಡದೆ ಪೆಱರ್ಗ್ಗೆ ಕುಡಲ್ ತಗುಳ್ದೊಡಾತನುಂ ತಮ್ಮರಸಂಗಿಂತೆಂದು ಪೇೞ್ದನೆನ್ನ ಸೋದರಮಾವಂ ತಮ್ಮ ಮಗಳನೆನಗೆ

ಕಿಱಿಯಂದೆ ಕುಡುವೆನೆಂದು ನುಡಿದನೀಗಳ್ ಪೆಱರ್ಗ್ಗೆ ಕೊಟ್ಟಪ್ಪೊನಿಂದು ಮದುವೆನೆರೆವ್ವುದೆಂದು ಪೇೞ್ದೊಡಾತನುಮಯ್ನೂರ್ವ್ವರ್ ಸುಭಟರನಾಯ್ದುಕೊಂಡು ಪೊೞಲ್ಗೆವಂದು ಮೊಗವಡಂಗವಿದಿರ್ದ್ದ ಕೂಸಂ ಭಟ್ಟಿಮಿತ್ರಂಗೆ ಕುಡಿಮೆಂದು ಕೀೞ್ ಚಿಳಾತಪುತ್ರಂ ಬೇಡಿದೊಡಂ ಕುಡದಿರ್ದ್ದೊಡೆ ಮುಳಿದು ಕೂಸನೆಳೆದುಕೊಂಡು ಪೋದೊಡೆ ಶ್ರೇಣಿಕಮಹಾರಾಜಂಗೆ ಪುಯ್ಯಲಿಟ್ಟೊಡಾತನುಂ ಆ ಪುಯ್ಯಲಂ ಕೇಳ್ದು ಅನ್ಯಾಯದೊಳ್ ನೆಗೞ್ದಾತನನು ಕೊಂದು ಕೂಸಂ ಕೊಂಡು ಬನ್ನಿಮೆಂದು ಸಾಮಂತ ಮಹಾಸಾಮಂತ ಮಕುಟಬದ್ಧರ್ಕಳ್ಗೆ ಬೆಸವೇೞ್ದೊಡವರು ಬೞಿಯನೆ ತಗುಳ್ವರನ್ನೆಗಂ ಪೋಗಲ್ ಪಾಂಗಿಲ್ಲದೆ ಚಿಳಾತಪುತ್ರಂ ಕನ್ನೆಯಂ ಕೊಂದನ್ ಆಕೆಯುಂ ಸತ್ತಾ ಪೊೞಲೊಳ್ ವ್ಯಂತರದೇವತೆಯಾಗಿ ಪುಟ್ಟಿದಳ್ ತಾನುಂ ಬೇಗಂ ಪೋಗಿ ವೈಭಾರಮೆಂಬ ಪರ್ವತಮನೇಱಿದೊಡಾ ಪರ್ವತದ ಮೇಲೆ ಸರ್ವಗುಪ್ತರೆಂಬಾಚಾರ್ಯರ ವಧಿಜ್ಞಾನಿಗಳಯ್ನೂರ್ವರ್ ಶಿಷ್ಯರ್ಕಳ್ ವೆರಸು ಅಲ್ಲಿರ್ದರಂ ಕಂಡು ಬೇಗಮೆನಗೆ ಸಂಕ್ಷೇಪದಿಂ ಧರ್ಮಮಂ ಪೇೞಿಮೆಂದೊಡೆ ಭಟಾರರಿಂತೆದು ಪೇೞ್ದರ್

ಗಾಹೆ ॥ ಜಂ ಇಚ್ಛಸಿ ತಂಣಚ್ಛಸಿ ಜಂಪುಣ ಣೇಚ್ಛಸಿ ತಂ ತುಮಪ್ಪಂ
ಪುರಿಸ ಸೀಹತಂ ಇಚ್ಛಸು ಸಂಸಾರ ಮಹಣ್ಣವಂ ತರಿದುಂ ॥

ಮತ್ತಂ ಅಭಾವಿದಂ ಭಾವೇಮಿ ಭಾವಿದಂ ಭಾವೇಮಿ ಎಂದಿಂತು ಸಂಕ್ಷೇಪದಿಂ ಧರ್ಮಮಂ ಪೇೞ್ದು ಮತ್ತಮಿಂತೆಂದರ್ ನಿನಗಾಯುಷ್ಯಂ ಕಿಱಿದೆಯೆಂದು ಪೇೞ್ದೊಡಾತನು ಮಂತಪ್ಪೊಡೆನಗೆ ದೀಕ್ಷಾಪ್ರಸಾದಂ ಗೆಯ್ಯಿಮೆಂದು ಬೇಡಿ ಬಾಹ್ಯಾಭ್ಯಂತರ ಪರಿಗ್ರಹಂಗಳೆಲ್ಲಮಂ ತೊಱೆದು ತಪಂಬಟ್ಟು ಸವ್ವಂ ಸಾವಜ್ಜ ಜೋಗಂ ವಿರದೊಮ್ಹಿ ಎಂದು ಬಾೞ್ವನ್ನೆಗಂ ಆಹಾರ ಶರೀರಕ್ಕೆ ನಿವೃತ್ತಿ ಗೆಯ್ದು ಪ್ರಾಯೋಪಗಮನ ಮರಣದಿಂ ಕಾಯೋತ್ಸರ್ಗಂ ಗೆಯ್ದಿರ್ದ್ದನನ್ನೆಗಂ ಪೆಱಗಣಿಂ ಬಲಂ ಕೇಳ್ದು ಬಂದು ಕಾಯೋತ್ಸರ್ಗ ನಿಂದೊನಂ ಕಂಡೇನುಂ ಗೆಯ್ಯಲಱಿಯದೆ ಶ್ರೇಣಿಕ ಮಹಾರಾಜಗೆ ಚಿಲಾತಪುತ್ರಂ ತಪಂಬಟ್ಟು ಕಾಯೋತ್ಸರ್ಗಂ ಗೆಯ್ದಿರ್ದ್ದೊನಿನ್ನೆಮಗೆ ಬೆಸನೇನೆಂದು ಬಿನ್ನಪಂ ಗೆಯ್ದಟ್ಟಿದೊಡಾತನುಂ ಇಂತೆಂದಂ ತಪಂ ಬಟ್ಟನಪ್ಪೊಡೊಳ್ಳಿಕೆಯ್ದಂ ತನ್ನ ಗೆಯ್ದ ಪಾಪಮುಮಯಶಮುಂ ಪೞಿಯುಂ ಪೊಲ್ಲಮೆಯುಮಂ ನೀಗಿದನೆಂದು ನುಡಿದು ಪೋದ ಬಲಕ್ಕೆ ಬಳಿಯಟ್ಟಿದೊಡವರುಂ ಚಿಳಾತ ರಿಷಿಯಂ ಬಲಗೊಂಡು ಬಂದರ್ಚ್ಚಿಸಿ ಪೂಜಿಸಿ ಪೊಡಮಟ್ಟು ಪೊೞಲ್ಗೆ ಪೋದರ್

ಮತ್ತಿತ್ತ ಸುಭದ್ರೆಯಪ್ಪ ವ್ಯಂತರದೇವತೆ ವಿಭಂಗಜ್ಞಾನದಿಂದಱಿದು ಚಿಳಾತ ರಿಷಿಯಂ ಕಂಡು ಪಗೆಯಂ ನೆನೆದು ಪದ್ದಿನ ರೂಪಂ ಕೈಕೊಂಡು ಬಂದು ನೆತ್ತಿಯ ಮೇಗಿರ್ದ್ದ ಕಣ್ಗಳಂ ತೋಡಿ ತಿನೆ ಪೆರ್ದ್ದಲೆಯ ಕಟ್ಟಿಱುಂಪೆಗಳುಮಾಗಿ ಮೆಯ್ಯೆಲ್ಲಮನುರ್ಚ್ಚಿ ಸಟ್ಟುಗದಂತೆ ಬಳಸಿಯುಂ ಛಿದ್ರಂ ಮಾಡಿ ಕಾಡೆ ಎರಡು ದಿವಸಮಿರುಳುಂ ಪಗಲುಂ ನಿರಂತರಂ ದೇವೋಪಸರ್ಗಮಂ ಸೈರಿಸಿ ಶುಭ ಪರಿಣಾಮದಿಂ ಮುಡಿಪಿ ಸರ್ವಾರ್ಥಸಿದ್ಧಿಯೊಳ್ ಮೂವತ್ತು ಮೂಱು ಸಾಗರೋಪಮಾಯುಷ್ಯ ಮನೊಡೆಯೊಂ ಅಹಮಿಂದ್ರದೇವನಾಗಿ ಪುಟ್ಟಿದಂ

ಮತ್ತೆ ಪೆಱರುಂ ಸನ್ಯಸನಂ ಗೆಯ್ದು ಭವ್ಯರ್ಕ್ಕಳ್ ಚಿಳಾತರಿಷಿಯರಂ ಮನದೊಳ್ ಬಗೆದು ಚತುರ್ವಿಧಮಪ್ಪುಪಸರ್ಗಮುಂ ಪಸಿವುಂ ನೀರಟ್ಕೆ ವೇದನೆ ಮೊದಲಾಗೊಡೆಯ ದುಃಖಂಗಳಂ ಸೈರಿಸಿ ಪರಮ ಶುದ್ಧ ಸಹಜ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗ ಸುಖಂಗಳಂ ಭಬ್ಯರ್ಕ್ಕಳೆಯ್ದುಗೆ

■

೧೬. ದಂಡಕನೆಂಬ ರಿಸಿಯ ಕಥೆ

ದಂಡಕನೆಂಬ ರಿಷಿಯುಂ ಕಥೆಯುಂ ಪೇೞ್ವೆಂ

ಗಾಹೆ ॥ ದಂಡೋ ಜಮುಣಾ ವಂಕೇಣ ತಿಕ್ಖಕಂಡೇಣ ಪೂರಿದಂಗೋವಿ
ತಂ ವೇದಣಮಗಣಿತ್ತಾ ಪಡಿವಣ್ಣೋ ಉತ್ತಮಂ ಅಟ್ಠಂ ॥

[ದಂಡೋ = ದಂಡಕನೆಂಬ ರಿಷಿ । ಜಮುಣಾವಂಕೇಣ = ಯಮುನಾವಂಕನೆಂಬರಸನಿಂದಂ । ತಿಕ್ಖ ಕಂಡೇಣ = ಕೂರಿದವಪ್ಪಂಬುಗಳಿಂದಂ । ಪೂರಿದಂಗೋವಿ = ತೀವೆಪಟ್ಟಮೆಯ್ಯನೊಡೆಯನಾಗಿಯುಂ । ತಂವೇದಣಂ = ಆವೇದನೆಯಂ । ಅಗಣಿತ್ತಾ = ಉಪಮೆಗಳಿದನಾಗಿಯುಂ । ಪಡಿವಣ್ಣೋ = ಪೊರ್ದಿದೊಂ । ಉತ್ತಮಂ ಅಟ್ಠ = ಮಿಕ್ಕದರ್ಶನಜ್ಞಾನಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಅಮಳಕಂಠಮೆಂಬುದು ಪೊೞಲದ ನಾಳ್ವೊಂ ಅರಿಷ್ಟಸೇನನೆಂಬೊನರಸನಾತನ ಮಹಾದೇವಿ ನಂದಿನಿಯೆಂಬೊಳಾ ಇರ್ವರ್ಗಂ ಮಗಂ ದಂಡಕನೆಂಬೊಂ ಪುಟ್ಟಿದನಾತಂ ಗರ್ಭದೊಳಿರ್ದ್ದಂದು ನಂದಿನಿ ಮಹಾದೇವಿಗಿಂತುಟೊಂದು ಬಯಕೆಯಾದುದೆಲ್ಲಾ ಜನಂಗಳಂ ದಂಡಿಸುವಂತಿರೆ ಯದಱಿಂದಾತಂಗೆ ಪುಟ್ಟಿದೊಡೆ ತಾಯುಂ ತಂದೆಯುಂ ದಂಡಕನೆಂದು ಪೆಸರನಿಟ್ಟೊರಾತನಿಂ ಕಿಱಿಯಳ್ ನಂದವತಿಯೆಂಬೊಳ್ ಕೂಸು ಆಕೆಯನರ್ಧ ಚಕ್ರವರ್ತಿಯಪ್ಪ ವಿಷ್ಣುವಿಗೆ ಕೊಟ್ಟು ದಂಡಕನುಂ ವಿಷ್ಣುವಿಂಗಾದಮಾನುಂ ಪ್ರಿಯನಪ್ಪ ಸೇನಾಪತಿ ಯಾದನಂತನಿಬರಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಂ ಪಲವು ಕಾಲಂ ಸಲೆ

ಮತ್ತೊಂದು ದಿವಸಂ ವಿಷ್ಣು ಅರಿಷ್ಟನೇಮಿ ಭಟಾರರಂ ಬಂದಿಸಲ್ಕೆಂದು ಬಲದೇವಂ ಬೆರಸು ಪುತ್ರ ಕಳತ್ರ ಮಿತ್ರ ಪರಿವಾರ ಸಹಿತಂ ಪೋಗಿ ಸಮವಸರಣಮನೆಯ್ದಿ ಸ್ಫಟಿಕಮಯಮಪ್ಪ ಸೋಪಾನ ಪಂಕ್ತಿಗಳನೇಱಿ ಗಂಧಕುಟಿ ಪ್ರಾಸಾದಮಂ ತ್ರಿಪ್ರದಕ್ಷಿಣಂಗೆಯ್ದು ಬಂದಭಿಮುಖನಾಗಿರ್ದ್ದು ಸ್ತುತಿ ಶತ ಸಹಸ್ರಂಗಳಿಂ ಸ್ತುತಿಯಿಸಿ ಗಂಧಪುಷ್ಪಧೂಪ

ದೀಪಾಕ್ಷತಂಗಳಿಂದರ್ಚ್ಚಿಸಿ ಗಣಧರ ದೇವರ್ ಮೊದಲಾಗೊಡೆಯ ರಿಷಿಸಮುದಾಯಮಂ ಗುರುಪರಿವಿಡಿಯಿಂ ವಂದಿಸಿ ತಮ್ಮಿ ಪ್ಪೋವರಿಗಳೊಳಿರ್ದ್ದು ಧರ್ಮಮಂ ಕೇಳ್ದು ತದನಂತರಂ ವಿಷ್ಣು ಇಂತೆಂದು ಬೆಸಗೊಂಡಂ ಭಟಾರಾ ಈ ಅತಿರೌದ್ರನಪ್ಪ ದಂಡಕನುಂ ನರಕಂ ಪುಗುವಂತಿರೆ ಪಿರಿದುಂ ಪಾಪಮಂ ನೆಱಪಿದನೀತನ ಪಾಪಕರ್ಮದುಪಶಮಮೆನಿತು ಕಾಲದಿಂದಕ್ಕುಂ ಮತ್ತೀತನ ಮುನ್ನಿನ ಭವಮೇನೆಂದು ಬೆಸಗೊಂಡೊಡೆ ಸಕಲ ವಿಮಲ ಕೇವಲಜ್ಞಾನ ವಿರಾಜಿತನಪ್ಪರಿಷ್ಟನೇಮಿಭಟಾರರಿಂತು ಪೇೞ್ದರ್ ಈ ಜಂಬೂದ್ವೀಪದ ಪೂರ್ವವಿದೇಹದೊಳ್ ವೀತಶೋಕಮೆಂಬುದು ಪೊೞಲುಂಟು ಅದನಾಳ್ವೊಂ ಅಶೋಕನೆಂಬೊನರಸನಾತನ ಮಹಾಸಾಮಂತಂ ಸುದಾಮಕನೆಂಬೊಂ ತೀವ್ರಲೋಭಂ ಅತಿ ರೌದ್ರಮಪ್ಪಾರಂಭ ಕರ್ಮದೊಳ್ ಕೂಡಿದೊಂ ತನ್ನಾರಂಭದ ಕೆಯ್ಗಳನೊಕ್ಕುವೆಟ್ಟುಗೞ ಬಾಯಂ ಕಟ್ಟಿಯೊಕ್ಕಿಸುಗುಂ ಮತ್ತುಮಡುವ ಬಡ್ಡಿಸುವ ಬೆಸಕೆಯ್ವ ಪೆಂಡಿರ ಮೊಲೆಗಳಂ ಸೀರೆಯಿಂ ಕಟ್ಟಿಸಿ ಕೂಸುಗಳಂ ಮೊಲೆಯುಣಲೀಯದೆ ಬೆಸಕೆಯ್ಸುಗುಂ ಮತ್ತಂ ಕೊಲೆಯುಂ ಬಹ್ವಾರಂಭಮುಂ ಪೆರ್ವರದುಮೆಂಬಿವು ಕಾರಣಮಾಗಿ ನರಕಾಯುಷ್ಯಂ ಕಟ್ಟಿ ಕಾಲಂ ಸಲೆ ಆತಂಗೆ ಶಿರೋರೋಗಮುಂ ಮುಖರೋಗಮುಮಾಗಿ ವೇದನಾಭಿಭೂತನಾಗಿರ್ಪ್ಪನ್ನೆಗಂ ಬೆಜ್ಜರಂ ಬೆಸಗೊಂಡೊಡೆ ಅದರ್ಕ್ಕೆ ಪ್ರತೀಕಾರಮೊಂದು ದಿವಸಂ ತನಗೆ ಮರ್ದ್ದು ವೆರಸಿಯಟ್ಟ ಕೂೞನುಣಲೆಂದಿರ್ಪ್ಪನ್ನೆಗಂ ಸಮಾಧಿಗುಪ್ತರೆಂಬ ಭಟಾರರ್ ಚರಿಗೆ ಪೊಕ್ಕರ್ ಅವರನತಿಭಕ್ತಿಯಿಂದಂ ನಿಱಿಸಿ ತನಗುಳ್ಳ ವ್ಯಾಧಿಯವರ್ಗ್ಗುಂಟೆಂಬುದನಱಿದು ತನಗೆಂದು ಮಾಡಿದ ಮರ್ದ್ದಿನ ಕೂೞನವರ್ಗ್ಗೆ ಬಡ್ಡಿಸಿದೊಡವರ್ ಚರಿಗೆ ಮಾಡಿ ಪರಸಿ ಪೋದರ್ ಪನ್ನೆರಡು ವರ್ಷದ ಶಿರೋರೋಗಮಂ ಮುಖರೋಗಮು ಮಾ ರಿಷಿಯರ್ಗ್ಗೆ ಕೆಟ್ಟಿತ್ತಾ ಸುಧಾಮಕನುಂ ದಾನದ ಫಲದಿಂದಂ ಪಿರಿದು ಪುಣ್ಯಮಂ ನೆರಪಿಕೊಂಡಂ ಮತ್ತೆ ಬದ್ಧಾಯುಷ್ಯನಪ್ಪುದಱಿಂ ಮೂಱನೆಯ ನರಕದೊಳೇೞು ಸಾಗರೋಪಮಾಯುಷ್ಯಮನೊಡೆಯೊಂ ನಾರಕನಾಗಿ ಪುಟ್ಟಿ

ಗಾಹೆ । ಅಚ್ಚಿಣಿಮೀಳಣ ಮೇತ್ತಂ ಣತ್ಥಿಸುಹಂ ದುಖ್ಖಮೇವ ಅಣುಬದ್ಧಂ
ಣಿರಯೇಣಿರಯೀ ಯಾಣಂ ಅಹಣ್ಣಿಸಂ ಪಚ್ಚಮಾಣಾಣಂ ॥

ಇಂತು ನರಕಲೋಕದೊಳ್ ಕಣ್ಣೆಮೆಯಿಕ್ಕುವನಿತು ಪೊತ್ತಪ್ಪೊಡಂ ಸುಖಮಿಲ್ಲದೆ ಪಲಕಾಲಂ ದುಃಖಮನನುಭವಿಸಿ ಬಂದಿಲ್ಲಿ ದಂಡಕನಾದಂ ಮುನ್ನಿನ ಭವದೊಳ್ ಪ್ರಾಣಿಗಳಂ ದಂಡಿಸಿದ ತನ್ನ ಪೂರ್ವಾಭ್ಯಾಸಮೆ ನಂದಿನಿ ಮಹಾದೇವಿಯ ಗರ್ಭದೊಳಿರ್ದ್ದು ತೋಱಿದನಪ್ಪುದಱಿಂ ದಂಡಕನೆಂಬ ಪೆಸರಾಯ್ತು ಇಂತಪ್ಪ ಸ್ವಾನುಭೂತಮಪ್ಪ ನರಕಲೋಕದ ಮಹಾದುಃಖಮಂ ಸರ್ವಜ್ಞರ್ ಪೇಳೆ ನಂಬಿ ನರಕದ ಮಹಾದುಃಖಕ್ಕಂಜಿ ತಪಂಬಟ್ಟೋದುಗಳೆಲ್ಲಮಂ ಕಲ್ತು ರಿಷಿಯರ್ಕ್ಕಳೊಡನೆ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಚರಿಗೆವೋದೊಡಾರುಂ

ನಿೞಿಸುವರಿಲ್ಲಂ ನಿೞಿಸಿ ಯಾರಾನುಂ ಚರಿಗೆಮಾಡಿದಡಪ್ಪೊಡಂ ಛರ್ದಿಯಕ್ಕುಂ ರಿಷಿಯರ್ಕ್ಕಳೊಡನೆ ಚರಿಗೆವೊಕ್ಕೊಡನಿಬರ್ಗ್ಗಮಲಾಭಮಕ್ಕುಂ ಮತ್ತೆ ವಾತಪಿತ್ತಶ್ಲೇಷಂ ಖಾಸ ಶ್ವಾಸ ಜರಾರುಚಿ ಛರ್ದಿ ಅತಿಸಾರಾಕ್ಷಿ ಕುಕ್ಷಿ ವೇದನಾ ಸ್ಫೋಟ ಕಪಿಟಕ ಶೂಲ ಭಗಂದರ ಕುಷ್ಠ ಕ್ಷಯ ಗಂಡ ಶಿರೋರೋಗ ವೇದನಾದಿ ವ್ಯಾಧಿಗಳಾಗಿ ರೂಪಱಿಯಲಾರದಂತಿರೆ ವ್ಯಾಧಿಗಳಿಂದಮೊಟ್ಟಯಿಸೆ ಪಟ್ಟನಾಗಿ ಮಗುಳ್ದು ವಿಹಾರಿಸುತ್ತುಂ ರಿಷಿಯರ್ಕ್ಕಳೊಡನೆ

ದ್ವಾರಾವತಿಗೆ ಬಂದಿರ್ದ್ದರ್ನ್ನೆಗಂ ಒಂದು ದಿವಸಂ ವಿಷ್ಣು ಬಂದು ರಿಷಿಯರ್ಕ್ಕಳಂ ಬಂದಿಸಿಯವರೊಳಗೆ ದಂಡಕರಿಷಿ ಯಾರೆಂದೊಡಂ ಕೆಲದ ರಿಷಿಯಂ ತೋಱಿದೊಡವರಂ ಬಂದಿಸಿ ನೋಡಿ ವ್ಯಾಧಿಯ ಪ್ರಬಲತ್ವಮಂ ಕಂಡು ವೈಯ್ಯಾವೃತ್ಯಂ ಗೆಯ್ವುದಕ್ಕಾದಮಾನುಂ ಅೞ್ತಿಯೊಡೆಯನಾಗಿ ಪೊಡೆವಟ್ಟಿಂತೆಂದಂ ಭಟಾರಾ ನಿಮ್ಮನೊಂದಂ ಬೇಡಿದಪ್ಪೆನೀ ವರ್ಷಕಾಲಮನೆನ್ನ ದೇಹಾರದೊಳಿರ್ದ್ದಂತಃಪುರದ ಮನೆಗಳೊಳ್ ಚರ್ಯಾಮಾರ್ಗಂ ಬುಗುವುದನೆನಗೆ ದಯೆಗೆಯ್ಯಲ್ ವೇೞ್ಕುಮೆಂದೊಡವರುಮಂತೆಗೆಯ್ವೆಮೆಂದು ವಿಷ್ಣುವ ದೇಹಾರದೊಳ್ ಜೋಗುಗೊಂಡಿರ್ದ್ದೊಡೆ ವಿಷ್ಣು ತನ್ನ ಪ್ರಧಾನನಪ್ಪ ಜಯನೆಂಬ ವೈದ್ಯನಂ ಕರೆದಿಂತೆಂದಂ ನಮ್ಮ ದಂಡಕ ರಿಷಿಯ ಕುತ್ತಮನೆಂತು ಬಲ್ಲೆಯಂತೆ ತೀರ್ಚ್ಚೆಂದು ಪೇೞ್ದೊಡಾತನುಮಂತೆ ಗೆಯ್ವೆನೆಂದು ದಿವ್ಯೌಷಧಗಳಿಂದಂ ಮಾಡಿದುಂಡೆಗಳಂ ಪಿಟ್ಟನೊಳ್ ಸಾಸಿರ್ವರಸಿಯರ್ಕ್ಕಳ ಮನೆಗಳೊಳ್ ಪ್ರಯೋಗಿಸಿಯಾ ರಿಷಿಯರಂ ಮದ್ದನೂಡಿದಂ ಮತ್ತೆ ಪೊಳಲೊಳಗೆಲ್ಲಮುಂಡೆಯ ಪರ್ವಮಂ ಮಾಡಿಸಿದಂ ಇಂತು ವರ್ಷಾಕಾಲದ ನಾಲ್ಕುತಿಂಗಳೊಳಂ ಮದ್ದನೂಡಿ ಕುತ್ತಮನಿಂಬು ಮಾಡಿದೊಡೆ ವೈಯ್ಯಾ ವೃತ್ಯಂ ಗೆಯ್ದುದಱೊಳಾದಮಾನುಂ ಉದ್ಯೋಗಪರನಪ್ಪುದಱಿಂ ತೀರ್ಥಕರ ನಾಮಂ ವಿಷ್ಣುವಿಗೆ ಕಟ್ಟಿತ್ತು ಮತ್ತಂ ದಂಡಕರಿಷಿಯರ ಮೆಯ್ಯ ತೊಗಲ್ ಪಾವಿನ ಪೆರೆಸುಲಿವಂತೆ ಸುಲಿದು ಪೋಗಿ ನಿರ್ವ್ಯಾಧಿತ ದೇಹರಾಗಿ ಮೆಯ್ಯ ತೇಜಂ ತೊಳತ್ತಿರ್ದ್ದುದಂ ವಿಷ್ಣು ಕಂಡು ವ್ಯಾಧಿ ಕೆಟ್ಟುದೆಂದಱಿದು ಆದಮಾನುಂ ಹರ್ಷಚಿತ್ತನಾಗಿ ಈ ರಿಷಿಯ ಪಕ್ಕದೆ ವೈದ್ಯ ಜಯನಂ ಪೊಗೞ್ದೊಡವರ್ ಸುಮ್ಮಗಿರ್ದ್ದೊಡೆ ವೈದ್ಯನಿವರೆನ್ನಂ ಪೊಗೞ್ದರಿಲ್ಲೆಂದು ಮನದೊಳಾ ರಿಷಿಯರೊಳಪ್ಪ ಮುಳಿಸಂ ಭಾವಿಸಿ ಆರ್ತಧ್ಯಾನದಿಂದಂ ಕೆಲವು ಕಾಲದಿಂ ಕಾಲಂಗೆಯ್ದು ವಿಂಧ್ಯಾಟವಿಯ ಮಧ್ಯಸ್ಥಮಪ್ಪ ನರ್ಮದಾನದೀ ತೀರದೊಳ್ ಕೋಡಗನಾಗಿ ಪುಟ್ಟಿದೊಂ

ಮತ್ತಿತ್ತ ದಂಡಕರಿಷಿಯರುಂ ತಮ್ಮ ಪಕ್ಕದೆ ವಿಷ್ಣುಜಯನಂ ಪೊಗಳ್ದುದರಿಂದಮರಸನ ಬೆಸದಿಂದಂ ವೈದ್ಯನನವರತಂ ತಂತಮ್ಮನೋಲಗಿಸುವುದಱಿಂ ತಮಗೆಂದುಂ ಮಾಡಿದ ವೈಯ್ಯಾವೃತ್ಯಮನಱಿದು ನಿಂದಣ ಗರುಹಣಗೆಯ್ದುಮದರ್ಕ್ಕೆ ತಕ್ಕ ಪ್ರಾಯಶ್ಚಿತ್ತಮಂ ಸಿಂಹವಿಕ್ರೀಡಿತಮೆಂಬ ನೋಂಪಿಯಂ ನೋಂತು ವಿಹಾರಿಸುತ್ತಂ ಪೋಗಿ ನರ್ಮದೆಯ ತಡಿಯೊಳ್ ಮಾವಿನ ಮರದ ಕೆೞಗೆ ಸ್ವಾಧ್ಯಾಯಂ ಗೆಯ್ಯುತ್ತಿರ್ದ್ದರನ್ನೆಗಂ ಆ ಕೋಡಗಂ ಅವರಂ ಕಂಡು ಜಾತಿಸ್ಮರನಾಗಿ ಪೂರ್ವಭವ ಸಂಬಂಧ ವೈರಮನಱಿದು ಮುಳಿಸಿನಿಂ ಶಕ್ತಿಯೆಂಬಾಯುಧದೊಳೞರಂತಾಗುತ್ತಿರ್ದ್ದ ಮಾವಿನ ಕೊಂಬಂ ಮುನಿವರನ

ತೊಡೆಯನುರ್ಚ್ಚೆಪೋಗೆ ನೂಂಕಿತ್ತಾಗಳಾ ಮುನಿಯುಂ ತ್ಯಕ್ತಶರೀರದೊನಾಗಿ ಸಮತ್ವೀ ಭಾವನೆಯೊಳಂ ಕೂಡಿರ್ದ್ದೊನಂ ಕಂಡು ತನ್ನ ಮೆಯ್ಯುಮೀತಂಗೆ ಬಾಟಿತ್ತೆಯಲ್ತು ಇನ್ನದೇವನೆಂದು ಸಲೆ ನಂಬಿ ಪಶ್ಚಾತ್ತಾಪಮಾಗಿ ಮರ್ಕಟ ವೃಂದಮಂ ನೆರಪಿಕೊಂಡು ಕೊಬಂ ಕಿಟ್ತು ಮರ್ದ್ದಂ ತಂದು ಪೊಯ್ದು ಯತಿವರನ ಕಾಲ್ಗೆಱಗಿರ್ದ್ದುದುಮಂ ಕಂಡು ಮುನಿಯುಮೀ ಪ್ರಾಣಿ ಭವ್ಯನೆಂದಱಿದು ಧರ್ಮಮಂ ಪೇೞ್ದು ಸಮ್ಯಕ್ತ್ವ ಪೂರ್ವಕಂ ಬ್ರತಂಗಳಂ ಕೊಟ್ಟರ್ ಅದುವುಂ ಕೈಕೊಂಡು ಸದ್ಧರ್ಮದೊಳ್ ಕೂಡಿ ತನ್ನಂ ನಿಂದಿಸುತ್ತಂ ಬ್ರತೋಪವಾಸಂಗಳಿಂ ಮೆಯ್ಯಂ ದಂಡಿಸುತ್ತಂ ಸಲ್ವುದಂ ಒಂದು ದಿವಸಂ ಪರ್ವತದ ಶಿಖರದಿಂದಂ ಪಾಯ್ದು ಬಂದು ಮುನಿವರರ ಪಕ್ಕದಲ್ಲಿ ಬಿರ್ದ್ದತ್ತಾಗಳವರುಂ ಸನ್ಯಸನ ಪೂರ್ವಕಂ ಪಂಚನಮಸ್ಕಾರಮಂ ಕೊಟ್ಟರದುವುಂ ಸತ್ತು ಪೋಗಿ ಸನತ್ಕುಮಾರವೆಂಬ ಕಲ್ಪದೊಳ್ ಎರಡು ಸಾಗರೋಪಮಾಯುಷ್ಯಮನೊಡೆಯೊಂ ಸಾಮಾನಿಕ ದೇವನಾಗಿ ಪುಟ್ಟಿದೊಂ ತನ್ನವಧಿಜ್ಞಾನದಿಂದಱಿದು ಮಹಾವಿಭೂತಿಯಿಂ ಬಂದು ಧ್ವಜ ಮಕುಟ ಸಿತಾತಪತ್ರಾದಿಗಳೊಳ್ ಮಣಿಮಯಮಪ್ಪ ಮರ್ಕಟ ಚಿಹ್ನದೊಳ್ ಮುನಿವರರಂ ಪೂಜಿಸಿ ಪೊಡೆವಟ್ಟಿಂತೆಂದಂ ಈ ದೇವತ್ವಮುಂ ವಿಭೂತಿಯುಮಂ ಪಶುಜಾತಿಯಪ್ಪೆನಗೆ ನೀಮಿತ್ತಿರ್ ಭಟಾರಾ ಎಂದು ತನ್ನ ಪೂರ್ವಭವ ಸಂಬಂಧಮೆಲ್ಲಮಂ ಪೇೞ್ದು ತನ್ನೊಡಲುಮಂ ಪೂಜಿಸಿ ಪೋದನಾಯೆಡೆ ಲೋಕದೊಳಮರೇಶ್ವರಮೆಂಬ ತೀರ್ಥಮಾಯ್ತು ಮತ್ತಿತ್ತ ದಂಡಕರಿಷಿಯರುಂ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಕ್ರಮದಿಂದುತ್ತರ ಮಧುರೆಯನೆಯ್ದಿಯಲ್ಲಿ ಸೂರ್ಯ ಪ್ರತಿಮೆ ನಿಂದರನ್ನೆಗಂ ಆ ಪೊಟಿಲನಾಳ್ವೊಂ ಯಮುನಾವಂಕನೆಂಬೊನರಸನಾತನುಂ ಮುನ್ನನೇಕವಾರಂ ದಂಡಕನಿಂದಂ ಪಲವುಂ ದಂಡೆಣೆಗಳನೆಯ್ದಿದನಪ್ಪುದಱಿಂದಂ ದಂಡಕಂ ಬಂದನೆಂಬ ವಾರ್ತೆಯಂ ಕೇಳಲೊಡಂ ಜಾತ್ಯಶ್ವಮನೇಱಿ ಪೋಡುವವನ ಬಟಿಯಂ ಮಂತ್ರಿ ತಗುಳ್ದೋಡಲೀಯದೆ ಮಾಣಿಸಿಯಿಂತೆಂದಂ ದಂಡಕಂ ತಪಂ ಬಟ್ಟು ಬಂದನೆಂದಱಿಯೆ ಪೇೞ್ದಾಗಳ್ ಮಗುೞ್ದು ಬಂದು ಅತಿಕ್ರೋಧದಿಂದಂ ಕಾಸಿದ ಮೊನೆಯಂಬುಳ್ಳುದಱಿಂದಂ ಮೆಯ್ಯನಂತನೇಕ ಶರಸಂಘಾತಂಗಳಿಂದಮೆಚ್ಚೊಡಮವರುಂ ಆ ವೇದನೆಯಂ ಸೈರಿಸಿ ಸಮತ್ವೀ ಭಾವನೆಯಂ ಭಾವಿಸಿ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಜಾವಜ್ಜೀವಂ ನಿವೃತ್ತಿಗೆಯ್ದು ಶುಕ್ಲಧ್ಯಾನಂಗಳಂ ಧ್ಯಾನಿಸಿ ಕರ್ಮಕ್ಷಯಂ ಗೆಯ್ದು ಮೋಕ್ಷಕ್ಕೆ ಪೋದರ್

ಅನ್ನೆಗಮಿತ್ತ ಚತುರ್ವಿಧ ದೇವನಿಕಾಯಂ ತಂತಮ್ಮ ಜ್ಞಾನಗಳಿಂದಱಿದು ಚಿತ್ರಪಟಂಗೆದಱಿದಂತೆ ಆಕಾಶಮೆಲ್ಲಮಂ ವ್ಯಾಪಿಸಿ ನಾನಾವಿಧ ವಾಹನಾದಿ ವಿಮಾನರ್ಕಳ್ ಜ್ವಲನ್ ಮಣಿಮಕಟಾಗ್ರ ವಿನ್ಯಸ್ತಹಸ್ತರ್ಕಳಾಗಿ ಇಂದ್ರಾದಿ ದೇವರ್ಕಳುಂ ಜಯ ಜಯ ಶಬ್ದದಿಂದಂ ಮುನಿವರೇಣ್ಯನ ಗುಣಂಗಳಂ ನೆಗೞ್ತೆಯಂ ಪೊಗೞುತ್ತಂ ಬರ್ಪೊರಂ ಕಂಡು ಭಯಂ ಕಾರಣಮಾಗಿಯುಂ ಕರ್ಮಂಗಳುಪಶಮಂ ಕಾರಣಮಾಗಿಯುಂ ಯಮುನಾವಂಕಂ

ತಪಂಬಟ್ಟಂ ತಪಂಬಟ್ಟೊಡಮಾ ರಿಷಿಯಂ ಕೊಂದ ಪಾಪದ ಫಲದಿಂದನೇಕ ಮಹಾ ವ್ಯಾಧಿಗಳಾದುವು ಮತ್ತಾ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತಮುಮಂ ನೆಗಟ್ದು ಪಲಕಾಲಮುಗ್ರೋಗ್ರ ಘೋರವೀರತಪಶ್ಚರಣಂಗೆಯ್ವುತ್ತಂ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೋಜ್ ಸಜ್ಝಾತಗಿರಿಯನೆಯ್ದಿಯಲ್ಲಿಯೆ ರಾತ್ರಿ ಪ್ರತಿಮೆ ನಿಂದೊರನ್ನೆಗಂ ಕಾಟ್ಕಿಚ್ಚು ಬಳಸಿಯುಂ ತಗುಳ್ದು ತಮ್ಮಂ ಸುಡೆ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಜಾವಜ್ಜೀವಂ ನಿವೃತ್ತಿಗೆಯ್ದು ಶುಭಮಪ್ಪ ಶುಕ್ಲಧ್ಯಾನಂಗಳಂ ಧ್ಯಾನಿಸಿ ಘಾತಿಕರ್ಮಂಗಳಂ ಕಿಡಿಸಿಯಂತರ್ಗತ ಕೇವಲಿಯಾಗಿ ಎಂಟು ಕರ್ಮಂಗಳಂ ತಪೋಗ್ನಿಯಿಂದಂ ಸುಟ್ಟು ಮೋಕ್ಷಕ್ಕೆ ವೋದರ್

ಮತ್ತೆ ಪೆಱರುಂ ಸನ್ಯಸನಂ ಗೆಯ್ದಿರ್ದ್ದ ಕ್ಷಪಣಕರುಂ ದಂಡಕರಿಷಿಯರಂ ಕಾಸಿದ ಮೊನೆಯಂಬುಗಳಿಂದೆಚ್ಚು ಮಾಡಿದುಪಸರ್ಗಮುಮಂ ಯಮುನಾವಂಕರಿಷಿಯರ್ ಕಿಚ್ಚಿನಿಂ ಬೆಂದುಪಸರ್ಗಮುಮಂ ಮನದೊಳ್ ಬಗೆದು ಪಸಿವುಂ ನೀರಟ್ಕೆ ಮೊದಲಾಗೊಡೆಯ ಇಪ್ಪತ್ತೆರಡು ಪರೀಷಹಂಗಳುಮಂ ವ್ಯಾಧಿಗಳೊಳಪ್ಪ ವೇದನೆಗಳಂ ಸೈರಿಸಿ ಪರಮ ಶುದ್ಧ ಸಹಜ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗ ಸಂಖಂಗಳನೆಯ್ದುಗೆ

■

೧೭. ಮಹೇಂದ್ರದತ್ತಂ ಮೊದಲಾಗೊಡೆಯ ಅಯ್ನೂರ್ವರ್ ರಿಸಿಯರ್ಕಳ ಕಥೆ

ಮಹೇಂದ್ರದತ್ತಂ ಮೊದಲಾಗೊಡೆಯಯ್ನೂರ್ವರ್ ರಿಷಿಯರ್ಕಳ ಕಥೆಯಂ ಪೇಟ್ವೆಂ

ಗಾಹೆ ॥ ಣಗರೇ ಮಹಿಂದದತ್ತಾದೀಣಂ ಪಂಚಸದಾ ಕುಂಭಕಾರಘಟೇ
ಅರಾಧಣಂ ಪವಣ್ಣೋ ಪೀಳಿಜ್ಜಂತಾವಿ ಜಂತೇಹಿಂ ॥

[ಣಗರೇ=ಪೊಟಲೊಳ್। ಮಹಿಂದದತ್ತಾದೀಣಂ = ಮಹೇಂದ್ರದತ್ತರೆಂಬಾಚಾರ್ಯರ್ ಮೊದಲಾಗೊಡೆಯ ರಿಷಿಯರ್ಕಳ್ । ಪಂಚಸದಾ = ಅಯ್ನೂರ್ವರ್ । ಕುಂಭಕಾರಘಟೇ = ಕುಂಭಕಾರಘಟನೆಂಬುದಱೊಳ್ । ಆರಾಧಣಂ = ಸಹಜ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ । ಪವಣ್ಣೋ = ಪೊರ್ದ್ದಿದಱ್ । ಪೀಳಿಜ್ಜಂ ತಾವಿ = ಪಿೞಿಯೆ ಪಟ್ಟರಾಗಿಯುಂ । ಜಂತೇಹಿಂ = ಗಾಣಂಗಳಿಂದಂ ।

ವಚನ ॥ ಅದೆಂತೆಂದೊಡೆ

ಈ ಜಂಬೂದ್ವೀಪದ ಭರತ ಕ್ಷೇತ್ರದೊಳ್ ಪೂರ್ವದೇಶದೊಳ್ ಸಾವಸ್ತಿಯೆಂಬುದು ಪೊಟಲುಂಟದನಾಳ್ವೊಂ ಜಿತಶತ್ರುವೆಂಬರಸನಾತನ ಮಹಾದೇವಿ ಧಾರಿಣಿಯೆಂಬೊಳಾ ಇರ್ವರ್ಗ್ಗಂ ಮಗಂ ಸ್ಕಂಧಕುಮಾರನೆಂಬೊನಾತನಿಂ ಕಿಱಿಯಳ್ ಪುಂಡ್ರಯಶೆಯೆಂಬೊಳಾಕೆಯಂ ದಕ್ಷಿಣಾಪಥದೊಳ್ ಕುಂಭಕಾರಘಟನೆಂಬ ಪೊಟಲದನಾಳ್ವೊಂ ದಂಡಕನೆಂಬರಸಂಗೆ ಕೊಟ್ಟೊಡಂತವರ್ಗ್ಗಳ್ ಇಷ್ಟವಿಷಯ ಕಾಮಭೋಗಂಗಳನನುಭವಿಸುತ್ತಂ ಪಲವು ಕಾಲಂ ಸಲೆ ಮತ್ತಿತ್ತ ಮುನಿಸುಬ್ರತ ತೀರ್ಥಕರ ಪರಮ ದೇವರ ಪಕ್ಕದೆ ಮಹೇಂದ್ರದತ್ತನುಂ ಜಿತಶತ್ರುವ ಮಗನಪ್ಪ ಸ್ಕಂಧಕುಮಾರಂ ಮೊದಲಾಗೊಡೆಯಯ್ನೂರ್ವರ್ ರಾಜ ಪುತ್ರರ್ಕಳ್ ತಪಂ ಬಟ್ಟೋದುದಳೆಲ್ಲಮಂ ಕಲ್ತು ಅಭಿನಂದನರೆಂಬ **ಗಣಧರರೊ**ಡನೆ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೊರ್ ಕಳಿಂಗ ದೇಶದೊಳ್ ದಂತಪುರಮೆಂಬ

ಪೊೞಲನೆಯ್ದಿಯಲ್ಲಿ ಕೆಲವು ದಿವಸಮಿರ್ಪ್ಪನ್ನೆಗಂ ಆ ಪೊೞಲನಾಳ್ವೊಂ ಜನಾರ್ಧನ ಮಹಾರಾಜನೆಂಬೊನರಸನಾತನ ಪುರೋಹಿತಂ ವ್ಯಾಳನೆಂಬೊನಾತಂ ಸ್ಕಂಧಕುಮಾರ ರಿಷಿಯರೊಡನೆ ಅರಸರ ಮುಂದೆ ಪಂಡಿತರ್ಕ್ಕಳ ನಡುವೆ ಬಾದುಗೆಯ್ದು ಸೋಲ್ತೊಡರಸನಾತನನಟ್ಟಿ ಕಳೆದೊಡಾತನುಂ ಪೋಗಿ ದಂಡಕನೆಂಬರಸಂಗಾಳಾಗಿ ಅಲ್ಲಿ ಮಂತ್ರಿಪದಮಂ ಪೆತ್ತಿರ್ಪನ್ನೆಗಂ

ಮತ್ತಿತ್ತ ರಿಷಿಯರ್ಕ್ಕಳುಂ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೊಱ್ ಕುಂಭಕಾರ ಘಟಮೆಂಬ ಪೊೞಲ್ಗೆವಂದೊಡಾ ಪೊೞಲನಾಳ್ವ ದಂಡಕನೆಂಬ ನೃಪತಿಯುಂ ಬಿಚ್ಚುವರ್ಗ್ಗೆ ಭಕ್ತನಪ್ಪಾತಂ ರಿಷಿಯರ್ಕ್ಕಳ ಬರವಂ ಕೇಳ್ದು ಬಂದು ಬಂದಿಸಿಯಭಿನಂದನ ಭಟಾರರ ಪಕ್ಕದೆ ವಿಚಾರಿಸಿ ಧರ್ಮಮಂ ಕೇಳ್ದು ಮೆಚ್ಚಿ ನಚ್ಚಿ ಶ್ರಾವಕ ಬ್ರತಂಗಳಂ ಕೈಕೊಂಡು ಶ್ರಾವಕನಾಗಿಯಯ್ನೂರ್ವರ್ ರಿಷಿಯರ್ಕ್ಕಳಂ ಪ್ರತಿದಿವಸಕ್ಕಂ ಅತಿ ಭಕ್ತಿಯಿಂದಂ ನಿಱಿಸಿ ತಾಂ ಪಕ್ಕದಿರ್ದ್ದು ದಿವ್ಯಾಹಾರಂಗಳನೂಡುತ್ತಿಂತು ರಿಷಿಯರ್ಕ್ಕಳ್ಗೆ ಬೆಸಕೆಯ್ಯುತ್ತಮಿರೆ ಸ್ಕಂಧಕುಮಾರ ರಿಷಿಯರೊಡನೆ ಬಾದುಗೆಯ್ದು ಸೋಲ್ತೊಡೆ ತನ್ನನಟ್ಟಿ ಕಳೆದುದು ಕಾರಣಮಾಗಿ ವ್ಯಾಳಕನೆಂಬ ಮಂತ್ರಿ ರಿಷಿಯರ್ಕ್ಕಳನಟ್ಟಿ ಕಳೆವುಪಾಯಮನೆ ಬಗೆಯುತ್ತಿರ್ಪನೊಂದು ದಿವಸಂ ಅಡವಿಗೆ ಪೋಗಿ ರಿಷಿಯರ್ಕ್ಕಳ್ ಸಿದ್ಧಾಂತಮಂ ಪರಿವಿಡಿಗೆಯ್ವುದಂ ಕೇಳ್ದು ಪೊೞಲ್ಗೆ ಬಂದ ಬೞಿಕ್ಕೆ ಅವರೋದುವ ಕ್ಷೇತ್ರದ ಸಾರೆಯೊಂದು ಗಿಡುವಿನ ಕೆೞಗೆ ಪಲವುಮಾಯುಧಂಗಳಂ ಪೂೞ್ದು ಬಂದರಸಗಿಂತೆಂದಂ

ಈಯಯ್ನೂರ್ವರ್ ರಿಷಿಯರ್ಕ್ಕಳುಮರಸು ಮಕ್ಕಳ್ ಮಹಾಬಲ ಪರಾಕ್ರಮನೊಡೆಯರೀ ರೂಪಂ ತೋಱಿ ನಂಬಿಸಿ ನಿಮ್ಮ ಪ್ರಾಣಕ್ಕಪಾಯಮಂ ಮಾಡಲ್ ಬಗೆದು ಬಂದರದಱಿಂ ಬಿಡದವರಲ್ಲಿಗೆ ಪೋಗಲ್ವೇಡ ಅವರ ನಂಬಲ್ವೇಡೆಂದು ಏಕಾಂತದೊಳ್ ಪೇೞ್ದು ಮತ್ತಮಿಂತೆಂದಂ ಎಂತಱಿಯಲಕ್ಕುಮೆಂದೊಡವರಾಯುಧಂಗಳಂ ಪೂೞ್ದಿರ್ದ್ದುವಪ್ಪುದಱಿಂದವರೋದುವ ಕ್ಷೇತ್ರದ ಬಳಸಿಯುಂ ನೋಡಿಸುವುದೆಂದು ಪೇೞ್ದೊಡರಸನುಂ ಆಳ್ಗಳಂ ನೋಡಿಮೆಂದು ಬೆಸವೇೞ್ದೊಡವರುಂ ಪೋಗಿಯವರೋದುವ ಕ್ಷೇತ್ರಮಂ ನೋಡಿ ಗಿಡುವಿನ ಕೆೞಗೆ ಪೂೞ್ದಿರ್ದ್ದಾಯುಧಂಗಳಂ ತೆಗೆದುಕೊಂಡು ತಂದರಸಂಗೆ ತೋಱಿದೊಡರಸನೆಂದಂ ರಿಷಿಯರೊಂದಿಱುಂಪೆಗೆ ಪೊಲ್ಲದಂ ಬಗೆಯದವರೆನಗಹಿತಮಂ ಬಗೆವರೆ ಪೊಲ್ಲದರಾರಾನುಂ ರಿಷಿಯರ್ಗ್ಗೆ ಮುಳಿವರ್ ಪೂೞ್ದಿಟ್ಟರಕ್ಕುಮೆಂದರಸನದಂ ಕಡೆಗಣಿಸಿ ಕೆಮ್ಮಗಿರ್ದ್ದಂ ಮತ್ತೆ ಕೆಲವು ದಿವಸದಿಂ ಭಂಡಾರದ ಮನೆಯೊಳ್ ಕನ್ನಮನಿಕ್ಕಿಸಿ ಭಂಡಾರದ ಪುಡುಕೆಗಳಂ ದಮ್ಮಮಂ ಪೊನ್ನು ತುಡುಗೆಗಳಂ ಸಾಲಿಟ್ಟಂತಿರೆಯುಗುತ್ತುಂ ನಡುವಿರೊಳ್ ಕೊಂಡು ಪೋಗಿಯವರಿರ್ಪ್ಪ ಬಸದಿಯೊಳಗೊಂದು ಕೋಣೆಯೊಳಗಿಟ್ಟಿರಿಸಿ ಬಂದು ಪೊೞ್ತಿರೆಯರಸಂಗಿಂತೆಂದು ಪೇೞ್ದಂ ದೇವಾ ಭಂಡಾರದ ಮನೆಯೊಳ್ ಕನ್ನಮನಿಕ್ಕಿ ಭಂಡಾರದ ಮನೆಯೊಳ್ ಕಳವು ಪೋದುದೆಂದು ಪೇೞ್ದೊಡರಸನಾರ್ ಕೊಂಡರಾರಯ್ಯೆಂದು ತಳಾಱಂಗೆ

ಬೆಸವೇೞ್ದೊಡಾತನುಂ ಆರಯ್ದು ಬಂದು ದೇವಾ ರಿಷಿಯಱ್ ಕನ್ನಮನಿಕ್ಕಿ ತಮ್ಮ ಬಸದಿಯೊಳಗೆ ಕಸವರಮನೊಟ್ಟಿಟ್ಟು ಸಾಲಿಟ್ಟಂತಿರೆ ಬಸದಿವರೆಗಂ ದ್ರಮ್ಮಮುಂ ಪೊನ್ನುಮಂ ಸಾರ ಬೀದಿಯಾಗಿಯುಮುಗುತ್ತಂ ಪೋದುವೆಂದು ಪೇೞ್ದೊಡರಸನೆಂದಂ ಋಷಿಯರ್ ಶ್ರಾವಕರ್ಗ್ಗೆ ಕಳದಿರಿಂ ಪೆಱರ ಕಸವರಮನೆಂದುಂ ಕೊಳ್ಳದಿರಿಮೆಂದು ಬ್ರತಂಗಳಂ ಕುಡುವರ್ ತಾಮುಂ ಕಳ್ವರೆ ಯಾರಾನುಂ ಅವರ್ಗ್ಗೆ ಮುಳಿವರಿದಂ ಮಾಡಿದರೆಂದೆರಡುಮಂ ಕಡೆಗಣಿಸಿ ಕೆಮ್ಮಗಿರ್ದಂ

ಮತ್ತೆ ಕೆಲವು ದಿವಸದಿಂ ಸುವ್ರತೆಯೆಂಬ ಮಹಾದೇವಿಯೊಡನೆ ಮಂತ್ರಿ ಕಜ್ಜಮಂ ಸಮಕಟ್ಟಿಯೊಂದು ದಿವಸಮೊರ್ವ್ವ ಬೂತಿಂಗೆ ದ್ರವ್ಯಮಂ ಕೊಟ್ಟೊಡಂಬಡಿಸಿ ತಲೆಯಂ ಕಿರಿಸಿ ಕರಿಯ ಕೋವಣಮನುಡಿಸಿ ಪಲ್ಗಳೊಳ್ ಕವಡಿಕೆಗಳಂ ಕಟ್ಟಿಸಿ ಕುಂಚಮಂ ಕೊಟ್ಟಿಂತೆಂದಂ ನೀಂ ಮಹಾದೇವಿಯ ಮಂಚಮನಂಜದೇಱಿಯಾಕೆಯೊಡನೆ ನಗುತ್ತಂ ತೆಗೞುತ್ತಮಿರೆಂದು ಕಲ್ಪಿಸಿದನನ್ನೆಗಂ ಇತ್ತರಸಂ ರಿಷಿಯರ್ಕ್ಕಳೆಲ್ಲರುಮನೂಡಿ ಕೞಿಪಿ ಬೞಿಕ್ಕೆ ಬಪ್ಪೊನನ್ನೆಗಮಾ ಬೂತುಮಾ ಪ್ರಸ್ತಾವದೊಳ್ ಪೋಗಿ ಮಹಾದೇವಿಯ ಮಂಚಮನೇರಿರ್ದ್ದಾಗಳರಸಿ ಮಂಚದಿಂದಿೞಿದು ಕೈಗಳಂ ಮುಗಿದು ನಮೋಸ್ತು ನಮೋಸ್ತು ಇದೇನೆಂದು ನುಡಿದೊಡಾತನುಂ ಇಂತೆಂದಂ ನಿನಗಾಟಿಸಿದೆ ಬೇಂಟಂಗೊಡು ಬಂದೆಂ ಪೆಱದೇನಂ ನುಡಿಯದಿರಿತ್ತ ಬಾ ಎಂದು ಮಂಚದತ್ತ ಕರೆವುದನಿತೆಲ್ಲಮಂ ನೃಪತಿಗೆ ಮಂತ್ರಿ ತೋಱಿ ಇಂತೆಂದಂ

ನೋಡರಸಾ ನಿಮ್ಮ ಸವಣರ ಗೊಡ್ಡಮಂ ನಿನ್ನಂ ಕೊಲಲ್ಕೆ ಆಯುಧಂಗಳಂ ಪೊೞ್ದಿಟ್ಟರೆಂದೊಡಂ ನಂಬಿದೆಯಿಲ್ಲ ಭಂಡಾರಮಂ ಕಳ್ದರೆಂದು ಪೇೞ್ದೊಡಂ ನಂಬಿದೆಯಿಲ್ಲ ಈಗಳ್ ಪ್ರತ್ಯಕ್ಷಂ ನೋಡು ನಿನ್ನ ಮಹಾದೇವಿಯೊಡನೆ ಗೊಡ್ಡಮನಾಡುವುದಂ ನಿನ್ನ ಪೆಂಡಿರುಮಂ ಬರ್ದುಂಕಲಿತ್ತಪ್ಪೊರಿಲ್ಲೆಂದು ತೋಱಿ ನುಡಿದೊಡರಸಂ ಮುನ್ನಾ ಕೞಿದ ದೋಷಂಗಳೆಲ್ಲಮನಿವರೆ ಮಾಡಿದರೆಂಬುದೊಂದು ಮನದೊಳ್ ನಂಬುಗೆಯಾಗಿ ರಿಷಿಯರ್ಗ್ಗೆ ಮುಳಿದು ಮಂತ್ರಿಯನಿಂತೆಂದಂ

ಇವರ್ಗ್ಗೆ ತಕ್ಕ ನಿಗ್ರಹಮಂ ನೀನಱಿದು ಮಾಡೆಂದು ಪೇೞ್ದೊಡಾತನುಮಂತೆ ಗೆಯ್ವೆನೆಂದು ಗಾಣಂಗಳೊಳಿಟ್ಟು ಅಯ್ನೂರ್ವರ್ ರಿಷಿಯರ್ಕಳ್ ಪಿೞಿದುಕೊಂದನ್ ಅವರುಂ ಶುಕ್ಲಧ್ಯಾನದೊಳ್ ಕೂಡಿ ಮುಡಿಪಿಯನಿಬರುಂ ಸ್ವರ್ಗದೊಳ್ ಪುಟ್ಟಿದರ್ ಮತ್ತವರೊಳಗೆ ಸ್ಕಂಧಕುಮಾರನೆಂಬ ರಿಷಿ ನಿರಪರಾಧಿಗಳಂ ನಿರ್ದೋಷಿಗಳಂ ನಿರರ್ಥಕಮೀ ಪಾತಕಂ ಕೊಂದನೆಂದು ತನ್ನಂತರಂಗದೊಳ್ ಸೈರಿಸಲಾಱದೆ ತೀವ್ರ ಕೋಪಂ ಪುಟ್ಟೆ ಕೈಮಿಗೆ ಅಪ್ರಶಸ್ತಮಪ್ಪ ತೇಜೋಋದ್ಧಿ ಪುಟ್ಟಿ ಘನರವದಿಂ ಬಂದರಸನುಮಂ ಮೊದಲಾಗಿ ಮತ್ತಮಾತನ ನಾಡ ಸಮಸ್ತ ಜೀವರಾಶಿಗಳೆಲ್ಲಮುಮನೆಯ್ದೆ ಸುಟ್ಟು ತನ್ನ ಶರೀರಮುಮಂ ಭಸ್ಮಂ ಮಾಡಿ ಸುಟ್ಟು ಸತ್ತೇೞನೆಯ ನರಕಂ ಬೊಕ್ಕಂ

ಮತ್ತಿತ್ತ ದಂಡಕ ನೃಪತಿಯುಮೇೞನೆಯ ನರಕದೊಳ್ ಮೂವತ್ತುಮೂಱು ಸಾಗರೋಪಮಾಯುಷ್ಯಮನೊಡೆಯ ನಾರಕನಾಗಿ ಪುಟ್ಟಿಯಲ್ಲಿಂದಂ ಸ್ವಯಂಭೂರಮಣ ಸಮುದ್ರದೊಳ್ ಮಹಾ ಮತ್ಸ್ಯಮಾಗಿ ಪುಟ್ಟಿ ಪಲವು ಜೀವಂಗಳಂ ಕೊಂದು ತಿಂದು ಸತ್ತಾಱನೆಯ ನರಕದೊಳ್ ಇರ್ಪ್ಪತ್ತೆರಡು ಸಾಗರೋಪಮಾಯುಷ್ಯ ಮನೊಡೆಯೊಂ ನಾರಕನಾಗಿ ಪುಟ್ಟಿ ಸತ್ತು ಬಂದಿಲ್ಲಿ ಪೆರ್ವ್ವಾವಾಗಿ ಪುಟ್ಟಿ ಸತ್ತು ನಾಲ್ಕನೆಯ ನರಕದೊಳ್ ಪತ್ತು ಸಾಗರೋಪಮಾಯುಷ್ಯಮನೊಡೆಯ ನಾರಕನಾಗಿ ಪುಟ್ಟಿ ಬಂದಿಲ್ಲಿ ಸಿಂಹಮಾಗಿ ಪುಟ್ಟಿ ಸತ್ತಯ್ದನೆಯ ನರಕದೊಳ್ ಪದಿನಯ್ದು ಸಾಗರೋಪಮಾಯುಷ್ಯಮನೊಡೆಯ ನಾರಕನಾಗಿ ಪುಟ್ಟಿ ಸತ್ತು ಬಂದಿಲ್ಲಿ ವ್ಯಾಳನೆಂಬ ಮಂತ್ರಿಯುಮಂ ಪೊೞಲೆಲ್ಲಾ ಪ್ರಜೆಯುಮಂ ಪೆರ್ವಾವಾಗಿ ಪುಟ್ಟಿ ಸತ್ತು ನಾಲ್ಕನೆಯ ನರಕದೊಳ್ ಪತ್ತು ಸಾಗರೋಪಮಾಯುಷ್ಯಮನೊಡೆಯೊಂ ನಾರಕನಾಗಿ ಪುಟ್ಟಿ ಪುಲಿಯಾಗಿ ಪುಟ್ಟಿ ಸತ್ತು **ಮೂಱನೆಯ ನರಕದೊಳ್** ಏೞು ಸಾಗರೋಪಮಾಯುಷ್ಯಮನೊಡೆಯ ನಾರಕನಾಗಿ ಪುಟ್ಟಿ ಸತ್ತು ಬಂದಿಲ್ಲಿ ಭೇರುಂಡ ಪಕ್ಕಿಯಾಗಿ ಪುಟ್ಟಿ ಸತ್ತು ಎರಡನೆಯ ನರಕದೊಳ್ ಮೂಱು ಸಾಗರೋಪಮಾಯುಷ್ಯಮನೊಡೆಯೊಂ ನಾರಕನಾಗಿ ಬಂದಿಲ್ಲಿ ಚೋರನಾಗಿ ಪುಟ್ಟಿ ಪಾಪಂಗೆಯ್ದು ಸತ್ತು ಪ್ರಥಮ ನರಕದೊಳ್ ಬಂದಿಲ್ಲಿ ಸಾಗರೋಪಮಾಯುಷ್ಯಮನೊಡೆಯೊಂ ನಾರಕನಾಗಿ ಪುಟ್ಟಿ ಸತ್ತು ಬಂದಿಲ್ಲಿ ತ್ರಸಸ್ಥಾವರಂಗಳೊಳ್ ಪುಟ್ಟಿ ಪಲಕಾಲಂ ಸಂಸಾರ ದುಃಖಂಗಳಂ ಅನಂತಾನಂತಂ ಅನುಭವಿಸಿ ನೀಡಱಿಂದೆತಾನುಂ ಬಂದಿಲ್ಲಿ ಜಟಾಯುವೆಂಬ ಪಕ್ಕಿಯಾಗಿ ರಾಮದೇವನ ಸಂಸರ್ಗದಿಂದಂ ಜಿನಧರ್ಮಮಂ ಪೆತ್ತು ಪಂಚ ನಮಸ್ಕಾರದೊಳ್ ಕೂಡಿ ಸತ್ತು ಸ್ವರ್ಗದೊಳ್ ಪುಟ್ಟಿತ್ತು

ಮತ್ತೆ ಪೆಱರುಂ ಸನ್ಯಸನಂ ಗೆಯ್ದಿರ್ದ ಭಬ್ಯರ್ಕ್ಕಳುಂ ಮಹೇಂದ್ರದತ್ತಂ ಮೊದಲಾಗೊಡೆಯಯ್ನೂರ್ವ್ವರ್ ರಿಷಿಯರ್ಕ್ಕಳುಂ ಗಾಣದೊಳ್ ಪಿೞಿದು ಕೊಂದುದಂ ಮನದೊಳ್ ಬಗೆದು ಪಸಿವುಂ ನೀರೞ್ಕೆಯುಂ ಮೊದಲಾಗೊಡೆಯ ಪರೀಷಹಂಗಳಂ ಸೈರಿಸಿ ಸರ್ವ್ವಾರ್ಥಪವರ್ಗ ಸುಖಂಗಳಂ ಭವ್ಯರ್ಕಳೆಯ್ದುಗೆ

■

೧೮. ಚಾಣಾಕ್ಯರಿಷಿಯ ಕಥೆ

ಚಾಣಾಕ್ಯರಿಷಿಯ ಕಥೆಯಂ ಪೇೞ್ವಿಂ

ಗಾಹೆ ॥ ಗೋಟ್ಠೇ ಪಾಓವಗದೋ ಸುಬಂಧುಣಾ ಗೊಬ್ಬರೇ ಪಳಿವಿದಂಹಿ

ದಜ್ಝಂತೋ ಚಾಣಕ್ಕೋ ಪಡಿವಣ್ಣೋ ಉತ್ತಮಂ ಅಟ್ಠಂ ॥

[ಗೋಟ್ಠೆ =ತುಱುಪಟ್ಟಿಯೊಳ್ । ಪಾಓವಗದೋ = ಪ್ರಾಯೋಪಗಮನಕ್ಕೆ ಸಂದೊನಾಗಿ । ಸುಬಂಧುಣಾ = ಸುಬಂಧವೆಂಬೊಂ ಮಂತ್ರಿಯಿಂದಂ । ಗೊಬ್ಬರದೊಳ್ । ಪಳಿವಿದಂಹಿ = ಉರಿಪೆ ಪಟ್ಟುದಾದೊಡೆ । ದಜ್ಝಂತೋ = ಬೇಯುತ್ತಿರ್ದ್ದೊನಾಗಿಯುಂ। ಚಾಣಕ್ಕೋ = ಚಾಣಕ್ಯನೆಂಬ ರಿಷಿ । ಪಡಿವಣ್ಣೋ = ಪೊರ್ದಿದೊಂ । ಉತ್ತಮಂ ಅಟ್ಠಂ = ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ

ಈ ಜಂಬೂದ್ವೀಪದ ಭರತ ಕ್ಷೇತ್ರದೊಳ್ ಮಗಧೆ ಎಂಬುದು ನಾಡು ಅಲ್ಲಿ ಪಾಟಲೀಪುತ್ರಮೆಂಬುದು ಪೊೞಲ್ ಅದನಾಳ್ವೊಂ ನಂದವಂಶದೊಂ ಪದ್ಮನೆಂಬನರಸನಾತನ ಮಹಾದೇವಿ ಸುಂದರಿಯೆಂಬೊಳಾಯಿರ್ವ್ವರ್ಗಂ ಮಗಂ ಮಹಾ ಪದ್ಮನೆಂಬೊಂ ಮಂತ್ರಿ ಕಾಪಿಯೆಂಬೊನಾತಂಗೆರಡನೆಯ ಪೆಸರ್ ವಿಶ್ವಸೇನನೆಂಬುದುಂ ಅಂತವರ್ಗ್ಗಳ್ ಇಷ್ಟ ವಿಷಯ ಕಾಮ ಭೋಗಗಂಳನನುಭವಿಸುತ್ತಂ ಪಲವು ಕಾಲಂ ಸಲೆ ಮತ್ತೊಂದು ದಿವಸಂ ಕಾಪಿಯೆಂಬ ಮಂತ್ರಿ ಸುಂದರಿ ಮಹಾದೇವಿಗೆ ಕಣ್ ಬೇಟಂಗೊಂಡರಸನಂ ಕೊಂದರಸಿಯೊಳ್ ಬಾೞ್ವೆನೆಂಬ ಬಗೆಯಿಂದಂ ಪರಚಕ್ರದರಸುಗಳುಂ ಪದ್ಮನ ಮೇಗೆೞ್ವಂತಿರೆ ಮಾಡಿಯರಸನನಿತೆಂದಂ ದೇವಾ ನಿಮ್ಮ ಸಾರಮಪ್ಪ ದ್ರವ್ಯಮನಾಱುಂ ಅಱಿಯದಲ್ಲಿಮಡಗಿ ನಾಮುಚ್ಚ ವಿಗ್ರಹದೊಳ್ ನಿಂದು ಕಾದುವಮೆಂದು ಪೇೞ್ದು ದ್ರವ್ಯಮನಿಡುವ ಪ್ರದೇಶಮಂ ತೋರ್ಪ ನೆವದಿಂದರಸನಂ ಬಯ್ಗಿರುಳಿನ ಜಾವದಾಗಳುದ್ಯಾನವನಕ್ಕೆ ಕೊಂಡು ಪೋಗಿ ಗುಂಡಿತಪ್ಪುದೊಂದು ನಾಡೆಯುಂ ಕೆಸಱನೊಡೆಯ ಪೞವಾವಿಯ ತಡಿಯೊಳಿಱಿದು ಕೊಂದು ಬಾವಿಯೊಳಗೆ ನೂಂಕಿ ದೆಸೆಗಳಂ ನೋೞ್ಪನನ್ನೆಗಂ ಮರದ ಮೇಗಿರ್ದ್ದ ಪೂವಂ ಕೊಯ್ವ ವಸಂತನೆಂಬ ಮಾಲೆಗಾರನರಸನ

ಸಾವಂ ಕಂಡು ತನಗಂಜಿ ಪಾಯ್ದೋಡುವ ಭರದಿಂ ಮರದಲಗುವ ಕೊಂಬಂ ಕಂಡಾದಮಾನುಂ ಭಯಸ್ಥನಾಗಿ ವಿಶ್ವಸೇನನಿಂತೆಂದಂ

ಶ್ಲೋಕ॥ ಯೇನೇಯಂ ಕಂಪಿತಾ ಶಾಖಾ ವಾನರೇಣ ನರೇಣ ವಾ
ಅಪಿ ವರ್ಷಸಹಸ್ರಾಂತಾತ್ ಮದ್ದೋಷಂ ಕಥಯಿಷ್ಯತಿ।

ಎಂದಿಂತು ಹೃದಯ ಸಂತಾಪಪರನಾಗಿ ತನ್ನ ಮನೆಗೆ ಪೋಗಿ ನೇಸಱ್ ಮೂಡಿದೊಡೆ ಸಾಮಂತ ಮಹಾಸಾಮಂತರ್ಕಳೊಡರಮನೆಯ ಓಲಗಕ್ಕೆ ಪೋಗಿ ಎಲ್ಲಾ ಎಡೆಯಲರಸಿ ಅರಸನಂ ಕಾಣದೆ ದುಃಖಮನಾಕೃತಕಮಾನುಂ ಗೆಯ್ದು ಕೆಲವು ದಿವಸಮಿರ್ದ್ದು ಮತ್ತೆ ಪ್ರಶಸ್ತ ದಿವಸ ವಾರ ನಕ್ಷತ್ರ ಮಹೂರ್ತದೊಳ್ ಮಹಾಪದ್ಮಂಗೆ ರಾಜ್ಯಾಭಿಷೇಕಮಂ ಗೆಯ್ದು ಪಟ್ಟಂಗಟ್ಟಿ ಸುವ್ರತೆಯಂಬರಸಿಗೆ ಮಹಾದೇವಿ ಪಟ್ಟಂಗಟ್ಟಿ ಸುಂದರಿ ಮಹಾದೇವಿಯೊಡನೆ ಮಱೆವಾಱುತ್ತಿರ್ಕ್ಕುಂ ಇಂತು ಪಲವು ಕಾಲಂ ಸಲೆ ಮತ್ತೊಂದು ದಿವಸಂ ಮಹಾಪದ್ಮನಿಂತೆಂದು ಬಗೆದಂ ಎನ್ನ ತಂದೆಯ ಸಾವನಿನಿತೊಂದು ಮಹಾನಗರದೊಳ್ ಆವನುವೊರ್ವ್ವನಱಿಯ ದಿರ್ಕ್ಕುಮೇ ಆತನನಾರಯ್ವೆನೆಂದರಸನರಮನೆಯಂ ಪೊಱಮಟ್ಟು ಪೋಗಿ ನಟ್ಟ ನಡುವಿರುಳ್ ಮಣಿಖೇಡಮನುಱದೊಳಮರ್ಚ್ಚಿ ಕಿತ್ತ ಬಾಳ್ವೆರಸು ಮನೆಮನೆಯ ಜನದ ನುಡಿಗಳಂ ಕೇಳುತ್ತುಮಂತೆ ಪೋಪನ್ನೆಗಂ ವಸಂತನೆಂಬ ಮಾಲೆಗಱನ ಮನೆಯನೆಯ್ದಿ ನುಡಿಯಂ ಕೇಳಲಿರ್ದ್ದನನ್ನೆಗಮಾತಂ ವನಮಾಳೆಯೆಂಬ ತನ್ನ ಪೆಂಡತಿಯ ವಿಯೋಗದಿಂ ಕಡು ದುಃಖದಿಂದಂ ಪೇೞ್ದುದಂ ಸಾಭಿಪ್ರಾಯ ಸಂಬಂಧಮಪ್ಪ ವಚನಮಂ ಕೇಳ್ದನದೆಂತೆನೆ

ಶ್ಲೋಕ॥ ನೀಲೋತ್ಪಲದಳ ಶ್ಯಾಮೇ ಬಾಲೇ ನೀಲಸರೋರುಹೇ
ದಹ್ಯೇಽಹಂ ತ್ವದ್ಗುಣೈಶ್ಚಂ ವಿರ್ಭದ್ರೇ ಶಾಖೇನ ಕಂಪಿತಾ॥

ಈ ವಾಕ್ಯಾರ್ಥಮಂ ಕೇಳ್ದರಸನರಮನೆಗೆ ಪೋಗಿ ನೇಸಱ್ಮೂಡೆ ಸಭಾ ಮಂಟಪದೊಳ್ ಸಿಂಹಾಸನ ಮಸ್ತಕಸ್ಥಿತಂ ಸಾಮಂತ ಮಹಾಸಾಮಂತರ್ಕಳಿಂದಂ ಪರಿವೃತನಾಗಿರ್ದ್ದು ಮಾಲೆಗಾಱಂಗೆ ಬೞಿಯನಟ್ಟಿ ಬರಿಸಿ ಸಭಾಮಧ್ಯದೊಳಾತನನಿಂತೆಂದು ಬೆಸಗೊಂಡಂ ಎಮ್ಮರಸನಂ ಕೊಂದವನಂ ನೀನಱಿವೆಯಂಜದೆ ಪೇೞ್ ಅಲ್ಲದಾಗಳ್ ನಿನ್ನಂ ಕೊಲಿಸಿದಪ್ಪೆನೆಂದೊಡೆ ಅಭಯಮಮಂ ಬೇಡಿಯಾತನಿಂತೆಂದು ಪೇೞ್ದಂ

ದೇವಾ ಬಯ್ಗಿರುಳಿನ ಜಾವದೊಳ್ ವಿಶ್ವಸೇನನೆಂಬ ಮಂತ್ರಿಯರಸನನುದ್ಯಾನವನಕ್ಕೆ ಕೊಂಡು ಪೋಗಿ ಬಾವಿಯ ತಡಿಯೊಳಿಱಿದು ಕೊಂದು ಬಾವಿಯೊಳಗೆ ನೂಂಕುವುದುಂ ಮರನನೇಱಿ ಪೂವಂ ಕೊಯ್ವುತಂ ಕಂಡು ಎತ್ತಾನುಮೆನ್ನ ಕಂಡೊಡೆ ಕೊಲ್ಗುಮೆಂದು ಭಯದಿಂ ಪಾಯ್ದೋಡಿ ಕೆಟ್ಟೆನಿದೆನ್ನ ಕಂಡ ವೃತ್ತಾಂತಮೆಂದಾಗಳಾತಂಗೊಸೆದು ತನ್ನಂಗಚಿತ್ತಮಂ ಕೆಲವು ಬಾಡಮುಮಂ ಕೊಟ್ಟಾತನಂ ಸತಸಂ ಬಡಿಸಿ ಮಂತ್ರಿಯ ಪೊಲ್ಲಮೆಯನೆಲ್ಲಗ್ಗಮಱಿಯೆ

ಪೇೞ್ವಾತನ ಪುತ್ರಕಳತ್ರ ಸ್ವಜನ ಬಾಂಧವ ಸಹಿತಂ ಕೊಲಲ್ ಬಗೆದೊಡೆ ಸಾಮಂತಾದಿಗಳ್ ಬಾರಿಸಿದೊಡನಿಬರುಮನ್ ನೆಲಮನೆಯೊಳಿಕ್ಕಿ ಮಲ್ಲಲ್ ಪುಗುವನಿತು ಕಿ ಱಿದಾನುಂ ಬಾಗಿಲಂ ಮಾಡಿ ದಿವಸಕ್ಕಮೊಂದು ಮಲ್ಲಲ್ ಕೂೞುಮನೊಂದು ಮೊಗಪೆ ನೀರುಮಂ ನೆಲಮನೆಯೊಳಗೆ ನೀಡಿದೊಡನಿಬರುಂ ಪಚ್ಚುಗೊಂಡುಣ್ಬರಿಂತು ಪಲವು ದಿವಸಂಗಳ್ ಸಲೆ ಮತ್ತೊಂದು ದಿವಸಂ ಕಾಪಿ ತನ್ನವರನಿಂತೆಂದಂ ನಾವನಿಬರುಂ ಸಾಯದೆ ಯಾವನೋರ್ವ್ವಂ ನಮ್ಮ ಪಗೆಯನಿಱಿಯಲುಂ ನಂದನವಂಶಮಂ ನಿರ್ವಂಶಂ ಮಾಡಿ ಕಿಡಿಸಲುಂ ಆರ್ಕ್ಕುಮಾತನೀ ಮಲ್ಲಲ ಕೂಟನುಣ್ಗೆಂದೊಡೆ ಕಾಪಿಯ ಮಗಂ ಸುಬಂಧುವೆಂಬೊನಾತಂ ನದನವಂಶವಂ ನಿರ್ಮೂಲಂ ಕಿಡಿಸಲಾರ್ಪ್ಪೆನೆಂದು ಪೂಣ್ದೊಡಾತನುಣವೇೞ್ದು ಉೞಿದರೆಲ್ಲಮುಣ್ಣದೆ ಸತ್ತರ್ ಸುಬಂಧುವೊರ್ವ್ವನುಮುಂಡು ಬರ್ದೊಂ ಇಂತು ಮೂಱು ವರ್ಷ ಪೋದು ಬೞಿಕ್ಕೆ ಮತ್ತಿತ್ತ ಪ್ರತ್ಯಂತವಾಸಿಗಳಪ್ಪರುಸಗಳ್ ಮಸಗಿದೊಡೆ ಮಂತ್ರಿಯ ಗುಣಮಂ ನೆನೆದು ಬೆಸಗೊಂಡು ಮಲ್ಲಲ ಕೂೞುಮಾರಾನುಮಿನ್ನುಮುಣ್ಬರೊಳರೆ ಎಂದು ಬೆಸಗೊಂಡೊಡೊಳರೆಂದು ಪೇೞ್ದೊಡೆ ಸುಬಂಧುವಂ ನೆಲಮನೆಯಂ ತೆಗೆಯಿಸಿ ಸನ್ಮಾನ ದಾನಂಗಳಿಂದಾತನಂ ಸತ್ಕರಿಸಿ ಕ್ಷಮೆಗೊಳಿಸಿ ಮಂತ್ರಿಪದಮಂ ಕೊಟ್ಟಂ ಆತನುಂ ಪರಚಕ್ರಮಂ ಮಸಗಲೀಯದೆ ತನ್ನ ಬುದ್ಧಿಯಿಂದಂ ಪೂರ್ವಕ್ರಮದೊಳ್ ನಿಱಿಸಿದೊಡರಸನಾತಂಗಾದವಮಾನುಂ ಒಸೆದು ತಂದೆಯ ಬಾೞೆಂದಮಗ್ಗಳಂ ಬಾೞಂ ಮಾಡಿದಂ ಮತ್ತೆರಡನೆಯ ಮಂತ್ರಿ ಶಕಟಾಳಯನೆಂಬೊಂ ಆತನ ಮಗಳ್ ನಂದಮತಿಯೆಬೊಳಾಕೆಯಂ ಸುಬಂಧು ಮದುವೆ ನಿಂದು ಪ್ರಧಾನಮಂತ್ರಿಯಾಗಿ ಕಾಮಭೋಗಂಗಳನನುಭವಿಸುತ್ತಂ ಪಲವುಕಾಲಂ ಸಲೆ ಮತ್ತಿತ್ತ ಮಗಧೆಯೆಂಬ ನಾಡೊಳ್ ಶಾಲ್ಮಲಿಯೆಂಬಗ್ರಹಾರದೊಳ್ ಸೋಮಶರ್ಮನೆಂಬ ಪಾರ್ವ್ವಂಗಂ ಕಪಿಲೆಯೆಂಬ ಪಾರ್ವ್ವಂತಿಗಂ ಮಗಂ ನಾಲ್ಕುದಾಡೆವೆರಸು ಪುಟ್ಟಿದೊಡಾತಂಗೆ ತಾಯುಂ ತಂದೆಯುಂ ಚಾಣಾಕ್ಯನೆಂದು ಪೆಸರನಿಟ್ಟರ್ ಮತ್ತೆ ದಾಡೆವೆರಸು ಪುಟ್ಟಿದನೆಂಬುದಂ ನೈಮಿತ್ತಿಕಂ ವಸಂತಕನೆಬೊಂ ಕೇಳ್ದಿಂತೆಂದಾದೇಶಂಗೆಯ್ದಂ

ಶ್ಲೋಕ ।। ಸಚಾಣಾಕ್ಯಷ್ಚತುರ್ದಂಷ್ಟ್ರೋ ಹ್ಯೇಷೋ ನಂದಾನ್ವಯಕ್ಷಯಃ
ರಾಜೋವಾ ರಾಜಮರ್ತ್ಯೋವಾ ಭವಿಷ್ಯತಿ ನ ಸಂಶಯಃ ।।

ವಚನ ।।

ಎಂದಾದೇಶಂ ಗೆಯ್ದುದಂ ಚಾಣಾಕ್ಯನ ತಂದೆ ಕೇಳ್ದು ಕೈಸಾಣೆಗಳಿಂದಂ ನಾಲ್ಕು ದಾಡೆಗಳ ನುಜ್ಜಿ ಕಳೆದು ಮಟ್ಟಂ ಮಾಡಿದೊಂ ಮತ್ತಂ ಚಾಣಾಕ್ಯನುಂ ಬಳೆದು ನಾಲ್ಕು ವೇದಮುಮಾಱಂಗಮುಂ ಪದಿನೆಂಟು ಧರ್ಮಶಾಸ್ತ್ರಗಳಂ ಮೀಮಾಂಸಾದಿ ವ್ಯಾಕರಣಂ ಪ್ರಮಾಣಂ ಛಂದಮಳಂಕಾರಂ ನಿಘಂಟು ಕಾವ್ಯ ನಾಟಕ ಶಾಲಿಹೋತ್ರಂ ಪಾಳಕಾಪ್ಯಂ ವೈದ್ಯಶಾಸ್ತ್ರಂ ಸಾಮುದ್ರಿಕಂ ನೀತಿಶಾಸ್ತ್ರಂ ಮೊದಲಾಗೊಡೆಯ ಶಾಸ್ತ್ರಂಗಳೆಲ್ಲಮಂ ಕಲ್ತು ರಿಷಿಯರ ಪಕ್ಕದೆ ಧರ್ಮಮಂ ಕೇಳ್ದು ಶ್ರಾವಕಬ್ರತಂಗಳಂ ಕೈಕೊಂಡು ಸಮ್ಯಗ್ ದೃಷ್ಟಿಯಾಗಿ

ಕಾಲಂ ಸಲೆ ಮತ್ತೆ ಪಾಟಲೀಪುತ್ರಕ್ಕೆ ಪೋದೊಡಾತನ ಪಾಂಡಿತ್ಯಮುಂ ಸಮ್ಯಗ್ ದೃಷ್ಟಿಯಪ್ಪು ದುಮಂ ಭವ್ಯಾಕಾರಮುಮಂ ಶಕಟಾಳಯಂ ಕಂಡು ತನ್ನ ಕಿರಿಯ ಮಗಳಂ ಯಶೋಮತಿಯೆಂಬೊಳಂ ಕೊಟ್ಟನಾತನುಮಾಕೆಯಂ ಮದುವೆನಿಂದು ಸುಖದಿಂ ಕಾಲಂ ಸಲೆ ಮತ್ತೊಂದು ದಿವಸಂ ಶೋಣೆಯೆಂಬ ತೊಱೆಯ ತಡಿಯೊಳ್ ತನ್ನ ಕಾಲಂ ದರ್ಭಾಂಕುರಂ ನೆತ್ತವ್ವರೆ ನಟ್ಟೊಡೆ ಮುಳಿದು ದರ್ಭೆಯನಗುಟ್ದು ಸುಡುವೊನಂ ಸುಬಂಧು ಕಂಡು ತತ್ ಸಂಬಂಧಮೆಲ್ಲಮಂ ಬೆಸಗೊಂಡೊಡೆ ಸ್ವವೈರಿ ವಿಧ್ವಂಸನಂ ಗೆಯ್ವುಪ್ಪೆನೆಂದಱಿಯೆ ಪೇಟ್ದೊಡೆ ಸುಬಂಧು ಮುನ್ನಾದೇಶಮಂ ಕೇಳ್ದಪ್ಪುದರಿಂದಿಂತೆಂದಂ

ಶ್ಲೋಕ ॥ ಸಚಾಣಾಕ್ಯಶ್ಚತುರ್ದಂಷ್ಟ್ರೋ ಹ್ಯೇಷೋ ನಂದಾನ್ವಯಕ್ಷಯಃ
ರಾಜೋವಾ ರಾಜಮರ್ತ್ಯೋವಾ ಭವಿಷ್ಯತಿ ನಸಂಶಯಃ ॥

ಎಂಬ ಶ್ಲೋಕದರ್ಥಮಂ ಮನದೊಳ್ ಬಗೆದು ಸಹಾಯಕನಂ ಪೆತ್ತೆನೆಂದುವೊಸೆ ದಾತನ ಬುದ್ಧಿಯಂ ಪರೀಕ್ಷಿಸಲ್‌ವೇಡಿ ಭಟ್ಟಿಮಂಟಪದೊಳೀ ಶ್ಲೋಕಮಂ ಬರೆದು ಪೋದಂ

ಶ್ಲೋಕ ॥ ಶಕ್ಯಾಸಪ್ತಸಹಸ್ರೇಣ ನೀತಿಶಾಸ್ತ್ರ ವಿಶಾರದೈಃ
ವ್ಯವಸಾಯೇ ದ್ವಿತೀಯೇನ ಕೃತ್ಸ್ನಾ ಜೇತುಂ ವಸುಂಧರಾ ॥

ಈ ಬರೆದ ಶ್ಲೋಕಮಂ ಚಾಣಾಕ್ಯನೊಂದು ದಿವಸಂ ಕಂಡಿದು ನೀತಿಶಾಸ್ತ್ರದ ಬಲ್ಮೆಯಲ್ತೆಂದದಂ ಸೀಂಟಿ ತಾನಿಂತೆಂದು ಬರೆದಂ -

ಶಕ್ಯಾಹ್ಯೇಕ ಶರೀರೇಣ ನೀತಿಶಾಸ್ತ್ರವಿಶಾರದೈಃ।
ವ್ಯವಸಾಯ ದ್ವಿತೀಯೇನ ಕೃತ್ಸ್ನಾ ಜೇತುಂ ವಸುಂಧರಾ ॥

ಅದಂ ಸುಬಂಧು ಕಂಡು ಇದನಾರ್ ಬರೆದರೆಂದು ಬೆಸಗೊಂಡೊಡೆ ಚಾಣಾಕ್ಯಂ ಬರೆದನೆಂದು ಪೇಟ್ದೊಡೆ ಅದಂ ಕೇಳ್ದುದದಕ್ಕೆ ಅನುಸಾರಿಯಪ್ಪ ಬುದ್ಧಿಯುಂಟೆಂದು ಮನದೊಳ್ ಬಗೆದೊಂದು ದಿವಸಂ ತನ್ನ ಮಗಳ ಚೋಳಿಗೆಯೊಳ್ ಸ್ವಜನ ಬಾಂಧವ ಜನ ಪರಿವಾರ ಜನರ್ಕಳೆಲ್ಲರುಮಂ ಬರಿಸಿ ದಿವ್ಯಾಹಾರಂಗಳನೂಡಿ ವಸ್ತ್ರಾದ್ಯಾಭರಣಂಗಳಿಂದಂ ಪೂಜಿಸಿ ಚಾಣಾಕ್ಯಂಗಂ ಯಶೋಮತಿಗಮಿರ್ವರಿಗಮೆಂದು ನಿಸ್ರಾವಮಂ ತನ್ನ ಭಾರ್ಯೆಯಪ್ಪ ನಂದವತಿಯ ಕೈಯ್ಯೊಳಟ್ಟಿದೊಡೆ ಆಕೆಯು ಕೊಂಡು ಪೋಗಿ ನಿಮಗಿರ್ವರ್ಗಂ ನಿಶ್ರಾವಮೆಂದು ಪೇಟ್ದು ಯಶೋಮತಿಗೆ ಕೊಟ್ಟು ಪೋದೊಡೆ ಚಾಣಾಕ್ಯಂ ಮನದೊಳಿಂತೆಂದು ಬಗೆದು ಲೋಕದೊಳ್ ದಾರಿದ್ರ್ಯದಿಂ ಬಿಟ್ಟು ಕಷ್ಟತಿಕೆಯೊಂದುಮಿಲ್ಲದುವೆ ಲೋಕದೊಳ್ ಮಹಾಪಾತಕಮಂತುಮಿಂತೆಂಬುದಲ್ತೆ

ವೃತ್ತಂ ॥ ಸಂಗಂ ನೈವಹಿ ಕಶ್ಚಿದೇವ ಕುರುತೇ ನಾ ಭಾಷ್ಯತೇ ಬಾಂಧವಾತ್
ಸಂಪ್ರಾಪ್ತೇ ಗೃಹಮುತ್ಸವೇऽಪಿ ಗೃಹಿಭಿಃ ಸಾಮಾನ್ಯಮಾಲೋಕ್ಯತೇ

ದೂರಾದೇವ ಮಹಾಜನಃ ಪರಿಹರೇತ್ಯಲ್ಪಚ್ಛದಂ ಲಜ್ಜಯಾ
ಮನ್ಯೇ ನಿರ್ಧನತಾ ಪ್ರಕಾಶಮಪರಂ ಕಷ್ಟಂ ಮಹಾಪಾತಕಂ ||

ಅದಱಿಂ ದ್ರವ್ಯಾರ್ಜ್ಜನೆಯನೆ ಗೆಯ್ವೆನೆಂಬಭಿಪ್ರಾಯದಿದಿರ್ದ್ದೊರ್ನಂ ಸುಬಂಧು ಕೇಳ್ದಱಿದೊಂದು ದಿವಸಂ ಚಾಣಾಕ್ಯನಂ ಕಂಡಿಂತೆಂದಂ ನಿಮಗೆ ದಾರಿದ್ರ್ಯಮೋಕ್ಷಮಕ್ಕುಂ ಷಷ್ಟಿಗ್ರಾಮ ಸಮನ್ವಿತಮಪ್ಪ ಅಗ್ರಾಸನಮನರಸರಂ ಬೇಡಿಕೊಂಡೊಡೆ ಸುಖಂ ಬಾೞ್ವಿಯೆನೆಯಾತನುಮಂತೆ ಗೆಯ್ವೆನೆಂದರಸನಂ ಕಂಡುಪಶ್ಲೋಕಿಸಿಯಗ್ರಾಸನಂ ಬೇಡಿದೊಡರಸನುಂ ಮೆಚ್ಚಿಕೊಟ್ಟನಿಂತಗ್ರಾಸನಮುಣುತ್ತಮಱುವತ್ತು ಬಾಡಮನಾಳುತ್ತಂ ಸುಖದಿಂ ಕಾಲಂ ಸಲೆ ಮತ್ತೊಂದು ದಿವಸಂ ಸುಬಂಧು ಮಹಾಪದ್ಮನಂ ಕಿಡಿಸುವ ಬಗೆಯಿಂದಂ ನಂದನ ಕ್ರಮಾಗತರಪ್ಪ ಬ್ರಾಹ್ಮಣರ್ಕಳ್ಗೆಯಾತನಿಂತೆಂದಂ ನಿಮ್ಮೆಮ್ಮ ಪದಮೆಂಬುದು ನಂದಮಹಾರಾಜಂ ವಿಜಯ ನಂದನ ಸುನಂದನ ನಂದಿವರ್ಧನ ನಂದಂ ಶ್ರೀನಂದನ ಪದ್ಮ ಮಹಾಪದ್ಮನೆಂದಿಂತೊಂಬತ್ತು [ತಲೆ?] ವರೆಗಂ ಕ್ರಮಾಗತಂ ನಿಮಗೆ ಬಂದಗ್ರಹಾರಮಂ ಪೆಱರ್ಕೊಂಡು ಬಾೞುತ್ತಿರೆ ನಿಮಗೆ ಕೆಮ್ಮನೆ ನೋಡುತ್ತಿರ್ಪುದದೇಂ ಪಾೞಿಯೆಂದೊಡವರ್ಗಳಿಂತೆಂದಱ್ ನಿಮ್ಮ ಬಲದಿಂದಮಾಯುಣ್ಬ ಪದಮಂ ಪಡೆವೆ ಮೆಂದೊಡಂ ಅಂತೆಗೆಯ್ಯಿಮೆಂದೊಡವರ್ ಅರಸಗಿಂತೆಂದು ಬಿನ್ನಪಂ ಗೆಯ್ದರ್

ಮಹಾರಾಜಾ ಕುಲಕ್ರಮಾಗತರೆಮುಂ ನಿಮ್ಮ ಪ್ರಸಾದದಿಂ ಬಾೞ್ವೆಮುಂ ಕ್ರಮದಿಂ ಬಂದೆಮ್ಮ ಪದಮಂ ನಿಮಗೆ ಕಿಡಿಸಲಾಗದೆಂದಾಗಳ್ ಸುಬಂಧುವಿಂತೆಂದಂ ಕ್ಷತ್ರಿಯರ್ಗ್ಗೆ ಪೂರ್ವಕ್ರಮಾಗತಂ ಕಿಡಿಸದೆ ಸಲಿಸುವದೆ ಧರ್ಮಮೆಂದೊಡರಸನಗ್ರಾಸನದಿಂ ಚಾಣಾಕ್ಯನಂ ಪಿಂಗಿಸೆಂದೊಡಂತೆ ಗೆಯ್ವೆನೆಂದು ಪೋಗಿಯಗ್ರಾಸನದೊಳುಣಲೆಂದು ಬಂದು ಮಣೆಯನೇಱಿದ್ದೊರ್ಡಾತನನಿಂತೆಂದಂ ನಿಮಗಾದಮಾನುಂ ಮುಳಿದರಸನಿಂತೆಂದಂ ಮದವಿಹ್ವಳೆಯರಪ್ಪ ವೇಶ್ಯಾಂಗನಾಸಕ್ತ ವಿಟಜನ ನಿವಾಸಿ ಎನ್ನಗ್ರಾಸನಮನುಣಲ್ಕೆ ಯೋಗ್ಯಮಲ್ಲದಱಿಂದಾತನನಟ್ಟಿ ಕಳೆಯಿಮೆಂದಟ್ಟಿದನೆಂದು ಪೇೞ್ದು ಪಡಿಯರ ನಿಂದಮೆೞೆಯಿಸಿ ಪೆಡತಲೆಯಂ ಪಿಡಿದು ನೂಂಕುತ್ತಮರಮರನೆಯಿಂದಂ ಪೊಱಮಡಿಸಿಯಟ್ಟಿ ಕಳೆದೊಡಾದಮಾನುಂ ಪ್ರತಿಜ್ಞೆಗೆಯ್ದುಂ ಪೊೞಲಿಂ ಪೊಡಮಟ್ಟು ಪೋಗಿ ಪನ್ನೆರಡು ವರ್ಷದಿಂದೊಳಗೆ ಮಹಾಪದ್ಮನಂ ಕಿಡಿಸಿದಲ್ಲದೆ ಕಾಸೆಗಳಂ ಕಳೆಯೆನೆಂದು ಜಾದಿ ನ ಸೆಲೆಗಳನುಟ್ಟು ಭಗವವೇಶಮಂ ಕೈಕೊಂಡು ಮಹೋರಗಮೆಂಬ ಪೊೞಲ್ಗೆ ಪೋಗಿಯಲ್ಲಿರ್ದ್ದನನ್ನೆಗಮಾ ಪೊೞಲನಾಳ್ವೊಂ ಮಯೂರವಂಶದರಸಂ ಕುಮುದನೆಂಬೊನಾತನ ಮಹಾದೇವಿ ಮಂದೆಯೆಂಬೊಳಾಕೆಗೆ ಗರ್ಭಮಾಗಿ ಚಂದ್ರನಂ ನುಂಗುವ ಬಯಕೆಯಾಗೆ ಬಡವಾದೊಡರಸಂ ಬೆಸಗೊಂಡು ಬಯಕೆಯಂ ತೀರ್ಚಲಾಱದೆ ಚಿಂತಾಕುಳಿತನಾಗಿರ್ಪ್ಪಿನಮದಂ ಚಾಣಾಕ್ಯಂ ಕೇಳ್ದರಸನಂ ಕಂಡಾನರಸಿಯ ಬಯಕಯಂ ನಡುಪುವೆಂ ಆ ಅರಸಿಗೆ ಪುಟ್ಟಿದ ಕೂಸನೆನಗೀಯಲಾರ್ಪೊಡೆಂದೊಡರಸಂ

ಈವೆನೆಂದರಸಿಯುಮಂ ನನ್ನಿಗೊಂಡಾಱುಮಱಿಯದಂತಿರೆ ನೃಪತಿಯ ಪ್ರಾಸಾದದ ಶಿಖರದ ಮಧ್ಯಪ್ರದೇಶಮಂ ಬಾದಣದಂತಿರೆ ಛಿದ್ರಂ ಮಾಡಿ ಚಂದ್ರನಿರುಳ್ ಮಧ್ಯಾಹ್ನಮಪ್ಪ ಪೊೞ್ತಱೊಳಾ ಛಿದ್ರಕ್ಕಭಿಮುಖಮಾಗೆ ಪಿರಿದೊಂದು ಕಾಜಿನ ಬಟ್ಟಲೊಳ್ ಕಮ್ಮಿತಪ್ಪ ನೀರಂ ತೀವಿ ಚಂದ್ರಬಿಂಬಮಂ ನೀರೊಳ್ ಕಾಣ್ಬಂತಿರೆ ಮಾಡಿಯರಸಿಯಂ ತೃಷಾಭಿವೃದ್ಧಿಯಪ್ಪ ಆಹಾರಮನೂಡಿ ನೀರಡಿಸಿದೊಡೆ ಚಾಣಾಕ್ಯನಿಂತೆಂದಂ ಮಂತ್ರದಿಂದಾಹ್ವಾನಂ ಗೆಯ್ದು ತಂದ ಚಂದ್ರನಂ ನುಂಗು ಬಾಯೆಂದರಸಿಯಂ ಕಣ್ಣಂಕಟ್ಟಿಯೊಡಗೊಂಡು ಪೋಗಿ ಕಣ್ಣ ಕಟ್ಟಂ ಬಿಟ್ಟು ಚಂದ್ರನಂ ನುಂಗೆಂದು ತೋಱಿದೊಡಾಕೆಯುಂ ಕಡುರಾಗಿಸಿಯಾ ನೀರಂ ಕುಡಿದು ಬಯಕೆ ಮುಗಿದತ್ತು

ಮತ್ತಂ ಕೆಲ ದಿವಸದಿಂ ನವಮಾಸಂ ನೆಱೆದು ಬೆಸಲೆಯಾದೊಡಾ ಕೂಸಂ ದಾದಿಯನಿಟ್ಟು ಚಾಣಾಕ್ಯಂಗೆ ಕೊಟ್ಟರ್ ಆತನುಂ ಚಂದ್ರಗುಪ್ತನೆಂಬ ಪೆಸರನಿಟ್ಟು ಬಾಯ್ವಿಣ್ಣೆಯೊಡನೆ ಕಿಱಿಕಿಱಿದೆ ನಂಜನೂಡಿ ಬೞಿಕ ಬಳೆದೊಡಾಹಾರದೊಳೂಡಲ್ ತಗುಳ್ದೊಂ ಮತ್ತೆ ಪದಿನಾಱನೆಯ ಬರಿಸಮಾದಂದು ಸಾಮಂತರ್ಕಳ್ಗಮಲ್ಲಿಯ ವೃತ್ತಿಗರಪ್ಪರಸುಮಕ್ಕಳ್ಗೆ ತಳವಱರ್ಕಳ್ಗಮಿಂತೆಂದು ನುಡಿದಂ ಚಂದ್ರಭುಕ್ತಂಗೆ ಪೃಥಿವಿಯೆಲ್ಲಮನಾಳ್ವ ಲಕ್ಷಣಂಗಳೊಳವು ಈತಂಗರಸು ಮಾಡಿದಪ್ಪೆಂ ನಿಮಗೆಲ್ಲಮಿಲ್ಲಿಯ ಬಾಳ್ವೆಗೆ ಪದಿರ್ಮಡಿ ಬಾೞಂ ಮಾಡಿಸುವೆನೆಂದುಮೇಳಿಸಿಯೊಡಂಗೊಂಡು ಪೋಗಿ ಮತ್ತಂ ಪೆಱರುಮಂ ನೆರಪಿ ಪಿರಿದು ತಂತ್ರಮಂ ಮಾಡಿ ಶ್ರೀಪರ್ವತದ ಮೇಗನಿಬರುಮನಿರಿಸಿ ತಾನೊರ್ವನೆ ಪೊನ್ನ ಮಾಡುವ ದೂಸರಿಂದಂ ಮದ್ದುಗಳನಱಸುತ್ತಂ ತೊೞಲ್ವನನ್ನೆಗಂ ಪರ್ವತದ ತಟ್ಟಲೊಳಾದಮಾನುಂ ಗುಂಡಿತಪ್ಪ ರಸದ ಬಾವಿಯಂ ಮೊಡೆನಾಪ್ಪುದಂ ಕಂಡು ಮುಚ್ಚಿದ ಸೆಲೆಯಂ ಕಳೆದು ನೋಳ್ಪನ್ನೆಗಮದರೊಳಗೊರ್ವಂ ಬಾಳುತ್ತಿರ್ದ ಪುರುಷನಂ ಕಂಡು ನೀನೇಕಿಲ್ಲಿ ಪೊಕ್ಕಿರ್ದೆಯೆಂದು ಬೆಸಗೊಂಡೊಡಾತನೆಂದಂ ಒರ್ವಂ ರಸವಾದಕನೆಂಬ ಬಿಟ್ಟುವನೀ ಬಾವಿಯೊಳಗಿೞಿದು ನೀನೀ ರಸಮಂ ಮೊಗೆದು ಕೊಟ್ಟೊಡದಱೊಳ್ ಮಾಡಿದ ಪೊನ್ನುಂ ಎನಗಂ ನಿನಗಂ ಸಮನೆ ಭಾಗಮಕ್ಕುಮೆಂದೊಡಾಂ ಪೊನ್ನ ಲೋಭದಿಂದಂ ಬಾವಿಯಂ ಪೊಕ್ಕು ರಸಮಂ ಸೋರೆಯಂ ತೀವಿ ಬೇಟ್ಪನಿತುಮಂ ಮೊಗೆದು ಕೊಟ್ಟೊಡಾತನೆನ್ನಂ ತೆಗೆಯದೆ ಪೋದನಂತೆ ಮುನ್ನಂ ಪಲರುಮನೀ ಮಾರ್ಗ್ಗದಿಂ ಬಾವಿಯೊಳಗೆ ಪುಗಿಸಿ ರಸಮಂ ಕೊಂಡವರಂ ತೆಗೆಯದೆ ಕೊಂದನೆಂದು ಪೇಟ್ದೊಡಾಂ ನಿನ್ನ ತೆಗೆದು ಬಾೞಿಪ್ಪೆನೆನಗೆ ರಸಮಂ ಮೊಗೆದು ಕುಡೆಂದು ನೀಡುನೇಣಂ ಪಲವುಂ ಸೋರೆಗಳಂ ತಂದು ತೀವಿಸಿಕೊಂಡಾತನುಮಂ ತೆಗೆದು ರಸಂ ತಿಂದ ಮೆಯ್ಗೆ ತಕ್ಕ ಪ್ರತೀಕಾರ ಮದ್ದುಗಳಂ ಮಾಡಿಯಾತನಂ ಬಾಳಿಸಿ ಕೞಿಪಿದಂ ಮತ್ತಾರಸದಿಂದೆನಿತಾನುಂ ರಾಶೋಪರಾಶಿ ಪೊನ್ನಂ ಮಾಡಿ ಇಂತೆಂದಂ ಆರೊರ್ವರೊಂದು ಪೇಱು ಮಣ್ಣಂ ತಂದು ಇಲ್ಲಿ ಮೇಗೊಟ್ಟುವರವರ್ಗ್ಗೊಂದು ಪೇಱು ಪೊನ್ನಂ ಕಂಡುವೆನೆಂದೊಡದಂ ಕೇಳ್ದು ಒಕ್ಕಲಿಗನೊಂದು ಪೇಱು ಮಣ್ಣಂ ತಂದು ಶ್ರೀ ಪರ್ವತದ ಮೇಗಿಟ್ಟೊಡಾತಂಗೊಂದು ಪೇಱು ಪೊನ್ನಂ ಕೊಟ್ಟೊಡದುಂ ಕಂಡುಂ ಕೇಳ್ದುಂ ನಾಡೊಕ್ಕಲಿಗರೆಲ್ಲಂ

ಮಣ್ಣಂ ಪೇಱಿ ತಂದು ಶ್ರೀಪರ್ವತದ ಮೇಗೆ ಬಱಿಸಿಯುಂ ಪಿರಿದುಂ ರಾಶಿಯಾಗೊಟ್ಟಿ ಚಾಣಾಕ್ಯನಂ ಪೊನ್ನಂ ಬೇಡಿದೊಡೆ ಇಂತೆಂದಂ ನಿಮ್ಮ ತರವೇೞ್ವಿರಾರ್ ಎಮಗೊಂದು ಪೇಱು ಮಣ್ಣು ಬಾೞ್ತೆಯಾಗಿ ತರಿಸಿಕೊಂಡೆಂ ಉೞಿದ ಮಣ್ಣೆಮಗೆ ಬಾೞ್ತೆಯಲ್ಲ ನಿಮ್ಮ ನಿಮ್ಮ ತಂದ ಮಣ್ಣಂ ಕೊಂಡು ಪೋಗಿಮೆಂದೊಡೆ ಅವರ್ಗ್ಗಳ್ ನಿರಾಸೆಯಾಗಿ ಬಿಸುಟು ಪೋದರ್ ಮತ್ತಾ ಮಣ್ಣಿಂದಂ ಬಳಸಿಯುಂ ಕೋಂಟೆಯಂ ಮಾಡಿ ಮಾಟ ಕೂಟ ಪ್ರಾಸಾದ ಸಹಿತಂ ಪೊೞಲಂ ಮಾಡಿ ಪೊನ್ನಂ ಕೊಟ್ಟು ಪಲವುಂ ಕುದುರೆಗಳಂ ಕೊಂಡಾಳ್ಗಳ್ಗೆ ಕೊಟ್ಟು ಪಿರಿದುಂ ತಂತ್ರಮಂ ಮಾಡಿ ಚಂದ್ರಗುಪ್ತನನೊಡಗೊಂಡು ಪೋಗಿ ಮಹಾಪದ್ಮನ ಮೇಲೆದ್ದಾ್ತನೊಳ್ ಕಾದಿ ಕಾಳಗಮಂ ಸೋಲ್ತೋಡಿ ಬಂದುರ್ಂಕಿ ಮತ್ತಂ ತಂತ್ರಮಂ ಮಾಡಿ ವರುಷ ವರುಷಕ್ಕಂ ಪೋಗಿ ಕಾದಿ ಸೋಲ್ತು ಬರ್ಕುಂ ಮತ್ತೊಮ್ಮೆ ಮೇಲೆೞ್ದು ಬವರಮಂ ಕಾದಿ ಸೋಲ್ತು ಕಾಳಗಮನೞಿದು ಚಂದ್ರಗುಪ್ತನಂ ಪೋಗವೇೞ್ದು ತಾನುಂ ಸಂಜೆವರೆಗಂ ಕಾದಿ ಕಾಳಗಮಂ ಸೋಲ್ತು ಕೊಳುಗುಳದೊಳಿರ್ದಾಗಳ್ ಪೋಗಲ್ ಪಾಂಗಿಲ್ಲದೆ ಸಾರೆವೊಂದು ತಾಮರೆಗೆರೆಯುಂಟದಂ ಪೊಕ್ಕು ನೆಯಿವಿಯೆಯಲ್ಲಂ ಪೋಪನ್ನೆಗಮಿರ್ದ್ದಿರುಳ್ ಪೊಱಮಟ್ಟು ಪಾಟಳೀಪುತ್ರಮಂ ಪೊಕ್ಕು ಪಸಿದು ಸಾಲಿಗರ ಮನೆಯಂ ಪೊಕ್ಕು ಸಾಲಿಗರ ಬಿರ್ದ್ದಿಯ ನುಣಲ್ವೇಡಿದೊಳಾಕೆಯುಂ ಕುಳ್ಳಿರು ಮಗನೇ ಎಂದೇರಲಿಕ್ಕಿ ಕುಳ್ಳಿರಿಸಿ ಕಂಚನಿಟ್ಟು ಬಿಸಿಯಂಬಲಿಯಂ ಬಡಿಸಿದೊಡಾತನುಂ ಪಸಿದ ನಣ್ಪಿನಿಂದಂ ಬಿಸಿಯಂಬಲಿಯಂ ಬಾಯೊಳಿಟ್ಟಾಗಳ್ ಕಯ್ಯುಂ ಬಾಯುಂ ಬೆಂದಾಗಳ್ ಮೆಯ್ಯನದಿರ್ದು ಕಯ್ಯಂ ಬಿದಿರ್ದವನಂ ಬಿರ್ದ್ದಿ ಕಂಡು ನಕ್ಕಿಂತೆಂದಳ್ ಈ ಲೋಕದೊಳ್ ಮೂವರ್ ಮೂರ್ಖರಂ ಕಂಡೆನೆಂದೊಡೆ ಚಾಣಾಕ್ಯಂ ಸಂತೋಷಬಟ್ಟಾರಾರಬ್ಬಾ ಎಂದು ಬೆಸಗೊಂಡೊಡೆ ಆಕೆಯೆಂದಳ್ ನೀನುಂ ನಂದನುಂ ಚಾಣಾಕ್ಯನುಮೆಂದು ಪೇೞ್ದೊಡಾನೆಂತು ಮೂರ್ಖನೆಂದು ಬೆಸಗೊಂಡೊಡೆ ಮಗನೇ ಬುದ್ಧಿಯೊಡೆಯೊಂ ಬಿಸಿಯಂಬಲಿಯಂ ಕಂಚಿನ ಕಡೆಗಡೆಯೊಳ್ ಕಿೞಿಕಿೞಿದನೆಯಾಱಿಸುತ್ತಮಣ್ಣುಂ ನೀನೆಂತುಣಲಱಿಯದುದಱಿಂ ಮೂರ್ಖನೆನೆ ನಂದನೆಂತು ಮೂರ್ಖನೆಂದೊಡಂ ನಂದನೆಂದೊಡಂ ಮಹಾಪದ್ಮನೆಂದೊಡಮೊರ್ವ್ವನ ಪೆಸರೆ ಆತಂ ತನ್ನ ಕೊಟ್ಟ ದಾನಮಂ ಕುಡದುದಱಿಂದಂ ಪಗೆಗೊಂಡು ಪೋಪನಂ ತನ್ನಾಪ್ತರ್ಂದೆ ಕೊಲ್ಲದುದಱಿಂದಂ ನಂದಂ ಮೂರ್ಖಂ ಚಾಣಾಕ್ಯನೆಂತು ಮೂರ್ಖನೆಂದೊಡೆ ಇಂತೆಂದಳ್ ಚಾಣಾಕ್ಯಂ ತನ್ನ ಮುಳಿಸನೆ ನೋೞ್ಕುಂ ಕಜ್ಜಮನಱಿಯಂ ಮೂಲ ತಂತ್ರಮನೊಡೆಯನುಂ ಕ್ಷತ್ರಿಯನುಮಲ್ಲಂ ಪೃಥ್ವೀಶ್ವರನೊಡನೆ ಕಾದಲ್ ಬರ್ಕುಮಾತಂಗೆ ಬುದ್ಧಿಯುಳ್ಳೊಡೆ ತನ್ನ ಪಗೆವನ ನಾಡಂ ಕಿಡಿಸುವುದು ಪ್ರತಿಪಕ್ಷಮಂ ತನಗೆ ಮಾಡುವುದು ಸಾಮಂತ ಮಹಾಸಾಮಂತರ್ಕಳಂ ದ್ರವ್ಯಮಂ ಕೊಟ್ಟು ಭೇದಿಸುವುದು ತತ್ಸಂಬಧಿಗಳಂ ಪ್ರತಿಪಕ್ಷದಿಂದಂ ಕಿಡಿಸುವುದುಮಿಂತು ಮಾಡಿದೊಡೆ ನೃಪತಿಯೊರ್ವನೆಯುೞಿಗುಂ ಆಗಳ್ ತನ್ನ ಬಗೆದ ಕಾರ್ಯಸಿದ್ಧಿಯಕ್ಕುಮೆಂದೊಡೆಯಬ್ಬಾ ನಿಮ್ಮ ಪೇೞ್ವಂತುಟೆ ಕಜ್ಜಮೆಂದುಂಡು ಪೊಱಮಟ್ಟು ಶ್ರೀ ಪರ್ವತಕ್ಕೆ ಪೋಗಿ ಪಿರಿದು ತಂತ್ರಮಂ ಮಾಡಿ ಸಾಲಿಗರ ಬಿರ್ದ್ದಿ ಪೇೞ್ವಂತೆ ನಂದನ

ನಾಡಂ ಕಿಡಿಸಿ ಸಾಮಂತ ಮಹಾಸಾಮಂತರ್ಕಳಂ ದ್ರವ್ಯದಿಂ ಭೇದಿಸಿ ತತ್‌ಪ್ರತಿಪಕ್ಷಮಂ ತನ್ನಂತೆ ಮಾಡಿ ತತ್‌ಸಂಬಂಧಿಗಳಂ ಪ್ರತಿಪಕ್ಷದಿಂದಂ ಕಿಡಿಸಿ ನಂದನನೊರ್ವನುಳಿದಾಗಳ್ ಚಂದುಭಕ್ತಂಬೆರಸು ಸಮಸ್ತ ಬಲಮೆಲ್ಲಮಂ ಕೂಡಿಕೊಂಡು ಮೇಲೆದ್ದು ಕಾದುವಾಗಳ್ ಮಹಾಪದ್ಮನ ಸಾಮಂತ ಮಹಾ ಸಾಮಂತರೊಡ್ಡಣಮನೊಡ್ಡಿರ್ದ್ದರಂ ಕಾದಲ್ ವೇಟ್ಟೊಡಂ ಕಾದಲೊಲ್ಲದೆ ಕೆಮ್ಮಗಿರೆ ಮಹಾಪದ್ಮಂ ಭೇದಕ್ಕೆ ಪಡೆ ಸಂದುದೆಂಬುದನಱಿದಂಜಿಯಾರುಮಱಿಯದಂತೆ ಓಡಿಪೋದಂ

ಮತ್ತಿತ್ತ ಸುಬಂಧು ಪಿರಿದು ಬೇಗಂ ಕಾಳಗಮಂ ಕಾದಿ ಸೋಲ್ತೋಡಾತನಂ ಪಿಡಿದು ಕಟ್ಟಿ ಸಂಕಲೆಯನಿಕ್ಕಿ ಸೆಱೆಯೊಳ್ ಇಟ್ಟಂ ಮತ್ತೆ ಚಾಣಾಕ್ಯಂ ಕಾಳೆಗಮಂ ಗೆಲ್ದು ಪಾಟಲೀಪುತ್ರಮಂ ಪೊಕ್ಕು ಮಹಾಪದ್ಮನರಸಿಯರ್ಕಳ್ಗಂ ಭಂಡಾರಕ್ಕಂ ಕಾಪನಿಟ್ಟು ಪೊೞಲ ಪ್ರಜೆಯಂ ಸಂತೈಸಿ ಮತ್ತಂ ಪ್ರಶಸ್ತ ದಿವಸವಾರ ನಕ್ಷತ್ರ ಮುಹೂರ್ತದೊಳ್ ಚಂದ್ರಭುಕ್ತಂಗೆ ರಾಜ್ಯಾಭಿಷೇಕಂಗೆಯ್ದು ಪಟ್ಟಗಂಟ್ಟಿ ಮಹಾಪದ್ಮನರಸಿ ಚಂದ್ರಮತಿ ಮಹಾದೇವಿಯಂ ಚಂದ್ರಭುಕ್ತಂಗೆ ಮಹಾದೇವಿ ಮಾಡಿ ಮತ್ತೆ ನಂದನ ಭಂಡಾರದೊಳಂ ತಮ್ಮ ಭಂಡಾರದೊಳಂ ದ್ರವ್ಯಮಿಲ್ಲದುದನಱಿದು ಪಾಟಲೀಪುತ್ರದ ಪ್ರಜೆಗಳಂ ನಾಡಪ್ರಜೆಗಳಂ ಬೞಿಯಟ್ಟಿ ಬರಿಸಿಯವರ್ಗ್ಗೆಲ್ಲಮುಣಿಸಂ ಮಾಡಿ ಸೊರ್ಕ್ಕಪ್ಪಾಹಾರಮನೂಡಿ ನಿಮ್ಮ ನಿಮ್ಮ ದ್ರವ್ಯದೆಡೆಗಳಂ ತೋಱಿಮೆಂದು ಬೆಸಗೊಂಡೊವರ್ಗ್ಗಳ್ ಸೊಕ್ಕಿ ಮೆಯ್ಯಱಿಯದನಿಬರುಂ ತಂತಮ್ಮ ದ್ರವ್ಯದೆಡೆಗಳಂ ತೋಱಿ ಪೇೞ್ದು ಕೊಟ್ಟರ್ ಇಂತನೇಕ ಸಹಸ್ರ ಕೋಟಿ ದ್ರವ್ಯಮಂ ಚಾಣಾಕ್ಯಂ ಪಡೆದು ಚಂದ್ರಭುಕ್ತಂಗೆ ತೋಱಿ ಪನ್ನೆರಡು ವರ್ಷದಿಂದಂ ನಂದವಂಶಮಂ ನಿಮ್ಮೂಳಂ ಕಿಡಿಸುವೆನೆಂದೆನ್ನ ಪೂಣ್ದ ಪ್ರತಿಜ್ಞೆಯುಂ ನೆಱೆದತ್ತು ಮತ್ತೆನಗೆ ಜಾದಿನೊಳೂಡಿದವೆರಡು ವಸ್ತ್ರಮೊಳವು ಪೊನ್ನ ಗುಂಡಿಗೆಯುಮುಂಟು ಮೂಱು ದಂಡಮುಮೊಳವು ಮಗಧ ನಾಡ ದ್ರವ್ಯಮೆಲ್ಲಮಂ ತಂದು ಭಂಡಾರಮಂ ತೀವಿದೆಂ ಗುಣ ವಿಶೇಷಮನಱಿವರಸನುಮೆನಗೆ ಬಸನಾದಂ ಪೊಡೆ ಪೞೆಯನೆಂದು ಪೞಿಯಂ ಪೊಯ್ಸಿಯೊಸೆದು ರಾಗಿಸಿ ತ್ರಿದಂಡಮನೆತ್ತಿ ಸೊರ್ಕ್ಕಿದ ಪ್ರಜೆವೆರಸು ಲಹಟದಿಂದಾಡಿದಂ ಮತ್ತಂ ಶ್ರೀವರ್ಪತದೊಳಿರ್ದ್ದ ತನ್ನ ಪಾರ್ವ್ವಂತಿ ಯಶೋವ್ರತಿಗೆ ಬೞಿಯಟ್ಟಿ ಬರಿಸಿಯಾಕೆಯೊಡನೆ ಭೋಗೋಪಭೋಗಗಳನನುಭವಿಸುತ್ತಂ ಸಾಮಂತ ಮಹಾ ಸಾಮಂತರ್ಕಳ್ಗೆ ಜೀವಿತಂ ಗೆಯ್ದು ತಳವರರ್ಗಮುಮಂ ಸಂತಯಿಸಿ ಮಗಧ ವಿಷಯಮನಾಳುತ್ತುಂ ಇಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಂ ಪಲವು ಕಾಲಂ ಸಲೆ ಮತ್ತಂ ಚಂದ್ರಮತಿ ಮಹಾದೇವಿಗೆ ಗರ್ಭಮಾಗಿಯೊಂದು ದಿವಸಂ ರಥಮನೇಱಿದೊಡಾ ರಥದ ಚಕ್ರದ ಪತ್ತುಂ ಕದಿರ್ಗಳ್ ನೆಲದೊಳದ್ದುದಂ ಚಾಣಾಕ್ಯಂ ಕಂಡೀ ಚಂದ್ರಭುಕ್ತಂ ಮೊದಲಾಗಿ ಪೃಥ್ವಿಯನೇಕ ಛತ್ರಚ್ಛಾಯೆಯಿಂ ದಶಮಯೂರರ್ಕಳಾಳ್ವರೆಂದು ಆದೇಶಂ ಗೆಯ್ದಂ

ಮತ್ತೆ ಕೆಲವು ದಿವಸದಿಂ ಚಂದ್ರಮತಿ ಮಹಾದೇವಿಗೆ ನವಮಾಸಂ ನೆಱೆದೊಡೊಂದು ದಿವಸಮರಸಂ ನಂಜಿನೊಳ್ ಬೆರಸಿದಾಹಾರಮನುಣ್ಬಾಗಳ್ ಪಕ್ಕದಿರ್ದ್ದರಸಿಗೆ

ಅರಸನೊಡನುಣ್ಬ ಬಯಕೆಯಾದೊಡಂ ಬಾಳಂ ಕಿಟ್ಟು ನಿಮಿರ್ದ್ದು ಪಕ್ಕದಿರ್ದ್ದ ಚಾಣಾಕ್ಯನ ದೃಷ್ಟಿಯಂ ಬಂಚಿಸಿ ಪ್ರಚ್ಛನ್ನದಿಂದಂ ತನ್ನ ಕೈಯ ತುತ್ತಂ ವಿಷಮಿಶ್ರಮೆಂದಱಿಯದೆ ಕೊಟ್ಟಂ ಅದನಾಕೆ ಬಾಯೊಳಿಟ್ಟಾಗಳೆ ಚಾಣಾಕ್ಯಂ ಕಂಡು ತಲೆಯಂ ಪೋಗಿಱಿದು ಬಸಿಱಂ ಪೋೞ್ದು ಕೂಸಂ ಪೊಱಮಡಿಸಿಸುವುದಂ ಕಂಡು ಹಾ ಅಯ್ಯೋ ಎನ್ನ ಚಂದ್ರಮತಿ ಮಹಾದೇವಿ ಎನ್ನ ನಲ್ಲಳೆಯೆಂದು ಪ್ರಲಾಪಂಗೆಯ್ದು ದುಃಖಾಕ್ರಾಂತನಾಗಿ ತದ್ವಿಯೋಗದಿಂ ಚಂದ್ರಭುಕ್ತಂ ಪ್ರಾಣ ಪರಿತ್ಯಾಗಂಗೆಯ್ದು ಮತ್ತಾ ಕೂಸಿನ ತಲೆಯೊಳ್ ಇನಿಸಾನುಂ ವಿಷಬಿಂದು ಪನಿತುದಱಿಂದಾತಂಗೆ ಬಿಂದುಸಾರನೆಂದು ಪೆಸರನಿಟ್ಟು ಪಟ್ಟಂಗಟ್ಟಿ ಕೂಸಂ ತೋಱಿಯರಸುಗೆಯ್ಯುತ್ತಂ ಕಾಲಂ ಸಲೆ ಮತ್ತೆ ಬಿಂದುಸಾರಂ ನವಯವ್ವನನಾದಂದು ಚಾಣಾಕ್ಯಂಗೆ ಸಂಸಾರ ಶರೀರ ಭೋಗಂಗಳೊಳಾದಂ ವೈರಾಗ್ಯಮಾಗಿ ತಪಂ ಬಡುವ ಬಗೆಯಾಗಿ ಸುಬಂಧುವಂ ಸೆಱೆಯಿಂದಂ ಬಿಡಿಸಿ ಬರಿಸಿ ಕ್ಷಮೆಗೊಳಿಸಿ ಸನ್ಮಾನ ದಾನಾದಿಗಳಿಂದಾತನಂ ಪೂಜಿಸಿ ಬಿಂದುಸಾರಂಗೆ ಮಂತ್ರಿಮಾಡಿಯರಸನುಂ ಬೆಸಗೊಂಡೊಡಬಂಡಿಸಿ ಯೆಲ್ಲರುಮಂ ಕ್ಷಮೆಗೊಳಿಸಿ ಬಾಹ್ಯಾಭ್ಯಂತರ ಪರಿಗ್ರಹಂಗಳೆಲ್ಲಮಂ ತೊಱೆದು ಮತಿವರರೆಂಬಾಚಾರ್ಯರ ಪಕ್ಕದೆ ತಪಂ ಬಟ್ಟಾಗಮಂಗಳೆಲ್ಲಮಂ ಕಲ್ತಾಚಾರ್ಯರಾಗಿ ಪಲಂಬರುಂ ಶಿಷ್ಯರ್ಕಳ ಮಾಡಿ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಪಲಕಾಲ ಮುಗ್ರೋಗ್ರ ತಪಶ್ಚರಣಂ ಗೆಯ್ದು ಕಾಲಂ ಸಲೆ ಮತ್ತೆ ಪಾಟಲೀಪುತ್ರದ ಸಾರೆ ಸೋಣೆಯೆಂಬ ತೊಱೆಯ ತೆಂಕಣ ತಡಿಯ ತುಱುಪಟ್ಟಿಯೊಳ್ ವಿಹಾರಿಸುತ್ತಂ ಬಂದಿರ್ದ್ದರಾ ಬರವಂ ಸುಬಂಧು ಕಂಡು ಮಹಾಪದ್ಮನ ರಾಜ್ಯಮಂ ಕೊಂಡುದುಮಂ ತನ್ನ ಸಂಕಲೆಯೊಳಿಟ್ಟು ಸೆಱೆಯೊಳ್ ಪಲಕಾಲಂ ನಮೆಯಿಸಿದ ಪಗೆಯುಮಂ ನೆನೆದು ಸಂಜೆಯಾದಾಗಳ್ ಬಂದಿಸುವ ನೆವದಿಂದಂ ಪಿರಿದುಮರ್ಚ್ಚನೆಯಂ ಕೊಂಡು ಪೋಗಿ ಚಾಣಾಕ್ಯ ರಿಷಿಯರ್ ಮೊದಲಾಗೊಡೆಯ ರಿಷಿಯರ್ಕಟನರ್ಚ್ಚಿಸಿ ಗುರು ಪರಿವಿಡಿಯಿಂದಂ ಬಂದಿಸಿ ಪಿರಿದುಬೇಗಂ ಚಾಣಾಕ್ಯ ರಿಷಿಯರೊಡನೆ ಗೋಷ್ಠಿಯಿರ್ದ್ದು ಪೋಪಾಗಳ್ ತನ್ನವರ್ಗ್ಗಂದಂ ಮಾಗಿಯಂ ದಿವಸಂ ರಿಷಿಯುಕ್ಕಳ್ ಶೀತದೊಳ್ ಸೇದೆಗೆಡುವರದಱಿಂ ಬಳಸಿಯುಂ ಪಿರಿದುಂ ಗೊಬ್ಬರಮನೊಟ್ಟಿಮೆಂದು ಪಕ್ಕದಿದ್ದೊಟ್ಟಿಸಿ ಬಳಸಿಯುಂ ಕಿಚ್ಚಂ ತಗುಳ್ಚವೇೞ್ದು ಪೊೞಲ್ಗೆ ಪೋದಂ ಮತ್ತಂ ಗೊಬ್ಬರದ ಕಿಚ್ಚು ಬಳಸಿಯುಂ ತಮ್ಮಂ ಸುಡೆ ಚಾಣಾಕ್ಯ ರಿಷಿಯರ್ ಮೊದಲಾಗೊಡೆಯ ರಿಷಿಯರ್ಕಳೆಲ್ಲಂ

ಗಾಹೆ ॥ ಭಿಜ್ಜ ಉ ಭಿಜ್ಜ ಉ ಚಾಲು ಖಉ ಜೋಇಯ ಏಹು ಸರೀರು
ಅಪ್ಪಾ ಭಾವಹಿ ಣಿಮ್ಮಳ ಉ ಜೇಂ ಪಾವಹಿ ಭವತೀರು ॥
ಖಮ್ಮಾಮಿ ಸವ್ವಜೀವಾಣಂ ಸವ್ವೇ ಜೀವಾ ಖಮಂತಿ ಮೇ
ಮೆತ್ತೀ ಮೇ ಸವ್ವಭೂದೇಸು ವೇರಂ ಮಜ್ಝಂಣ ಕೇಣಚಿ ॥

ಎಂದಿಂತು ಕ್ಷಮೆಯಂ ಭಾವಿಸಿ ಚತುರ್ವಿಧಮಪ್ಪಾಹಾರ ಶರೀರಮುಮಂ ತೊಱೆದಿಂಗಿಣೀ ಮರಣದಿಂದಂ ಶುಭಪರಿಣಾಮದೊಳ್ ಕೂಡಿ ಮಿಕ್ಕ ರತ್ನತ್ರಯಮನಾರಾಧಿಸಿ ಸನತ್ಕುಮಾರ

ಕಲ್ಪದೊಳ್ಸು ಸರ್ವಾರ್ಥಮೆಂಬ ವಿಮಾನದೊಳು ಚಾಣಾಕ್ಯ ರಿಷಿಯರ್ ಪುಟ್ಟಿದರ್ ಮತ್ತುಳಿದ ರಿಷಿಯರ್ಕಳೆಲ್ಲಂ ಸೌಧರ್ಮಕಲ್ಪಂ ಮೊದಲಾಗೊಡೆಯ ಕಲ್ಪಂಗಳೊಳ್ ಪುಟ್ಟಿದರ್

ಮತ್ತೆ ಪೆಱರುಂ ಸನ್ಯಸನಂಗೆಯ್ದಿರ್ದ ಕ್ಷಪಣಕರುಂ ಚಾಣಾಕ್ಯ ರಿಷಿಯರಂ ಮನದೊಳ್ ಬಗೆದು ಚತುರ್ವಿಧಮಪ್ಪುಪಸರ್ಗಮುಮಂ ಪಸಿವುಂ ನೀರಟ್ಕೆ ಮೊದಲಾಗೊಡೆಯ ಇಪ್ಪತ್ತೆರಡು ಪರೀಷಹಂಗಳಂ ವ್ಯಾಧಿಗಳೊಳಪ್ಪ ವೇದನೆಗಳಂ ಸೈರಿಸಿ ಶುಭ ಪರಿಣಾಮದಿಂ ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳನಾರಾಧಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

■

ಮತ್ತೀ ಕಥೆಯಂ ಭ್ರಾಜಿಷ್ಣ್ವಾರಾಧನೆಯಭಿಪ್ರಾಯದೊಳ್ ಪೇೞ್ವುದು

೧೯. ವೃಷಭಸೇನರೆಂಬ ರಿಸಿಯರ ಕಥೆ

ವೃಷಭಸೇನರೆಂಬ ರಿಷಿಯರ ಕಥೆಯಂ ಪೇೞ್ವೆಂ

ಗಾಹೆ ॥ ವಸ ಈ ಏ ಪಳಿದಾಏ ವಿಟ್ಠಾ ಮಚ್ಚೇಣ ಉಸಹಸೇಣೆಹಿ ॥
ಆರಾಧಣಂ ಪವಣ್ಣೋ ಸಹ ಪರಿಸಾಏ ಕುಣಾಳಂಹಿ ।

[ವಸ ಈಏ=ಬಸದಿ। ಪಳಿದಾಏ=ಉರಿಪೆಪಟ್ಟುದಾದೊಡೆ । ವಿಟ್ಠಾಮಚ್ಛೇಣ = ವಿಷ್ಟಮತ್ಸ್ಯನಿಂದಂ । ಉಸಹಸೇಣಹಿ = ವೃಷಭಸೇನರೆಂಬಾಚಾರ್ಯರ್ । ಆರಾಧಣಂ =ಮಿಕ್ಕ ದರ್ಶನಜ್ಞಾನ ಚಾರಿತ್ರಂಗಳಾರಾಧನೆಯಂ । ಪವಣ್ಣೊ = ಪೊರ್ದಿದೊಂ । ಸಹಪರಿಸಾಏ = ತಮ್ಮ ರಿಷಿಸಮುದಾಯಂ ಬೆರಸು । ಕುಣಾಲಂಹೆ = ಕುಣಾಳಮೆಂಬ ಪೊಳಲೊಳ್]

ವ ॥ ಅದೆಂತೆಂದೊಡೆ

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ದಕ್ಷಿಣಾಪಥದೊಳ್ ಕರಹಟಮೆಂಬುದು ನಾಡು ಅಲ್ಲಿ ಕುಣಾಳಮೆಂಬುದು ಪೊೞಲ್ ಅದನಾಳ್ವೊಂ ಧನದನೆಂಬೊನರಸನಾತನ ಮಹಾದೇವಿ ಪದ್ಮಶ್ರೀಯೆಂಬೊಳ್ ಮಂತ್ರಿ ವಿಷ್ಟಮತ್ಸ್ಯನೆಂಬೊಂ ಪಿರಿಯ ಪಂಡಿತನಂತವರ್ಗಳಿಷ್ಟ ವಿಷಯ ಕಾಮ ಭೋಗಗಳನನುಭವಿಸುತ್ತಂ ಪಲಕಾಲಂ ಸಲೆ ಮತ್ತೊಂದು ದಿವಸಂ ವೃಷಭಸೇನಾಚಾರ್ಯರ್ ಪಿರಿದು ರಿಷಿ ಸಮುದಾಯಂ ಬೆರಸು ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಆ ಪೊೞಲ್ಗೆ ಬಂದೊಂದು ಬಸದಿಯೊಳಿರ್ದ್ದರವರ ಬರವನರಸನುಂ ಪೊೞಲವರುಂ ಕೇಳ್ದು ಪಿರಿದು ಪೂಜೆಯಂ ಕೊಂಡು ಪೋಗಿಯರ್ಚಿಸಿ ಪೂಜಿಸಿ ಪೊಡೆವಡುವುದಂ ವಿಷ್ಟಮತ್ಸ್ಯಂ ಕಂಡು ಸೈರಿಸಲಾಱದೆ ಮಾತ್ಸರ್ಯದಿಂದಂ ತನ್ನ ಪಾಂಡಿತ್ಯದ ಗರ್ವದಿಂದಂ ವೃಷಭಸೇನಾಚಾರ್ಯರೊಡನೆ ಬಾದು ಗೆಯ್ದು ನೆರವಿಯೊಳ್ ಸೋಲ್ತು ಸಿಗ್ಗಾಗಿ ಪೋಗಿ ನಟ್ಟ ನಡುವಿರುಳ್ ಬಂದು ಕಿಚ್ಚಂ ತಗುಳ್ಚಿ ಪೋದಂ ಮತ್ತಂ ವೃಷಭಸೇನಾಚಾರ್ಯರ್

ಮೊದಲಾಗೊಡೆಯ ರಿಷಿಯರ್ಕಳುಂ ಕ್ಷಮೆಯಂ ಭಾವಿಸಿ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಜಾವಜ್ಜೀವಂ ನಿವೃತ್ತಿಗೆಯ್ದು ಶುಭ ಪರಿಣಾಮದಿಂದ ಮಿಕ್ಕ ರತ್ನತ್ರಯಂಗಳಂ ಸಾಧಿಸಿ ಮುಡಿಪಿಯಲ್ಲಿ ವೃಷಭಸೇನಾಚಾರ್ಯರ್ ಪದಿನಾಲ್ಕನೆಯ ಪ್ರಾಣತಮೆಂಬ ಕಲ್ಪದೊಳ್ ಪುಷ್ಪಕಮೆಂಬ ವಿಮಾನದೊಳ್ ಇಪ್ಪತ್ತು ಸಾಗರೋಪಮಾಯುಷ್ಯಮನೊಡೆಯೊಂ ದೇವನಾಗಿ ಪುಟ್ಟಿದರ್ ಮತ್ತುಳಿದ ರಿಷಿಯರ್ಕ್ಕಳುಂ ತಮ್ಮ ತಪೋನುಷ್ಠಾನಕ್ಕೆ ತಕ್ಕಂತು ಸೌಧರ್ಮ ಕಲ್ಪಂ ಮೊದಲಾಗೊಡೆಯ ಸ್ವರ್ಗಂಗಳೊಳ್ ಪುಟ್ಟಿದರ್

ಮತ್ತಂ ಪೆಱರುಂ ಸನ್ಯಸನಂ ಗೆಯ್ದಿರ್ದ ಕ್ಷಪಣಕರುಂ ವೃಷಭಸೇನಾಚಾರ್ಯರ್ ಮೊದಲಾಗೊಡೆಯ ರಿಷಿಯರ್ಕ್ಕಳಂ ಮನದೆ ಬಗೆದು ಚತುರ್ವಿಧಮಪ್ಪ ಪಸರ್ಗಮುಮಂ ಪಸಿವುಂ ನೀರಟ್ಕೆ ಮೊದಲಾಗೊಡೆಯ ಪರೀಷಹಂಗಳಂ ವ್ಯಾಧಿಗಳೊಳಪ್ಪ ವೇದನೆಗಳಂ ಸೈರಿಸಿ ಕ್ಷಮೆಯಂ ಭಾವಿಸಿ ಶುಭ ಪರಿಣಾಮದಿಂದಂ ಪರಮ ಶುದ್ಧ ಸಹಜ ದರ್ಶನಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗದ ಸುಖಂಗಳನೆಯ್ದುಗೆ ।।೯।।

ಜದಿದಾ ಏವಂ ಅಣಗಾರಾ ತವ್ವ ವೇದಣಟ್ಠಾವಿ
ಏಕಾರಿಯ ಪಡಿಕಮ್ಮಾ ಪಡಿವಣ್ಣೋ ಉತ್ತಮಂ ಅಟ್ಠಂ ।।

ಕಿಂಪುಣ ಅಣಯಾರ ಸಹಾಯ ಗೇಣ ಕೀರಂತಂ ಕಹೇ ಪಡಿಕಮ್ಮೇ
ಸಂಘೇ ಓಲಗ್ಗಂತಂ ಆರಾಧೇದುಂ ಣ ಸಕ್ಕೇಜ್ಜ ।।

ಜಿಣವಯಣಮಮಿದ ಭೂದಂ ಮಹುರಂ ಕಣಾಹುದಿಂ ಸುಣಂತೇಣ
ಸಕ್ಕಾಹು ಸಂಘ ಮಜ್ಝೆ ಸಾಹೇದುಂ ಉತ್ತಮಂ ಅಟ್ಠಂ ।।

ಈ ಪೇಟ್ದ ಪತ್ತೊಂಭತ್ತುಂ ಕಥೆಗಳ್ ಶಿವಕೋಟ್ಯಾಚಾರ್ಯರ್ ಪೇಟ್ದ ವ ಡ್ಡಾ ರಾಧನೆಯ ಕಥೆಗಳ್ ।।

।। ಶ್ರೀ ವೀತರಾಗ ಶ್ರೀ ಪಂಚಪರಮೇಷ್ಠಿ-ಶ್ರೀಗಣಧರ ಸ್ವಾಮಿಗಳ ಶ್ರೀಪಾದವು ಶರಣು ।।

■

ಅನುಬಂಧ

ಪೂರ್ವ ಸಂಪಾದಿತ ವಡ್ಡಾರಾಧನೆ ಆವೃತ್ತಿಗಳ ತೌಲನಿಕ ಪಾಠಸೂಚಿ

ಹಂಪನಾ ಆವೃತ್ತಿಯ ಪಾಠಗಳು
೧. ಸುಕುಮಾರ ಸ್ವಾಮಿಯ ಕಥೆ

೧. ಸುಕುಮಾರ ಸ್ವಾಮಿಯ ಕಥೆಯ ಆರಂಭದಲ್ಲಿ ಡಿ.ಎಲ್.ಎನ್. ಆವೃತ್ತಿಯಲ್ಲಿದ್ದ

ನಮಃ ಶ್ರೀವರ್ಧಮಾನಾಯ ನಿರ್ಧೂತ ಕಲಿಲಾತ್ಮನೇ ।
ಸಾಲೋಕಾನಾಂ ತ್ರಿಲೋಕಾನಾಂ ಯದ್ವಿದ್ಯಾ ದರ್ಪಣಾಯತೇ॥

ಎಂಬ ಸಂಸ್ಕೃತ ಶ್ಲೋಕ ಮತ್ತು ಅದರೊಂದಿಗೆ ಬಂದಿರುವ ಪೀಠಿಕೆ ಎಂಬ ಗದ್ಯಭಾಗವು ಹಂಪನಾ ಆವೃತ್ತಿಯಲ್ಲಿ ಇಲ್ಲ. ಅವರು ನೇರವಾಗಿ

ಭಲ್ಲುಕ್ಕಿಯೇಣ ಣೆಚ್ಚಂ ಖಜ್ಜಂತೋ ಘೋರ ವೇದಣಟ್ಟೋಪಿ।
ಆರಾಧಣಂ ಪವಣ್ಣೋ ಝಾಣೇಣ ಅವಂತಿ ಸುಕುಮಾರೋ॥

ಎಂಬ ಪ್ರಾಕೃತ ಗಾಹೆಯೊಂದಿಗೆ ಸುಕುಮಾರಸ್ವಾಮಿಯ ಕಥೆಯನ್ನು ಆರಂಭಿಸಿದ್ದಾರೆ. ಕತೆಗಳ ವಸ್ತು ಮತ್ತು ಉದ್ದೇಶಗಳನ್ನು ಕೃತಿಯ ಆರಂಭದಲ್ಲಿ ಸ್ಪಷ್ಟಪಡಿಸುವುದು ಅಗತ್ಯವಾಗಿದ್ದು ಹಂಪನಾ ಆವೃತ್ತಿಯಿಂದ ಹೊರಗುಳಿದಿರುವ ಆ ಭಾಗವನ್ನು ಮತ್ತೆ ಸೇರಿಸಿಕೊಳ್ಳುವುದು ಯೋಗ್ಯವೆನ್ನಿಸುತ್ತದೆ.

ಡಿ.ಎಲ್.ಎನ್. ಆವೃತ್ತಿಯ ಪಾಠಗಳು
೧. ಸುಕುಮಾರ ಸ್ವಾಮಿಯ ಕಥೆ

೧. ನಮಃ ಶ್ರೀ ವರ್ಧಮಾನಾಯ ನಿರ್ಧೂತ ಕಲಿಲಾತ್ಮನೇ
ಸಾಲೋಕಾನಾಂ ತ್ರಿಲೋಕಾನಾಂ ಯದ್ವಿದ್ಯಾ ದರ್ಪಣಾಯತೇ॥

ಶ್ರೀ ವೀರ ವರ್ಧಮಾನ ಭಟ್ಟಾರಕರ್ಗೆ ನಮಸ್ಕಾರಂಗೆಯ್ದು ದೇವೋಪಸರ್ಗ ಮನುಷ್ಯೋಪಸರ್ಗ ತಿರಿಕೋಪಸರ್ಗಮಚೇತನೋಪಸರ್ಗ ಮೆಂದಿಂತು ಚತುರ್ವಿಧಮಪ್ಪ ಪಸರ್ಗಮುಮಂ ಪಸಿವು ನೀರಡ್ಕೆ ಮೊದಲಾಗೊಡೆಯ ಇಪ್ಪತ್ತೆರಡು ಪರೀಷಹಂಗಳುಮಂ ಸೈರಿಸಿ ಅಯ್ದುಮಿಂದ್ರಿಯಂಗಳಂ ಗೆಲ್ದು ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ದ್ವಾದಶವಿಧಮಪ್ಪ ತಪದೊಳ್ ನೆಗೞ್ದು ಪ್ರಾಯೋಪಗಮನದಿಂ ಸನ್ಯಸನಂಗೆಯ್ದು ಕರ್ಮಕ್ಷಯಂಗೆಯ್ದು ಮೋಕ್ಷಕ್ಕೆ ಪೋದ ಮತ್ತಂ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದ ಮಹಾಪುರುಷರ್ಕಳ ಕಥೆಗಳಂ ಪೇೞ್ವಲ್ಲಿ ಮುನ್ನ ಸುಕುಮಾರಸ್ವಾಮಿಯ ಕಥೆಯಂ ಪೇೞ್ವೆಂ

೨.	ತಲೆಯಂ ಬಾಗಿ ಮಱುಮಾತುಗುಡದೆ ನೀರುಂ ನೆಲನುಂ ಬರೆಯುತ್ತಮಿರೆ	೨.	ಮಱುಮಾತುಗುಡದೆ ಕಣ್ಣನೀರಂ ತೀವಿ ನೆಲನಂ ಬರೆಯುತ್ತಮಿರೆ
		*	ಡಿ.ಎಲ್.ಎನ್. ಪಾಠ ಹೆಚ್ಚು ಯೋಗ್ಯವಾಗಿದೆ. 'ನೆಲನಂ ಬರೆಯುತ್ತಿರೆ' ಎಂಬ ಪ್ರಯೋಗ ಪಂಪಭಾರತ ಮುಂತಾದ ಕಾವ್ಯಗಳಲ್ಲಿರುವುದನ್ನು ನೋಡಬಹುದು.
೩.	ಬಾಱುಂ	೩.	ಬಾಱುಮಂ (ಯೋಗ್ಯಪಾಠ)
೪.	ಕೇಳ್ದಿರ್ವರುಮುಬ್ಬೆಗಂಬಟ್ಟು ವೈರಾಗ್ಯರಾಗಿ	೪.	ಕೇಳ್ದಿರ್ವರುಮುಬ್ಬೆಗಂಬಟ್ಟು ವೈರಾಗ್ಯ ಪರಾಯಣರಾಗಿ (ಯೋಗ್ಯಪಾಠ)
೫.	ಅರಸನುಮಮರ್ಗಳನಟ್ಟಿ (ಮುದ್ರಣದೋಷವಿರಬಹುದು).	೫.	ಅರಸನುನವರ್ಗಳನಟ್ಟಿ (ಯೋ. ಪಾ)
೬.	ಮಂತ್ರಿಯೆಮ್ಮಣ್ಣಂ (ಮುದ್ಧಣ ದೋಷವಿರಬಹುದು)	೬.	ಮಂತ್ರಿಯೆಮ್ಮಣ್ಣಂ (ಯೋ.ಪಾ)
೭.	ಸೂರ್ಯಮಿತ್ರನೆಂಬೊನೆಲ್ಲೋದುಗಳಂ ಬಲ್ಲರವರ್	೭.	ಸೂರ್ಯಮಿತ್ರನೆಂಬೊನೆಲ್ಲಾ ಓದುಗಳುಮಂ ಬಲ್ಲೊನಾತಂ (ಯೋ.ಪಾ.) ನಾಮಪದ ಏಕವಚನದಲ್ಲಿದ್ದು ಸರ್ವನಾಮವೂ ಏಕವಚನದಲ್ಲಿರಬೇಕು.
೮.	ಯೋಗ್ಯಂ ಮಾಡುವಂತಿರೆ	೮.	ಯೋಗ್ಯರಂ ಮಾಡುವಂತಿರೆ (ಯೋಗ್ಯ ಪಾಠ) ಅರ್ಥದ ದೃಷ್ಟಿಯಿಂದ
೯.	ನಿರೋಧಿಸಿ	೯.	ನಿರೂಪಿಸಿ (ಯೋ.ಪಾ.) ಅರ್ಥದ ದೃಷ್ಟಿಯಿಂದ ಈ ಪಾಠ ಯೋಗ್ಯ
೧೦.	ಕಾಶ್ಯಪಿಯಟ್ಟಿದೊಳೆಂದೊಡೋಲೆಯಂ	೧೦.	ಕಾಶ್ಯಪಿಯಟ್ಟಿದೋಲೆಯೆಂದೊಡೋಲೆಯಂ (ಯೋ.ಪಾ)
೧೧.	ಸೋಮಶರ್ಮನ	೧೧.	ಸೋಮಶರ್ಮಂ (ಯೋ.ಪಾ)

ಯೋ ಪಾ = ಯೋಗ್ಯ ಪಾಠ

೧೨.	ಪಸರಂಗೊಟ್ಟೆನಪ್ಪಡೆ	೧೨.	ಪಸರಂಗೊಟ್ಟೆನಪ್ಪೊಡೆ (ಯೋ.ಪಾ)
		*	ಹಂಪನಾ ಆವೃತ್ತಿಯಲ್ಲಿ ಬಹುತೇಕ ಕಡೆಗಳಲ್ಲಿ 'ಅಪ್ಪಡೆ' ಎಂದಿದೆ. ಆದರೆ ಪೂರ್ವದ ಹಳಗನ್ನಡ ಭಾಷಾಶೈಲಿಯ ದೃಷ್ಟಿಯಿಂದ 'ಅಪ್ಪೊಡೆ' ಎಂಬ ಡಿ.ಎಲ್.ಎನ್. ಪಾಠ ಹೆಚ್ಚು ಯೋಗ್ಯ. ಇಂಥ ನಿದರ್ಶನಗಳು ಮುಂದೆ ಕೂಡ ಬರುತ್ತವೆ.
೧೩.	ಸೋಮಶರ್ಮನುಮೆಂಬ	೧೩.	ಸೋಮಶರ್ಮನೆಂಬೊಂ (ಯೋ.ಪಾ). ಭಾಷಾ ಶೈಲಿಯ ದೃಷ್ಟಿಯಿಂದ
೧೪.	ಮೆಯಿದುನ (ಯೋ.ಪಾ.) ಭಾಷಾಶೈಲಿಯ ದೃಷ್ಟಿಯಿಂದ	೧೪.	ಮಯ್ದುನ
೧೫.	ನೀಮಾರ್ಗಮಾದೊಡಮೇಂ	೧೫.	ನೀಮಾರ್ಗ್ಗರಾದೋಡಮೇಂ (ಯೋ.ಪಾ) ಅರ್ಥದ ದೃಷ್ಟಿಯಿಂದ
೧೬.	ಓದಲಾರ್ಪಡೆ	೧೬.	ಓದಲಾರ್ಪೊಡೆ (ಯೋ.ಪಾ) ಭಾಷಾಶೈಲಿಯ ದೃಷ್ಟಿಯಿಂದ
೧೭.	ನಿಮ್ಮನೋದಿಸಲಕ್ಕುಮೆಂದೊಡೀರ್ವರುಮೀ ದಯೆಗೆ ಪ್ರಸಾದಮೆಂದು	೧೭.	ನಿಮ್ಮನೋದಿಸಲಕ್ಕುಮೆಂದೊಡವರ್ಗ್ಗಳುಮಿಂ ದಯೆಗೆಯ್ಯಿಂ ಮಹಾಪ್ರಸಾದಮೆಂದು (ಯೋ.ಪಾ) ಅರ್ಥದ ದೃಷ್ಟಿಯಿಂದ
೧೮.	ಶಾಸ್ತ್ರಂಗಳೆಲ್ಲಮಂ ಕಲ್ಪಿಸಿ	೧೮.	ಶಾಸ್ತ್ರಂಗಳೆಲ್ಲಮಂ ನೆಟೆಯೆ ಕಲ್ಪಿಸಿ (ಯೋ.ಪಾ).ಅರ್ಥದ ದೃಷ್ಟಿಯಿಂದ
೧೯.	ತಂದೆಯಲ್ಲಿಯುರ್ಕಿ	೧೯.	ಮುನ್ನಿನಂತೆ ತಂದೆಯಲ್ಲಿಯುರ್ಕಿ (ಯೋ.ಪಾ).ಸಂದರ್ಭ ಮತ್ತು ಅರ್ಥದ ದೃಷ್ಟಿಯಿಂದ
೨೦.	ಯೋಗ್ಯಂ ಮಾಡುವುದು ಕಾರಣಮಾಗಿ	೨೦.	ಯೋಗ್ಯರಂ ಮಾಡುವ ಕಾರಣಮಾಗಿ (ಯೋ.ಪಾ) ಅರ್ಥದ ದೃಷ್ಟಿಯಿಂದ

೨೧.	ನಿಮಗೆ ಪಸರಂಗೊಟ್ಟೆನಿಲ್ಲನದರ್ಕೆ	೨೧.	ನಿಮಗೆ ಪಸರಂಗೊಟ್ಟೆನಿಲ್ಲಿದರ್ಕೆ (ಯೋ.ಪಾ)ಸಂದರ್ಭ ಮತ್ತು ಅರ್ಥದ ದೃಷ್ಟಿಯಿಂದ
೨೨.	ಯೋಗ್ಯಂ	೨೨.	ಯೋಗ್ಯರಂ (ಯೋ.ಪಾ) ಅರ್ಥದ ದೃಷ್ಟಿಯಿಂದ
೨೩.	ಬಗೆದಂದಪ್ಪಡಮೆಮ್ಮ ಮಾವಂ	೨೩.	ಬಗೆದಂದಪೊಪ್ಪಡೆಮ್ಮ ಮಾವಂ (ಯೋ.ಪಾ.) ಶೈಲಿಯ ದೃಷ್ಟಿಯಿಂದ
೨೪.	ಪೊಱಮಟ್ಟು ಪೋದರಂತಿರ್ವರುಂ ಪೋಗಿ	೨೪.	ಪೊಱಮಟ್ಟು ಪೋದನ್ ಅಂತಿರ್ವರುಂ ಪೋಗಿ (ಯೋ.ಪಾ.) ಅರ್ಥದ ದೃಷ್ಟಿಯಿಂದ
೨೫.	ಸುಖದೊಳ್ ಕಾಲಂ ಸಲೆ	೨೫.	ಸುಖಸಂಕಥಾ ವಿನೋದದಿಂ ಕಾಲ ಸಲೆ (ಯೋ.ಪಾ.) ಅರ್ಥದ ದೃಷ್ಟಿಯಿಂದ
೨೬.	ತೊಡಲ್ಕೆಂದು	೨೬.	ತುಡಲ್ಕೆಂದು (ಯೋ.ಪಾ). ಭಾಷಾ ಶೈಲಿಯ ದೃಷ್ಟಿಯಿಂದ
೨೭.	ಕೆಮ್ಮಗೆ (ಮುದ್ರಣ ದೋಷವಿರಬಹುದು).	೨೭.	ಕೆಮ್ಮನೆ (ಯೋ.ಪಾ)
೨೮.	ನೊಟ್ಟಿನನ್ನೆಗಂ (ಮುದ್ರಣ ದೋಷವಿರಬಹುದು).	೨೮.	ನೋಟ್ಟಿನ್ನೆಗಂ (ಯೋ.ಪಾ)
೨೯.	ಭಟರಾ	೨೯.	ಭಟ್ಟಾರಾ (ಯೋ. ಪಾ)
೩೦.	ಸೂಕ್ಷ್ಮಾಂತಿರತ (ಮುದ್ರಣ ದೋಷವಿರಬಹುದು)	೩೦.	ಸೂಕ್ಷ್ಮಾಂತರಿತ (ಯೋ. ಪಾ)
೩೧.	ಆದಮಾನುಂ ಪೆರ್ಚ್ಚೆಯುಮುಕ್ಕೆವ ತಪದಿದನಂತ ಸುಖಕ್ಕೆ (ಯೋ.ಪಾ)	೩೧.	ಎಮ್ಮಕ್ಕೆವ ತಪದಿಂದಮನಂತ ಸುಖಕ್ಕೆ
೩೨.	ಪಡಿಕಮಣಂಗೇಟ್ದು	೩೨.	ಪಡಿಕಮಣಂ ಗೆಯ್ದು (ಯೋ.ಪಾ) ಅರ್ಥದ ದೃಷ್ಟಿಯಿಂದ
೩೩.	ಪಟ್ಟಣ	೩೩.	ಪತ್ತನ (ಯೋ.ಪಾ)
೩೪.	ವಕ್ಕಾಣಿಸುತಿರ್ದ್ದಾತನ ಗರ್ವಮಂ ಕಂಡಿದಿರಂ ಬಂದು	೩೪.	ವಕ್ಕಾಣಿಸುತ್ತಿರ್ದ ಮಾನಗರ್ವದಿಂದಿದಿರಂ ಬಂದು (ಯೋ.ಪಾ)

೩೫.	ಮಿಂದಱಿಯರವರ	೩೫.	ಮಿಂದಱಿಯದವರಿವರ (ಯೋ.ಪಾ)
೩೬.	ಭಟ್ಟಾರರೆಂಗುಂ	೩೬.	ಭಟ್ಟಾರರೆನ್ನುಂ (ಯೋ.ಪಾ)
೩೭.	ಣೆಂದಂತಂ ಪಿ ಥುಣಂತಂ	೩೭.	ಣಂದಂತಂ ಸಿಳಹಂತಂ (ನಾನು ಪ್ರಾಕೃತ ವಿದ್ವಾಂಸನಲ್ಲವಾದ್ದರಿಂದ ಇಬ್ಬರ ಪಾಠದ ವ್ಯತ್ಯಾಸಗಳನ್ನು ಮಾತ್ರ ಗುರುತಿಸಿದ್ದೇನೆ).
೩೮.	ಸಲ್ಗೆಯಿಂದಂ	೩೮.	ಸಲ್ಗೆಯಿಂದಮಟಲಿಂದಂ (ಯೋ.ಪಾ)
೩೯.	ಸೂರ್ಯಮಿತ್ರ ಭಟ್ಟಾರರ್ ಸ್ವಬ್ರಾಹ್ಮಣರ್	೩೯.	ಸೂರ್ಯಮಿತ್ರ ಭಟ್ಟಾರರ್ ಮುನ್ ಬ್ರಾಹ್ಮಣರ್ (ಯೋ.ಪಾ)
೪೦.	ಮಣೆಯಿಂದೆರ್ದ್ದಿದಿರಂ ಪೋಗಿ	೪೦.	ಮಣೆಯಿಂದೆರ್ದ್ದಿದಿರಂ ಪೋಗಿ (ಯೋ.ಪಾ) 'ಎ', 'ಇ' ಗಳಲ್ಲಿ 'ಇ' ಹಳೆಯರೂಪ
೪೧.	ಅಧಮರಂ ಪೊಲ್ಲಮಾನಸನ (ಮುದ್ರಣ ದೋಷವಿರಬಹುದು).	೪೧.	ಅಧಮರ ಪೊಲ್ಲಮಾನಸರ (ಯೋ.ಪಾ.)
೪೨.	ವಿಜಾತಿಗಳ್ಗೆ ಯೋಗ್ಯಮಂ ಗೆಯ್ದಿರೆಂದು	೪೨.	ವಿಜಾತಿಗಳ್ಗೆ ಯೋಗ್ಯಮಪ್ಪಯೋಗ್ಯಮಂ ಗೆಯ್ದಿರೆಂದು (ಯೋ.ಪಾ)
೪೩.	ಪೋಗೆಂದೆಟ್ಟಿಟ್ಟಿ	೪೩.	ಪೋಗೆಂದಟ್ಟಿ (ಯೋ.ಪಾ)
೪೪.	ವಾಯುಭೂತಿಯುಮತಿ ಮಾನದಿಂದಂ	೪೪.	ವಾಯುಭೂತಿಯುಮತಿ ಮಾನವಗರ್ವದಿಂದಂ (ಯೋ.ಪಾ)
೪೫.	ಲಂಕಿಗರ	೪೫.	ಲಂಗಿಗರ (ಯೋ.ಪಾ)
೪೬.	ವಾಸುಪೂಜ್ಯ ಭಟ್ಟಾರರು ಸಿದ್ಧಿಗೆ ಸಂದ	೪೬.	ವಾಸುಪೂಜ್ಯ ಭಟ್ಟಾರರ್ ನಿಸಿದ್ಧಿಗೆ ಸಂದ (ಯೋ. ಪಾ)
೪೭.	ಭಟಾರರೆಂದಡೇನಲಾಭಮಾದುದೇ	೪೭.	ಭಟರರೆಂದರ್ ಏನಲಾಭಮಾದುದೇ (ಯೋ.ಪಾ)
೪೮.	ಜಾತ್ಯಂಧಿ	೪೮.	ಜಾತ್ಯಂಧೆ (ಯೋ.ಪಾ)
೪೯.	ಕೋಷ್ಠಮಾಗಿ	೪೯.	ಕುಷ್ಠಮಾಗಿ (ಯೋ.ಪಾ)
೫೦.	ರಿಷಿಯರ್ ಮುಳಿದು ಸುಡಿವ	೫೦.	ಋಷಿಯರಂ ಏಳಿದು ನುಡಿದ (ಯೋ. ಪಾ)

೫೧.	ರಿಷಿಯರಂ ಬಯ್ಪು (ಮುದ್ರಣ ದೋಷವಿರಬಹುದು)	೫೧.	ರಿಷಿಯರಂ ಬಯ್ದು (ಯೋ.ಪಾ)
೫೨.	ಮನುಷ್ಯಭವವುಂ ಪೆಱದು	೫೨.	ಮನುಷ್ಯ ಭವಮಂ ಪೆಱದು (ಯೋ.ಪಾ)
೫೩.	ಆಪತ್ ಕಿಳ ಜಾಯಂತೇ	೫೩.	ಪಾಪಾತ್ಕಿಲ ಜಾಯಂತೇ
೫೪.	ಖೇಳಾಷ್ಕಶಲೋಮಶ ವಕ್ರವರರ ನಿಬಿಡಾಸ್ತೇ	೫೪.	ಕೃಶ ರೋಮಶ ವಕ್ರೇ ನಿಬಿಡಾಳಿಸ್ತೇ (?)
೫೫.	ವಾಮನ ಪಾಮನಾಶ್ಚ	೫೫.	ಪಾಮನ ವಾಮನಾಶ್ಚ
೫೬.	ನವಾ ಭವಂತಿ	೫೬.	ನರಾ ಭವಂತಿ (ಯೋ.ಪಾ)
೫೭.	"ವೈರೂಪ್ಯಂ ದುರ್ಭಗತ್ವಂ ....ಮಾನುಷ್ಯಜನ್ಮಂ" ಎಂಬ ವೃತ್ತದೊಂದಿಗೇ ಸೇರಿಸಿ ಡಿ.ಎಲ್.ಎನ್. ಅವರು ಕೊಟ್ಟಿರುವ 'ಆಪತ್ ಕಿಳಜಾಯಂತೇ .... ವರನಿಬಿಡಾಸ್ತೇ" ಎಂಬ ಭಾಗವನ್ನು ಹಂಪನಾ ಆರ್ಯೆ ಎಂದು ಗುರುತಿಸಿ ಎರಡನ್ನು ಬಿಡಿಸಿ ಪ್ರತ್ಯೇಕವಾಗಿ ಕೊಟ್ಟಿರುವುದು ಸಮಂಜಸವಾಗಿದೆ.	೫೭.	....
೫೮.	ಪೂಜ್ಯಂ (ಅರ್ಥದ ದೃಷ್ಟಿಯಿಂದ ಹಂಪನಾ ಅವರದು ಯೋಗ್ಯಪಾಠ)	೫೮.	ಪೂಜಾಂ
೫೯.	ರಾಜರಾಜಾಶ್ರಿಯಂ	೫೯.	ರಾಜರಾಜಶ್ರಿಯಂ (ಯೋ.ಪಾ)
೬೦.	ವಿಪುಳವಂಶೇ ದ್ಯೌ (ಯೋ.ಪಾ. ?)	೬೦.	ವಿಪುಲ ವಂಶೇಷ್ವೇಕೇ
೬೧.	ಧರ್ಮಮೆಂಬುದಕ್ಕುಮೆಂದಿಂತಗ್ನಿಭೂತಿ ರಿಷಿಯರ್ ತಿಳಿಯೆ ಹಂಪನಾ ಅವರಲ್ಲಿ ಒಂದಿಷ್ಟು ಪಾಠ ಭಾಗ ಕೈಬಿಟ್ಟು ಹೋಗಿದೆ. ಅದು ಸೇರಬೇಕು. (ಕೊಲ್ಲದುದೆ ಧರ್ಮಮೆಂದಿಂತು ನಂಬಿ ವ್ರತಂಗಳಂ ಕೈಕೊಂಡು ನೆಗಟ್ಟುದು)	೬೧.	ಧರ್ಮಮೆಂಬುದಕ್ಕುಮೆಂದಗ್ನಿಭೂತಿ ರಿಸಿಯರ್ ತಿಳಿಯೆ (ಯೋ.ಪಾ).

೬೨. ವೈರಾಗ್ಯ ಮಾದಮಾಗಿ
೬೩. ತಮ್ಮ ವಾಸಕ್ಕೆ
೬೪. ಕೇಳ್ದದಜೊಳ್ ಮನಮಿಟ್ಟವರ್ಗೆ
೬೫. ಇವ್ವರ್ಗ್ಗಂ (ಮುದ್ರಣದೋಷವಿರಬಹುದು)
೬೬. ಕಾಂತಿಯನೊಡೆಯಳ್ ನೋಡಿದ ಜನಂಗಳ್ಗೆಲ್ಲಮಾದಮಾನುಂ (ಯೋ.ಪಾ) ಅರ್ಥದ ಸ್ಪಷ್ಟತೆಯ ದೃಷ್ಟಿಯಿಂದ
೬೭. ಪಂಗುನಾಗಮೊಂದೀ ಪೆಸರನೊಡೆಯ
೬೮. ಬಯ್ದು
೬೯. ದಿವಸದಿಂದೊಳಗುಂಬರ ಕೋಷ್ಮಮಾಗಿ
೭೦. ಲಂಕರ ಮನೆಯೊಳ್
೭೧. ಪೀಪಂದಿಯಾಗಿ
೭೨. ದುರ್ವರ್ಣ್ನೆ (ಯೋ.ಪಾ)
೭೩. ಪುಟ್ಟೆ ನಾಗಶ್ರೀಯೆಂಬೊಳ್ (ಮುದ್ರಣದೋಷವಿರಬಹುದು)
೭೪. ಬಿಸುಡವೇಟ್ದಿನಪ್ಪೊಡೆ
೭೫. ವೋಗಲೊಡನೆಯ ಕೂಸುಗಳ್
೭೬. ಲೋಕದಿಂ ಪೂಜಿಸೆಪಟ್ಟೆಮುಂ ನಮ್ಮಿಂದಗ್ಗಳಂ

೬೨. ವೈರಾಗ್ಯಮಾದಮಾನುಂ ಪೆರ್ಚೆ (ಯೋ.ಪಾ.)
೬೩. ತಮ್ಮಾವಾಸಕ್ಕೆ (ಯೋ.ಪಾ)
೬೪. ಕೇಳ್ದದಜೊಳ್ ಮನಮಿಟ್ಟಮವರ್ಗೆ (ಯೋ.ಪಾ)
೬೫. ಇರ್ವರ್ಗ್ಗಂ (ಯೋ.ಪಾ)
೬೬. ಕಾಂತಿಯನೊಡೆಯಳ್ ಜನಂಗಳ್ಗೆಲ್ಲಮಾದಮಾನುಂ

೬೭. ಪಾಂಡುಕನಾಗಮೆಂದೀ ನಾಗರ ಪೆಸರನೊಡೆಯ (ಯೋ.ಪಾ)
೬೮. ಬಯ್ದುಮಾ (ಯೋ.ಪಾ.)
೬೯. ದಿವಸದಿಂದೊಳಗೌದುಂಬರ ಕುಷ್ಠ ಮಾಗಿ (ಯೋ.ಪಾ)
೭೦. ಲಂಗಿಗರ ಮನೆಯೊಳ್ (ಯೋ.ಪಾ)
೭೧. ಪೇಪಂದಿಯಾಗಿ (ಯೋ.ಪಾ)
೭೨. ....
೭೩. ಪುಟ್ಟಿದ ನಾಗಶ್ರೀಯೆಂಬೊಳ್ (ಯೋ.ಪಾ)
೭೪. ಬಿಸುಡಲ್ವೇಟ್ದಿನಪ್ಪೊಡೆ (ಯೋ.ಪಾ)
೭೫. ವೋದೊಡೊನೆಯ ಕೂಸುಗಳ್ (ಯೋ.ಪಾ)
೭೬. ಲೋಕದಿಂದಂ ಪೂಜಿತರೆಮುಮೆಮ್ಮಿಂದಗ್ಗಳಂ (ಯೋ.ಪಾ)
* 'ಪೂಜಿಸೆಪಟ್ಟೆಮುಂ' ಮತ್ತು 'ಪೂಜಿತರೆಮು.' ಈ ಎರಡೂ ರೂಪಗಳ ಅರ್ಥ ಒಂದೇ ಆಗಿದೆ. ಆದರೆ ಶಬ್ದಶೈಲಿ ಮತ್ತು ಶಬ್ದ ಜೋಡಣೆಯ ದೃಷ್ಟಿಯಿಂದ ಡಿ.ಎಲ್.ಎನ್. ಪಾಠ ಹೆಚ್ಚು ಯೋಗ್ಯವೆಂದು ಅನ್ನಿಸುತ್ತದೆ.

೭೭. ಬಿಸುಟ್ಟೆನೆನೆಯೆಂದೊಡಂತೆಗೆಯ್ಯೆಂದು

* 'ಎನೆ' ಮತ್ತು 'ಎಂದೊಡಂ' ಎಂಬ ಎರಡೂ ರೂಪಗಳ ಅರ್ಥ ಒಂದೇ. ಕಾರಣ 'ಎಂದೊಡಂ' ಎಂಬ ಹೆಚ್ಚುವರಿ ಶಬ್ದವನ್ನು ಕೈಬಿಡಬಹುದು.

೭೮. ಸೋಲಮಂ ಕೂಡಲಾಜಿದೆ (ಮುದ್ರಣ ದೋಷವಿರಬಹುದು)

೭೯. ಅರಸರಾಣೆನೆಯಂ ಮಿಕ್ಕು (ಮುದ್ರಣ ದೋಷವಿರಬಹುದು)

೮೦. ಪೋಪನ

೮೧. ಮುಂದಡ್ಡಮಾಗಿರ್ದೋನನಪರಾಧಿಯನಕ್ಷಧೂರ್ತನಂ ಕೊಂದನ್

* ಮುಂದಡ್ಡಮಾಗಿರ್ದ್ದ ಅನಪರಾಧಿಯಾಗಿರ್ದ ಅಕ್ಷಧೂರ್ತನನ್ನು ಕೊಂದನು' ಎಂಬರ್ಥ ಇಲ್ಲಿದೆ. 'ಮುಂದಡ್ಡವಾಗಿರ್ದ್ದ ಅಪರಾಧಿಯಾದ ಅಕ್ಷಧೂರ್ತನನ್ನು ಕೊಂದನು' ಎಂಬ ವಿರುದ್ಧಾರ್ಥ ಹಂಪನಾ ಪಾಠದಿಂದ ಹೊರಡುತ್ತದೆ. ಬಹುಶಃ ಇದು ಮುದ್ರಣದೋಷವಾಗಿರಬಹುದು.

೮೨. ಕೋಲವೇಟ್ಟರದರಿಂ (ಇಲ್ಲಿ ಏಕವಚನ ಬೇಕು)

೮೩. ನಾಗಶ್ರೀಯುಮೆಂದಳಂತಪ್ಪೊಡಮ್ಮೊ ಆನುಂ (ಮುದ್ರಣ ದೋಷವಿರಬಹುದು)

೮೪. ಅಮೋಘಜೀವಂಗಳ ಕೊಂದೊಡೆನ್ನುಮನೀತನಂತೆ

೭೭. ಬಿಸುಟ್ಟೆನೆನೆಯಂತೆಗೈಯೆಂದು (ಯೋ.ಪಾ)

೭೮. ಸೋಲಮಂ ಕುಡಲಾಱಿದೆ (ಯೋ.ಪಾ) ಅರ್ಥದ ದೃಷ್ಟಿಯಿಂದ)

೭೯. ಅರಸನಾಣೆಯಂ ಮಿಕ್ಕು (ಯೋ.ಪಾ)

೮೦. ಪೋಪನ್ (ಯೋ.ಪಾ)

೮೧. ಮುಂದಡ್ಡವಾಗಿರ್ದೋನನನಪರಾಧಿಯನಕ್ಷಧೂರ್ತನಂ ಕೊಂದನ್ (ಯೋ.ಪಾ)

೮೨. ಕೊಲಲ್ವೇಟ್ಟನದಱಿಂ (ಯೋ.ಪಾ)

೮೩. ನಾಗಶ್ರೀಯೆಂದಳ್ ಅಂತಪ್ಪೊಡಮಾನುಂ (ಯೋ.ಪಾ)

೮೪. ಅಮೋಘಂ ಜೀವಂಗಳಂ ಕೊಲಲ್ವೇಟ್ಟುಮಾ ಜೀವಂಗಳಂ ಕೊಂದೊಡೆನ್ನುಮನೀತನಂತೆ (ಯೋ.ಪಾ) ಪದ್ಯದ ಕೆಲ ಭಾಗ ಹಂಪನಾ ಅವರಲ್ಲಿಲ್ಲ ಅದು ಸೇರಬೇಕು.

೮೫. ಕೊಂಡುಕೊಳ್ಳೆನೆಂದು ಕಳೆದೊಡಾ

೮೬. ಯೌವನಂ ನೆಱದಂದು (ಮುದ್ರಣ ದೋಷವಿರಬಹುದು)

೮೭. ಮೆಚ್ಚುಕೈಯೆಂದು

೮೮. ಮಯ್ದುನನುಂ ಮಱದು ನಿದ್ರೆಗೆಯ್ದಿರ್ದಾವಾಸಕ್ಕೆ ಪೋಗಿ

೮೯. ನನ್ನಿಗೊಂಡು

೯೦. ಪೋಗವೇಟ್ಟೊಡದೆಲ್ಲಮಂ

೯೧. ಮದುವಳ್(ಯೋ.ಪಾ)

೯೨. ಪೊಲ್ಲಮಾನಸಯೆಯೆಂದು (ಮುದ್ರಣದೋಷವಿರಬಹುದು)

೯೩. ಎನಗಿಂದೊಂದೆ ಭವಮೆ

೯೪. ಕಯ್ಯಿಂದಂ (ಯೋ.ಪಾ) (ಅರ್ಥದ ದೃಷ್ಟಿಯಿಂದ)

೯೫. ಬರ್ದಪ್ಪೆನೇಮೆಣಿಕೊಂಡ ಕಸವರಂ

೯೬. ಕಸವರಂ ತವದಿರ್ದ್ಪುದೆ (ಇಲ್ಲಿ 'ತವನಿಧಿಯಂತೆ' ಎಂಬ ಭಾಗ ಬೇಕು)

೯೭. ಬ್ರಹ್ಮರಾಕ್ಷಸ

೯೮. ವೈಶಾಖ (DLN) ಆವೃತ್ತಿಯ ಅಡಿಟಿಪ್ಪಣಿಯಲ್ಲಿ 'ಕಖ' ಪ್ರತಿಗಳಲ್ಲಿ 'ವೈಸಾ' ಎಂಬ ಪಾಠಾಂತರವಿರುವುದನ್ನು ನೋಡಿದರೆ ಹಂಪನಾ ಪಾಠವೇ ಸರಿಯೆಂದು ತೋರುತ್ತದೆ.)

೯೯. ನಿರ್ವಂದದಿಂ

೮೫. ಕೊಂಡು ಕೊಳ್ಳೆನೆಂದು ಪುಸಿದೊಡಾ (ಯೋ.ಪಾ)

೮೬. ಯೌವನಂ ನೆಱೆದಂದು (ಯೋ.ಪಾ)

೮೭. ಮೆಚ್ಚುಗೆಯ್ವೆನೆಂದು (ಯೋ.ಪಾ)

೮೮. ಮಯ್ದುನಂ ಪಟ್ಟಿರ್ಪಾಪಣಕ್ಕೆ ಪೋಗಿ (ಯೋ.ಪಾ.)

೮೯. ನನ್ನಿಗೊಂಡಯ್ (ಯೋ.ಪಾ)

೯೦. ಪೋಗಲ್ವೇಟ್ಟೊಡದೆಲ್ಲಮನಾ (ಯೋ.ಪಾ)

೯೧. ಮದೆವಳ್(ಯೋ.ಪಾ)

೯೨. ಪೊಲ್ಲಮಾನಸಿಯೆ ಎಂದು (ಯೋ.ಪಾ)

೯೩. ಎನಗೇನೊಂದೆ ಭವಮೆ (ಯೋ.ಪಾ)

೯೪. ಕೈಯದಂ

೯೫. ಬರ್ದಪ್ಪೆನೆ ಎಣಿಕೊಂಡ ಕಸವರಂ (ಯೋ.ಪಾ)

೯೬. ಕಸವರಂ ತವನಿಧಿಯಂತೆ ತವದಿರ್ದ್ಪುದೆ (ಯೋ.ಪಾ)

೯೭. ಬೊಮ್ಮರಾಕ್ಷಸ (ಯೋ.ಪಾ)

೯೮. ವೈನಾಕ

೯೯. ನಿರ್ಬಂಧದಿಂ (ಯೋ.ಪಾ)

೧೦೦.	ಪುರುಷರ್ಕ್ಕಳುಗಾಗದ ಗರ್ಭಮೆನಗಾದುದೆಂದು	೧೦೦.	ಪುರುಷರ್ಕ್ಕಳ್ಗಾಗದುದೆನಗಾದುದೆಂದು (ಯೋ.ಪಾ)
೧೦೧.	ಭಕ್ಷ್ಯರೂಪಂಗಳಂ	೧೦೧.	ಭಕ್ಷ್ಯರೂಪಂಗಳುಮಂ (ಯೋ.ಪಾ)
೧೦೨.	ಪೋಪನ್ನೆಗವೆಡೆಯೊಳ್ ಬರ್ಪ್ಪ ಕಳ್ಳರಂ ಕಂಡು	೧೦೨.	ಪೋಪಳನ್ನೆಗವೆಡೆಯೊಳೆಣ್ಬರ್ ಕಳ್ಳರಂ ಕಂಡು (ಯೋ.ಪಾ)
*	'ಪೊಪನ್ನೆಗಾವೆಡೆಯೊಳ್' ಇದ್ದಿರಬಹುದೆ?		
೧೦೩.	ನಿನ್ನನ್ನನೆ ಪನ್ನೆರಬ್ಬರಿಸಂ ('ಪೋಲ್ಕುಂ' ಎಂಬ ಪದ ಬೇಕು)	೧೦೩.	ನಿನ್ನನೆ ಪೋಲ್ಕುಂ ಪನ್ನೆರಬ್ಬಿರಿಸಂ (ಯೋ.ಪಾ)
೧೦೪.	ಪೋದನೆಂದಱಿಯೆಮಾತನಂ	೧೦೪.	ಪೋದನೆಂದಱಿಯೆನಾತನಂ (ಯೋ.ಪಾ)
೧೦೫.	ನೆನೆದದಟ್ಟು(ಮುದ್ರಣ ದೋಷವಿರಬಹುದು)	೧೦೫.	ನೆನೆದಟ್ಟು (ಯೋ.ಪಾ)
೧೦೬.	ತಲೆಯೊಳ್ ತಱಿಯಂ (ಮುದ್ರಣ ದೋಷವಿರಬಹುದು)	೧೦೬.	ತಲೆಯೊಳ್ ಕಳಿಯಂ (ಯೋ.ಪಾ) (ಅರ್ಥದ ದೃಷ್ಟಿಯಿಂದ)
೧೦೭.	ಝುಳಂಬ	೧೦೭.	ಝುಣಂಬ (ಯೋ.ಪಾ)
೧೦೮.	ಜಳಂ ಪುಲಿಯ ಝುಳಂಬಮುಮಂ ತೊಟ್ಟು	೧೦೮.	ಪುಲಿಯ ಝುಣಂಬಮಂ ತೊಟ್ಟು (ಯೋ.ಪಾ)
೧೦೯.	ನಾಲಗೆಯಂ	೧೦೯.	ನಾಲಗೆಯಿಂ (ಯೋ.ಪಾ) (ಅರ್ಥದ ದೃಷ್ಟಿಯಿಂದ)
೧೧೦.	ಪೊಱಗಳಳೆದ ಭತ್ತಮಂ	೧೧೦.	ಪೊಱಗಣಳೆದ ಭತ್ತಮಂ (ಯೋ.ಪಾ)
೧೧೧.	ಕಿಱಿದಪ್ಪಂತಿರೆಯಂತು	೧೧೧.	ಕಿರಿದಪ್ಪಂತಿರೆ ಇಂತು (ಯೋ.ಪಾ)
೧೧೨.	ಪನ್ನೆರಡು ಬರಿಸಿಕ್ಕಾಂ (ಮುದ್ರಣ ದೋಷವಿರಬಹುದು)	೧೧೨.	ಪನ್ನೆರಡು ವರುಷಕ್ಕಾಂ (ಇದು 'ಬರಿಸಕ್ಕಾಂ'ಇದ್ದಿರಬಹುಧೆ?)
೧೧೩.	ಕವ್ವೊರ್ಬ್ವನ್ನ	೧೧೩.	ಕಬ್ಬೊರ್ಬನ್ನ (ವ>ಬ ಸಾಧ್ಯತೆಯ ಪ್ರಕಾರ ಎರಡೂ ರೂಪಗಳು ಸರಿ).
೧೧೪.	ಕೊಲದ	೧೧೪.	ಕೊಲ್ಲದ (ಯೋ.ಪಾ)
೧೧೫.	ಪರಿಗ್ರಹಣಮೆಂದೆಂತಯ್ದು	೧೧೫.	ಪರಿಗ್ರಹಮಿಂತಯ್ದು (ಯೋ.ಪಾ)
೧೧೬.	ನೀನಟ್ಕೊಡದನ್ನೆಗಂ (ಮುದ್ರಣ ದೋಷವಿರಬಹುದು)	೧೧೬.	ನೀನಟ್ಕಾಡದನ್ನೆಗಂ (ಯೋ.ಪಾ)

೧೧೭. ತೊವಲಂ ಪಿಡಿದಂಗಡಿಯೊಳಗಣಿಂದಮನ್ಯಾಯಂ ಭೋ ಅಬ್ರಹ್ಮಣ್ಯಂ ಭೋ ಎಂದಟುತ್ತುಮಂಗಡಿಯ ಜನಂಗಳ್ಗೆ

೧೧೮. ಮುನಿಪತಿಯಂ (ಯೋ.ಪಾ) ಘಚಭಜ ಪ್ರತಿಗಳಲ್ಲಿ 'ಮುನಿಪತಿಯಂ' ಎಂಬ ಪಾಠವಿರುವುದಾಗಿ ಡಿ.ಎಲ್.ಎನ್. ತಿಳಿಸಿದ್ದಾರೆ

೧೧೯. ಕುಳ್ಳಿರ್ದ್ದಿರ್ದೇನಾ

೧೨೦. ಭಟಾರರೆಂದರ್ ಈ ಕೂಸೆಂಬುದು

೧೨೧. ಬಾಹುಡಂ

೧೨೨. ಎಂದೊಡಾತನಿಲ್ಲೋಸಿದೆನೆನೆ

೧೨೩. ಬ್ರಾಹ್ಮಣ ಸೂತ್ರಂ

೧೨೪. ಮೊದಲಾಗೊಡೆಯವನೋದಿ ಋಗ್ವೇದಮನೋದಿ ಮತ್ತಂ ಸ್ವರ್ಣಭೇದದಿಂದ ಮಂತ್ರಸಹಿತಂ ಪದಕ್ರಮ ಭೇದದಿಂದಂ ಶತವದಸೂತ್ರಂ ಮೊದಲಾಗೆಲ್ಲಮಂ ಯುಜರ್ವೇದಮನುಚ್ಚರಿಸಿ ಯಂತೆ ಸಾಮಾಥರ್ವಣ ವೇದಮುಮಂ ಪದಿನೆಂಟು ಪುರಾಣಂಗಳುಂ ಪದಿನೆಂಟು ಧರ್ಮಸಂಹತಿಗಳುಂ ಮೀಮಾಂಸಾ ನ್ಯಾಯಶಾಸ್ತ್ರ ಮಿದೆಲ್ಲಮನೋದಿ ವ್ಯಾಕರಣಂ ಪ್ರಮಾಣಂ ಮೊದಲಾಗಿ ಮುಂ ಪೇಳ್ದೋದುಗಳೆಲ್ಲಮನೋದಿ ಕ್ರಿಯಾಕಾರಕ ಸಂಬಂಧದಿನೆಲ್ಲಮಂ ವಕ್ಕಾಣಿಸಿ ತೋಱಿದೊಡರಸು ಮೊದಲಾಗಿ

೧೧೭. ತೊವಲಂ ಪಿಡಿದಬ್ರಹ್ಮಣ್ಯಂ ಭೋ ಅಬ್ರಹ್ಮಣ್ಯಂ ಭೋ ಎಂದಟುತ್ತಮಂಗಡಿಯ ಜನಂಗಳ್ಗೆ (ಯೋ.ಫಾ)

೧೧೮. ಮುನೀಂದ್ರನಂ (ಇಬ್ಬರಲ್ಲಿ ಯಾವುದೋ ಒಬ್ಬ ಪ್ರತಿಕಾರ ಮಾಡಿಕೊಂಡಿರುವ ಮಾರ್ಪಾಟು)

೧೧೯. ಕುಳ್ಳಿರ್ದ್ದಿರ್ದೇನ್ (ಯೋ. ಪಾ)

೧೨೦. ಭಟ್ಟಾರಕರೀ ಕೂಸೆಂಬುದು (ಯೋ.ಪಾ)

೧೨೧. ಬಾಹಟಂ (ಯೋ.ಪಾ)

೧೨೨. ಎಂದೊಡಾತನಿಲ್ಲೋದಿಸಿದೆನೆಂದಂ (ಯೋ.ಪಾ)

೧೨೩. ಬ್ರಾಹ್ಮಣ ಆರಣ ಸೂತ್ರಂ (ಯೋ.ಪಾ)

೧೨೪. ಮೊದಲಾಗೊಡೆಯವನೋದಿ ಋಗ್ಯಜುಸ್ಸಾಮಾಥರ್ವಣ ವೇದಂಗಳಂ ಸ್ವರವರ್ಣಭೇದದಿಂದಂ ಮಂತ್ರ ಸಹಿತ ಪಾಳಿ ಪದಕ್ರಮ ಜಟೆ ಭೇದದಿಂದಂ ಶತಸೂತ್ರ ಮೊದಲಾಗೆಲ್ಲಮಂ ಯಥಾಕ್ರಮದಿಂದುಚ್ಚರಿಸಿ ಪದಿನೆಂಟು ಪುರಾಣಂಗಳುಂ ಪದಿನೆಂಟು ಧರ್ಮಸಂಹತಿಗಳುಂ ಮೀಮಾಂಸಾ ನ್ಯಾಯ ಸೂತ್ರಮಿವೆಲ್ಲಮನೋದಿ ಕ್ರಿಯಾಕಾರಕ ಸಂಬಂಧದಿಂದೆಲ್ಲಮಂ ವಕ್ಕಾಣಿಸಿ ತೋಱಿದೊಡರಸಂ ಮೊದಲಾಗಿ (ಗದ್ಯಬಂಧ ಮತ್ತು ಪಠ್ಯಕ್ರಮ ವಿಷಯಗಳ ನಿರೂಪಣೆಯ ಕ್ರಮವನ್ನು ನೋಡಿದರೆ ಡಿ.ಎಲ್‌ಎನ್. ಪಾಠವೇ ಸರಿಯೆಂದು ತೋರುತ್ತದೆ.)

೧೨೫. ಪೀಪಂದಿ

೧೨೬. ವಿಸ್ತರಂ ಪೇಟ್ದು

೧೨೭. ಮಿಥ್ಯಾತ್ವಾ

೧೨೮. ಆಯುಷ್ಯಮನೊಡೆಯರ್ ದೇವರಾಗಿ

೧೨೯. ಮುನ್ನಿದಾನಂ ಕಾರಣಮಾಗಿ (ಯೋ.ಪಾ)

೧೩೦. ಯಾರುಂ ಕೊಳಲಾಱದಿರ್ದ್ದಡೆ ರತ್ನಕಂಬಳಂಗಳಂ ಕೊಂಡು ಯಶೋಭದ್ರೆಗೆ ತೋಱಿದೊಡೆ ಲಕ್ಷದೀನಾರಂಗಳಂ ಕೊಟ್ಟು ರತ್ನಕಂಬಂಗಳಂ ಕೊಂಡು ತನ್ನ ಸೊಸೆಯರ್ ಮೂವತ್ತಿರ್ವ್ವರ್ಗ್ಗಂ ಮೂವತ್ತೆರಡು ತೊಡು ಚಮ್ಮಾವುಗೆಯಂ ಮಾಡಿಸಿ ಕೊಟ್ಟು ಸುಖದಿಂದಿರ್ದ್ದಳ್ ಅದನರಸಂ ಕೇಳ್ದು

೧೩೧. ನೇತ್ರವಟ್ಟೆ ಚೀನ ದುಕೂಲಾದಿ (ಯೋ.ಪಾ)

೧೩೨. ಮಣಿಗಣ ನಿಬದ್ಧಮಪ್ಪ (ಯೋ.ಪಾ)

೧೩೩. ಮಹಾ ಪ್ರಾಸಾದಮಂ ಪೊಕ್ಕು (ಯೋ.ಪಾ)

೧೩೪. ಕರಂ ಸಾಧು

೧೨೫. ಪೇಪಂದಿ (ಯೋ.ಪಾ)

೧೨೬. ಸವಿಸ್ತರಂ ಪೇಟ್ದು (ಯೋ.ಪಾ)

೧೨೭. ಮಿಥ್ಯಾತ್ವ (ಯೋ.ಪಾ.)

೧೨೮. ಆಯುಷ್ಯಮನೊಡೆಯರಾಗಿ ದೇವರಾಗಿ (ಯೋ.ಪಾ)

೧೨೯. ನ್ನಿದಾನಂ ಕಾರಣಮಾಗಿ

೧೩೦. ಯಾರುಂ ಕೊಳಲಾಱದಿರ್ದ್ದೊಡೆ ರತ್ನಕಂಬಂಗಳಂ ಕೊಂಡು ಪೋಗಿಯಶೋಭದ್ರೆಗೆ ತೋಱಿದೊಡೆ ಲಕ್ಷದೀನಾಂರಂಗಳಂ ಕೊಟ್ಟು ರತ್ನಕಂಬಳಂಗಳ್ ಕೊಂಡೋರಂದದಜೊಳಂ ನಾಲ್ಕು ಖಂಡವಾಗೆ ಮೂವತ್ತೆರಡು ಖಂಡಂಗಳಂ ಮಾಡಿ ಮೂವತ್ತಿರ್ವ್ವರ್ ಸೊಸೆವಿರ್ಕ್ಕಳ್ಗೆ ಪಚ್ಚುಗೊಟ್ಟೊಡವರುಂ ತಂತಮ್ಮ ಕೆರ್ಪುಗಳೊಳ್ ತಗುಳ್ಚಿದರೆಂಬ ಮಾತನರಸಂ ಕೇಳ್ದು (ಯೋ.ಪಾ)

೧೩೧. ನೇತ್ರವಟ್ಟು ದುಕೂಲ ಚೀನಾದಿ

೧೩೨. ಮಣಿಭದ್ರಮಪ್ಪ (ಗಣನಿಬದ್ಧ' ಎಂಬುದು ಡಿ.ಎಲ್.ಎನ್ ಆವೃತ್ತಿಯ ಅಡಿಟಿಪ್ಪಣಿಯಲ್ಲಿದೆ)

೧೩೩. ಪ್ರಾಸಾದಮಂ ಪೊಕ್ಕು

೧೩೪. ಕರಂ ಸಾದು (ಯೋ.ಪಾ)

೧೩೫. ಪ್ರತ್ಯಕ್ಷ ಕಾಮದೇವನನಪ್ಪಿಕೊಂಡು	೧೩೫. ಪ್ರತ್ಯಕ್ಷ ಕಾಮದೇವನನಪ್ಪಿಕೊಳ್ವಂತಪ್ಪಿಕೊಂಡು (ಯೋ.ಪಾ)
೧೩೬. ಕಟಿವಮನಲುಗಿಸುವುದುಮಂ	೧೩೬. ಕಟಿವಮನಲುಗಿಸುವುದುಮಂ (ಕಟಿಯನಲುಗಿಸಿವುದುಮಂ ಎಂಬುದು ಯೋಗ್ಯಪಾಠವಾಗಿರಬಹುದು)
	* 'ಜಚಭಜ' ಪ್ರತಿಗಳಲ್ಲಿ 'ಯನಲು' ಎಂಬ ಪಾಠವಿದ್ದು ಡಿ.ಎಲ್.ಎನ್. ಅದನ್ನು ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ.
೧೩೭. ಕಣ್ಣೀರ್ಗಳ್ ಬಪ್ಪುದುಮಂ (ಯೋ.ಪಾ)	೧೩೭. ಕಣ್ಣೀರ್ಗಳ್ ಸುರಿವುದುಮಂ
೧೩೮. ಕೇಳಿಗಳೀತಂಗೆ	೧೩೮. ಕಂಡೀಗಳೀತಂಗೆ (ಯೋ.ಪಾ)
೧೩೯. ಛಿದ್ರದ್ವಾರ	೧೩೯. ಛಿದ್ರಕದ್ವಾರ (ಯೋ.ಪಾ)
೧೪೦. ತೆಗೆದಂತಪ್ಪ	೧೪೦. ತೆಱೆದಂತಪ್ಪ (ಯೋ.ಪಾ)
೧೪೧. ಕಂಡಾಶ್ಚರ್ಯಭೂತನಾಗಿ	೧೪೧. ಕಂಡು ಮಹಾಶ್ಚರ್ಯಭೂತನಾಗಿ ('ಡಾ' ಎಂಬುದು 'ಖಘಚಭಜ' ಪ್ರತಿಗಳಲ್ಲಿದ್ದು ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿದೆ. ಆದರೆ 'ಮಹಾಶ್ಚರ್ಯಭೂತನಾಗಿ' ಎಂಬ ಪಾಠವು ಇಲ್ಲಿಯ ಸಂದರ್ಭಕ್ಕೆ ಹೆಚ್ಚು ಹೊಂದಿಕೆಯಾಗುತ್ತದೆ.
೧೪೨. ಕೊಟ್ಟಾಗಳವಂ ತೊಟ್ಟುಟ್ಟು (ಯೋ.ಪಾ)	೧೪೨. ಕೊಟ್ಟಾಗವಂ ತೊಟ್ಟುಟ್ಟು
೧೪೩. ಕಟಿಪ್ರದೇಶ ರೋಗಕ್ಕಂ (ಯೋ.ಪಾ)	೧೪೩. ಕಟಿಪ್ರದೇಶ ಭಾಗಕ್ಕಂ ('ಶದರೋ' ಎಂಬುದು 'ಘಚಭಜ' ಪ್ರತಿಗಳಲ್ಲಿರುವದನ್ನು ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ.
೧೪೪. ಈ ತಂಗಿವು (ಯೋ. ಪಾ)	೧೪೪. ಆತಂಗಿವು

೧೪೫. ಭ್ರಾತರಪ್ಪ (ಮುದ್ರಣದೋಷವಿರಬಹುದು)

೧೪೬. ಆಯುಷ್ಯಪ್ರಮಾಣಮೆಂದಱಿದು (ಯೋ.ಪಾ)

೧೪೭. ಚತುರ್‍ಕ್ಯಿಶಿ

೧೫೮. ನಡಪಾಡದೊಳಗಿರ್ದ್ದು

೧೪೯. ಪಲಕಾಲಂ ನೆಗಟಿಲ್ (ಮುದ್ರಣ ದೋಷವಿರಬಹುದು).

೧೫೦. ಮ್ಯತಕ ಸೆಲೆ

೧೫೧. ಬನ್ನಿಂ ಬಾ ಪೋಪಂ

೧೫೨. ಮೆಲ್ಪು

೧೫೩. ಪೂಜಿಸಿದ ದಿವ್ಯ ವಸ್ತುಗಳ್ (ಯೋ. ಪಾ)

೧೫೪. ಸಿದ್ಧಾಯತನಮಾದುದು (ಮು. ದೋಷವಿರಬಹುದು)

೧೪೫. ಭ್ರಾತರರಪ್ಪ (ಯೋ. ಪಾ)

೧೪೬. ಆಯುಷ್ಯ ಪ್ರಮಾಣಮನಱಿದು

೧೪೭. ಚತುರ್ದಶಿ (ಯೋ. ಪಾ)

೧೪೮. ನಡಪಾಡದೊಳಗಣಡಂಗಿರ್ದ್ದು (ಯೋ.ಪಾ)

೧೪೯. ಪಲಕಾಲಂ ನೆಗಟಲ್ (ಯೋ. ಪಾ)

೧೫೦. ಮೃತಕ ಸೆಜ್ಜೆ (ಯೋ. ಪಾ)

೧೫೧. ಬನ್ನಿಂ ಪೋಪಂ (ಯೋ.ಪಾ) 'ಖ' ಪ್ರತಿಯಲ್ಲಿ 'ಬನ್ನಿಂ ಬಾ ಪೋಪಂ' ಎಂಬ ಪಾಠವಿರುವುದನ್ನು ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ.

೧೫೨. ಮೆಲ್ಪಂ (ಯೋ.ಪಾ)

೧೫೫. ಪೂಜಿಸಿದ ವಸ್ತುಗಳ್

೧೫೪. ಸಿದ್ಧಾಯತನಮಾದುದು (ಯೋ.ಪಾ)

■

೨. ಸುಕೌಶಳ ಸ್ವಾಮಿಯ ಕಥೆ

೧. ಪೆಣ್ಬುಲಿಯಿಂದಂ ತಿನೆಬಿಟ್ಟೋನಾಗಿಯುಂ

* ಈ ಎರಡೂ ಪಾಠಗಳಿಗಿಂತ ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ಕೊಟ್ಟಿರುವ ತಿನೆಪಡುತಿರ್ದೋನಾಗಿಯುಂ ಎಂಬ ಘ,ಚ,ಛ ಪ್ರತಿಗಳಲ್ಲಿರುವ ಪಾಠ ಇಲ್ಲಿ ಹೆಚ್ಚು ಯೋಗ್ಯವೆನಿಸುತ್ತದೆ.

೨. ಇಂದ್ರನೊಳೋರಂತಪ್ಪ

* 'ಇಂದ್ರನೊಲೋರಂತಪ್ಪ' ಎಂಬ ಪಾಠ ಇಲ್ಲಿ ಹೊಂದಿಕೆಯಾಗುತ್ತದೆ.

೩. ಗುರುಭತ್ತೋ (ಯೋ. ಪಾ?)

೪. ಜೀವರೂಪಮಿದುಮಿಂತುಟತಿಶಯಮಪ್ಪ ರೂಪೆಯುಮಿಲ್ಲೆಂದರಸಂ

* ಡಿ.ಎಲ್.ಎನ್. ಆವೃತ್ತಿಯಲ್ಲಿರುವ 'ಜೀವವಿದ್ದ' ಎಂಬ ಪಾಠಕ್ಕಿಂತ ಹಂಪನಾ ಅವರು ಕೊಟ್ಟಿರುವ 'ಜೀವರೂಪ' ಎಂಬ ಪಾಠವು ಹೆಚ್ಚ ಯೋಗ್ಯವೆನಿಸುತ್ತದೆ. 'ಜೀವರೂಪ' ಎಂಬುದು ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿದೆ (ಕ.ಖ.ಗ ಪ್ರತಿಗಳಲ್ಲಿದೆ)

೫. ಪಲವು ಕಾಲಮನುಭವಿಸುತ್ತುಂ (ಯೋ. ಪಾ)

೬. ಪ್ರಮೋದಕೋದ್ಯಾವವನ ('ವ' ಇದ್ದುದು 'ನ' ಆಗಬೇಕು).

೨. ಸುಕೌಶಳ ಸ್ವಾಮಿಯ ಕಥೆ

೧. ತಿನೆ ಬ[ರ್ದಿ]ದೊಳನಾಗಿಯುಂ (ಯೋ.ಪಾ)

೨. ಇಂದ್ರನೊಳೋರಂತಪ್ಪ

೩. ಗುರುಭಕ್ತೋ

೪. ಜೀವವಿದ್ದ ಮಿಂತುಟತಿಶಯುವೆಂದರಸನಾಕೆಯ ರೂಪಿಂಗಚ್ಚರಿವಟ್ಟು ಪೊಗಟೆ

೫. ಪಲಕಾಲುವನುಭವಿಸುತ್ತಿರೆ

೬. ಪ್ರಮದೋದ್ಯಾನವನ (ಯೋ.ಪಾ.)

೭. ದೀಕ್ಷಾಪ್ರಸಾದಂ ಭಟಾರಾ ಎಂದು ಬೇಡಿ (ಇಲ್ಲಿ 'ಗೆಯ್ಯಿಂ' ಎಂಬುದು ಬರಬೇಕು.

೮. ಗಂಧಾರ ಪಾಂಡ್ಯ (ಯೋ.ಪಾ)

* 'ಗಂದಾರ' ಎಂಬ ಪಾಠವು 'ಛ' ಪ್ರತಿಯಲ್ಲಿದ್ದು ಡಿ.ಎಲ್.ಎನ್. ಅದನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ.

೯. ಪರದಿಯವಿದೆ

೧೦. ನೀಡುಂ ಸ್ವೇಚ್ಛೆಯಿಂ ಕ್ರೀಡಿಸುತ್ತುಂ ಮುಳುಗುತ್ತಂ ಮೂಡುತ್ತಂ ತಡಂ ಬಂದು (ಯೋ.ಪಾ)

೧೧. ಚುದನ ಮಲಯಪರ್ವತದ ತುತ್ತ ತುದಿಯಂ ಪರಿದೆಯ್ದಿ ಬಿರ್ದುದಾಮ್ಮಲಯವತಿ ಶತಖಂಡಮಾಗಿ ಸತ್ತತ್ತದಱ ಸತ್ತುದಂ

೧೨. ಎಮ್ಮರಸಿ (ಯೋ.ಪಾ?)

೭. ದೀಕ್ಷಾಪ್ರಸಾದಂ ಗೆಯ್ಯಿಂ ಭಟಾರಂ ಎಂದು ಬೇಡಿ (ಯೋ.ಪಾ)

೮. ಸುಂದರಪಾಂಡ್ಯ

೯. ಪರದಿಯವಿಧಿ (ಯೋ. ಪಾ)

೧೦. ನೀಡುಂ ಕ್ರೀಡಿಸುತ್ತಂ ತಡಂ ಬಂದು (ಡಿ.ಎಲ್.ಎನ್. ರಲ್ಲಿ ಪಾಠಭಾಗ ಕೈಬಿಟ್ಟು ಹೋಗಿದೆ.

* '+ಮಾಡುತಂ ಮುಳುಗುತ್ತಂ' ಎಂಬ ಪಾಠವು 'ಘ ಚಛ' ಪ್ರತಿಗಳಲ್ಲಿರುವುದನ್ನು ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ.

೧೧. ಚಂದನವಮಲಯ ಪರ್ವತದ ತುತ್ತ ತುದಿಯಂ ಬೇಗಂ ಪರಿದಡ್ಡರ್ದಂತಲ್ಲಿಂದಂ ತನ್ನನಿಕ್ಕಿ ಮಲಯವತಿ ಶತಖಂಡಮಾಗಿ ಬಿಟ್ಟು ಸತ್ತತ್ತದಱ ಸತ್ತುದಂ (ಡಿ.ಎಲ್.ಎನ್. ಹೆಚ್ಚು ಯೋಗ್ಯವೆನಿಸುತ್ತದೆ.)

೧೨. ಎಮ್ಮ ಸೆಟ್ಟಿತಿ

೧೩. ಬೆಸಲೆಯಾದರಾರುಮಱಿಯದೆ ನೆಲಮನೆಯೊಳಿರ್ಪ್ಪಳೆಂದು ಪೇೞ್ದೊಡಲ್ಲಿಯೋರ್ವ್ವಂ	೧೩. ಬೆಸಲೆಯಾದಳ್ ಕಿರುಂಡೆನಗಂ ಪೆತ್ತಳಾರುಮನಱಿಯಲೀಯದೆ ನೆಲಮನೆಯೊಳಡಂಗಿರ್ಪ್ಪಳೆಂದು ಪೇೞ್ದೊಡಾ ಮಾತನಲ್ಲಿಯೋರ್ವಂ (ಯೋ.ಪಾ) 'ಕಿರುಂಡೆನಗಂ' ಎಂಬುದರ ಅರ್ಥ ಸ್ಪಷ್ಟವಾಗುವುದಿಲ್ಲ. 'ಮಗನಂ ಪೆ' ಎಂಬುದು 'ಛ' ಪ್ರತಿಯಲ್ಲಿದ್ದು ಈ ಪಾಠವು 'ತಿರುಂಡಿ ಮಗನಂ ಪೆತ್ತಳ್' ಎಂದಿರಬಹುದೆ ? ಎಂದು ಡಿ.ಎಲ್.ಎನ್. ತರ್ಕಿಸಿದ್ದಾರೆ.
೧೪. ಕೂಸನವ್ಯಕ್ತನಂ ಬಿಸುಟೆಂತು ತಪಂಬಟ್ಟಂ	೧೪. ಕೂಸಂ ಸಿಸುವನವ್ಯಕ್ತನಂ ಬಿಸುಟ್ಟೆಂತು ತಪಂಬಟ್ಟೆ (ಯೋ.ಪಾ.)
೧೫. ವಾಹಳಿಯುಮಾನೆಯನೇಱುವ (ಯೋ.ಪಾ)	೧೫. ತೞಿಯುಮಾನೆಯನೇಱುವ
* ಡಿ.ಎಲ್.ಎನ್. ಅವರು 'ಘಚಛ' ಪ್ರತಿಗಳಲ್ಲಿ 'ಡಲುಂ ವೈಹಾಳಿ' ಎಂಬ ಪಾಠವಿರುವುದಾಗಿ ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ. ಆದಾಗ್ಯೂ ತಾವು 'ತಳಿಯುಮ್' ಎಂಬ ಪಾಠವನ್ನು ಬಳಸಿದ್ದಾರೆ. ಅರ್ಥಸ್ಪಷ್ಟತೆಯ ದೃಷ್ಟಿಯಿಂದ ಹಂಪನಾ ಆವೃತ್ತಿಯ ಪಾಠವೇ ಸರಿಯೆನ್ನಿಸುತ್ತದೆ. (ವಾಹಳಿ = ವೈಹಾಳಿ, ಕುದುರೆ ಸವಾರಿ)	
೧೬. ಗವಾಕ್ಷಜಾಲಾನ್ಮತದಿಂದಂ	೧೬. ಗವಾಕ್ಷಜಾಲಾಂತರದೊಳ್ (ಯೋ.ಪಾ)
೧೭. ಅಪೂರ್ವ ರೂಪು ಮುನ್ನೆಂದುಂ ಕಂಡರಿಯೆನೆಂದು	೧೭. ಅಪೂರ್ವ ರೂಪರಿನ್ನರನೆಂದುಂ ಕಂಡಱಿಯೆನೆಂದು (ಯೋ.ಪಾ) * 'ರೂಪರಿನ್ನ ನ್ನರನೆಂದುಂ' ಇದ್ದಿರಬಹುದೆ? (ಇನ್ನನ್ನರನ್ =ಇಂಥವರನ್ನು)

೧೮. ಈತನಂಗಡಿಯಲವಟು ಪೆಱುಕಿ ತಿಂದು

* 'ಗದಿಯಲವಟು ಪೆಱುಕಿ ತಿಂ ....' ಎಂಬುದು 'ಕಖ' ಪ್ರತಿಗಳಲ್ಲಿರುವಾಗಿ ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ. ಈ ಎರಡೂ ಪಾಠಗಳ ಅರ್ಥ ಅಸ್ಪಷ್ಟವಾಗಿದೆ.

೧೯. ಕೋವಣ ಕಪ್ಪಡಂ

೨೦. ಕೊಳದ ಪುಲ್ಲಂ ತೊಱೆವಂತನಿತುಮಂ

* ಅರ್ಥದ ದೃಷ್ಟಿಯಿಂದ ಈ ಎರಡೂ ರೂಪಗಳು ಸಮಾನವೆನಿಸುತ್ತವೆ. ಆದರೆ 'ಘಚಛ' ಪ್ರತಿಗಳಲ್ಲಿ 'ಳೆದ' ಎಂಬ ಪಾಠವಿರುವುದನ್ನು ನೋಡಿದರೆ ಇದು 'ಕೊಳೆದ (ಕೊಳೆತ) ಪುಲ್ಲಂ' ಯಾಕಾಗಿರಬಾರದು ಎನ್ನಿಸುತ್ತದೆ. (ಕೊಳೆತ ಹುಲ್ಲನ್ನು ಬಿಸಾಡಿದಂತೆ ಆತ ಮೂವತ್ತೆರಡು ಕೋಟಿ ಕಸವರವನ್ನು ತೊರೆದನೆಂಬ ಅರ್ಥ ಇದರಿಂದ ಪ್ರಾಪ್ತವಾಗುತ್ತದೆ.

೨೧. ತಪಂಬಟ್ಟಾತನನೇಳಿಸಿ (ಯೋ. ಪಾ) (ಏಳಿಸಿ =ಏಡಿಸಿ?) (ಏಡಿಸಿ ಕಾಡಿತ್ತು ಶಿವನ ಡಂಗುರ - ಎಂಬ ಪ್ರಯೋಗ)

೨೨. ಇನ್ನಾರೋಗಿಸಲ್ಕೇಟಿಮೆಂದು ನುಡಿದೊಡೆ

೨೩. ಪನಿಪುಲ್ಲ ಸಂಜೆ

* ಬಾಳೆಂಬುದು ಹುಲ್ಲಿನ ಮೇಲಿನ ಮಂಜುಹನಿಯಿದ್ದ ಹಾಗೆ, ಸೂರ್ಯಾಸ್ತವಿದ್ದ ಹಾಗೆ ಎಂಬ ಹೋಲಿಕೆಗಳು ಇಲ್ಲಿವೆ. 'ಪನಿಪುಲ್ಲಸಂಜೆ' ಎಂಬಲ್ಲಿ ಈ ಅರ್ಥ ಸಿಗುವುದಿಲ್ಲ ಕಾರಣ 'ಮುಗಿಲ' ಎಂಬುದನ್ನು ಸೇರಿಸೊಳ್ಳಬೇಕು.

೧೮. ಈತನಂಗಡಿಯಲವಡಂ ಪೆಱುಕಿ ತಿಂದು

೧೯. ಕೋವಣಕ್ಕಪ್ಪೊಡಂ (ಯೋ.ಪಾ)

೨೦. ಕೊಳದ ಪುಲ್ಲದರ್ಕ್ಕಂ ತೊಱೆವಂತನಿತುಮಂ

೨೧. ತಪಂಬಟ್ಟಾತನನಿಳಿಸಿ

೨೨. ಇನ್ನಾರೋಗಿಸಲ್ವೇೞ್ಕುಂ ಏಟಿ (ಯೋ.ಪಾ)

೨೩. ಪನಿಪುಲ್ಲ ಮುಗಿಲ ಸಂಜೆ (ಯೋ.ಪಾ)

೨೪. ಶುಭಪರಿಣಾಮದೊಳ್ ಕೂಡಿ ಮುಡಿಪಿ ಸೌಧರ್ಮಕಲ್ಪದೊಳ್ ಪುಟ್ಟಿತ್ತು ಸುಕೌಶಲಸ್ವಾಮಿರಿಷಿಯುಂ ತಿರಿಕೋಪಸರ್ಗ್ಗ ಮಂ ಸೈರಿಸಿ......

* ಪುಟ್ಟಿತ್ತು ಎಂಬುದರ ನಂತರ ಇರಬೇಕಾಗಿದ್ದ ಒಂದಿಷ್ಟು ಪಾಠವು (ಡಿ.ಎಲ್.ಎನ್. ಆವೃತ್ತಿಯಲ್ಲಿದೆ) ಹಂಪನಾ ಆವೃತ್ತಿಯಲ್ಲಿ ಕೈಬಿಟ್ಟು ಹೋಗಿರುವಂತಿದೆ. ಬಹುಶಃ ಹಂಪನಾ ಅವರು ಬಳಸಿದ ಪ್ರತಿಯ ಪ್ರತಿಕಾರನೇ ಈ ಭಾಗವನ್ನು ಬಿಟ್ಟಿರುವಂತೆ ತೋರುತ್ತದೆ. ಈ ಭಾಗವು 'ಕಖಗ' ಪ್ರತಿಗಳಲ್ಲಿ ಇಲ್ಲವೆಂಬುದನ್ನು ಡಿ.ಎಲ್.ಎನ್. ಅವರು ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ. ಇದನ್ನು ನೋಡಿದರೆ ಹಂಪನಾ ಅವರು ಬಳಸಿದ ಪ್ರತಿಯ ಪ್ರತಿಕಾರನು 'ಕಖಗ' ಈ ಮೂರರಲ್ಲಿ ಯಾವುದೋ ಒಂದನ್ನು ನೋಡಿ ಪ್ರತಿ ಮಾಡಿಕೊಂಡಿರಬಹುದು ಎನ್ನಿಸುತ್ತದೆ.

೨೫. ಪದ್ಮಾವತಿ ಕಂತಿಯರ್ ಕಂತಿಯರಾಗಿ ತಪಂಬಟ್ಟು ಗ್ರೋಗ್ರ ತಪಶ್ಚರಣಂಗೈದು ....

* ಇಲ್ಲಿ ತಪಂಬಟ್ಟು ಎಂಬುದರ ನಂತರ ಇರಬೇಕಾಗಿದ್ದ ಒಂದಿಷ್ಟು ಪಾಠವು ಹಂಪನಾ ಆವೃತ್ತಿಯಲ್ಲಿಲ್ಲ. ಅದು ಡಿ.ಎಲ್.ಇನ್. ಆವೃತ್ತಿಯಲ್ಲಿದೆ. ಆ ಭಾಗವನ್ನಿಲ್ಲಿ ಸೇರಿಸಿಕೊಳ್ಳಬೇಕು. ಈ ಭಾಗವು ಕಖಗ ಪ್ರತಿಗಳಲ್ಲಿ ಇಲ್ಲವೆಂಬುದನ್ನು ಡಿ.ಎಲ್.ಎನ್. ಅವರು ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ. ಹಂಪನಾ ಅವರು ಬಳಸಿದ ಪ್ರತಿಯ ಪ್ರತಿಕಾರನಿಂದಾಗಿ ಈ ಭಾಗ ಕೈತಪ್ಪಿ ಹೋಗಿರಬಹುದು.

೨೪. ಶುಭ ಪರಿಣಾಮದೊಳ್ ಕೂಡಿ ಮುಡಿಪಿ ಸೌಧರ್ಮ ಕಲ್ಪದೊಳ್ ಪುಟ್ಟಿತ್ತು ಸಿದ್ಧಾರ್ಥರಿಸಿಯರುಂ ಸಮ್ಯಗ್ದರ್ಶನ ಜ್ಞಾನಚಾರಿತ್ರಂಗಳಂ ಸಾಧಿಸಿ ಕರ್ಮಕ್ಷಯಂಗೈದು ಮೋಕ್ಷಮನೆಯ್ದಿದರ್ ಸುಕೌಶಳ ಸ್ವಾಮಿಯುಂ ತಿರಿಕೋಪಸರ್ಗಮಂ ಸೈರಿಸಿ.........

೨೫. ಪದ್ಮಾವತಿ ಕಂತಿಯರ್ ಕಂತಿಯರಾಗಿ ತಪಂಬಟ್ಟು ಸಮಾಧಿಮರಣದಿಂದಂ ಮುಡುಪಿ ಸೌಧರ್ಮಂ ಮೊದಲಾಗೊಡೆಯ ದೇವಲೋಕದೊಳ್ ಪುಟ್ಟಿದರಿತ್ತ ಗಂಧಭಾಜನಮುನಿಯುಂ ದ್ವಾದಶಾಂಗಚತುರ್ದಶ ಪೂರ್ವಪ್ವಾಗಮಮೆಲ್ಲಮಂ ಕಲ್ತು ಪಲಕಾಲಮು

■

೩. ಗಜಕುಮಾರನ ಕಥೆ

೧. ಗಾಹೆ ॥ ಸಮಂಖೀಳಾ ಭೋ ಇದ

೨. ಪಿಡಿದುಕೊಂಡು ಬರ್ಕೆ್ಮಾತಂಗಾತನ

೩. ತನ್ನಿಚ್ಛೆಯಿಂದಂಮೆಳೆದುಮೊಟ್ಟಯಿಸೆಯುಂ ಬಾಟುತ್ತಿರೆ 'ಯುಯ್ದು' ಎಂಬುದು 'ಖಚಛ' ಪ್ರತಿಗಳಲ್ಲಿಲ್ಲದಿರುವುದನ್ನು ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ.

೪. ಪೇಟ್ಟಲ್ಲಿಯಗಮ್ಯಾಗಮ್ಯಗಮನಂ ಗೆಯ್ದೊಡಂ (ಯೋ.ಪಾ)

೫. ಸಜ್ಜನಂಗಳೊಳ್ ಬದ್ಧಾರ್ತಂಯೆಯ್ದುವ ದುರ್ಗತಿ ಗಳೊಳಪ್ಪ ದುಃಖಂಗಳಂ

* ಇಲ್ಲಿ 'ಸಜ್ಜನ' ಎಂಬುದರ ಅರ್ಥ ಸರಿ ಹೊಂದುತ್ತದೆಯೆ ?

೬. ನಾಭಿವರೆಗಂ ಪಂದೊವಲ್ತುಲುಗಿದು

೭. ಏಕಹಸ್ತಪ್ರಮಾಣನಹಮಿಂದ್ರ ದೇವನಾದೊಂ

* ಈ ಭಾಗದಲ್ಲಿ ಇರಬೇಕಾದ ಪಾಠವು ಇಲ್ಲ. ಅದು ಡಿ.ಎಲ್.ಎನ್. ಆವೃತ್ತಿಯಲ್ಲಿದೆ. ಈ ಪಾಠವು 'ಕಖಗ' ಪ್ರತಿಗಳಲ್ಲಿ ಇಲ್ಲದಿರುವುದನ್ನು ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ. ಹಂಪನಾ ಅವರು ಬಳಸಿದ ಪ್ರತಿಕಾರನು 'ಕಖಗ'ಗಳಲ್ಲಿ ಯಾವುದೋ ಒಂದು ಪ್ರತಿಯನ್ನು ಬಳಸಿಕೊಂಡಿರಬಹುದೆಂಬುದಕ್ಕೆ ಇದು ಇನ್ನೊಂದು ಆಧಾರವನ್ನೊಸುತ್ತದೆ

೩. ಗಜಕುಮಾರನ ಕಥೆ

೧. ಸಮಂ ಖೀಲಾಭಾ ಇದ

೨. ಪಿಡಿದುಕೊಂಡು ಬರ್ಕುಮಾತಂಗೆಯಾತನ (ಯೋ. ಪಾ)

೩. ತನ್ನಿಚ್ಛೆಯಿಂದಂ ಮೊಟೆದು ಮೊಟ್ಟಯಿಸಿಯುಯ್ದು ಬಾಟುತ್ತಿರೆ (ಯೋ.ಪಾ)

೪. ಪೇಟ್ಟಲ್ಲಿಯಗಮ್ಯಾಗನಮಂ ಗೆಯ್ದೊಡಂ

೫. ಸಜ್ಜನಂಗಳೊಳ್ ಬರ್ದೋಡಮೆಯ್ದುವ ದುರ್ಗತಿಗಳೊಳಪ್ಪ ದುಃಖಂಗಳಂ

* ಇದು 'ದುಜ್ಜನ' ಎಂದಿರಬಹುದು. (ಅರ್ಥದ ದೃಷ್ಟಿಯಿಂದ)

೬. ನಾಭಿವರೆಗಂ ವಿದಾರಿಸಿ ಪಂದೊವಲ್ ಪೊರೆತಾಪಿನೆಗಂ (ಯೋ.ಪಾ)

೭. ಏಕಹಸ್ತಪ್ರಮಾಣನುಂ ಪುಂಡರೀಕ ವರ್ಣಂಗಳನೊಡೆಯೊನಹಮಿಂದ್ರದೇವನಾಗಿ ಪುಟ್ಟಿದೊಂ

■

೪. ಸನತ್ಕುಮಾರ ಚಕ್ರವರ್ತಿಯ ಕಥೆ

೧. ಪಟ್ಟವಾರ ತುರಂಗಮೆಂಬ ದುಷ್ಟಾಶ್ವಮಂ

* 'ವಾರತುರಗ' ಎಂಬ ಪಾಠವು 'ಗ' ಪ್ರತಿಯಲ್ಲಿರುವುದಾಗಿ ಅಡಿಟಿಪ್ಪಣಿಯಲ್ಲಿ ತಿಳಿಸಿರುವ ಡಿ.ಎಲ್.ಎನ್. ಅವರು ಮತ್ತೆ 'ವಾರಮರಗ' ಎಂಬ ಪಾಠವನ್ನು ಬಳಸಿರುವುದನ್ನು ನೋಡಿದರೆ 'ಮರಗ' ಎಂಬ ಹೆಸರಿನ ಕುದುರೆ ಎಂಬ ಅರ್ಥ ಬರುತ್ತದೆ. ಹಂಪನಾ ಬಳಸಿದ 'ತುರಗ', 'ದುಷ್ಟಾಶ್ವ' ಎಂಬಲ್ಲಿ ತುರಗ ಅಶ್ವ ಎರಡೂ ಒಂದೇ ಅರ್ಥ ಕೊಡುತ್ತವೆ.

೨. ಲಕ್ಷ್ಮೀಗೃಹಮೆಂಬುದ್ಯಾನವನಮಧ್ಯಸ್ಥಮಪ್ಪ ವಾಹಳಿಗೆಗೆ ಕ್ರೀಡಿಸಲ್ವೇಡಿ ಸಲ್ವೊಂ ಆ ದುಷ್ಟಾಶ್ವಮಂ ಕೊಸೆಗೊಳೆ ಗಾಳಿಯಿಂದಂ .... ಮಹಾಟವಿಯಂ ಪೊಕ್ಕೋಡಿತ್ತು ಇತ್ತ (ಯೋ. ಪಾ)

* ಹಂಪನಾ ಆವೃತ್ತಿಯಲ್ಲಿರುವ 'ವಾಹಳಿಗೆಗೆ ಕ್ರೀಡಿಸಲ್ವೇಡಿ' ಎಂಬ ಭಾಗವು ಡಿ.ಎಲ್.ಎನ್. ಆವೃತ್ತಿಯಲ್ಲಿ ಬಂದಿಲ್ಲ. ಆ ಪಾಠ ಇಲ್ಲಿ ಬೇಕೆನಿಸುತ್ತದೆ. ಗಾಳಿಯಂತೆ ಓಡಿತ್ತು ಎಂಬರ್ಥ ಹಂಪನಾ ಆವೃತ್ತಿಯಿಂದ ದೊರೆಯುತ್ತದೆ. ವೇಗದಿಂದ ಅಡವಿಯಲ್ಲಿ ಹೊಕ್ಕೊಡೆ ಇತ್ತ ಎಂಬ ಅರ್ಥ ಡಿ.ಎಲ್.ಎನ್. ಪ್ರತಿಯಿಂದ ದೊರೆಯುತ್ತದೆ 'ಇತ್ತ' ಎಂಬ ಹೆಚ್ಚುವರಿ ಪಾಠ ಹಂಪನಾ ಆವೃತ್ತಿಯಲ್ಲಿ ಬಂದಿರುವಂತಿದೆ.

೪. ಸನತ್ಕುಮಾರ ಚಕ್ರವರ್ತಿಯ ಕಥೆ

೧. ಪಟ್ಟವಾರಮರಗಮೆಂಬ ದುಷ್ಟಾಶ್ವಮಂ (ಯೋ:ಪಾ)

೨. ಲಕ್ಷ್ಮೀಗೃಹಮೆಂಬುದ್ಯಾನವನದ ಮಧ್ಯಸ್ಥಮಪ್ಪ ಸ್ಥಲದೊಳ್ ಸಲ್ವನಾ ದುಷ್ಟಾಶ್ವಮಂ ಕೊಸೆಗೊಳೆ ಗಾಳಿಯಿಂದಂ ಬೇಗಮಾಗಿ .... ಮಹಾಟವಿಯಂ ಪೊಕ್ಕೊಡಿತ್ತ

೩. ನೋಡಿ ನಾಡೆ ಗೆಂಟು ಪೋಗಿ (ಯೋ.ಪಾ)

* ಹಂಪನಾ ಅವರದು ಸರಿಯಾದ ಪಾಠ. 'ಗೆಟ್ಟು' ಎಂಬುದು 'ಗೆಂಟು' ಆಗಿದ್ದಿರಬಹುದೇ? ಎಂದು ಡಿ.ಎಲ್.ಎನ್. ತರ್ಕಿಸಿದ್ದರು.

೪. ಪೋಪ ದೆಸೆಯರಿಯದೆ (ಯೋ.ಪಾ.)

೫. ಪರಿವಾರ ಜನಂಗಳ್ (ಯೋ.ಪಾ)

* 'ಕಖಗ' ಪ್ರತಿಗಳಲ್ಲಿ 'ಪರಿವಾರ' ಎಂಬ ಪಾಠವಿರುವುದಾಗಿ ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ.

೬. ದಿವ್ಯಸ್ತ್ರೀಜನಂಗಳ್ ಅಪಾಹಟದಿಂ ಚಾಮರಮಿಕ್ಕೆ

೭. ನಿದ್ರಾಸುಖದೋಷಿಯಿದ್ರ್ದೊಂ (ಯೋಪಾ)

೮. ಶಿಳಾತಳದ ಮೇಗೆ ನಿದ್ರೆಗೆಯ್ದನಾಗಳ್

೯. ತ್ರಸ್ತಾಭೀತನಾಗಿ

೯.a. ಮಂತ್ರಿಯ ಪ್ರಯೋಗದಿಂದಂ

೧೦. ಕುಸುಮಂ ಬಾಣನ ಬಿಲ್ಲ ಬಲ್ಮೆ (ಮು. ದೋ)

೧೧. ತನ್ನಿಂ ತಾನಾಱವನ್ನಂ

೧೨. ಪ್ರಸಾದನಾದಿಗಳಂ (ಮುದ್ರಣ ದೋಷವಿರಬಹುದು)

೧೩. ಮತ್ತೆಯಾತನುಪದೇಶದಿಂದಂ (ಯೋಪಾ)

೧೪. ಕೆಲರಂಜಿ ತ್ರಸ್ತಾಭೀತರಾಗಿ ಓಡಿದರ್ಕೆಲರ್

೧೫. ನರಕತಿರಿಕಾದಿಗಳೊಳ್

೩. ನೋಡಿ ನಾಡೆಗೆಟ್ಟು ಪೋಗಿ

೪. ಪೋದ ದೆಸೆಯನರಿಯದೆ

೫. ಪರಿಜನಂಗಳ್

೬. ದಿವ್ಯ ಸ್ತ್ರೀ ಜನಂಗಳ್ ವಿಲಾಸದಿಂ ಚಾಮರಮಿಕ್ಕೆ (ಯೋ.ಪಾ)

೭. ನಿದ್ರಾಸುಖಮಂ ಪೆಱದೊನಾ

೮. ಶಿಳಾತಳದ ಮೇಗೆ ಪಟ್ಟಿರ್ದನಾಗಳ್(ಯೋ.ಪಾ)

೯. ತ್ರಸ್ತಾಭೀತನಾಗಿ (ಯೋ.ಪಾ)

೯.a. ಮಂತ್ರ ಪ್ರಯೋಗದಿಂದಂ (ಯೋ.ಪಾ)

೧೦. ಕುಸುಮ ಬಾಣನ ಬಿಲ್ಲಲ್ಮೆ (ಯೋ.ಪಾ)

೧೧. ತಣ್ಣಿತ್ತಾಗಿಯಾಱುವನ್ನೆಗಂ (ಯೋ.ಪಾ)

೧೨. ಪ್ರಸಾಧನಾದಿಗಳಂ (ಯೋ.ಪಾ)

೧೩. ಮತ್ತೆಯಾತನು ಪ್ರದೇಶದಿಂ (ಮುದ್ರಣದೋಷವಿರಬಹುದು)

೧೪. ಕೆಲರಂಜಿ ತ್ರಸ್ತಾಭಿಭೂತರಾಗಿಯೋಗಿ ಕೆಲರ್ (ಯೋ.ಪಾ)

೧೫. ತಿರ್ಯಙ್ನರಕಾದಿಗಳೊಳ್

* ಎರಡೂ ಪಾಠಗಳು ಒಂದೇ ಅರ್ಥ ಕೊಡುತ್ತವೆ. 'ನರಕತಿರಿಕಾದಿಗಳೊಳ್' ಎಂಬುದು 'ಕಗ' ಪ್ರತಿಗಳಲ್ಲಿರುವುದಾಗಿ ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ.	
೧೬. ಸೋರಾಮಣಿ ಎಂಬ ನಾಟಕಮಂ	೧೬. ಸೌದಾಮಿನಿ ಎಂಬ ನಾಟಕಮಂ (ಯೋ. ಪಾ)
೧೭. ವರ್ಧಮಾನಮೆಂಬ ನೋಂಪಿಯಂ	೧೭. ಆಚಾಮ್ಲವರ್ಧಮಾನಮೆಂಬ ನೋಂಪಿಯಂ (ಯೋ.ಪಾ)
* 'ಕಗ' ಪ್ರತಿಗಳಲ್ಲಿ 'ಯಾಯಲ ವರ್ಧಮಾನ' ಎಂಬ ಪಾಠವಿರುವುದಾಗಿ ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ.	
೧೮. ಭೋಗೋಪಭೋಗಾಽ ಭವದ್ (ಯೋ.ಪಾ)	೧೮. ಭೋಗೋಪಭೋಗಾ ವಪುಃ
೧೯. ಗಾಹೆ ॥ ಸ್ಫುಟಮಾತ್ಮನಸ್ಸಮುದಿತ	೧೯. ಸ್ಫುಟಮಾತ್ಮನಸ್ಸಮುದಿತೋ (ಯೋ. ಪಾ)
೨೦. ಗಾಹೆ ॥ಮಧ್ಯೇಽಪ್ಯಂತೇ ಖಳೋಂತಕಃ	೨೦. ಮಧ್ಯೇಪ್ಯಂತೇ ಖಳಾಂತಕಃ (ಯೋ.ಪಾ)
೨೧. ಗಾಹೆ ॥ ಇತಿ ಚಕ್ರಸ್ಯ ಸಂಭ್ರಾಂತಿ	೨೧. ಇತಿ ಚಕ್ರೈಕ ಸಂಭ್ರಾಂತಿ (ಯೋ.ಪಾ)
೨೨. ಉಗುಟಿ ಸೀವರಂಗಳ್	೨೨. ಉಗುಟಿ ಸೀಕರಂಗಳ್ (ಯೋ.ಪಾ)
೨೪. ಮುದ್ರ್ದ ಬಾಯಟ್ಟೆಪ್ಪೊಡೆಮಗಾಗೆ (ಮುದ್ರಣ ದೋಷವಿರಬಹುದು)	೨೩. ಮದ್ದುರ್ ಬಾಟ್ಟೆಯಪ್ಪೊಡೆಮಗಾಮೆ (ಯೋ.ಪಾ)
೨೪. ಕುತ್ತಮಂ ಕಿಡಿಸಲಾಮಾಜೆಮಾ	೨೪. ಕುತ್ತಮಂ ಕಿಡಿಸಲ್ಕಾಮಾಜೆಮಾ (ಯೋ.ಪಾ)

೫. ಅಣ್ಣಿಕಾಪುತ್ರನ ಕಥೆ

೧. ಗಾಹೆ ॥ ಅಣ್ಣಿಯಾಪುತ್ತೋ (ಯೋ.ಪಾ)

* 'ಅಣ್ಣಿಕಾ' ಎಂಬ ಪಾಠವು 'ಸ' ಪ್ರತಿಯಲ್ಲಿರುವುದನ್ನು ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ.

೨. ಅದೆಂತೆಂದೊಡೆ ಮಗಧೆಯೆಂಬುದು ನಾಡಲ್ಲಿ

* ಪಠ್ಯದ ಈ ಭಾಗ ಹಂಪನಾ ಆವೃತ್ತಿಯಲ್ಲಿ ಕೈಬಿಟ್ಟು ಹೋಗಿದ್ದು ಅದನ್ನು ಸೇರಿಸಿಕೊಳ್ಳುವುದು ಸೂಕ್ತ.

೩. ದಮಸೂರಿಗಳೆಂಬ

* ಇಬ್ಬರೂ ವಿದ್ವಾಂಸರಲ್ಲಿ 'ದಮಸೂರಿಗಳೆಂಬ' ಎಂಬುದು ಸಮಾನಪಾಠವಾಗಿದೆ. 'ಘ' ಪ್ರತಿಯಲ್ಲಿ 'ದಮದರ' ಎಂಬ, 'ಚ' ಪ್ರತಿಯಲ್ಲಿ 'ದಮವರ' ಎಂಬ ಮತ್ತು 'ಛ' ಪ್ರತಿಯಲ್ಲಿ 'ಯಮಧರ' ಎಂಬ ಪಾಠವಿರುವುದಾಗಿ ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ. ಇದನ್ನು ನೋಡಿದರೆ 'ಯಮಧರಸೂರಿ' ಎಂಬುದು ಮೂಲಪಾಠವಾಗಿದ್ದಿತೆಂದು ತರ್ಕ ಮಾಡಬಹುದಾಗಿದೆ.

೪. ಬುದ್ಧಿನೊಡೆಯೊಂ (ಇದು ಮುದ್ರಣ ದೋಷವಾಗಿರಬಹುದು)

೫. ಅಣ್ಣಿಕಾಪುತ್ರನ ಕಥೆ

೧. [ಏಣಿಯಾ] ಪುತ್ತೋ

೨. ಅದೆಂತೆಂದೊಡೆ ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ

೩. ದಮಸೂರಿಗಳೆಂಬ

೪. ಬುದ್ಧಿಯನೊಡೆಯೊಂ (ಯೋ.ಪಾ.)

■

೬. ಭದ್ರಬಾಹು ಭಟಾರರ ಕಥೆ

೧. ಗಾಹೆ ।।ತಿಗಿಂಛ್ಯಾಏಪಿ ಪಡಿವಣ್ಣೋ

೨. ಪುಂಡ್ರವರ್ಧಮೆಂಬುದು (ಇದು ಮುದ್ರಣ ದೋಷವಾಗಿರಬಹುದು)

೩. * 'ಪೊಟಿಲೊಳ್ ನೆಗಟ್ಬಿ ನೆಗಟ್ದ ಪಂಡಿತರ್ಕ್ಗಳೊಡನೆ ಬಾದಂಗೆಯ್ದುವರಂ ಗೆಲ್ದು ದಶದೆಸೆಗಳೊಳೆಲ್ಲಂ ನಿನ್ನ ಪಾಂಡಿತ್ಯದ ಯಶಂ ಪರಪಿ ನಿನ್ನನಾಮೊಡಗೊಂಡು ಬಂದುದಕ್ಕೆ' ಎಂಬ ಭಾಗದ ನಂತರ ತಾಯ್ತ್ತಂದೆಯುಮಂ ಕಂಡು' 'ಪೊಟಿಲೊಳ್ ನೆಗಟ್ದ ಪಂಡಿತರ್ಕ್ಗಳೊಡನೆ ಬಾದಂಗೆಯ್ದು ಗೆಲ್ದು ದಶ ದಿಶೆಗಳೆಲ್ಲಂ ತನ್ನ ಪಾಂಡಿತ್ಯದ ಯಶಮಂ ಪರಪಿ' ಎಂಬ ಪಾಠವು ಪುನರಾವರ್ತನೆಗೊಂಡಿದೆ ಅದನ್ನು ಕೈಬಿಡಬೇಕು.

೪. ತಾಯ್ತ್ತಂದೆಗಂ ಸಂತೋಷಂ ಮಾಡಿ ಅವರನೊಡಂಬಡಿಸಿ (ಯೋ.ಪಾ.)

೬. ಭದ್ರಬಾಹು ಭಟಾರರ ಕಥೆ

೧. ಗಾಹೆ ।। ತಿಗಿಂಛ್ಯಾವಿ ಪಡಿವಣ್ಣೋ

೨. ಪುಂಡ್ರವರ್ಧನಮೆಂಬುದು (ಯೋ.ಪಾ)

೩.

- - - - - - - - - - - - - -

- - - - - - - - - - - - - -

- - - - - - - - - - - - - -

೪. ತಾಯ್ತ್ತಂದೆಗಂ ಸಂತೋಷಂ ಮಾಡಿಯವರುಂ ಬಿಡಿಸಿಯೊಡಂಬಡಿಸಿ

೫. ಶ್ಲೋಕ ॥ ಸಾಳಿಕೂರಂ ಚ ಮಸಿಂ ಘೃತಂ
* 'ಕಟಿಮೆಯ ಕೂಳಂ' ಎಂಬುದು ಮೂಲಪಾಠವಾಗಿದ್ದಿರಬಹುದು. 'ಶಾಲಿ', 'ಸಾಳಿ' ಎಂಬುದು ಕಟಿವೆಯ ಸಂವಾದಿರೂಪಗಳಾಗಿರಬಹುದು. 'ಸಾಳಿ' ಎಂಬುದು ಭತ್ತದ ಒಂದು ತಳಿಯಾಗಿದೆ. 'ಮತಿಂ' ಎಂಬುದು ತಪ್ಪಾಗಿ 'ಮಸಿಂ' ಎಂದಾಗಿರಬಹುದು. ಶ್ರೇಷ್ಠವಾದ ಅಕ್ಕಿಯ ಅನ್ನ, ತೊವ್ವೆ ಮತ್ತು ತುಪ್ಪವನ್ನು ಉಣಲಿಕ್ಕಿ ಕುಮಾರನನ್ನು ಬುದ್ಧಿವಂತನನ್ನಾಗಿ ಮಾಡಿರಿ ಎಂಬುದು ಇಲ್ಲಿಯ ಅರ್ಥ. 'ಅಧ್ಯಾಪಯೇತ್' ಎಂಬುದನ್ನು ವಾಚಕನು 'ಅಂಧಾಪಯೇತ್' ಎಂದು ತಪ್ಪಾಗಿ ವಾಚಿಸಿದುದನ್ನು ಇಲ್ಲಿ ಹೇಳಲಾಗಿದೆ. ರಾಜನ ಓಲೆಯ ಮೂಲಪಾಠವನ್ನು ಕವಿ ಇಲ್ಲಿ ಕೊಟ್ಟಿಲ್ಲ.

೬. ಕೆಲದೂರುಗಳಂ ನಾಲ್ವೆಡೆಯುಮಂ
೭. ಕಷ್ಟುಗಲಿಯವಪ್ಪ (ಯೋ.ಪಾ.)
'ಘ ಚ ಛ' ಪ್ರತಿಗಳಲ್ಲಿ 'ಗಲಿಗಳ' ಎಂಬ ಪಾಠವಿದೆಯೆಂದು ಡಿ. ಎಲ್. ಎನ್. ತಿಳಿಸಿದ್ದಾರೆ.
೮. ತಮ್ಮೊಳ್ ಪೊಱಸಾರ್ದು ಪೆಱಪಿಂಗಿ ಪೋಪುದುಮಂ

೫. ಶಾಲಿಂ ಕೂರಂ ಚ ಮತಿಂ ಘೃತಂ
- - - - - - - - - - - - -
- - - - - - - - - - - - -
- - - - - - - - - - - - -

೬. ಕೆಲದೂರ್ಗಳುಮಂ ನಾಟ್ಗಳುಮಂ (ಯೋ.ಪಾ.)
೭. ಕಡುಗಡ್ಡಿಯವಪ್ಪ

೮. ತಮ್ಮೊಳ್ ಪೋರಲ್ ಸಾರ್ದು ಪೆಱಪಿಂಗಿ ಪೋದುದುಮಂ (ಯೋ.ಪಾ.)

೯. ಬೇಱೆಯೋದುಗಳ್ ಪಲವಕ್ಕುಂ (ಯೋ.ಪಾ.)

* ಸದ್ಧರ್ಮದ ಕ್ಷೇತ್ರದಲ್ಲಿ ಬೇರೆ ಓದುಗಳು (ಬೇರೆ ಶಾಸ್ತ್ರಗಳು?) ಹುಟ್ಟಿಕೊಳ್ಳುತ್ತವೆಯೆಂಬ ಅರ್ಥ ಹಂಪನಾ ಆವೃತ್ತಿಯಲ್ಲಿ ಹೊರಡುತ್ತದೆ. ಈ ಮೊದಲಿನ ಸದ್ಧರ್ಮದ ಬೆಳೆಯ ನಡುವೆ ಹುಲ್ಲುಗಳು (ಕೀಳುಜಾತಿಗಳು) ಬೆಳೆಯುತ್ತವೆ ಎಂಬ ಅರ್ಥ ಡಿ.ಎಲ್.ಎನ್. ಪಾಠದಿಂದ ಹೊರಡುತ್ತದೆ. ಇಲ್ಲಿ ಹಂಪನಾ ಪಾಠವೇ ಹೆಚ್ಚು ಸೂಕ್ತವೆನಿಸುತ್ತದೆ. ಆದರೆ ಘಟಛ ಪ್ರತಿಗಳಲ್ಲಿರುವ 'ಮಾರ್ಗಂ' ಎಂಬ ಪಾಠ ಇಲ್ಲಿ ಇದ್ದಿರಬಹುದೆ?

೧೦. ಕುಂದಿಯುಪದೇಶತನು ಮಾತ್ರಮೆ ನಿಲ್ಕುಂ

* ಎರಡೂ ಕಡೆ 'ತನುಮಾತ್ರಮೆ' ಎಂಬ ಪಾಠವಿದೆಯಾದರೂ, 'ಘಟಛ ಪ್ರತಿಗಳಲ್ಲಿದೆಯೆಂದು ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ತಿಳಿಸಿರುವ 'ತನ್ಮಾತ್ರಮೆಯಿಂ' ಎಂಬ ಪಾಠ ಇಲ್ಲಿ ಹೊಂದಿಕೆಯಾಗುತ್ತದೆಯೆಂಬುದು ನಮ್ಮ ಅಭಿಪ್ರಾಯ. ಕೇವಲ ಅಲ್ಪ ಪ್ರಮಾಣದ ಧರ್ಮ ಮಾತ್ರ ಉಳಿಯುತ್ತದೆಯೆಂಬ ಭಾವ ಇಲ್ಲಿರುವಂತೆ ತೋರುತ್ತದೆ.

೧೧. ನಟ್ಟನಡುವಾದವೊಣಗಿದ ನೀರನೊಡೆಯ ಕೆಱೆಯಂ ಕಂಡುದಱಿಂ

೧೨. ಮಧ್ಯದೇಶದೊಳಿನ್ನ ನೆಗಟ್ತೆಯಾಗದು

ಈ ಎರಡರ ಅರ್ಥ ಅಸ್ಪಷ್ಟವಾಗಿದೆ. 'ಮಧ್ಯದೇಶದ ಒಳ್ಪು ಇನ್ನು ನೆಗಟ್ತೆಯಾಗದು' ಎಂದಿದ್ದಿರಬಹುದೆ ?

೯. ಬೆಳೆಯೊಳ್ ಪುಲ್ಗಳ್ ಪಲವಕ್ಕುಂ

- - - - - - - - - - - - - -

- - - - - - - - - - - - - -

- - - - - - - - - - - - - -

- - - - - - - - - - - - - -

೧೦. ಕುಂದಿಯುಪದೇಶ ತನುಮಾತ್ರಮೆ ನಿಲ್ಕುಂ

೧೧. ನೀರಿಲ್ಲದೆ ಕೆರೆಯ ನಡುವಂ ಕಂಡುದಱಿಂ (ಯೋ.ಪಾ)

೧೨. ಮಧ್ಯದೇಶದೊಳ್ ಪಿನ್ನ ನೆಗಟ್ತೆಯಾಗದು

೧೩. ಸಮುದ್ರವೇಳೆ ತನ್ನ ಮರ್ಯಾದೆಯಂ ಮಿಕ್ಕು ಪರಿದುದಂ

* 'ಕಗ'ಪ್ರತಿಗಳಲ್ಲಿರುವ ಪಾಠವೇ ಹಂಪನಾ ಆವೃತ್ತಿಯಲ್ಲಿದೆ.

೧೪. ಸತ್ಯಮುಂ ಬಲಮುಂ

೧೫. ಅನ್ಯತಂಗತಾಃ ಕತದನೇ ಲೋಭಂಗತಾಃ ಸ್ವಾರ್ಥಿವಾಃ
ಪುತ್ರಸ್ಯಾಪಿನ ವಿಶ್ವಸಂತಿಪಿತರಃ ಕಷ್ಟಂ ಯುಗಂ ವರ್ತತೇ ||

* ಇಲ್ಲಿ ಬಂದಿರುವ ಎರಡೂ ಶ್ಲೋಕಗಳು ಬೇರೆ ಬೇರೆಯೆಂದು ತೋರುತ್ತದೆ.

೧೬. ನಿರ್ವೀರ್ಯಾ ಪೃಥಿವೀ ನಿರೌಷಧಿರಸಾ ನೀಚಾ ಮಹತ್ತ್ವಂ ಗತಾಃ
ರಾಜಾನೋರ್ಥಪರಾ ನಧರ್ಮನಿರತಾ ವಿಪ್ರಾ ವಿಕರ್ಮಸ್ಥಿತಾಃ ||

* ಈ ಶ್ಲೋಕವು ಡಿ.ಎಲ್.ಎನ್. ಅವರಲ್ಲಿ ಈ ಭಾಗದಲ್ಲಿನ ಮೂರನೆಯ ಶ್ಲೋಕವಾಗಿ ಬಂದಿದೆ. ಹಂಪನಾ ಅವರಲ್ಲಿ ಎರಡನೆಯ ಶ್ಲೋಕವಾಗಿ ಬಂದಿದೆ.

೧೭. ಭಾರ್ಯಾಭರ್ತರಿ ..... ಎಂಬ ಶ್ಲೋಕವು ಡಿ.ಎಲ್.ಎನ್, ಅವರಲ್ಲಿ ಈ ಭಾಗದಲ್ಲಿನ ಮೂರನೆಯ ವೃತ್ತದ ಉತ್ತರಾರ್ಧವಾಗಿ ಬಂದಿದೆ.

೧೮. ಈ ಶ್ಲೋಕ ಹಂಪನಾ ಆವೃತ್ತಿಯಲ್ಲಿ ಇಲ್ಲ. ಇದು ಸೇರಬೇಕು.

೧೩. ಸಮುದ್ರಂ ಮೇಱೆದಪ್ಪುವುದಂ (ಯೋ.ಪಾ)

೧೪. ಸತ್ಯಮುಂ ಮನೋಬಲಮುಂ (ಯೋ.ಪಾ)

೧೫. ಅನ್ಯತವಚನೇ ನಿತ್ಯಭ್ಯಾಸಃ ಖಲೇಷು ವಿದಗ್ಧತಾ
ಗುಣವತಿ ಜನೇ ವೈರಾಬುದ್ಧಿಃ ಖಲೇಷ್ವತಿಗೌರವಂ ||

೧೬. ನಿರ್ವೀರ್ಯಾ ಪೃಥಿವೀಗತೌಷಧಿರಸಾ ನೀಚಾ ಮಹತ್ವಂ ಗತಾ।
ರಾಜಾನೋರ್ಥಃಪರಾಃ ಕುಧರ್ಮನಿರತಾ ವಿಪ್ರಾ ವಿಕರ್ಮಸ್ಥಿತಾಃ||

೧೭. -------------
----

೧೮. ಯತಿಶು ನಿಯತಂ ವಾಕ್ಪಾರುಷ್ಯಂ ವಿಪತ್ತಿಷು ಚ ಕ್ರಿಯಾ
ಕಲಿಯುಗ ಮಹಾರಾಜಸ್ಯೈತಾನಿ ರಾಜವಿಭೂತಯಃ ||

೧೯.	ಈ ಶ್ಲೋಕ ಹಂಪನಾ ಆವೃತ್ತಿಯಲ್ಲಿ ಇಲ್ಲ. ಇದು ಸೇರಬೇಕು.	೧೯.	ಕಾಲೇಸಂಪ್ರತಿವರ್ತತೇ ಕಲಿಯುಗೇ ಸತ್ಯಾ ನರಾ ದುರ್ಲಭಾ ನಾನಾ ಚೋರಗಣಾ ಮುಷಂತಿ ಪೃಥಿವೀಮಾರ್ಯೋ ಜನಃ ಕ್ಷೀಯತೇ ॥
೨೦.	ಈ ಶ್ಲೋಕ ಹಂಪನಾ ಆವೃತ್ತಿಯಲ್ಲಿ ಇಲ್ಲ. ಇದು ಸೇರಬೇಕು.	೨೦.	ದೇವಾಶ್ಚ ಪ್ರಲಯಂಗತಾಃ ಕರಭವಲ್ಲೌಲ್ಯಂ ಗತಾಃ ಪಾರ್ಥಿವಾಃ ಪುತ್ರಸ್ಯಾಪಿ ನ ವಿಶ್ವಸಂತಿ ಪಿತರಃ ಕಷ್ಟಂ ಯುಗಂ ವರ್ತತೇ ॥
೨೧.	ಅಬ್ಬಾ ನೀವುಮುವೊರ್ವ್ವರೆಯಾವುಮುವೊರ್ವ್ವರೆ ಪೞರಾರಾನುಮಿಲ್ಲೆಂತು (ಯೋ.ಪಾ)	೨೧.	ನೀನೋರ್ವಳೆಯೆ ಪೞರಾರುಮಿಲ್ಲೆಂತು -
*	'ನೀಮುಮೊರ್ವ್ವರೆ ಆಮುಮೊರ್ವರೆ' ಎಂಬ ಪಾಠವು 'ಗ,ಘ,ಚ,ಛ' ಪ್ರತಿಗಳಲ್ಲಿದ್ದು ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ.		
೨೨.	ಮಾನಸರ ಬರವುಂ ಪೋಗುವಂತೆ ಕಂಡು	೨೨.	ಮಾನಸರ ಬರುವುಮಂ ಪೋಗುಮಂ (ಯೋ.ಪಾ)
೨೩.	ಪೋಟಲಂ ಕಂಡಮಿಲ್ಲೆಂದು (ಮುದ್ರಣ ದೋಷವಿರಬಹುದು)	೨೩.	ಪೊಟಲಂ ಕಂಡೆಮಿಲ್ಲೆಂದು (ಯೋ. ಪಾ)
೨೪.	ತಿಮುಳನಾಟ್ಗೆ	೨೪.	ತಿಮುಳನಾಟ್ಗೆ
*	ಡಿ.ಎಲ್.ಎನ್. ಆವೃತ್ತಿಯಲ್ಲೂ 'ತಿಮುಳನಾಟ್ಗೆ' ಎಂದೇ ಇದೆ. ಆದರೆ ಅವರು ಅಡಿಟಿಪ್ಪಣಿಯಲ್ಲಿ ಕೊಟ್ಟಿರುವ 'ಛ' ಪ್ರತಿಯ 'ದ್ರವಿಳ ನಾಡಿಂಗೆ' ಎಂಬ ಪಾಠವನ್ನು ಇಲ್ಲಿ ಬಳಸಬಹುದು. (ತಿಮುಳ =ದ್ರವಿಳ)		
೨೫.	ಕೆಮ್ಮಗೆಂದಿರೆಂದೊಡೆ (ಮುದ್ರಣ ದೋಷವಿರಬಹುದು)	೨೫.	ಕೆಮ್ಮನೇಕೆಮ್ಮಂ ತಾಗಿದಪಿರೆಂದೊಡೆ (ಯೋ.ಪಾ)
೨೬.	ನಾಮುಂ ಸಂಕ್ಲೇಶಂಬಡದಿರಿಂದಿನ	೨೬.	ನೀಮುಂ ಸಂಕ್ಲೇಶಂಬಡದಿರಿಂದಿನ (ಯೋ.ಪಾ) (ಅರ್ಥವ್ಯತ್ಯಾಸ)

೨೭.	ಇವರಿಂಬುಕೆಯ್ವುಮೆಂದಿರ್ದ್ದೊಡೆ	ಇವರೆಂಬುದನಿಂಬುಕೆಯ್ವುವೆಂದಿದ್ರ್ದೊಡೆ (ಯೋ.ಪಾ) (ಅರ್ಥವ್ಯತ್ಯಾಸ)
೨೮.	ದೇವರಂ ಬಂದಿಸಲೆದ್ರ್ದೊಡನಿಬರುಂ	ದೇವರಂ ಬಂದಿಸವೇಟ್ಟೊಡನಿಬರುಂ (ಯೋ.ಪಾ)
೨೯.	ಭಟಾರಾ ಲವಟುಗಳ ಕೈಯೊಳ್ ಪಗಲುಣಲುಮಡಲುಂ ಪೆಱಲಾಗ	ಡಿ.ಎಲ್.ಎನ್. ರಲ್ಲಿಯೂ ಇದೇ ಪಾಠವಿದ್ದು ಅರ್ಥ ಸ್ಪಷ್ಟವಾಗುವುದಿಲ್ಲ. ಅವರು ಅಡಿಟಿಪ್ಪಣಿಯಲ್ಲಿ ಕೊಟ್ಟಿರುವ ಪಾಠಗಳಲ್ಲಿ ಒಂದನ್ನು ಹೊಂದಿಸಿಕೊಳ್ಳಲೂ ಆಗುವುದಿಲ್ಲ.
೩೦.	ಪಸವು ಗಱಿವನ್ನಗಂ (ಕ > ಗ) (ಮುದ್ರಣ ದೋಷ)	ಪಸವು ಕಱಿವನ್ನೆಗಂ (ಯೋ.ಪಾ)
೩೧.	ಮಹಾದೇವಿ ವಿಶ್ವಾಮಿನಿಯೆಂಬೊಳ್ (ಕಖಗ ಪ್ರತಿಗಳಲ್ಲಿ 'ವಿಶ್ವಾ' ಎಂಬ ಪಾಠವಿರುವುದಾಗಿ ಡಿ.ಎಲ್.ಎನ್ ತಿಳಿಸಿದ್ದಾರೆ.) (ಯೋ.ಪಾ)	ಮಹಾದೇವಿ ಸ್ವಾಮಿನಿಯೆಂಬೊಳ್
೩೨.	ಬಱಿಕ್ಕೆ ಸಯ್ಯುಟ್ಟುಕೊಂಡಿರಿ.	ಪಱಿಯಂ ಸಯ್ಯುಟ್ಟುಕೊಂಡಿರಿ.
*.	ಇದು 'ಪಾಱಿಯಂ' ಎಂದಿರಬಹುದು.	
೩೩.	ಕಥೆಯಂ ಪೇೞ್ದು ಪೆಱರುಂ	ಕಥೆಪೇೞ್ದುದು. ಇದು ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ಕೊಟ್ಟಿರುವ 'ಕಥೆಯಂ ಕೇಳ್ದು ಪೆಱರುಂ' ಆಗಿರಬಹುದು. (ಯೋ.ಪಾ)
೩೪.	ಭವ್ಯರ್ಕಳ್ಗುಂ ಪಸಿವಿಂದಂ ಮುಡಿಪಿ (ಹಂಪನಾ ಆವೃತ್ತಿಯಲ್ಲಿ ಇಲ್ಲಿಯ ಪಾಠ ಕೈಬಿಟ್ಟು ಹೋಗಿದೆ. ಅದು ಇಲ್ಲಿ ಸೇರಬೇಕು)	ಭವ್ಯರ್ಕಳುಂ ಪಸಿವುಂ ನೀಱಟ್ಕೆ ವೊದಲಾಗೊಡೆಯ ಪರೀಷಹಂಗಳಂ ಸೈರಿಸಿ ಸಮಾಧಿ ಮರಣದಿಂ ಮುಡಿಪಿ.

■

೭. ಲಲಿತ ಘಟೆಯ ಕಥೆ

೧. ಬುದ್ಧಿಯನೊಡೆಯರ್ (ಯೋ.ಪಾ)

೨. ಭಟಾರರಾಯತಿಯಿಂ ತೊಟ್ಟಂತೆ

೩. ತಗುಟ್ಟಿದ್ರೋಡಂ

೪. ಗಾಹೆ || ಮಿಸ್ಸೇಣ ಮಾಣುಸಂ ಜಂ ತಂ ದೊಣ್ಣಂಪಿ

೫. ಕಾಂತಂಗಳಿಂದಿಟ್ಟಿಗಳಿಂದಂ

೬. ಪೆಂಗುರು ಕಾರಂಡ ಮೊದಲಾಗೊಡೆಯ

೭. ರೋಗ ಶೋಕಂಗಳಂ (ಯೋ.ಪಾ)

೮. ದೇವಳೋಯಂತು

೯. ಪ್ರಾಗಲ್ಭ್ಯವಶಿತ್ವ

೧೦. ಉಚ್ಛ್ವಾಸ ನಿಶ್ವಾಸಮಪ್ಪ (ಯೋ.ಪಾ)

೧೧. ಮೂತ್ರ ಪುರೀಷಂಗಳುಂ ಗಳ್ದಮುಂ

೧೨. ಪರಿಗ್ರಹ ಸನ್ನೆಗಳು (ಯೋ.ಪಾ) ('ಸನ್ನಿ' ಇರಬಹುದೆ ?)

೧೩. ತನ್ನಿಂದೆಯಾದುದಂತಪ್ಪ

೧೪. ತಲೆಗಳಿಂದರ್ಚಿಸಲ್ ಪೆಱದಾಗಳೆಮ್ಮ ಗೆಯ್ದು

೧೫. ಮಡುವಿನೊಳಿಕ್ಕಿ ತಿಕ್ಕಿದೊಡೆ (ಮುದ್ರಣದೋಷ ?)

೭. ಲಲಿತ ಘಟೆಯ ಕಥೆ

೧. ಬುದ್ಧಿಯನೊಡೆಯದು (ಮುದ್ರಣದೋಷವಿರಬಹುದು)

೨. ಭಟಾರರಾಯತಿಯಿಂ ತೊಟ್ಟನೆ (ಯೋ.ಪಾ)

೩. ತಗುಟ್ಟಿದ್ರೋರಂ (ಯೋ.ಪಾ)

೪. ಮಿಸ್ಸೇಣ ಮಾಣುಸತ್ತಂ ದೊಣ್ಣಂಪಿ

೫. ಕೊಂತಂಗಳಿಂದಮಿಟ್ಟಿಗೆಗಳಿಂದಂ
(ಕೊಂತ = ಒಂದು ಆಯುಧ) (ಯೋ.ಪಾ)

೬. ಪೆಂಗುರು ಕಾರಂಡ ಮಾಂದೆ ಮೊದಲಾಗೊಡೆಯ (ಯೋ.ಪಾ)

೭. ರಾಗ ಶೋಕಂಗಳುಂ = (ಮಾಂದೆ = ಒಂದು ಪಕ್ಷಿ?)

೮. ದೇವಳೋಯಮ್ಮಿ

೯. ಪ್ರಾಗಲ್ಭ್ಯಮೀಶಿತ್ವ ವಶಿತ್ವ (ಯೋ.ಪಾ)

೧೦. ಶ್ವಾಸನಿಶ್ವಾಸಂಗಳು

೧೧. ಮೂತ್ರ ಪುರೀಷಂಗಳುಂ ಗಂಡಕಕ್ಷಾ(ಯೋ.ಪಾ)

೧೨. ಪರಿಗ್ರಹಂಗಳುಂ

೧೩. ತನ್ನಿಂ ತಾನಾದುದಂತಪ್ಪ (ಯೋ.ಪಾ)

೧೪. ತಲೆಗಳಿಂದರ್ಚಿಸದಾಗಳೆಮ್ಮ (ಯೋ.ಪಾ)

೧೫. ಮಡುವಿನೊಳಿಕ್ಕಿದೊಡೆ (ಯೋ.ಪಾ)

೮. ಧರ್ಮಘೋಷ ಭಟಾರರ ಕಥೆ

೧. ಗಾಹೆ ॥ ಶಾಸ್ತ್ರವಾಚನಮನಂ ಕೋವಾ ಗತಿನಿರ್ವೃತಿಃ
೨. ಕವಚೋ ಧ್ಯಾನಾತಿ ತೀಕ್ಷ್ಣಾಯುಧಃ
೩. ಧರ್ಮಮಹಾನ್ತಪೋ ಬುಧಘಟ್ಯೈಃ ಸ್ವರ್ಮೋಕ್ಷವೃತ್ತಿಪದಃ
೪. ಧರ್ಮಾರ್ಥ ಕಾಮ ಮೋಕ್ಷೇಷು
೫. ಯಸ್ಮೈತೋಽಪಿ ನ ವಿದ್ಯತೇ
೬. ಗಾಹೆ ॥ ಪಚ್ಛಾತ್ತಾವೇಣ ವೇಪತ್ತಾ

೮. ಧರ್ಮಘೋಷ ಭಟಾರರ ಕಥೆ

೧. ಗಾಹೆ ॥ ಶಾಸ್ತ್ರ ವಾಚನಮತಿಃ ಕಾ ವಾ ಗತಿನಿರ್ವೃತಿಃ
೨. ಕವಚೋ ನಾತೀವ ತೀಕ್ಷ್ಣಾಯುಧಃ
೩. ಧರ್ಮಮಹಾನೃಪೋ ಬುಧಭಟ್ಯೈಃ ಸ್ವರ್ಮೋಕ್ಷವೃತ್ತಿಪ್ರದಃ
೪. ಧರ್ಮಾರ್ಥ ಕಾಮ ಮೋಕ್ಷಾಣಾಂ
೫. ಯಸ್ಮೈ ಕೋಽಪಿ ನ ವಿದ್ಯತೇ
೬. ಗಾಹೆ ॥ ಪಚ್ಛತಾವೇಣ ವೇವಂತೋ

೯. ಸಿರಿದಿಣ್ಣನೆಂಬ ರಿಸಿಯ ಕಥೆ

೧. ಸಿರಿದಿಣ್ಣರೆಂಬ ರಿಷಿಯ ಕತೆ (ಶೀರ್ಷಿಕೆ) (ಯೋ.ಪಾ)

೨. ಸಿರಿದಿಣ್ಣನೆಂಬ ರಿಷಿಯ ಕಥೆಯಂ ಪೇಳ್ವೆಂ (ಯೋ.ಪಾ)

* 'ಘಚವ' ಪ್ರತಿಗಳಲ್ಲಿ 'ನೆಂಬ ರುಷಿಯರ' ಎಂಬ ಪಾಠವಿರುವುದಾಗಿ ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ.

೩. ಅದೆಂತೆಂದೊಡೆ|ಅಂಗೆಯೆಂಬುದು ನಾಡು

* ಹಂಪನಾ ಆವೃತ್ತಿಯಲ್ಲಿ ಒಂದಿಷ್ಟು ಪಾಠ ಕೈಬಿಟ್ಟು ಹೋಗಿದ್ದು ಅದನ್ನು ಸೇರಿಸಿಕೊಳ್ಳಬೇಕು.

೪. ಶ್ರಾವಕನಂಶುಮಂತನೆಂಬೊನರಸಂ

೫. ಜಿತಶತ್ರುವೆಂಬೊನರಸನಾತನರಸಿ ಇಳಾಮಹಾದೇವಿ ಯೆಂಬೊಳಾ ಇರ್ವರ್ಗ್ಗಂ ಮಗಳ್ ವಿನಯಮತಿಯೆಂಬೊಳಂತವರ್ಗ್ಗಳಿಷ್ಟ ವಿಷಯ ....

* ಹಂಪನಾ ಪಾಠದ ಪ್ರಕಾರ ವಿನಯಮತಿಯು ರಾಜರಾಣಿಯರ ಮಗಳೆಂಬ ಅರ್ಥ ಬರುತ್ತದೆ. ಡಿ.ಎಲ್.ಎನ್. ಪ್ರಕಾರ ವಿನಯಮತಿಯು ರಾಜರಾಣಿಯರ ದಾದಿ ಎಂಬರ್ಥ ಬರುತ್ತದೆ. 'ಕಖಗ' ಪ್ರತಿಗಳಲ್ಲಿ 'ಇರ್ವರ್ಗ್ಗಂ ಮಗಳ್' ಎಂಬ ಪಾಠವಿದ್ದುದಾಗಿ ಡಿ.ಎಲ್.ಎನ್. ತಿಳಿಸಿದ್ದಾರೆ. ಹಂಪನಾ ಅವರು

೯. ಸಿರಿದಿಣ್ಣನೆಂಬ ಭಟ್ಟಾರರ ಕಥೆ

೧. ಸಿರಿದಿಣ್ಣನೆಂಬ ಭಟ್ಟಾರರ ಕಥೆ

೨. ಸಿರಿದಿಣ್ಣ ಭಟಾರರ ಕಥೆಯಂ ಪೇೞ್ವೆಂ

೩. ಅದೆಂತೆಂದೊಡೆ ಈ ಜಂಬೂದ್ವೀಪದ ಭರತಕ್ಷೇತ್ರದೊಳಂಗಮೆಂಬುದು ನಾಡು (ಯೋ.ಪಾ)

೪. ಶ್ರಾವಕಂ ಸುಮಂತನೆಂಬೊನರಸನ್ (ಯೋ.ಪಾ)

೫. ಜಿತಶತ್ರುವೆಂಬೊನರಸನಾತನರಸಿಇಳಾ ಮಹಾದೇವಿಯೆಂಬೊಳಾ ಅರಸನ ದಾದಿ ವಿನಯಮತಿಯೆಂಬೊಳಂತವರ್ಗ್ಗಳಿಷ್ಟ ವಿಷಯ .... (ಯೋ.ಪಾ)

ಬಳಸಿದ ಪ್ರತಿಕಾರನು ಅದನ್ನು ಬಳಸಿಕೊಂಡಿರುವಂತೆ ಕಂಡುಬರುತ್ತದೆ. ಏನಿದ್ದರೂ ಕಥೆ ಮುಂದೆ ಸಾಗಿದಂತೆ ವಿನಯಮತಿ ದಾದಿಯೆಂಬುದು ಸ್ಪಷ್ಟವಾಗುತ್ತ ಹೋಗುತ್ತದೆ. ಕಾರಣ ಇಲ್ಲಿ ಡಿ.ಎಲ್.ಎನ್. ಪಾಠವೇ ಸೂಕ್ತವೆಂದು ನಿರ್ಧರಿಸಬೇಕಾಗುತ್ತದೆ.

೬. ಗುಜ್ಜು

೭. ನಾಣ್ಚೆ ಪಡುವೊಳಪ್ಪಂತಾಕೆ

೮. ದಿವಸಮುಮಷ್ಟೋಪವಾಸಂಗೆಯ್ದು ಮನೆಯೊಳೆಂಟು ದಿವಸ ಮುಂ ಸಹಣಮುಮರ್ಚನೆಯುಮಂ ಮಾಡಿ

* ಎರಡೂ ಪಾಠಗಳಲ್ಲಿ ಅರ್ಥವ್ಯತ್ಯಾಸವಿದೆ.

೯. ಶ್ರಮಮಂ ಸೇವೆಯುಮಂ

೧೦. ಕಂಡಿಳಾ ಮಹಾದೇವಿ ಮಕ್ಕಳಂ ಬೇಡಿ

೧೧. ಇರುಳಾ ಮಹಾದೇವಿಗೆ (ಮುದ್ರಣದೋಷವಿರಬಹುದು)

೧೨. ಮಾವನಂ (ಯೋ.ಪಾ)

೧೩. ಪ್ರತಿಮಾಯೋಗದೊಳಿರ್ದ್ದರೆನ್ನೆಗಂ

೬. ಗುಜ್ಜಿ (ಯೋ.ಪಾ)

೭. ನಾಣೆಸೆ ಪಡುಪೊಳಂತಪ್ಪಾಕೆ (ಯೋ.ಪಾ)

೮. ದಿವಸಮಭಿಷೇಕ ಮುಮರ್ಚನೆಯು ಮುಮಷ್ಟೋಪವಾಸಮುಮಂ ಮಾಡಿ (ಯೋ.ಪಾ)

* ಇಲ್ಲಿ ಒಂದಿಷ್ಟು ಪಾಠ ಕೈಬಿಟ್ಟು ಹೋಗಿದೆ.

೯. ಶ್ರಮಮುಂ ಸೇದೆಯುಮಂ (ಯೋ.ಪಾ)

೧೦. ಕಂಡಿಳಾ ಮಹಾದೇವಿ ಅಪುತ್ರಿಕೆ ಮಕ್ಕಳಂ ಬೇಡಿ (ಯೋ.ಪಾ)

೧೧. ಇಳಾಮಹಾದೇವಿಗೆ (ಯೋ.ಪಾ)

೧೨. ಮಾವನವರಂ

೧೩. ಪ್ರತಿಮಾಯೋಗದೊಳ್ ನಿಂದರ್ ಅನ್ನೆಗಂ. (ಯೋ.ಪಾ)

೧೦. ವೃಷಭಸೇನ ಭಟ್ಟಾರರ ಕಥೆ

೧. ಗಾಹೆ ॥ ಆದವಂ ಚ ಅದಿ ಉಣ್ಹಂ

೨. ಸೊಕ್ಕಾನೆಯನೇರಿ (ಯೋ.ಪಾ)
(ಘ-ಚಛ - ಗಳಲ್ಲಿ 'ಸೊರ್ಕಾ' ಎಂಬ ಪಾಠವಿದೆ)

೩. ಪೋದೊಡತ್ತಡರಸನುಂ (ಯೋ.ಪಾ)

೪. ಬಾವಿಯುಂಟದಱಡಿಯೊಳ್

೫. ನಿಮಗಂ ಪುಟ್ಟಿದನೆ
'ಚಛ' ಪ್ರತಿಗಳಲ್ಲಿ 'ಗೆ ಮಗಂ' ಎಂಬ ಪಾಠವಿರುವುದಾಗಿ ತಿಳಿಸಿಯೂ ಡಿ.ಎಲ್.ಎನ್. 'ನಿಮಗಂ ಪುಟ್ಟಿದನೆ' ಎಂದಿರುವುದು ಆಶ್ಚರ್ಯ 'ನಿಮಗೆ ಮಗಂ ಪುಟ್ಟಿದನೆ' ಎಂಬುದು ಇಲ್ಲಿ ಬೇಕು.

೬. ತೆಱನಂತನಿತುಂ

೭. ಝುಳಮಂ ಬೆಂಕಿಯುಮಂ (ಯೋ.ಪಾ)

೧೦. ವೃಷಭಸೇನ ಭಟ್ಟಾರರ ಕಥೆ

೧. ಗಾಹೆ ॥ ಆದವಂ ಚ ಅತಿ ಉಣ್ಹಂ

೨. ಆನೆಯನೇಱಿ

೩. ಪೋಯ್ತಂತರಸನುಂ

೪. ಬಾವಿಯುಂಟದಱ ತಡಿಯೊಳ್ (ಯೋ.ಪಾ)

೫. ನಿಮಗಂ ಪುಟ್ಟಿದನೆ

೬. ತೆಱನಂತನಿತುಂ
ಇದು ತೆಱನಂತೆನಿಸುಂ ಆಗಬೇಕು.

೭. ಝುಳಮಂ ಜಿಂಕಿಯುಮಂ (ಮುದ್ರಣ ದೋಷ ?)

೧೧. ಕಾರ್ತಿಕ ಋಷಿಯ ಕಥೆ

೧. ಇವರೆಲ್ಲರ

೨. ಅರಸನೆನಗಕ್ಕುಂ ಬಲಮೆಂದು (ಮುದ್ರಣದೋಷವಿರಬಹುದು)

* ಇದು 'ಫಲಂ' ಆಗಿರಬಹುದು. (ನಿಶ್ಚಯವಾಗಿ)

೩. ಸರವಣಮೆಂಬುದ್ಯಾನವನ

೧೨. ಅಭಯಘೋಷ ಮುನಿಯ ಕಥೆ

೧. (ಶೀರ್ಷಿಕೆ) ಅಭಯಘೋಷ ಮುನಿಯ ಕಥೆ (ಯೋ.ಪಾ)

೨. ಕೋಟೆಯೆಪಟ್ಟೆಲ್ಲಾ (ಮುದ್ರಣದೋಷವಿರಬಹುದು)

೩. ಕಾಲಂ ಕಟ್ಟಿ ಒಂದು ಕಾಲೊಳ್ ತಗುಳ್ಚಿಯೆಟಿಲೆ

೪. ಬೇನೆಯುಂ ವ್ಯಾಧಿಯುಂ ಶೀತ ವಾತೋಷ್ಣ ('ಬೇನೆಯುಂ' ಇದು ಹಂಪನಾ ಅವರಲ್ಲಿ ಹೆಚ್ಚುವರಿ ಪಾಠವಾಗಿದೆ.)

೧೧. ಕಾರ್ತಿಕ ಋಷಿಯ ಕಥೆ

೧. ಇವರೆಲ್ಲರ (ಇದು 'ಇವರೆಲ್ಲರ್' ಎಂದಾಗಬೇಕು)

೨. ಅರಸನೆನಗಕ್ಕುಂ ಬಲಮೆಂದು

೩. ಸರಮಣ ಎಂಬುದ್ಯಾನವನ (ಇದು 'ಚ' ಪ್ರತಿಯಲ್ಲಿರುವಂತೆ 'ಸುರವನ' ಎಂದಿರಬಹುದು.)

■

೧೨. ಅಭಯಘೋಷ ಮುನಿಯ ಕಥೆ

೧. ಅಭಯಘೋಷರೆಂಬ ಮುನಿಯ ಕಥೆ

೨. ಕೊಟೆಯೆ ಪಟ್ಟೆಲ್ಲಾ (ಯೋ.ಪಾ)

೩. ಕಾಲಂ ಕಟ್ಟಿ ಬಳ್ಳಿಯಂ ಕೊರಲೊಳ್ ತಗುಳ್ಚಿಯೆಟಿಲೆ (ಯೋ.ಪಾ)

೪. ವ್ಯಾಧಿಯುಂ ಶೀತವಾತೋಷ್ಣ (ಯೋ.ಪಾ)

■

೧೩. ವಿದ್ಯುಚ್ಚೋರನೆಂಬ ರಿಸಿಯ ಕಥೆ

೧. ಸೂರೊಳಗಿರ್ದ್ದು ರಸಿಗೆ ಸುರಿಯೆ

೨. ನೊಟಿವುಗಳ್ ಮುಸುಜಿ ಕಡಿಯೆ ತಿನೆ ದೇಸಿದನಾಗಿ

೩. ಮನೆಮನೆಯಂ ತೊಟಿಲ್ದು ಪೊಟಿಲವರ್ಗ್ಗೆಲ್ಲಂ ತನ್ನಂ ಮೆಚಿಯುತ್ತುಂ ಮನಕ್ಕೆ ಮೆಚ್ಚಿದಾಗಳೊಳ್ಗೊಂಡಿರೊಳೊತ್ತೆಯಿಟ್ಟು ಭೋಗೋಪಭೋಗಂಗಳಂ ಕಸವರಮಂ ಕೊಟ್ಟನುಭವಿಸುತ್ತಮಾರುಮಱಿಯದಂತಿರ್ದ್ದು ಬಚ್ಚರ ದೂಸಿಗರ ನಿಯೋಗಿಗಳಗ್ಗಳಮಪ್ಪ ಸೂಳೆಯರ ಸಾಮಂತರ ಕಸವರಂಗಳೆಲ್ಲಮಂ ಕಳ್ದು ......

* ಡಿ.ಎಲ್.ಎನ್. ಅವರು 'ಮನಕ್ಕೆ ಮಂದ' 'ಅಗ್ಗಯಿಲೆಯರಪ್ಪ' ಎಂಬ ಪಾಠಗಳನ್ನು ಬಳಸಿದ್ದು ಇವು 'ಕಖಗ' ಪ್ರತಿಗಳಲ್ಲಿ 'ಮೆಚ್ಚಿದಾಗಳೊ' ಮತ್ತು 'ಅಗ್ಗಳಮಪ್ಪ' ಎಂದಿವೆ. ಹಂಪನಾ ಪಾಠದಲ್ಲಿ 'ಮೆಚ್ಚಿದಾಗಳ್' ಮತ್ತು 'ಅಗ್ಗಳಮಪ್ಪ ಎಂಬ ಪಾಠಗಳು ಬಂದಿರುವುದನ್ನು ನೋಡಿದರೆ ಹಂಪನಾ ಬಳಸಿದ ಪ್ರತಿಯ ಪ್ರತಿಕಾರನು 'ಕಖಗ'ಗಳಲ್ಲಿ ಯಾವುದೋ ಒಂದು ಪ್ರತಿಯನ್ನು ನೋಡಿ ತನ್ನ ಪ್ರತಿಯನ್ನು ನಕಲು ಮಾಡಿಕೊಂಡಿರುವ ಸಾಧ್ಯವಿದೆಯೆಂಬುದು ಮತ್ತೊಮ್ಮೆ ಸಾಬೀತಾಗುತ್ತದೆ.

೧೩. ವಿದ್ಯುಚ್ಚೋರನೆಂಬ ರಿಸಿಯ ಕಥೆ

೧. ಮೂಗೊಳಗರ್ದ್ದು ರಸಿಗೆ ಸುರಿಯೆ (ಯೋ.ಪಾ) (ಅರ್ಥದ ದೃಷ್ಟಿಯಿಂದ)

೨. ನೊಟಿವುಗಳ್ ಮುಸುಜಿಕೊಂಡುತಿನೆ ಪೇಸಿದನಾಗಿ (ಯೋ.ಪಾ)

೩. ಮನೆಮನೆಯಂ ತೊಟಿಲ್ದು ತನ್ನ ತೊನ್ನಗೊಂಡಿಪುರ್ದನ ಜಿಪುತ್ತು ಮಿಂತು ಪಗಲೆಲ್ಲಮಿರ್ದಿರುಳಪ್ಪಾಗಳ್ ದಿವ್ಯಮಪ್ಪ ತನ್ನ ಸ್ವಾಭಾವಿಕಮಪ್ಪ ಮುನ್ನಿನ ರೂಪಂ ಕೈಕೊಂಡು ಪುಟ್ಟಿಗೆಯನುಟ್ಟು ಮೆಯ್ಯಂ ಪೂಸಿ ಪೂವಂ ಮುಡಿದು ಕರ್ಪೂರ ಸಂಮಿಶ್ರಿತಮಪ್ಪ ತಂಬುಲಂದಿನುತ್ತುಂ ಸೂಳೆಗೇರಿಗಳಂ ತೊಟಿಲ್ದು ತನ್ನಂ ಮೆಚಿಯುತ್ತಂ ಮನಕ್ಕೆ ಮಂದಗ್ಗಳದೊಳ್ಗೊಂಡಿರೊಳೊತ್ತೆಯನಿಟ್ಟು ಭೋಗೋಪಭೋಗಂಗಳ್ಗೆ ಕಸವರಮಂ ಕೊಟ್ಟನುಭವಿಸುತ್ತ ಮಾರುಮಱಿಯದಂತಿರ್ದ್ದು ಬಚ್ಚರ ದೂಸಿಗರ ನಿಯೋಗಿಗಳ ಅಗ್ಗಯಿಲೆಯರಪ್ಪ ಸೂಳೆಯರ ಸಾಮಂತರ ಕಸವರಂಗಳೆಲ್ಲಮಂ ಕಟ್ಟು .... (ಯೋ.ಪಾ)

ಇಲ್ಲಿಯ ಪಾಠದ ಕೆಲಭಾಗವು ಹಂಪನಾ ಆವೃತ್ತಿಯಲ್ಲಿ ಇಲ್ಲ, ಅದನ್ನು ಸೇರಿಸಿಕೊಳ್ಳಬೇಕು.

೪. ತಲೆದೆಸೆಯೆತ್ತಲರ್ಚಿಸಿದ್ದ

೫. ಗಾಹೆ ॥ ಅಚ್ಛಿನಿಮೀಲಣಮೆತ್ತಂ ಣತ್ಥಿ ಸುಹಂದುಃಖ
ಮೇವ ಅಣುಬದ್ಧಾ ।
ಣೆರಯೇ ಣೆರ ಇಯಾಣಂ ಅಹೋಣಿಸಂ
ಪಚ್ಚಮಾಣಾರಂ

೬. ವಿರಸಾ ವಿಷವಂತೇ

೭. ಇಱಿಕಿಱಿದನೊದಱಿ ಖೈರಂ
ದಱಿಮುಱಿ ನಿಟ್ಟೆಲ್ವನಱಿದು ನೆಜಿದೆದೆಗಳ್ ಬಾ
ಯ್ದೆಱೆಯೆ ಪೊಸಪುಣ್ಗಳೊಳ್ ಪೊಯ್
ಮಱಿಗುವಿನಂ ಲೋಹವಾರಿಯಂ ಮಱುಗಿದುದಂ ॥

೮. ಪಿಡಿಕೋಲ್

೯. ಕೊಱೆ ಕರುಳ್ಗಳಂ

೧೦. ಮಿಟ್ಟೆಗಳ್ಗೊಳಿಟ್ಟು (ಯೋ.ಪಾ)

೧೧. ಪತ್ತಿಲ್ಲಮುತ್ಕೃಷ್ಟದಿಂದ
ಇದು 'ಕಗ' ಪ್ರತಿಗಳಲ್ಲಿರುವಂತೆ 'ಪತ್ತಿಲ್ಲ ದುಷ್ಕೃತ' ಎಂದಿರಬಹುದು.

೧೨. ಅಣುಬ್ರತ (ಯೋ.ಪಾ)

೪. ತಲೆ ದೆ ಸೆಯೊಳರ್ಚಿಸಿರ್ದ್ದ (ಯೋ.ಪಾ)

೫. ಅಚ್ಛಿನಿಮೀಳಣಮೆತ್ತಂ ಣತ್ಥಿ ಸುಹಂ ದುಃ ಖ್ಖ
ಮೇವ ಅಣುಬದ್ಧಂ ।
ಣೆರಯೇ ಣೆರಯಿಂಯಾಣು ಅಹಣ್ಣಿಸಂ
ಪಚ್ಚಮಾಣಾಣಂ

೬. ವಿರಸಾ ವಿಷಹಂತೇ

೭. ಇಱಿಕಿಱಿದನೊದಡಱಿ (?)ಕೈರಂ
ದಱಿಮುಱಿ ನಿಟ್ಟೆಲ್ವನರಿದು ನೆಜಿನೆಡೆಗಳ್ ಬಾ
ಯ್ದೆಱೆ ಪೊಸವುಣ್ಗಳೊಳ್ ಪೊಯ್
ಮಱಿಗುವಿನಂ ಲೋಹವಾರಿಯಂ ಮಱಿಗುವಿನಂ ॥(ಯೋ.ಪಾ)

೮. ಬಡಿಕೋಲ್ (ಯೋ.ಪಾ)

೯. ಕೊಱೆ ಕುತ್ತಿ ಕುರುಳ್ಗಳಂ (ಯೋ.ಪಾ)

೧೦. ಮುಟ್ಟೆಗಳೊಳಿಟ್ಟು

೧೧. ಪತ್ತಿಲ್ಲಮುತ್ಕೃಷ್ಟದಿಂದ

೧೨. ಆನಣುಬ್ರತ (ಮುದ್ರಣ ದೋಷ)

೧೩.	ಮುಳಿಸೆಂಡಿಯಾಡುತ್ತಿರೆ ಲೋಕವಿದ್ಯೆಯನೀತಂ	೧೩.	ಮುಳಿಸೆಂಡನಾಡುತ್ತಿರ ಲೋಕನವಿದ್ಯೆಯನೀತಂ (ಯೋ.ಪಾ.)
೧೪.	ಸಂತತಿಯಿಂ ಬಂದುದಂದು ಕತೆಯ ಪೇೞಿದಿದ್ದು	೧೪.	ಸಂತತಿಯಿಂ ಬಂದುದೆಂದು ಪೇೞ್ದಿರ್ದ (ಯೋ.ಪಾ.)
೧೫.	ಪೇೞಿದಿದ್ದು ತದನಂತರಮಿರ್ವರೊಟ್ಟೈಯವರೋಲೆಯಂ ಕೊಂಡು ತಂದರಮನೆಯ ಬಾಗಿಲೊಳ್	೧೫.	ಪೇೞ್ದಿರ್ದ ತದ ನಂತರಂ ಇರ್ವರ್ ಪರಿವೊಟ್ಟೈಯವರೋಲೆಯಂ ಕೊಂಡು ಬಂದರಸನ ಮನೆಯ ಬಾಗಿಲೊಳ್ (ಯೋ.ಪಾ.)
೧೬.	ಪ್ರತಿಪಾಲಿಸುವರಾರುಮಿಲ್ಲೆಂದೋಲೆಯಂ	೧೬.	ಪ್ರತಿಪಾಲಿಸುವೊರಾರುಮಿಲ್ಲೀಯೋಲೆಯಂ (ಯೋ.ಪಾ)
೧೭.	ಪಲಂಬಱ್ ಪಾಗುಡಗಳಂ ಪೆರ್ಗಡೆಗಳನನವರತಂ	೧೭.	ಪಲಂಬರ್ ಪಾಗುಡಂಗಳುಮೋಲೆಗಳುಂ ಪೆರ್ಗಡೆಗಳನನವರತಂ (ಯೋ.ಪಾ)
೧೮.	ಅನ್ನೆಗಮಂತಿಪ್ಪರ್ಗಳಂ ಈ ಕನ್ಯಾರತ್ನಂಗಳ್ಗೆ	೧೮.	ಇನ್ನೆಗಮಿಂತಿವರ್ಗ್ಗಳಂ ತಾಂಗಿರ್ದನೀ ಕನ್ಯಾರತ್ನಂಗಳ್ಗೆ (ಯೋ.ಪಾ)
೧೯.	ಯಮದಂಡನುಂ ತಾನುಮಿರ್ವರುಮೊಟ್ಟೈಯನೇೞಿ	೧೯.	ಯಮದಂಡಪುರಸ್ಸರಮಿರ್ವರುಮೊಟ್ಟೈಯನೇೞಿ (ಯೋ.ಪಾ)
೨೦.	ಎಂತಱಿಯಲಕ್ಕನ್ನೆಗಂ	೨೦.	ಎಂತಱಿಯಲಕ್ಕುಮನ್ನೆಗಂ (ಯೋ.ಪಾ)
೨೧.	ವಸುರಮತಿಃ (ಮು. ದೋ.)	೨೧.	ವಸುಮತಿಃ (ಯೋ.ಪಾ)
೨೨.	ಜ್ಞಾನೇಕ್ಷಣೋ	೨೨.	ಜ್ಞಾನೇಕ್ಷಿಣಾಂ (?)
೨೩.	ಯದಭೀಷ್ಟ (ಯೋ.ಪಾ)	೨೩.	ಯದಿ ಚೇಷ್ಟ
೨೪.	ಸರ್ವೇ ಸದಾನ್ವಿತತಾಂ (ಅಕ್ಷರದೋಷವಿರಬಹುದು)	೨೪.	ಸರ್ವೇ ಸದಾನಿತ್ಯತಾಂ (ಯೋ.ಪಾ)
೨೫.	ತಾನಿಂತುಟು	೨೫.	ತಾನಿಂತುಟೆ
೨೬.	ಣೆಚ್ಚಂ ಕಳಿ ಕಲುಸ ಭಾಯಣ ಮಚೊಕ್ಖಂ	೨೬,	ಣೆಚ್ಚಂ ಕಲಿ ಕಲುಸ ಭಾಜಣಮಚೊಕ್ಖಂ

೨೭. ಗಾಹೆ ॥ ಅಂತೋಭಾಯದದಿಟ್ಠಂ ಸಕ್ಕಿಬ್ಬಿಸ ಬರಿದಂ ಅಮೇಜ್ಝಹವಂ

* 'ಕಖಗ' ಪ್ರತಿಗಳಲ್ಲಿ 'ಭಾಯಗ ದಿಟ್ಠ' ಎಂದು ಇರುವುದಾಗಿ ಡಿ.ಎಲ್.ಎನ್. ತಿಳಿಸಿದ್ದು ಹಂಪನಾ ಪ್ರತಿಯಲ್ಲಿ ಆ ಪಾಠವಿದೆ.

೨೮. ಸೇಣಾ ಸಿಂಹಾಣಂ

೨೯. ಅದ್ದಿ ಸ್ಂಕಲ

೩೦. ಬಮ್ಮಾಣದ್ಧಂ

೩೧. ತಯಪಡಿವಣ್ಣಂ

೩೨. ಸತತ

೩೩. ಏದಾಲಿಸೇ

೩೪. ಕುಳಿಮ ಪೂದಿಏ ಅಚೋಕ್ಖೇ

೩೫. ಸಡಣಪಡಣೇ ಅಸಾರೇ

೩೬. ಹಾಏವ

೩೭. ಅಣುವಾವಟ ಕಾವಗಂ

೩೮. ನ ಸೇ ಫಳಾಯಿ ದುಸ್ಸಂಕಾ

೩೯. ಸೌಖ್ಯೋಹಂ ಅತ್ಯಪೂರ್ವೋ

೪೦. ಜಾತಿಕ್ಷ್ಮಾಜರತೇ

೪೧. ಕ್ರೂರೋರುದುಸ್ವಾಪದೇ

೨೭. ಗಾಹೆ ॥ ಅಂತೋ ಬಾಹಿರದಿಟ್ಠಂ ಸಕ್ಕಿಬ್ಬಿಸ ಭರಿದಂ ತು ಅಮೇಜ್ಝಪುರಂ

೨೮. ಸೇಮ್ಮ ಸೀಹಾಣಂ

೨೯. ಅಟ್ಠಿ ಸಕಲ

೩೦. ಚಮ್ಮಾಣದ್ಧಂ (?)

೩೧. ತಯಪಡಿ ಛಣ್ಣಂ

೩೨. ಸಂತತ

೩೩. ಏದಾರಿಸೇ

೩೪. ಕುಣಿಮ ಪೂತಿಏ ಯಚೋಕ್ಖೇ

೩೫. ಸಡಣ ಪಡಣಯ ಸಾರೇ

೩೬. ಛಾಯೇವ

೩೭. ಅಣುಯಾದಿ ಕಾರಗಂ

೩೮. ಣ ಸೇಸಂ ಪಲಾಯಿದುಂ ದುಸ್ಸಕ್ಕಂ

೩೯. ಸೌಖ್ಯೋಹಂ ವೇತ್ತಾಪೂರ್ವೋ

೪೦. ಜಾತಿಕ್ಷ್ಮಾಜತತೇ

೪೧. ಕ್ರೂರೋರುದುಃಶ್ವಾಪದೇ

೪೨.	ವ್ಯಾಧಿಂ ವ್ಯಾದಿಭಯಾದ್ದುರಂತ	ವ್ಯಾಧಿ ವ್ಯಾಧಭಯೇದುರಂತ
೪೩.	ನಿಸ್ತ್ರಾಣ ಸುವಿಚೇತಸೋ ತ್ರಿದತೃಷಾ	ನಿಸ್ತ್ರಾಣಸ್ಯ ವಿಚೇತಸೋ ದೃಢ ತೃಷಾ
೪೪.	ಶಕ್ತಿರ ಪ್ರತಿಹತೋ	ಶಕ್ತಿರಪ್ರತಿಹತಾ
೪೫.	ಕ್ಷಯೇಣಾಯುಷಂ	ಕ್ಷಯೋನಾಯುಷಃ
೪೬.	ತಾವದೇವ ವಿದುಹಿ ಕಾರ್ಯ	ತಾವದೇವ ವಿದುಷಾ ಕಾರ್ಯಃ
೪೭.	ಯಾ ದೀಪ್ತೇ	ಪ್ರೋದ್ದೀಪ್ತೇ
೪೮.	ಕೂಪಘನನಂ	ಕೂಪಖನನಂ
೪೯.	ಮಱೆಯಿಮೆಲ್ಲಮಿದು ನಿಶ್ಶಲ್ಯಂ	ಮಱೆಯಿಮೆಲ್ಲಮಿಂ ನಿಶ್ಶಲ್ಯಂ (ಯೋ.ಪಾ)
೫೦.	ವೇರಂ ಮಜುಂ ಣ ಕೇಣಚಿ	ವೇರಂ ಮಜ್ಝ್ಣ ಕೇಣಚಿ
೫೧.	ಸತಿಯರ್ ಸಂಗಡಂ ಪೆಂಡವಾಸದ	ಸತಿಯರ್ ಸಂಗಡಂ ಬರೆ ಪೆಂಡವಾಸದ (ಯೋ.ಪಾ)
೫೨.	ಕ್ಷಪಕ ಶ್ರೇಢಿ	ಕ್ಷಪಕ ಶ್ರೇಣಿ (ಯೋ.ಪಾ)

೧೪. ಗುರುದತ್ತ ಭಟಾರರ ಕಥೆ

೧. ಸಂವಳಿ ತಾಲೀವ ದೊಣ್ಣೆಮಂತಹಿ

೩. ತಂದೆಯುಂ ತಾಯ್ವಿರುಂ

೩. ಜಲಕ್ರೀಡೆಯನಾಡುತ್ತಿರ್ದ್ದಲ್ಲಿ ನಿಮ್ಮ ತಂದೆಯ ವಿಭವಮಂ

* ಇಲ್ಲಿ 'ಭೌಮವಿಹಾರಾರ್ಥಂ........................ ಮದನವೇಗೆಯೆಂಬೊಳಾಯಿರ್ವರುಂ ಕಂಡು' ಎಂಬುದರ ವರೆಗಿನ ಪಾಠವು ಹಂಪನಾ ಆವೃತ್ತಿಯಲ್ಲಿ ಕೈಬಿಟ್ಟು ಹೋಗಿದೆ ಇಂಥ ಮತ್ತೆ ಕೆಲವು ಪಾಠ ಭಾಗಗಳು ಹಂಪನಾ ಆವೃತ್ತಿಯಲ್ಲಿ ಕೈಬಿಟ್ಟು ಹೋಗಿರುವುದನ್ನು ನೋಡಬಹುದಾಗಿದೆ. ಇದು ಹಂಪನಾ ಬಳಸಿದ ಪ್ರತಿಯ ಪ್ರತಿಕಾರನ ದೋಷವೋ, ಹಂಪನಾ ಮುದ್ರಣಕ್ಕೆ ಸಿದ್ಧಪಡಿಸಿದ ಪ್ರತಿಯ ದೋಷವೋ ಅಥವಾ ಮುದ್ರಣದೋಷವೋ ಎಂಬುದನ್ನು ಹಂಪನಾ ಅವರು ಬಳಸಿದ ಮೂಲಪ್ರತಿಯನ್ನು ನೋಡಿದರೆ ಮಾತ್ರ ಹೇಳಬಹುದಾಗಿದೆ.

೪. ಜೀವಂಗಳ ಸ್ವಭಾವಮಿಂತುಟೆ

೫. ನರಪಶು ನಿರತಂ

೬. ಪುರುಷಂ ಪಶುಂ ಹಂತಿ ಕಾಳವ್ಯಕಃ

೭. ಸಮಾಗಮಸ್ಸಾಮಪರೋಹಿ

೮. ಏಗೋ ಸ ಜಾಇಣೆರಯಂ ವ

೧೪. ಗುರುದತ್ತ ಭಟಾರರ ಕಥೆ

೧. ಸಮ್ಮಲಿಥಾಳೀವ ದೊಣ್ಣೆಮಂತಮ್ಮಿ

೨. ತಂದೆಯುಂ ನಾಲ್ವರ್ ತಾಯ್ವಿರ್ಕಳುಂ (ಯೋ.ಪಾ)

೩. 'ಜಲಕ್ರೀಡೆಯಾಡುತ್ತಿರ್ಪ್ಪನ್ನೆಗಂ ಭೌಮವಿಹಾರಾರ್ಥಂ ವಿಮಾನಮನೇಱಿ ಪೋಗುತ್ತಿರ್ದ್ದ ವಜ್ರದಾಡನೆಂಬ ವಿದ್ಯಾಧರನ ಸಂವಾತನ ಮಹಾದೇವಿ ಮದನವೇಗೆಯೆಂಬೊಳಾಯಿರ್ವರುಂ ಕಂಡು ನಿಮ್ಮ ತಂದೆಯ ವಿಭವಮಂ'-

----

----

೪. ಜೀವಂಗಳ ಸ್ವಭಾವಮಿಂತುಟು

೫. ನರಪಶುರನಿಶಂ (ಯೋ.ಪಾ)

೬. ಪುರುಷ ಪಶುಂ ಹಂತಿ ಕಾಲವ್ಯಕಃ (ಯೋ.ಪಾ)

೭. ಸಮಾಗಮಾಃ ಸ್ಸಾವಸಮಾಹಿ (ಯೋ.ಪಾ)

೮. ಏಗೋ ಸಜ್ಜಾ ಇ ಣೆರಯಂ [ವಾ]

೯. ಭವಿಷ್ಯಂತಿ ಭವ ಪರೇ

೧೦. ಪಿರಿದು ಬೇಗ ಧರ್ಮಂ ಪೇೞ್ದು

೧೧. ಸನ್ನ್ಯಸನಂಗೆಯ್ದಿರ್ದ್ದೊಡೆ ಭಟಾರರ್ ಅನಂತವೀರ್ಯಂಗೆ

೧೨. ಸನ್ನ್ಯಸನಂ ಗೆಯ್ದಿರ್ದ್ದುದಕ್ಕೆ

೧೩. ಪಿರಿಯ ಮಂಟಪಮಂ ಮಾಡಿಸಿ (ಯೋ.ಪಾ)

* ಹಂಪನಾ ಪಾಠ ಸರಿಯಾಗಿದೆ. ಏಕೆಂದರೆ ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ಕೊಟ್ಟಿರುವ ಪ್ರಕಾರ 'ಕಗ' ಪ್ರತಿಗಳಲ್ಲಿ 'ಟ' ಪಮಂ ಎಂಬ ಪಾಠವಿದ್ದು ಅದು 'ಮಂಟಪಮಂ' ಎಂದಾಗುವುದು ಸತರ್ಕ ನಿರ್ಣಯವಾಗಿದೆ. 'ಪಂದರಂ' ಎಂಬುದನ್ನು ಡಿ.ಎಲ್.ಎನ್. ಯಾವ ಪ್ರತಿಯಿಂದ ಎತ್ತಿಕೊಂಡರೋ ತಿಳಿಯುವುದಿಲ್ಲ.

೧೪. ಧ್ವಜಂಗಳಂ ಕಟ್ಟಿಸಿ

೧೫. ಮಹಾಮಹಿಮೆಯಂ

೧೬. ಪೂಜೆಗಳಂ ಪೊಱಮಡಿಸುತ್ತಿರೆ

೧೭. ಸನ್ನ್ಯಸನೇಸ್ತಿ ಮಿತಯೋ

೧೮. ಪುನರಾಗಮ ವರ್ಜನಂ

೧೯. ಇಹ ಜನ್ಮಕೃತಂ ಪಾಪಂ (ಯೋ.ಪಾ?)

೨೦. ದಂಸಣಣಾಣ ಸಹಗದೊ

೯. ಭವಿಷ್ಯಂತಿ ಪರೇ ಪರೇ

೧೦. ಪಿರಿದು ಬೇಗಂ ಧರ್ಮಮಂ ಪೇೞ್ದು (ಯೋ.ಪಾ)

೧೧. ಸನ್ನ್ಯಸನಂ ಗೆಯ್ದಿರ್ದ್ದೊಡದಂ ಭಟಾರರಱಿದನಂತವೀರ್ಯಂಗೆ (ಯೋ.ಪಾ)

೧೨. ಸನ್ನ್ಯಸನಂ ಗೆಯ್ದಿರ್ದ್ದುದಿದಕ್ಕೆ (ಯೋ.ಪಾ)

೧೩. ಪಿರಿಯ ಪಂದರಂ ಮಾಡಿಸಿ

೧೪. ಧ್ವಜಂಗಳುಮಂ ಕಟ್ಟಿಸಿ (ಯೋ.ಪಾ)

೧೫. ಮೂಱು ಪೊೞ್ತುಂ ಮಹಾಮಹಿಮೆಯಂ (ಯೋ.ಪಾ)

೧೬. ಪೂಜೆಗಳುಮಂ ಪೊಡೆಮಡಿಸುತ್ತಿರೆ (ಯೋ.ಪಾ)

೧೭. ಸನ್ನ್ಯಸನೇಸ್ತಿ (ಮತಿರ್ಯೋಃ ?) (ಯೋ.ಪಾ)

೧೮. ಪುನರಾಗಮ ವರ್ಜಿತಂ (ಯೋ.ಪಾ)

೧೯. ಇಹ ಜೀವಕೃತಂ ಪಾಪಂ

೨೦. ದಂಸಣಣಾಣ ಸಮಗ್ಗೋಃ

೨೧. ಉವ್ವೇ ಮರಣಂ ಜಾ ಈ ಮರಣಂ

೨೨. ಮರಣಂ ಅತಿಮತಿಸ್ಸ (ಯೋ.ಪಾ ಎಂದು ತೋರುತ್ತದೆ)

೨೩. ಛಿಂದ ಇ ಜಾದೀ ಸದಾಣಿ

೨೪. ಸಂಸಾರ ಚಿಕ್ಕವಾಳಂ

೨೫. ಆಹಾರಣಮಿತ್ತಂ (ಮುದ್ರಣ ದೋಷವಿರಬಹುದು)

೨೬. ಅಗ್ಗಿಂ ಲವಣ ಸಮುದ್ದೋ

೨೭. ಣ ಇ ಜ ಜೀವೋ ಸಕ್ಕೋ

೨೮. ಅಗ್ಗೀವ ಇಂಧ ಣಾ ಇಂ ತಣ್ಹಾದೇ ಹೊಂತಿ ಸೇ ಭೋಗಾ

೨೯. ತೃಷಾರ್ತಂ

೩೦. ತೃಷಾರ್ತೈರಧಿಕರ ತೃಷಾರ್ತೈ

೩೧. ಯದ್ಯಪಿ ಸಿ ಸೇವ್ಯಮಾನೋ

೩೨. ಕಿಂಪಾಕ ಫಲಾದನುವದ್ ಭವಂತಿ

೩೩. ಗುರ್ದುಂ ಪೊರ್ದಿದ ಚಾತುರಂಗ ಬಲಮುಂ

* ಇಲ್ಲಿ ಇಬ್ಬರಲ್ಲೂ 'ಗುರ್ದುಂ' ಎಂಬ ಪಾಠವಿದೆ. ಅದು ಮೂಲದಲ್ಲಿ 'ದುರ್ಗಂ' ಎಂದಿರಬೇಕು. ಪದ್ಯದಲ್ಲಿ ವರ್ಣಿತವಾದ ಇತರ ವಿಷಯಗಳ ಆಧಾರದಿಂದ ಇದನ್ನು ನಿರ್ಣಯಿಸಲು ಸಾಧ್ಯವಿದೆ. ತಮ್ಮ ಅಡಿಟಿಪ್ಪಣಿಯಲ್ಲಿ ಡಿ.ಎಲ್.ಎನ್. ಅವರು 'ಕಖಗ' ಪ್ರತಿಯಲ್ಲಿ 'ದುರ್ಗ್ಗಂ' ಎಂಬ ಪಾಠವಿರುವುದನ್ನು ತಿಳಿಸಿದ್ದಾರೆ. ಆದರೂ ತಾವು 'ಗುರ್ದುಂ' ಎಂಬ ಪಾಠವನ್ನು ಬಳಸಿದ್ದಾರೆ. ಇದು ಆಶ್ಚರ್ಯದ ಸಂಗತಿಯಾಗಿದೆ.

೨೧. [ಪು]ವ್ವೇ ಮರಣಂ ಜಾ ಈ ಮರಣಂ

೨೨. ಮರಣಂ ಅಣುಮಲಿಸ್ಸಂ

೨೩. ಛಿಂದ ಇ ಜಾ ಈ ಸದಾಣಿ

೨೪. ಸಂಸಾರ ಚಕ್ಕವಾಳಮ್ಮಿ (ಯೋ.ಪಾ)

೨೫. ಆಹಾರಣಿಮಿತ್ತಂ (ಯೋ.ಪಾ)

೨೬. ಅಗ್ಗೀ ಲವಣಸಮುದ್ದೋ

೨೭. ಣ ಇಮೋ ಜೀವೋಸಕ್ಕೋ

೨೮. ಅಗ್ಗೀವ ಇಂಧಣಾ ಇಂ ತಣ್ಣಂ ದೀವಂತಿ ಸೇ ಭೋಗಾ

೨೯. ತೃ ಷಾರ್ತಾನ್

೩೦. ತೃಷಾರ್ತೈರಧಿಕತರ ತೃಷಾರ್ತಾನ್

೩೧. ಯದ್ಯಪಿ ನಿಷೇವ್ಯಮಾಣಾ

೩೨. ಕಿಂ ಪಾಕ ಫಲಾಶನವದ್ಭವಂತಿ

೩೩. ಗುರ್ದುಂ ಪೊರ್ದಿದ ಚಾತುರಂಗ ಬಲಮುಂ

ಗುರ್ದುಂ = ಶಕ್ತಿ ಬಲ, ಶತ್ರುಗಳನ್ನು ಗುದ್ದಿ ನಾಶಮಾಡಬಲ್ಲ ಚತುರಂಗ ಬಲ ಎಂಬರ್ಥದಲ್ಲಿ ತಕ್ಕಮಟ್ಟಿಗೆ 'ಗುರ್ದುಂ' ಎಂಬ ಪಾಠವೂ ಹೊಂದಿಕೆಯಾಗುತ್ತದೆ. 'ದುರ್ಗಂ' ಎಂಬುದನ್ನು ಸ್ವೀಕರಿಸಬೇಕೆಂದರೆ ಆಗಲೇ 'ಕೋಂಟೆಯುಂ' ಎಂಬ ಶಬ್ದ ಅಲ್ಲಿ ಬಂದಿದೆ !

೩೪. ಕರ್ಮ ನಿಶ್ರಾವಣೆ

೩೫. ಪೆಱದಿಲ್ಲೆನಗೆ (ಮುದ್ರಣದೋಷ ವಿರಬಹುದು)

೩೬. ಪಳಾಳಮನೋಜಗೇ ನಮಃಸ್ಕಾರಮೆ ಸಾಲ್ಗುಂ

೩೭. ವಿಸಯಸುಹ (ಯೋ.ಪಾ)

೩೮. ಖಯಕರಣಂ ಸವ್ವ ಜೀವಾಣಂ

೩೯. ಸಮಾಹಿಮರಣಂ ಪಿ ಬೆಜ್ಜ ಜದಿಜೀವ್ರೋ

೪೦. ಭವಗ್ಗ ಹಣೇ ಣೆವ್ವಾಣಮಣುತ್ತರಂ

೪೧. ಝೂಯಂ ಜೋಣೆಯ ಮಿಯಮ್ಹಿ

೪೨. ಏ ಯಕ್ಕೇಣ ವಿಸುದ್ಧೋ ತೋ ಹೋಹಿ ಸುಮೋಕ್ಕ ಸುಹಭಾಈ

೩೪. ಗುರುಮೂಲೇ ಯತಿನಿಚಿತೇ

೪೪. ಸದ್ಭೋಷೇ (ಮುದ್ರಣದೋಷವಿರಬಹುದು)

೪೫. ಭವನವಾಸಿಗ ಲೋಕದೊಳ್ ಮೂಱು ಪಳಿತೋಪಮಾಯುಷ್ಯ (ಯೋ.ಪಾ.)

* 'ಘಚಛ' ಪ್ರತಿಗಳಲ್ಲಿ 'ಮೂ' ಎಂಬ ಪಾಠವಿರುವುದನ್ನು ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ. 'ಮೂ'ಎಂಬುದು ಹಂಪನಾ ಆವೃತ್ತಿಯಲ್ಲಿದೆ. ಹಸ್ತಪ್ರತಿಗಳ ಸಂಖ್ಯಾಬಲದಿಂದ ಪಾಠವನ್ನು ನಿರ್ಣಯಿಸುವುದಾದರೆ ಹಂಪನಾ ಪಾಠ ಸರಿಯೆಂದು ಹೇಳಬೇಕಾಗುತ್ತದೆ.

೩೪. ಕರ್ಮವಿಶ್ರಾವಣೆ (ಯೋ.ಪಾ)

೩೫. ಪೆಱತಿಲ್ಲೆನಗೆ (ಯೋ.ಪಾ)

೩೬. ಪಲಾಲಮನೊಲ್ಲೆನಿನ್ ನಮಸ್ಕಾರಮೆ ಸಾಲ್ಗುಂ (ಯೋ.ಪಾ)

೩೭. ವಿಸಯಸುವ

೩೮. ಸುಹಕರಣಂ ಸವ್ವಜೀವಾಣಂ

೩೯. ಸಮಾಹಿಮರಣಂ [ಮರೇಜ್ಜ] ಜದಿ ಜೀವ್ರೋ

೪೦. ಭವಗ್ಗ ಹಣೇ ಣೆವ್ವಾಣ ಮತ್ತರಂ

೪೧. ಝಾಯಂ ಜೋಣೆಯಮಿ ಯಮ್ಹಿ

೪೨. ಏ ಅಗ್ಗೇಣ ವಿಸುದ್ಧೋ ತೋ ಹೋಹಿಸಿ ಮೋಕ್ಷ ಸುಹಭಾಈ.

೪೩. ಗುರುಮೂಲೇ ಯ ತಿನಿಕಟೇ (ಯೋ.ಪಾ)

೪೪. ಸದ್ಭೋಷೇ (ಯೋ.ಪಾ)

೪೫. ಭವನವಾಸಿಗಲೋಕದೊಳ್ ನೂಱು ಪಳಿತೋಪಮಾಯುಷ್ಯ

೪೬. ಪೊಲ್ಲಗತಿಯೊಳ್ ಪುಟ್ಟಿದುದುಮಂ ಕಂಡು ಮನುಷ್ಯ ಜನ್ಮದ ದುರ್ಲಭತ್ವಮುಮಂ ಶರೀರದಶುಚಿತ್ವಮುಮಂ ಭೋಗೋಪಭೋಗಂಗಳಪ್ಪನಿತ್ಯತ್ವಮುಮಂ ಮನದೊಳ್ ಬಗೆದು.

* 'ಶರೀರದಶುಚಿತ್ವಮುಮಂ' ಎಂಬುದು ಹಂಪನಾ ಆವೃತ್ತಿಯಲ್ಲಿರುವ ಹೆಚ್ಚಿನ ಪಾಠ. ಇದನ್ನು ಡಿ.ಎಲ್.ಎನ್. ಕೈಬಿಟ್ಟಿರುವರೋ ಅಥವಾ ಹಂಪನಾ ಪ್ರತಿಯಲ್ಲಿ ಇದು ಹೆಚ್ಚುವರಿಯಾಗಿ ಸೇರಿಕೊಂಡಿದೆಯೋ ಎಂಬುದನ್ನು ಮೂಲಪ್ರತಿಗಳ ಅವಗಾಹನೆಯಿಂದ ಮಾತ್ರ ಗುರುತಿಸಬಹುದು.

೪೭. ಕ್ಷಮಾಂ ತ್ಯಜ ಮಳಂ

೪೮. ಪ್ರಖ್ಯಾಪಯ ಪ್ರಶ್ರಯಂ ಸ್ವಾನ್ ಗುಣಾನ್

* 'ಸ್ವಾನ್ ಗುಣಾನ್' ಎಂಬುದು ಹಂಪನಾ ಅವರಲ್ಲಿರುವ ಹೆಚ್ಚಿನ ಪಾಠ.

೪೯. ಮೈತ್ರೀಂ ಪಾಲಯ

೫೦. ವಿಮಾನಮನೇಱಿ ಪೋದೊಡಾತಂ ('ಕಖಗ' ಗಳಲ್ಲಿ 'ದೊಡಾತಂ' ಎಂದಿದೆ)

೫೧. ಸವಿಳಾಭರಣನೆಂಬ (ಯೋ.ಪಾ)

೫೨. ಕೊಲಲ್ ಬಂದೊಡಂಜಿ

೪೬. ಪೊಲ್ಲಗತಿಯೊಳ್ ಪುಟ್ಟಿದುದುಮಂ ಕಂಡು ಮನುಷ್ಯಜನ್ಮದುರ್ಲಭತ್ವಮುಮಂ ಭೋಗೋಪಭೋಗಂಗಳೊಳಪ್ಪನಿತ್ಯತ್ವಮುಮಂ ಮನದೊಳ್ ಬಗೆದು

೪೭. ಕ್ಷಮಾಂ ತ್ಯಜ ಮದಂ (ಯೋ. ಪಾಠವಿರಬಹುದು)

೪೮. ಪ್ರಖ್ಯಾಪಯ ಪ್ರಶ್ರಯಂ ಕೀರ್ತಿಂ ಪಾಲಯ

೪೯. ಕೀರ್ತಿಂ ಪಾಲಯ

೫೦. ವಿಮಾನಮನೇಱಿ ಪೋಪಾಗಳ್ (ಯೋ.ಪಾ)

೫೧. ಸಲಿಧಾಭರಣನೆಂಬ

೫೨. ಕೊಲಲ್ ಬಗೆದೊಡಂಜಿ (ಯೋ.ಪಾ)

೫೩. ಬನ್ನಿಮೆಂದೊಡೆ (ಯೋ.ಪಾ)

* ವಾಸ್ತವವಾಗಿ ಇದು "ಬನ್ನಿಮೆಂದು ಪೇಟ್ದೊಡೆ" ಇದ್ದಿರಬಹುದು

೫೪. ಬಲಂಗಳಿಂದಮೇಕಜ್ಜಮೇನೆಂದು

೫೫. ನಿಮ್ಮರಸಂಗಿಂತೆಂದು ಪೇಟಿಂ

೫೬. ಚಾತುರ್ದಂತ ಬಲಂ

* ಹಂಪನಾ ಬಳಸಿದ ಪಾಠವು 'ಘಚಛ' ಪ್ರತಿಗಳಲ್ಲಿದ್ದು ಡಿ.ಎಲ್.ಎನ್. ಅದನ್ನು ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ.

೫೭. ಪಲವು ದಿವಸಂ ಕಾದೆ ಗುರುದತ್ತ ನೃಪತಿಯ

೫೮. ಖಂಡಿಸಿ ನೆಲದೊಳ್ ಬಿದ್ದುರ್ವಿದಂ

೫೯. ಕನ್ನೆಮಾಡ

೬೦. ಚವುಕಿಗೆಯ ಮೇಗೆ

* ಎರಡೂ ಕಡೆ ಬಂದಿರುವ 'ಚವುಕಿಗೆ' ಎಂಬ ಪಾಠಕ್ಕಿಂತ 'ಘಚಛ' ಪ್ರತಿಗಳಲ್ಲಿದೆಯೆಂದು ಡಿ.ಎಲ್.ಎನ್. ತಿಳಿಸಿರುವ 'ಚವುಪಳಿಗೆ' ಎಂಬ ಪಾಠವು ಹೆಚ್ಚು ಯೋಗ್ಯವೆಂದು ತೋರುತ್ತದೆ.

೬೧. ನಡಪಾಡುತ್ತಿರ್ದ್ದಾಕೆಯ ಮುಂದೆ

೬೨. ಈ ಕಯ್ಯನೊಡೆಯಾತಂ (ಯೋ.ಪಾ)

೫೩. ಬನ್ನಿಪೇಂದೊಡೆ

೫೪. ಬಲಂಗಳಿಂ ಕಜ್ಜಮೇನೆಂದು (ಯೋ.ಪಾ)

೫೫. ನಿಮ್ಮರಸಂಗೆ ಪೇಟಿಂ (ಯೋಗ್ಯಪಾಠ ನಿರ್ಣಯಿಸುವುದು ಕಷ್ಟ)

೫೬. ಚಾತುರ್ವಲಂ ಬೆರಸು (ಯೋ.ಪಾ.)

೫೭. ಪಲವುಂ ದಿವಸಂ ಕಾದೆ ಒಂದು ದಿವಸಂ ಗುರುದತ್ತ ನೃಪತಿಯ (ಯೋ.ಪಾ)

೫೮. ಖಂಡಿಸೆಪಟ್ಟುದಾಗಿ ನೆಲದೊಳ್ ಬಿದ್ದುರ್ವಿದಂ (ಯೋ.ಪಾ)

೫೯. ಕನ್ಯಾಮಾಡ (ಯೋ.ಪಾ)

೬೦. ಚವುಕಿಗೆಯ ಮೇಗೆ

೬೧. ನಡಪಾಡುತ್ತಿರ್ದ್ದಳ ಮುಂದೆ (ಯೋ.ಪಾ)

೬೨. ಈ ತಳಮನೊಡೆಯಾತಂ

* 'ಘಚಛ' ಪ್ರತಿಗಳಲ್ಲಿ 'ಕಯ್ಯ' ಎಂಬ ಪಾಠವಿರುವುದನ್ನು ಡಿ.ಎಲ್.ಎನ್. ತಿಳಿಸಿರುವರಾದರೂ ತಾವು ಮಾತ್ರ 'ತಳ' ಎಂಬ ಪಾಠವನ್ನು ಬಳಸಿದ್ದಾರೆ.

೬೩. ಪಲವುಮನೊಟ್ಟಯಿಸಿ

೬೪. ನಮ್ಮರಸನುಂ ತನ್ನುಳ್ಳ

೬೫. ನಿಂದಿಂತೆರಡುಂ

೬೬. ಮಾನಸರ ಸತ್ತುದರ್ಕೆ

* 'ಮಾನಸರ' ಎಂಬುದು 'ಖಗಚಛ'ಪ್ರತಿಗಳಲ್ಲಿದ್ದು ಅದಕ್ಕಿಂತ 'ಪದಾತಿ' ಎಂಬುದೇ ಹೆಚ್ಚು ಸೂಕ್ತ.

೬೭. ತನ್ನ ಮೆಯ್ಯಲ್ಲದಾಗಳೀಗಳೆ ತಪಂಬಡುವೆನ್

೬೮. ಬೆಸಗೊಂಡೊಡೆ ಪೇಟ್ದೊಡೆ

* 'ಪೇಳ್ದೊಡೆ ಎಂಬುದು ಹಂಪನಾ ಅವರಲ್ಲಿರುವ ಹೆಚ್ಚುವರಿ ಪಾಠ ಅದು ಇಲ್ಲಿ ಅನಗತ್ಯ.

೬೯. ಪರೆವೊವೌಪೊಟಲನಾಳ್ವೊಂ (ಮುದ್ರಣ ದೋಷವಿರಬಹುದು.)

೭೦. ಪೊಟಲಂ ಪೊಱಮಟ್ಟೊಡವರ

ಇದು ಘಚಛ ಪ್ರತಿಗಳಲ್ಲಿರುವ ದೋಲಂಗಂಗೊಟ್ಟಿರ್ದೊಡವರ ಎಂಬ ಪಾಠವಿರಬೇಕು

೬೩. ಪಲವುಮನಿಱಿದೊಟ್ಟಯಿಸಿ (ಯೋ.ಪಾ)

೬೪. ನಿಮ್ಮರಸಂ ತನ್ನುಳ್ಳ (ಯೋ.ಪಾ)

೬೫. ನಿಂದನಿಂತೆರಡುಂ (ಯೋ.ಪಾ)

೬೬. ಪದಾತಿ ಸತ್ತುರ್ದಕ್ಕೆ

೬೭. ತಮ್ಮ ಮೆಚ್ಚಲ್ಲದಾಗಳೀಗಳೆ ತಪಂಬಡುವೆನ್ (ಯೋ.ಪಾ.)

೬೮. ಬೆಸಗೊಂಡೊಡೆ (ಯೋ.ಪಾ)

೬೯. ಚಂಪಾಪುರಮನಾಳ್ವೊಂ (ಯೋ.ಪಾ.)

೭೦ ಪೊಟಲಂ ಪೊಱಮಟ್ಟೊಡವರ

೨೧. ನೀಂ ಗರ್ಭದೊಳಿರೆ ಬಯಕೆಯೆಲ್ಲಾ ಜೀವಂಗಳಂ ದಯೆಗೆಯ್ವಂತಿರೆ ಅದನರಸಂ ಕೇಳ್ದು ತನ್ನ ಪೊಟಲೊಳಂ ನಾಡೊಳಂ ಆರಪ್ಪೊಡಂ ಜೀವಂಗಳಂ ಕೊಲ್ಲದಂತು ಗೋಸನೆ ಗಳಯಿಸದನದು ಕಾರಣದಿಂ ('ಸ'ಇದು ಮುದ್ರಣದೋಷವಿರಬಹುದು.

* 'ಛ' ಪ್ರತಿಯಲ್ಲಿ 'ಳಂ ಪೊ' ಎಂಬ ಪಾಠವಿರುವುದನ್ನು ಡಿ.ಎಲ್.ಎನ್ ಅಡಿಟಿಪ್ಪಣಿಯಲ್ಲಿ ತಿಳಿಸಿದ್ದು 'ಗೋಸನೆಗಳೆಯಿಸಿದನದು' ಎಂಬುದರ ಬದಲು 'ಗೋಸನೆಗಳಂ ಪೊಯ್ಸಿದನದು' ಎಂದಾಗಬೇಕಿತ್ತು. ಇದನ್ನು ಇಬ್ಬರೂ ಸಂಪಾದಕರು ಗಮನಿಸಿದಂತಿಲ್ಲ.

೨೨. ಪಲ್ಲಿಖೇಡಮೆಂಬೂರನೆಯ್ದುವರೆಡೆಯೊಳ್

೨೩. ಯತ್ರಾಸ್ತಮಿತ ವಾಸಿಗಳೆಲ್ಲಿ ನೇಸರ್ಪಟ್ಟಿತ್ತಲ್ಲಿಯೆ ಕೇಡವಱಪ್ಪುದರಿಂದೂರ ಪೊಟಲೊಳ್

೨೪. ಕೂಟಿಂ ತಪ್ಪುದಂ

೨೫. ವಿಜಾಣದೋ ಸಮಣೋ

೨೬. ಛಿಣ್ಣೋವ ಛಿಣ್ಣೋವ ಖ ಇದೇವ

೨೭. ದುಣ್ಣಾಲೋಗಾ

೨೮. ತಿಣ್ಣಂ ಬೋಸಸ್ಸದ ಭಾಮೇಣ

೨೧. ಶ್ರೀಮತಿಯ ಗರ್ಭದೊಳ್ ನೆಲಸಿರೆ ಆಕೆಗೆಲ್ಲಾ ಜೀವಂಗಳಂ ದಯೆಗೆಯ್ವ ಬಯಕೆಯಾದುದರಸಂ ಕೇಳ್ದು ತನ್ನ ಪೊಟಲೊಳಂ ನಾಡೊಳವಾರಪ್ಪೊಡಂ ಜೀವಂಗಳಂ ಕೊಲ್ಲದಂತು ಗೋಸನೆಗಳೆಯಿಸಿದನದು ಕಾರಣದಿಂ

* ಹಂಪನಾ ಪಾಠಕ್ಕಿಂತ ಡಿ.ಎಲ್.ಎನ್. ಪಾಠದ ಅರ್ಥ ಹೆಚ್ಚು ಸ್ಫುಟವಾಗಿದೆ.

೨೨. ಪಲ್ಲಿಖೇಡಮೆಂಬೂರ ನೆಯ್ದುವನ್ನೆಗಮೆಡೆಯೊಳ್ (ಯೋ.ಪಾ)

೨೩. ಯತ್ರಾಸ್ತಮಿತ ವಾಸಿಗಳೆಲ್ಲಿ ನೇಸರ್ಪಟ್ಟಿತ್ತಲ್ಲಿಯೆ ನಿಲ್ವರಪ್ಪುದಱಿಂದೂರ ಪೊಱಪೊಟಲ ಪೊಲದೊಳ್ (ಯೋ.ಪಾ)

೨೪. ಕೂಟಿಂ ತಪ್ಪುದಂ (ಯೋ.ಪಾ)

೨೫. ವಿಜಾಣಗಾ ಸಮಣಾ

೨೬. +ತಿಣ್ಣೆವ ಚಿಣ್ಣೆವಕ್ಖಯಿ ಇದೇವ

೨೭. ದುಣ್ಣಾರೋಗಾ

೨೮. ತಿಣ್ಣಂ ಚೋ ಸುಸದಭಾವೇಣ

೭೯. ಝೂಣೇಣ
೮೦. ಸಂಜೋಗ ವಿಪ್ಪಜೋಗೇ
೮೧. ಸಮತಾ ಸಾಮಾಯಿಗಂ
೮೨. ಘಂಟೇಹಿ
೮೩. ಸಮವಸರಣದೊಳ್
೮೪. ಚಾತುರ್ವರ್ಣ ಶ್ರಮಣ ಸಂಘಮುಂ (ಯೋ.ಪಾ)
೮೫. ಬಳಸಿಯುಂ ಬಂದು ಧರ್ಮಮಂ (ಯೋ.ಪಾ)
೮೬. ವೀರ್ಯದೊಳ್ ಕೊಡಿ (ಮುದ್ರಣ ದೋಷವಿರಬಹುದು)
೮೭. ಪೇಯ ರಜಮಜರ ಮಧುರಂ
೮೮. ಅಣೋವಮಂ ಪತ್ತೋ
೮೯. ಅಬ್ಬಾಬಾಧ ಮಣಂತಮಣಾಗಯ
೯೦. ಯತ್ರಾಸ್ತಮಿತ ವಾಸಿಯೆಲ್ಲಿ ನೇರ್ಪಟ್ಟಿತ್ತಡೊಡಲ್ಲಿಯೆ ಕೆಡವಱಪ್ಪುದಱಿಂ
೯೧. ಸೊರ್ಕೆ ತೂಂಕಡಿಸಿ (ಮುದ್ರಣ ದೋಷವಿರಬಹುದು)
೯೨. ಜನಂಗಳನೆರ್ವ್ವಟ್ಟಿ
೯೩. ಬೇಗೆಗಿಚ್ಚು ತಗುಟ್ದೊಡೆ
೯೪. ಪೊಕ್ಕೊಡೆಯದಂ ಕಂಡು
೯೫. ಪಿರಿದು ತಡೆದೊಡೆ

೭೯. ಝೂಣೇಣ
೮೦. ರಂಜೋಗ ವಿಪ್ಪಜೋಗೇ
೮೧. ಸಮದಾ ಸಾಮಾಯಿಗಂ
೮೨. ಪುಂಟಿಹ
೮೩. ಸಮವಸರಣ ಕೋಷ್ಠಂಗಳೊಳ್ (ಯೋ.ಪಾ)
೮೪. ಚಾತುರ್ವರ್ಣ್ಯ ಸಂಘಮುಂ
೮೫. ಬಳಸಿಯುಂ ಬಂಧು ಧರ್ಮಮಂ (ಮುದ್ರಣ ದೋಷವಿರಬಹುದು)
೮೬. ವೀರ್ಯದೊಳ್ ಕೂಡಿ
೮೭. ಅರುಜಮಮರಣಂ ಮಧುರಂ
೮೮. ಅಣೋವಮಂ ಪತ್ತಾ
೮೯. ಅವ್ವಾಬಾಧಮಂಣತಂ ಅಣಗಾರಾ
೯೦. ಯತ್ರಾತ್ಸಮಿತ ವಾಸಿಯೆಲ್ಲಿ ನೇಸರ್ಪಟ್ಟೊಡಲ್ಲಿಯೆ ನಿಲ್ವರಪ್ಪುದಱಿಂ (ಯೋ.ಪಾ)
೯೧. ಸೊರ್ಕಿ ತೂಂಕಡಿಂದಿರುಳ್ (ಯೋ.ಪಾ)
೯೨. ಜನಂಗಳನೆಬ್ಬಿಟ್ಟಿ (ಯೋ.ಪಾ)
* 'ಕ ಗ' ಪ್ರತಿಗಳಲ್ಲೂ 'ಬ್ಬ'ಇದೆ.
೯೩. ಕಾಟ್ಕಿಚ್ಚು ತಗುಟ್ದೊಡೆ (ಯೋ.ಪಾ)
೯೪. ಪೊಕ್ಕೊಡದಂ ಕಂಡು (ಯೋ.ಪಾ)
೯೫. ಪಿರಿದು ಬೇಗಂ ತಡೆದಳ್ (ಯೋ.ಪಾ)

೯೬. ಆಕಾಶಕ್ಕೆ ಪ್ರೋಗದು (ಲಿಪಿಕಾರನ ದೋಷವಿರಬಹುದು)

೯೭. ನೋಟ್ಟಿನ್ನೆಗಂ

೯೮. ಎನಗುಪಕಾರಿಯಯ್ (ಯೋ.ಪಾ)

೯೯. ನಿನಗಾಂ ಬೆಸಕೆಯ್ದಂ ನಿನಗೆಂತಪ್ಪೊಡೊಂದು ಬೆಸನಂ ಪೇೞೆಂದೊಡೆ

೧೦೦. ವಿದ್ಯೆಗಳಿಂದಂ

೧೦೧. ಪೊತ್ತಾಱೆ (ಯೋ. ಪಾ)

೧೦೨. ಕಿಚ್ಚಿನೊಳ್ ಬೆಂದು ಸತ್ತ (ಯೋ.ಪಾ)

೧೦೩. ಸತ್ತು ವೆಂತರದೇವನಾಗಿ ಪುಟ್ಟಿಮಾಯುಷ್ಯಾಂತದೊಳ್

೧೦೪. ಆಯುಷ್ಯಾಂತದೊಳ್ ಸಹಸ್ರಾರ ಸಲ್ಪದೊಳ್ ಪದಿನೆಂಟು ಸಾಗರ......

* ಹಂಪನಾ ಆವೃತ್ತಿಯಲ್ಲಿ ಒಂದಿಷ್ಟು ಪಾಠ ಹಿಂದುಮುಂದಾಗಿ ಬಂದಿದೆ.

೧೦೫. ಅಲ್ಲಿಂದಂ ಬಂದಿಲ್ಲಿ

೧೦೬. ದಂತಪುರಮೆಂಬ ಪೊಳಲೊಳೊಂದು ದಿವಸಂ ಕರುಮಾಡದ ಮೇಗಣ ನೆಲೆಯೊಳಿರ್ದ್ದರಸಂ ಪಡುವಣ ಬೆಟ್ಟದ ಮೇಗೆಕಸ್ಥಿರಯೋಗಂಗೊಂಡು ಕಲ್ನೆಲೆನಿಂದರನ್ನೆಗಂ ಆ ಪೊೞಲನಾಳ್ವೊಂ ನರಸಿಂಹನೆಂಬರಸನಾತನ ಮಹಾದೇವಿ.......

* ಹಂಪನಾ ಅವರಲ್ಲಿ ಒಂದಿಷ್ಟು ಪಾಠ ಹಿಂದು ಮುಂದಾಗಿದೆ. ಇದು ಲಿಪಿಕಾರನ ಪ್ರಮಾದವಾಗಿರಬಹುದು.

೯೬. ಆಕಾಶಕ್ಕೊಗೆದು (ಯೋ.ಪಾ)

೯೭. ನೋಟ್ಪಾಗಳ್ (ಯೋ.ಪಾ)

೯೮. ಎನಗುಪಕಾರಿಯಮ್ (ಮುದ್ರಣ ದೋಷವಿರಬಹುದು)

೯೯. ನಿನಗಾಂ ಬೆಸಕೆಯ್ವೆನೆನಗೇನಪ್ಪೊಡಮೊಂದು ಬೆಸನಂ ಪೇೞೆಂದೊಡೆ (ಯೋ.ಪಾ)

೧೦೦. ವಿದ್ಯೆಗಳಿಂದಮೆ (ಯೋ. ಪಾ)

೧೦೧. ಪೊಟ್ಟಿಡೆ

೧೦೨. ಕಿರ್ಚಿನೊಳ್ ಸತ್ತ

೧೦೩. ಸತ್ತು ವ್ಯಂತರದೇವಾಗಿಯಾಯುಷ್ಯಾಂತದೊಳ್ (ಯೋ.ಪಾ)

೧೦೪. ಆ ಯ ು ು ಷ್ಯಾ ಂ ತ ದೊ ಳ್ ಪ ದಿ ನೆ ಂ ಟು ಸಾಗರೋಪಮಾಯುಷ್ಯಮನೊಡೆಯ ಸಹಸ್ರಾರ ಕಲ್ಪದೊಳ್

೧೦೫. ಅಲ್ಲಿಂ ಬಂದೀಗಳ್ (ಯೋ.ಪಾ)

೧೦೬. ದಂತಪುರವೆಂಬ ಪೊೞಲ ಪಡುವಣ ಬೆಟ್ಟದ ಮೇಗೇಕಸ್ಥಿರಯೋಗಂಗೊಂಡು ಕಲ್ನೆಲೆ ನಿಂದರನ್ನೆಗಂ ಆ ಪೊೞಲನಾಳ್ವೊಂ ನರಸಿಂಹನೆಂಬರಸನಾತನ ಮಹಾದೇವಿ ವಸುಮತಿಯೆಂಬೊಳಾಯಿರ್ವ್ವರ್ಗ್ಗಂ ಮಗಂ ನರಪಾಳನೆಂಬೊಂ ಮಂತ್ರಿ ಬುದ್ಧಿದಾಸನೆಂಬೊನಂತವರ್ಗ್ಗಳ್ಬೆರಸೊಂದು ದಿವಸಂ ಕರುಮಾಡದ ಮೇಗಣ ನೆಲೆಯೊಳಿರ್ದ್ದರಸಂ (ಯೋ.ಪಾ)

೧೦೭. ಆತನುಮಂತೆಗೆಯ್ವೆನೆಂದು ರಿಷಿಯರ್ ಚರಿಗೆವೋದರ್	೧೦೭. ಆತನುಮಂತೆಗೆಯ್ವೆನೆಂದು ಪೋಗೆಯಾ ರಿಷಿಯರ್ (ಯೋ.ಪಾ)
* 'ಪೋಗೆಯಾ' ಎಂಬ ಶಬ್ದ ಹಂಪನಾ ಪಾಠದಲ್ಲಿ ಕೈಬಿಟ್ಟು ಹೋಗಿದೆ.	
೧೦೮. ಚರಿಗೆವುತ್ತಿರ್ದ್ದ (ಮುದ್ರಣದೋಷವಿರಬಹುದು.)	೧೦೮. ಚರಿಗೆವುಗುತ್ತಿರ್ದ್ದ (ಯೋ.ಪಾ)
೧೦೯. ಚರಿಗೆ ಮಾಡಲೇಕೆ ಪೋದಪಿರೆಂದೊಡೆ	೧೦೯. ಏಕೆ ಚರಿಗೆ ಮಾಡಲ್ ಪೋದಪಿರೆಂದೊಡೆ (ಯೋ.ಪಾ)
೧೧೦. ಪೂಜಿಸುವುದಂ ಕಂಡು	೧೧೦. ಪೂಜಿಸಿದುದುಮಂ ಕಂಡು (ಯೋ.ಪಾ)
೧೧೧. ಪಾಪಮಿಂತಲ್ಲದೆ ಪೋಗದೆಂದು	೧೧೧. ಪಾಪಮಿಂತಲ್ಲದೆ ನೀಗದೆಂದು (ಯೋ.ಪಾ)

■

೧೫ ಚಿಲಾತ ಪುತ್ರನ ಕಥೆ

೧. ಗಾಹೆ ॥ ಚಿಳಾದ ಪುತ್ತೋ

೨. ನೀರೂಡಿ ಮಿಸಿಸಿ ಕಟ್ಟಿ (ಯೋ.ಪಾ)

* 'ಖಚ'ಗಳಲ್ಲಿ ಮಿಸಿಸಿ ಎಂಬ ಪಾಠವಿದೆ.

೩. ಕಳೆದೊಡಲ್ಲಿ

೪. ಕನ್ನೆಯರ್ಕ್ಕಳುಂ ಸಖೀಜನಂಗಳುಂ ಕಾಪಿನವರುಂ ಬೆರಸು (ಯೋ.ಪಾ)

* 'ಘಚಛ'ಗಳಲ್ಲಿ +ಸಖೀ ಜನಂಗಳುಂ ಎಂದಿದ್ದು ಅದು ಹಂಪನಾ ಪಾಠದಲ್ಲಿ ಸೇರಿಕೊಂಡಿದೆ.

೫. ನೀನಲ್ಲದೆನಗುಟಿದ ಪರಪುರುಷರ್ (ಯೋ.ಪಾ)

'ಖ' ಪ್ರತಿಯಲ್ಲಿ '+ಪರ' ಇದ್ದು, ಅದು ಹಂಪನಾ ಪಾಠದಲ್ಲಿ ಸೇರಿಕೊಂಡಿದೆ.

೬. ಬರೆದು (ಯೋ. ಪಾ)

* 'ಬಗೆದು' ಎಂಬುದು ಬೇಕಿಲ್ಲ.

೭. ಚಮರಿಗಳುಮಂ

೮. ಬಿಟ್ಟಿರ್ದ್ದನ್ನೆಗಂ(ಇದರ ಹಿಂದೆ 'ಬೀಡಂ' ಎಂಬುದು ಬೇಕು)

೯. ಬಿಟ್ಟಿರ್ದ್ದಲ್ಲಿಗೆ

೧೫ ಚಿಲಾತ ಪುತ್ರನ ಕಥೆ

೧. ಗಾಹೆ ॥ ಚಿಲಾತ ಪುತ್ತೋ

೨. ನೀರೂಡಿ ಮೈದೊಳೆದು ಕಟ್ಟಿ

೩. ಕಳೆಯೆಪಟ್ಟೊನಾಗಿ (ಯೋ.ಪಾ)

೪. ಕನ್ನೆಯರ್ಕಳುಂ ಕಾಪಿನವರುಂ ಬೆರಸು

೫. ನೀನಲ್ಲದೆನಗುಟಿದ ಪುರುಷರ್

೬. ಬಗೆದು ಬರೆದು

೭. ಚಮರಿಗಳುಮಂ (ಯೋ.ಪಾ)

೮. ಬೀಡಂ ಬಿಟ್ಟಿರ್ದನನ್ನೆಗಂ (ಯೋ.ಪಾ)

೯. ಬಿಟ್ಟಿರ್ದೂರ್ಗೆ

೧೦. ಊರಂ ಪೊಱಮಟ್ಟು

೧೧. ಪತ್ತುಂ ತೆಱದ ಕಲ್ಪವೃಕ್ಷಂಗಳ್ (ಯೋ.ಪಾ)

* 'ಘಚಛ' ಪ್ರತಿಗಳಲ್ಲಿ '+ಕಲ್ಪ' ಎಂಬ ಪಾಠವಿದ್ದು ಅದು ಹಂಪನಾ ಪ್ರತಿಯಲ್ಲಿ ಸೇರಿದೆ. 'ಕಲ್ಪವೃಕ್ಷ' ಎಂಬ ರೂಪವೇ ಹೆಚ್ಚು ಯೋಗ್ಯ.

೧೨. ರಾಜಾರ್ಹ

೧೩. ಬಿಟ್ಟೊಡಾವನೊರ್ವನಂಜದುಣ್ಗುಮಾತನಕ್ಕುಂ (ಮುದ್ರಣದೋಷವಿರಬಹುದು)

೧೪. ರಾಜ್ಯಚಿಹ್ನಂಗಳಂ ಪುಡಿಕೆಯುಮಂ ಕೈಕೊಳ್ಗುಮಾತಂ

* ಇವರಿಬ್ಬರ ಪಾಠಕ್ಕಿಂತ ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ತಿಳಿಸಿರುವ 'ಚ' ಪ್ರತಿಯ 'ಭೇರಿಯಂ ದಳಿಗೆಯುಮಂ' ಎಂಬ ಪಾಠವು ಹೆಚ್ಚು ಯೋಗ್ಯವೆಂದು ತೋರುತ್ತದೆ.

೧೫. ಜೇನಸಾಲೆಯುಮಂ

೧೬. ರೋರುಗಮೆಂಬ ಪೊಟಲ (ಯೋ.ಪಾ)

* 'ಘಚಛ' ಪ್ರತಿಗಳಲ್ಲಿ 'ರೋರುಗಪುರ' ಎಂಬ ಪಾಠವಿದೆ.

೧೭. ಉದ್ದಾಯನ

೧೦. ಊರಿಂ ಪೊಱಮಟ್ಟು (ಯೋ.ಪಾ)

೧೧. ಪತ್ತುಂ ತೆಱದ ವೃಕ್ಷಂಗಳ್

೧೨. ರಾಜ್ಯಾರ್ಹ (ಯೋ.ಪಾ)

೧೩. ಬಿಟ್ಟೊಡಾವನೊರ್ವನಂಜದುಣ್ಗುಮಾತನಕ್ಕುಂ (ಯೋ.ಪಾ)

೧೪. ರಾಜ್ಯಚಿಹ್ನಂಗಳಂ ಕೈಕೊಳ್ಗುಮಾತಂ

೧೫. ಜಯನಶಾಲೆಯುಮಂ (ಯೋ.ಪಾ.)

* 'ಚ ಛ' ಪ್ರತಿಗಳಲ್ಲಿ 'ಜೈವಣ ಸಾಲೆ' ಎಂಬ ಪಾಠವಿದೆ. (ಜಯನಶಾಲೆ = ಆಯುಧಾಗಾರ)

೧೬. ಮಾರುಗಮೆಂಬ ಪೊಟಲನಾಳ್ವ

೧೭. ಒದ್ದಾಯನ (ಯೋ.ಪಾ.)

೧೮. ಪರಿವಾರದೆಜಿತನಿಗರ

* ಎರಡೂ ಅರ್ಥಗಳು ಅಸ್ಪಷ್ಟವಾಗಿವೆ. 'ಖ'ಪ್ರತಿಯಲ್ಲಿ 'ಸರಿವಾರದೆರತನಿಗರ'ಎಂಬ ಪಾಠವಿದೆ. ಅದು ಮೂಲದಲ್ಲಿ ಸಪರಿವಾರ ಬೆರೆಶೇರಣೆಗರ'ವಾಗಿದ್ದು ಏರಣೆಗರ, ಪಾರ್ವರ, ಪರದರ ಒಳ್ಪೆಂಡಿರನ್ನು ಆತ ಕೂಡಿದ ಎಂದು ಅರ್ಥೈಸಬಹುದು.

೧೯. ನಿವೃತ್ತಿಗೆಯ್ದು ಪ್ರಾಯೋಪಗಮನ ಮರಣದಿಂ ಕಾಯೋತ್ಸರ್ಗಂ ಗೆಯ್ದಿರ್ದ್ದನನ್ನೆಗಂ .....

೨೦. ಬಲಂ ಕುದಿದು ಬಂದು

೨೧. ಮೆಯ್ಯೆಲ್ಲಮನುರ್ಚೆ ಇಲಿ ಸಟ್ಟುಗದಂತೆ ಬಳಸಿಯುಂ

* 'ಇಲಿ' ಹಂಪನಾ ಅವರಲ್ಲಿನ ಹೆಚ್ಚಿನ ಪಾಠವಾಗಿದೆ.

೨೨. ಸನ್ಯಸನಂ ಗೆಯ್ದು (ಯೋ.ಪಾ)

೧೮. ಪರಿವಾರದೆಜಿತನಿಗರ

೧೯. ನಿವೃತ್ತಿಗೆಯ್ದು ಚಿಲಾತಪುತ್ರಂ ತಪಂಬಟ್ಟು ಕಾರ್ಯೋತ್ಸರ್ಗಂ ಗೆಯ್ದಿದೊರ್ (ಯೋ.ಪಾ)

* ಹಂಪನಾ ಅವರಲ್ಲಿ ಒಂದಿಷ್ಟು ಪಾಠ ಕೈಬಿಟ್ಟು ಹೋಗಿದೆ.

೨೦. ಬಲಂ ಕೇಳ್ದು ಬಂದು (ಯೋ.ಪಾ)

೨೧. ಮೆಯ್ಯೆಲಮನುರ್ಚಿಯುಂ ಸಟ್ಟುಗದಂತೆ ಬಳಸಿಯುಂ (ಯೋ.ಪಾ)

೨೨. ಸನ್ಯಸನಂ ಗೆಯ್ದು

■

೧೬. ದಂಡಕನೆಂಬ ರಿಸಿಯ ಕಥೆ

೧. ಅಗಣೆತ್ತಾ =ಉಪಮೆಗಳಿದನಾಗಿಯುಂ

* 'ಕ-ಗ' ಪ್ರತಿಗಳಲ್ಲಿರುವ 'ಉಪಮೆಗಳಿದನಾಗಿಯುಂ' ಎಂಬ ಪಾಠವು ಹಂಪನಾ ಪ್ರತಿಯಲ್ಲಿದೆ. ಆದರೆ ಅರ್ಥದ ದೃಷ್ಟಿಯಿಂದ ಡಿ.ಎಲ್.ಎನ್. ಪಾಠವೇ ಯೋಗ್ಯವೆಂದು ತೋರುತ್ತದೆ.

೨. ಆದರಿಂದಾತಂಗೆ ಪುಟ್ಟಿದೊಡೆ (ಯೋ.ಪಾ)

* 'ಘಚಛ' ಪ್ರತಿಗಳಲ್ಲಿರುವ 'ಪುಟ್ಟಿದೊಡೆ' ಎಂಬುದು ಹಂಪನಾ ಪಾಠದಲ್ಲಿದ್ದು ಅರ್ಥದ ದೃಷ್ಟಿಯಿಂದ ಅದು ಯೋಗ್ಯವೆನ್ನಿಸುತ್ತದೆ.

೩. ಸೋಪಾನ ಪಂಕ್ತಿಗಳನೇಱಿ ಗಂಧ ಕುಟಿ ಪ್ರಾಸಾದಮಂ ತ್ರಿಪ್ರದಕ್ಷಿಣಂಗೆಯ್ದು

೪. ಭವಮುಮಂ

೫. ಬೆಜ್ಜರಂ (ಯೋ.ಪಾ) (ಘ ಛ ಪ್ರತಿಗಳಲ್ಲಿದೆ)

೬. ನರಕದ (ಯೋ.ಪಾ)

೭. ನಿಱಿಸಿ ಯಾರಾನುಂ ಚರಿಗೆ ಮಾಡಿದೊಡಪ್ಪೊಡಂ ಛರ್ದಿಯಕ್ಕುಂ (ಯೋ.ಪಾ)

* 'ಕಖಗ' ಪ್ರತಿಗಳಲ್ಲಿ 'ನಿಱಿಸಿ ಯಾರನುಂ ಚರಿಗೆ ಮಾಡಿಸಿದ (ದೊ)ರಪ್ಪೊಡಂ' ಎಂದಿದೆ.

೧೬. ದಂಡಕನೆಂಬ ರಿಸಿಯ ಕಥೆ

೧. ಆಗಣೆತ್ತಾ =ಬಗೆಯದೆ (ಯೋ.ಪಾ)

೨. ಆದರಿಂದಾತಂಗೆ ತಾಯುಂ ತಂದೆಯುಂ

೩. ಸೋಪಾನ ಪಂಕ್ತಿಗಳಿಂದೊಪ್ಪುವುದನೇಱಿ ಗಂಧ ಕುಟಿ ಪ್ರಾಸಾದಮಂ ತ್ರಿಪ್ರದಕ್ಷಿಣಂ ಗೆಯ್ದು (ಯೋ.ಪಾ)

೪. ಭವಮೇನೆಂದು (ಯೋ.ಪಾ)

೫. ವೈದ್ಯರುಂ

೬. ನರಕದೆ (ಅಕ್ಷರ ದೋಷವಿರಬಹುದು)

೭. ಮೂಱಿತ್ತು ನಿಱಿಸಿದೊಡಂ ಛರ್ದಿಯಕ್ಕುಂ

೮. ಮಾಡಿದುಂಡೆಗಳಂ ಪದಿನಾಱು ಸಾಸಿರ್ವರಸಿಯರ್ಕ್ಕಳ ಮನೆಗಳೊಳ್

೯. ಪಕ್ಕದೆ ಜಯನಂ

೧೦. ಮುಳಿಸಂ ಭಾವಿಸಿ

೧೧. ಪ್ರಾಯಶ್ಚಿತ್ತಮಂ ಸಿಂಹವಿಕ್ರೀಡಿತಮೆಂಬ

೧೨. ಬಾಳ್ತೆಯಲ್ತು ಎನ್ನದೇವನೆಂದಱಿದು

೧೩. ಮುನ್ನನೇಕವಾರಂ ದಂಡಕನಿಂದಂ ಪಲವುಂ ದಂಡಣೆಗಳ

೧೪. ಸಜ್ಝಾಯಗಿರಿ

೧೫. ಕಾಟ್ಕಿಚ್ಚು ಬಳಸಿಯುಂ ತಗುಳ್ದು

೮. ಮಾಡಿದುಂಡೆಗಳಂ ಪಿಟ್ಟಿನೊಳ್ ಸಾಸಿರ್ವರರಸಿಯರ ಮನೆಗಳೊಳ್ (ಯೋ.ಪಾ)

೯. ಪಕ್ಕದೆ ವೈದ್ಯ ಜಯನಂ (ಯೋ.ಪಾ)

೧೦. ಮುಳಿಸಂ ತಳೆದು (ಯೋ.ಪಾ)

೧೧. ಪ್ರಾಯಶ್ಚಿತ್ತಮಂ ಕೊಂಡು ಸಿಂಹನಿಷ್ಕ್ರೀಡಿತಮೆಂಬ (ಯೋ.ಪಾ)

೧೨. ಬಾಟ್ತೆಯಲ್ತೆನ್ನದೇವನೆಂದು ಸಲೆ (ಯೋ.ಪಾ)

೧೩. ದಂಡಕನಿಂದ ಪಲವು ಸೂಟ್‌ದಂಡಣೆಗಳ (ಯೋ.ಪಾ.)

೧೪. ಸಜ್ಝಾತಗಿರಿ (ಯೋ.ಪಾ)

೧೫. ಕಾಟ್ಕಿಚ್ಚು ಮೂವಳಸಂ ಬಳಸಿಯುಂ (ಯೋ.ಪಾ)

■

೧೭. ಮಹೇಂದ್ರದತ್ತಾಚಾರ್ಯರ್ ಮೊದಲಾದ ಅಯ್ನೂರ್ವರ್ ರಿಸಿಯರ್ಕಳ ಕಥೆ

೧. ಗಾಹೆ ।। ಪವಣ್ಣೋ

೨. ಭರತಕ್ಷೇತ್ರದೊಳ್ ಪೂರ್ವದೇಶದೊಳ್ ಸಾವಸ್ತಿಯೆಂಬುದು (ಯೋ.ಪಾ) (ಕಖಗ ಪ್ರತಿಗಳಲ್ಲಿದೆ)

೩. ವ್ಯಾಳಕನೆಂಬ ಮಂತ್ರಿ

೪. ಅರಸುಮಕ್ಕಳ್

೫. ಅವರೋದುವ ಕ್ಷೇತ್ರದ ಬಳಸಿಯುಂ

೬. ಸುಮ್ಮಗಿರ್ದಂ

೭. ದಮ್ಮಮುಂ

೮. ಭಂಡಾರದ ಮನೆಯೊಳ್ ಕನ್ನಮನಿಕ್ಕಿ ಭಂಡಾರದ ಮನೆಯೊಳ್ ಕಳವು ಪೋದುದೆಂದು

೯. ಬಸದಿವರೆಗಂ ದಮ್ಮಮಂ ಪೊನ್ನುಮೊಗುತ್ತಂ ಪೋದುವೆಂದು

* ಹಂಪನಾ ಆವೃತ್ತಿಯಲ್ಲಿ ಒಂದಿಷ್ಟು ಪಾಠ ಕೈಬಿಟ್ಟು ಹೋಗಿದೆ.

೧೦. ಬೂತಿಂಗೆ ದ್ರವಮಂ ಕೊಟ್ಟವನ ತಲೆಗಿರಿಸಿ

೧೧. ನಮೋಸ್ತು ನಮೋಸ್ತು ಇದೇನೆಂದು (ಯೋ.ಪಾ)

೧೭. ಮಹೇಂದ್ರದತ್ತಾಚಾರ್ಯರ್ ಮೊದಲಾದ ಅಯ್ನೂರ್ವರ್ ರಿಸಿಯರ್ಕಳ ಕಥೆ

೧. ಪವಣ್ಣಾ

೨. ಭರತಕ್ಷೇತ್ರದೊಳ್ ವಿದೇಹಮೆಂಬುದು ನಾಡಲ್ಲಿ

೩. ವ್ಯಾಳನೆಂಬಂ ಮಂತ್ರಿ (ಯೋಪಾ)

೪. ಅರಸುಮಕ್ಕಳೆ (ಯೋ.ಪಾ)

೫. ಕೂರ್ಪರನಟ್ಟಿ ಅವರೋದುವ ಕ್ಷೇತ್ರದೆ ಬಳಸಿಯುಂ (ಯೋ.ಪಾ)

೬. ಕೆಮ್ಮಗಿದ್ದಂ (ಯೋ.ಪಾ)

೭. [ದ್ರ]ಮ್ಮಮುಂ (ಯೋ.ಪಾ)

೮. ಭಂಡಾರದ ಮನೆಯೊಳ್ ಕನ್ನಮನಿಕ್ಕಿ ಭಂಡಾರಮೆಲ್ಲಮಂ ಕಳ್ದುಕೊಂಡು ಪೋದರೆಂದು (ಯೋ.ಪಾ)

೯. ಬಸದಿವರೆಗಂ ದ್ರಮ್ಮಮುಂ ಪೊನ್ನು ಸಾರಬೀದಿಯಾಗಿಯುಮುಗುತ್ತುಂ ಪೋದವೆಂದು (ಯೋ.ಪಾ)

೧೦. ಬೂತಿಂಗೆದ್ರಮ್ಮಮಂ ಕೊಟ್ಟೊಡಂಬಡಿಸಿ ತಲೆಯ ಕಿರಿಸಿ (ಯೋ.ಪಾ)

೧೧. ನಮೋಸ್ತಿದೇನೆಂದು

೧೨. ನಂಬುಗೆಯಿಲ್ಲ

೧೩. ನಂಬಿಗೆಯಿಲ್ಲ ಈಗಳ್

೧೪. ಮುನ್ನಾ ಕಟಿದ (ಮುದ್ರಣದೊಷವಿರಬಹುದು)

೧೫. ಘನಮಾಗಿ ಬಂದರಸನುಮಂ

೧೬. ಮುತ್ತಿತ್ತ (ಮುದ್ರಣದೋಷವಿರಬಹುದು)

೧೭. ಆಯುಷ್ಯಮನೊಡೆಯ

೧೮. ಪದಿನನೆಯ್ದು (ಮುದ್ರಣದೋಷವಿರಬಹುದು)

೧೯. ಪೆರ್ವ್ಪಾಗಿ (ಯೋ.ಪಾ)

೨೦. ನಾರಕನಾಗಿ ಬಂದಿಲ್ಲಿ ಚೋರನಾಗಿ ಪುಟ್ಟಿ ಪಾಪಂಗೆಯ್ದು

* ಹಂಪನಾ ಅವರಲ್ಲಿ ಹೆಚ್ಚುವರಿ ಪಾಠವಿದೆ.

೨೧. ದುಃಖಂಗಳಂ ಅನಂತಾನಂತಂ ಅನುಭವಿಸಿ ನೀಡುಱಿದೆಂತಾನುಂ (ಯೋ.ಪಾ)

೨೨. ಭಬ್ಯರ್ಕಳುಂ

೨೩. ರಿಷಿಯರ್ಕಳುಂ

೧೨. ನಂಬಿದೆಯಿಲ್ಲ (ಯೋ.ಪಾ)

೧೩. ನಂಬಿದೆಯಿಲ್ಲಮೀಗಳ್ (ಯೋ.ಪಾ)

೧೪. ಮುನ್ನ ಕಟಿದ (ಯೋ.ಪಾ)

೧೫. ಘನರವದಿಂ ಬಂದರಸನುಮಂ (ಯೋ.ಪಾ.)

೧೬. ಮತ್ತಿತ್ತ (ಯೋ.ಪಾ)

೧೭. ಆಯುಷ್ಯಮನೊಡೆಯೊಂ (ಯೋ.ಪಾ)

೧೮. ಪದಿನಯ್ದು (ಯೋ.ಪಾ)

೧೯. ಪೆರ್ವವಾಗಿ (ಮುದ್ರಣದೋಷವಿರಬಹುದು)

೨೦. ನಾರಕನಾಗಿ ಪುಟ್ಟಿ ಸತ್ತು ಬಂದಿಲ್ಲಿ

೨೧. ದುಃಖಮನನುಭವಿಸಿ ನೀಡಱಿಂದೆತ್ತಾನುಂ

* ಹಂಪನಾ ಅವರಲ್ಲಿ 'ಅನಂತಾನಂತಂ' ಎಂಬ ಹೆಚ್ಚಿನ ಪಾಠವಿದೆ

೨೨. ಭವ್ಯರ್ಕಳ್ (ಯೋ.ಪಾ)

೨೩. ಋಷಿಯರ್ಕಳ್ (ಯೋ.ಪಾ)

೧೮. ಚಾಣಾಕ್ಯರಿಸಿಯ ಕಥೆ

೧. ಭೋಗಂಗಳನನುಭವಿಸುತ್ತಂ ಪಲವು ಕಾಲಂ ಸಲೆ

* 'ಖಘಭ'ಗಳಲ್ಲಿ 'ಪಲವು ಕಾಲಂ ಸಲೆ' ಎಂಬ ಪಾಠವಿದೆ.

೨. ದೇವಾ ನಮ್ಮ ಸಾರಮಪ್ಪ

೩. ಪೂವ ಕೊಯ್ವ

೪. ಎಲ್ಲಾ ಎಡೆಯಲರಸಿ

೫. ತದ್ಗುಣ್ಯೆಶ್ವಂ ವಿಭದ್ರೇ

೬. ಸಿಂಹಾಸನ ಮಸ್ತಕಸ್ಥಿತಂ

* 'ಖಘಭ' ಪ್ರತಿಗಳಲ್ಲಿ 'ಸಿಂಹಾಸನಾಸೀನನಾಗಿ ಎಂಬ ಪಾಠವಿರುವುದಾಗಿ ಡಿ.ಎಲ್.ಎನ್. ಅಡಿಟಿಪ್ಪಣಿಯಲ್ಲಿ ತಿಳಿಸಿದ್ದಾರೆ.

೭. ಪರಿವೃತನಾಗಿರ್ದ್ದು ('ಘಭ' ಪ್ರತಿಗಳಲ್ಲಿ 'ವೃ' ಇದೆ)

೮. ಬರಸಿ (ಮುದ್ರಣ ದೋಷವಿರಬಹುದು)

೯. ಎಮ್ಮರಸನಂ ಕೊಂದವನಂ ನೀನಱಿವೆಯಂಜದೆ ಪೇೞ್ ಅಲ್ಲದಾಗಳ್ ನಿನ್ನಂ ಕೊಲಿಸಿದಪ್ಪೆನೆಂದೊಡೆ ಭಯದಿಂ ಪಿಡಿಪೆತ್ತುಮಾತನಿಂತೆಂದು ಪೇೞ್ದಂ (ಯೋ.ಪಾ)

೧೮. ಚಾಣಾಕ್ಯರಿಸಿಯ ಕಥೆ

೧. ಭೋಗಂಗಳನನುಭವಿಸುತ್ತಿರೆಯಿರೆ (ಯೋ.ಪಾ)

೨. ದೇವಾ ನಿಮ್ಮ ಸಾರಮಪ್ಪ (ಯೋ.ಪಾ)

೩. ಪೂಗೊಯ್ವ (ಯೋ.ಪಾ)

೪. ಎಲ್ಲಾ ಪೋೞಿಯುಮಱಿಸಿ (ಯೋ.ಪಾ)

೫. ತದ್ಗುಣ್ಯೆರ್ಭದ್ರೆ ವಿಶ್ವಂ (ಯೋ.ಪಾ)

೬. ಸಿಂಹಾಸನಾಸೀನನಾಗಿ (ಯೋ.ಪಾ)

೭. ಪರಿವೇಷ್ಟಿತನಾಗಿರ್ದು (ಯೋ.ಪಾ)

೮. ಬರಿಸಿ (ಯೋ.ಪಾ)

೯. ಎಮ್ಮರಸನಂ ಕೊಂದವನಂ ನೀನಱಿವೆಯಂಜದೆ ಪೇೞಲ್ಲದಾಗಳ್ ನಿನ್ನಂ ಕೊಲಿಸಿದಪ್ಪೆನೆಂದೊಡೆ ಭಯಮಂ ಬೇಡಿಯಾತನಿಂತೆಂದು ಪೇೞ್ದಂ. (ಕೊಲಿಸಿದಪ್ಪೆನೆಂದೊಡಭಯಮಂ ಬೇಡಿಯಾತನಿಂತೆಂದು ಪೇೞ್ದಂ) ಆಗಿರಬಹುದೇ ?

೧೦. ಮರನನೇಱಿ ಪೂವಂ ಕೊಯ್ವುತಂ ಕಂಡುಯೆತ್ತಾನುಮೆನ್ನಂ ಕಂಡೊಡೆ ಕೊಲ್ಲುಗುಮೆಂದು

೧೧. ಆತಂಗೊಸೆದು ('ಗೊಸೆದು'ಎಂಬ ಪಾಠವು 'ಖಘಛ' ಪ್ರತಿಗಳಲ್ಲಿದೆ)

೧೨. ಕೆಲವುಂ ಬಾಡಮುಮಂ ಕೊಟ್ಟು (ಯೋ.ಪಾ)

೧೩. ಕೊಲಲ್ ಬಗೆದೊಡೆ

೧೪. ದಿವಸಕ್ಕಮೊಂದು ಮಲ್ಲಲ್ ಕೂಟುಮನೊಂದು

* ಮಲ್ಲಳಿ=ಗುಂಪು, ಮಲ್ಲಳಿಕೂಳು =ಒಂದು ಶ್ರಾವೆ ಅನ್ನ

೧೫. ನಾವಿನಿಬರುಂ ಸಾಯದೆ ಯಾವನೋರ್ವ್ವಂ ನಮ್ಮ ಪಗೆಯನಿಱಿಯಲುಂ ನಂದವಂಶಮಂ ನಿರ್ವಂಶಂ ಮಾಡಿ (ಯೋ.ಪಾ)

* 'ಘಛ' ಪ್ರತಿಗಳಲ್ಲಿರುವ 'ರುಮುಂ ಸಾಯದೆ ಯಾ' ಎಂಬ ಪಾಠವು ಹಂಪನಾ ಅವರು ಬಳಸಿದ ಪ್ರತಿಯಲ್ಲಿದೆ.

* ಹಂಪನಾ ಅವರಲ್ಲಿರುವ ಒಂದಿಷ್ಟು ಭಾಗ ಡಿ.ಎಲ್.ಎನ್. ಅವರಲ್ಲಿಲ್ಲ. 'ಖ,ಘ,ಛ' ಪ್ರತಿಗಳಲ್ಲಿ 'ಡವಭಯಮಂ ಬೇಡಿಯಾ' ಮತ್ತು 'ಡಾತನಭಯ ಮಂ ಬೇಡಿಯಾ (ಘ-ಛ) ಎಂಬ ಪಾಠಗಳಿದ್ದು ಪಾಠಗಳ ಸಂಖ್ಯಾಬಲದ ಆಧಾರದಿಂದ ಹಂಪನಾ ಅವರ ಪಾಠವೇ ಯೋಗ್ಯವೆನ್ನಿಸುತ್ತದೆ.

೧೦. ಮರನನೇಱಿ ಪೂಗೊಯ್ಯುತಿರ್ದಾಂ ಕಂಡೆತ್ತಾನುಮೆನ್ನುಮಂ ಕೊಲ್ಲುಗುಮೆಂದು (ಯೋ.ಪಾ)

೧೧. ಆತಂಗೆ ಮೆಚ್ಚಿ ಬಿಚ್ಚಳಿಸಿ (ಯೋ.ಪಾ)

೧೨. ಕೆಲವು ಬಾಟುಮಂ ಕೊಟ್ಟು

೧೩. ಕೊಲಿಸಲ್ಬಗೆದೊಡೆ (ಯೋ.ಪಾ)

೧೪. ಪ್ರತಿದಿನಕ್ಕೊಂದು ಮಲ್ಲಲ್ ಕೂಟುಮನೊಂದು (ಯೋ.ಪಾ)

೧೫. ನಾವಿನಿಬರುಂ ಸಾವರುಮಲ್ಲ ಬಾಟ್ವರುಮಲ್ಲೆಮ್ಮೊಳಾವನೊರ್ವ್ವಂ ನಮ್ಮ ಪಗೆಯನಿಱಿಯಲುಂ ನಂದನವಂಶಮಂ ನಿರ್ಮೂಲಂ ಮಾಡಿ

೧೬. ನಂದವಶಮಂ ನಿರ್ಮೂಲಂ ಕಿಡಿಸಲಾರ್ಪ್ಪೆನೆಂದು

೧೭. ಉಟಿದವರೆಲ್ಲಮುಣ್ಣ ದೆ ‌‌|ತ್ತರ್ (ಇಲ್ಲಿಯ 'ಸ' ಕೈಬಿಟ್ಟು ಹೋಗಿದೆ.)

* 'ಫ' ಪ್ರತಿಯಲ್ಲಿ 'ದಿರ್ದು' ಎಂಬ ಪಾಠವಿರುವುದಾಗಿ ಡಿ.ಎಲ್.ಎನ್. ಅವರು ತಿಳಿಸಿದ್ದು ಈಗ ಇರುವ ಎರಡೂ ಪಾಠಗಳಿಗಿಂತ 'ಉಣದಿರ್ದು' ಎಂಬ ಪಾಠವೇ ಹೆಚ್ಚು ಯೋಗ್ಯವೆನ್ನಿಸುತ್ತದೆ. (ಉಣದಿರ್ದು ಸತ್ತರ್)

೧೮. ಪೋದುಸಬಟುಕ್ಕೆ (ಮುದ್ರಣ ದೋಷ)

೧೯. ಸನ್ಮಾನದಾನಂಗಳಿಂದಾತನಂ ಪೂಜಿಸಿ

೨೦. ಶಕಟಾಳಯ

೨೧. ಮಂತ್ರಿಯಾಗಿ ಕಾಮಭೋಗಂಗಳನನುಭವಿಸುತ್ತಂ

೨೨. ನೈಮಿತ್ತಿಕಂ ವಸಂತಕನೆಂಬೊಂ (ಯೋ.ಪಾ)

೨೩. ನಾಲ್ಕುಂ ದಾಡೆಗಳನುದ್ದಿರ್ವಿ ಕಳೆದು

೨೪. ಮೀಮಾಂಸದಿ (ಮುದ್ರಣದೋಷವಿರಬುಹುದು)

೨೫. ನೆತ್ತರ್ವ್ವರೆ ನಟ್ಟೊಡೆ (ಯೋ.ಪಾ)

೨೬. ಮುಳಿದು ದರ್ಭೆಯನಗುಟ್ಟು

೧೬. ನಂದನವಂಶಮಂ ನಿರ್ಮೂಳಿಸಲಾನಾರ್ಪೆನೆಂದು (ಯೋ.ಪಾ)

೧೭. ಉಟಿದವರೆಲ್ಲ ಮುಣ್ಣಪಟ್ಟು ಸತ್ತರ್

೧೮. ಪೋದಿಂ ಬಟಿಕ್ಕೆ (ಯೋ.ಪಾ)

೧೯. ಸನ್ಮಾನದಾನಂಗಳಿಂದಾತನಂ ಸತ್ಕರಿಸಿ (ಯೋ.ಪಾ)

೨೦. ಶಕಟಾಳ (ಯೋ.ಪಾ)

೨೧. ಮಂತ್ರಿಯಾಗಿ ಇಷ್ಟವಿಷಯ ಕಾಮಭೋಗಗಂಗಳನನುಭವಿಸುತ್ತಂ (ಯೋ.ಪಾ)

೨೨. ನೈಮಿತ್ತಿಕಂ ಶ್ರಾವಕಂ ವಸಂತಕನೆಂಬೊಂ

೨೩. ನಾಲ್ಕುಂ ದಾಡೆಗಳನುದ್ದಿರ್ಸಿ ಕಳೆದು (ಯೋ.ಪಾ) (ಉದ್ದಿರ್ಸಿ =ಉಜ್ಜಿಸಿ)

೨೪. ಮೀಮಾಂಸಾ (ಯೋ.ಪಾ)

೨೫. ನೆತ್ತರ್ವ್ವರೆ ಕೊಂಡೊಡೆ

೨೬. ಮುಳಿದದನಗುಟ್ಟು (ಯೋ.ಪಾ)

೨೭.	ಶ್ಲೋಕದರ್ಥಮಂ	೨೭.	ಶ್ಲೋಕಾರ್ಥಮಂ (ಯೋ.ಪಾ)
೨೮.	ಸಹಾಯನಂ ಪೆತ್ತೆನೆಂದು ಪೊಸೆದು (ಯೋ.ಪಾ.)	೨೮.	ಸಖಾಯನಂ ಪೆತ್ತೆನೆಂದು ಪೊಸೆದು
೨೯.	ಶಕ್ತ್ಯಾ ಸಪ್ತಸಹಸ್ರೇಣ (ಯೋ.ಪಾ.)	೨೯.	ಶಕ್ತ್ಯಾಶಕ್ತಿ ಸಹಸ್ರೇಣ
೩೦.	ಚೋಳೆಗೆಯೊಳ್	೩೦.	ಚೋಳಂಗಿಯೊಳ್ (ಯೋ.ಪಾ)
೩೧.	ಚಾಣಾಕ್ಯಂಗಂ ಯಶೋಮತಿಗಮಿರ್ವರಿಗಮೆಂದು ನಿಸ್ರಾವಮಂ	೩೧.	ಚಾಣಾಕ್ಯಂಗಂ ಯಶೋಮತಿಗೆಂದಿರ್ವರ್ಗಂ ನಿಶ್ರಾವಮಂ (ಯೋ.ಪಾ)
೩೨.	ಅಭಿಪ್ರಾಯದಿಂದಿರ್ದ್ದೊರ್ನಂ (ಯೋ.ಪಾ)	೩೨.	ಅಭಿಪ್ರಾಯದಿಂದಿರ್ಪಾತನಂ
೩೩.	ಸುಖದಿಂ ಕಾಲಂ ಸಲೆ	೩೩.	ಸುಖಸಂಕಥಾ ವಿನೋದದಿಂ ಕಾಲಂ ಸಲೆ (ಯೋ.ಪಾ)
೩೪.	ನಿಮ್ಮಮ್ಮ ಪದಮೆಂಬುದು	೩೪.	ನಿಮ್ಮೀ ಪದಮೆಂಬುದು (ಯೋ.ಪಾ)
೩೫.	ನಿಮ್ಮ ಬಲದಿಂದಮಾಯುಣ್ಬ	೩೫.	ನಿಮ್ಮ ಬಲದಿಂದ ಮಾಮೆಮ್ಮ (ಯೋ.ಪಾ.)
೩೬.	ನಂದನನನಂದನಾಗೆ ಮಾಡುವೆಂ (ಯೋ.ಪಾ) (ನಂದನನ್ +ಅನಂದನಾಗೆ)	೩೬.	ನಂದನನಂದನಾಗೆ ಮಾಡುವೆಂ (ನಂದನ್+ಅನಂದನಾಗೆ)
೩೭.	ಜಾದಿನ ಸೆಲೆಗಳನುಟ್ಟು (ಪಾಠ ನಿರ್ಣಯ ದೋಷ)	೩೭.	ಜಾದಿನ ಸೇಲೆಗಳನುಟ್ಟು (ಯೋ.ಪಾ)
೩೮.	ಭಗವೇಶಮಂ ಕೈಕೊಂಡು ಮಹೋರಗಮೆಂಬ	೩೮.	ಭಗವಂತ ವೇಷಮಂ ಕೈಕೊಂಡು ಮಹೋದಕಮೆಂಬ (ಯೋ.ಪಾ)
೩೯.	ತೃಷಾಭಿವೃದ್ಧಿ	೩೯.	ತೃಷ್ಣಾಭಿವೃದ್ಧಿ (ಯೋ.ಪಾ)
೪೦.	ಬಯಕೆ ಮುಗಿದಿತ್ತು	೪೦.	ಬಯಕೆ ನೆಜೆದತ್ತು (ಯೋ.ಪಾ)
೪೧.	ಚಂದ್ರಗುಪ್ತ	೪೧.	ಚಂದ್ರಭುಕ್ತ (ಯೋ.ಪಾ)
೪೨.	ಅಲ್ಲಿಯ ವೃತ್ತಿಗರಪ್ಪರಸುಮಕ್ಕಳ್ಗೆ	೪೨.	ಅಲ್ಲಿಯ ಮಂತ್ರಿಯರ್ಕಳ್ಗಮರಸು ಮಕ್ಕಳ್ಗಂ (ಯೋ.ಪಾ)

೪೩.	ತಳವರ್ಗಕ್ಕಮಿಂತೆಂದು ನುಡಿದಂ	೪೩.	ತಳವಱರ್ಕಳ್ಗಮಿಂತೆಂದು ನುಡಿದಂ (ಯೋ.ಪಾ)
೪೪.	ಮಾಡಿಸುವೆನೆಂದು ಮೇಳಿಸಿಯೊಡಂಗೊಂಡು ಪೋಗಿ	೪೪.	ಮಾಡುವೆನೆಂದು ಬೋಧಿಸಿಯೊಡಗೊಂಡು ಪೋಗಿ (ಯೋ.ಪಾ)
೪೫.	ಮರ್ದುಗಳಮಱಿಸುತ್ತಂ (ಯೋ.ಪಾ)	೪೫.	ಮರ್ದುಗಳನಱಿಸಿಸುತ್ತಂ
೪೬.	ಬಾವಿಯಂ ಮೊಡೆನಾರ್ಪ್ಪುದಂ ಕಂಡು (ಯೋ.ಪಾ)	೪೬.	ಬಾವಿಯಂ ವೊಡೆರ್ನಾಪುದಂ ಕಂಡು (ಮುದ್ರಣ ದೋಷವಿರಬಹುದು)
೪೭.	ಮುಚ್ಚಿದ ಸೆಲೆ	೪೭.	ಮುಚ್ಚಿದ ಶಿಲೆ (ಯೋ. ಪಾ)
೪೮.	ಮತ್ತಾರಸದಿಂದೆನಿತಾನುಂ ರಾಶೋಪರಾಶಿ ಪೊನ್ನಂ ಮಾಡಿ	೪೮.	ಮತ್ತಾ ರಸದಿಂದೆನಿತಾನುಂ ಪೊನ್ನರಾಶಿಯಂ ಮಾಡಿ (ಯೋ.ಪಾ)
೪೯.	ಮಣ್ಣಂ ತಂದು ಇಲ್ಲಿ ಮೇಗೊಟ್ಟುವರ್	೪೯.	ಮಣ್ಣಂ ತಂದು ಶ್ರೀಪರ್ವತದ ಮೇಗೊಟ್ಟುವರ್ (ಯೋ.ಪಾ)
೫೦.	ಪೊನ್ನಂ ಕುಡುವೆನೆಂದೊಡದಂ ಕೇಳ್ದು	೫೦.	ಪೊನ್ನಂ ಕುಡುಪನೆಂದಾ ನಾಡೊಳ್ ಘೋಷಣೆಯಂ ಪೊಯ್ಸಿದೊಡದಂ ಕೇಳ್ದು (ಯೋ.ಪಾ)
೫೧.	ಪಲವು ಕುದುರೆಗಳಂ ಕೊಂಡಾಳ್ಗಳ್ಗೆ ಕೊಟ್ಟು	೫೧.	ಪಲವು ಕುದುರೆಗಳಂ ಕಟ್ಟಿಯಾಳ್ಗಳ್ಗೆ ಕೊಟ್ಟು (ಯೋ.ಪಾ)
೫೨.	ತಾನುಂ ಸಂಜೆವರೆಗಂ ಕಾದಿ	೫೨.	ತಾನು ನೀಡುಂ ಬೇಗಂ ಕಾದಿ (ಯೋ.ಪಾ.)
೫೩.	ಕೊಳಗುಳಂಗಳೊಳಿರ್ದಾಗಳ್	೫೩.	ಕೊಳ್ಗುಳದೊಳಗಿರ್ದಾಗಳ್ (ಯೋ.ಪಾ) (ಕೊಳ್ಗುಳ=ಯುದ್ಧ)
೫೪.	ಪಸಿದ ನಣ್ಪಿನಿಂದ	೫೪.	ಪಸಿದಲಂಪಿನಿಂದ (ಯೋ.ಪಾ)
೫೫.	ಕೆಯ್ಯುಂ ಬಾಯುಂ ಬೆಂದಾಗಳ್	೫೫.	ಕೆಯ್ಯುಂ ಬಾಯುಂ ಬೆಂದೊಡೆ (ಯೋ.ಪಾ.)
೫೬.	ಆರಾರಬ್ಬಾ ಎಂದು	೫೬.	ಅವರಾರಬ್ಬಾಯೆಂದು (ಯೋ.ಪಾ)
೫೭.	ಮೂರ್ಖನೆ	೫೭.	ಮೂರ್ಖನೆನೆ (ಯೋ.ಪಾ)
೫೮.	ನಂದನನೆಂತು ಮೂರ್ಖನೆಂದೊಡಂ (ಯೋ.ಪಾ)	೫೮.	ನಂದನೇಂ ಮೂರ್ಖನೆಂದೊಡಂ

೫೯.	ಪ್ರತಿಪಕ್ಷಮಂ ತನಗಾಗೆ ಮಾಡಿ	೫೯.	ಪ್ರತಿಪಕ್ಷಮಂ ತನ್ನಂತೆ ಮಾಡಿ (ಯೋ.ಪಾ)
೬೦.	ಆರುಮಱಿಯದಂತೆ ಓಡಿ ಪೋದಂ	೬೦.	ಆರುಮಱಿಯದಂತಿರೆ ಓಡಿ ಕೆಟ್ಟಂ (ಯೋ.ಪಾ)
೬೧.	ಕಾಳೆಗಮಂ ಗೆಲ್ದು ಪಾಟಲೀಪುತ್ರಮಂ ಪೊಕ್ಕು ಮಹಾಸಾಮಂತರಂ ಕಾಣಿಸಿಕೊಂಡರಮನೆಯಂ ಪೊಕ್ಕು ಭಂಡಾರಕ್ಕಂ ಕಾಪನಿಟ್ಟು	೬೧.	ಕಾಳೆಗವಂ ಗೆಲ್ದು ಪಾಟಳೀಪುತ್ರವಂ ಪೊಕ್ಕು ಮಹಾಪದ್ಮನರಸಿಯರ್ಕಳ್ಗಂ ಭಂಡಾರಕ್ಕಂ ಕಾಪನಿಟ್ಟು (ಯೋ.ಪಾ)
೬೨.	ಯಶೋವ್ರತಿಗೆ	೬೨.	ಯಶೋಮತಿಗೆ (ಯೋ.ಪಾ)
೬೩.	ಚಂದ್ರಮತಿ ಮಹಾದೇವಿಗೆ ನವಮಾಸಂ ನೆಱೆದೊಡೆ	೬೩.	ಚಂದ್ರಮತಿ ಮಹಾದೇವಿಗೆ ಗರ್ಭಮಾಗಿ (ಯೋ.ಪಾ.)
೬೪.	ಕೈಯ್ಯ ತುತ್ತಂ ವಿಷಮಿಶ್ರಮೆಂದಱಿಯದೆ	೬೪.	ಕೈಯ್ಯತುತ್ತನರಸಂ ವಿಷಮಿಶ್ರಮೆಂದಱಿಯದೆ (ಯೋ.ಪಾ)
೬೫.	ತಲೆಯಂ ಬಾಗಿಱಿದು	೬೫.	ತಲೆಯಂ ಪೋಗಿಱಿದು (ಯೋ.ಪಾ)
೬೬.	ಕೂಸಂ ಪೊರಮಡಿಸಿದುದಂ ಕಂಡರಸಂ	೬೬.	ಕೂಸಂ ಪೊಱಮಡಿಸುವುದಂ ಕಂಡು (ಯೋ.ಪಾ)
೬೭.	ಬಿಂದುಸಾರ (ಯೋ. ಪಾ)	೬೭.	ಬಿಂದುಸಾಗರ
೬೮.	ಶರೀರ ಭೋಗಂಗಳಾದಂ	೬೮.	ಶರೀರ ಭೋಗಂಗಳೊಳಾದಂ (ಯೋ.ಪಾ)
೬೯.	ಶೀತದೊಳ್ ಸೇದೆಗೆಡುವರ್	೬೯.	ಸೀತದೊಳ್ ಸೆಡೆಗುಂ ಸೇದೆಗೆಡುವರದಱಿಂ (ಯೋ.ಪಾ)
೭೦.	ಮತ್ತಂ ಗೊಬ್ಬರದ ಕಿಚ್ಚು	೭೦.	ಮತ್ತೆ ಗೊಬ್ಬರದ ಕಿಚ್ಚು (ಯೋ.ಪಾ)
೭೧.	ರಿಸಿಯರ್ಗ್ಗೆಲ್ಲಂ	೭೧.	ರಿಸಿಯರ್ಕಳೆಲ್ಲಂ (ಯೋ.ಪಾ)

೧೯. ವೃಷಭಸೇನರೆಂಬ ರಿಸಿಯರ ಕಥೆ

* ವಿಶೇಷ : ಡಿ.ಎಲ್.ಎನ್. ಆವೃತ್ತಿಯಲ್ಲಿ ಇಲ್ಲದ "ಮತ್ತೀ ಭ್ರಾಜಿಷ್ಣುರಾಧನೆಯಭಿಪ್ರಾಯದೊಳ್ ಪೇೞ್ದುದು' ಎಂಬ ಪಾಠವು ಹಂಪನಾ ಆವೃತ್ತಿಯ ೧೯ನೆಯ ಕಥೆಯ ಶೀರ್ಷಿಕೆಯ ಮೇಲ್ಗಡೆ ಬಂದಿದೆ.

೧. ಬಂದೊಂದು ಮಠದೊಳಿರ್ದ್ದರ್

* ವಿಶೇಷ : ವೃಷಭಸೇನ ರಿಸಿಯರ ಕಥೆ ಮುಗಿದ ಕೂಡಲೇ "ಈ ಪೇೞ್ದ ಪತ್ತೊಂಬತ್ತು ಕಥೆಗಳಂ ಶಿವಕೋಟಾಚಾರ್ಯರ್ ಪೇೞ್ದಾರ್ ವಡ್ಡಾರಾಧನೆ ಸಂಪೂರ್ಣಂ" ಎಂಬ ಪಾಠವು ಡಿ.ಎಲ್.ಎನ್. ಆವೃತ್ತಿಯಲ್ಲಿ ಬಂದಿದೆ. ಇದನ್ನು ಹಂಪನಾ ಅವರು ಮೂರು ಗಾಹೆಗಳ ನಂತರ ಕೊಟ್ಟಿದ್ದಾರೆ. ಈ ಗಾಹೆಗಳನ್ನು ಡಿ.ಎಲ್.ಎನ್. ಅವರು ಮುಖ್ಯ ಪಾಠದಲ್ಲಿ ತೆಗೆದುಕೊಳ್ಳದೆ ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದರು. ಇವು 'ಫ' ಪ್ರತಿಯಲ್ಲಿನ ಗಾಹೆಗಳು. ಹಂಪನಾ ಅವರಲ್ಲಿ ಈ ಮೂರೂ ಗಾಹೆಗಳು ಮುಖ್ಯ ಪಾಠದಲ್ಲಿ ಸೇರ್ಪಡೆಯಾಗಿವೆ. ಇವುಗಳ ನಂತರ 'ಈ ಪೇೞ್ದ ಪತ್ತೊಂಬತ್ತು ಕಥೆಗಳ್ ....' ಎಂಬುದು ಬಂದಿದೆ. ಅದರ ತರುವಾಯ "ಶ್ರೀ ವೀತರಾಗ ಶ್ರೀ ಪಂಚಪರಮೇಷ್ಠಿ ಶ್ರೀ ಗಣಧರಸ್ವಾಮಿಗಳ ಶ್ರೀಪಾದವು ಶರಣು" ಎಂಬ ವಾಕ್ಯವನ್ನು ಹಂಪನಾ ಅವರು ಸೇರಿಸಿದ್ದಾರೆ. (ಇದು ಬಹುಶಃ ಲಿಪಿಕಾರನ ಮಾತಾಗಿರಬಹುದು).

೧೯. ವೃಷಭಸೇನರೆಂಬ ರಿಸಿಯರ ಕಥೆ

೧. ಬಂದೊಂದು ಬಸದಿಯೊಳಿರ್ದರ್ (ಯೋ.ಪಾ)

ಕಠಿಣ ಪದಕೋಶ

೧. ಸುಕುಮಾರ ಸ್ವಾಮಿಯ ಕಥೆ*

ಕಡಿದಪ್ಪ =ತೀವ್ರವಾದ
ಬಟ್ಟಿದೊನ್ = ಸತ್ತವನು
ಪೊಟಿಲ್ =ಪಟ್ಟಣ
ಕೇಳ್ಪಿ = ಕೇಳುವುದನ್ನು
ಕಡವರ = ಬಂಗಾರ
ಬಿಯ = ವ್ಯಯ
ಸಪ್ತವ್ಯಸನ = ಬೇಟೆ, ಜೂಜು
ಮಾಂಸಭಕ್ಷಣೆ, ಸುರಾಪಾನ
ವೇಶ್ಯಾಗಮನ, ಕಳ್ಳತನ, ದುರ್ವಾಕ್ಯ
ನೆಗಟುತ್ತ = ನಡೆದುಕೊಳ್ಳುತ್ತ
ಕಟಿದೊಡೆ =ಸಾಯಲಾಗಿ
ಒಳರಿಲ್ಲೆಂದು =ಇದ್ದಾರೊ ಇಲ್ಲವೊ ಎಂದು
ಬೆಸಗೊಳ್ಳು = ಕೇಳು
ಬಟಿಯಟ್ಟು =ದೂತರನ್ನಟ್ಟು
ಮಿಸಿಸು =ಸ್ನಾನ ಮಾಡಿಸು
ತುಡಿಸಿ =ತೊಡಿಸಿ.
ಊಡಿ=ಊಟ ಮಾಡಿಸಿ
ಉಬ್ಬೆಗ = ದುಃಖ
ಬೀಡು =ವಾಸಸ್ಥಾನ
ತೀವಿ=ತುಂಬಿ
ನೆಲನಂ ಬರೆ=ನಾಚಿಕೆಯಿಂದ ಕಾಲಿನ ಹೆಬ್ಬೆರಳಿನಿಂದ ನೆಲವನ್ನು ಗೀರುವುದು
ದಾಯಿಗ =ದಾಯಾದಿ
ಬಲ್ಲೋಗಂ=ಬಲ್ಲವನಿಗೆ
ಬಾಟು=ಬದುಕಿಗೆ ಅಗತ್ಯವಾದುದು, ಜೀವನಾಧಾರದ ವಸ್ತು
ಪ್ರತಿಪತ್ತಿ =ಸನ್ಮಾನ
ಕಪ್ಪಡ =ಹರಕು ಬಟ್ಟೆ
ಬೈಕಂದಿರಿದು =ಭಿಕ್ಷೆಬೇಡಿ
ಕಲ್ಪಿಸಿ=ತಿಳಿಸಿ
ಕತಿಪಯ =ಕೆಲವು
ಇಕ್ಕು =ಕೊಡು, ಮುಂದೆ ಇರಿಸು
ಬಾಜಿಸು=ವಾಚಿಸು, ಓದು
ಪಸರ =ಸಲಿಗೆ
ಉಕ್ಕಿ = ಸೊಕ್ಕಿನಿಂದ
ಬಗೆದು = ಭಾವಿಸಿ
ನೀವರ್ಾರ್ಗೆರ್= ನೀವು ಯಾರಿಗೆ ಏನಾಗಬೇಕು
ಕಲ್ವೆಂ = ಕಲಿಯುತ್ತೇವೆ
ಅಟ್ಟಿ = ಪ್ರೀತಿ
ಅಲಸದೆ = ಆಲಸಿಯಾಗದೆ
ನಿರ್ಬಂಧದಿಂದ = ಕಟ್ಟುನಿಟ್ಟಿನಿಂದ
ಆರ್ಪು =ಸಾಮರ್ಥ್ಯ
ಓಜ = ಗುರು, ಉಪಾಧ್ಯಾಯ,
ಆಱು ಅಂಗಗಳು = ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ್ಯ ಎಂಬ ವೇದಾಂಗಗಳು
ಪದಿನೆಂಟು ಧರ್ಮಶಾಸ್ತ್ರಗಳು =ಮನು, ಯಮ, ಗೌತಮ, ವಸಿಷ್ಠ, ಅತ್ರಿ, ದಕ್ಷ, ವಿಷ್ಣು, ಅಂಗಿರಸ, ಉಶನಾ, ವಾಕ್ಪತಿ, ವ್ಯಾಸ, ಆಪಸ್ತಂಬ, ಗೌತಮ, ಕಾತ್ಯಾಯನ, ನಾರದ, ಯಾಜ್ಞವಲ್ಕ್ಯ, ಪರಾಶರ, ಸಂವತ

* ಈ ಕಠಿಣ ಪದಕೋಶಕ್ಕಾಗಿ ಡಿ.ಎಲ್. ಎನ್. ಆವೃತ್ತಿಯ ನೆರವು ಪಡೆಯಲಾಗಿದೆ.

ಶಂಖ, ಹಾರೀತ, ಲಿಖಿತ ಇವರಿಂದ ಹೇಳಲ್ಪಟ್ಟ ಧರ್ಮಶಾಸ್ತ್ರಗಳು
ಮೀಮಾಂಸಾ = ವೇದಾರ್ಥದ ಬಗ್ಗೆ ಚರ್ಚಿಸುವ ಶಾಸ್ತ್ರ
ನ್ಯಾಯ ವಿಸ್ತರ = ತರ್ಕ ಶಾಸ್ತ್ರ
ಪ್ರಮಾಣ =ಜ್ಞಾನಸ್ವರೂಪವನ್ನು ನಿರ್ಣಯಿಸುವ ಆಧಾರ
ಚಾಣಕ್ಯಂ =ಕೌಟಿಲ್ಯನ ಅರ್ಥಶಾಸ್ತ್ರ
ಶಾಲಿಹೋತ್ರ=ಶಾಲಿಹೋತ್ರ ಎಂಬ ಋಷಿ ರಚಿಸಿದ ಅಶ್ವಶಾಸ್ತ್ರ
ಪಾಳಕಾಪ್ಯ =ಪಾಲಕಾಪ್ಯ ಋಷಿ ರಚಿಸಿದ ಗಜಶಾಸ್ತ್ರ
ಹಾನಿತ =ವೈದ್ಯಶಾಸ್ತ್ರದ ಹೆಸರು?
ಅಶ್ವಿನೀಮತ =ಅಶ್ವಿನೀದೇವತೆಗಳೆಂಬ ದೇವವೈದ್ಯರಿಂದ ರಚಿತವಾದ ಗ್ರಂಥ
ಬಾಹಲ=(ಬಾಹಟ) ವಾಗ್ಭಟನಿಂದ ರಚಿತವಾದ ಅಷ್ಟಾಂಗಹೃದಯವೆಂಬ ವೈದ್ಯ ಗ್ರಂಥ
ಸುಶ್ರುತ =ಸುಶ್ರುತ, ರಚಿತ ವೈದ್ಯಗ್ರಂಥ
ಕ್ಷಾರಪಾನೀಯ =ಲವಣ ಪಾನದ ವೈದ್ಯ
ಆದಮಾನುಂ = ಹೆಚ್ಚಿನ, ವಿಶೇಷವಾಗಿ
ಒಸೆದು= ಪ್ರೀತಿಯಿಂದ, ಮೆಚ್ಚಿ
ನಾಟ್ಗೆ =ನಾಡ್ಗೆ=ನಾಡಿಗೆ
ಎತ್ತಾನುಂ =ಎಲ್ಲಿಯಾದರೂ
ಸಂಬಳ = ಬುತ್ತಿ
ಬೈಕ =ಭೈಕ್ಷ, ಭಿಕ್ಷೆ ಬೇಡುವುದು
ಕಟ಼= ಗಂಜಿ
ಎಡೆಯಿಸು = ಹಾಕಿಸು
ಪರ್ವ -ಹಬ್ಬ
ಎಂದಾನುಂ =ಎಂದಾದರೂ
ಪಗೆವರಂ = ಹಗೆಗಳನ್ನು
ತುಱಿಲ್ಗೆಯ್ದು = ನಮಸ್ಕರಿಸಿ
ಉಪಶ್ಲೋಕಿಸು = ಹೇಳು, ಒಪ್ಪಿಸು
ವಕ್ಕಾಣಿಸು = ವ್ಯಾಖ್ಯಾನಿಸು
ಪಂಡಿತಿಕ್ಕೆ =ಪಾಂಡಿತ್ಯ
ಬಿಚ್ಚಳಿಸಿ =ವಿಸ್ತರಿಸಿ
ಓದು = ವಿದ್ಯೆ
ಅನರ್ಘ್ಯ = ಶ್ರೇಷ್ಠ, ಬೆಲೆಬಾಳುವ
ಸಂಜೆವಾರಿಸು = ಸಂಧ್ಯಾವಂದನೆ ಮಾಡು ಸೂರ್ಯನಿಗೆ ಅರ್ಘ್ಯಕೊಡುವುದು
ಉರ್ಚಿ = ಸಡಿಲವಾಗಿ, ಜಾರಿ
ತಾಮಱ =ತಾವರೆ
ಕೆಮ್ಮನೆ = ಸುಮ್ಮನೆ
ಕಿಱಿದಂತರ = ಸ್ವಲ್ಪ ಅಂತರ
ಭವ್ಯ =ಭವ್ಯ ಜೀವಿ
ವಾರಕ = ಅಲಂಕಾರದ ವಸ್ತು
ನೀರ್ವೆರಸು = ನೀರಿನೊಂದಿಗೆ
ಮೇಗೆ = ಮೇಲೆ
ತಗುಳ್ದು=ಹೊಂದಿಕೊಂಡು, ಜೊತೆಗೂಡಿ
ಮಾನಸ = ಮನುಷ್ಯ
ಕಾಪು = ಕಾವಲು
ತುರಿಪ =ಬೇಗ,ಅವಸರ
ಅಂತರಿತ=ಮುಚ್ಚಿದ, ಒಳಗಿರುವ
ಕ್ಷಪಣಕ = ಜೈನಯತಿ
ಮಿಥ್ಯಾವಿನಯ =ಹುಸಿವಿನಯ
ಇಳಿಸಿ = ಅವಮಾನಿಸಿ
ಭಟ್ಟಾರಾ = ಪೂಜ್ಯರೆ, ಸ್ವಾಮಿಗಳೆ
ಪಾರ್ವಂತಿ = ಬ್ರಾಹ್ಮಣಿತಿ
ಕಲ್ಪಿಪ್ಪ =ಕಲಿಸು, ಹೇಳಿ ಕೊಡು
ಏಱಿಸಿ =ಆರೋಪಿಸಿ, ಹತ್ತಿಸಿ
ಆಲೋಚನೆ =ಪ್ರಾಯಶ್ಚಿತ್ತದ ಸಂದರ್ಭದಲ್ಲಿ ಗುರುಗಳಲ್ಲಿ ತನ್ನ

ದೋಷಗಳ ಬಗ್ಗೆ ಹೇಳಿಕೊಳ್ಳುವುದು
ತ್ರಿಷಷ್ಠಿಶಲಾಕಾಪುರುಷರ್ = 24ಜನ ತೀರ್ಥಂಕರರು, 12 ಜನ ಚಕ್ರವರ್ತಿಗಳು, 9 ಜನ ವಾಸುದೇವರು, 9 ಜನ ಪ್ರತಿವಾಸುದೇವರು, 9 ಜನ ಬಲಭದ್ರರು
ಚರಣಗ್ರಂಥ = ಜೈನ ಗೃಹಸ್ಥರ ಮತ್ತು ಮುನಿಗಳ ಆಚಾರಗಳನ್ನು ತಿಳಿಸುವ ಗ್ರಂಥ,
ಲೋಗಾಣಿ = ಲೋಕಾಕರದ ಬಗ್ಗೆ ತಿಳಿಸುವ ಜೈನಗ್ರಂಥಗಳು
ಸಂಗಾಣಿ = ಸಪ್ತಪದಾರ್ಥಗಳ ಬಗ್ಗೆ ತಿಳಿಸುವ ಗ್ರಂಥಗಳು
ದ್ರವ್ಯಾನುಯೋಗ = ಜೈನ ತತ್ವ ಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥ
ಎನಗೇಮುಟ್ಟು = ನನಗೆ ಯಾವ ಕಷ್ಟ, ನನಗೆ ಯಾವ ಲೆಕ್ಕ ?
ಮಿಥ್ಯಾತ್ವ = ಜೈನತ್ವದ ಬಗ್ಗೆ ಅಪನಂಬಿಕೆ
ಇನಿಸಿನಿಸು = ಸ್ವಲ್ಪ ಸ್ವಲ್ಪ
ಪಿಂಗೆ = ಹಿಂಗಲು, ಕಡಿಮೆಯಾಗಲು
ಅಱಿತ = ತಿಳುವಳಿಕೆ, ಜ್ಞಾನ
ಕುಶಲಿಕೆ = ಪರಿಣತಿ
ಉಕ್ಕೈವ = ಹುಸಿ, ಕಪಟ
ಏಕವಿಹಾರಿ = ಒಂಟಿಯಾಗಿ, ಒಂದು ಹೊತ್ತಿನ ಸಂಚಾರಿ
ಗ್ರಾಮ = ೧೦೦ ರಿಂದ ೫೦೦ ಕೃಷಿಕ ಕುಟುಂಬಗಳ ವಾಸದ ನೆಲೆ
ನಗರ =ರಾಜಧಾನಿ
ಖೇಡ = ಕೋಟೆ ಹೊಂದಿದ ಊರು
ಖರ್ವಡ= ಸಣ್ಣ ಆವರಣವಿರುವ ಊರು
ಮಡಂಬ =ದೂರ ಸ್ಥಲ
ಪತ್ತನ = (ಪಟ್ಟಣ) ಬಂಡಿ, ನಾವೆಯಲ್ಲಿ ಪ್ರಯಾಣಿಸಿ ತಲುಪಬಹುದಾದ ಊರು
ದ್ರೋಣಾಮುಖ = ಜಲಮಾರ್ಗ ಹೊಂದಿದ ಊರು
ಚರಿಗೆ=ಭಿಕ್ಷೆ
ತೊಳಲು = ಸಂಚರಿಸು. ಸುತ್ತಾಡು,
ಪಡಿಗಹ ಮುಚ್ಚಂಠಾಣಂ = ಎತ್ತರವಾದ ಆಸನದಲ್ಲಿ ಕುಳಿತುಕೊಳ್ಳಿ
ಏಳು ಗುಣಗಳು =ಶ್ರದ್ಧೆ, ಭಕ್ತಿ, ದಯೆ ಉದಾತ್ತ, ಶೀಲ, ಕ್ಷಮೆ, ಶೌಚ
ಪ್ರಾಸುಕ =ಜೀವಜಂತುರಹಿತವಾದ, ಶುದ್ಧ
ಬಡ್ಡಿಸು =ಬಡಿಸು, ಉಣಲಿಕ್ಕು
ಗುಡ್ಡ = ಶಿಷ್ಯ
ಲೋಹಾಸನ = ಒಂದು ಬಗೆಯ ಆಸನ,
ಇನಿವಿರಿದು = ಇಷ್ಟು ದೊಡ್ಡದು
ಮಲಗ್ರಸ್ತ = ಕೊಳಕಿನಿಂದ ಕೂಡಿದ
ಮಿಂದು = ಸ್ನಾನ ಮಾಡಿ
ಪೊಲ್ಲದುದು =ಕೆಟ್ಟದ್ದು
ಕೊಯ್ತಲೆಯಧಮಾ =ಕೊಯ್ದು ತಲೆಯ (ಎರಡು ತಲೆಯ) ನೀಚನೇ

ಗಾಹೆ :

ಣಿಂದಂತಂ = ನಿಂದಿಸುವವರನ್ನು
ಸಿಳಹಂತ =ಹೊಗಳುವವರನ್ನು
ಸತ್ತುಂ =ಶತ್ರುವನ್ನು
ಮಿತ್ತುಂ = ಮಿತ್ರನನ್ನು
ತಹೇವ = ಹಾಗೆಯೇ
ಜೋ = ಯಾವನು
ಸಮಭಾವಾ=ಸಮತೆಯಿಂದ ಭಾವಿಸುವನೋ
ಪೇಚ್ಚಇ= ನೋಡುವನೋ
ಸೋ= ಅವನು
ಸಮಣೋ = ಶ್ರವಣ (ಜೈನಸನ್ಯಾಸಿ)
ಸೋಯ = ಅವನೇ
ಪವ್ವ ಇಓ = ಪರಿವ್ರಜಿತ (ವಿರಾಗಿ)

ವೃತ್ತ :
ವಚಸಾ = ಮಾತುಗಳಿಂದ
ಆಕೃಷ್ಟಯೇವ =
ಆಕರ್ಷಿಸಲ್ಪಟ್ಟವನಾಗಿದ್ದೇನೆಯೇ ಹೊರತು
ನ ತು ತಾಡಿತೋಽಸ್ಮಿ = ನಾನು ಹೊಡೆಯಲ್ಪಟ್ಟವನಾಗಿಲ್ಲ
ಸಂತಾಪಿತೋಽಸ್ಮಿ = ನಾನು ದುಃಖಿತನಾಗಿದ್ದೇನೆ
ತು = ಆದರೆ
ಮೇ = ನನ್ನ
ಉತ್ತಮಾಂಗ = ತಲೆ
ನ ಹೃತು = ಅಪಹರಿಸಲ್ಪಡಲಿಲ್ಲ
ಮಮ =ನನ್ನ
ಪ್ರಾಣಾ = ಪ್ರಾಣ
ಪರೈಃ= ಇತರರಿಂದ
ಹೃತಾ = ಅಪಹರಿಸಲ್ಪಟ್ಟಿದೆ
ನ ತು ಮೇ ಸಮಾಧಿಃ = ನನ್ನ ಧ್ಯಾನ ಸ್ಥಿತಿಯಲ್ಲ
ಇತಿ =ಹೀಗೆಂದು
ಆತ್ಮ ಚಿಂತನಪರಂಪರಯಾ =ಸಂತತವಾದ ಆತ್ಮಚಿಂತನೆಯಿಂದ
ಕ್ಷಮೇತ = ಕ್ಷಮಿಸಬೇಕು
ಕೀಱ = ಒತ್ತಾಯದಿಂದ
ಸಲ್ಗೆ = ಸಲಿಗೆ
ಅೞಲು =ದುಃಖ
ಪೞ - ನಿಂದಿಸು
ಅಕ್ಕುಮೆ = ಆಗುತ್ತದೆಯೆ ?
ಪೊಲ್ಲ =ಕೆಟ್ಟ
ಜಾರಜಾತ = ಅನೈತಿಕ ಸಂಬಂಧದಿಂದ ಹುಟ್ಟಿದ
ವಿಜಾತಿ = ಅಯೋಗ್ಯ ಕುಲ,
ಜಡಿದು = ಗದರಿಸಿ .

ಕವರ್ದು =ಕಸಿದು
ನಿದಾನಂಗೆಯ್ದು = ಸಂಕಲ್ಪಮಾಡಿ
ತಿರಿ = ತೊಳಲು
ಅತಿಮಾನ ಗರ್ವ =ಉದ್ಧಟತನ, ಅಹಂಕಾರ
ಪರಿಭವಿಸಿ = ಸೋಲಿಸಿ, ಅವಮಾನಿಸಿ
ಉದುಂಬರ ಕುಷ್ಠ =ಅತ್ತಿಯ ಹಣ್ಣಿನಂತೆ ಕ್ರಿಮಿಪೂರಿತ ಕುಷ್ಠರೋಗ
ಮಿಳಿ =ಹಗ್ಗ
ಲಂಗಿಗ= ಡೊಂಬರವ
ಲಂಕಿಗ =ಗಣೆಯ ಮೇಲೆ ಆಡುವವ
ನಾಳಿಬಿರ್ದು =ಸೀಳುವಿಕೆ ಉಂಟಾಗಿ
ಕಱಿಮೆಯಾಗಿ = ಬಲಿತು
ಪೇಪಂದಿ = ಹೊಲಸು ತಿನ್ನುವ ಹಂದಿ
ಬಟ್ಟಿದೋಳ್ = ಬಾಳಿದವಳು
ನಿಸಿದ್ಧಿ =ಜೈನ ಧಾರ್ಮಿಕ ವಿಧಿಯೊಂದಿಗೆ ತೀರಿದವರ ಸ್ಮಾರಕ
ನಾಗರಾಣ = ನಾಗಾಲಯ
ಪರವಸ = ಮೈಮರೆಯುವಿಕೆ
ಮನ್ಯು = ದುಃಖ
ಸಾರ್ಚು= ಸಮೀಪಕ್ಕೆ ಸರಿಸು
ನೀಡುಂ = ಬೇಗ, ಹೆಚ್ಚಾಗಿ
ನಿರ್ವೇಗ =ವಿರಕ್ತಿ
ಅಲಾಭ = ಜೈನ ಮನಿಯ ಊಟದ ಹೊತ್ತಿಗೆ ಉಂಟಾಗುವ ವಿಘ್ನ
ಆವಾಸ =ಬೀಡು, ಬಿಡಾರ
ಜಾತ್ಯಂಧೆ = ಹುಟ್ಟುಗುರುಡಿ
ವಿಧಾತ್ರ = ವಿಧಿ
ಕೂರ್ಮೆ = ಪ್ರೀತಿ
ನಿಮ್ಮ ಪೇೞೆ= ನೀವು ಹೇಳಲು
ಬ್ರತ = ವ್ರತ

ತೊಟ್ಟು = ಆರಂಭಿಸಿ
ನೀಡಱಿಂದೆ = ದೀರ್ಘಕಾಲದ ನಂತರ
ಎತ್ತಾನುಂ = ಎಲ್ಲಿಯಾದರೂ
ಪೆಱದು = ಪಡೆಯದು
ಪೆತ್ತೊಡಂ = ಪಡೆದರೂ
ಇಂತಾಗಿ = ಹೀಗಾಗಿ
ವೃತ್ತ :
ವೈರೂಪ್ಯ - ವಿಕಾರರೂಪ
ದುರ್ಭಗತ್ವ = ಹತಭಾಗ್ಯತ್ವ
ಕುಮತಿ = ದುರ್ಬುದ್ಧಿ
ಕುಜನತಾ = ಕೆಟ್ಟವರ ಸ್ವಭಾವ
ಕುತ್ಸಿತತ್ವಂ = ನೀಚತನ
ಕುಜಾತಿ = ಕೆಟ್ಟಜಾತಿ
ಕ್ಷುತ್ = ಕ್ಷುಧೆ, ಹಸಿವು
ತೃಷ್ಣಾ = ನೀರಡಿಕೆ, ತೃಷೆ
ವಿಕಳತೆ = ದುಃಖ
ವ್ಯಾಧಿತಾಂ = ರೋಗಲಕ್ಷಣ
ಚ = ಮತ್ತು
ಅಬಲತ್ವ = ಶಕ್ತಿಹೀನತೆ
ಪ್ರೇಷಣತ್ವ = ದಾಸ್ಯ
ಲಘುತರಮರಣ = ಸುಲಭವಾದ ಸಾವು, ಅರ್ಥವಿಲ್ಲದ ಸಾವು
ಶೋಕಕಾಂಕ್ಷಾಲಯತ್ವಂ = ದುಃಖ ದುರಾಸೆಗಳಿಗೆ ಆಶ್ರಯವಾಗುವುದು
ಮಾಂಸಾಶ್ರೀ = ಮಾಂಸ ತಿನ್ನುವವ
ಪ್ರಾಣಘಾತೀ = ಜೀವ ಹಿಂಸೆ ಮಾಡುವವ,
ಪ್ರಾಪ್ಯ = ಪಡೆದು
ಚಿರಂ = ಬಹುಕಾಲ
ಅನುಭವತಿ = ಅನುಭವಿಸುತ್ತಾನೆ
ಹಿ = ಅಲ್ಲವೆ
ವಾಮನ = ಕುಳ್ಳ

ಪಂಗ್ವಂಧ = ಕೈಕಾಲಿಲ್ಲದ ಕುರುಡ
ಕುಬ್ಜ = ಗುಜ್ಜ
ಖಂಜ = ಕುಂಟ
ಕರಾಳಾಃ = ವಿಕಾರ ರೂಪದವ
ಜಡ = ದಡ್ಡ, ಬಧಿರ = ಕಿವುಡ
ಕೃಶಲೋಮಶ = ಮೈಮೇಲೆ ಕೂದಲುಳ್ಳವನು
ವಕ್ರ = ವಿಕೃತ
ನಿಬಿಡಾಳಿಸ್ತೇ = ಆಗಿ
ಪಾಪಾತ್ = ಪಾಪಕರ್ಮದ ದೆಸೆಯಿಂದ
ಜಾಯಂತೇ = ಹುಟ್ಟುತ್ತಾರೆ
ಕಿಲ = ಅಲ್ಲವೆ ?
ನರಾಃ = ಮನುಷ್ಯರು
ಪೂರ್ವಚರಿತೇನ = ಹಿಂದೆ ಮಾಡಿದ
ಉದ್ದಂತ = ಉಬ್ಬು ಹಲ್ಲುಳ್ಳವ
ಕುಣಿ = ಮೋಟುಗೈ ಹೊಂದಿದವ
ಕುಂಡ = ಹಾದರಕ್ಕೆ ಹುಟ್ಟಿದವ
ಕಾಣಾಃ = ಒಕ್ಕಣ್ಣ
ಸಂಸ್ಥೂಲ = ದಪ್ಪಶರೀರದ
ರೂಕ್ಷ = ಒರಟಾದ, ಒಣಗಿದ
ರೂಪಾಃ = ಆಕಾರ ಹೊಂದಿದವರು
ಕುಷ್ಠಾರ್ದಿತಾಃ = ಕುಷ್ಠರೋಗಿಗಳು
ಕೃಪಣ = ಜಿಪುಣ
ಪಾಮನಾಃ = ಚರ್ಮರೋಗಿಗಳು
ವೃತ್ತ :
ದೀನಮಾನ = ಅಗೌರವದ ವ್ಯಕ್ತಿ
ಪರಿಭವ ವಿಭವ = ತಾತ್ಸಾರಕ್ಕೆ ಗುರಿಯಾದ
ದುಷ್ಕೃತಂ = ಕೇಡಿಗ
ಜಡಮತಿ = ಅಜ್ಞಾನಿ
ಪಂಗು = ಹೆಳವ, ಕುಂಟ
ನಾಣಿಲಿ = ಲಜ್ಜೆಯಿಲ್ಲದವ
ಪಾಣ್ಬ = ಜಾರ, ವಿಟ

ಪಂದೆ = ಹೇಡಿ
ಲೋಭ = ಆಸೆ
ಖಳ = ದುಷ್ಟ
ಅಳಿಕಮನ = ಕಪಟಮನ, ಅಳಿಮನ
ನಿತ್ಯರೋಗಾಕುಳ = ಸತತ ರೋಗಬಾಧಿತ
ವ್ರತವ್ರಾತಹೀನ = ವ್ರತಗೇಡಿ
ನಿಳಯ = ಆಶ್ರಯಸ್ಥಾನ
ಉೞಿದುದೞಿಂದ = ಬಿಟ್ಟುದರಿಂದ
ಎಯ್ದು = ಹೊಂದು
ವೃತ್ತ :
ಸೇವಾ ನಿವೃತ್ತಾಃ = ತಿನ್ನದೆ ಬಿಟ್ಟವ
ಶ್ರೀ ವಕ್ಷಃ = ಸಂಪದ್ಭರಿತವಾದ ಎದೆ
ಚಾರುರೂಪ = ಆಕರ್ಷಕ ರೂಪ
ದೇವಾಸುರೇಂದ್ರೈಃ = ಇಂದ್ರನಿಂದಲೂ, ರಾಕ್ಷಸ ರಾಜರಿಂದಲೂ
ಸುರವರವನಿತಾಪ್ರೀತಿ = ದೇವಸ್ತ್ರೀಯರ ಪ್ರೀತಿ
ಅಷ್ಟಾಂಗಭೋಗ = ಅನ್ನ, ನೀರು, ತಾಂಬೂಲ, ಪುಷ್ಪ, ಚಂದನ, ವಸ್ತ್ರ, ಶಯ್ಯೆ, ಅಲಂಕಾರ
ದ್ಯುತಿಮತಿಪಟುತಾ = ಕಾಂತಿಯುಕ್ತ ಬುದ್ಧಿ
ರಾಜರಾಜಶ್ರೀ = ಕುಬೇರನ ಐಶ್ವರ್ಯ
ಪೂಜ್ಯವಾಕ್ಯಂತ = ಗೌರವದ ನುಡಿ
ಮರ್ತ್ಯ = ಮನುಷ್ಯಲೋಕ
ಲಭಂತೇ = ಲಭಿಸುವುದು
ಆರ್ಯೆ :
ಜೀವಾಃ = ಜೀವಗಳು
ವಿಖ್ಯಾತ ವಿಫುಲವಂಶೇಷು=ಪ್ರಸಿದ್ಧ ವಂಶ
ಏಕೇ = ಒಂದರಲ್ಲಿ
ದ್ಯುತಿ = ಪ್ರಕಾಶಮಾನ ಬುದ್ಧಿ
ಧೃತಿ = ಸ್ಥಿರತೆ
ಕಾಂತಿ =ತೇಜಸ್ಸು
ಶ್ರೀ = ಸಂಪತ್ತು
ಹ್ರೀ= ಲಜ್ಜೆ, ರೂಪಾರೋಗ್ಯಸತ್ವಬಲ ಸಂಪನ್ನಾ = ರೂಪ ಆರೋಗ್ಯ ಸತ್ವಗುಣದಿಂದ ಕೂಡಿದ
ಪುಣ್ಯಾತ್ = ಪುಣ್ಯದಿಂದ
ಉತ್ಪಾದ್ಯಂತೇ = ಹುಟ್ಟುತ್ತಾರೆ
ಆಜ್ಞಾ = ಆಜ್ಞೆ ಮಾಡುವ ಅಧಿಕಾರ
ಯಶಃ = ಕೀರ್ತಿ
ಪರಿವಾರ ಧನೋಪಭೋಗಾ = ಸೇವಕರು ಐಶ್ವರ್ಯ ಮುಂತಾದ ಸಾಧನಗಳು
ಲೋಕವೇದ ಸಮಯೇಷು = ಲೌಕಿಕ ವೈದಿಕವೆಂಬ ಸಂಪ್ರದಾಯ
ಪುಣ್ಯೋದಯೇನ = ಪುಣ್ಯದಿಂದ
ವರ್ಣಯಂತಿ = ವರ್ಣಿಸುತ್ತಾರೆ
ಧರ್ಮೇಣ = ಧರ್ಮದಿಂದ
ವರಯುವತಿ = ಶ್ರೇಷ್ಠಳಾದ ಸ್ತ್ರೀ
ಭವನ = ಮನೆ
ವಾಹನ = ಪಲ್ಲಕ್ಕಿ
ಕನಕ = ಬಂಗಾರ
ರಜತ = ಬೆಳ್ಳಿ
ಮಣಿ = ರತ್ನ
ಸುರಥಾಃ = ಶ್ರೇಷ್ಠ (ಒಳ್ಳೆಯ) ರಥಗಳು
ತುಂಗ = ಎತ್ತರವಾದ
ಮದದಳಿತ = ಮದೋದಕದಿಂದ ಬಿರಿದಿರುವ
ನಾಗ=ಆನೆ
ಭೃತ್ಯಾಃ = ಸೇವಕರು
ಭವಂತಿ = ಉಂಟಾಗುತ್ತಾರೆ
ನಿರ್ವಾಣ ಸುಖ = ಮೋಕ್ಷಸುಖ

ಗಾಹೆ :
ಜತ್ಥ = ಎಲ್ಲಿ
ದಯಾ = ದಯೆಯು ಇದೆಯೋ
ಸೋ = ಅದು
ಧಮ್ಮೊ = ಧರ್ಮವು
ತಓ=ಬಳಿಕ
ವಿಸಯಣಿಗ್ಗ ಹೋ = ಇಂದ್ರಿಯ ನಿಗ್ರಹ ಇದೆಯೋ
ಸೋವಿ = ಅದು ಕೂಡ
ದಸ ಅಠ್ಠದೋಸರಹಿ ಓ = ಹದಿನೆಂಟು ದೋಷರಹಿತನು
ದೇವಃ = ದೇವತೆಯು
ಣತ್ಥಿ = ಇಲ್ಲ (ನಾಸ್ತಿ)
ಭವಾಂತರ = ಜನ್ಮಾಂತರ
ಶ್ರಾವಕ ಬ್ರತ = ಜೈನ ಗೃಹಸ್ಥ ಪಾಲಿಸಬೇಕಾದ ವ್ರತ
ಕರ್ಮಕ್ಷಯ = ಕರ್ಮನಾಶ
ಮೇಲ್ಕೊಂಡು =ಧರಿಸಿ
ಮಹಾವಿಭೂತಿ = ಮಹಾವೈಭವ
ಪರಕೆಗುಡಲ್ = ಹರಕೆ ಒಪ್ಪಿಸಲು
ಒಡಪೋವ = ಜೊತೆಯಲ್ಲಿ ಹೋಗುವ
ವ್ಯಾವರ್ಣಿಸಿ = ವಿಸ್ತಾರವಾಗಿ ವರ್ಣಿಸಿ
ಪಾವು ಕೊಳೆ = ಹಾವು ಕಚ್ಚಲು
ಮಗುಳ್ದು = ತಿರುಗಿ
ಪೊಱವೊಳಲೊಳ್=ಊರ ಹೊರಭಾಗದಲ್ಲಿ
ಪೆಸರನೊಡೆಯ = ಹೆಸರನ್ನು ಹೊಂದಿದ
ನಿಯೋಗಿಗಳ = ಅಧಿಕಾರಿಗಳ
ಜಾತಿಸ್ಮರೆ = ಹಿಂದಿನ ಜನ್ಮಗಳ ನೆನಪು ಉಂಟಾದವಳಾಗಿ
ಪೊಡೆವಟ್ಟು = ನಮಸ್ಕರಿಸಿ
ಉಱದೆ = ಹೊಂದದೆ
ಪೊಲ್ಲಮೆಯ = ಕೆಟ್ಟತನದ
ಪ್ರತಿಬೋಧಿಸೆ = ಎಚ್ಚರಿಸಲು, ತಿಳಿಹೇಳಲು
ಕಟಿದ = ಆಗಿ ಹೋದ
ಪೆಱ ಪುಟಿ = ಬೇರೆಡೆ
ವಿಸುಡು =ಬಿಡು
ಪಾರ್ವರೆಮುಂ = ಬ್ರಾಹ್ಮಣರಾಗಿದ್ದೇವೆ
ಅಗ್ಗಳ =ಶ್ರೇಷ್ಠ
ಪೆಱರಿಲ್ಲ =ಇತರರಿಲ್ಲ
ಕೊಳಲಾಗ = ಹೊಂದಲಾಗದು
ಅಮ್ಮಾ = ಅಪ್ಪಾ
ಬಿಸುಟ್=ಬಿಡು
ಎಡೆಯೊಳ್ = ಮಾರ್ಗಮಧ್ಯದಲ್ಲಿ
ಬಟ್ಟೆ = ದಾರಿ
ವರ್ತ್ಮನ್ = ಮಾರ್ಗ
ಪೆಡಂಗಯ್ಯುಡಿಯೆ = ಬೆನ್ನು ಹಿಂದೆ ಬಾಗಿಸಿ ಕಟ್ಟಿದ ಕೈಗಳು ಮುರಿಯುವಂತೆ
ವಱ = ಪರೆ, ತಮಟೆ
ಬೆಸಗೊಳ್ = ಕೇಳು, ವಿಚಾರಿಸು
ತಳಾಱ = ತಳವಾರ
ಜೂಜು = ಜೂಜಿನಾಟ
ದೀನಾರ = ನಾಣ್ಯ (Denarius) ರೋಮ್ ಚಕ್ರಾಧಿಪತ್ಯದ ನಾಣ್ಯ
ಸೋಲಮಂ = ಸೋತದ್ದಕ್ಕಾಗಿ ಕರಾರಿನ ಪ್ರಕಾರ ಕೊಡಬೇಕಾದದ್ದು
ಅಮೋಘಂ = ತಪ್ಪದೆ
ಸೂಲ=ಶೂಲ
ಲೋಗರು =ಜನರು
ಡಂಬಿಸಿ = ಮೋಸಮಾಡಿ
ಮಾಱುಗೊಳ್ವ = ಮಾರಲಿಕ್ಕೆ ಕೊಳ್ಳುವ
ಸರ್ಪದಷ್ಟ = ಹಾವು ಕಚ್ಚಿದ
ಬಾೞಿಸು = ಬದುಕಿಸು

ಜಾವ = ಕಾವಲು
ಪುಳ್ಳಿ= ಸೌದೆ
ಪೊಟ್ತಱಿನೆ = ಸೂರ್ಯ ಹುಟ್ಟಲು
ಪೊಟ್ಟಳಿಗೆ = ಪೊಟ್ಟಣ, ಚೀಲ
ಈಡಾಡು =ಬಿಸಾಡು
ಆರೈವುದು = ವಿಚಾರ ಮಾಡುವುದು
ನಿಗ್ರಹ = ಶಿಕ್ಷೆ, ದಂಡ
ಬಗ್ಗಿಸಿ ನುಡಿ = ಬಯ್ದು ಹೇಳು
ಬಿನ್ನನೆ ಮೊಗ = ಬಾಡಿದ ಮುಖ
ಸಂತವಿಸು = ಸಮಾಧಾನ ಪಡಿಸು
ನೆಗಟ್ = ಮೊಸಳೆ
ತಡಿ = ದಡ, ಈ = ಕೊಡು
ಪೂಣ್ದೊಡೆ = ಪ್ರತಿಜ್ಞೆ ಮಾಡಲಾಗಿ
ನೆಱೆದಂದು = ತುಂಬಿದಾಗ, ಕೂಡಿದಾಗ
ಕೈಗೆಯ್ದು = ಅಲಂಕರಿಸಿಕೊಂಡು
ಪೊಱಮಟ್ಟು = ಹೊರಗೆ ಹೋಗಿ
ಆಪಣ = ಅಂಗಡಿ
ತುಡುಗೆ = ಒಡವೆ
ಮನೆವಾರ್ತೆ = ಮನೆಯ ವಿಷಯ
ಮೆಚ್ಚುಗೆಯ್ = ಮೆಚ್ಚಿದ್ದನ್ನು ಮಾಡು
ನನ್ನಿಗೊಟ್ಟು = ಮಾತುಕೊಟ್ಟು ಸತ್ಯಹೇಳಿ
ತುರಿಪದಿಂದೆ =ಬೇಗನೆ
ಬೞಿವೞಿ = ಹಿಂದೆ ಹಿಂದೆ
ತೆಱೆಯಿಂ = ತೆರೆಯಿರಿ
ಮದೆವಳ್ =ಮದುಮಗಳು
ಅೞಿ = ನಾಶಮಾಡು
ಬರ್ದ್ರ್ಪೆನೆ = ಬದುಕುತ್ತೇನೆಯೆ ?
ಎಣಿಕೊಂಡ =ಎಣಿಸಿ ತೆಗೆದುಕೊಂಡ
ತವನಿಧಿ = ಅಕ್ಷಯ ನಿಧಿ
ತವದೆ = ಕಡಿಮೆಯಾಗದೆ, ನಾಶವಾಗದೆ,
ಒಡೆಯೊಳ್ = ಉಳ್ಳವಳು

ವಂದೊಳಂ = ಬಂದವಳನ್ನು
ಸಮನಿಸುವುದು = ಒದಗಿ ಬರುವುದು
ಅಳಿಪು = ಆಸೆಪಡು
ಮಱಲುಂದಿಸು = ನಿದ್ದೆಮಾಡು
ಎೞ್ಚಿ= ಎಬ್ಬಿಸಿ
ಆಟಿಸು = ಬಯಸು, ಪ್ರೀತಿಸು
ನೆಱೆಯೆ= ಚೆನ್ನಾಗಿ
ಭಾಗಸ = ಸಂಪತ್ತು
ಉರ್ಕೆವ= ಮೋಸ
ಮೆಯ್ಯಱಿಯದೆ = ಪ್ರಜ್ಞೆಯಿಲ್ಲದೆ
ಬಱುಂಟೆ = ಚಿವುಟಿ, ಚುಚ್ಚಿ
ಕರ್ಬಿನಕೆಯ್ಯಂ = ಕಬ್ಬಿನ ಗದ್ದೆ
ನಿದಾನ = ನಿಧಿ, ಸಂಪತ್ತು
ಬಿರ್ದಿ = ಮುದುಕಿ, ವೃದ್ಧೆ
ಮೋದಗೆ = ಕಡುಬು, ಹುಗ್ಗಿ
ಸಾರೆ=ಸಮೀಪ
ಪೂಸಿಸು = ಎಣ್ಣೆ ಹಚ್ಚಿಸಿ
ಒಲ್ಲಣಗೆ =ಒದ್ದೆ ಬಟ್ಟೆ
ಕೞಿ= ಗಂಜಿ
ಪುಯ್ಯಲಿಡು = ಕೂಗಾಡು
ಅನಿಬರು = ಎಲ್ಲರೂ
ತ್ರಸ್ತಾಭಿಭೂತ = ಭಯಗೊಂಡು
ಛಿದ್ರಿಸು = ತಂತ್ರಮಾಡು
ಕೂರಿತಪ್ಪ = ಮೊನಚಾದ
ಬಾಳಂ =ಕತ್ತಿಯನ್ನು
ಲುಂದಿಧ = ಮಲಗಿದ
ಅರಿ = ಕತ್ತರಿಸು
ಪುಗಲ್ = ಪ್ರವೇಶಿಸಲು
ಪಾಂಗು = ರೀತಿ, ದಾರಿ
ಸೂೞು = ಸರತಿ
ಮೂಗರಿಯೆಪಟ್ಟು = ಮೂಗು

ಕತ್ತರಿಸಲ್ಪಟ್ಟು
ಇಂದ್ರಜಾಲಿಗ = ಮಾಯಾಮಂತ್ರಗಾರರ
ಪುಡುಕೆ = ಪೆಟ್ಟಿಗೆ
ಪಿಶಿತ = ಮಾಂಸ
ಪಾಪೆ = ಬೊಂಬೆ
ಝುಣಂಬ = ಮೇಲು ಹೊದಿಕೆ
ಪ್ರತಿಮುಖ = ಮುಖವಾಡ
ಕಳೆದೀಡಾಡು = ತೆಗೆದು ಬಿಸಾಕು
ಮಾಣಿಸು = ತಡೆ, ನಿಲ್ಲಿಸು
ಪರ್ಚಿಗೊಟ್ಟು = ಹಂಚಿಕೊಟ್ಟು
ಬೈಗಿರುಳು= ಮುಂಜಾನೆ
ನೆರಂ = ನೆರವು
ಪಱಿ = ಹರಿ, ಕತ್ತರಿಸು
ಗಾಮುಂಡ = ಗೌಡ
ಏ = ಏನು
ಪರದ = ವ್ಯಾಪಾರಿ
ಕೈನೀರೆಱೆದು = ಧಾರೆಯೆರೆದು
ಮಱಿವಾಳು = ಕದ್ದು ಜೀವನ ನಡೆಸು
ಕಬ್ಬೊರ್ನ್ನ = ಕಬ್ಬಿಣ
ಪಯನು = ಹಾಲು ಕೊಡುವ ಹಸು
ಪಸರ = ಸಲಿಗೆ
ದಾಯ = ಆಸ್ತಿ, ಅವಕಾಶ
ಜಡಿದು ಬಗ್ಗಿಸಿ = ಬಯ್ದು, ಗದರಿಸಿ
ಮೂದಲಿಸು = ಹೀಯಾಳಿಸು
ಕಳ್ಳದ = ಕದಿಯದ
ಸ್ವದಾರಸಂತೋಷ= ಹೆಂಡತಿಯಲ್ಲಿ ಮಾತ್ರ ಸಂತೋಷ ಹೊಂದುವುದು
ಪರಿಮಿತ ಪರಿಗ್ರಹ = ಎಷ್ಟು ಬೇಕೋ ಅಷ್ಟನ್ನು ಮಾತ್ರ ಉಳಿಸಿಕೊಳ್ಳುವುದು
ಸೇದೆ = ಬಳಲಿಕೆ, ಆಯಾಸ
ಕಟ್ಟುಪಡು = ಬಂಧನಕ್ಕೊಳಗಾಗು
ಗೆಂಟಱೊಳ್ = ದೂರದಲ್ಲಿ
ಅಟ್ಟಾಡು = ಕೆಡಿಸು, ಹಾಳು ಮಾಡು
ತೊವಲ್ = ಹಸರು, ಚಿಗುರು
ಅಬ್ರಹ್ಮಣ್ಯಂ ಭೋ = ಕಷ್ಟಕ್ಕೆ ಸಿಲುಕಿದ ಬ್ರಾಹ್ಮಣ ನೆರವಿಗಾಗಿ ಕೂಗುವುದು
ಕೋಳ್ವಟ್ಟೆನ್ = ಸುಲಿಗೆಗೊಳಗಾದೆನು
ಸಬಾಳವೃದ್ಧರು = ಹುಡುಗರು, ಮುದುಕರು
ನೆರವಿ= ಸಮೂಹ
ಪ್ರಣಮ = ಓಂಕಾರ
ಪಾಳಿಪದಕ್ರಮ ಜಟೆ = ವೇದ ಪಠಣದ ನಾನಾ ವಿಧಗಳು
ಮಾನಕಷಾಯ = ಗರ್ವವೆಂಬ ದುಷ್ಟಭಾವ
ಕಂತಿ = ಜೈನ ಸನ್ಯಾಸಿನಿ
ವಟ್ಟಂಗಟ್ಟು =ಪಟ್ಟಕಟ್ಟು
ಬಳ್ಳಿಮಾಡ = ಲತಾಗೃಹ
ನಾಟಕ = ನೃತ್ಯ
ನೈಮಿತ್ತಿಕ = ಜೋಯಿಸ
ಓರೊಂದಱೊಳಂ = ಒಂದೊಂದರಲ್ಲೂ
ಪಚ್ಚುಗೊಡು =ಭಾಗ ಮಾಡಿ ಕೊಡು
ಕೆರ್ಪು = ಚಪ್ಪಲಿ
ಚೋದ್ಯ = ಆಶ್ಚರ್ಯ
ಪಂಚರತ್ನಗಳು= ನೀಲ, ವಜ್ರ, ಪದ್ಮರಾಗ ಮುತ್ತು, ಹವಳ, ನೇತ್ರವಟ್ಟುದುಕೂಲ
ಚೀನಾದಿ = ನೇತ್ರ, ಪಟ್ಟು, ದುಕೂಲ, ಚೀನ ಎಂಬ ರೇಶ್ಮೆಯ ಬಟ್ಟೆಗಳು
ಹೇಮ = ಬಂಗಾರ
ಬರಮಂ = ಬರುವುದನ್ನು
ಪಾರು = ಎದುರು ನೋಡು
ಕರಂ ಸಾದು = ಮುಗ್ಧ ವ್ಯಕ್ತಿ
ಮಾರ್ಕೊಳ್ = ಮೀರು, ಪ್ರತಿಭಟಿಸು
ಕಣ್ಬೆತ್ತ = ಕಣ್ಣನ್ನು ಪಡೆದ

ಸಿದ್ಧಾರ್ಥ = ಬಿಳಿ ಸಾಸುವೆ
ಸೇಸೆ = ಮಂತ್ರಾಕ್ಷತೆ
ಕಟಿವ = ಸೊಂಟ
ಸೊಡರು = ದೀಪ
ಬ್ಯಾದಿ= ವ್ಯಾಧಿ, ರೋಗ
ಎಟ್ಟಿನ್ನಿ = ಬನ್ನಿ
ಮಣಿಕುಟ್ಟಿಮಮಪ್ಪ = ಮಣಿಖಚಿತವಾದ
ಅಱಸು = ಹುಡುಕು, ಉರ್ಚಿ = ಬಿಚ್ಚಿ
ಆರೋಗಿಸು = ಊಟಮಾಡು
ಇನಿಯವಪ್ಪ = ರುಚಿಕಟ್ಟಾದ
ಕುತ್ತ = ರೋಗ, ಕಂಟಕ
ಅರುಚಿ = ರುಚಿಯಿಲ್ಲದ
ಬಗೆ = ಭಾವಿಸು
ಸಮೆ= ಮಾಡು, ಪೂರೈಸು
ಸರಸಪಂಗಳು = ಸಾಸಿವೆಗಳು
ದೊರೆಯಲ್ಲದ =ಸಮಾನವಲ್ಲದ
ಭ್ರಾತರ = ಸೋದರ
ಮಾಡ = ಮನೆ
ಪೆಱಗಣ = ಹಿಂದಿನ
ಪಜೆವೊಳ್ತು = ತಮಟೆ ಬಾರಿಸುವ ಹೊತ್ತು
ಜೋಗು =ಯೋಗಸ್ಥರಾಗುವುದು
ನಿಡುವಯಣ = ದೀರ್ಘಪ್ರಯಾಣ
ಎಂತಾನುಂ = ಹೇಗಾದರೂ ಮಾಡಿ
ಆಸತ್ತು = ದಣಿದು
ನಾಲ್ಕು ತಿಂಗಳು = ಚಾತುರ್ಮಾಸ, ಮಳೆಗಾಲದಲ್ಲಿ ಜೈನ ಮುನಿಗಳು ಒಂದೇ ಊರಿನಲ್ಲಿ ಉಳಿದುಕೊಳ್ಳುವ ನಿಯಮ
ಮೋನಂ = ಮೌನ
ನಡಪಾಡು = ತಿರುಗಾಡು, ನಡೆದಾಡು
ನೆಲೆ = ಅಂತಸ್ತು
ಬೈಗಿರುಳು = ಬೆಳಗಿನ ಜಾವ,- ರಾತ್ರಿಯ ಕೊನೆಯ ಭಾಗ
ಪಂಚಮಹಾಶಬ್ದ = ಶೃಂಗ, ತಮಟೆ, ಶಂಖ, ಭೇರಿ, ಜಯಘಂಟೆ (ಜಾಗಟೆ)
ತ್ರಿಲೋಕಪ್ರಜ್ಞಪ್ತಿ = ಲೋಕಾಕರವನ್ನು ತಿಳಿಸುವ ಜೈನಗ್ರಂಥ
ಪರಿವಿಡಿಗೆಯ್ = ಕ್ರಮವಾಗಿ ಪರಿಸು
ತಣಿ = ತೃಪ್ತಿಪಡು
ಪುಲ್ವನಿ = ಹುಲ್ಲಿನ ತುದಿಯಲ್ಲಿರುವ ಹನಿ
ಬಾಳಕ = ಬಾಲದ ಹುಳು, ಕ್ರಿಮಿ
ಯಾವಜ್ಜೀವ = ಜೀವಪರ್ಯಂತ
ಪ್ರಚ್ಛನ್ನ = ಮರೆಯಲ್ಲಿದ್ದ, ಮುಚ್ಚಿದ
ಮೃತಕ ಸೆಜ್ಜೆ = ಶವದ ಹಾಸಿಗೆ, ಶವಾಸನ
ಮಹಾಕಾಳ = ಸ್ಮಶಾನ
ಕಿಟ್ಟಿಯಱಿಯದ = ಮುಟ್ಟಿ ತಿಳಿಯದ
ಕಿರುಗಲ್ = ನೊರಜುಕಲ್ಲು
ಪೆಟ್ಟೆ = ಹೆಂಟೆ
ಅಗುಟ್ಟು = ತೋಡಿ
ಪುಗುಳ್ = ಬೊಬ್ಬೆ ಗುಳ್ಳೆ
ಕರಗದ ದಾರೆವೊಲ್ = ಸುರಿಯುವ ನೀರಿನಂತೆ
ಒಕ್ಕ = ಸುರಿದ
ನೆತ್ತರು = ಸುರಿದ
ನೆತ್ತರು = ರಕ್ತ
ರಾಗಿಸಿ = ಪ್ರೀತಿಸಿ
ಅಡಿ = ಪಾದ
ಪೋಳ್ದು = ಸೀಳಿ
ಸಯಸತ್ತಮದೇವ = ಶ್ರೇಷ್ಠ ದೇವತೆ
ಪರಿವರಿ = ಓಡು
ದೇವಸಂಘಾತ = ದೇವತಾ ಸಮೂಹ
ತಿಳಿಪಿಕೊಂಡು = ಸಿಟ್ಟನ್ನು ಕಡಿಮೆ ಮಾಡಿಕೊಂಡು

ಕೈಗೆಯ್ದು = ಸಿಂಗರಿಸಿಕೊಂಡು
ಮೃತಕ =ಶವ
ಮೆಲ್ಪು=ಮೃದುಸ್ವಭಾವ
ಬಲ್ಮೆ = ಪ್ರೌಢಿಮೆ
ಒಲ್ಮೆ =ಪ್ರೀತಿ
ಬಸಿಱ್ ಪೆಂಡಿರ್ = ಗರ್ಭಿಣಿಯರು
ತಿರಿಕೋಪಸರ್ಗ = ಪ್ರಾಣಿಗಳಿಂದ ಮತ್ತು ಕ್ಷುದ್ರ ಜೀವಗಳಿಂದ ಉಂಟಾಗುವ ತೊಂದರೆ
ಆಪ್ತಾಗಮ ಪದಾರ್ಥರ್ಧಿಗಳೊಳ್ = ಆತ್ಮೀಯವಾದ ಆಗಮಗಳಲ್ಲಿ
ಅಪವರ್ಗ ಸುಖ =ಮುಕ್ತಿ
ಎಯ್ದು = ಹೊಂದು, ಪಡೆ, ಸೇರು
ಕಾಲಂಗೆಯ್ದೆಡೆ = ಮರಣಹೊಂದಿದ ಸ್ಥಳ
ಅಗರು = ಒಂದು ಬಗೆಯ ಸುಗಂಧದ್ರವ್ಯ
ಕಾಳಾಗರು = ಕರಿಯ ಅಗರು
ಗೋಶೀರ್ಷ = ಒಂದು ಬಗೆಯ ಶ್ರೀಗಂಧ
ಸಿದ್ಧಾಯತನ = ಸಿದ್ಧರ ಕ್ಷೇತ್ರ, ಪವಿತ್ರಸ್ಥಾನ

೨. ಸುಕೌಶಳ ಸ್ವಾಮಿಯ ಕಥೆ

ಕಾದಲ = ಪ್ರೀತಿ ಪಾತ್ರ
ಪೆರ್ಮೆ = ಹೆಮ್ಮೆ
ಓರಂತಪ್ಪ = ಒಂದೇಸಮನೆ, ಸಮಾನ
ಅಧಿಗಮ = ಸಂಪಾದಿಸಿದ

ಗಾಹೆ :

ಸಮ್ಮದ್ದಸ್ಸಣ ಸುದ್ಧೊ = ಸಮ್ಯಗ್ದರ್ಶನದಲ್ಲಿ ಶುದ್ಧನಾದವನು
ಅಕದ ಪದಕವ್ಮೊ = ಉತ್ತಮ ಕರ್ಮವನ್ನುಳ್ಳವನು,
ಗುಣನಿಳಯ = ಗುಣವಂತ
ಉಜುಗತ್ತೊ = ಪ್ರಯತ್ನದಲ್ಲಿ ಆಸಕ್ತಿ ಇರುವವನು,
ಪವಯಣಕುಸಳೋ = ಪ್ರವಚನದಲ್ಲಿ ಕುಶಲನಾದವನು,
ಮದಿಪ್ಪಗಬ್ಭೋಯಂ = ಪಂಡಿತ, ಬುದ್ಧಿವಂತ
ಅನವರತ = ನಿರಂತರ
ನೋಂತು = ವ್ರತ ಮಾಡಿ
ಕೇರಂ ಸಾರ್ದು=ಗೋಡೆಯ ಸಮೀಪ ಹೋಗಿ
ಗಳಂತಿಗೆ = ನೀರಿನ ಕಲಶ, ಹೂಜಿ
ಲೆಪ್ಪ = ಮೇಣ
ಕಾಷ್ಠಕರ್ಮ = ಕಟ್ಟಿಗೆಯ ಕೆಲಸ, ಬಡಿಗತನ
ಕಶ್ಚಿದ್ = ಯಾವನೋ ಒಬ್ಬ
ಗುರುಪರಿವಿಡಿ = ಗುರುಪರಂಪರೆ
ಉತ್ತವಳ = ಅಪೇಕ್ಷೆ ಹೊಂದಿದವ
ವಿಗ್ರಹ = ಯುದ್ಧ, ಕಲಹ
ಗಂಧಹಸ್ತಿ = ಮದಗಜ
ಪಾಗುಡ=ಕಾಣಿಕೆ
ಮಸಗು= ಕೆರಳು
ತಳಿ = ಸಿಂಪಡಿಸು
ಪರಿತಂದು = ಓಡಿಬಂದು
ಮಱುಸೂಟಿನೆ = ಮತ್ತೊಂದು ಸಲ
ವ್ಯಾಳ = ತುಂಟ
ಬಾರಿ = ಆನೆಗಳನ್ನು ಹಿಡಿಯುವ ಬೋನು, ಖೆಡ್ಡಾ

ಬಸ = ವಶ
ತಗರು = ಟಗರು
ಎಡೆಯ =ಒಡೆಯ, ಹಿರಿಯ
ಪಿಡಿ = ಹೆಣ್ಣಾನೆ
ಗಂಡಗುಣ = ಪೌರುಷ, ಪರಾಕ್ರಮ
ನಿನ್ನನ್ನರ್ = ನಿನ್ನಂಥವರು
ಭರ್ತಾರ = ಪತಿ, ಗಂಡ, ಒಡೆಯ
ಬೌಮವಿಹಾರ = ಭೂಮಿಯ ಮೇಲೆ ಸುತ್ತಾಡುವುದು
ಕರಿಣಿ = ಹೆಣ್ಣಾನೆ
ಐರಾವಣ = ಐರಾವತ
ಮೆಲ್ಗಂಭೀರ = ಮೃದುಗಂಭೀರ
ಹತವಿತತ ಕೋಳಾಹಳ = ಚದುರಿಸಿ
ನಿಡಿಯ = ಉದ್ದವಾದ
ತೋರಮಪ್ಪ = ದಪ್ಪವಾದ
ತಟ್ಟೈಸಿ = ಅಪ್ಪಿಕೊಂಡು
ನಿವೇದಕ = ಸುದ್ದಿ ತಿಳಿಸುವವ
ದ್ರವಿಳ ವಿಷಯ = ದ್ರಾವಿಡ ದೇಶ
ನೆಱಪು = ಮಾಡು, ಪೂರೈಸು
ತದೀಪ್ಸಿತ = ಇಷ್ಟವಾದ
ಪುಳಿನ =ಮರಳು, ಉಸುಕು
ಹಸ್ತಿಯೂಥ = ಆನೆಯ ಹಿಂಡು
ಕಬಳಂಗೊಳುತ್ತ= ತಿನ್ನುತ್ತ
ವಿಚ್ಚಳ= ಹೊಳೆಯುವ, ಶುಭ್ರ
ಹಸ್ತಿಭೋಗ = ಆನೆಯ ಸುಖ
ಕಾಂಕ್ಷೆ = ಅಪೇಕ್ಷೆ, ಆಸೆ
ಸುರಿಗೆ = ಕತ್ತಿ
ಸುಭದ್ರಜಾತಿ = ಉತ್ತಮ ತಳಿಯ ಆನೆ
ನೆಱಪು = ಕೂಡಿಹಾಕು, ಮಾಡು
ಪೊರ್ದಲಾಟಿಸು = ಕೂಡಲು ಬಯಸು
ಸಾರಲು = ಸಮೀಪ ಬರಲು
ದಾಯ = ಸಲುಗೆ, ಬಹುಮಾನ
ಗೆತ್ತು = ತಿಳಿದು, ಭ್ರಮಿಸಿ
ಪುರುಡು = ಸ್ಪರ್ಧೆ
ಶತಖಂಡ = ನೂರು ಚೂರುಗಳು
ಅಡಿವೊಣರ = ಎರಡು ಪಾದಗಳು
ಕೋಟ್ಕಳಂ = ಕೊಂಬುಗಳನ್ನು
ದ್ರವ್ಯತಪ = ಕಪಟ ತಪಸ್ಸು
ಬರ್ದಿ = ಕೃಶವಾಗಿ, ನೊಂದು, ಬಳಲಿ
ಪಾಡಟಿದು = ಸ್ಥಿತಿಗೆಟ್ಟು
ಬಲಗೊಂಡು = ಪ್ರದಕ್ಷಿಣೆ ಹಾಕಿ
ಸ್ವೇಪ್ಸಿತ = ತಾನು ಬಯಸಿದ
ಪಟ = ಚಿತ್ರಪಟ
ನಿಮಿರ್ಚಿ =ಸುರುಳಿ ಬಿಚ್ಚಿ
ಆರಯ್ = ಹುಡುಕು
ಬೇಂಟ = ಪ್ರೀತಿ
ಉಟಿ= ಬಿಡು
ಮಂತಣ =ಮಂತ್ರಾಲೋಚನೆ
ಕೂಸು ಕುಡುವುದು = ಕನ್ಯಾದಾನ ಮಾಡುವುದು
ಪಣ್ಣುವಂ = ಮಾಡೋಣ
ಮಾಲೆ ಸೂಡು = ಮಾಲೆ ತೊಡಿಸು
ಸೊಪಾರ = ಒಂದು ಊರು
ಪರಿನಿರ್ವಾಣ ಭೂಮಿ = ಮುಕ್ತಿ ಹೊಂದಿದ ಸ್ಥಳ
ಮಾಸೋಪವಾಸ = ಒಂದು ತಿಂಗಳ ಉಪವಾಸ
ವಿಷಯ = ದೇಶ, ನಾಡು
ನೆಱೆ = ತುಂಬು
ಸಪ್ತತಳಪ್ರಾಸಾದ =ಏಳಂತಸ್ತಿನ ಉಪ್ಪರಿಗೆ

ಪೊಲ್ಲಮೆ = ಹೇಸಿಗೆ, ಅಸಹ್ಯ
ಇಂಬುಗೆಯ್ = ಒಪ್ಪು, ಅವಕಾಶಕೊಡು
ವಕ್ರ = ಅಡ್ಡಿಪಡಿಸು
ಬಾರಿಸೆ = ತಡೆದು, ಬಯ್ದು
ಕೈಯಲಿಕ್ಕಿ = ಜೈನ ಮುನಿಗಳಿಗೆ ಕೈಯಲ್ಲಿ ಊಟಕ್ಕೆ ಇಕ್ಕಿ
ಪೆಱು = ಹೆರು, ಹಡೆ, ಪಡೆ
ಕ್ರಿಯೆಗೆಯ್ದು = ಚಿಕಿತ್ಸೆ ಮಾಡಿಸು
ಪ್ರಸೂತೆ = ಹೆತ್ತವಳು, ಬಾಣಂತಿ
ಬೆಸಕೆಯ್ವ ತೊಟ್ತು = ಚಾಕರಿ ಮಾಡುವ ದಾಸಿ
ಕೆಳದಿ = ಗೆಳತಿ
ಸೂರುಳಿಸಿ =ಪ್ರತಿಜ್ಞೆಗೈದು
ಸೆಟ್ಟಿತಿ = ಶೆಟ್ಟಿಯ ಹೆಂಡತಿ
ಬೆಸಲೆ = ಹೆತ್ತವಳು
ಕಿರುಂಡೆನಗಂ = ಚಿಕ್ಕಸೆಟ್ಟಿ?
ಮಾದುಫಲ = ಮಾವಿನ ಹಣ್ಣು
ಒಸಗೆ = ಸಂತಸದ ಸುದ್ದಿ
ಕಟಕ = ಕಡಗ, ಬಳೆ
ಕಟಿಸೂತ್ರ = ಉಡಿದಾರ
ಅಂಗಚಿತ್ತ = ಮೈಮೇಲೆ ಧರಿಸುವ ಆಭರಣ
ಸೋಂಕಿಲು = ಉಡಿ, ಮಡಿಲು
ಎಳನೇಸಱ = ಬಾಲಸೂರ್ಯ
ಛಟ್ಟಟ್ಟಮ ದಸಮದುವಾಳಸ = ಆರು, ಎಂಟು, ಹತ್ತು, ಹನ್ನೆರಡು ದಿನಗಳ ಉಪವಾಸ
ಬಾಗಿಲ್ಗಾಪಿನವರು = ದ್ವಾರಪಾಲಕರು
ಬಾಲವದ್ದೆ =ಬಾಣಂತಿ ?
ವಿಸುಟ್ಟು =ಬಿಟ್ಟು
ಊಡು =ಉಣ್ಣಿಸು, ಲೇಪನಾದಿಗಳನ್ನು ಬಳಿ

ಮಜ್ಜನ =ಸ್ನಾನ
ನಡಪೆ = ಸಾಕಲಾಗಿ
ಸೆಂಡಾಡುವ = ಚೆಂಡಾಡುವ
ತಟಿ = ದಿಮ್ಮಿಗಳಿಂದ ಮಾಡಿದ ಕಟ್ಟೆಗೋಡೆ
ಪರಿವೇಷ್ಟಿತ = ಸುತ್ತುವರೆಯಲ್ಪಟ್ಟ
ಪಾರಣೆ = ಉಪವಾಸ ಪೂರೈಸುವುದು
ಗಿಡಿಗಿಡಿ ಜಂತ್ರಂ ಮಿಳಿ ಮಿಳಿ
ನೇತ್ರಂ = ಉಪವಾಸದಿಂದ ಕೃಶರಾಗಿ
ಇನ್ನರಂ = ಇಂಥವರನ್ನು
ಅಂಗಡಿಯಲವಡಂ=ಅಂಗಡಿ ಬೀದಿಯಲ್ಲಿ ಅಲೆದಾಡುವವ
ಪೆಱುಕಿತಿಂದು = ಆರಿಸಿಕೊಂಡು ತಿಂದು
ಬೈಕಂಗುಳಿ =ಭಿಕ್ಷಾಟನೆಯ ವ್ಯಸನವುಳ್ಳವ
ದೇಸಿಗ = ಪರದೇಸಿ, ಅನಾಥ
ಗೋವಣ = ಲಂಗೋಟಿ
ಭಾಗಸ =ಭಾಗ್ಯ, ಹಣ
ಸಗರ್ಭವಚನ = ಅರ್ಥತುಂಬಿದ ಮಾತು
ಬಾಣಸಿಗ =ಅಡಿಗೆ ಮಾಡುವವ
ಬೋನ = ಆಹಾರ ಪದಾರ್ಥ
ಓರಗ = ಅನ್ನ
ಆರೋಗಿಸು = ಊಟ ಮಾಡು
ಸೂರುಳಿಸಿ = ಆಣೆಯಿರಿಸಿ
ಬಾವರಿ = ಜೈನ ಮುನಿಗಳು ಊಟಕ್ಕೆ ಹೋಗುವುದು (ಭ್ರಾಮರೀ ವೃತ್ತಿ)
ಉನ್ಮಾರ್ಗೋಪದೇಶ =ವಕ್ರೋಪದೇಶ

ಗಾಹೆ :

ಸವ್ವಜೀವಾಣಂ = ಎಲ್ಲ ಜೀವಗಳನ್ನೂ
ಖಮ್ಮಾಮಿ =ಕ್ಷಮಿಸುತ್ತೇನೆ
ಸವ್ವೇ ಜೀವಾ = ಸಮಸ್ತ ಜೀವಿಗಳೂ
ಮೇ =ನ್ನನ್ನು

ಖಮಂತು =ಕ್ಷಮಿಸು
ಸವ್ವಭೂದೇಸು = ಸರ್ವಭೂತಗಳು
ಮೆತ್ತೀ =ಮೈತ್ರಿ
ಮಜ್ಜ = ನನಗೆ
ವೇರ =ವೈರ
ಕೇಣಚಿ = ಎಳ್ಳಷ್ಟು
ಣ = ನಾಸ್ತಿ, ಇಲ್ಲ

ಗಾಹೆ :

ಮಜ್ಝ = ನನ್ನ
ಸಹಾವಂ =ಸ್ವಭಾವ
ಣಾಣಂ = ಸಮ್ಯಕ್ ಜ್ಞಾನವು
ದಂಸಣಂ =ಸಮ್ಯಗ್ದರ್ಶನವು
ಚರಣಂ =ಸಮ್ಯಕ್‌ಚಾರಿತ್ರವು
ಣ ಕಿಂಪಿ ಆವರಣಂ = ಯಾವ ಕರ್ಮ ಲೇಪವೂ ಇಲ್ಲ
ಜೋ = ಯಾವನು
ಸಂವೇಯಣಗಾಹಿ =ಸಂವೇದನೆಯನ್ನುಳ್ಳವನು
ಸೋ = ಅವನೇ
ಅಹಂ = ನಾನು
ಆದಾ = ಆತ್ಮನು
ಣಾದಾ = ತಿಳಿಯುವವನು
ಹವೇ = ಆಗುತ್ತೇನೆ.

ಗಾಹೆ :

ಏಹುಸರೀರು = ಈ ದೇಹವು
ಛಿಜ್ಜ ಉ =ಕತ್ತರಿಸಲ್ಪಡಲಿ
ಭಿಜ್ಜಉ = ಭೇದಿಸಲ್ಪಡಲಿ
ಜಾಉ ಖಉ=ಕ್ಷಯವಾಗಲಿ, ನಾಶವಾಗಲಿ
ಜೋ ಇಯ = ಹೇ ಯೋಗಿಯೇ
ಜೇಂ = ಯಾವುದರಿಂದ
ಭವತೀರು = ಸಂಸಾರದ ದಡ
ಪಾವ ಇ = ಪಡೆಯುವೆಯೋ
ಣಿಮ್ಮಲ ಉ = ನಿರ್ಮಲವಾದ
ಅಪ್ಪಾ = ಆತ್ಮನನ್ನು
ಭಾವ ಇ= ಧ್ಯಾನ ಮಾಡು
ತೆಗಲೆ = ಕೊರಳಿನ ಮೇಲ್ಭಾಗ
ಕುಂಕುಮಪಂಕಿತ = ಕುಂಕುಮ ಬಳಿದ
ಶ್ರೀಲಾಂಛನ =ಶ್ರೇಷ್ಠವಾದ ಕುರುಹು
ಪಾಷಾಣವೃಕ್ಷ = ಕಲ್ಲು ಮರಗಳಲ್ಲಿ
ಏಱಿಸು =ಧರಿಸು
ನಿಶ್ರೇಯಸ ಸುಖ =ಶ್ರೇಷ್ಠ ಸುಖ
ಎಯ್ದುಗೆ = ಪಡೆಯಲಿ, ಹೊಂದಲಿ

೩. ಗಜಕುಮಾರನ ಕಥೆ

ಮಲರ್ಚ್ಚಿಕ್ಕಿ = ಹೊಟ್ಟೆಯಡಿಯಾಗಿ
ಉರ = ಹೊಟ್ಟೆ
ಪಂದೊವಲು = ಹಸಿ ಚರ್ಮ
ಕೀಲ್ =ಮೊಳೆ
ಸುರಟ = ಸೌರಾಷ್ಟ್ರವೆಂಬ ಊರು
ಅರ್ಧಚಕ್ರಿ = ಮೂರು ಖಂಡಗಳ ಅಧಿಪತಿ
ಆರುಮಱಿಯದೊಂ = ಯಾರನ್ನೂ ಲಕ್ಷಿಸಲಾರದವನು
ಗೋಸಣೆ =ಘೋಷಣೆ
ಚಾತುರ್ದಂತ ಬಳ = ಚತುರಂಗ ಬಲ
ಒಟ್ಟಯಿಸಿ = ಒಂದುಗೂಡಿಸಿ
ಉಯ್ದು = ಹೊತ್ತುಕೊಂಡು ಹೋಗಿ
ಸುವರ್ಣಕಾರ = ಬಂಗಾರದ ಕೆಲಸ ಮಾಡುವವ

ಏರಣಿಗ = ಅಕ್ಕಸಾಲಿಗ
ಸಮವಸರಣ =ತೀರ್ಥಂಕರರ ಉಪದೇಶದ ಸಭೆ
ಅವಯವ ಪ್ರದೇಶ = ಅಂಗಾಂಗಗಳು
ಸರ್ವಾರ್ಥಸಿದ್ಧಿ = ಒಂದು ಸ್ವರ್ಗದ ಹೆಸರು
ಸಾಗರ = ಒಂದು ಸಂಖ್ಯೆ
ಹಸ್ತ= ಮೊಳ
ಪುಂಡರೀಕ = ಬಿಳಿ ತಾವರೆ

೪. ಸನತ್ಕುಮಾರ ಚಕ್ರವರ್ತಿಯ ಕಥೆ

ಕೆರಕು = ಚರ್ಮರೋಗ
ಭರ್ದಿ =ಭೇದಿ
ಪಟ್ಟವಾರ ಮರಗ = ಒಂದು ಜಾತಿಯ ಕುದುರೆ
ದುಷ್ಟಾಶ್ವ = ತುಂಟ ಕುದುರೆ
ಕೊಸೆ = ವಾಹನವನ್ನೇರುವ ವಿಧಾನ ?
ವಾರಿತಪೂರಿತ = ಕುದುರೆಯ ಓಟದ ಗತಿಗಳು
ವಡಿವಜ್ಜೆ =ಕುದುರೆಯ ಹೆಜ್ಜೆ
ನಾಡಗೆಟ್ಟು ಪೋಗಿ = ದಾರಿತಪ್ಪಿ ಹೋಗಿ
ಮಗುೞ್ದು= ಹಿಂದಿರುಗಿ
ವ್ಯಾಧನಿವಾಸ = ಬೇಡರ ಹಟ್ಟಿಗಳು
ತೂಂಕಡುಗೆಟ್ಟು =ನಿದ್ದೆಬಿಟ್ಟು
ಮಾಱುಲಿವ =ಪ್ರತಿಧ್ವನಿಗೈಯುವ
ನಾಗವಲ್ಲೀಪಿನದ್ಧ = ವೀಳಯದೆಲೆಯ ಬಳ್ಳಿಯಿಂದ ಕಿಕ್ಕಿರಿದಿರುವ
ದ್ರುಮಷಂಡ =ಮರಂಗಳ ಗುಂಪು
ವಂಶ = ಕೊಳಲು
ಪಾಟಮುಮಂ = ಹಾಡನ್ನು
ಹರಿಚಂದನ =ಶ್ರೀಗಂಧ
ತುರುಷ್ಕಾದಿ = ತುರ್ಕಿ ದೇಶದ ಲೋಬಾನವೆಂಬ ಸುಗಂಧದ್ರವ್ಯ
ತೀಡು = ಪಸರಿಸು, ಸೋಕು
ಕನತ್ಕನಕ = ಚಿನ್ನದ
ಚಳತ್ಕೇತುಪತಾಕಾದಿ = ಹಾರುತ್ತಿರುವ ಧ್ವಜ, ಬಾವುಟಗಳು
ಆಱುದಿಂಗಳು = ಆರು ತಿಂಗಳು
ತಣಿಪು =ತೃಪ್ತಿ ಪಡಿಸು
ಮಾಱಪ್ಪವೊಲೆ = ಒಂದಕ್ಕೆ ಇನ್ನೊಂದನ್ನು ತೆಗೆದುಕೊಂಡಂತೆ
ಓರಾಸನ = ಒಂದೇ ಪೀಠ
ಎಡೆಯ = ಒಡೆಯ
ಪರಿ = ಓಡು
ತೆಗಲೆಯ್ದೊಡೆದು = ಗೋಣು ಮುರಿದು
ಬಸವೞಿದು = ವಶತಪ್ಪಿ
ಪಟ್ಟಿರ್ದ = ಮಲಗಿದ್ದ
ವಿಗುರ್ವಿಸಿ = ಮಾಯೆಯಿಂದ ಸೃಷ್ಟಿಸಿ, ಸೊಕ್ಕಿನಿಂದ
ಆಪ್ಯಾಯನ = ಹಿತ
ಸ್ವರ್ಣಭಾಜನ = ಚಿನ್ನದ ಪಾತ್ರೆ
ಕೋಡುವ ನೀರು = ತಂಪಾದ ನೀರು
ಖಡ್ಗಸನ್ನಿಭಮಪ್ಪ = ಕತ್ತಿಯನ್ನು ಹೋಲುವ
ಯಷ್ಟಿ = ದೊಣ್ಣೆ
ಬಡವಾಮುಖ = ವಡಬಾಗ್ನಿಯ ಬಾಯಿ
ನೆಗಪು = ಎತ್ತು
ಸ್ಕಂದ = ಹೆಗಲು
ಅವೃಷ್ಟಿವಜ್ರಘಾತ =ಬರಸಿಡಿಲಿನ ಹೊಡೆತ

ತ್ರಸ್ತಾಭಿಭೂತ = ಭಯಗ್ರಸ್ತ
ಮಸ್ತಕದೊಳ್ ನ್ಯಸ್ತಹಸ್ತರ್ಕಳ್ =ತಲೆಯಲ್ಲಿ ಕೈಯಿಟ್ಟವರಾಗಿ, ನಮಸ್ಕರಿಸುವವರಾಗಿ
ಕಾಮಶರ =ಮನ್ಮಥನ ಬಾಣ
ಪರವಸೆ = ಮೂರ್ಛೆ
ಮಱುಗಿದ = ಕುದಿಯುತ್ತಿರುವ
ಅಱುನೀರ = ಬತ್ತಿದ ನೀರಿನ
ಬಿಲ್ಬಲ್ಮೆ = ಬಿಲ್ವಿದ್ಯೆ
ಧನುಷಿ = ಬಿಲ್ವಿದ್ಯಾಪ್ರವೀಣ
ಅಹೋ =ಆಶ್ಚರ್ಯ
ಗಾತ್ರಾಣಿ = ದೇಹಗಳನ್ನು
ಅಸ್ಪೃಶ್ಯನ್ನಪ್ಪಿ = ಮುಟ್ಟದಿದ್ದರೂ
ಛಿನತ್ತಿ = ಕತ್ತರಿಸುತ್ತಾನೆ
ಈದೃಗ್ವಿಧಮಪ್ಪ = ಇಂಥ
ಒಂದಿದಂ = ಸೇರಿದನು
ನಿರುತ = ದಿಟ, ಸತ್ಯ
ಭವಿತವ್ಯ = ಆಗಬೇಕಾದದ್ದು
ಭವಿತ್ಯೇವ = ಆಗಿಯೇ ಆಗುತ್ತದೆ
ಕರ್ಮಣಾಂ = ಕರ್ಮಗಳ ವಿಷಯದಲ್ಲಿ
ಏಷ = ಇದು
ವಿಷಾದೇನ ಕಿಂ = ವಿಷಾದದಿಂದ ಏನು ಪ್ರಯೋಜನ ?
ಸಂಛನ್ನಮಾಗುತ್ತಿರ್ದ್ದ =ದಟ್ಟವಾಗುತ್ತಿದ್ದ
ಪುಯ್ಯಲಿಡು =ನೆರವಿಗಾಗಿ ಕೂಗು
ಕಿಱ್ತಿಬಾಳ್ =ಒರೆಯಿಂದ ಹೊರತೆಗೆದ ಖಡ್ಗ
ಏಱಿಂ =ಹೊಡೆತವನ್ನು
ಬಂಚಿಸಿ = ತಪ್ಪಿಸಿಕೊಂಡು, ವಂಚಿಸಿ
ಮೇಗುಚ್ಚಳಿಸಿ =ಮೇಲಕ್ಕೆ ನೆಗೆದು
ಅಸಿಖೇಟಕ ಹಸ್ತೆ=ಕತ್ತಿ, ಗುರಾಣಿಗಳನ್ನು ಹಿಡಿದವಳು

ವಿಭೀಷಣ = ಭಯಂಕರ
ಸೌಷ್ಠವ = ಸೊಗಸು
ಸ್ಮರವಶ = ಕಾಮವಶ
ಕಲ್ಯಾಣಮಿತ್ರೆ =ಮಂಗಳಕರ ಸ್ನೇಹಿತೆ
ಪಾರಾವತ = ಪಾರಿವಾಳ
ಎರಲೆ(ಳೆ)=ಜಿಂಕೆ
ನಿಪಾತಿಸು = ಬೀಳಿಸು, ಉರುಳಿಸು
ತಱಿಸಂದ = ನಿಶ್ಚಯಿಸಿದ
ಅಮ್ಮ = ಅಪ್ಪ
ಓಲಗಿಸು = ಸೇವೆ ಮಾಡು
ಬೞಿಯನೆ = ಹಿಂದೆಯೇ, ಜೊತೆಯಲ್ಲಿ
ಎಱ್ತಂದವ = ದಾಳಿ ಮಾಡಿದವ
ಸಾಲ್ವೆಂ = ಸಾಕಾಗುತ್ತೇನೆ
ಪಿಂಛಾತಪತ್ರ =ನವಿಲುಗರಿಯಿಂದ ಮಾಡಿದ ಕೊಡೆ
ಪಾಳಿಧ್ವಜ = ಒಂದು ಬಗೆಯ ಬಾವುಟದ ಸಮೂಹ
(ಪಾಳಿಕೇತನ) (ಹಾರ, ವಸ್ತ್ರ, ನವಿಲು, ಕಮಲ, ಹಂಸೆ, ಮೀನ, ಸಿಂಹ, ವೃಷಭ. ಆನೆ, ಚಕ್ರ ಈ ಲಾಂಛನಗಳನ್ನುಳ್ಳ ಬಾವುಟಗಳು)
ಬಾಣಾಸನ ಹಸ್ತ= ಬಿಲ್ಲು ಹಿಡಿದವನು
ಸರ(ಶರ) = ಬಾಣ
ಮೊಕ್ಕನೆ =ಭರದಿಂದ, ಕತ್ತರಿಸುವಂತೆ
ವಿದ್ಯುತ್ಕಪಾಲ =ಮಿಂಚಿನ ತಲೆಬುರುಡೆ
ಮಱುವಕ್ಕ =ಮರುಪಕ್ಷ, ಪ್ರತಿಪಕ್ಷ
ಪುಲ್ಲಂ ಕರ್ಚಿ = ಬಾಯಲ್ಲಿ ಹುಲ್ಲನು ಹಿಡಿದುಕೊಂಡು (ಇದು ಶರಣಾಗತಿಯ ಸಂಕೇತ)
ಸಿದ್ಧಕೂಟ = ಸಿದ್ಧರ ನೆಲೆ

ಸಾರ್ಥಾಧಿಪತಿ = ಸಂಚಾರಿ ವ್ಯಾಪಾರಿಗಳ ನೇತಾರ
ಭೀಭತ್ಸ = ಜುಗುಪ್ಸೆ ಹುಟ್ಟಿಸುವ
ಪ್ರಾಣತ ಕಲ್ಪ = ಪ್ರಾಣತವೆಂಬ ಸ್ವರ್ಗ
ಪಾರ್ವಂತಿ = ಬ್ರಾಹ್ಮಣ ಸ್ತ್ರೀ
ಪಾರಿಸು = ಪಾರಣೆ ಮಾಡು (ಊಟ)
ತಳಿಗೆ = ತಟ್ಟೆ
ತುಯ್ಯಲ = ಪಾಯಸ
ಅಚ್ಚಿಗ = ದುಃಖಿತ
ಪರಿಯಾಣ = ತಟ್ಟೆ
ತೀವಿ = ತುಂಬಿ
ಪಾರುತ್ತಿರ್ದು = ನಿರೀಕ್ಷಿಸುತ್ತಿದ್ದು
ಸಮೆ = ಪೂರೈಸು, ಮಾಡು
ಪುಣ್ = ಹುಣ್ಣು, ಗಾಯ
ಗೃಧ್ರವಾಯಸಾದಿಗಳು =ಹದ್ದು ಕಾಗೆಗಳು
ಅಧಿರೂಢ = ಹತ್ತಿರದ
ಸಹೋತ್ಪನ್ನ =ಸಂಗಡ ಹುಟ್ಟಿದ
ಅವಯವದಿಂ =ಸುಲಭವಾಗಿ, ನಿರಾಯಾಸ
ಗೆಂಟಱಿಂ = ದೂರದಿಂದ
ಅಭ್ಯಂಗನ = ಲೇಪನ
ಮಜ್ಜನ =ಸ್ನಾನ
ಅವಸರ = ಸಮಯ
ವಾಳಾಗ್ರ = ತಲೆಗೂದಲಿನ ತುದಿ
ನಖಾಗ್ರ=ಕಾಲಿನ ಹೆಬ್ಬೆರಳಿನ ತುದಿ

ಶ್ಲೋಕ :

ಅನೇಕ ರಾಗ ಸಂಕೀರ್ಣಂ ಅಪಿ = ಹಲವು ಬಣ್ಣಗಳಿಂದ ತುಂಬಿದ್ದರೂ
ಘನಲ್ಗ್ನಮಪಿ =ಮೋಡಕ್ಕೆ ಅಂಟಿಕೊಂಡಿದ್ದರೂ
ಇಂದ್ರಧನುಃ =ಮಳೆಬಿಲ್ಲು

ಯಥಾ = ಹೇಗೆ (ತಥಾ=ಹಾಗೆ)
ನಶ್ಯತಿ = ನಾಶವಾಗುವುದೋ
ಯೌವನ್ನ = ಪ್ರಾಯ
ಗಾಡಿ =ಸೌಂದರ್ಯ
ತೊಟ್ಟು =ಪ್ರಾರಂಭವಾಗಿ
ದೋಣಿಕೊಂಡ =ದ್ರೋಣಿಕುಂಡ, ದೊನ್ನೆಯಾಕಾರದ ಹರವಿ
ಚಮರಿ = ಚಾಮರ
ಪನಿತುದು = ಹನಿ ಬಿದ್ದುದು
ತಗುಳ್ದು =ಅಂಟಿಕೊಂಡು
ಆವೀಚಿಮರಣ = ಕ್ಷಿಪ್ರಮರಣ
ನಿರ್ವೇಗ = ವಿರಕ್ತಿ
ಆಯಃ = ಆಯುಸ್ಸು
ಅಕ್ಷವಿಷಯಾ = ಇಂದ್ರಿಯಸಂಬಂಧಿ ವಸ್ತುಗಳು
ಭೋಗೋಪಭೋಗಾ =ಸುಖಾನುಭವಗಳು
ವಪುಃ =ದೇಹ
ವೀರ್ಯ =ಶಕ್ತಿ
ಸ್ವೇಷ್ಟಸಮಾಗಮ = ಆಪ್ತೇಷ್ಟರನ್ನು ಕೂಡುವುದು
ವಸುಮತಿ = ನೆಲ, ಭೂಮಿ, ರಾಜ್ಯ
ಶೇಷಾ = ಉಳಿದ
ಸರ್ವೇ ಸುಧಿಯಃ = ಎಲ್ಲ ಜ್ಞಾನಿಗಳು
ಆತ್ಮನಃ ಸಮುದಿತ = ಆತ್ಮನಲ್ಲಿ ಹುಟ್ಟಿದ
ಜ್ಞಾನೇಕ್ಷಣ =ಜ್ಞಾನಚಕ್ಷು (ಕಣ್ಣು)
ಋತೇ = ಹೊರತಾಗಿ
ಅನುಚಿಂತೆ = ಉತ್ತಮ ಧ್ಯಾನ

ಶ್ಲೋಕ :

ಅದೌ = ಮೊದಲಿನಲ್ಲಿ
ಜರಾರೋಗೌ = ಮುಪ್ಪು ಮತ್ತು ರೋಗ
ಅಂತೇಪಿ = ಕೊನೆಯಲ್ಲಿ

ಖಳಾಂತಕಃ = ದುರುಳ ಯಮ
ಇತಿ = ಹೀಗೆ
ಭವಾರ್ಣವ = ಹುಟ್ಟು ಸಾವಿನ ಸಮುದ್ರ
ಜಂತೋಃ ಮಧ್ಯೇ= ಪ್ರಾಣಿಗಳ ನಡುವೆ
ಚಕ್ರೈಕ ಭ್ರಾಂತಿ = ಚಕ್ರಾಕಾರದಲ್ಲಿ ಸುತ್ತುವದು
ಬಡಬಿರ್ದಿ =ದರಿದ್ರಳಾದ ಮುದುಕಿ
ಪಾರಕಿನ ಕೂಟು = ಹಾರಕದಕ್ಕಿಯ ಅನ್ನ
ಆಡಿನಳೆ = ಆಡಿನ ಮಜ್ಜಿಗೆ
ಪಚ್ಚಖ್ಖಾಣಂ =ಪ್ರತ್ಯಾಖ್ಯಾನ = ಆಹಾರ ತ್ಯಾಗದ ಪ್ರತಿಜ್ಞೆ
ಕಚ್ಛು= ಕಜ್ಜಿ
ಜರ =ಜ್ವರ
ಖಾಸ = ಕೆಮ್ಮು
ಸಾಸೋ = ಉಸಿರಿನ ಸಮಸ್ಯೆ
ಭತ್ತಚ್ಛದಿ =ಅತಿಸಾರ
ಅಚ್ಛಿಕುಚ್ಛಿ ದುಃಖಾಣಿ = ಕಣ್ಣಿನ ಮತ್ತು ಹೊಟ್ಟೆಯ ಬೇನೆಗಳು
ಪ್ರತೀಕಾರ = ಚಿಕಿತ್ಸೆ
ಆಸ್ಫೋಟಕ = ಬೊಬ್ಬೆ
ಪಿಟಕ = ಹೊಪ್ಪಳೆ
ಶೂಲ = ಶೂಲೆ, ನೋವು
ಭಗಂದರ = ಮೂಲವ್ಯಾಧಿ
ಗಂಡ = ಗಂಡಮಾಲೆ ಹುಣ್ಣು
ಮರ್ದು = ಔಷಧಿ
ಪಸುಂಬೆ = ಚೀಲ
ಕರ್ಮಜ್ಞರು= ಕರ್ಮವನ್ನು ಬಲ್ಲವರು
ನಿರೋಗ = ರೋಗರಹಿತನಾಗುವುದು
ಉಗುಳ ಸೀಕರಂಗಳು = ಉಗುಳಿನ ಹನಿಗಳು
ಸೀಂಟಿ = ಒರೆಸಿ
ಬಾಟ್ತಿ =ಪ್ರಯೋಜನಕಾರಿ
ಜಾತಿ ಜರಾಮರಣ =ಹುಟ್ಟು, ಮುಪ್ಪು, ಸಾವು
ಸೌಧರ್ಮೇಂದ್ರ =ಸ್ವರ್ಗದೊಡೆಯ ಇಂದ್ರ
ಗುಣಂಗೊಂಡು = ಒಪ್ಪಿ, ತಿಳಿದು
ಪಟುವಾವಿ = ಹಳೆಯ ಬಾವಿ
ಪಂಚನಮಸ್ಕಾರ = ಅರಿಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಹಾಗೂ ಸಾಧು ಈ ಐವರಿಗೆ ಸಲ್ಲಿಸುವ ನಮಸ್ಕಾರ
ಅಪವರ್ಗ =ಮೋಕ್ಷ

೫. ಅಣ್ಣಿಕಾಪುತ್ರನ ಕಥೆ

ಕಾಲಂಗೆಯ್ಯು = ಮೃತ್ಯುವನ್ನು ಹೊಂದು, ಪಿರಿದುಂ ಸಾರಮಪ್ಪ =ಅಧಿಕ ಬೆಲೆಯುಳ್ಳ, ಭಂಡ =ಸರಕು, ಸಾಮಗ್ರಿ, ಪೆಱದಂ =ಇತರ ಸರಕು, ತಮ್ಮನಾಟ್ಕೆ =ತಮ್ಮ ನಾಡಿಗೆ, ಉತ್ಪಾತವಾತ = ನಷ್ಟಕಾರಕ ಬಿರುಗಾಳಿ

೬. ಭದ್ರಬಾಹು ಭಟ್ಟಾರರ ಕಥೆ

ಕಡಿದಪ್ಪ = ತೀವ್ರವಾದ, ಹೆಚ್ಚಿನ,
ಶ್ರೀಯಾದೇವತೆ =ಲಕ್ಷ್ಮೀ
ಮುಂಜಿಗಟ್ಟು =ಮುಂಜ ಎಂಬ ಹುಲ್ಲನ್ನು ಸೊಂಟಕ್ಕೆ ಕಟ್ಟು, ಮೌಂಜೀಬಂಧನ,

ಉಪನಯನ
ಓರೆಗೆಗಳಪ್ಪ =ಸಮವಯಸ್ಕರಾದ
ಮಾಣಿಗಳ್=ಹುಡುಗರು, ಬ್ರಹ್ಮಚಾರಿಗಳು
ಪೊಱವೊಳಲ್ = ಪಟ್ಟಣದ ಹೊರಭಾಗ
ಬಟ್ಟಾಡು =ಬಿಲ್ಲೆಯಾಟ ಆಡು
ಓಳಿ =ಸಾಲು, ಸಮೂಹ, ಒಂದರ ಮೇಲೊಂದು
ಚತುರ್ದಶ ಪೂರ್ವಧಾರಿ = ಜೈನಾಗಮದ ೧೪ ಪೂರ್ವಗ್ರಂಥಗಳನ್ನು ಬಲ್ಲವರು
ಶ್ರುತಕೇವಲಿ = ಜೈನಾಗಮದ ಜ್ಞಾನಿ
ಉಜ್ಜಯಂತ = ಒಂದು ಪರ್ವತ
ಪಂಡಿತಿಕ್ಕೆ = ಪಾಂಡಿತ್ಯ
ನೆಗಟ್ದ =ಪ್ರಸಿದ್ಧರಾದ
ಕುಮಾರ ಬ್ರಹ್ಮಚಾರಿ=ಬಾಲ ಬ್ರಹ್ಮಚಾರಿ
ಪಾರಾವಾರಗ = ಕುಶಲ
ಶ್ರುತ = ಶಾಸ್ತ್ರ
ಪ್ರತಿಮಾಯೋಗ =ಪ್ರತಿಮೆಯಂತೆ ತಪಸ್ಸಿಗೆ ನಿಲ್ಲುವ ಭಂಗಿ
ಕಡೆಯಾರಿಸಿ= ಕೊನೆಗೆ
ಋದ್ಧಿ = ಸಿದ್ಧಿ
ಕಱಮೆಯ ಕೂೞ = ಶಾಲ್ಯನ್ನ, ತೊವ್ವೆ
ವಾಚಕ = ಓದುವವ
ವಿಪರೀತಮಾಗಿ = ವ್ಯತಿರಿಕ್ತವಾಗಿ
ಬಾಚಿಸಿದ = ಓದಿದನು
ಶಾಲಿಂ ಮಶಿಂ ಚ =ಶಾಲ್ಯನ್ನವನ್ನೂ, ಮಸಿಯನ್ನೂ
ಘೃತ =ತುಪ್ಪ
ದತ್ವಾ = ಕೊಟ್ಟು
ಕುಮಾರ= ರಾಜಕುಮಾರ,
ಅಂಧಾಪಯೇತ್=ಕುರುಡನನ್ನಾಗಿಸಬೇಕು (ಇಲ್ಲಿ ಕೂೞಂ ಇದ್ದುದನ್ನು ವಾಚಕನು 'ಕೂೞಂ' ಎಂದೂ 'ಅಧ್ಯಾಪಯೇತ್' ಎಂಬುದನ್ನು 'ಅಂಧಾಪಯೇತ್' ಎಂದು ತಪ್ಪಾಗಿ ಓದಿದನೆಂಬುದು ಅರ್ಥ.)
ಕಾಕಿಣಿ= ಒಂದು ಬಗೆಯ ರತ್ನ
ಶಾಕಟಿಕ ಪರದ = ಚಕ್ಕಡಿಯ ಮೇಲೆ ವಸ್ತುಗಳನ್ನು ಮಾರುವ ವ್ಯಾಪಾರಿ
ಪಱ್ತಿ=ಹತ್ತಿ
ಬಟ್ಟೆಗಟ್ಟಿ= ದಾರಿಗೆ ಅಡ್ಡಗಟ್ಟಿ
ಬಂಡ=ಸರಕು
ಎೞ್ತು=ಎತ್ತು
ನಡಪೆ=ಸಾಕಿ ಸಲಹಲು
ತರುವಲಿ=ತಬ್ಬಲಿ
ಕೆಲದೂರ್ಗಳು=ಅಕ್ಕಪಕ್ಕದ ಊರುಗಳು
ಬೆಸದವ=ಆಳು, ಕೆಲಸದವ
ಗೊಟ್ಟಿ=ಗೋಷ್ಠಿ
ಆರವೆ=ಆರಾಮ, ಉದ್ಯಾನ
ಎಣ್ಬರಿಂದ=ಎಂಟು ಜನರಿಂದ
ತಳರ್ಚಲಾರದ = ತರಲು ಆಗದ
ಒಳರೆ=ಇರುವರೆ?
ತಾಂಗಿ=ಆಶ್ರಯ ನೀಡಿ
ಪದಿಂಬರ್= ಹತ್ತು ಜನ
ಬಸಿಱ್ ತೀವೆ= ಹೊಟ್ಟೆ ತುಂಬ
ತಿಣ್ಣ= ಹೆಚ್ಚಾಗಿ, ದಟ್ಟವಾಗಿ
ದಮ್ಮ=ದ್ರಮ್ಮ(Drachma)ಎಂಬ ನಾಣ್ಯ
ಸೀರೆ=ವಸ್ತ್ರ
ಕೊಂಡೀಯಿಂ=ಕೊಂಡುಕೊಂಡಿರಿ
ಪರ್ವ = ಹಬ್ಬ
ಮಾರಿಯಿರ್ಕೆ = ಮಾರೀದೇವತೆ ಇರಲಿ
ಪಣ=ಹಣ(ಪಣ=ಸಣ್ಣನಾಣ್ಯ)
ಕಱ=ಹುಳಿಗಂಜಿ
ಬಲಗೊಂಡು=ಪ್ರದಕ್ಷಿಣೆಗೈದು

ಪ್ರಕ್ಷಾಳಿಸಿ=ತೊಳೆದು
ದೇಸಿಗ=ಅಲೆಮಾರಿ
ಪೊನ್ನತಳಿಗೆ=ಚಿನ್ನದ ತಟ್ಟೆ
ಅಡ್ಡಣಿಗೆ=ತಟ್ಟೆಯನ್ನಿಡುವ ಮಣೆ
ರಾಜಾನ್ನ =ರಾಜ ಎಂಬ ಅಕ್ಕಿಯ ಅನ್ನ (ಉತ್ತಮ ಜಾತಿಯ ಅಕ್ಕಿ)
ಪೆಸಱ ತೊವೆ =ಹೆಸರು ಬೇಳೆ ಪಾಯಸ
ನಾರ್ಪ =ಸುವಾಸನೆ ಹೊಂದಿದ
ಬಾಡು=ಕಾಯಿಪಲ್ಯ
ತುಯ್ಯಲು= ಪಾಯಸ
ಪೂರಿಗೆ=ಪೂರಿ
ಇಡ್ಡಲಿಗೆ=ಇಡ್ಡಲಿ
ಸೋದಿಗೆ=ಗೋದಿ ರವೆಯಿಂದ ಮಾಡಿದ ಭಕ್ಷ್ಯ
ಲಾವಣಿಗೆ =ಉಪ್ಪಿನಕಾಯಿ,
ಘೃತಪೂರಂ=ತುಪ್ಪದಲ್ಲಿ ಕರಿದ ಪೂರಿ
ಲಡ್ಡುಗೆ =ಲಾಡು
ಮಂಡಗೆ= ಒಂದು ತರಹದ ಭಕ್ಷ್ಯ
ಆಕಂಠಪ್ರಮಾಣ= ಗಂಟಲಿನ ವರೆಗೆ
ನೆಲವತ್ತಿಯಡಕೆ =ನೆಲವತ್ತಿ ಎಂಬ ಪ್ರದೇಶದಲ್ಲಿ ಬೆಳೆದ ಅಡಿಕೆ, ನೆಲ್ಲವತ್ತಿಯ ಅಡಿಕೆ ಶ್ರೇಷ್ಠವಾಗಿದ್ದಿತೆಂದು ತೋರುತ್ತದೆ. ಕನ್ನಡ ಕವಿಗಳಾದ ಪೊನ್ನನು ತನ್ನ ಶಾಂತಿಪುರಾಣದಲ್ಲಿ ೧೦-೯೫ ಬಾಹುಬಲಿಯು ತನ್ನ ಧರ್ಮನಾಥ ಪುರಾಣದಲ್ಲಿ ೮-೬, ಶಾಸನಕವಿ ದಾಮರಾಜನು ತನ್ನ ಒಂದು ಶಾಸನದಲ್ಲಿ (೧೦೮೧, ಶಿವಮೊಗ್ಗ-೧೦) ನೆಲ್ಲವತ್ತಿ ಎಂಬ ಊರನ್ನು ಹೆಸರಿಸಿದ್ದಾರೆ. ಇದು ಅಂದಿನ ಒಂದು ಜೈನ ಕೇಂದ್ರವಾಗಿದ್ದಿಬಹುದೆ?

ಕಾಲಂ ಕರ್ಚಿ= ಕಾಲನ್ನು ತೊಳೆದು
ಪಾನಿಗಟ್ಟು=ಕಾಲು ತೊಳೆದು ಊಟಕ್ಕೆ ಹಾಕುವುದು
ಕಿತ್ತಯ್ಯ =ಚಿಕ್ಕಸ್ವಾಮಿ, ನೆರಪಿ
ನೆರಪಿಕೊಳ್ವಂ= ಸೇರಿಸಿಕೊಳ್ಳೋಣ
ಕಿಂಕುರ್ವಾಣಂಗೆಯ್ದಪ್ಪ = ಸೇವೆಯನ್ನು ಮಾಡುವನು
ತಱಿಸಂದು =ನಿಶ್ಚಯಿಸಿ
ಪೆಂಡವಾಸ=ಅಂತಃಪುರ
ವೇಸಱುಗಟ್ಟೆ =ಹೇಸರುಗತ್ತೆ
ಸಿಬಿಗೆ =ಪಲ್ಲಕ್ಕಿ
ಸೀಗುರಿ= ಒಂದು ಬಗೆಯ ಕೊಡೆ
ಎಕ್ಕ ಮದ್ದಳೆ= ಒಮ್ಮುಖದ ಮದ್ದಳೆ
ಪಱೆಗಳ್=ಚರ್ಮವಾದ್ಯಗಳು
ಬಾಗಿಲ್ಮಾಡ =ಪಟ್ಟಣದ ದ್ವಾರ, ಗೋಪುರ
ಕ್ರಿಯಾಪೂರ್ವಕ=ನಮಸ್ಕಾರಾದಿ ಕ್ರಿಯೆಗಳಿಂದ
ಎಟ್ಟಿರುವುದು=ಬರುವುದು
ಪರಿಚ್ಛೇದಿಸಿ=ಖಂಡಿಸಿ, ಶೋಧಿಸಿ
ಕರಣವೇಳೆ=ದಿನದ ೧೧ ಭಾಗಗಳಲ್ಲಿ ಒಂದು
ರಾಜಮಾತ್ರ್ಯೋವಾ=ಮಂತ್ರಿ/ (ಇದು ರಾಜಾಮಾತ್ಯೋ ವಾ' ಆಗಿರಬಹುದೆ ? ಎಂಧು ಡಿ.ಎಲ್.ಎನ್. ಊಹಿಸಿದ್ದಾರೆ)
ಕೀಱಿ= ಬಲಾತ್ಕರಿಸಿ
ಇನ್ನವು=ಇಂಥವು, ತಳರದೆ=ಅಲುಗಾಡದೆ
ಉಡುಗದೆ=ಸಂಕೋಚಪಡಿಸಿಕೊಳ್ಳದೆ
ಇಪ್ಪೊರ್ವತ್ತುಂ= ಎರಡೂ ಹೊತ್ತು,
ನೇಸರ್ಪಟ್ಟೊಡೆ=ಸೂರ್ಯಾಸ್ತವಾದೊಡನೆ
ಆಸನ್ನ ಕಾಲಂ = ಸಾವಿನ ಕಾಲ

ಜಾನಿಸು=ಧ್ಯಾನಿಸು
ಉರಗಾರ=ಉರಗಲೋಕ
ನೇತ್ರದ ಪಱಿವುಲ್ಲವಂಗಳ್=ನೇತ್ರವೆಂಬ ರೇಶ್ಮೆ ವಸ್ತ್ರವಿತಾನಗಳು
ಪಟುಪಟಹ=ತಮಟೆ, ನಗಾರಿ?
ತುಣವ= ಒಂದು ವಾದ್ಯ
ಭಂಭಾ= ಒಂದು ಬಗೆಯ ಭೇರಿ
ಝಲ್ಲರಿ= ವಲಯಾಕಾರದ ವಾದ್ಯ
ಮುಕುಂದ= ಒಂದು ತರದ ಮದ್ದಳೆ
ವಂಶ = ಕೊಳಲು, ವಿಮಾನ=ಶವ ಸಾಗಿಸುವ ಮಂಟಪ
ಪ್ರಭಾವನೆ= ಗೌರವ, ಕೀರ್ತಿ

ಗಾಹೆ :

ಅಚ್ಛರಮಜ್ಝಗಯಂ = ಅಪ್ಸರಸ್ತ್ರೀಯರ ನಡುವೆ ಇರುವ
ರಮಣಿಜ್ಜಂ= ಸುಂದರನಾದ
ಓದಣಮುಂಡಂ = ಅನ್ನಕ್ಕಾಗಿ ತಲೆಯನ್ನು ಬೋಳಿಸಿಕೊಂಡಿರುವವ
ಪೆಚ್ಚಹ = ನೋಡಿರಿ
ಜಂತಣ ಮಂತಣ ಕಾರಣ ಯೇಣ=ಅದೋ ಇದೋ ಯಾವುದೋ ಕಾರಣದಿಂದ, ಣರೇಣ=ಇತರ ಮನುಷ್ಯನಿಂದ
ಪಚ್ಚ ಇಯವ್ವಂ =ನಂಬಲ್ಪಡುವುದು
ಹೋ ಇ= ಆಗುತ್ತದೆ.
ಛಂದಛಂದದಿಂ = ಬೇರೆ ಬೇರೆ ಛಂದಸ್ಸುಗಳಿಂದ
ಇನಿವಿರಿದು = ಇಷ್ಟು ದೊಡ್ಡದು,
ಪಶ್ಚಾತ್ಕಾಲ = ಅನಂತರ
ಓಸರಿಗೆ = ಮನೆಯ ಮುಂಬಾಗಿಲ ಕೋಣೆ
ಅವ್ಯಕ್ತ ಕಿಱುಗೂಸು = ಅಸ್ಪಷ್ಟವಾಗಿ ಕಾಣುತ್ತಿರುವ ಚಿಕ್ಕ ಕೂಸು
ಬೋಳಹ ಬೋಳಹ= ಹೋಗು ಹೋಗು
ಪೊಲ್ಲ ಕನಸು= ಕೆಟ್ಟ ಕನಸು
ಕೋಡು= ಕೊಂಬೆ
ಮಗುಟ್ದುದುಮಂ=ಹಿಂದಿರುಗಿದುದನ್ನು
ಕಡುಗ್ಗಡಿಯುವಪ್ಪ=ಹೆಚ್ಚಿನ ವೇಗಶಾಲಿಗಳಾದ
ಪೋರಲ್= ಹೋರಾಡಲು
ಪೆಱಪಿಂಗಿ= ಹಿಂಜರಿದು, ಹೆದರಿ
ಮಿೞಂಬುಱುವು= ಮಿಂಚುಹುಳು
ಕಸಕುಪ್ಪೆ= ತಿಪ್ಪೆ, ಕಸದ ರಾಶಿ,
ಬೆಟ್ಗಿಟ್ತೆ=ಬಿಳಿಕತ್ತೆ
ರೌದ್ರಪಸವ= ಭಯಂಕರ ಬರಗಾಲ
ಪೊರ್ದಿದ = ಸೇರಿದ
ಇಂಬೆಳೆ= ರುಚಿಯಾದ ಬೆಳಸು
ಕೊಳ್ಳವು= ಸುರಿಯವು, ಆಗಲಾರವು
ಮಂಡಲ ವರ್ಷಂಗಳ್ = ಕೆಲವು ಪ್ರದೇಶಗಳಲ್ಲಿ ಬೀಳುವ ಮಳೆಗಳು
ಅಂಗಬಾಹ್ಯ= ಜೈನಾಗಮಗಳಿಗೆ ಹೊರತಾದ
ವಿದ್ಯಾಸ್ಥಾನ= ಉಪದೇಶ ಸ್ಥಾನ
ತನುಮಾತ್ರಮೆ =ಸ್ವಲ್ಪವೇ
ನಿಲ್ಕುಂ= ನಿಲ್ಲುತ್ತದೆ,
ಪಿನ್ನ= ಹಿಂದಿನ ಕಾಲ.

ಗಾಹೆ :

ಪುವ್ವೇಣ = ಪೂರ್ವ ದಿಕ್ಕಿನಲ್ಲಿ
ಅಂಗವಿಸಓ = ಅಂಗವೆಂಬ ದೇಶ
ದಕ್ಷಿಣದೋ =ದಕ್ಷಿಣ ದಿಕ್ಕಿನಲ್ಲಿ
ಜಾವದೂಣಾ=ದಾಣ ಎಂಬುದರ ವರೆಗೆ
ಉತ್ತರದೋ= ಉತ್ತರ ದಿಕ್ಕಿನಲ್ಲಿ,
ಕುಣಾಳ ವಿಸಯೋಯ= ಕುಣಾಳವೆಂಬ ದೇಶವು

ಪೊಲ್ಲಲಿಂಗಿಗಳ =ದುಷ್ಟ
ಪೆರ್ಚುರ್ಪ=ಹೆಚ್ಚಳ
ದ್ರವ್ಯಪತಿ=ಶ್ರೀಮಂತ
ನಿರ್ಗ್ರಂಥಲಿಂಗ= ಜೈನತ್ವ(ದಿಗಂಬರತ್ವ)
ಅನೃತ=ಸುಳ್ಳು
ಖಿಲ(ಳ)=ದುಷ್ಟ
ವಿದಗ್ಧತಾ=ಪಾಂಡಿತ್ಯ
ವೈರಾಬುದ್ಧಿಃ = ದ್ವೇಷಬುದ್ಧಿ
ಪಾಕ್ಪಾರುಷ್ಯ= ಒರಟು ಮಾತು
ವಿಪತ್ತಿಷು ಚ = ಆಪತ್ತಿನಲ್ಲಿಯೂ
ರಾಜವಿಭೂತಿ= ರಾಜವೈಭವ
ಸಂಪ್ರತಿವರ್ತತೇ ಕಾಲೇ= ವರ್ತಮಾನಕಾಲ
ಸತ್ಯಾನರಾ= ಸತ್ಯವಂತರು.
ದುರ್ಲಭ= ವಿರಳ, ಕಷ್ಟಸಾಧ್ಯ
ಮುಷಂತಿ =ಅಪಹರಿಸುವರು
ಆರ್ಯೋಜನಃ =ಆರ್ಯಜನರು
ಕ್ಷೀಯತೇ=ಕ್ಷಯಿಸುವರು
ದೇವಾಶ್ಚ =ದೇವತೆಗಳು ಕೂಡ
ಪ್ರಲಯಂಗತಾಃ = ಪ್ರಳಯವಾಗಿ ಹೋದರು
ಪಾರ್ಥಿವಾಃ = ರಾಜರು
ಕರಭವತ್=ಒಂಟೆಯಂತೆ
ಲೌಲ್ಯಗತಾಃ =ದುರಾಶಾಗ್ರಸ್ತರಾದರು
ಪಿತರಃ=ತಂದೆ ತಾಯಂದಿರು
ಪುತ್ರಸ್ಯಾಪಿ=ಮಗನಾದರೂ
ನ ವಿಶ್ವಸಂತಿ= ನಂಬುವುದಿಲ್ಲ
ಕಷ್ಟಂ ಯುಗಂ = ಕಷ್ಟಕಾಲ
ವರ್ತತೇ= ನಡೆಯುತ್ತಿದೆ.
ವೃತ್ತ :
ನಿರ್ವೀರ್ಯಾ=ಸತ್ವಹೀನವಾಗಿದೆ
ಔಷಧಿರಸಾಃ = ಸಸ್ಯಗಳ ರಸಗಳು
ಗತಾಃ =ನಷ್ಟವಾಗಿವೆ
ಅರ್ಥಪರಾಃ= ಧನದಾಸೆಯುಳ್ಳವರು
ವಿಕರ್ಮಸ್ಥಿತಾಃ= ಅನ್ಯಾಯದ ಕೆಲಸದಲ್ಲಿ ತೊಡಗಿರುವರು
ಭಾರ್ಯಾ= ಹೆಂಡತಿಯರು
ಭರ್ತರಿ= ಗಂಡನಲ್ಲಿ,
ನೈವ ಬದ್ಧ ಹೃದಯಾ= ಅನುರಕ್ತರಾಗಿಲ್ಲ
ಪಿತೃದ್ವೇಷಿಣಃ = ತಂದೆಯಲ್ಲಿ ದ್ವೇಷವುಳ್ಳವರು
ಇತ್ಯೇವಂ = ಹೀಗೆಯೇ
ಸಮುಪಸ್ಥಿತೇ ಕಲಿಯುಗೇ= ಪ್ರಸ್ತುತ ಕಲಿಯುಗ
ವನಂ ಪ್ರಸ್ಥಿತಾ = ಕಾಡಿಗೆ ಹೋದವರು.
ಕಟ್ವಪ್ಪು=ಶ್ರವಣಬೆಳಗೊಳದ ಹಳೆಯ ಹೆಸರು
ದ್ರವಿಳ =ದ್ರಾವಿಡ
ಏಕಸಟಿಯ=ಒಂದು ಬಂಡೆಯ
ನೋಂತಿರ್ಪೆವು=ವ್ರತಧಾರಿಗಳಾಗಿದ್ದೇವೆ
ಕಾಂತಾರ=ಅಡವಿ
ಬಟ್ಟೆವೋಪರ್= ದಾರಿಹೋಕರು
ಪಿಂಡುಗಂಕಣ = ಬಳೆಗಳ ಗುಚ್ಛ
ಸಟ್ಟುಗ=ಸೌಟು
ಬೋನ= ಅನ್ನ,
[illegible] = ವೇಷಭೂಷಣಗಳಿಂದ ಅಲಂಕೃತವಾಗಿ
ಮಂಗಳವಸದನ= ಮಂಗಲ ಅಲಂಕಾರ
ನೆಱಿರ್= ಬೇರೆಯವರು
ಒಳ್ಳಿಕೆಯ್ದಿರ್= ಒಳ್ಳೆಯದನ್ನು ಮಾಡಿದಿರಿ
ಧವಳಾಗಾರ= ಬಿಳಿ ಬಣ್ಣದ ಮನೆಗಳು
ನೆಲೆಯ ಮಾಡ=ಉಪ್ಪರಿಗೆಯ ಮನೆ
ಆವಾಸ=ನಿವಾಸ

ಇನಿಸಾನುಂ ತಿಣ್ಣಂ = ಸ್ವಲ್ಪ ತೀವ್ರವಾಗಿ, ಅವವ್ರೋದರ್ಯ ಚರಿಗೆ = ಹೊಟ್ಟೆ ತುಂಬುವುದಕ್ಕೆ ಬೇಕಾದ ೩೨ ತುತ್ತುಗಳಲ್ಲಿ ದಿನಕ್ಕೆ ಒಂದರಂತೆ ಕಡಿಮೆ ಮಾಡುವ ವ್ರತ

ತಿಮುಳನಾಣ್=ತಿಗುಳರ(ತಮಿಳರ) ನಾಡು

ತಿಳಿದುದು=ಕಡಿಮೆಯಾಯಿತು

ಬರ್ದೊರ್=ಬಾಳಿದರು

ತಲೆನವಿರ್=ತಲೆಗೂದಲು

ಕೆಂದು = ಮಲಗಿ,

ಇಂಬುಕೆಯ್ವಂ= ಆಶ್ರಯ ಕೊಡೋಣ

ಬ್ರಹ್ಮಯ್ಯಾ= ಬ್ರಹ್ಮಚಾರಿಯೇ

ಗುಂಡಿಗೆ=ಕಮಂಡಲು

ಎಟಿಲ್ವ=ನೇತು ಬಿದ್ದಿರುವ

ಏವಂಗೊಳ್ಳದೆ = ಅಸಮಾಧಾನ ಪಡದೆ

ಲೋಚುಗೆಯ್ದು=ಕೂದಲುಗಳನ್ನು ಕಿತ್ತು

ಲವಟುಗಳ= > ಇದರಲ್ಲಿ ಪಾಠದ ಸಮಸ್ಯೆ ಇದೆ. ಬೃಹತ್ಕಥಾಕೋಶದ ಈ ಸಂದರ್ಭದಲ್ಲಿ 'ವೈದೇಶಿಕಜನ್ಯೈ:"'- ಅನ್ಯದೇಶೀಯ ಎಂಬರ್ಥದ ಬಳಕೆಯಿದೆ. ಲವಟು ಎಂದರೆ ಆ ಅರ್ಥವಿರಬಹುದು ಎಂದು ಡಿ.ಎಲ್.ಎನ್. ಅಭಿಪ್ರಾಯ ಪಟ್ಟಿದ್ದಾರೆ.

ಪೆಱಲಾಗ= ಪಡೆಯಲಾಗದು

ಅಟ್ಟು= ಅಡಿಗೆ ಮಾಡಿ

ಮಡಗಿಟ್ಟು= ಜೋಪಾನವಾಗಿಟ್ಟು

ಕರ್ದಿರ್ಂಗಳು= ಅಮವಾಸ್ಯೆಯ ರಾತ್ರಿ

ಬಸಿಱಿಟಿದತ್ತು=ಗರ್ಭಪಾತವಾಯಿತು

ಅರ್ಧಗಪ್ಪಡ= ಅರ್ಧಬಟ್ಟೆ

ಮುಯ್ಪಿನ ಮೇಗೆ = ಹೆಗಲ ಮೇಲೆ

ಕೊಳಲ್= ಸ್ವೀಕರಿಸಲು

ಪಟಿಯಿಂ= ವಸ್ತ್ರವನ್ನು

ಸೈತುಟ್ಟುಕೊಂಡು = ಸರಿಯಾಗಿ ಉಟ್ಟುಕೊಂಡು

ಕಚ್ಚೆಗಟ್ಟದೆ= ಕಚ್ಚೆಯನ್ನು ಕಟ್ಟದೆ

ಕಿಱುವಡವಂ = ಚಿಕ್ಕವಸ್ತ್ರವನ್ನು, ಕಂಬಳ ತೀರ್ಥ=ಕಂಬಳಿ ಹೊದೆಯುವವರ ಪರಂಪರೆ

ಶ್ವೇತಪಟರ್=ಶ್ವೇತಾಂಬರರು

ಅವರಯೆ= ಅವರದೇ

ಜಾಪುಲಿ ಸಂಘ= ಜಾಪುಲಿ ಎಂಬ ನಗರದ ಜೈನ ಸಂಘ

ದಂಸ ಮಸಕಾದಿ = ಸೊಳ್ಳೆ ಗುಂಗಾಡು ಇತ್ಯಾದಿ.

೭. ಲಲಿತ ಘಟೆಯ ಕಥೆ

ಪೂರ=ಪ್ರವಾಹ, ಮಹಾಪೂರ

ಓರನ್ನರಪ್ಪರ್= ಒಂದೇ ತೆರನಾದವರು

ಮಿಥ್ಯಾದೃಷ್ಟಿಗಳ್= ಜೈನಧರ್ಮದಲ್ಲಿ ನಂಬಿಕೆ ಇರದವರು

ಸಮನಿಸದೆ = ದೊರೆಯದೆ

ಆಯತಿ = ಮನದ ನಿರೋಧ

ತೊಟ್ಟನೆ = ಬೇಗನೆ

ಸರ್ವಾಂಗಮಲಧಾರಿಗಳು= ದೇಹದ ಎಲ್ಲೆಡೆ ಮಲವನ್ನು ಧರಿಸಿದವರು

ಸ್ವಾಧ್ಯಾಯ=ಧರ್ಮಗ್ರಂಥವನ್ನು ಓದುವುದು

ತಿರುವಾಯೊಳ್= ಹೆದೆಯ ಬಾಯಲ್ಲಿ

ಉಪಶಮನ= ಸಮಾಧಾನ

ಯಮ=ಇಂದ್ರಿಯಾದಿಗಳ ನಿಗ್ರಹ

ನಿಯಮ=ಸಾಮಾನ್ಯ ನೇಮಗಳು
ಧ್ಯಾನ= ಚಿಂತನೆ
ಅನುಷ್ಠಾನ=ಆಚರಣೆ.

ಗಾಹೆ :

ಪಾವೇಣ = ಪಾಪದಿಂದ
ಣೆರಯತಿರಿಯಂ =ನರಕಜೀವಿಗಳು ಮತ್ತು ಕ್ಷುದ್ರ ಕ್ರಿಮಿಕೀಟಗಳು
ಗಮ್ಮ ಇ= ಪಡೆಯುತ್ತಾನೆ
ಧಮ್ಮೇಣ -ಧರ್ಮದಿಂದ
ದೇವಲೋಗಂತು = ದೇವಲೋಕವನ್ನು
ಮಿಸ್ಸೇಣ=ಪಾಪಪುಣ್ಯಗಳ ಮಿಶ್ರಣದಿಂದ
ಮಾಣುಸತ್ತಂ =ಮನುಷ್ಯತ್ವವನ್ನು
ಡೊಣ್ಣಂಪಿ=ಮತ್ತು ಆವೆರಡರ
ಖಯೇಣ=ಕ್ಷಯದಿಂದ
ಣಿವ್ವಾಣ=ನಿರ್ವಾಣ ಮೋಕ್ಷ
ಗಮ್ಯತಿ=ಪಡೆಯುತ್ತಾನೆ
ಪೊಲ್ಲಮೆ=ಕೆಟ್ಟ ಕೆಲಸ
ಛೇದನ=ಕತ್ತರಿಸುವಿಕೆ
ಭೇದನ=ಸೀಳುವಿಕೆ
ಪೂರಣ=ತುಂಬುವಿಕೆ
ಚೂರಣ= ಪುಡಿ ಮಾಡುವುದು
ಪೀಡನ=ಹಿಂಸಿಸುವುದು
ಬಂಧನ= ಕಟ್ಟಿ ಹಾಕುವುದು
ಮುಟ್ಟಿಗೆಯೊಳಿಟ್ಟು=ಕೊಡತಿಗಳಿಂದ ಹೊಡೆದು
ತೆಗಪುವುದು= ಚಿಮ್ಮುಟಿಗೆಯಿಂದ ಮೀಟುವುದು
ಕೊಂತ= ಒನಕೆ
ಇಟ್ಟಿ=ಈಟಿ
ಸೋರೆ=ಹೊರಕ್ಕೆ ಜಾರಿ ಬರುವಂತೆ
ಕುತ್ತುವುದು=ಚುಚ್ಚುವುದು
ಇಡುವುದು= ಬೀಸಿ ಹೊಡೆಯುವದು
ಉಸಿರ್ಪ್ಪತ್ತಿಲ್ಲದೆ =ಮೂರ್ಛಿತನಾಗಿ
ಒಯ್ಯನೆ= ಮೆಲ್ಲಗೆ
ಸೀನ್ರಾಯುಂ= ಕಾಡುನಾಯಿ ಹಾಗೂ ನೀರು ನಾಯಿ
ಒಟ್ಟೆ=ಒಂಟೆ
ಉಡು= ಉಡ
ಒಂತಿ=ಓತೀಕೇತ
ಮುಂಗುರಿ=ಮುಂಗುಸಿ
ನೆಗಟು= ಮೊಸಳೆ
ತಿಮಿ= ದೊಡ್ಡ ಮೀನು
ತಿಮಿಂಗಳ = ತಿಮಿಯನ್ನು ನುಂಗುವ ಪ್ರಾಣಿ
ಕುರ್ಕು= ಒಂದು ಬಗೆಯ ನೀರಹಕ್ಕಿ
ಪುರುಳಿ= ಹೆಣ್ಣು ಗಿಳಿ, ಸಾರಿಕೆ
ಪೆಂಗುರು = ದೊಡ್ಡ ಬಕಪಕ್ಷಿ
ಕಾರಂಡ= ಒಂದು ಬಗೆಯ ನೀರುಕೋಳಿ
ಆಂದೆ = ಗೂಬೆ.
ಗ್ರೈವೇಯಕ=ಕಲ್ಪಗಳ ಮೇಲಿರುವ ೯ ಪ್ರದೇಶಗಳು
ನವಾನುದ್ದಿಸೆಗಳ್=೯ ಅನುದ್ದಿಸೆಗಳು ಇವು ಗ್ರೈವೇಯಕಗಳ ಮೇಲಿರುವ ಸ್ವರ್ಗಗಳು
ಪಂಚಾಣುತ್ತರೆ = ೫ ಅಣುತ್ತರೆಗಳು
ಪಾಸಿನ ಪೊರೆಯೊಳ್=ಹಾಸಿಗೆಯ ಹತ್ತಿರ
ಒಡೆತಪ್ಪುದು =ಉಳ್ಳುದನ್ನು
ವಾರಿಸಿದರು=ತಡೆದರು, ನಿವಾರಿಸಿದರು
ಸಾಭಿಜ್ಞಾನ=ಸಾಕ್ಷಿ, ಪ್ರಮಾಣ
ತೊಂಟೆ ತೀವುಗುಂ =ನದಿಯು ತುಂಬುತ್ತದೆ
ಸ್ವರ್ಣಪಾಷಾಣ=ಚಿನ್ನದ ಅದಿರು
ತಾಪನ =ಕಾಯಿಸುವುದು
ಪಿಂಡಿಬದ್ಧನ =ಮುದ್ದೆ ಕಟ್ಟುವುದು.

ಶ್ಲೋಕ :
ಸ್ಥಿತಸ್ಯವಾ=ನಿಂತುಕೊಂಡಿರುವವನದಾಗಲಿ
ನಿಷಣ್ಣಸ್ಯವಾ=
ಕುಳಿತುಕೊಂಡಿರುವವನದಾಗಲಿ
ಪುನಃ ಸುಪ್ತಸ್ಯ=ಮತ್ತೆ ಮಲಗಿದವನದಾಗಲಿ
ಯಾವತ್=ಯಾವಾಗ
ಸರ್ವಾಭೀಷ್ಟ= ಎಲ್ಲ ಅಪೇಕ್ಷೆಗಳನ್ನು
ವಖ್ಯಾಣಿಸಿ=ವ್ಯಾಖ್ಯಾನಿಸಿ
ಏಕಪಾರ್ಶ್ವ=ಒಂದು ಮಗ್ಗಲು
ಮಗುಟದೆ= ಹೊರಳಾಡದೆ
ಏಕಹಸ್ತಪ್ರಮಾಣ=ಒಂದು ಮೊಳದ
ಅಳತೆಯ.

೮. ಧರ್ಮಘೋಷ ಭಟಾರರ ಕಥೆ

ವೃತ್ತ:
ಧರ್ಮಪ್ರವರಃ ಕಃ=ಧರ್ಮದಲ್ಲಿ
ಶ್ರೇಷ್ಠರಾದವರು ಯಾರು ?
ದಯಾತ್ಮಸುಭಗಃ = ದಯೆಯಿಂದ ಕೂಡಿದ
ಆತ್ಮಸೌಭಾಗ್ಯವುಳ್ಳವನು
ಕಃ ನರಃ= ಯಾವ ಮನುಷ್ಯನು
ಪಂಡಿತಂ ಸ್ಯಾತ್ = ಪಂಡಿತನಾಗಿದ್ದಾನೆ
ವಶಗಾ=ವಶವಾಗಿರುವವಳು
ಕಾಯೋಷಿತ್=ಹೆಂಗಸು ಯಾರು
ಕಲಿಷ್ಯಯತಿ=?
ಅಲಕ್ಷ್ಮೀ=ಲಕ್ಷ್ಮಿಯಲ್ಲದವಳು
ಕಾ=ಯಾರು
ಕಿಂ =ಯಾವುದು
ಕಾವಾಗತಿಃ = ಗುರಿ ಯಾವುದು
ನಿರ್ವೃತಿಃ =ಮೋಕ್ಷವು.
ಸಮ್ಯಕ್ತ್ವೋತ್ತಮ ಹಸ್ತಿಮಸ್ತಕ ಗತಃ
=ಸಮ್ಯಕ್ತ್ವವೆಂಬ ಆನೆಯ ತಲೆಯ ಮೇಲೆ
ಕುಳಿತಿರುವ
ಸುಜ್ಞಾನಕೇತು
ವ್ರಜೋ =ಒಳ್ಳೆಯ ಜ್ಞಾನವೆಂಬ ಧ್ವಜಗಳ
ಸಮೂಹ ಹೊಂದಿದವ, ನಾನಾ ಶೀಲಗುಣ
ವ್ರತೋರು ಪೃತನಃ = ನಾನಾ ಬಗೆಯ
ಶೀಲಗಳೆಂಬ ವ್ರತಗಳೆಂಬ ಶ್ರೇಷ್ಠವಾದ
ಸೈನ್ಯ ಹೊಂದಿದವ
ಸ್ವಾಧ್ಯಾಯ ಶಂಖಧ್ವನಿ =
ಶಾಸ್ತ್ರಾಭ್ಯಾಸವೆಂಬ ಶಂಖದ ಧ್ವನಿಯುಳ್ಳ ,
ಭಾಸ್ವತ್ ಸಂವರ ಭೂರಿಚಾರುಕವಚೋ
= ಪ್ರಕಾಶಮಾನವಾದ ಸಂವರಮೆಂಬ
ಅತಿಶಯ ಸುಂದರವಾದ ಕವಚ
ಹೊಂದಿದವನು
ನಾತೀವ ತೀಕ್ಷ್ಣಾಯುಧಃ =ಅತಿ ತೀಕ್ಷ್ಣವಾದ
ಆಯುಧಗಳಿಲ್ಲದವನು
ಸ್ವಮೋಕ್ಷ ವತ್ತಿಪದಃ = ಸ್ವರ್ಗ ಮತ್ತು
ಮೋಕ್ಷದ ಸ್ಥಿತಿಯನ್ನು ಕೊಡುವವನಾದ
ಧರ್ಮ ಮಹಾನೃಪಃ = ಧರ್ಮವೆಂಬ
ಮಹಾರಾಜ
ಬುಧಭಟ್ಯೈಃ = ವಿದ್ವಾಂಸರೆಂಬ
ಸೈನಿಕರಿಂದ, ಸೇವ್ಯೋ= ಸೇವಿಸಲ್ಪಟ್ಟವನು.
ಶ್ಲೋಕ :
ಧರ್ಮಾರ್ಥಕಾಮಮೋಕ್ಷಾಣಾಂ =ಧರ್ಮ,
ಅರ್ಥ, ಕಾಮ, ಮೋಕ್ಷಗಳಲ್ಲಿ
ಏಕಃ ಅಪಿ = ಒಂದಾದರೂ

ಯಸ್ಯ =ಯಾರಿಗೆ
ನ ವಿದ್ಯತೇ =ಇಲ್ಲವೋ
ತಸ್ಯ ಜನ್ಮ = ಅವನ ಜನ್ಮವು
ಅಜಾಗಲಸ್ತನಸ್ಯ ಇವ = ಮೇಕೆಯ ಕೊರಳ ಕೆಳಗಿರುವ ಮೊಲೆಗಳಂತೆ
ನಿರರ್ಥಕ = ಪ್ರಯೋಜನವಿಲ್ಲದ್ದು.

ವೃತ್ತ :
ಯೇಷಾಂ = ಯಾರಿಗೆ
ನ ವಿದ್ಯಾ = ವಿದ್ಯೆ ಇಲ್ಲವೋ
ನ ತಪೋ = ತಪಸ್ಸಿಲ್ಲವೋ
ನ ದಾನಂ =ದಾನಗುಣವಿಲ್ಲವೋ
ನಾ ಪಿ ಏವ ಶೀಲಂ =ಶೀಲ ಕೂಡ ಇಲ್ಲವೋ
ನ ಗುಣೋ = ಗುಣವಿಲ್ಲವೋ
ನ ಧರ್ಮಃ = ಧರ್ಮವಿಲ್ಲವೋ
ತೇ = ಅವರು
ಮರ್ತ್ಯಲೋಕೇ ಭುವಿ = ಮೃತ್ಯುವನ್ನು ಹೊಂದುವ ಲೋಕದಲ್ಲಿ
ಭಾರಭೂತಾಃ = ಭಾರವಾದವರು
ಮನುಷ್ಯರೂಪೇಣ = ಮನುಷ್ಯಾಕಾರದಿಂದ
ಮೃಗಾಃ = ಪ್ರಾಣಿಗಳಾಗಿರುವವರು
ಚರಂತಿ = ನಡೆಯುತ್ತಾರೆ.

ಶ್ಲೋಕ :
ಪರಸ್ಪರ ಭಕ್ಷಯಿತ್ವಾ = ಒಂದನ್ನೊಂದು ತಿನ್ನುತ್ತ
ಕ್ರಿಮಯಃ =ಕ್ರಿಮಿಗಳು
ಕಿಂ ನ ಜೀವಂತಿ = ಬದುಕುತ್ತಿಲ್ಲವೇನು
ಪರಲೋಕಾವಿರುದ್ಧೇನ = ಪರಲೋಕಕ್ಕೆ ವಿರುದ್ಧವಲ್ಲದ ರೀತಿಯಿಂದ
ಯಃ = ಯಾರು
ಜೀವತಿ = ಜೀವಿಸುತ್ತಾನೋ
ಸಃ = ಅವನು, ಯೇನ = ಯಾವುದರಿಂದ
ಅಪ್ರತ್ಯಯೋ = ಅವಿಶ್ವಾಸವು
ಭವೇತ್ =ಉಂಟಾಗುವುದೋ
ಏನ= ಯಾವುದರಿಂದ
ಅಪವಾದಃ = ನಿಂದೆಯು
ಭವೇತ್ = ಉಂಟಾಗುವುದೋ
ಯೇನಚ = ಯಾವುದರಿಂದ
ನರಕಃ = ನರಕವು
ಗಮ್ಯತೇ = ಪ್ರವೇಶಿಸಲ್ಪಡುವುದೋ
ತತ್ಕರ್ಮ = ಆ ಕಾರ್ಯವನ್ನು
ನ ಸಮಾಚರೇತ್ = ಆಚರಿಸಬಾರದು
ಶಾಸ್ತ್ರಪಾರಗ = ಪಂಡಿತ
ಸಾರ್ತರ್ಕುಂ= ಹತ್ತಿರ ಬರುತ್ತದೆ
ತುಱುಪಟ್ಟಿ = ದನಗಳ ಹಟ್ಟಿ
ಕರಗ= ಕಲಶ
ತಣ್ಣಿದವು= ತಂಪಾದವು
ಪ್ರಾಸುಕಮಪ್ಪ = ಶುದ್ಧವಾದ
ಪೊಟ್ಟಿದೊಳ್ = ಚಿನ್ನದ ಪಾತ್ರೆಯಲ್ಲಿ
ಕಮ್ಮಿದುವುಂ=ಸುಗಂಧಯುಕ್ತವಾದ
ಪ್ರಾತಿಹಾರ್ಯ =ದೇವತಾಪೂಜೆ
ದೇವನಿಕಾಯ =ದೇವತಾ ಸಮೂಹ
ಪ್ರತಿಬೋಧಿಸಲ್ = ಎಚ್ಚರಿಸಲು
ಸಮಾಧಿ ಸಂಧಾನೋಪಾಯ= ಏಕಾಗ್ರತೆ ಸಾಧಿಸುವ ಉಪಾಯ
ಉನ್ಮಾರ್ಗ = ದುರ್ಮಾರ್ಗ
ಮನಮನುಡುಗಿ = ಮನಸ್ಸನ್ನು ತೆಗೆದು.

ಗಾಹೆ ;
ಹಾ=ಅಯ್ಯೋ
ದುಟ್ಠುಕಯುಂ = ದುಷ್ಟಕಾರ್ಯವು ಮಾಡಿಸಲ್ಪಟ್ಟಿತು
ಅಣುಮೋದಿಯಂ = ನನ್ನಿಂದ

ಒಪ್ಪಲ್ಪಟ್ಟಿತು
ಜೀವೋ=ಜೀವನು
ಅಂತೋ ಅಂತೋ = ಒಳಗೊಳಗೇ
ವೇವಂತೋ = ನಡುಗುತ್ತ
ಪಚ್ಚತ್ತಾವೇಣ =ಪಶ್ಚಾತ್ತಾಪದಿಂದ
ದಜ್ಝ ಇ = ಸುಡುತ್ತಾನೆ.

೯. ಸಿರಿದಣ್ಣನೆಂಬ ಭಟ್ಟಾರರ ಕಥೆ

ಅಯ್ಕಿಲಿಂದ= ಹಿಮದಿಂದ
ತಳಿಯೆಪಟ್ಟೊನಾಗಿ =
ಚುಮುಕಿಸಲ್ಪಟ್ಟವನಾಗಿ
ಅಧಿಗಮ ಸಮ್ಯಗ್ದೃಷ್ಟಿ ಶ್ರಾವಕಂ = ಸಮ್ಯಕ್
ದೃಷ್ಟಿ ಹೊಂದಿದ ಶ್ರಾವಕ
ಗುಜ್ಜಿ= ಕುಳ್ಳಿ
ವಿರಳದಂತೆ = ವಿರಳವಾದ ಹಲ್ಲುಳ್ಳವಳು
(ಇದು 'ವಿಕಳದಂತೆ' ಆಗಿರಬಹುದೆ?)
ಬಡಪಟ್ಟಿರ್ದಿರ್= ದುರ್ಬಲರಾಗಿದ್ದೀರಿ
ತಂಬೆಲರ್= ತಂಗಾಳಿ
ನಿಧಾನಂಗೆಯ್ದು = ನಿಶ್ಚಯಿಸಿ
ಶ್ರೀ ವಿಹಾರ= ದೇವಾಲಯ
ಅಪುತ್ರಿಕೆ = ಮಕ್ಕಳಿಲ್ಲದವಳು
ನಿಚ್ಚಲು= ಪ್ರತಿನಿತ್ಯ
ಕತಿಪಯ = ಕೆಲವು
ಬರೆ = ಗೀರು, ಗುರುತು
ತೆಗೆದುದಂ = ಅಳಿಸಿ ಹಾಕಿದುದನ್ನು
ಪಲಗೆಯೊಳ್ ರೇಖೆಗೊಂಡು= ಚಿತ್ರದ
ಹಲಗೆಯ ಮೇಲೆ ರೇಖಾಚಿತ್ರವನ್ನು ಬರೆದು
ಪ್ರತಿಮಾಯೋಗ =ಪ್ರತಿಮೆಯಂತೆ
ನಿಶ್ಚಲವಾಗಿ ನಿಂತು ತಪಸ್ಸು ಮಾಡುವುದು.
ಶ್ಲೋಕ :
ಅಹಂ = ನಾನು
ಅಚ್ಛೇದ್ಯಃ = ಕತ್ತರಿಸಲಾಗದವನು
ಅನಂತಸೌಖ್ಯ = ಅನಂತಸುಖವುಳ್ಳವನು
ವೇತ್ತಾ = ಜ್ಞಾನಿ
ಅಪೂರ್ವ = ಅನಾದಿಯಾದವನು
ನಿರಂಜನ = ಕರ್ಮಲೇಪವಿಲ್ಲದವನು
ಸರ್ವದುಃಖಾಕರಂ = ಸಮಸ್ತ ದುಃಖಗಳಿಗೆ
ತಾಣವಾದ
ತ್ಯಜಾಮಿ = ತ್ಯಜಿಸುತ್ತೇನೆ
ಏತತ್ = ಇದು
ಪರಿಸ್ಫುಟಂ = ಅತಿ ಸ್ಪಷ್ಟ
ಸಮತ್ವೀಭಾವನೆ= ಸುಖದುಃಖಗಳು
ಸಮಾನವೆಂಬ ಭಾವನೆಯನ್ನು
ದೇವೋಪಸರ್ಗ= ದೇವತೆಗಳಿಂದ ಆಗುವ
ತೊಂದರೆ.

೧೦. ವೃಷಭಸೇನ ಭಟ್ಟಾರರ ಕಥೆ

ಮದವಿಹ್ವಳಿತ = ಸೊಕ್ಕಿನಿಂದ ತುಂಬಿದ
ಮೆಯ್ಯಱಿಯದೆ= ಪ್ರಜ್ಞೆಯಿಲ್ಲದೆ
ದಿಶಾಪಟ್ಟಂಗೊಂಡು= ದಿಕ್ಕುದಿಕ್ಕಿಗೂ
ನಾಶಪಡಿಸಿ
ನೇಲ್ದಿರ್ದೊಡೆ= ನೇತುಬಿದ್ದಿದ್ದರೆ
ಕೆಯ್ = ಹೊಲ, ಗದ್ದೆ

ಎಡೆಯಾ = ಹಾಕಲಾರೆಯಾ, ಹೊಯ್ಯಲಾರೆಯಾ

ಕರಗದ ದಾರೆ= ಕೊಡದ ನೀರ ಧಾರೆ

ಉಗಿದುಕೋ = ಎಳೆದುಕೋ, ಉಡುಗಿಸಿಕೋ

ತಂತ್ರ= ಸೈನ್ಯ

ಪ್ರತಿಪತ್ತಿ= ಸತ್ಕಾರ

ಗಣೆಯಾನೆ= ಆನೆಗಳ ಸಮೂಹ,

ಬಾವಿ= ಬಾರಿ =ಖೆಡ್ಡಾ,

ಕಳಕಳ = ಗದ್ದಲ, ಕೋಲಾಹಲ,

ತುರಿಪದಿಂ = ಬೇಗನೆ

ಕಿನಿಸಿ = ಸಿಟ್ಟಾಗಿ

ಪುರುಷವ್ರತ = ಬ್ರಹ್ಮಚರ್ಯ

ಬೆಳ್ಕಾಡು= ನಿರ್ಜನ ಕಾಡು, ಘೋರಾರಣ್ಯ (ಬೆಳ್=ಭೂತ-ಭೂತಗಳಿರುವ ಪ್ರದೇಶ)

ಮಸಣ = ಸ್ಮಶಾನ

ಪೊಟ್ಟಿಱಿನ = ಹೊತ್ತಾರೆಯ

ಓಲಗ= ಆಸ್ಥಾನ

ವೆಸಲೆ= ಬಾಣಂತಿ ಕೂಸನ್ನು ಹಡೆದವಳು

ಬಾಲವದ್ದೆ = ಮಂಗಳಕರ ಬಾಲಕ?

ಸುರಧನು = ಕಾಮನ ಬಿಲ್ಲು

ಬಗೆವೊಡೆ = ವಿಚಾರಿಸಲಾಗಿ

ಎನಿಸುಂ = ಎಷ್ಟೂ.

ಶ್ಲೋಕ :

ದೀಪನೀಯೋ = ಸುಡುತ್ತಿರುವ

ವನೋಪಮಃ = ಕಾಡಿಗೆ ಸಮಾನವಾಗಿರುವ

ಭೋಗಃ = ಸುಖಪಡುವುದು,

ತೃಷ್ಣಾಗ್ನಿ ಸಂವೃದ್ಧ್ಯೈ= ಆಶೆಯೆಂಬ ಅಗ್ನಿಯನ್ನು ಬೆಳೆಸುವುದಕ್ಕಾಗಿ

ಸ್ತ್ರೀ ವೃದ್ಧ ತೃಷ್ಣಾಗ್ನಿ ಶಾಂತ್ಯೈ = ಹೆಣ್ಣು ಕಾರಣವಾಗಿ ಬೆಳೆಯುವ ಭೋಗದಾಸೆಯೆಂಬ ಅಗ್ನಿಯ ಪರಿಹಾರಾರ್ಥವಾಗಿ

ಏಭಿಃ = ಇವುಗಳಿಂದ

ಇಹಾಪರಂ = ಇಹಪರಗಳು

ಚಿಂತ್ಯಂ = ಆಲೋಚಿಸಬೇಕಾದವು

ಗಾಹೆ :

ಮುತ್ತಿಪಹಂ =ಮುಕ್ತಿಪಥದಲ್ಲಿ

ಸಣ್ಣಂವಾ ಬಂದರಂತಂ = ಚಿಕ್ಕದಾಗಲಿ ದೊಡ್ಡದಾಗಲಿ ಎಲ್ಲ ಸಂಬಂಧಗಳನ್ನು ತೊರೆದು

ಅಮಿಸಾಮಂ = ಅವಿಶ್ರಾಂತವಾಗಿ

ಭೋಗಸುಹಲೋಹವಿರದೋ = ಭೋಗಸುಖ ಲೋಭದಲ್ಲಿ ಅನಾಸಕ್ತನಾಗಿ

ಮೋಕ್ಖೇ = ಮೋಕ್ಷದಲ್ಲಿ

ಮತಿಂ ಕುಜ್ಜಾ = ಮನಸ್ಸು ಮಾಡುವುದು.

ಆರ್ಯೆ :

ಮನಸಃ = ಮನಸ್ಸಿಗೆ

ಸಂತುಷ್ಟಿಕಾರಕಾ = ಸಂತೋಷವನ್ನುಂಟು ಮಾಡುವ

ವಿಷಯಾಃ = ವಸ್ತುಗಳು,

ನಿಷೇವ್ಯಮಾಣಾಯದ್ಯಪಿ = ಸೇವಿಸಲ್ಪಡುವುದಾದರೂ

ಪಶ್ಚಾತ್ = ತರುವಾಯ

ಕಿಂಪಾಕಫಲಾಶನವತ್ = ಕಿಂಪಾಕ ಫಲವನ್ನು ತಿಂದಂತೆ

ಅತಿ ದುರಂತಾಃ = ಅತಿ ಕೆಟ್ಟದ್ದು

ಭವಂತಿ = ಆಗುತ್ತವೆ

ಓರನ್ನವು = ಸಮಾನವಾದವು

ಅದರಂಥವು, ಅಗಲ್ದ = ಅಗಲಿದ

ಆತಪಸ್ಥಿತಯೋಗ = ಬಿಸಿಲಲ್ಲಿ ನಿಂತು ಮಾಡುವ ತಪಸ್ಸು

ಕಲ್ನಿಲೆ ನಿಂದು = ಕಲ್ಲಿನಂತೆ ಸ್ಥಿರವಾಗಿ
ಉಪಾಸಕ = ಜೈನ ಗೃಹಸ್ಥ
ತಱಿಯ ಪುಳ್ಳಿ = ತರಿಯ ಮರದ ಸೌದೆ
ಕೆಲಂ ಸಾರ್ಚ = ಮಗ್ಗುಲಿಗೆ ಸೇರಿಸಿ
ಕೆಚ್ಚನಾಗಿರ್ದ = ಕೆಂಪಾಗಿದ್ದ.

೧೧. ಕಾರ್ತಿಕ ಋಷಿಯ ಕಥೆ

ನಂದೀಶ್ವರ=ನಂದೀಶ್ವರವೆಂಬ ಹಬ್ಬ
ಸಿದ್ಧಶೇಷೆ = ಪೂಜೆಯ ಹೂವು, ಪ್ರಸಾದ
ಆಟಿಸಿ= ಬಯಸಿ, ಪ್ರೀತಿಸಿ
ಸಮಯಿಗಳು=ಧರ್ಮದವರು
ತಗದುದು=ಯೋಗ್ಯವಲ್ಲದ್ದು
ಬಹುಪ್ರಳಾಪಿ = ಹೆಚ್ಚುಮಾತನಾಡುವವರು
ಸರವಣ = ಜೊಂಡು ಹುಲ್ಲು
ಆತನಿಂ ಬಱಿಯಂ= ಆತನ ನಂತರ
ಪೂಸಲು = ಲೇಪಿಸಿಕೊಳ್ಳಲು
ತಂಬುಲ = ಅಡಕೆ ವೀಳ್ಯ
ತಿಂಬಡಂಗಳ್ = ತಿನ್ನುವ ಪದಾರ್ಥಗಳು
ತೆಂಕನಾಡ = ದಕ್ಷಿಣಪ್ರದೇಶ
ಕಿಷ್ಕಿಂಧ= ಒಂದು ಪರ್ವತ, ಹಂಪೆ ಆನೆಗೊಂದಿಯ ಬಳಿಯಿರುವ ಪರ್ವತ ಪ್ರದೇಶ
ಕರುಮಾಡ = ಉಪ್ಪರಿಗೆ
ಪರಿತರ್ಪನ್ನೆಗಂ = ಓಡಿ ಬರುವಷ್ಟರಲ್ಲಿ
ಅಂಗಣ = ಅಂಗಳ
ಬಾಗಿಲ್ಮಾಡ= ಮುಂಬಾಗಿಲು, ಉರ=ಎದೆ
ತಲೆನವಿರು= ತಲೆಗೂದಲು
ನೆತ್ತರೊಕ್ಕು =ರಕ್ತ ಸುರಿದು
ಬಸಮಱಿದು= ಶಕ್ತಿಗುಂದಿ
ಪಾಯ್ತರ್ಪ =ಹರಿದು ಬರುವ
ನಿರ್ಝರ = ಬೆಟ್ಟದ ಝರಿ
ಶೀಕರಂ = ತುಂತುರ ಹನಿ
ಮರಮೊಗಂ = ಮರದ ಮುಖವಾಡ
ಕಚ್ಚುಟ= ಕೌಪೀನ
ಕವಡಿಕೆ= ಕವಡೆ (ಕಪರ್ದಿಕಾ (ಸಂ)
ವೊಱೆಯುಱಿದನಪ್ಪುದಱಿಂ = ಸಂಬಂಧವನ್ನು ಕೆಡಿಸಿಕೊಂಡವನಾದ ಕಾರಣ.
ಶ್ಲೋಕ:
ಪ್ರಜಾಃ = ಪ್ರಜೆಗಳು
ಧರ್ಮಿಣಿ ರಾಜ್ಞಿ =ಧರ್ಮವಂತನಾದ ರಾಜನಲ್ಲಿ
ಧರ್ಮಿಷ್ಠಾಃ = ಧರ್ಮದಲ್ಲಿರುವವರು
ಪಾಪೇ = ಪಾಪಿಷ್ಠನಾದ ರಾಜನಲ್ಲಿ
ಪಾಪಸಮಾಶ್ರಿತಾ = ಪಾಪವನ್ನು ಆಶ್ರಯಿಸುವವರು
ರಾಜಾನಂ = ರಾಜನನ್ನು
ಅನುವರ್ತಂತೇ =ಅನುಸರಿಸುತ್ತಾರೆ
ಯಥಾ ರಾಜಾ ತಥಾ ಪ್ರಜಾ = ರಾಜನಂತೆ ಪ್ರಜೆಗಳು.

೧೨. ಅಭಯಘೋಷರೆಂಬ ಮುನಿಯ ಕಥೆ

ಕೊಱೆಯಪಟ್ಟು =ಕತ್ತರಿಸಲ್ಪಟ್ಟು
ಮೀಂಗುಲಿಗ =ಬೆಸ್ತ
ಬಾೞ್ವಾೞ್=ಬದುಕಿರಲು
ನೆರವಿ = ಜನಸಮೂಹ.

೧೩. ವಿದ್ಯುಚ್ಚೋರನೆಂಬ ರಿಷಿಯ ಕಥೆ

ಚಿಕ್ಕುಟ =ಚಿಗಟಗಳಿಂದ,
ಗುಂಗುರ =ಗುಂಗಾಡಿ ಹುಳು
ತಳಾಱ= ತಳವಾರ
ಜೃಂಭಿನಿ = ಮಾಯವಾಗುವ ಮತ್ತು ಪ್ರತ್ಯಕ್ಷವಾಗುವ ವಿದ್ಯೆ
ಸ್ತಂಭಿನಿ = ಗತಿನಿರೋಧ ಮಾಡುವ ವಿದ್ಯೆ
ಮೋಹಿನಿ =ಮೂರ್ಛೆಗೊಳಿಸುವ ವಿದ್ಯೆ
ಸರ್ಷಪಿ = ಚರ್ಮರೋಗವನ್ನುಂಟು ಮಾಡುವ ವಿದ್ಯೆ
ತಾಳೋದ್ಘಾಟನಿ = ಬೀಗ ತೆಗೆಯುವ ವಿದ್ಯೆ
ಯೋಗ= ಮೋಸ
ಘುಟಿಕಾ= ಗುಳಿಗೆ
ಅಂಜನ= ಕಣ್ಣಿಗೆ ಹಚ್ಚುವ ಕಾಡಿಗೆ
ತಸ್ಕರಶಾಸ್ತ್ರ= ಚೋರವಿದ್ಯೆ
ನೊಳವು =ನೊಣ
ಪುಟ್ಟಿಗೆ =ವಸ್ತ್ರ
ಪೂಸಿ=ಲೇಪಿಸಿ
ತಂಬುಲಂದಿನುತ್ತುಂ =ತಾಂಬೂಲ ತಿನ್ನುತ್ತ
ಬಚ್ಚ = ವೈಶ್ಯ
ದೂಸಿಗ = ಬಟ್ಟೆ ವ್ಯಾಪಾರಿ
ನಿಯೋಗಿ =ಅಧಿಕಾರಿ
ಉಂದವೋವರಿಗೆ= ಮಲಗುವ ಮನೆ
ಪುಡಿಕೆ = ಪೆಟ್ಟಿಗೆ
ಸೆಜ್ಜೆಯೋವರಿ = ಮಲಗುವ ಕೋಣೆ
ವಿದ್ಯಾಧರ ಕರಣ = ಆಕಾಶಗಾಮಿನಿ ವಿದ್ಯೆ
ಲಂಘಿಸಿ = ಹಾರಿ
ರೂಪುಗರೆದು= ರೂಪವನ್ನು ಮರೆಸಿ
ಪ್ರತ್ಯಯ = ನಂಬಿಕೆ
ಪ್ರತಿಘುಟಿಕಾಂಜನ = ಸ್ಥಿತಿ ಬದಲಾವಣೆಗಾಗಿ ಬಳಸುವ ಗುಳಿಗೆ. ಕಾಡಿಗೆ
ಕುಹಕ = ಮೋಸ
ದರ್ಕ್ಕಂಬಸಿದು= ಶೂಲದ ಮೊಳೆಯನ್ನು ಹರಿತಗೊಳಿಸಿ
ರೂಪಪರಾವರ್ತನ = ಬೇರೆ ರೂಪ ಧರಿಸುವುದು
ಪದಿರಿನಿಂ= ಒಗಟೆಯಿಂದ, ಅರ್ಥಗರ್ಭಿತವಾಗಿ
ಸೂಟ್ಮಾತುಂ = ಉತ್ತರ -ಪ್ರತ್ಯುತ್ತರ
ವಣ್ಣಂ ಚಳಿಯದೆ = ಬಣ್ಣವು ಕೆಡದೆ
ಮಡಗಿದೆಡೆ= ಮುಚ್ಚಿಟ್ಟ ಸ್ಥಳ
ಪಲ್ಲಟಿಸು= ಬದಲಾಯಿಸು
ಆಱಡಿಗೊಳ್ವರುಂ =ಹಿಂಸಿಸುವವರು
ಮಱೆವಾಳ್=ಕದ್ದು ಪರಸ್ತ್ರೀಯೊಡನೆ ಬಾಳುವವರು
ಪರಿಗ್ರಹ=ವಸ್ತು ಸಂಪತ್ತು
ಪಾಲ್ಮರದ ಪಣ್ಣು = ಆಲ, ಅತ್ತಿ, ಅಶ್ವತ್ಥ. ಇಪ್ಪೆ, ಗೋಣಿ ಎಂಬ ಮರಗಳ ಹಣ್ಣು
ಆಳಂಬೆ=ಅಣಬೆ, ನಾಯಿಕೊಡೆ
ಅಪೇಯಪೇಯ= ಕುಡಿಯಬಾರದುದನ್ನು ಕುಡಿಯುವುದು
ಅಭಕ್ಷ್ಯಭಕ್ಷ =ತಿನ್ನಬಾರದುದನ್ನು ತಿನ್ನುವುದು
ಪಂಚಮಹಾಪಾತಕ= ಐದು ಘೋರ ಪಾಪಕಾರ್ಯಗಳು = ಬ್ರಹ್ಮಹತ್ಯೆ, ಸುರಾಪಾನ, ಸ್ತೇಯ (ಕದಿಯುವದು) ಗುರುಪತ್ನೀಗಮನ, ಮತ್ತು ಇವುಗಳೊಡನೆ ಸಂಸರ್ಗ ಹೊಂದಿರುವುದು.
ನಿವೃತ್ತಿ ಪರಿಣಾಮವಿಲ್ಲದೆ = ಹಿಂದಿರುಗುವ ಅವಕಾಶವಿಲ್ಲದೆ

ಏಳು ನರಕಗಳು = ರತ್ನಪ್ರಭ ಶರ್ಕರಾಪ್ರಭ, ವಾಲುಕಾಪ್ರಭ, ಪಂಕಪ್ರಭ, ಧೂಮಪ್ರಭ, ತಮಃಪ್ರಭ, ಮಹಾತಮಃ ಪ್ರಭ

ಗಾಹೆ :

ಣೆರಯೇ = ನರಕದಲ್ಲಿ

ಅಹಣ್ಣಿಸಂ = ಅಹರ್ನಿಶಂ, ಯಾವಾಗಲೂ

ಪಚ್ಚಮಾಣಾಣಂ=ಬೇಯಿಸಲ್ಪಡುತ್ತಿರುವ

ಣೆರಯಿಯಾಣ = ನರಕಜೀವಿಗಳಿಗೆ

ಅಚ್ಛಿಣಿ ಮೀಳಣ ಮೇತ್ತಂ = ಕಣ್ಣುರೆಪ್ಪೆ ಹೊಡೆಯುವಷ್ಟು ಕಾಲ ಕೂಡ

ಸುಹಂ = ಸುಖ, ಣತ್ಥಿ= ಇಲ್ಲ

ಅಣುಬದ್ಧಂ = ಕಟ್ಟಿಟ್ಟಿರುವ

ದುಃಖಮೇವ =ದುಃಖವೊಂದೇ.

ವೃತ್ತ :

ಕರಜ = ಉಗುರಗಳಲ್ಲಿ

ನಿವೇಶಿತ = ಚುಚ್ಚಲ್ಪಟ್ಟ

ತೀಕ್ಷ್ಣ =ಹರಿತ

ಶಲಾಕಾಃ =ಸಲಾಕೆಗಳು

ಕ್ರಕಚ = ಗರಗಸ

ವಿಪಾಟಿತ= ಸೀಳಲ್ಪಟ್ಟ

ಭಿನ್ನ= ಕತ್ತರಿಸಲ್ಪಟ್ಟ

ಶರೀರಾಃ =ದೇಹವುಳ್ಳವರಾದ

ನರಕಭವೇ = ನಾರಕಜೀವಿಗಳು

ವಿರಸಾಃ =ರಸಹೀನರಾದವರು

ತತ್‌ಕ್ಷಣ ದುಃಖ ವಿಷಾದಂ= ತಾತ್ಕಾಲಿಕವಾದ ದುಃಖ ಹಾಗೂ ಉದ್ವೇಗ

ಚಿರಮಪಿ = ಬಹುಕಾಲವಾದರೂ ಕೂಡ

ವಿಷಹಂತೇ = ಅನುಭವಿಸುತ್ತಾರೆ

ಇೞಿ = ಚುಚ್ಚು

ಕೈರಂದೞಿ = ಕಾಜಿನಂತೆ ಚೂರು ಚೂರು ಮಾಡಿ

ಅರಿದು = ಕತ್ತರಿಸಿ

ನೆೞನೆಡೆ = ಮರ್ಮಸ್ಥಾನ

ಲೋಹವಾರಿ = ಲೋಹದ ಕರಗಿಸಿದ ನೀರು

ಮೞುಗುವಿನಂ = ಕುದಿಯುತ್ತಿರಲು

ಕಟಿವ = ಸೊಂಟ

ಕಡಿ= ಕತ್ತರಿಸು

ಉಡಿ= ಮುರಿ

ಅಡಸಿ= ಹಿಡಿದು

ಖಳ=ಪಾಪಿ

ಪಿಡಿದು= ಹಿಡಿದು

ಉಡಿ= ಮುರಿ

ಮಿಡಮಿಡಮಿಡುಕು= ವಿಲಿವಿಲಿ ಒದ್ದಾಡು

ಪೆಡತಲೆ = ಹಿಂದಲೆ

ಬಡಿಯೊಳ್= ಬಡಿಗೆಯಿಂದ

ಪೊಡೆ= ಹೊಡೆ

ಕುತ್ತಿ =ಚುಚ್ಚಿ

ಪಿಡಿ= ಹಿಡಿ

ನಿಮಿರ್ದು= ನೇರವಾಗಿ

ಮಸುೞ=ಮುತ್ತಿಕೊಂಡು

ಕೊಂತ=ಒನಕೆ

ಇಟ್ಟಿಗೆ = ಈಟಿ

ಕುತ್ತಸಿೞ್ಗಿಂದ ಕುತ್ತುವ =ಆಯುಧಗಳಿಂದ ಚುಚ್ಚುವ

ಇಸಿೞಿಂದ = ಆನೆ ಮತ್ತು ಹಂದಿಗಳ ಕೋಡಿನಿಂದ

ಮುಟ್ಟಿಗೆ = ಒಂದು ಬಗೆಯ ಆಯುಧ

ತೆಗಪು=ಎಳೆ

ಉಸಿರ್ ಪತ್ತಿಲ್ಲದೆ= ಉಸಿರಾಡಲು ಅವಕಾಶವಿಲ್ಲದೆ

ಸುರಖ = ಒಂದು ಬಗೆಯ ಶಾಸ್ತ್ರ, ಕಳ್ಳತನದ ಶೋಧವಿದ್ಯೆ

ಕರಪಟ ಶಾಸ್ತ್ರ=ಕಳ್ಳತನವನ್ನು ಕಲಿಸುವ ಶಾಸ್ತ್ರ
ಪುನ್ನಾಗ = ಸುರಗಿಯ ಮರ
ವಕುಳ= ಪವಳದ ಮರ
ತಿಳಕ =ತಿಲಕಪುಷ್ಪದ ಮರ
ತಮಾಳ= ಹೊಂಗೆ ಮರ
ಕ್ರಮುಕ= ಅಡಕೆ
ನಾಳಿಕೇರ=ತೆಂಗು
ಜಂಬು= ನೇರಿಲೆ
ಜಂಬೀರ = ಲಿಂಬೆ
ಪನಸ=ಹಲಸು
ಕದಳಿ=ಬಾಳೆ
ಸಹಕಾರ = ಸಿಹಿಮಾವು
ಕಿಕ್ಕಿಱಿಗಿಱಿದಿರ್ದ=ದಟ್ಟವಾಗಿ ತುಂಬಿದ್ದ
ಉಳಿಸೆಂಡು= ಒಂದು ಆಟ
ಅವಲೋಕನ ವಿದ್ಯೆ = ಅದೃಶ್ಯವಾಗುವ ಕಲೆ
ಆರಯ್ಸಿ= ಹುಡುಕಿ
ಮನೆವಾಟ್ತೆ=ಮನೆಗೆಲಸ
ಅಧಿಗಮ ಸಮ್ಯಗ್ ದೃಷ್ಟಿ= ಸಂಪಾದಿಸಿದ ಸಮ್ಯಗ್ ದೃಷ್ಟಿ
ವಾರದು= ಬಾರದು
ಆಗ್ರಹ= ಒತ್ತಾಯ
ತನ್ನಾರ್ಪ ತೆರದಿಂ = ತನಗೆ ಸಾಧ್ಯವಾದ ಹಾಗೆ
ತನ್ನತೊಟ್ಟ = ತಾನು ತೊಟ್ಟ
ಪರಿವೊಟ್ಟೆಯವರ್ =ಒಂಟೆಯನ್ನೇರಿ ಬರುವ ಪರಿಚಾರರು, ದೂತರು
ಸಂಧಿವಿಗ್ರಹಿ= ಒಡ್ಡೋಲಗದ ಸಿಬ್ಬಂದಿ
ಬಾಚಿಸು=ವಾಚಿಸು, ಓದು
ಈಯೋಲೆ = ಈ ಪತ್ರ
ಆಲೇಖ್ಯ= ಚಿತ್ರವಿದ್ಯೆ
ಪತ್ರಚ್ಛೇದ್ಯ =ಭೂರ್ಜಾದಿ ಪತ್ರಗಳನ್ನು ಏಕಪ್ರಕಾರವಾಗಿ ಕತ್ತರಿಸುವುದು
ಪಾಗುಡ= ಉಡುಗೊರೆ
ಏವೆಂ = ಏನು ಮಾಡಲು
ಅಷ್ಟಶೋಭೆ=ಕಳಸ, ಕನ್ನಡಿ, ಬಾವುಟ, ತೋರಣ, ದೀಪ, ಭೇರಿ, ಬೀಸಣಿಗೆ.

ಶ್ಲೋಕ :

ಸಂಸಾರವರ್ತಿನಾಂ =ಸಂಸಾರದಲ್ಲಿರುವವರ
ಆಯುಃ= ಆಯುಸ್ಸು, ಡಿಂಡೀರ ಪಿಂಡ
ಸಂಕಾಶಂ=ನೊರೆಯ ಉಂಡೆಗೆ ಸಮಾನ
ಆಖಂಡಲ = ಇಂದ್ರನ
ಧನುಷ್ಕಾಂಡ= ಬಿಲ್ಲಿನ ಕೋಲು
ಸನ್ನಿಭ= ಸಮಾನ

ವೃತ್ತ :

ಜಾತಿಜರಾಮರಣಂ = ಹುಟ್ಟುಮುಪ್ಪು ಸಾವು
ಯದಿ= ಯಾವಾಗ
ನ ಭವೇತ್=ಉಂಟಾಗುವುದಿಲ್ಲವೊ
ಚ=ಮತ್ತು ಇದು, ಸರ್ವಂ ಈ ಎಲ್ಲ ವಸ್ತುಗಳು
ಇಹ ಜನ್ಮನಿ = ಈ ಜನ್ಮದಲ್ಲಿ
ಕಸ್ಯ= ಯಾರಿಗೆ
ರತಿ=ಪ್ರೀತಿ
ನ ಭವೇತ್= ಉಂಟಾಗುವುದಿಲ್ಲ.

ಗಾಹೆ :

ಏದಂ ಸರೀರಂ= ಈ ದೇಹವು
ಅಸುಚೀ=ಶುಚಿಯಲ್ಲದ್ದು
ಣಿಚ್ಚಂ = ಯಾವಾಗಲೂ
ಕಲಿಕಲುಸಭಾಜಣಂ= ರಾಗದ್ವೇಷಗಳ ತಾಣವಾಗಿರುತ್ತದೆ
ಅಚೋಕ್ಖಂ=ಅಶುಭವಾದದ್ದು, ಅಂತೋಬಾಹಿರದಿಟ್ಟಂ ಒಳಗೂ, ಹೊರಗೂ ಚರ್ಮದಿಂದ ಮುಚ್ಚಲ್ಪಟ್ಟದ್ದು

ಕಿಬ್ಬಿಸಭರಿದಂ=ಕಲ್ಮಶದಿಂದ ತುಂಬಿದ್ದು
ಅಮೇಜ್ಞಘರಂ = ಮೂತ್ರಪುರಿಷಾದಿಗಳ ಮನೆ,
ವಸ=ಮಾಂಸದಲ್ಲಿರುವ,ಜಿಡ್ಡು
ಮಜ್ಜ= ಮೂಳೆಯಲ್ಲಿರುವ ಸಾರ
ಶೋಣಿತ= ರಕ್ತದ ಕಾರ್ಯ
ಪುಪ್ಪುಸ=ಶ್ವಾಸಕೋಶ
ಕಾಲೇಜ್ಜ= ಕರಿಯ
ಮಾಂಸಖಂಡರೂಪವಾದದ್ದು
ಸಿಂಹ ಸೀಹಾಣಂ =ಶ್ಲೇಷ್ಮ, ಸಿಂಬಳಗಳು
ಸಿರಜಾಲ ಅಟ್ಠಿ ಸಂಗಡ =ರಕ್ತನಾಳಗಳು ಮೂಳೆಗಳಿಂದ ತುಂಬಿಕೊಂಡದ್ದು
ಚಮ್ಮಾಣದ್ಧಂ = ಚರ್ಮದಿಂದ ಮಚ್ಚಲ್ಪಟ್ಟದ್ದು
ಸರೀರಘರಂ =ಶರೀರವೆಂಬ ಮನೆ
ಸಂತತಂ ಅಚ್ಚೋಕ್ಸಂ =ಯಾವಾಗಲೂ ಅಶುಚಿ
ಏದಾರಿಸೇ ಸರೀರೆ = ಇಂಥ ಶರೀರದಲ್ಲಿ
ದುಗ್ಗಂಧೇ = ದುರ್ನಾತ ಹೊಂದಿದ್ದು
ಕುಣಿಮಪೂತಿಯೇ = ಕಲ್ಮಶ ತುಂಬಿದ್ದು
ಸಡಣಪಡಣೆ = ಸಡಿಲವಾಗಿ ಬೀಳುವಂತಹದು
ಅಸಾರೇ= ಸಾರರಹಿತವಾದದ್ದರಲ್ಲಿ
ಸಪ್ಪುರಿಸಾ= ಸತ್ಪುರುಷರು
ರಾಗ=ಪ್ರೀತಿ
ಣ ಕರಿಂತಿ= ಮಾಡುವುದಿಲ್ಲ.

ಗಾಹೆ :

ಸಕದ ಕಮ್ಮಂ =ತಾನು ಮಾಡಿದ ಕರ್ಮವು
ಛಾಯೇವ = ತನ್ನ ನೆರಳಿನಂತೆ
ಕಾರಗಂ =ಕರ್ತೃವನ್ನು
ಅಣುಯಾದಿ=ಅನುಸರಿಸಿ
ಬೆನ್ನತ್ತಿ, ಣ ಸೇಣಂ = ಬೇರೆಯವನನ್ನಲ್ಲ
ಜಿನಸಾಸಣೇ= ಜಿನನ ಆದೇಶ
ಅಣ್ಣತ್ಥ=ಬೇರೆ ಕಡೆಗೆ
ಪಲಾಯಿದುಂ = ಓಡಿ ಹೋಗುವುದು
ದುಸ್ಸಕ್ಕಂ =ಅಸಾಧ್ಯ.

ಶ್ಲೋಕ :

ದುರ್ಗಂಧೇ= ಹೊಲಸು ನಾರುವ
ದುರ್ಧರೇ ದುಃಖೇ = ತಾಳಲಾಗದ ದುಃಖವುಳ್ಳದ್ದು
ದುಃಸ್ವಭಾವೇ =ಕೆಟ್ಟ ಸ್ವಭಾವವುಳ್ಳ
ನಶ್ವರೇ= ನಾಶವಾಗುವಂಥ
ದುರ್ವಿಲೋಕೇಚ = ನೋಡಲು ಅಸಹ್ಯವಾದ
ಕಾಯೇ= ದೇಹದಲ್ಲಿ
ಜ್ಞಾನಿ = ಜ್ಞಾನಿಯೇ
ವೃಥಾ=ಸುಮ್ಮನೆ
ತವ ಆಗ್ರಹ= ನಿನ್ನ ಆಸಕ್ತಿಯು
ಕಿಂತು = ಬೇರೆನು ?

ವೃತ್ತ:

ಜಾತಿಕ್ಷಾಜತತೇ=ಜಾತಿವೃಕ್ಷಗಳ ಸಮೂಹವನ್ನುಳ್ಳ
ಕೃತಾಂತ=ಯಮ
ಕುಪಿತ= ಕೆರಳಿದ
ಕ್ರೂರ=ಕಠೋರ
ಊರುದುಃಶ್ವಾಪದೇ =ಅಧಿಕವಾದ ದುಷ್ಟ ಜಂತುಗಳನ್ನುಳ್ಳ, ವ್ಯಾಧಿ
ವ್ಯಾಧಭಯೇ=ರೋಗಗಳೆಂಬ ಬೇಡನ ಭಯವುಳ್ಳ
ದುರಂತ ದುರಿತ = ನಾಶಕರವಾದ ಪಾಪ
ಸ್ಫೂರ್ಜತ್ =ಪ್ರಕಾಶಮಾನವಾದ

ದವಾಗ್ನಿ=ಕಾಳ್ಕಿಚ್ಚಿನ
ಭದೇ=ಹೊದಿಕೆಯುಳ್ಳ, ಜನ್ಮಾಟವೀ
ಸಂಕಟೇ=ಜನ್ಮವೆಂಬ ಅರಣ್ಯದಲ್ಲಿ
ನಿಸ್ತ್ರಾಣಸ್ಯ= ತ್ರಾಣವಿಲ್ಲದ
ವಿಚೇತಸಃ=ಚೈತನ್ಯವಿಲ್ಲ
ಧೃಡತೃಷಾದುಃಖಾಕುಳಸ್ಯ= ಬಲವಾದ ಆಸೆ ಮತ್ತು ದುಃಖದಿಂದ ಪೀಡಿತನಾದ,
ಅಂಗಿನಃ = ದೇಹಿಗಳಿಗೆ
ಜೈನಂ ಶಾಸನಮೇಕೇವ=ಜೈನ ಶಾಸನ ಒಂದೇ
ಶರಣಂ=ಆಶ್ರಯ ತಾಣವು
ವೃತ್ತ –
ಇದಂ ಸರೀರಂ = ಈ ಶರೀರವು
ಯಾವತ್= ಎಲ್ಲಿಯ ತನಕ
ಸ್ವಸ್ಥಂ ಅರುಜಂ = ಕ್ಷೇಮವಾಗಿಯೂ, ರೋಗರಹಿತವಾಗಿಯೂ ಇರುವುದೋ
ಜರಾ=ಮುಪ್ಪು
ದೂರತಃ =ದೂರದಲ್ಲಿರುವದೊ
ಇಂದ್ರಿಯಶಕ್ತಿಃ = ಇಂದ್ರಿಯಗಳ ಬಲವು
ಅಪ್ರತಿಹತಾ = ಕುಗ್ಗುವುದಿಲ್ಲವೋ
ನ ಕ್ಷಯೋ=ಕ್ಷಯಿಸುವುದಿಲ್ಲವೋ
ತಾವತ್ =ಆಗಲೇ
ವಿದುಷಾ=ಆತ್ಮಶ್ರೇಯಸಿ, =ಆತ್ಮನ ಒಳಿತಿಗಾಗಿ
ಕಾರ್ಯಃ=ಮಾಡಲ್ಪಡತಕ್ಕದ್ದು
ಭವನೇ=ಮನೆಯು
ಪ್ರೋದ್ದೀಪ್ತೆ ಸತಿ = ಹತ್ತಿಕೊಂಡು ಉರಿಯುತ್ತಿರಲು
ಕೂಪ ಖನ ನ ೦=ಬಾ ವಿ ಯ ು ನ ್ನು ತೋಡುವುದಕ್ಕಾಗಿ
ಪ್ರತ್ಯುದಮಃ =ಪ್ರಯತ್ನವು, ಕೀದೃಶಃ =ಎಂತಹುದು?
ಅಱಿದುಮಱಿಯದೆ=ತಿಳಿದೂ ತಿಳಿಯದೆ
ಉಱದೆ= ಲೆಕ್ಕಿಸದೆ
ಆಂ=ನಾನು
ಏವ=ಕೋಪ, ಅಸಮಾಧಾನ
ಪಟ್ಟವರ್ಧನ= ಹಿರಿಯಾನೆ, ಪೂಜಾಗಜ
ತಜಿನೆವಟಿಯಿಗೆ= ಒಂದು ರೀತಿಯ ಬಾವುಟ,
ಬದ್ದವಣದ ಪಜೆ=ವರ್ಧಮಾನ ವಾದ್ಯ
ಕಟಕ =ಬಳೆ
ಪೊಱಸು=ಪಾರಿವಾಳ
ಅಪವರ್ಗ=ಮೋಕ್ಷ

೧೪. ಗುರುದತ್ತ ಭಟಾರರ ಕಥೆ

ಸೂಡಿವೊತ್ತಿಸೆಪಟ್ಟನಂತೆ =ಸುತ್ತಿ ಉರಿಯಿಂದ ಹೊತ್ತಿಸಲ್ಪಟ್ಟವನಂತೆ
ಸಾರೆ=ಸಮೀಪ
ಅಂಕುರಿತ=ಮೊಳೆತ
ಪಲ್ಲವಿತ =ಚಿಗುರಿದ
ಕೋರಕಿತ=ಟಿಸಿಲೊಡೆದ
ಕುಸುಮಿತ= ಹೂಬಿಟ್ಟ
ಅಣುಗ=ಮಗ
ಮಣಿಕುಟ್ಟಿಮ=ರತ್ನಖಚಿತವಾದ ನೆಲಗಟ್ಟು ಹೊಂದಿದ
ಬೊಡ್ಡಣ ಬಾವಿ =ದೊಡ್ಡ ಬಾವಿ
ಕುವಳಯಂ =ಕನ್ನೈದಿಲೆ

ಬಳಾಕ =ನೀರ ಹಕ್ಕಿ
ಮಂಡೂಕ =ಕಪ್ಪೆ
ಜೀವಜೀವಕ =ಒಂದು ಬಗೆಯ ಹಕ್ಕಿ
ಜೀರ್ಕೊಳವಿ =ಪಿಚಕಾರಿ
ಪುರುಡಿಸಿ= ಮತ್ಸರಪಟ್ಟು
ಶ್ಲೋಕ :
ಕರ್ಮವಶಾನುಗಾಃ =ಕರ್ಮಕ್ಕೆ ವಶರಾಗಿ ನಡೆಯುವ
ಜೀವಾಃ= ಜೀವಗಳು
ಯತ್ರ ಯತ್ರ =ಎಲ್ಲೆಲ್ಲಿ
ಉಪಪದ್ಯಂತೇ=ಹುಟ್ಟುವರೋ
ತತ್ರ ತತ್ರ=ಅಲ್ಲಲ್ಲೇ
ಸ್ವೇನಸ್ವೇನೈವ ಕರ್ಮಣಾ=ತಂತಮ್ಮ ಕರ್ಮಗಳಿಂದ
ರತಿಂ ಯಾಂತಿ = ಆಸಕ್ತರಾಗುತ್ತಾರೆ
ಒಂತಿ = ಸಣ್ಣಕಲ್ಲು
ಎಸಡು =ಏಡಿ
ಕಿಱಿಗಲ್ಗಳುಂ =ಓತಿಕೇತಗಳು
ಇನ್ನವಂ = ಇಂಥವುಗಳನ್ನು
ವೃತ್ತ :
ಏತತ್ ಕ್ಷೇತ್ರಂ ಮದೀಯಂ =ಈ ನೆಲ ನನ್ನದು.
ಇದಂ ಗೃಹಂ ಅಪರಂ= ಈ ಮನೆ ಬೇರೆಯವರದಲ್ಲ
ಏತಾ =ಈ,
ಮಾತೃಭಾರ್ಯಾ=ತಾಯಿಯೂ
ಹೆಂಡತಿಯೂ, ಮಮ=ನನ್ನದು
ಅಯಂ ಪುತ್ರಃ= ಈ ಮಗನು
ಮೇ=ನನ್ನವನು
ಸುಕಾಂತ=ಸುಂದರಿಯರಾದ
ಸ್ವಸೃ ದುಹಿತೃಜನೋ=ಸೊಸೆಯರೂ, ಹೆಣ್ಣುಮಕ್ಕಳೂ
ಮಾನುಷ್ಯಃ = ಮನುಷ್ಯರೂ
ಬಂಧವರ್ಗಃ=ನಂಟರ ಗುಂಪು
ಮೇ =ನನಗೆ
ಅಶ್ವಾಃ =ಕುದುರೆಗಳು
ದಾಸಾಃ =ಸೇವಕರು
ಮಮ =ನನ್ನ
ಪರಮಹಿತಾಃ =ಅತ್ಯಂತ ಹಿತರಾದವರು
ದ್ರವ್ಯಗಾವೋ ಮಹಿಷ್ಯಃ= ಹಣವೂ ಹಸುವೂ ಎಮ್ಮೆಗಳೂ
ಇತ್ಯೇವಂ= ಎಂದು ಹೀಗೆ
ಬ್ರುವಾಣಃ =ಹೇಳಿಕೊಳ್ಳುವ
ನರಪಶುಃ = ಮನುಷ್ಯಪ್ರಾಣಿಯು
ಅನಿಶಂ =ಯಾವಾಗಲೂ
ನಾಶಯತಿ= ನಾಶಮಾಡಿಕೊಳ್ಳುತ್ತಾನೆ.
ಆರ್ಯೆ :
ಅರ್ಥೋ+ ಐಶ್ವರ್ಯವು
ಮೇ=ನನಗೆ
ಮೇ ಮೇ ಕುರ್ವಾಣಂ = ನನಗೆ ನನಗೆ ಎಂದು ಮಾಡಿಕೊಳ್ಳುವವನಾದ
ಪುರುಷಪಶುಂ =ನರಜಂತುವನ್ನು
ಕಾಲವೃಕಃ =ಯಮನೆಂಬ ತೋಳನು
ಹಂತಿ =ಕೊಲ್ಲುತ್ತದೆ
ಪಟ್ಟಿಸ ಭಂಡಾರ =ರೇಶ್ಮೆ ವಸ್ತ್ರಗಳ ಭಂಡಾರ
ಎಯ್ದಿದೆಂ = ಸೇರಿದೆನು.
ವೃತ್ತ:
ಪಾಪಾನಿ=ಪಾಪಗಳನ್ನು
ಯತ್ನೇನ =ಪ್ರಯತ್ನದಿಂದ
ಸಮಾಚರಂತಿ=ಮಾಡುತ್ತಾರೆ
ಪ್ರಸಂಗಾದಪಿ =ಪ್ರಸಂಗವಶಾತ್
ಧರ್ಮಂ =ಧರ್ಮವನ್ನು

ನಾ ಚರಂತಿ=ಮಾಡುವುದಿಲ್ಲ
ಏತತ್=ಇದು
ಮನುಷ್ಯಲೋಕೇ=ಮಾನವಪ್ರಪಂಚದಲ್ಲಿ
ಹಿ=ಅಲ್ಲವೆ?
ಕ್ಷೀರಂ= ಹಾಲನ್ನು
ಪರಿತ್ಯಜ್ಯ=ಬಿಟ್ಟು
ಪಿಬಂತಿ=ಕುಡಿಯುತ್ತಾರೆ.

ವೃತ್ತ :

ಸರ್ವೇ =ಎಲ್ಲ
ಸಮಾಗಮಾಃ =ಸೇರುವಿಕೆ
ಸ್ವಾವಮಾಹಿ =ತನ್ನ ವಶದಲ್ಲಿ ಇಲ್ಲ
ವಿಭೂತಯೋಪಿ=ಐಶ್ವರ್ಯಗಳು
ಕೂಡ ಕ್ಷಣಭಂಗುರಾಃ ಸ್ಯುಃ=ಅಲ್ಪಕಾಲದಲ್ಲಿ
ನಾಶವಾಗುವವಲ್ಲದೆ
ಅರ್ಹತಾಂ = ಅರಿಹಂತರ
ಅಯಂ ಧರ್ಮಮೇವ =ಈ ಧರ್ಮವೇ
ಸುಶಾಶ್ವತಃ =ಅತ್ಯಂತ ಶಾಶ್ವತವಾದುದು
ಇತಿ=ಹೀಗೆಂದು
ಪ್ರಚಿಂತ್ಯ =ಚಿಂತನೆ ಮಾಡಿ
ಆತ್ಮರತಿಃ =ಆತ್ಮನಲ್ಲಿ ಆಸಕ್ತಿಯು
ಬಭೂವ=ಹುಟ್ಟಿತು.

ವೃತ್ತ:

ಉದಿತಸ್ಯ =ಹುಟ್ಟಿದ
ರವೇಃ =ಸೂರ್ಯನ
ಪತನಂ= ಮುಳುಗುವುದು
ನಿಶ್ಚಯಂ =ನಿಶ್ಚಿತ
ಜಾತಸ್ಯ= ಹುಟ್ಟಿದ
ಸರ್ವಸ್ಯ = ಎಲ್ಲವಕ್ಕೂ
ಅಪಿ = ಕೂಸ
ತಸ್ಮಾತ್ =ಆದ್ದರಿಂದ ಜಾತೇನ =ಹುಟ್ಟಿದ
ಧರ್ಮಕರ್ಮರತೇನ =ಧರ್ಮಕರ್ಮದಲ್ಲಿ
ಆಸಕ್ತಿ ಹೊಂದಿದ, ಭಾವ್ಯಂ
ಏವ=ಭಾವಿಸಲ್ಪಡಬೇಕಾದ್ದೇ

ವೃತ್ತ:

ಯೌವನ ಬಲ ವಿಭವರೂಪ
ಸೌಭಾಗ್ಯಾನಿ = ಪ್ರಾಯಶಕ್ತಿವೈಭವ ರೂಪ
ಸೌಭಾಗ್ಯಗಳು,
ಪುಷ್ಪಫಲಭಾರತರುವತ್ = ಹೂವು
ಹಣ್ಣುಗಳ ಭಾರ ಹೊತ್ತ ಮರದಂತೆ
ಸರ್ವೇಷಾಂ = ಎಲ್ಲರ
ಜೀವಿತಂ ಚ = ಬದುಕು ಕೂಡ
ಗಿರಿಸರಿದಂಭಃ ಪ್ರತಿಮಂ =ಬೆಟ್ಟದ
ಝರಿಯ ನೀರಿಗೆ ಸಮಾನ
ಧಾವತಿ=ಓಡುತ್ತದೆ.

ಗಾಹೆ :

ಏಗೋಯ =ಒಬ್ಬನೆ, ಅಸಹಾಯಕನಾಗಿ
ಜೀವಃ =ಜೀವನು, ಮರದಿ =ಶರೀರತ್ಯಾಗ
ಮಾಡುತ್ತಾನೆ
ಉವವಜ್ಜ ಇ =ಹುಟ್ಟುತ್ತಾನೆ
ಏಗೋ ಸಜಾ ಇ ಮರಣಂ=ಒಬ್ಬನ
ಮರಣವು ಹತ್ತಿರ ಬರುತ್ತದೆ
ಏಗೋಸ ಜಾಯಿ ಣಿರಯಂ ವಾ
=ಒಬ್ಬನೇ ನರಕಕ್ಕೆ ಹೋಗುತ್ತಾನೆ.

ಶ್ಲೋಕ :

ಕಸ್ಯಮಾತಾ =ಯಾರ ತಾಯಿ
ಅಪಿವಾ =ಮತ್ತೆ
ಜೀವಾನಾಂ=ಜೀವಿಗಳ
ಜಾತೌ ಜಾತೌ= ಜನ್ಮಜನ್ಮದಲ್ಲಿ
ಪರೇ ಪರೇ = ಬೇರೆ ಬೇರೆಯಾದವರು
ಭವಿಷ್ಯಂತಿ ಹಿ = ಆಗುವರಲ್ಲವೆ ?

ಶ್ಲೋಕ :

ಅರ್ಥಾ=ದ್ರವ್ಯಗಳು
ಗೃಹೇಷು=ಮನೆಗಳಲ್ಲಿ

ತಿಷ್ಠನ್ತಿ=ನಿಲ್ಲುತ್ತವೆ;
ಬಾಂಧವಾ=ಬಂಧುಗಳು
ಶಶಾನೇಷು ಚ = ಸ್ಮಶಾನದಲ್ಲಿ ನಿಲ್ಲುತ್ತಾರೆ
ಶರೀರಃ = ದೇಹವು
ಜ್ವಾಲಮಾಲಾಯಾಂ= ಉರಿಯ ಮಾಲೆಯಲ್ಲಿ
ಸುಕೃತ = ಪುಣ್ಯ
ದುಷ್ಕೃತ = ಪಾಪ
ವ್ರಜೇತ್= ಬರುತ್ತವೆ
ಪಂದರ = ಚಪ್ಪರ
ಉಲ್ಲವಂಗಳುಮಂ=ವಿತಾನಗಳನ್ನೂ, ಮೇಲ್ಕಟ್ಟುಗಳನ್ನೂ
ಆರಾಧನೆಯನರ್ಚಿಸಿ = ಆರಾಧನೆ ಎಂಬ ಗ್ರಂಥವನ್ನು ಪೂಜೆ ಮಾಡಿ.

ಶ್ಲೋಕ :

ಕಂಠಗತ್ಯೈಃ =ಗಂಟಲಿಗೆ ಬಂದ
ಪ್ರಾಣೈರಪಿ=ಪ್ರಾಣಗಳಿಂದಲೂ
ಯಃ=ಯಾವನು
ಸನ್ಯಸನೇ =ಸನ್ಯಾಸದಲ್ಲಿ
ಅಸ್ತಿಮತಿಃ=ಮನಸ್ಸುಳ್ಳವನಾಗಿರುವನೋ
ಸಃ =ಅವನು,
ಪುನರಾಗಮ ವರ್ಜಿತಂ =ಹಿಂದಿರುಗಿ ಬರುವುದೆಂಬುದಿಲ್ಲದ
ಮೋಕ್ಷಸದನಂ =ಮೋಕ್ಷವೆಂಬ ಮನೆ
ಗಚ್ಛೇತ್= ಹೋಗುತ್ತಾನೆ
ಇಹಜೀವಕೃತಂಪಾಪಂ = ಈ ಜನ್ಮದಲ್ಲಿ ಮಾಡಿದ ಪಾಪ
ಪುರಾಕೃತಂ = ಹಿಂದೆ ಮಾಡಿದ ಪಾಪ
ಯಚ್ಚ=ಯಾವುದೋ
ತತ್ಸರ್ವಂ= ಆ ಎಲ್ಲ ಪಾಪಗಳೂ
ಅಗ್ನಿಃ =ಉರಿಯು
ಇಂಧನಮಿವ =ಸೌದೆಯನ್ನು ಹೇಗೋ ಹಾಗೆ,
ಸಂನ್ಯಸನೇನ=ಸನ್ಯಾಸದಿಂದ
ದಹತಿ =ಸುಡುತ್ತದೆ
ಹೃದಯೇ=ಹೃದಯದಲ್ಲೂ
ಲಲಾಟೇ=ಹಣೆಯಲ್ಲೂ
ಜೀವಂ=ಆತ್ಮನನ್ನೂ
ಕರಂ ಕೈಯನ್ನೂ,
ಮುಹೂರ್ತಕಾಲೇ= ಮುಹೂರ್ತ ಕಾಲವಾದರೂ
ನ್ಯಸ್ಯ =ಇಟ್ಟುಕೊಂಡು
ಸಮಸ್ಥಿತಸ್ಯ =ಸಮತೆಯಿಂದ ನಿಂತಿರುವವನ
ಅಜ್ಞಾನಭಾವಾತ್ =ಅಜ್ಞಾನದ ದೆಸೆಯಿಂದ
ಕೃತ =ಮಾಡಲ್ಪಟ್ಟ
ಕರ್ಮಭಾರಃ = ಪುಣ್ಯಪಾಪರೂಪವಾದ ಕರ್ಮಗಳ ಭಾರವು
ಸನ್ಯಾಸನಾತ್-ಸನ್ಯಸನದಿಂದ
ಸತ್ಪ್ರಲಯಂ = ಒಳ್ಳೆಯ ವಿನಾಶವನ್ನು
ಪ್ರಯಾತಿ =ಪಡೆಯುತ್ತದೆ.

ಗಾಹೆ :

ಉಡ್ಡಂ=ಊರ್ಧ್ವಲೋಕದಲ್ಲಿ
ಅಧೋ=ನರಕ, ವ್ಯಂತರ, ಜ್ಯೋತಿಷ್ಕ, ಲೋಕಗಳಲ್ಲಿ
ತಿರಿಯಮ್ಮಿಯ =ಏಕೇಂದ್ರಿಯಾದಿ ಜೀವಜಾತಿಗಳಲ್ಲಿ
ಕದಾಣಿ=ಮಾಡಲ್ಪಟ್ಟ
ಬಾಲಮರಣಾನಿ=ಬಾಲಮರಣಗಳು
ಬಹುಗಾಣಿ=ಬಹುವಾಗಿವೆ,ದಂಸಣಣಾಣ
ಸಮಗದೋ=ದರ್ಶನಜ್ಞಾನಗಳು ಸಮವಾಗಿ ಪ್ರಾಪ್ತವಾಗಿರುವ
ಪಂಡಿಯ ಮರಣಂ= ಪಂಡಿತಮರಣವನ್ನು

ಅಣುಮಲಿಸ್ಸೇ=ಸ್ವೀಕರಿಸುತ್ತೇನೆ,
ಉವ್ವೇಯ ಮರಣಂ = ಉದ್ವೇಗಯುಕ್ತವಾದ ಮರಣವು
ಜಾ ಈ ಮರಣಂ = ಜಾತಿ ಮರಣಂ (ಹುಟ್ಟುವಾಗಲೇ ಸಾಯುವುದು)
ಣಿರಯೇಸು =ನರಕಗಳಲ್ಲಿ
ವೇದಣಾ ಓಯ = ನೋವೂ ಹಿಂಸೆಯೂ
ಏದಾಣಿ=ಇವುಗಳನ್ನು
ಸಂಭರಂತೋ =ಚೆನ್ನಾಗಿ ಸ್ಮರಿಸಿಕೊಳ್ಳುತ್ತ,
ಪಂಡಿಯ ಮರಣಂ = ಪಂಡಿತ ಮರಣವನ್ನು, ಶ್ರೇಷ್ಠ ಮರಣವನ್ನು
ಅಮಮಲಿಸ್ಸೇ=ಸಾಯುತ್ತೇನೆ
ಏಕ್ಕಂ = ಒಂದು
ಜಾ ಈ ಸದಾಣಿ=ನೂರು ಜನ್ಮಗಳನ್ನು
ಬಹೂಣಿ=ಅನೇಕವಾದವುಗಳನ್ನು
ಛಿಂದಇ =ಕತ್ತರಿಸುತ್ತದೆ
ಜೇಣ-ಯಾವುದರಿಂದ
ಮದಂ =ಸಾವು
ಸಮ್ಮದಂ=ಒಳ್ಳೆಯ ಮರಣವು
ಹೋಇ=ಆಗುತ್ತದೆ
ತಂ ಮರಣಂ=ಆ ಮರಣವು
ಮರಿದವ್ವಂ =ಪಡೆಯಬೇಕಾದ ಮರಣವು
ದುಃಖಂ=ದುಃಖವು
ಯದಿ =ಯಾವಾಗ
ಉಪ್ಪಜ್ಜ ಇ=ಹುಟ್ಟುತ್ತದೆಯೋ
ತೋತತಃ=ಆಮೇಲೆ
ಣಿರಯೇ=ನರಕದಲ್ಲಿ
ಸಭಾವದೋ =ಸ್ವಾಭಾವಿಕತೆಯನ್ನು, ಸ್ವರೂಪವನ್ನು,
ದಟ್ಠವ್ವೋ=ನೋಡುವುದಾಗುತ್ತದೆ
ಸಂಸಾರೇ=ಸಂಸಾರದಲ್ಲಿ
ಸಂಸರಂತೇಣ=ತಿರುಗುತ್ತಿರುವ
ಮಯೆ = ನನ್ನಿಂದ
ಕದವಂ ಣ ಪತ್ತಂ= ಏಕೆ ಪ್ರಾಪ್ತವಾಗುವದಿಲ್ಲ?

ಗಾಹೆ :

ಸಂಸಾರ ಚಕ್ಕವಾಳಮ್ಮಿ= ಸಂಸಾರಚಕ್ರದಲ್ಲಿ
ಮ ಏ = ನನ್ನಿಂದ
ಸವ್ವೇಪಿ=ಸಕಲ
ಪುಗ್ಗಲಾ=ಪುದ್ಗಲಗಳು
ಬಹುಸೋ=ಅನೇಕ ಬಾರಿ
ಆಹಾರಿದಾಯ=ಗೃಹೀತವಾಗಿವೆ
ಪರಿಣಾಮಿದಾಯ =ಜೀರ್ಣಿಸಲ್ಪಟ್ಟಿವೆ
ಣಯಮೇ ಗದಾ ತಿತ್ತೀ= ನನಗಾದರೋ ತೃಪ್ತಿಯಾಗಲಿಲ್ಲ
ಆಹಾರಣಿಮಿತ್ತಂ=ಆಹಾರ ಕಾರಣವಾಗಿ
ಮಚ್ಛಾ=ಮೀನುಗಳು
ಸತ್ತಮ=ಏಳನೆಯ
ಪುಢವಿಂ =ಪೃಥ್ವಿಯನ್ನು
ಗಚ್ಛಂತಿಕಿರ = ಹೋಗುತ್ತವೆ
ಸಚ್ಚಿತ್ತೋ= ಚೇತನದಿಂದ ಕೂಡಿದ
ಆಹಾರೋ = ಭೋಜನವು
ಮಣಸಾವಿ= ಮನಸ್ಸಿನಲ್ಲಿಯಾದರೂ
ಪತ್ತೇದುಂ =ಬೇಡಲು
ಣಕಲ್ಪದಿ=ಯೋಗ್ಯವಾಗುವುದಿಲ್ಲ
ತಣಕ ಟ್ಠೇಣ=ತೃಣಕಾಷ್ಟಗಳಿಂದ ಹೇಗೆ
ಅಗ್ನಿಃ= ಉರಿಯು ತೃಪ್ತವಾಗುವುದಿಲ್ಲವೋ
ಲವಣಸಮುದ್ದೋ=ಉಪ್ಪುಗಡಲು
ಣದೀಸಹಸ್ಸೇಹಿ=ಸಾವಿರಾರು ನದಿಗಳಿಂದ ಹೇಗೆ ತುಂಬುದಿಲ್ಲವೋ
ಇಮೋ ಜೀವೋ =ಈ ಜೀವನು

ಕಾಮಭೋಗೇಹಿಂ =ಬಯಸಲ್ಪಟ್ಟ
ಸ್ತ್ರೀ ವಸ್ತ್ರಾದಿ ಭೋಗವಸ್ತುಗಳಿಂದ
ತಪ್ಪೇದು=ತೃಪ್ತಿಪಡಿಸಲು
ಣ ಸಕ್ಕೋ=ಸಾಧ್ಯವಾಗುವವನಲ್ಲ
ಜಹಜಹ = ಹೇಗೆ ಹೇಗೆ
ಭೋಗೇ=ಭೋಗಗಳು
ಭುಂಜ ಇ =ಭೋಗಿಸಲ್ಪಡುವುದೋ
ತಹ ತಹ = ಹಾಗೆ ಹಾಗೆ
ಭೋಗೇಸು=ಭೋಗಗಳಲ್ಲಿ
ತಣ್ಹಾ=ಆಸೆಯು
ವಡ್ಡದೇ=ಹೆಚ್ಚುತ್ತದೆ
ಇಂಧಣಾ ಇಂ = ಸೌದೆಗಳಿಂದ
ಅಗ್ಗೀವ=ಅಗ್ನಿಯಂತೆ
ಸೇ ಭೋಗಾ= ಆ ಭೋಗಗಳು
ತಣ್ಣಂ =ತೃಷೆಯನ್ನು
ದೀವಂತಿ= ಉದ್ದೀಪನಗೊಳಿಸುತ್ತವೆ.

ವೃತ್ತ :

ಸಲವಣರಸಮಂಭಃ = ಉಪ್ಪಿನ ರಸದಿಂದ ಕೂಡಿದ ನೀರು
ತೃಷಾರ್ತ್ಯೈಃ = ಬಾಯಾರಿಕೆಯಾದವರನ್ನು
ಭುಜ್ಯಮಾನಂ =ಸೇವಿಸಲ್ಪಟ್ಟುದಾದರೆ
ಅಧಿಕತರ ತೃಷಾರ್ತಾನ್=ಇನ್ನೂ ಹೆಚ್ಚು ನೀರಡಿಕೆಯನ್ನುಂಟು ಮಾಡಿ
ದುಃಖಿತಾನ್ ಏವ = ದುಃಖಿಗಳನ್ನಾಗಿ
ಕುರ್ಯಾತ್ = ಮಾಡುತ್ತದೆ
ಇದಂ = ಈ
ವಿಷಯ ಸುಖಮಪಿ = ಇಂದ್ರಿಸುಖವು ಕೂಡ
ತೃಷಾರ್ತ್ಯೈ=ಆಸೆಯುಳ್ಳವರಿಂದ
ಭುಜ್ಯಮಾನಂ =ಸೇವಿಸಲ್ಪಟ್ಟದ್ದು

ವೃತ್ತ :

ಮರ್ದುಂ =ಮದ್ದೂ
ಗುರ್ದು =ಗುದ್ದು
ಮೆಯ್ಗಾಪು= ಅಂಗರಕ್ಷಕ
ವೇಳೆಗೊಂಡಿರ್ದ = ರಾಜ ಸತ್ತೊಡನೆ ತಾನೂ ಸಾಯುವುದಾಗಿ ಪ್ರತಿಜ್ಞೆ ಮಾಡಿರುವ
ತತ್ವ = ಜಿನತತ್ವ
ಒಂದದೆ= ಸೇರದೆ
ಕರ್ಮವಿಶ್ರಾವಣೆ= ಕರ್ಮ ಕಳಚುವಿಕೆ,
ವಿಶೋಧಿ= ನಿರ್ಮಲತ್ವ
ಪರೀಷಹ= ಇಪ್ಪತ್ತೆರಡು ಬಗೆಯ ತೊಂದರೆಗಳು
ಸಂತಂ = ಸಮಾಧಾನವಾಗಿ
ಶಾಸನ=ಧರ್ಮ
ಆರಯೆ =ವಿಚಾರಿಸಲಾಗಿ
ಪಲಾಲ=ಜೊಳ್ಳು.

ಗಾಹೆ ;

ಇಣಂ ಜಿಣವಯಣಂ ಓಸಹಂ = ಈ ಜಿನನ ಉಪದೇಶವು ಔಷಧ
ವಿಸಯಸುಹ ವಿರೇಯಣಂ = ವಸ್ತು ಸುಖಗಳಿಗೆ ವಿರೇಚನ ದ್ರವ್ಯವಾಗಿದೆ
ಅಮಿದಂ ಭೂತಂ =ಅಮೃತಸ್ವರೂಪವಾಗಿದೆ
ಸವ್ವಜೀವಾಣಂ = ಎಲ್ಲ ಜೀವಗಳ
ಜರಮರಣಜಮ್ಮವೇಯಣ = ಮುಪ್ಪು ಸಾವು ಹುಟ್ಟುರೋಗ, ಬೇನೆಗಳನ್ನು,
ಖಯಕರೇಣಂ =ಕ್ಷಯ ಮಾಡುವುದಾಗಿದೆ.

ಗಾಹೆ :

ಏಕಮ್ಹಿ = ಒಂದೇ ಆದ
ಭವಗ್ಗಹೆಣೇ = ಜನ್ಮಧಾರಣೆಯಲ್ಲಿ
ಸಮಾಹಿಮರಣಂ = ಸಮಾಧಿಮರಣವನ್ನು

ಜೀವೋ=ಜೀವನು
ಯದಿಲಹಿಜ್ಜ= ಯಾವಾಗ ಪಡೆಯುವನೋ
ಅದರ ನಂತರ
ಸತ್ತಟ್ಠ ಭವಗ್ಗಹಣೇ= ಏಳೆಂಟು ಜನ್ಮಗಳಲ್ಲಿ
ಅಣುತ್ತರಂ =ಅತ್ಯಂತ ಶ್ರೇಷ್ಠವಾದ
ಣಿವ್ವಾಣಂ = ನಿರ್ವಾಣವನ್ನು
ಲಹ ಇ= ಪಡೆಯುತ್ತಾನೆ.

ಗಾಹೆ :

ಸತ್ತಕ್ಖರ = ಸಪ್ತಾಕ್ಷರ,(ಣಮೋ ಅರಹಂತಾಣಾಂ)
ಸಜ್ಝಾಯಂ =ಪಠನವನ್ನು
ತಿಭಾವೇಣ = ಕಾಯಾ, ವಾಚಾ, ಮನಸಾ,
ಅಣಣ್ಣಮ ಈ = ಅನನ್ಯಮತಿಯಾದ
ಜೋ= ಯಾವನು
ಕುಣ ಇ = ಮಾಡುವನೋ
ಸೋ = ಅವನು
ಸವ್ವ ಕಲ್ಲಾಣಂ = ಸಮಸ್ತ ಕಲ್ಯಾಣಗಳನ್ನು
ಪಾವ ಇ= ಪಡೆಯುತ್ತಾನೆ

ಗಾಹೆ :

ಸವ್ವಪಾಪ ಪಣಾಸಣೋ = ಸಮಸ್ತ ಪಾಪಗಳನ್ನು ನಾಶ ಮಾಡುವ
ಏಸೋ = ಈ
ಪಂಚಣಮೋಕ್ಕಾರೋ=ಪಂಚನಮಸ್ಕಾರಗಳು
ಸವ್ವೇಸು= ಎಲ್ಲ
ಮಂಗಲೇಸು ಯ =ಮಂಗಳಗಳಲ್ಲಿ
ಪಢಮಂ = ಮೊದಲಿನದಾದ
ಮಂಗಳಂ=ಮಂಗಲವು
ಹ ವ ಇ = ಆಗುತ್ತದೆ.

ಗಾಹೆ ;

ಜೋ = ಯಾವನು,
ಭಾವಣಮೋಕ್ಕಾರಗದೋ = ಮನಸ್ಸಿನಲ್ಲೇ ಧ್ಯಾನಿಸುವ ಪಂಚ ನಮಸ್ಕಾರಗಳುಳ್ಳವನು
ಣಿಯಮಿಯಮ್ಹಿ =ನಿಯಮಿತವಾದ
ಚಿತ್ತಮ್ಮಿ = ಮನಸ್ಸಿನಲ್ಲಿ
ಝಾಯಂ = ಧ್ಯಾನಿಸುತ್ತ
ಏ ಅಗ್ಗೇಣ = ಏಕಾಗ್ರತೆಯಿಂದ
ವಿಸುದ್ಧೋ = ನಿರ್ಮಲನೋ
ಸೋ =ಅವನು
ಮೊಕ್ಕಸುಹಬಾಈ = ಮೋಕ್ಷ ಸುಖಭಾಗಿಯಾಗಿ
ಹೋಹಿಸಿ=ಆಗುವನು

ಆರ್ಯೆ :

ಗುರುಮೂಲೇ = ಗುರುಗಳ ಸಾನಿಧ್ಯದಲ್ಲಿ
ಯತಿನಿಕಟೇ = ಯತಿಗಳ ಸಮೀಪದಲ್ಲಿ
ಚೈತ್ಯೇ = ಜಿನಾಲಯದಲ್ಲಿ
ಸಿದ್ಧಾಂತವಾರ್ಧಿ ಸದ್ಘೋಷೇ = ಸಿದ್ಧಾಂತವೆಂಬ ಸಮುದ್ರದ ಉತ್ತಮ ನಾದದಲ್ಲಿ
ಜನ್ಮ ಜನ್ಮನಿ = ಜನ್ಮ ಜನ್ಮದಲ್ಲೂ
ಸನ್ಯಸನ ಸಮನ್ವಿತಂ ಮರಣಂ = ಸನ್ಯಾಸ ಸಮೇತ ಮರಣ
ಮಮ=ನನಗೆ
ಭವತು = ಉಂಟಾಗಲಿ
ಭುವನವಾಸಿಗಲೋಕ=ಅಸುರಾದಿ ಕುಮಾರರು ವಾಸಿಸುವ ಲೋಕ
ಪಳಿತ = ಒಂದು ಸಂಖ್ಯೆ, ಗಾತ್ರ

ಪೊಲ್ಲಗತಿ = ದುರ್ಗತಿ
ತೊಱೆಯಲ್ = ವಿರಕ್ತನಾಗಲು
ಬಲ್ಲಾಳ್ತನದಿಂ = ಬಲಾತ್ಕಾರದಿಂದ
ವೃತ್ತ :
ತೃಷ್ಣಾಂ = ಆಸೆಯನ್ನು
ಛಿಂದಿ = ಕತ್ತರಿಸು
ಕ್ಷಮಾಂ =ಕ್ಷಮೆಯನ್ನು
ಭಜ =ಭಜಿಸು
ಮದಂ =ಗರ್ವವನ್ನು
ತ್ಯಜ = ಬಿಡು
ಪಾಪೇ = ಪಾಪದಲ್ಲಿ
ರತಿಂ= ಪ್ರೀತಿಯನ್ನು
ಮಾಕೃಥಾಃ=ಮಾಡಬೇಡ
ಸತ್ಯಂ =ಸತ್ಯವನ್ನು
ಬ್ರೂಹಿ=ಹೇಳು
ಸಾಧುಪದವೀಂ=ಸಾಧು ಪದವಿಯನ್ನು
ಅನುಯಾಹಿ= ಅನುಸರಿಸಿ ಹೋಗು
ವಿದ್ವಜ್ಜನರಂ = ವಿದ್ವಾಂಸರನ್ನು
ಸೇವಸ್ವ = ಸೇವೆ ಮಾಡು
ಮಾನ್ಯಾನ್ = ಮಾನ್ಯರಾದವರನ್ನು
ಮಾನಯ =ಗೌರವಿಸು
ವಿದ್ವಿಷೋಪಿ =ಶತ್ರುಗಳನ್ನು ಕೂಡ
ಅನುನಯ =ಆದರಿಸು, ಪ್ರೀತಿಸು,
ಪ್ರಶ್ರಯಂ =ಆಶ್ರಯವನ್ನು
ಪ್ರಖ್ಯಾಪಯ =ಪ್ರಸಿದ್ಧಪಡಿಸು
ಕೀರ್ತಿಂ=ಕೀರ್ತಿಯನ್ನು
ಪಾಲಯ = ಪಾಲಿಸು
ದುಃಖಿತೇ=ದುಃಖಿತನಾದವನಲ್ಲಿ
ದಯಾಂ =ದಯೆಯನ್ನು
ಕುರು=ಮಾಡು
ಏತತ್ = ಇದು

ಸತಾಂ =ಸತ್ಪುರುಷರ
ಚೇಷ್ಟಿತಂ =ಆಚರಣೆಗಳು
ಪುಡುಕುನೀರೞ್ದುತ್ತಂ = ಕುದಿ ನೀರಿನಲ್ಲಿ ಅದ್ದುತ್ತ
ಚತುಷ್ಷಷ್ಟಿ = ಅರವತ್ನಾಲ್ಕು
ದ್ವಾಸಪ್ತತಿ=ಎಪ್ಪತ್ತೆರಡು
ನಿರವಶೇಷ=ಅವಶೇಷ ಉಳಿಯದಂತೆ
ಗಾಡಿ= ಸೌಂದರ್ಯ
ಮೊಟ್ಟೆಯಿಸಿ=ಎದುರಿಸಿ
ಮುಟ್ಟೆ=ಎದುರಿಸಿ
ಅಣ್ಮು=ಪ್ರಯತ್ನಪಡು
ನಿರ್ಜರೆ = ನಾಶವಾಗುವುದು
ಕಜ್ಜ =ಕಾರ್ಯ
ಪಟ್ಟವರ್ಧನ = ಪಟ್ಟದಾನೆ
ತಲೆವೆರಸು =ತಲೆಯೂ ಸೇರಿದಂತೆ
ಕತಿಪಯ = ಕೆಲವು
ಮೂವಳಸು ವಳಸಿ= ಮೂರು ಸುತ್ತು ಸುತ್ತಿ
ಸಾಧನಂ ಬೆರಸು = ಸೈನ್ಯಸಮೇತನಾಗಿ,
ಒಡ್ಡಣ=ಸೈನ್ಯ
ಒಡ್ಡೆ = ಒಡ್ಡಲಾಗಿ
ಅಣಿ= ಪದಾತಿ ಸೈನ್ಯ, ಕಾಲ್ದಳ
ಪರ್ದು = ಹದ್ದು
ಚವುಕಿಗೆ =ಅಂಗಳ
ನಡಪಾಡು = ಅತ್ತ ಇತ್ತ ನಡೆದಾಡು
ಸಸ್ಯ =ಶಸ್ಯ ಎಂಬ ಒಂದು ಬಗೆಯ ರತ್ನ
ಕರ್ಕೇತನ = ಒಂದು ಬಗೆಯ ಸ್ಫಟಿಕಮಣಿ
ಇಂದ್ರನೀಲ = ನೀಲರತ್ನ
ಕಂಕಣ = ಬಳೆ
ತಳ= ಅಂಗೈ
ಸತ್ತಪರ್ = ಸಾಯುತ್ತಾರೆ
ದೀಪ್ತಿ= ಪ್ರಕಾಶ

ಧೃತಿ=ಧೈರ್ಯ
ದೋರ್ದಂಡ =ತನ್ನ ಶಕ್ತಿಯಿಂದ ಗರ್ವಿಷ್ಠನಾದವನು
ಒಟ್ಟಯಿಸಿ = ಒಂದು ಮಾಡಿ
ಚಾದುರ್ದಂತ ಬಲ = ಚತುರಂಗ ಬಲ
ಉಪಸಂಹರಿಸಿ=ಮುಗಿಸಿ, ನಿಲ್ಲಿಸಿ
ಮೂದೆಱದ =ಮೂರು ಪ್ರಕಾರದ
ತುಡುಗೆ =ಆಭರಣ
ಪುಳುಗಾಱ= ಹಕ್ಕಿಯನ್ನು ಹಿಡಿಯುವವನು, (ಪುಳ್ = ಹಕ್ಕಿ (ತಮಿಳು)
ಗಿಣ್ಣುಂ =ಗಿಣ್ಣದ ಹಾಲು, ಭರ್ತಾರ=ಗಂಡ
ಲಾವುಗೆ= ಒಂದು ಬಗೆಯ ಹಕ್ಕಿ
ಉಂಕೆ = ಒಂದು ಬಗೆಯ ಹಕ್ಕಿ
ಕೊರಸುಂ = ಒಂದು ಬಗೆಯ ಹಕ್ಕಿ
ನೋಂಪಿ = ವ್ರತ
ತವಿಸಿ =ಕ್ಷೀಣಗೊಳಿಸಿ
ಪಶ್ಚಾತ್ಕಾಲ =ತರುವಾಯ
ಯತ್ರಾಸ್ತಮಿತವಾಸಿಗಳ್= ಎಲ್ಲಿ ಸಂಜೆಯಾಗುತ್ತದೆಯೋ ಅಲ್ಲಿಯೇ ಪ್ರವಾಸವನ್ನು ನಿಲ್ಲಿಸಿ ತಂಗುವವರು (ಜೈನ ಮುನಿಗಳು)
ಅಪ್ರಾಸುಕ=ಜೀವಜಂತುಗಳಿಂದ ಕೂಡಿದ
ಬಟ್ಟೆ = ದಾರಿ
ಸೂರ್ಯ ಪ್ರತಿಮೆ = ಬಿಸಿಲಿನಲ್ಲಿ ಪ್ರತಿಮೆಯಂತೆ ನಿಂತು ತಪಸ್ಸು ಮಾಡುವುದು
ಕೆಯ್=ಹೊಲಗದ್ದೆ
ಪದ =ಹದ
ಪಡುವಣ=ಪಶ್ಚಿಮ
ಕೆಯ್ಯ ಸಾರೆ=ಹೊಲದ ಹತ್ತಿರ
ಪೇಟ್ದಟ್ಟಿಂ ಗಡಿಂ =ಹೇಳಿ ಕಳುಹಿಸಿ
ಪಾರ್ವಂತಿ =ಬ್ರಾಹ್ಮಣನ ಹೆಂಡತಿ

ಅಱಸಿ=ಹುಡುಕಿ
ಭಟ್ಟಂ = ಗಂಡನು (ಭರ್ತೃ=ಸಂ.)
ಪಾರುತ್ತಿರ್ದು =ಎದುರು ನೋಡುತ್ತಿದ್ದು
ಕೂೞ= ಅನ್ನ, ಆಹಾರ
ಸೊಪ್ಪುನಾರಾಗಿ = ಸೊಪ್ಪೂ ನಾರೂ ಆಗುವಂತೆ
ಪಾರ್ದು = ಎದುರು ನೋಡುತ್ತ
ಉಣ್ಣಪಡಿಸಿ=ಉಪವಾಸವಿರುವಂತೆ ಮಾಡು
ಭವಸಂಬಂಧಿ = ಹಿಂದಿನ ಜನ್ಮದ ಸಂಬಂಧಿ
ಪುಲ್ಲ ಬೆಂಟೆ= ಹುಲ್ಲಿನ ಹಗ್ಗ
ಪೊಸೆದು = ಹೊಸೆದು, ಹುರಿ ಮಾಡಿ
ಕಾವೊರಾರ್ = ರಕ್ಷಿಸುವವರು ಯಾರು ?
ನೆಱೆಯಂ = ಸಮರ್ಥನಾಗಲಾರನು.

ಗಾಹೆ :

ದುಜ್ಜಣವಯಣ=ದುರ್ಜನರ ಮಾತುಗಳೆಂಬ
ಸಹಂತಿ = ಸಹಿಸುತ್ತಾರೆ
ಅಚ್ಚೋಡ = ಚಾಡಿಯ ಮಾತುಗಳನ್ನು ಅಥವಾ ಕೋಲು ಬಡಿಗೆಯ ಏಟುಗಳನ್ನು
ಸತ್ಥಪಹರಂಚ =ಶಸ್ತ್ರ ಪ್ರಹಾರಗಳನ್ನು
ಸಹಂತಿ = ಸಹಿಸುತ್ತಾರೆ
ಮಹಾರಿಸೀ = ಮಹಾಋಷಿಗಳು
ಣಯಕುಪ್ಪಂ=ಕೋಪ ಮಾಡಿಕೊಳ್ಳುವುದಿಲ್ಲ
ಸಮಣಾ=ಸಾಧುಗಳು
ಖ ವ್ ಂ ಣ ಗ್ ಂ ಣ ವಿ ಜಾ ಣ ಕಾ = ಕ್ಷಣಾಗುಣವನ್ನು ಬಲ್ಲವರಾಗಿದ್ದಾರೆ.

ಗಾಹೆ :

ಜೀವಿದ ಮರಣೇ = ಬದುಕಿನಲ್ಲೂ, ಸಾವಿನಲ್ಲೂ

ಲಾಭಾಲಾಭೆ= ಇಷ್ಟದ ಪ್ರಾಪ್ತಿಯಲ್ಲೂ, ಅಪ್ರಾಪ್ತಿಯಲ್ಲೂ
ಸಂಜೋಗ ವಿಪ್ಪಜೋಗೇಚ = ಇಷ್ಟಸಂಯೋಗದಲ್ಲೂ ಇಷ್ಟ ವಿಯೋಗದಲ್ಲೂ
ಬಂಧ್ವರಿಸುಖದುಃಖಾದಿಷು = ಸ್ವಜನರು ಮಿತ್ರರು, ಶತ್ರುಗಳು ಇವರಿಗೆ ಸಂಬಂಧಿಸಿದ ಸುಖ ದುಃಖಾದಿಗಳಲ್ಲೂ
ಸಾಮಾಯಿಗಂ ಣಾಮ =ಸಾಮಾಯಿಕ ಎಂಬ ಹೆಸರು,
ನಖಾಗ್ರದಿಂ = ಕಾಲುಗುರ ತುದಿಯಿಂದ
ಚರಮಪಾಳಿ = ಕೊನೆಯ ಕರ್ಮಬಂಧ
ಕ್ಷೀಣಕಷಾಯ = ನಾಶವಾದ ರಾಗದ್ವೇಷವುಳ್ಳ
ಧನದ =ಕುಬೇರ
ಪಲ್ಯಂಕ=ಪದ್ಮಾಸನ.

ಗಾಹೆ :

ಸವ್ವೇಹಿ =ಸಕಲವೂ
ಭವಣವಾಸೀ=ಭವನವಾಸೀ ದೇವತೆಗಳು
ಪುಂಟಿಹ ಕಪ್ಪವಾಸೀ=ಕಲ್ಪವಾಸಿಗಳು
ಸಿಹಿಣಿಣಾ ಎ ಇ ಜೋಹ ಇಸಿಯಾ = ಜೋತಿಷ್ಕರು
ಸಮವಸರಣ = ಜಿನನ ಸಭಾಭವನ
ಕೋಷ್ಠ =ಪ್ರದೇಶ, ಪುಂಡರೀಕ =ಶ್ರೇಷ್ಠ ತಾವರೆ.

ಗಾಹೆ :

ತೇ=ಮುಕ್ತರಾವದರು
ಅಜರಂ = ಮುಪ್ಪಿಲ್ಲದವರು
ಅರುಜಂ= ರೋಗವಿಲ್ಲದವರು
ಅಮರಂ =ಸಾವಿಲ್ಲದವರು
ಅಸರೀರಂ=ಶರೀರವಿಲ್ಲದವರು
ಅಕ್ಷಯಂ =ಕ್ಷಯ (ನಾಶ)ವಿಲ್ಲದವರು
ಅಣುವಮಂ =ಅಸದೃಶವಾದ
ಸೋಕ್ಖಂ=ಸುಖವುಳ್ಳವರು
ಅವ್ವಾಬಾಧಂ =ತಡೆಯಿಲ್ಲದ
ಅಣಂತ ಅಣಾಗತಂಕಾಲಂ = ಅನಂತವಾದ ಭವಿಷತ್ಕಾಲದ ವರೆಗೂ
ಅಚ್ಛಂತಿ = ಮುಳುಗಿರುವರು
ಕುಮ್ಮರಿ= ಕಟ್ಟಿಗೆಯ ರಾಶಿ
ಪೋಡುಂಗಾಱ= ಕಾಡನ್ನು ಕತ್ತರಿಸುವವನು
ಕಟ್ದಿಂಗಳ್ =ಕಪ್ಪು ತಿಂಗಳು, ಅಮವಾಸ್ಯೆ,
ನಿಂದನೆಗರುಹಣೆ= ನಿಂದನೆ ಗರ್ಹಣೆ
ಎಟ್ಟಿಟ್ಟಿ= ಎಬ್ಬಿಸಿ, ಓಡಿಸಿ
ಬಟ್ಟಿಬಂದು= ಕೆಳಕ್ಕೆ ಜಾರಿ ಬಂದು
ಅರಿದು =ಅಸಾಧ್ಯವಾದುದು
ಪೇರಡವಿ= ಕಗ್ಗಾಡು, ದೊಡ್ಡ ಕಾಡು
ಅವಳೋಕಿನೀ ವಿದ್ಯೆ = ದೂರದಲ್ಲಿ ನಡೆಯುವ ಪ್ರಸಂಗಗಳನ್ನು ತಿಳಿಸುವ ವಿದ್ಯೆ
ಕಿಟ್ಟಿಬಾಳ್ = ಹಿರಿದ ಖಡ್ಗ
ಸೋಂಕಿಲ = ಮಡಿಲು, ಉಡಿ
ಓವರಿ = ತಾಣ, ಕೋಣೆ, ನೆಲೆ
ಏಕಸ್ಥಿರಯೋಗ= ಚಲಿಸದೆ ಒಂದೇ ನೆಲೆಯಲ್ಲಿ ನಿಂತು ತಪಸ್ಸು ಮಾಡುವುದು
ಕಲ್ನೆಲೆ ನಿಲ್ಲು= ಕಲ್ಲಿನ ಹಾಗೆ ತಪಸ್ಸಿಗೆ ನಿಲ್ಲು
ಕರುಮಾಡ = ಉಪ್ಪರಿಗೆ
ಕೌಟಿಲ್ಯಭಾವ=ಕುಟಿಲ ಭಾವ
ಮಹಾವಾತ=ದೊಡ್ಡ ವಾತರೋಗ
ಪರಿಚ್ಛೇದಿಸಿ = ನಿಶ್ಚಯಿಸಿ
ಕಿಚ್ಚಿನುಪಸರ್ಗ = ಉರಿಯ ಉಪದ್ರವ
ಚತುರ್ವಿಧ ದೇವನಿಕಾಯ =ಭವನವಾಸಿ ವ್ಯಂತರ, ಜ್ಯೋತಿಷ್ಕ, ವೈಮಾನಿಕ ಎಂಬ ನಾಲ್ಕು ಬಗೆಯ ದೇವತೆಗಳ ಸಮೂಹ
ಪ್ರತಿಬದ್ಧಂಗಳ್ = ಅನುಬಂಧಗಳು.

೧೫. ಚಿಲಾತಪುತ್ರ ಕಥೆ

ಚಿಲಾತ =ಕಿರಾತ
ಅಱಿಯವಪ್ಪ ಏಱು= ಸಹಿಸಲಸಾಧ್ಯವಾದ ಗಾಯ
ಉರ್ಚೆಪಟ್ಟೊನಾಗಿ=ಭೇದಿಸಲ್ಪಟ್ಟವನಾಗಿ
ಕಟ್ಟಿಱುಂಪೆ=ಕಟ್ಟಿರುವೆ
ಒನಲಿಯವೊಳ್ = ಜರಡಿಯಂತೆ
ಬಟ್ೞೆ =ದಾರಿ
ತಗುಟ್ದೊಡೆ =ಬೆನ್ನಟ್ಟಿ ಹೋದರೆ
ಗಾಳಿಗೊಂಡು = ಗಾಳಿಯ ಮೂಲಕ ವಾಸನೆಯನ್ನು ತಿಳಿದು
ಪಲ್ಲಣ =ಕುದುರೆಯ ಜೀನು
ಚದುರಸಿಗೆ =ನಾಲ್ಕು ಮೂಲೆಯ ವಸ್ತ್ರ
ಕೀಱು=ಕಡಿವಾಣ
ಕಳೆದು = ಬಿಚ್ಚಿ, ತೆಗೆದು,
ನೀರೂಡಿ=ನೀರು ಕುಡಿಸಿ
ಪಟ್ಟಿರ್ದಂ = ಮಲಗಿದ್ದನು
ಉಚ್ಚಾಟಿಸಿ ಕಳೆಯೆಪಟ್ಟೊನಾಗಿ = ಬುಡಸಹಿತ ಕಿತ್ತು ಅಟ್ಟಲ್ಪಟ್ಟವನಾಗಿ
ತೇನತೇನದಿಂ = ಮೇಲೆ ಮೇಲಿಂದ
ತಂತ್ರ= ಸೈನ್ಯ
ಪಱೆ= ತಮಟೆ
ಸಂತವಿಸು= ಸಮಾಧಾನ ಪಡಿಸು
ಬಿರ್ದು =ಔತಣ
ಸಾರ್ಥಾಧಿಪತಿ=ವರ್ತಕರ ನಾಯಕ
ಏಕವಿಹಾರಿ=ಒಂಟಿಯಾಗಿ ಸಂಚರಿಸುವ ಜೈನ ಯತಿ
ಪಂಥಾತಿಚಾರನಿಯಮ =ದಾರಿಯಲ್ಲಿ ನಡೆಯುವಾಗ ಉಂಟಾಗುವ ಪ್ರಾಣಿ ಹಿಂಸೆ ಮುಂತಾದ ಅತಿಚಾರಗಳಿಗೆ ಪ್ರಾಯಶ್ಚಿತ್ತ ಮಾಡುವ ನಿಯಮ
ಮದ್ಯಾಂಗ =ಮದ್ಯವನ್ನು ಕೊಡುವ ಕಲ್ಪವೃಕ್ಷ
ತೂರ್ಯಾಂಗ =ವಾದ್ಯಗಳನ್ನು ಕೊಡುವ ಕಲ್ಪವೃಕ್ಷ
ವಿಭೂಷಣಾಂಗ = ಆಭರಣವನ್ನು ಕೊಡುವ ಕಲ್ಪವೃಕ್ಷ
ಜ್ಯೋತಿರ್ಗೃಹಾಭೋಜನಭಾಜನಾಂಗ =ದೀಪ, ಮನೆ, ಭೋಜನ, ಪಾತ್ರೆಗಳನ್ನು ಕೊಡುವ ಕಲ್ಪವೃಕ್ಷ
ಪ್ರದೀಪ=ಪ್ರಕಾಶಮಾನವಾದ
ವಸ್ತ್ರಾಂಗವರಸ್ರಜಾಂಗಾಃ= ವಸ್ತ್ರ, ಹೂವಿನ ಹಾರವನ್ನು ಕೊಡುವ ಕಲ್ಪವೃಕ್ಷ
ದಶಃ ಪ್ರಕಾರಾಃ = ಹತ್ತು ಪ್ರಕಾರಗಳ
ತರವಃ = ಮರಗಳು
ತತ್ರ = ಆ ಭೋಗ ಭೂಮಿಯಲ್ಲಿ
ಅಸ್ತು= ಇರುತ್ತವೆ
ತುಯ್ಯ = ಪಾಯಸ
ಜಯನ ಶಾಲೆ = ಆಯುಧ ಶಾಲೆ, (ಜೇನ ಶಾಲೆ).
ಉಱದೆ = ಹೊಂದಿಕೊಳ್ಳದೆ
ಸೆಱೆಯಂ ಬದುಂಕಿಸಿ = ಬಂದಿಯನ್ನು ಬಿಡುಗಡೆಗೊಳಿಸಿ
ಚರಪುರುಷ = ದೂತ
ಸಯ್ದು = ನೇರಾಗಿ
ಎಱತನಿಗರ =ಪ್ರಭುತ್ವವನ್ನುಳ್ಳವರ
ಗೊಡ್ಡ =ಕುಚೇಷ್ಟೆ
ಮೊಗವಡ = ಮುಖವಾಡ.

ಗಾಹೆ :

ಜಂ = ಯಾವುದನ್ನು
ಇಚ್ಚಸಿ=ಇಚ್ಛಿಸುವೆಯೋ

ತಂ =ಅದು
ಣಂತಂ= ಅನಂತವಾದದ್ದು
ಪುಣ= ಮತ್ತೆ
ಜಂ = ಯಾವುದನ್ನು
ಣೇಚ್ಛಸಿ=ಇಷ್ಟ ಪಡುವುದಿಲ್ಲವೋ
ತಂ =ಅದು
ತುಂ ಅಪ್ಪಂ= ನಿನಗೆ ಅಲ್ಪವಾದದ್ದು
ಪುರುಸಸೀಹ= ಪುರುಷಸಿಂಹನೇ
ಸಂಸಾರ ಮಹಣ್ಣವ = ಸಂಸಾರವೆಂಬ ಮಹಾಸಮುದ್ರ
ತಂ=ಅದನ್ನು
ತರಿದುಂ=ದಾಟುವುದನ್ನು
ಇಚ್ಛಸು=ಬಯಸು, ಅಪೇಕ್ಷಿಸು

ಅಭಾವಿದಂ ಭಾವೇಟು=ಆಗದಿರುವುದನ್ನು ಭಾವಿಸುತ್ತೇನೆ
ಭಾವಿದಂ ಭಾಮೇಮಿ= ಆಗುತ್ತಿರುವುದನ್ನು ಭಾವಿಸುತ್ತೇನೆ
ಸವ್ವಂ ಸಾವಜ್ಜ ಜೋಗುವಿರದೋಮ್ಹಿ = ಸಕಲ ಸಾವದ್ಯ (ದೋಷಯುಕ್ತವಾದ) ಯೋಗದಿಂದ ವಿರತನಾಗಿದ್ದೇನೆ
ಪೆರಗಣಿಂ = ಹಿಂದಿನಿಂದ
ಬೆಸನ್ = ಕೆಲಸ
ಪಟಿಯುಂ ಪೊಲ್ಲಮೆಯುಮಂ = ನಿಂದೆಯನ್ನೂ, ಕೇಡನ್ನೂ, ನೀಗಿದಂ = ಕಳೆದುಕೊಂಡನು.

೧೬. ದಂಡಕನೆಂಬ ರಿಸಿಯ ಕಥೆ

ಕೂರಿದವಪ್ಪ =ಹರಿತವಾದ
ಅಂಬು =ಬಾಣ
ತೀವೆಪಟ್ಟ= ತುಂಬಿದ
ಆರಂಭ = ವ್ಯವಸಾಯ
ಕೆಯ್ಗಳಂ =ಹೊಲಗದ್ದೆಗಳನ್ನು
ಎಟ್ಟಿ =ಎತ್ತು
ಅಡುವ ಬಡ್ಡಿಸುವ= ಅಡುಗೆ ಮಾಡುವ, ಬಡಿಸುವ
ಪೆರ್ವರದು= ದೊಡ್ಡ ವ್ಯಾಪಾರ
ವೇದನಾಭಿಭೂತ= ನೋವಿನಿಂದ ಬಾಧಿಸಲ್ಪಟ್ಟವ
ಅಟ್ಟಕೂಟಂ = ಬೇಯಿಸಿದ ಅನ್ನ
ಶಿರೋರೋಗ ಮುಖರೋಗ=ತಲೆಯ ರೋಗವೂ, ಮುಖದ ರೋಗವೂ
ಓದುಗಳು= ಶಾಸ್ತ್ರಗಳು

ಊಟುತ್ತ=ಬಲಾತ್ಕಾರದಿಂದ
ಛರ್ದಿ=ವಾಂತಿ
ಅಲಾಭ=ಭಿಕ್ಷೆ ಸಿಗದಿರುವುದು
ವೈಯಾವೃತ್ತ್ಯ =ಮಾಡಿದ ತಪ್ಪಿಗೆ ಉಪಚಾರ
ದೇಹಾರ=ಮನೆಯಲ್ಲಿರುವ ದೇವರ ಕೋಣೆ
ಕುತ್ತ =ರೋಗ
ತೀರ್ಚು=ಪರಿಹರಿಸು
ಉಂಡೆಯ ಪರ್ವ = ಉಂಡೆಯ ಹಬ್ಬ
ಇಂಬು ಮಾಡಿ =ವಾಸಿ ಮಾಡಿ, ಸರಿಪಡಿಸಿ
ಉದ್ಯೋಗ ಪರ= ಕಾರ್ಯದಲ್ಲಿ ತೊಡಗು
ಪಾವಿನ ಪೆರೆ = ಹಾವಿನ ಪೊರೆ
ಕೋಡಗ = ಕೋತಿ
ಸ್ವಾಧ್ಯಾಯ=ಶಾಸ್ತ್ರಪಠನ
ಉರ್ಚು=ಸೀಳಿ
ಬಾಟ್ತೆ= ಪ್ರಯೋಜನ

ಏವೆನ್ = ಏನು ಮಾಡುವೆನು?
ಸಿತಾತಪತ್ರ = ಬಿಳಿಯ ಕೊಡೆ
ಮೂವಳಸು = ಮೂರು ಸುತ್ತು
ಜಾವಜ್ಜೀವಂ = ಜೀವವಿರುವ ವರೆಗೆ
ಘಾತಿಕರ್ಮಗಳು = ಜ್ಞಾನಾವರಣೀಯ, ಅಂತರಾಯ, ದರ್ಶನಾವರಣೀಯ, ಮೋಹನೀಯ ಎಂಬ ನಾಲ್ಕು ಬಗೆಯ ಕರ್ಮಗಳು
ಅಂತರ್ಗತ ಕೇವಲಿ =ಅಂತರ್ಗತ ತ್ರಿಕಾಲಜ್ಞಾನಿ
ಎಂಟು ಕರ್ಮ =೪ ಘಾತಿಕರ್ಮ ಹಾಗೂ ೪ ಅಘಾತಿ ಕರ್ಮಗಳು.

೧೭. ಮಹೇಂದ್ರ ದತ್ತಾಚಾರ್ಯರ್ ಮೊದಲಾದ ಅಯ್ನೂರ್ವರ್ ರಿಸಿಯರ್ಕಳ ಕಥೆ

ಪಿಟಿಯೆಪಟ್ಟರಾಗಿ =ಹಿಂಡಲ್ಪಟ್ಟವರಾಗಿ
ಕಿಱಿಯೊಳ್ =ಕಿರಿಯವಳು
ವಾದು=ವಾದ
ಪೆತ್ತಿರ್ಪನ್ನೆಗಂ=ಪಡೆದಿರುತ್ತಿರಲು
ಬಿಚ್ಚುವರ್ಗೆ=ಭಿಕ್ಷುಕರಿಗೆ
ಪೊಲ್ಲದೊರ್=ಸೇರಲಾರದವರು, ಕೇಡಿಗರು
ಪುಡುಕೆ= ಪೆಟ್ಟಿಗೆ, ಭರಣಿ
ದ್ರಮ್ಮ= ದ್ರವ್ಯ
ತುಡುಗೆ =ಒಡವೆ, ಉಗುತ್ತಂ =ಸುರಿಯುತ್ತ
ಸಾರಬೀದಿಯಾಗಿ=ಬೀದಿಯುದ್ದಕ್ಕೂ
ಕಜ್ಜಮಂ ಸಮಕಟ್ಟಿ = ಕಾರ್ಯವನ್ನು ಏರ್ಪಡಿಸಿ,
ಬೂತಿಂಗೆ =ಭೂತಕ್ಕೆ
ಕಿರಿಸಿ =ಬೋಳಿಸಿ
ಕರಿಯ ಕೋವಣಂ=ಕಪ್ಪು ಕೌಪೀನ
ಕವಡಿಕೆ = ಕವಡೆ,
ಕುಂಚ = ನವಿಲು ಗರಿಯ ಗುಚ್ಛ
ತೆಗಟು=ನಿಂದಿಸು
ನಮೋಸ್ತು=ನಮಸ್ಕಾರ
ಸವಣ=ಜೈನ ಸನ್ಯಾಸಿ,
ನೆಱೆದು=ಸಮರ್ಥರಾಗಿ
ಕೆಯ್ಮಿಗೆ = ಕೈಮೀರಿ ಹೋಗಲು
ತೇಜೋಋದ್ಧಿ=ಏಳಿಗೆ
ಘನರವ = ಗುಡುಗು,
ಕೊಂಕ=ವಕ್ರ
ತ್ರಸಸ್ಥಾವರ =ಚಲನವುಳ್ಳ, ಚಲನರಹಿತವಾದ
ನೀಡಱಿಂದೆ = ದೀರ್ಘಕಾಲದಿಂದ
ಪೆತ್ತು =ಪಡೆದು.

೧೮. ಚಾಣಾಕ್ಯ ರಿಸಿಯ ಕಥೆ

ತುಱುಪಟ್ಟಿ=ಆಕಳ ಹಟ್ಟಿ
ಉರಿಪಿಪ್ಪಟ್ಟುದಾದೊಡೆ =ಉರಿಸಲ್ಪಟ್ಟಿದ್ದಾದರೆ
ಪೊರ್ದಿದೊಂ= ಹೊಂದಿದನು
ಉತ್ತಮಾಟ್ಟಂ= ಪರಮಪುರುಷಾರ್ಥವನ್ನು

ಕಣ್ಸೋಟ = ನೋಡಿದಾಕ್ಷಣ ಉಂಟಾಗುವ ಪ್ರೀತಿ
ಮೇಗೇಟ್ವಂತರ =ಮೇಲೆ ದಂಡೆತ್ತಿ ಬರುವ ಹಾಗೆ
ಸಾರಮಪ್ಪ = ಬೆಲೆ ಬಾಳುವ
ಮಡಗಿ = ಬಚ್ಚಿಟ್ಟು
ಉಚ್ಚ ವಿಗ್ರಹ = ದೊಡ್ಡಯುದ್ಧ
ಬಯ್ಗಿರುಳು=ಮುಂಜಾನೆ
ಗುಂಡಿತಪ್ಪ=ಆಳವಾದ
ಪೞವಾವಿ=ಹಳೆಯ ಬಾವಿ
ಪೂಗೊಯ್ವ = ಹೂವನ್ನು ಕೊಯ್ಯುವ
ಪಾಯ್ದೋಡುವ=ಮುಂದಕ್ಕೆ ಓಡುವ.
ಶ್ಲೋಕ :
ಇಯಂ=ಈ
ಶಾಖಾ=ಮರದ ಕೊಂಬೆ
ಯೇನ = ಯಾವ
ವಾನರೇಣ=ಕಪಿಯಿಂದ
ವಾ =ಅಥವಾ
ನರೇಣ =ಮನುಷ್ಯನಿಂದ
ಕಂಪಿತಾ= ಅಲುಗಿಸಲ್ಪಟ್ಟಿತೋ
ವರ್ಷಸಹ ಸ್ರಾಂತಾತ್ ಅಪಿ =ಸಾವಿರ ವರ್ಷಗಳ ಅಂತ್ಯದ ವರೆಗಾದರೂ
ಮದ್ದೋಷಂ =ನನ್ನ ತಪ್ಪನ್ನು
ಕಥಯಿಷ್ಯತಿ=ಹೇಳುತ್ತದೆ,
ವೋೞ =ಸಾಲು
ಅಱಸಿ=ಹುಡುಕಿ
ಮಱವಾಳು= ರಹಸ್ಯವಾಗಿ ಸುಖಪಡುವುದು
ಆರಯ್ = ಹುಡುಕು
ಮಣಿಖೇಟಮನುರದೊಳಮರ್ಚಿ = ರತ್ನಖಚಿತವಾದ ಗುರಾಣಿಯನ್ನು ಎದೆಯಲ್ಲಿ ಸೇರಿಸಿಟ್ಟುಕೊಂಡು
ವಿಯೋಗ =ಅಗಲಿಕೆ, ಸಾವು

ಸಾಭಿಪ್ರಾಯ ಸಂಬಂಧ=ವಿಶೇಷ ಸಂಬಂಧ
ಶ್ಲೋಕ :
ನೀಲೋತ್ಪಲದಳಶ್ಯಾಮೇ =ಕನ್ನೈದಿಲ ಎಸಲಿನಂತೆ ಶ್ಯಾಮಲವಾಗಿರುವವಳೇ
ನೀಲಸರೋರುಹೇ=ನೀಲಿ ಬಣ್ಣದ ತಾವರೆಯೆ
ಬಾಲೇ= ಬಾಲೆಯೇ
ಭದ್ರೇ= ಮಂಗಳಾಂಗಿಯೇ
ತದ್ಗುಣೈಃ = ನಿನ್ನ ಗುಣಗಳಿಂದ
ಅಹಂ =ನಾನು
ದಹ್ಯೇ = ಸಂತಾಪ ಪಡುತ್ತಿದ್ದೇನೆ
ವಿಶ್ವಂ = ಪ್ರಪಂಚವು(ವಿಶ್ವಸೇನನು)
ಶಾಖೇನ = ಮರದ ಕೊಂಬೆಯಿಂದ
ಕಂಪಿತಾ = ನಡುಗಿಸಲ್ಪಟ್ಟಿತು (ನಡುಗಿಸಲ್ಪಟ್ಟನು)
ಈ ವಾಕ್ಯಾರ್ಥಮಂ = ಈ ವಾಕ್ಯದ ಅರ್ಥವನ್ನು
ಪಿಡಿಪೆತ್ತು =ಹಿಡಿತಕ್ಕೆ ಸಿಕ್ಕಿ
ಪಾಯ್ದೋಡಿ ಕೆಟ್ಟೆಂ =ನುಗ್ಗಿ ಓಡಿ ತಪ್ಪಿಸಿಕೊಂಡೆನು
ಬಿಚ್ಚಳಿಸಿ = ವಿಸ್ತರಿಸಿ
ಅಂಗಚಿತ್ತ =ಧರಿಸಿದ ವಸ್ತ್ರಾಭರಣ
ಮಲ್ಲಲ್ = ಒಂದು ಮಣ್ಣಿನ ಶ್ರಾವೆ (ಸವುಟು)
ಮೊಗಪೆ = ಸಣ್ಣ ಮಣ್ಣಿನ ಕುಡಿಕೆ
ಪಚ್ಚುಗೊಂಡು = ಹಂಚಿಕೊಂಡು
ಆರ್ಕುಂ=ಸಮರ್ಥನಾಗುತ್ತಾನೆ
ಪ್ರತ್ಯಂತವಾಸಿಗಳು=ರಾಜ್ಯದ ಎಲ್ಲೆಡೆ ವಾಸ ಮಾಡುವವರು
ಮಸಗಿದೊಡೆ =ಕೆರಳಿ ಮೇಲೆ ಬಿದ್ದರೆ
ಆರಾನುಂ = ಯಾರಾದರೂ
ಉಣ್ಬರೊಳರೆ= ಉಣ್ಣುವವರಿದ್ದಾರೆಯೇ?

ಪರಚಕ್ರ = ಶತ್ರುಗಳ ರಾಜ್ಯ, ಪ್ರದೇಶ
ಮಸಗಲೀಯದೆ =ವಿಜೃಂಭಿಸಲು ಬಿಡದೆ
ಪೂರ್ವ ಕ್ರಮದಲ್ಲಿ= ಹಿಂದಿನಂತೆ
ತಂದೆಯ ಬಾೞಿಂದಗ್ಗಳಂ ಬಾೞಿಮೆಯಂ =ತಂದೆಗಿಂತ ಒಳ್ಳೆಯ ಬಾಳನ್ನು

ಶ್ಲೋಕ :

ಚತುರ್ದಂಷ್ಟ್ರಃ =ನಾಲ್ಕು ದಾಡೆ (ಹಲ್ಲು)ವುಳ್ಳ
ಸ ಚಾಣಾಕ್ಯಃ= ಆ ಚಾಣಾಕ್ಯನು, ಏಷಃ =ಇವನು
ನಂದಾನ್ವಯಕ್ಷಯಃ = ನಂದಕುಲಕ್ಕೆ ನಾಶಕಾರಿಯಾದವನು
ಓ = ಅಲ್ಲವೆ?
ರಾಜೋವಾ = ರಾಜನಾಗಲಿ
ರಾಜಮತ್ರ್ಯೋವಾ = ರಾಜನನ್ನು ಕೊಲ್ಲುವವನಾಗಲಿ, ಮಂತ್ರಿಯಾಗಲಿ
ಭವಿಷ್ಯತಿ = ಆಗುತ್ತಾನೆ
ನ ಸಂಶಯಃ = ಸಂಶಯವಿಲ್ಲ
ಕೈಸಾಣೆ=ಕೈಯಲ್ಲಿ ಉಜ್ಜಬಹುದಾದ ಸಾಣೆ
ಉರ್ದಿಸಿ = ಉಜ್ಜಿಸಿ
ಮುಟ್ಟಂ= ಸಮನಾಗಿ
ನೆತ್ತರ್= ರಕ್ತ
ಕೊಂಡೊಡೆ =ಚುಚ್ಚಲಾಗಿ
ಅಗುಟ್ಟು=ಅಗೆದು
ಸಖಾಯನ =ಸ್ನೇಹಿತ
ಭಟ್ಟಿ ಮಂಡಪ = ರಾಜನ ಸಭಾಮಂದಿರ.

ಶ್ಲೋಕ :

ನೀತಿಶಾಸ್ತ್ರ ವಿಶಾರದೈಃ = ರಾಜನೀತಿಶಾಸ್ತ್ರದಲ್ಲಿ ಪಾರಂಗತರಾದವರಿಂದ
ಶಕ್ತಿಸಹಸ್ರೇಣ= ಸಾವಿರಾರು ಶಕ್ತಿಗಳಿಂದ
ವ್ಯವಸಾಯದ್ವಿತೀಯೆನ = ಉದ್ಯಮವನ್ನು ಎರಡನೆಯದಾಗಿ ಉಳ್ಳವರಿಂದ
ಕೃತ್ಸ್ನಾ=ಪೂರ್ಣವಾಗಿ
ವಸುಂಧರಾ =ಭೂಮಿ
ಜೇತುಂ=ಜಯಿಸಲು
ಶಕ್ಯಾ=ಸಾಧ್ಯ
ಬಲ್ಮೆ= ಪಾಂಡಿತ್ಯ
ಸೀಂಟಿ= ಒರೆಸಿ

ಶ್ಲೋಕ :

ಏಕಶರೀರೇಣ =ಒಂದೇ ದೇಹದಿಂದ
ಶಕ್ಯಾ =ಸಾಧ್ಯವು, ಚೋಳಂಗಿ= ರವಿಕೆ,
ನಿಶ್ರಾವ= ಅನ್ನದ ಗಂಜಿ, ಕೆನೆ
ಕಷ್ಟತಿಕೆ= ದುಃಖಕರವಾದುದು.

ವೃತ್ತ :

ಕಶ್ಚಿದೇವ = ಯಾವನೂ
ಸಂಗಂ= ಸ್ನೇಹವನ್ನು
ನ ಕುರುತೇಹಿ=ಮಾಡುವುದಿಲ್ಲವಲ್ಲ
ಬಾಂಧವಾಃ = ನಂಟರು
ನಾ ಭಾಷತೇ = ಮಾತನಾಡುವುದಿಲ್ಲ
ಉತ್ಸವೇಪಿ = ಉತ್ಸವದಲ್ಲಿಯಾದರೂ
ಗೃಹಂ = ಮನೆಗೆ
ಸಂಪ್ರಾಪ್ತೇ = ಬಂದಿರಲು ಕೂಡ
ಗೃಹಿಭಿಃ = ಗೃಹಸ್ಥರಿಂದ
ಸಾವಜ್ಞಾನ್ಯವಜ್ಞಾಲೋಕ್ಯತೇ =ಸಾಧಾರಣವಾಗಿ ನೋಡುತ್ತಾರೆ
ಮಹಾಜನಃ = ಮಹಾಜನರು
ದೂರಾದೇವ= ದೂರದಿಂದಲೇ
ಲಜ್ಜಯಾ = ಸಂಕೋಚದಿಂದ
ಅಲ್ಪಚ್ಛದಂ = ಅಲ್ಪಉಡುಪುಳ್ಳವನು
ಪರಿಹರತಿ=ತೊಲಗಿಸಿ ಬಿಡುತ್ತಾರೆ
ನಿರ್ಧನತಾ ಪ್ರಕಾಶಂ = ಬಡತನವನ್ನು ಪ್ರಕಟಪಡಿಸುವುದು
ಅಪರಂ =ಎಣೆಯಿಲ್ಲದ
ಮನ್ಯೇ= ಭಾವಿಸುತ್ತೇನೆ

ಷಷ್ಟಿ ಗ್ರಾಮ ಸಮದ್ವಿತಮಪ್ಪ=ಅರವತ್ತು ಗ್ರಾಮಗಳಿಂದ ಕೂಡಿದ
ಅಗ್ರಾಸನ =ಬ್ರಾಹ್ಮಣವೃತ್ತಿ
ಪದ =ಪದವಿ
ಕ್ರಮಾಗತ =ಕ್ರಮದ ಪ್ರಕಾರ ಬಂದಿರುವುದು
ಅಗ್ರಾಹಾರ=ಬ್ರಾಹ್ಮಣರಿಗೆ ಬಿಟ್ಟು ಕೊಡಲಾದ ಊರು
ಪಾಟಿ = ಕ್ರಮ
ಅನಂದ=ಅಂದವಿಲ್ಲದ
ಅಬಂಧು=ಬಂಧುವಲ್ಲದವನು
ಕಾಸೆ=ಚಡ್ಡಿ
ಕಳೆ=ತೆಗೆದುಹಾಕು
ಜಾದಿನ ಸೇಲೆ =ಕಾವಿ ಬಟ್ಟೆ
ಭಗವಂತ ವೇಷ =ಸನ್ಯಾಸಿಯ ವೇಷ
ಬಾದಣ =ಗವಾಕ್ಷಿ.
ತೃಷ್ಣಾಭಿವೃದ್ಧಿಯಪ್ಪ= ಬಾಯಾರಿಕೆಯನ್ನು ಉಂಟುಮಾಡುವ
ಊಡಿ = ತಿನ್ನಿಸಿ, ಬೆಸಲೆಯಾದ=ಹೆತ್ತ
ಬಾಯ್ವೆಣ್ಣೆ= ಬೆಣ್ಣೆ
ನಂಜು=ವಿಷ,
ಪದಿರ್ಮಡಿ = ಹತ್ತುಪಟ್ಟು
ರಸದ ಬಾವಿ = ಮುಟ್ಟಿದ್ದನ್ನು ಚಿನ್ನವನ್ನಾಗಿಸುವ ರಸದ ಬಾವಿ
ಮೊಡೆನಾರ್ಪುದು = ಹುಳಿ ಮಜ್ಜಿಗೆಯಂತೆ ನಾರುವುದು
ಬಿಚ್ಚು =ಭಿಕ್ಷು, ಸಂನ್ಯಾಸಿ
ಮೊಗೆದು =ತುಂಬಿ
ಸೋರೆ =ಬುರುಡೆ
ತೀವಿ = ತುಂಬಿ
ಬಾಟಿಪ್ಪೆ = ಬದುಕಿಸುತ್ತೇನೆ,
ನಿಡುನೇಣಂ = ಉದ್ದವಾದ ಹಗ್ಗವನ್ನು
ಪೇಱು = ಹೇರು (ಅಳತೆ)
ಒಟ್ಟು = ರಾಶಿ ಮಾಡು
ಕೊಳ್ಗುಳ = ಯುದ್ಧಭೂಮಿ
ಸಾಲಿಗ = ನೇಕಾರ
ಬಿರ್ದಿ = ಮುದುಕಿ
ಕಂಚನಿಟ್ಟು= ತಟ್ಟೆಯನ್ನಿಟ್ಟು
ಅಲಂಪಿನಿಂದ = ಸಂತೋಷದಿಂದ
ಅದಿರ್ದು= ಅಲುಗಾಡಿಸಿ
ಕೈಯಂ ಬಿದಿರ್ದು= ಕೈ ಕೊಡವಿ
ತನ್ನ ಕೊಟ್ಟ = ತಾನು ಕೊಟ್ಟ
ಪಗೆ = ವೈರತ್ವ
ತನ್ನಾರ್ಪಂದೆ =ತಾನು, ಸಮರ್ಥನಾಗಿರುವಾಗಲೇ
ಪ್ರತಿಪಕ್ಷ = ಶತ್ರುಸೈನ್ಯ
ಒಡ್ಡಣ = ಸೈನ್ಯವನ್ನು ಎದಿರುಗೆ ನಿಲ್ಲಿಸುವುದು
ಸೊರ್ಕಪ್ಪ =ಸೊಕ್ಕನ್ನುಂಟು ಮಾಡುವ
ಮೂಱು ದಂಡ = ಮೂರು ಕೋಲುಗಳಿಂದ ಕಟ್ಟಿದ ದಂಡ
ಬಸ =ವಶ
ಲಹಟದಿಂದೆ =ಸುಂದರವಾಗಿ
ಪಾರ್ವಂತಿ= ಬ್ರಾಹ್ಮಣಸ್ತ್ರೀ
ಜೀವಿತ = ಬಾಳು
ಕದಿರ್ =ಅರಕಾಲ್, ಅರ್ದು =ಮುಳುಗು
ದಶಮಯೂರರ್ಕಳ್ = ಹತ್ತುಜನ ಮೌರ್ಯರು
ಬಂಚಿಸಿ=ವಂಚಿಸಿ
ಪ್ರಚ್ಛನ್ನದಿಂದ= ಮರೆಯಿಂದ
ಪನಿತುದು = ಹನಿ ಹನಿಯಾಗಿ ಸೋರಿದುದು
ಪರಿಸಿ =ಬರಿಸಿ
ಸೆಡೆ = ಮುರುಟಿಕೊಳ್ಳು,
ಗೊಬ್ಬರ = ಒಣಗಿಸಿದ ಸಗಣಿ, ಬೆರಣಿ,

೧೯. ವೃಷಭಸೇನರೆಂಬ ರಿಸಿಯರ ಕಥೆ

ನೆರವಿ =ಸಭೆ.. ಸಮೂಹ
ಸಿಗ್ಗಾಗಿ= ಲಜ್ಜಿತನಾಗಿ
ಪೇಟ್ಟಾರ್ =ಹೇಳಿದರು, ರಚಿಸಿದರು

೪. ಜೈನ ಪಾರಿಭಾಷಿಕ ಶಬ್ದಕೋಶ

ಅಂತರ್ಗತ ಕೇವಲಿ = ಒಳಗಡೆ ಸೇರಿರುವ ಎಂದರೆ ಲೀನವಾದ ಕೇವಲಜ್ಞಾನವುಳ್ಳವನು,
ಅಘಾತಿಕರ್ಮ =ಆತ್ಮನ ಗುಣಗಳನ್ನು ನಾಶಮಾಡದ ಕರ್ಮ,. ಇದು ನಾಲ್ಕು ತೆರ :

ಆಯು = ಆಯುಸ್ಸಿನ ಅವಧಿಯನ್ನು ನಿರ್ಣಯಿಸುವ ಕರ್ಮ. ನಾಮ = ವ್ಯಕ್ತಿಯ ತೂಕ, ಎತ್ತರ, ಗಾತ್ರ, ಬಣ್ಣ ಮುಂತಾದುವನ್ನು ನಿರ್ಣಯಿಸುವ ಕರ್ಮ. ಗೋತ್ರ =ವ್ಯಕ್ತಿಯ ವಂಶ, ಕುಲ, ದೇಶವನ್ನು ನಿರ್ಣಯಿಸುವ ಕರ್ಮ. ವೇದನೀಯ = ಇಹ ಪರ ಜೀವವದಲ್ಲಿ ಸುಖದುಃಖಕಾರಣವಾದ ಕರ್ಮ.

ಅಚ್ಯುತ ಕಲ್ಪ =ಹದಿನಾರು ಸ್ವರ್ಗಗಳಲ್ಲಿ ಕೊನೆಯದು.

ಅಣುವ್ರತ = ಜೈನ ಗೃಹಸ್ಥರು ಆಸಕ್ತಿಯಿಂದ ಧರಿಸುವ ಅಹಿಂಸೆ, ಸತ್ಯ, ಆಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ವ್ರತಗಳು.

ಗುಣವ್ರತ ಜೈನ ಸಂನ್ಯಾಸಿ ಹಾಕಿಕೊಳ್ಳುವ ದೈನಂದಿನ ಮಿತಿಗಳು, ಇವು ಮೂರು ತೆರ _

೧. ದಿಗ್ವ್ರತ =ನಿಶ್ಚಿತ ದಿಕ್ಕಿನಲ್ಲಿ ಮಾತ್ರ ಚರಿಸುವುದೆಂದು ಗೊತ್ತುಮಾಡಿಕೊಳ್ಳುವುದು.

೨. ದೇಶವ್ರತ =ನಿಶ್ಚಿತ ಸ್ಥಳಕ್ಕೆ ಮಾತ್ರ ಹೋಗುವುದೆಂದು ಗೊತ್ತುಮಾಡಿಕೊಳ್ಳುವುದು.

೩. ದಂಡವಿರತಿವ್ರತ= ದಂಡಿಸುವುದನ್ನು ಬಿಡುವದು.

ಅನಂತ ಚತುಷ್ಟಯ ನಾಲ್ಕು ಸಿದ್ಧಿಗಳು : ಅನಂತ ಜ್ಞಾನ, ಅನಂತ ದರ್ಶನ, ಅನಂತವೀರ್ಯ, ಅನಂತ ಸುಖ.

ಅಭವ್ಯ ಜೀವ =ಸಮ್ಯಗ್ದರ್ಶನಾದಿಗಳಲ್ಲಿ ಪರಿಣತನಾಗದೆ ಸಿದ್ಧಸ್ಥಿತಿಗೆ ಏರದ ಚೇತನ. ಅಭಕ್ಷ್ಯ -ತಿನ್ನಬಾರದ ಪದಾರ್ಥಗಳು ; ಜೇನು, ಅತ್ತಿಹಣ್ಣು, ಅರಳಿ ಹಣ್ಣು, ಆಲದ ಹಣ್ಣು, ಹಲಸಿನ ಹಣ್ಣು, ಬಸುರಿ ಮರದ ಹಣ್ಣು.

ಅಯಥಾಕರ್ಮದ ದೋಷ -ಉಚಿತವಲ್ಲದ ಕಾರ್ಯವನ್ನು ಮಾಡುವುದರಿಂದ ಬರುವ ದೋಷ

ಅಯೋಗಿ ಕೇವಲಿ -ಯೋಗದ ಅಭಾವವಿರುವ ಅಯೋಗಿ ಕೇವಲಿ ಗುಣಸ್ಥಾನ ಎಂಬ ೧೪ನೆಯ ಗುಣಸ್ಥಾನದಲ್ಲಿ ವರ್ತಿಸುವವನು.

ಅರ್ಧಚಕ್ರವರ್ತಿ -ಷಟ್ಖಂಡಗಳ ಒಡೆಯ ಚಕ್ರವರ್ತಿ, ಮೂರುಖಂಡಗಳ ಒಡೆಯ ಅರ್ಧ ಚಕ್ರವರ್ತಿ.

ಅವಧಿ ಜ್ಞಾನ - ಜೈನ ಯತಿಗಳಿಗೆ ಒದಗುವ ವಿಶೇಷ ಜ್ಞಾನ, ಕಾಲದೇಶಗಳು ಎಷ್ಟೇ ದೂರವಾಗಿದ್ದರೂ ಕೆಲವು ಮಿತಿಗೊಳಪಟ್ಟು ಅಲ್ಲಿನ ವಿಷಯಗಳನ್ನು ತಿಳಿಯುವ ಜ್ಞಾನ.

ಅವಧಿ ಜ್ಞಾನಿ -ಅವಧಿ ಜ್ಞಾನವುಳ್ಳ ಜೈನ ಯತಿ.

ಅವಲೋಕಿನೀ ವಿದ್ಯೆ -ದೂರಸ್ಥ ಸಂಗತಿಯನ್ನು ತಿಳಿಯುವ ವಿದ್ಯೆ.

ಅಷ್ಟಮದ - ಕುಲಮದ, ರೂಪಮದ, ವಯಸ್ಸಿನ ಮದ, ತೋಳಿನ ಮದ, ತಪೋಮದ, ಕಲಾ ಮದ, ದೇವತಾ ಬಲಮದ, ರಾಜ್ಯಮದಗಳು.

ಅಷ್ಟವಿಧಕರ್ಮ - ೪ ಘಾತಿಕರ್ಮಗಳು ಮತ್ತು ೪ ಅಘಾತಿಕರ್ಮಗಳು.

ಆಚಾಮ್ಲವರ್ಧನ =ಇದು ಒಂದು ವ್ರತ, ಸೌವೀರಭುಕ್ತಿ ಎಂದು ಇದರ ಹೆಸರು. ಒಂದು ಆಚಾಮ್ಲ ಒಂದು ಪಾರಣೆ, ಎರಡು ಆಚಾಮ್ಲ ಒಂದು ಪಾರಣೆ, ಮೂರು ಆಚಾಮ್ಲ ಒಂದು ಪಾರಣೆ. ಹಾಗೆ ಹತ್ತರವರೆಗೂ. ಅನಂತರ ಒಂಬತ್ತು ಆಚಾಮ್ಲ ಒಂದು ಪಾರಣೆ, ಎಂಟು ಆಚಾಮ್ಲ ಒಂದು ಪಾರಣೆ - ಹೀಗೆ ಒಂದರವರೆಗೂ ಕ್ರಮವಾಗಿ ನಡೆಸಿದರೆ ೧೦೦ ಆಚಾಮ್ಲ ೧೯ ಪಾರಣೆಗಳಾಗುತ್ತವೆ. ಇದು ಸೌಂದರ್ಯವರ್ಧಕ ವ್ರತ.

ಆಮೋಷಧಿ ಋದ್ಧಿ - ತಪಸ್ಸಿದ್ಧಿ ಪಡೆದವರಿಗೆ ಉಂಟಾಗುವ ಮಹಿಮೆಗಳಾದ ಋದ್ಧಿಗಳಲ್ಲಿ ಒಂದು. ಅಸಾಧ್ಯ ರೋಗಗಳು ಮುನಿಯ ಪಾದಾದಿಸ್ಪರ್ಶದಿಂದ ಪರಿಹಾರವಾಗುವುದು.

ಆಅನಾಯತನ ಸೇವೆ - ಸಮ್ಯಗ್ದರ್ಶನದಲ್ಲಿ ಧರ್ಮಸ್ಥಾನವಲ್ಲದವುಗಳ ಗಾಢ ಸಂಗತಿಯಿಂದ ಆಗುವ ಆರು ದೋಷಗಳು, ಕುದೇವ, ಕುಗುರು ಮತ್ತು ಕುಧರ್ಮ ಮತ್ತು ಕುದೇವ ಪೂಜಕ, ಕುಗುರುಪೂಜಕ ಮತ್ತು ಕುಧರ್ಮ ಪೂಜಕರುಗಳ ಸಹವಾಸ,

ಆರ್ತಧ್ಯಾನ -ದುಃಖ ಸಮುದ್ಭೂತವಾದದ್ದು ಆರ್ತಧ್ಯಾನ. ಇಷ್ಟಾಕಾಂಕ್ಷಿಯಾಗಿ, ಭೋಗಾಕಾಂಕ್ಷಿಯಾಗಿ ಕೊರಗುವುದು.

ಆಸನ್ನಭವ್ಯ - ಬೇಗ ಮೋಕ್ಷಗಾಮಿಯಾಗುವ ಜೀವ.

ಇಂಗಿಣೀಮರಣ -ಸಾಧು ಸಂಘದಿಂದ ಬೇರೆಯಾಗಿ ಏಕಾಂತದಲ್ಲಿ ಮರಣಹೊಂದುವುದು. ನಾಲ್ಕು ಬಗೆಯ ಆಹಾರ ತ್ಯಾಗ ಮಾಡಿ, ತನ್ನ ಶರೀರದ ಸೇವೆಯನ್ನು ತಾನೇ ಮಾಡಿ, ಉಪಸರ್ಗವೊದಗಿದಾಗ ಅದನ್ನೂ ಬಿಟ್ಟು ಸಮತೆಯಿಂದ ಸಹಿಸಿ ವಜ್ರವೃಷಭನಾರಾಚ, ವಜ್ರನಾರಾಚ ಅಥವಾ ನಾರಾಚ ಈ ಮೂರು ಸಂವಹನಗಳನ್ನು ಧರಿಸುವನು.

ಇಪ್ಪತ್ತೆರಡು ಪರೀಷಹಗಳು - ಮೋಕ್ಷಗಾಮಿ ಜೀವನಿಗೆ ಒದಗುವ ತೊಂದರೆಗಳು, ಅವು ಇಪ್ಪತ್ತೆರಡು. ಹಸಿವು, ಬಾಯಾರಿಕೆ, ಚಳಿ, ಕ್ರಿಮಿಕೀಟಗಳ ಕಡಿತ, ಬೆತ್ತಲೆಯಿಂದಾಗುವ ತೊಂದರೆ, ಆರತಿ ಬಾಧೆ, ಹೆಂಗಸರಿಂದಾಗುವ ತೊಂದರೆ, ಓಡಾಡುವಾಗ ಆಗುವ ಬಾಧೆ, ಮಲಗುವಾಗ ಆಗುವ ಬಾಧೆ, ಕುಳಿತಿರುವಾಗ ಆಗುವ ತೊಂದರೆ, ಬೈಗುಳು, ಹೊಡೆತ, ಭಿಕ್ಷೆ ಬೇಡುವಾಗ ಬರುವ ಕಷ್ಟನಿಷ್ಠುರ, ಭಿಕ್ಷೆ ಸಿಗದಿದ್ದಾಗ ಆಗುವ ಖೇದ, ತಪೋಮಹಿಮೆಗಳು ಕಾಣದಿರುವುದು, ರೋಗ, ಮುಳ್ಳುಕಲ್ಲುಗಳಿಂದಾಗುವ ಬಾಧೆ, ತನ್ನ ಪ್ರಜ್ಞೆಗೆ ಅಹಂಕಾರಪಡುವುದು, ಉತ್ತಮ ಜ್ಞಾನಾಕಾಂಕ್ಷಿಯಾಗಿ ಅಜ್ಞಾನಕ್ಕೆ ಕೊರಗುವುದು, ಸ್ನಾನಮಾಡದಿರುವುದರಿಂದಾಗುವ ಬಾಧೆ, ಜನ ಪುರಸ್ಕರಿಸದಿದ್ದಾಗ ಆಗುವ ಬಾಧೆ.

ಇಪ್ಪತ್ತೈದು ದೋಷಗಳು - ಶಂಕೆಯೇ ಮೊದಲಾದ ಎಂಟು ಮಲಗಳು, ಎಂಟು ಮದಗಳು, ಮೂರು ಮೂಢಗಳು ಮತ್ತು ಆರು ಅನಾಯತನ ಸೇವೆಗಳು.

ಈರ್ಯಾಪತ್ತಿ -ಪ್ರಾಸುಕ ಮಾರ್ಗದಲ್ಲಿ ಹಗಲು ಹೊತ್ತು ಕಾರ್ಯನಿಮಿತ್ತವಾಗಿ ಉತ್ಸುಕನೂ, ಅನ್ಯಮನಸ್ಕನೂ ಆಗದೆ ಮುಂದೆ ನೋಡಿಕೊಂಡು ಸೂಕ್ಷ್ಮ ಬಾದರ ಪ್ರಾಣಿಗಳನ್ನು ಪ್ರಯತ್ನಪೂರ್ವಕವಾಗಿ ಪರಿಹರಿಸಿ ನಡೆಯುವುದು.

ಉಗ್ರೋಗ್ರತಪ : ಕಷ್ಟವಿಲ್ಲದೆ ಪಕ್ಷಮಾಸಾದಿಗಳ ಉಪವಾಸಮಾಡುತ್ತ ಹೋಗುವುದು.

ಉಪವಾಸಪಚ್ಚಕ್ಖಾಣ- ಉಪವಾಸ ಪ್ರತಿಜ್ಞೆ

ಉಪವಾಸ ಗುಣಸ್ಥಾನ - ಹನ್ನೊಂದನೆಯ ಗುಣಸ್ಥಾನ.

ಉಪಸರ್ಗ - ತೊಂದರೆಗಳು. ಇದು ದೇವ ನಾರಕ ತಿರ್ಯಕ್ ಮಾನುಷ ಎಂದು ನಾಲ್ಕು ವಿಧ.

ಏಷಣಾ ಸಮಿತಿ -ಜೀವದಯಾಪರನೂ, ಮೋಕ್ಷಸಾಧಕನೂ ಆದ ತಪಸ್ವಿನ ರತ್ನತ್ರಯ ಭಾವನೆ ತಪೋವೃದ್ಧ್ಯರ್ಥವಾಗಿ ಚರ್ಯಾಮಾರ್ಗದಿಂದ ಶೀತೋಷ್ಣ ಸ್ನಿಗ್ಧರೂಕ್ಷಗುಣ ಕಲಿತ ಪರಕೃತ ಪ್ರಾಸುಕಾಹಾರವನ್ನೂ ರಾಗದ್ವೇಷವನ್ನೂ ಬಿಟ್ಟು ಸಮಚಿತ್ತದಿಂದ ಊಟ ಮಾಡುವುದು.

ಏಟುಂ ಗುಣಂಗಳು -ಗುಣಗಳು ೬, ೮, ೩೬ ಎಂದು ಹಲವು ವಿಧ. ಇಲ್ಲಿ ಏಳು ಗುಣಗಳು : ಸಮ್ಯಗ್ದರ್ಶನ ಶುದ್ಧ, ಅಕದವದಕರ್ಮ (ದೋಷವಿಲ್ಲದ ಕರ್ಮ) ಸುಶೀಲ ಗುಣನಿಲಯ, ಉಜ್ಜುಗತ್ತ (ಉದ್ಯೋಗ ವಾರ್ತೆ) ಗುರುಭತ್ತ (ಗುರುಭಕ್ತ), ಪವಯಣ ಕುಶಲ (ಪ್ರವಚನ ಕುಶಲ), ಮದಿಪ್ಪಗಬ್ಭೋಯ (ಬುದ್ಧಿಯಲ್ಲಿ ಪ್ರೌಢಿಮೆ).

ಕಷಾಯ - ಕ್ರೋಧ, ಮಾನ, ಮಾಯ, ಲೋಭಗಳು,

ಕಾಯೋತ್ಸರ್ಗ - ಶರೀರಾದಿಗಳ ಮಮತೆಯನ್ನು ತೊರೆದು ಆತ್ಮವನ್ನು ಸುಮುಖಮಾಡಿಕೊಳ್ಳುವುದು.

ಕ್ಷಪಕ ಶ್ರೇಣಿ :ಗುಣಸ್ಥಾನಗಳಲ್ಲಿ ಜೀವ ಉನ್ನತಿ ಹೊಂದುತ್ತಾ ಹೋಗುವಾಗ ಯಾವುದು ಚಾರಿತ್ರ ಮೋಹನೀಯಗಳ ನಾಶಮಾಡುತ್ತದೋ ಅದು. ಕ್ಷಪಕಶ್ರೇಣಿಯನ್ನು ಏರುವವನು ೧೧ನೆಯ ಗುಣಸ್ಥಾನವನ್ನು ಸ್ಪರ್ಶಿಸುವುದಿಲ್ಲ.

ಖೇಳೋಷಧಿ ಶುದ್ಧಿ : ಔಷಧಿಗಳಲ್ಲಿ ಒಂದು. ಯತಿಯ ಎಂಜಲಿನಿಂದ ರೋಗ ಪರಿಹಾರವಾಗುವುದು.

ಗುಣಸ್ಥಾನ : ಸಂಸಾರದಲ್ಲಿ ಸಿಕ್ಕು ಮಿಥ್ಯಾತ್ವದಲ್ಲಿ ಮುಳುಗಿರುವ ಜೀವ ಕರ್ಮಕ್ಷಯ ಮಾಡಿಕೊಂಡು ಮೇಲೇರುವಾಗ ೧೪ ಮೆಟ್ಟಿಲುಗಳಿವೆ. ಈ ಮೆಟ್ಟಿಲುಗಳೇ ಗುಣಸ್ಥಾನಗಳು, ಕರ್ಮದ ಉದಯ, ಉಪಶಮ, ಶಾಂತ, ಕ್ಷಯ, ಭಯೋಪಮಗಳಿಂದ ಉಂಟಾಗುವ ಜೀವದ ಸ್ಥಿತಿಗೆ ಗುಣಸ್ಥಾನವೆಂದು ಹೆಸರು.

ಗೋಚಾರನಿಯಮ : ಸಾಧುವಿನ ಭಿಕ್ಷಾಕ್ರಮ. ಆಹಾರಕ್ಕಾಗಿ ಹಸುವು ವನದ ಶೋಭೆ. ಸೌಂದರ್ಯಗಳನ್ನು ಲಕ್ಷಿಸದೆ ಚರಿಸುವಂತೆ ಸಂನ್ಯಾಸಿ ಭಿಕ್ಷವನ್ನು ಮಾತ್ರ ಗಮನಿಸಬೇಕು. ದಾತಾರನನ್ನಾಗಲಿ ಅವನ ಐಶ್ವರ್ಯವನ್ನಾಗಲಿ ಗಣಿಸಬಾರದು.

ಘಾತಿ ಕರ್ಮ : ಘಾತಿಕರ್ಮಗಳು ೪. ಜೀವಕ್ಕೆ ಸಹಜವಾದ ಅನಂತಜ್ಞಾನ , ಅನಂತದರ್ಶನ, ಅನಂತವೀರ್ಯ, ಅನಂತಸುಖ ಎಂಬ ನಾಲ್ಕು ಅನಂತಗುಣಗಳಿಗೆ ಘಾತಿ ಉಂಟುಮಾಡುವ

ಕರ್ಮ, ಅವು ಜ್ಞಾನಾವರಣೀಯ - ಅನಂತಜ್ಞಾನವನ್ನು ಆವರಿಸುವುದು, ದರ್ಶನಾವರಣೀಯ - ಅನಂತದರ್ಶನವನ್ನು ಆವರಿಸುವುದು, ಅಂತರಾಯ-ಅನಂತವೀರ್ಯವನ್ನು ಆವರಿಸುವುದು, ಮೋಹನೀಯ - ಜೀವವನ್ನು ಮೋಹಗೊಳಿಸಿ ಅನಂತಸುಖವನ್ನು ಮರೆಸುವುದು. ಘಾತಿಕರ್ಮಗಳು ಜೀವವನ್ನು ಸಂಸಾರದಲ್ಲಿ ಸಿಲುಕಿಸುತ್ತವೆ.

ಘೋರತಪ : ಭಯಾನಕ ಸ್ಥಳದಲ್ಲಿ ರೋಗಾದಿಗಳುಂಟಾದರೂ ತಪಸ್ಸು ಮಾಡುವುದು.

ಚತುರ್ನಿಕಾಯಾಮರ - ಭವನಪತಿ, ವ್ಯಂತರಿಕ, ಜ್ಯೋತಿಷ್ಕ ಮತ್ತು ವಿಮಾನವಾಸಿಗಳೆಂಬ ನಾಲ್ಕು ಬಗೆಯ ದೇವತೆಗಳು.

ಚತುರ್ದಶಪೂರ್ವಗಳು ೪೯- ದ್ವಾದಶಾಂಗಗಳಲ್ಲಿ ೧೨ನೆಯ ದೃಷ್ಟಿವಾದಾಂಗಕ್ಕೆ ಮೂಲವಾಗಿದ್ದು ಈಗ ಕಾಣೆಯಾಗಿರುವ ೧೪ ಪೂರ್ವಗಳು : ಉತ್ಪಾದ ಪೂರ್ವ, ಆಗ್ರಾಯಣೀ ಪೂರ್ವ, ವೀರ್ಯಾನುವಾದ ಪೂರ್ವ, ಆಸ್ತಿನಾಸ್ತಿ ಪ್ರವಾದ ಪೂರ್ವ, ಜ್ಞಾನ ಪ್ರವಾದ ಪೂರ್ವ, ಸತ್ಯ ಪ್ರವಾದ ಪೂರ್ವ, ಆತ್ಮ ಪ್ರವಾದ ಪೂರ್ವ, ಕರ್ಮ ಪ್ರವಾದ ಪೂರ್ವ, ಪ್ರತ್ಯಾಖ್ಯಾನುವಾದ ಪೂರ್ವ, ವಿದ್ಯಾನುವಾದ ಪೂರ್ವ, ಕಲ್ಯಾಣವಾದ ಪೂರ್ವ, ಪ್ರಾಣವಾದ ಪೂರ್ವ, ಕ್ರಿಯಾ ವಿಶಾಲ ಪೂರ್ವ, ತ್ರಿಲೋಕ ಬಿಂದುಸಾರ ಪೂರ್ವ.

ಚಾರಣರಿಸಿಯರ್ - ಆಕಾಶದಲ್ಲಿ ಸಂಚರಿಸುವ ಮುನಿ.

ಜಲ್ಲೋ(ಲ್ಲೋ)ಷಧಿಋದ್ಧಿ - ಹತ್ತು ತಪಸ್ಸಿದ್ಧಿಗಳನ್ನು ಪಡೆದವರಿಗೆ ಉಂಟಾಗುವ ಮಹಿಮೆ, ಔಷಧಿಗಳಲ್ಲಿ ಒಂದು. ಸಾಧುವಿನ ಬೆವರಿನ ಸ್ಪರ್ಶದಿಂದ ರೋಗಹರವಾಗುವುದು.

ಜಿನಕಲ್ಪ -ಏಕವಿಹಾರಿಯಾದ ಜೈನ ಸಾಧು ಸಂಪ್ರದಾಯ.

ದೀಪ್ತ ತಪ : ಅನೇಕ ಉಪವಾಸಗಳ ಅನಂತರವೂ ಶರೀರದ ಕಾಂತಿ ಕುಂದದಿರುವುದು. ಮುಖದಲ್ಲಿ ದುರ್ಗಂಧ ಬರದಿರುವುದು.

ದ್ವಾದಶವಿಧತಪ - ಕರ್ಮನಿರ್ಜರೆಗೆ ಸಾಧನವಾದ ತಪಸ್ಸುಗಳು ೧೨. ಅವು ಎರಡು ವಿಧ. ಬಾಹ್ಯ, ಅಭ್ಯಂತರ

ಬಾಹ್ಯ ತಪಗಳು : ಅನಶನ (ಆಹಾರವಿಲ್ಲದೆ ತಪಸ್ಸು ಮಾಡುವುದು), ಅವಮೋದರ್ಯ (ಹೊಟ್ಟೆ ತುಂಬುವುದಕ್ಕಿಂತ ಕಡಿಮೆ ತೆಗೆದುಕೊಳ್ಳುವುದು), ವೃತ್ತಿ ಸಂಖ್ಯಾನ (ನಿರ್ದಿಷ್ಟ ರೀತಿಯಲ್ಲಿ ಮಾತ್ರ ಭಿಕ್ಷ ಮಾಡುವುದಾಗಿ ಮಿತಿ ಹಾಕಿಕೊಳ್ಳುವುದು), ರಸತ್ಯಾಗ (ಹಾಲು, ಮೊಸರು ಮೊದಲಾದ ತನಗೆ ಪ್ರಿಯವಾದುದನ್ನು ಬಿಡುವುದು), ಕಾಯಕ್ಲೇಶ (ಗಾಳಿ, ಮಳೆ, ಬಿಸಿಲುಗಳಲ್ಲಿ ದೇಹವನ್ನು ದಂಡಿಸಿ ತಪಸ್ಸು ಮಾಡುವುದು, ವಿವಿಕ್ತ ಶಯನಾಸನ (ಏಕಾಂತವಾಗಿ ಕೂಡುವುದು, ಮಲಗುವುದು ಈ ಬಗೆಯ ತಪಸ್ಸು.)

ಆಭ್ಯಂತರ ತಪಸ್ಸು ೬ : ಪ್ರಾಯಶ್ಚಿತ್ತ (ಮಾಡಿದ ತಪ್ಪನ್ನು ಒಪ್ಪಿಕೊಂಡು ಶಿಕ್ಷೆಯನ್ನು ಅನುಭವಿಸುವುದು, ವಿನಯ (ಜ್ಞಾನದರ್ಶನಚಾರಿತ್ರಗಳಲ್ಲಿ ಹಿರಿಯರಿಗೆ ವಿನಯವಾಗಿರುವುದು, ವೈಯಾವೃತ್ಯ - ವೃದ್ಧರೂ ಅಶಕ್ತರೂ ರೋಗಿಷ್ಠರೂ ಆದ ಯತಿಗಳ ಸೇವೆ ಮಾಡುವುದು,

ಸ್ವಾಧ್ಯಾಯ (ಆಗಮ ಗ್ರಂಥಗಳನ್ನು ಅಭ್ಯಾಸ ಮಾಡುವುದು), ವ್ಯುತ್ಸರ್ಗ (ಶರೀರದ ಮೇಲಣ ಆಸೆಯನ್ನು ಬಿಟ್ಟು, ಸಮಚಿತ್ತದಿಂದಿರುವುದು), ಧ್ಯಾನ

ದ್ವಾದಶಾಂಗಗಳು : ಆಚಾರಾಂಗ- ಯತಿಯ ನಡುವಳಿಕೆಯನ್ನು ತಿಳಿಸುತ್ತದೆ. ಸೂತ್ರಕೃತಾಂಗ ಜ್ಞಾನ - ವಿನಯ, ಧಾರ್ಮಿಕಕ್ರಿಯೆ ಮೊದಲಾದುವನ್ನು ತಿಳಿಸುತ್ತದೆ. ಸ್ಥಾನಾಂಗ -ಜೀವಪುದ್ಗಲ ಮೊದಲಾದ ದ್ರವ್ಯಗಳ ಸ್ಥಾನವನ್ನು ತಿಳಿಸುತ್ತದೆ. ಸಮವಾಯಾಂಗ -ದ್ರವ್ಯ ಕಾಲ ಕ್ಷೇತ್ರ ಭಾವಗಳ ದೃಷ್ಟಿ ಭೇದಗಳಿಂದ ತೋರುವ ಸಾಮ್ಯವನ್ನು ತಿಳಿಸುತ್ತದೆ. ವ್ಯಾಖ್ಯಾನಪ್ರಜ್ಞಪ್ತಿ - ಗಣಧರರ ಪ್ರಶ್ನೆಗಳಿಗೆ ತೀರ್ಥಂಕರರ ಉತ್ತರಗಳನ್ನು ತಿಳಿಸುತ್ತದೆ. ಜ್ಞಾತೃಧರ್ಮಕಥಾಂಗ - ಧಾರ್ಮಿಕ ಕಥೆ, ಗಣಧರ ತೀರ್ಥಂಕರರ ಸಂವಾದವಿದೆ. ಉಪಾಸಕಾಧ್ಯಾಯಾಂಗ - ಶ್ರಾವಕಾಚಾರಗಳನ್ನು ತಿಳಿಸುತ್ತದೆ. ಅಂತಕೃದ್ದಶಾಂಗ - ಪ್ರತಿ ತೀರ್ಥಂಕರರ ಕಾಲದಲ್ಲಿಯೂ ಉಪಸರ್ಗವನ್ನು ಸಹಿಸಿ ತಪಸ್ಸು ಮಾಡಿದ ಹತ್ತು ಹತ್ತು ಮುನಿಗಳ ಚರಿತ್ರೆಯಿದೆ. ಅನುತ್ತರೋಪಪಾದಕ ದಶಾಂಗ -ಪ್ರತಿ ತೀರ್ಥಂಕರರ ಕಾಲದಲ್ಲಿಯೂ ತಪಸ್ಸಿನಿಂದ ಐದು ಅನುತ್ತರಗಳಲ್ಲಿ ಹುಟ್ಟಿದ ಹತ್ತು ಹತ್ತು ಮುನಿಗಳ ಚರಿತ್ರೆಯಿದೆ. ಪ್ರಶ್ನ ವ್ಯಾಕರಣಾಂಗ - ಪ್ರಾಣಿಗಳ ಸುಖದುಃಖದ ಪ್ರಶ್ನೆಗಳಿಗೆ ಉತ್ತರವಿದೆ. ವಿಪಾಕಸೂತ್ರಾಂಗ -ಕರ್ಮಗಳ ಪರಿಪಾಕ ಸ್ವರೂಪವನ್ನು ತಿಳಿಸುತ್ತದೆ. ದೃಷ್ಟಿ ಪ್ರವಾದಾಂಗ - ಬೇರೆ ಬೇರೆ ದರ್ಶನಗಳನ್ನು ವಿವರಿಸಿ ಸಮ್ಯಗ್‌ದರ್ಶನವನ್ನು ತಿಳಿಸುತ್ತದೆ. ಇಲ್ಲಿ ಚತುರ್ದಶ ಪೂರ್ವಗಳೂ ಸೇರಿವೆ.

ನಂದೀಶ್ವರ - ನಂದೀಶ್ವರದಲ್ಲಿ ಸೌಧರ್ಮಾದಿ ಇಂದ್ರರ ಸಾನ್ನಿಧ್ಯದಲ್ಲಿ ಮಾಡುವ ಪೂಜೆ. ಇದನ್ನು ಕಾರ್ತಿಕ, ಫಾಲ್ಗುಣ, ಆಷಾಢಗಳ ಅಂತ್ಯವಾರಗಳಲ್ಲಿ ಮಾಡುವುದು.

ಧರ್ಮಧ್ಯಾನ : ಧರ್ಮಸ್ವರೂಪವನ್ನು ಯಾವಾಗಲೂ ಚಿಂತಿಸುತ್ತಿರುವುದು.

ನವಪದಾರ್ಥಗಳು - ಜೀವ, ಅಜೀವ, ಪುಣ್ಯ, ಪಾಪ, ಆಸ್ರವ, ಸಂವರ, ನಿರ್ಜರ, ಬಂಧ, ಮೋಕ್ಷ.

ನಿಶ್ಶಲ್ಯಗಳು - ಮಾಯಾ(ಕಪಟ), ಮಿಥ್ಯಾ (ಶ್ರದ್ಧೆಯ ಅಭಾವ) ನಿಧಾನ (ಭೋಗಾಕಾಂಕ್ಷೆ)ಗಳೆಂಬ ಶಲ್ಯಗಳಿಲ್ಲದಿರುವುದು.

ಪಂಚಮಹಾಪಾತಕ : ಬಾಲವಧೆ, ಸ್ತ್ರೀ ವಧೆ, ಗೋವಧೆ, ಋಷಿವಧೆ, ಬ್ರಾಹ್ಮಣವಧೆ.

ಪಂಚಾಸ್ತಿಕಾಯಗಳು : ಕಾಲವನ್ನುಳಿದು ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶಗಳು.

ಪಂಥಾತಿಚಾರನಿಯಮ : ಚರಿಗೆಯಿಂದ ಹಿಂದಿರುಗಿ ದಾರಿಯಲ್ಲಾಗಿದ್ದ ಅತಿಚಾರಗಳ ಶುದ್ಧಿಗೆ ಮಾಡಬೇಕಾದ ನಿಯಮ.

ಪಡಿಕಮಣ : ಪ್ರಕೀರ್ಣಕಗಳಲ್ಲಿ ನಾಲ್ಕನೆಯದು. ಹಿಂದೆ ಮಾಡಿದ ದೋಷಗಳಿಗೆ ಪಶ್ಚಾತ್ತಾಪ ಪಡುವುದು. ಇದು ಏಳು ಬಗೆ : ದೈವಸಿಕ (ಹಗಲು ಮಾಡಿದ ದೋಷ) ರಾತ್ರಿಕ (ರಾತ್ರಿ ಮಾಡಿ ದೋಷ), ಐರ್ಯಾಪಥಿಕ (ಚರಿಗೆಗೆ ಹೋಗುವಾಗ ನಡೆದ ದೋಷ), ಪಾಕ್ಷಿಕ ದೋಷ (ಹದಿನೈದು ದಿವಸಗಳಲ್ಲಿ ನಡೆದ ದೋಷ) ಚಾತುರ್ಮಾಸಿಕ ದೋಷ (ನಾಲ್ಕು ತಿಂಗಳಲ್ಲಿ ನಡೆದ ದೋಷ) ಸಾಂವತ್ಸರಿಕ (ವರ್ಷಪೂರ್ತಿ ನಡೆದ ದೋಷ), ಉತ್ತಮಾರ್ಥ (ಸಮಾಧಿಮರಣ ಸಮಯದಿಂದ ಜೀವನ ಪರ್ಯಂತರ ನಡೆದ ದೋಷ)

ಪದಿನೆಂಟು ದೋಷಂಗಳು ; ಅರ್ಹಂತನಿಗೆ ಇವು ಇರುವುದಿಲ್ಲ. ಹಸಿವು, ಬಾಯಾರಿಕೆ, ಭಯ,. ದ್ವೇಷ, ರಾಗ, ಚಿಂತೆ, ಮೋಹ, ಜರೆ, ರೋಗ, ಮರಣ, ಬೆವರು, ಖೇದ, ಮದ, ರತಿ, ಆಶ್ಚರ್ಯ, ಜನನ, ನಿದ್ರಾ, ವಿಷಾದ.

ಪರೀಷಹಂಗಳು - ಪರೀಷಹಗಳು ನೋಡಿ

ಪೃಥಕ್ತ್ವವಿತರ್ಕವಿಚಾರ : ಮೊದಲ ಶುಕ್ಲ ಧ್ಯಾನದಲ್ಲಿ ೮ನೆಯ ಗುಣಸ್ಥಾನದಿಂದ ೧೨ನೆಯ ಗುಣಸ್ಥಾನದ ಕೆಲವು ಭಾಗದವರೆಗೆ ನಡೆಯುವಂಥದು.

ಪ್ರಾಯೋಪಗಮ : ಜೈನಯತಿಗಳು ತಮ್ಮ ರೋಗಕ್ಕೆ ತಾವೂ ಚಿಕಿತ್ಸೆ ಮಾಡಿಕೊಳ್ಳದೆ ಬೇರೆಯವರಿಂದಲೂ ಮಾಡಿಸದೆ, ಧ್ಯಾನದಲ್ಲಿ ಲೀನರಾಗಿ ಅಚಲರಾಗಿ ಪ್ರಾಣತ್ಯಾಗ ಮಾಡುವುದು.

ಬಾಹ್ಯಾಭ್ಯಂತರ ಪರಿಗ್ರಹ : ದ್ವಾದಶ ವಿಧ ತಪಗಳನ್ನು ಸ್ವೀಕರಿಸುವುದು, ಭವ್ಯ ಚೈತನ್ಯ ಜೀವವು ಸಮ್ಯಗ್ದರ್ಶನಾದಿ ಭಾವರೂಪದಲ್ಲಿ ಪರಿಣತಿ ಹೊಂದಿ ಮೋಕ್ಷಗಾಮಿಯಾಗುವುದು.

ಭುಕ್ತಪ್ರತ್ಯಾಖ್ಯಾನವಿಧಿ :ಕ್ರಮಪೂರ್ವಕವಾಗಿ ಆಹಾರ ಪಾನೀಯಗಳನ್ನು ತ್ಯಾಗಮಾಡುವುದು.

ಮಹಾತಪ ; ಸಿಂಹನಿಷ್ಕ್ರೀಡಿತಾದಿ ಮಹಾತಪಗಳನ್ನು ಮಾಡುವುದು.

ಮಹಾವ್ರತ ; ಸಾಧುವು ಪಾಲಿಸಲು ಯೋಗ್ಯವಾದ ಅಹಿಂಸೆ, ಸತ್ಯ, ಆಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹಗಳೆಂಬ ಐದು ವ್ರತಗಳು.

ಮಿಥ್ಯಾತ್ವ : ಅತತ್ವಶ್ರದ್ಧಾನದ ಉದಯದಿಂದ ಜೀವನು ಆಪ್ತರು ಮತ್ತು ತೀರ್ಥಂಕರರು ಹೇಳಿದ ಮೋಕ್ಷಮಾರ್ಗದಿಂದ ಪರಾಙ್ಮುಖನಾಗಿ ಸಮ್ಯಕ್ತ್ವರಹಿತನಾಗಿ ಮಿಥ್ಯಾದೃಷ್ಟಿಯಾಗುತ್ತಾನೆ.

ಮುಂಡಕೇವಲಿ :ಮುಂಡನಾ ಅಥವಾ ವಶಪಡಿಸಿಕೊಳ್ಳುವ ಕೇವಲಿ. ಇವು ಹತ್ತು ಬಗೆ, ಐದು ವಿಧವಾದ ಸ್ಪರ್ಶನ. ವಚನ ಮುಂಡ (ಮಾತನಾಡದಿರುವುದು), ಹಸ್ತಿ ಮುಂಡ (ಕುಚೇಷ್ಟೆಗಾಗಿ ಕೈಯಾಡಿಸದಿರುವುದು),ಪಾದಮುಂಡ (ಪಾದಗಳನ್ನು ಆಸನದಲ್ಲಿ ಸೇರಿಸದಿರುವುದು), ಮನಮುಂಡ (ಕೆಟ್ಟದ್ದನ್ನು ಯೋಚಿಸದಿರುವುದು) ಶರೀರ ಮುಂಡ (ಶರೀರವನ್ನು ಹತೋಟಿಯಲ್ಲಿಟ್ಟುಕೊಳ್ಳುವುದು) ಪ್ರಯೋಜನವಿಲ್ಲದೆ ಕೆಲಸದಲ್ಲಿ ಯಾವುದರಿಂದ ಹಿಂಸೆಯಾಗುತ್ತದೆಯೋ ಅದನ್ನು ಬಳಸಬಾರದು.

ಮೂಱು ಮೂಢಗಳು : ದೇವತಾ ಮೂಢ (ಮಿಥ್ಯಾ ದೇವತೆಗಳ ಅರ್ಚನೆ), ಲೋಕಮೂಢ (ಮಿಥ್ಯಾ ಕ್ಷೇತ್ರಗಳಲ್ಲಿ ನಂಬಿಕೆ), ಪಾಷಂಡಿಮೂಢ (ಮಿಥ್ಯಾ ಗುರುಗಳನ್ನು ನಂಬುವುದು).

ರತ್ನತ್ರಯ : ಮೋಕ್ಷ ಸಾಧನಗಳಾದ ಸಮ್ಯಗ್‌ದರ್ಶನ, ಸಮ್ಯಗ್ ಜ್ಞಾನ, ಸಮ್ಯಗ್ ಚಾರಿತ್ರಗಳು.

ವಿಪ್ರೋ (ಟ್ರೋ)ಷಧಿಋದ್ಧಿ : ತಪಸ್ಸಿದ್ಧಿ ಪಡೆದವರಿಗೆ ಉಂಟಾಗುವ ಮಹಿಮೆಗಳಲ್ಲಿ ಒಂದು. ಔಷಧಿಗಳಲ್ಲಿ ಒಂದು. ಯತಿಯ ಸ್ಪರ್ಶ ಮಲಮೂತ್ರದಿಂದ ರೋಗಹರವಾಗುವುದು.

ವಿಭಂಗ ಜ್ಞಾನ - ಮಿಥ್ಯಾತ್ವಯುಕ್ತ ಅವಧಿಜ್ಞಾನಕ್ಕೆ ವಿಭಂಗಜ್ಞಾನವೆಂದು ಹೆಸರು.

ಆತ್ಮನಿಗೆ ಅಹಿತವನ್ನುಂಟುಮಾಡುವ ಪದಾರ್ಥಗಳನ್ನು ತಿಳಿಯಬಲ್ಲುದಲ್ಲದೆ ಹಿತಕರ ಪದಾರ್ಥಗಳ ಸ್ವರೂಪವನ್ನು ಅರಿಯದು.

ವೀಚಿಮರಣ : ಅಲೆಯು ಎದ್ದು ಬಿದ್ದು ನಾಶವಾಗುವಂತೆ ಸಂತತವಾದ ಮರಣವನ್ನು ಹೊಂದುವಿಕೆ. ಮನುಷ್ಯರ ಆಯುಸ್ಸು, ತೇಜಸ್ಸುಗಳು ನಿರಂತರವಾಗಿ ಕುಂದುತ್ತಿರುವುದು.

ವ್ಯಂತರ ದೇವ : ಬೇರೆ ಬೇರೆ ದೇಶಗಳಲ್ಲಿ ಯಾರು ಇರುವರೋ ಆ ದೇವತೆಗಳು. ಇವರು ಎಂಟು ಬಗೆ: ಕಿನ್ನರ, ಕಿಂಪುರುಷ, ಮಹೋರಗ, ಗಂಧರ್ವ, ಯಕ್ಷ, ರಾಕ್ಷಸ, ಭೂತ, ಪಿಶಾಚ.

ಶಂಕಾದ್ಯಷ್ಟಮಲಂಗಳು :ಶಂಕ, ಆಕಾಂಕ್ಷಾ, ವಿಚಿಕಿತ್ಸಾ, ಅನ್ಯದೃಷ್ಟಿ, ಪ್ರಶಂಸಾ, ಸಂಸ್ತವಾ, ಸಮ್ಯಗ್‌ದೃಷ್ಟಿ, ಅತಿಚಾರಗಳು.

ಶುಕ್ಲಧ್ಯಾನ : ಶುಚಿತ್ವ ಸಮೇತವಾದದ್ದು ಶುಕ್ಲಧ್ಯಾನ, ಧರ್ಮಧ್ಯಾನವನ್ನು ಮುಗಿಸಿ ಮುಕ್ತಿ ಹೊಂದುವುದನ್ನು ಕುರಿತು ಚಿಂತಿಸುವುದು. ಶುಕ್ಲಧ್ಯಾನವು ಸಾಕ್ಷಾತ್ತಾಗಿ ಮುಕ್ತಿಗೆ ಸಾಧನವಾಗುತ್ತದೆ.

ಷಡ್ದ್ರವ್ಯಗಳು : ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲ.

ಸಪ್ತವ್ಯಸನ: ದ್ಯೂತಕ್ರೀಡೆ, ವೇಶ್ಯಾ ಸೇವನೆ, ಪರಸ್ತ್ರೀಗಮನ, ಚೌರ್ಯಕರ್ಮ, ಮಾಂಸ ಭಕ್ಷಣ, ಮದ್ಯಪಾನ, ಬೇಟೆಯಾಡುವುದು,

ಸಮಾಧಿಮರಣ : ಅನ್ನ ಕಷಾಯ ಮುಂತಾದವುಗಳನ್ನು ತ್ಯಾಗಮಾಡಿ ರತ್ನತ್ರಯಗಳಲ್ಲಿ ಸ್ಥಿರನಾಗಿ ಪ್ರಾಣತ್ಯಾಗ ಮಾಡುವ ಕ್ರಮ.

ಸಮ್ಯಕ್ತ್ವ : ಜೈನಮತದ ಸಮ್ಯಗ್‌ದರ್ಶನಾದಿ ತತ್ತ್ವಗಳ ಸತ್ಯತ್ವದಲ್ಲಿ ಸಂಪೂರ್ಣವಾದ ನಂಬಿಕೆಯಿರುವುದು ಮಿಥ್ಯಾತ್ವಕ್ಕೆ ವಿರುದ್ಧವಾದದ್ದು.

ಸರ್ವಾರ್ಥ ಸಿದ್ಧಿ : ಅನುತ್ತರವಿಮಾನಗಳಲ್ಲಿ ಎಲ್ಲಕ್ಕೂ ಮೇಲಿರುವುದು ಮತ್ತು ಅತ್ಯುತ್ತಮವಾದದ್ದು.

ಸರ್ವೋಷಧಿಋದ್ಧಿ : ಹತ್ತು ತಪಸ್ಸಿದ್ಧಿಗಳನ್ನು ಪಡೆದವರಿಗೆ ಒದಗುವ ಮಹಿಮೆ. ಸಾಧುವಿನ ಅಂಗಸ್ಪರ್ಶ, ಉಸಿರು, ಮಲಮೂತ್ರಗಳೆಲ್ಲಾ ರೋಗನಾಶಕವಾಗಿರುವುದು.

ಸಿಂಹನಿಷ್ಕ್ರೀಡಿತ - ೮೦ ದಿನದಲ್ಲಿ ೬೦ ಉಪವಾಸ ಮತ್ತು ೨೦ ಪಾರಣೆಗಳನ್ನು ಮಾಡುವ ವ್ರತ.

ಸಿದ್ಧಗುಣ : ಮುಕ್ತಜೀವರಿಗಿರುವ ಎಂಟು ಗುಣಗಳು : ಸಮ್ಯಕ್ತ್ವ, ಅನಂತದರ್ಶನ, ಅನಂತ ಜ್ಞಾನ, ಅನಂತವೀರ್ಯ, ಸೂಕ್ಷ್ಮತ್ವ, ಅವಗಾಹಿತ್ವ, ಅವ್ಯಾಬಾಧತ್ವ ಮತ್ತು ಅಗುರುಲಘುತ್ವಗಳು.

ಸಿದ್ಧ ಸ್ವರೂಪ : ಆತ್ಮವು ೮ ಕರ್ಮಗಳನ್ನು ನಾಶಪಡಿಸಿ ೮ ಗುಣಗಳನ್ನು ಪ್ರಕಟಪಡಿಸುವುದು. ದೇಹರಹಿತವಾಗಿ ಪುರುಷಾಕಾರವು ಲೋಕಶಿಖರದ ಮೇಲೆ ವಿರಾಜಮಾನನಾಗಿರುವುದು. ನಿತ್ಯ ಜ್ಞಾನಾನಂದದಲ್ಲಿ ಮಗ್ನವಾಗಿ ಸಾಧ್ಯವಿದ್ದುದನ್ನು ಸಾಧಿಸುವುದು. ಪೂರ್ಣ ಕೃತಕೃತ್ಯವಾಗಿ ಅವಿನಾಶಿಯಾಗಿ ಸ್ವಭಾವದಲ್ಲಿ ಸದಾ ತಲ್ಲೀನವಾದುದು.

ಸ್ಪರ್ಶೌಷಧಿ : ಆಮರ್ಶೌಷಧಿ, ಯತಿಯ ಸ್ಪರ್ಶದಿಂದ ರೋಗ ಪರಿಹಾರವಾಗುವಂಥದು.
ಸಾಮಾನಿಕದೇವ : ಇಂದ್ರನಿಗಿರುವ ಆಜ್ಞೆ, ಐಶ್ವರ್ಯ ಶಕ್ತಿಗಳಿಲ್ಲದೆ, ಆಯುಸ್ಸು, ವೀರ್ಯ, ಪರಿವಾರ, ಬೋಗೋಪಭೋಗಾದಿ ಶಕ್ತಿಗಳಿಂದ ಇರುವಂಥವನು.ಗುರು, ತಂದೆ ಉಪಾಧ್ಯಾಯರಂತೆ ಪೂಜ್ಯರಾದ ದೇವರುಗಳು ಸಾಮಾನಿಕ ದೇವರು.
ಸ್ಥವಿರ ಕಲ್ಪ : ಏಕಾಂಗವಿಹಾರಿಯಾಗಲಾರದೆ ಋಷಿ ಸಂಘದಲ್ಲಿದ್ದು, ಸಂಘದ ಅಥವಾ ಪರಂಪರಾಗತ ರೀತಿಯನ್ನು ತಿಳಿಸುವ ಸಾಧು.

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಪುಸ್ತಕೋದ್ಯಮದ ಅಭಿವೃದ್ಧಿಗಾಗಿ ಸ್ಥಾಪಿಸಿರುವ ಸಂಸ್ಥೆಯಾಗಿದೆ. ವಿಶೇಷವಾಗಿ ಜನಪ್ರಿಯ ಪ್ರಕಾರಕ್ಕೆ ಸೇರಿದ ಪುಸ್ತಕಗಳನ್ನು ಪ್ರಕಟಿಸಿ, ಜನಸಾಮಾನ್ಯರಿಗೆ ಸುಲಭ ದರದಲ್ಲಿ ತಲುಪಿಸಬೇಕೆನ್ನುವುದು ಪ್ರಾಧಿಕಾರದ ಆಶಯವಾಗಿದೆ. ಸೃಜನಶೀಲ ಸಾಹಿತ್ಯಪ್ರಕಾರಕ್ಕೆ ಸೇರಿದ ಕೃತಿಗಳನ್ನು ಪ್ರಕಟಿಸಿರುವುದು ಹೆಚ್ಚಿಲ್ಲವಾದರೂ, ಪ್ರಕಟಿಸಿರುವಷ್ಟು ಮೌಲಿಕವಾದದ್ದಾಗಿದೆ. ಉಳಿದಂತೆ ವಿಮರ್ಶೆ, ಜೀವನಚರಿತ್ರೆ, ಶಾಸ್ತ್ರವಿಷಯ ಕುರಿತಾದ ಗ್ರಂಥಗಳು, ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳನ್ನು ಹೊರತರಲಾಗಿದೆ. ಹಳಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಕುಮಾರವ್ಯಾಸ ಭಾರತವನ್ನು ಹೊರತುಪಡಿಸಿದರೆ ಇತರೆ ಯಾವುದೇ ಪ್ರಾಚೀನ ಸಾಹಿತ್ಯಕೃತಿಗಳನ್ನು ಹೊರತರುವಲ್ಲಿ ಪ್ರಾಧಿಕಾರವಾಗಲೀ, ಅಕಾಡೆಮಿಗಳಾಗಲೀ ಈವರೆಗೆ ಪ್ರಯತ್ನ ಮಾಡಿದಂತಿಲ್ಲ. ಕನ್ನಡ ಸಾಹಿತ್ಯದ ಪ್ರಾಚೀನಗ್ರಂಥಗಳನ್ನು ಈವರೆಗೂ ಹೆಚ್ಚು ಪ್ರಕಟಿಸಿರುವುದು ರಾಜ್ಯದ ವಿಶ್ವವಿದ್ಯಾಲಯಗಳೇ ಎನ್ನಬಹುದು.

ಕನ್ನಡಿಗರಿಗೆ ಪ್ರಾಚೀನ ಕನ್ನಡ ಗದ್ಯಕೃತಿಗಳು ಸುಲಭ ದರದಲ್ಲಿ, ಪರಿಶುದ್ಧ ರೂಪದಲ್ಲಿ ದೊರೆಯಬೇಕೆಂಬ ಆಶಯದಿಂದ ಹಳಗನ್ನಡ, ನಡುಗನ್ನಡದ ಹತ್ತು ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಲಾಯಿತು. ನಾಡಿನ ಹಿರಿಯ ವಿದ್ವಾಂಸರಾದ ಡಾ. ಎಂ.ಎಂ. ಕಲಬುರ್ಗಿ ಅವರು ಈ ಮಾಲೆಯ ಸಂಪಾದನಕಾರ್ಯದ ನೇತೃತ್ವ ವಹಿಸಲು ಒಪ್ಪಿಕೊಂಡು, ಸಕಾಲದಲ್ಲಿ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರ